ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ-೨೦



ಸಂಪಾದಕರು

ಡಾ. ಎನ್. ಮಂಜುಳಾ, ಭಾ.ಆ.ಸೇ.

ಡಾ. ಆರ್. ಗೋಪಾಲ್

ಟಿ.ಎಸ್. ಗಂಗಾಧರ

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಮೈಸೂರು

೨೦೧೭

ವಿಜಯನಗರ ಅಧ್ಯಯನ

ಸಂಪುಟ – 20

ಸಂಪಾದಕರು

ಡಾ. ಎನ್. ಮಂಜುಳಾ, ಭಾ.ಆ.ಸೇ

ಡಾ. ಆರ್. ಗೋಪಾಲ್

ಟಿ.ಎಸ್. ಗಂಗಾಧರ

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ವಸ್ತುಪ್ರದರ್ಶನ ಆವರಣ, ಮೈಸೂರು – 570 010

2017

ವಿಜಯನಗರ ಅಧ್ಯಯನ : ಸಂಪುಟ – 20

ಪ್ರಕಾಶಕರು : ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ವಸ್ತುಪ್ರದರ್ಶನ ಆವರಣ, ಮೈಸೂರು – 570 010.
ದೂರವಾಣಿ – 0821–2424673, 2424674

© ಕಾದಿರಿಸಿದೆ

ಮೊದಲ ಮುದ್ರಣ 2017
ಪುಟಗಳು X + 272
ಪ್ರತಿಗಳು 500
ಬೆಲೆ: ರೂ. 435/–
ಮುಖಪುಟ ವಿನ್ಯಾಸ : ಶ್ರೀ ಮೇಲುಕೋಟೆ ಎನ್. ಮುರಳೀಧರ್
ಅಕ್ಷರ ಜೋಡಣೆ : ಹೇಮಲತಾ, ಗೋಕುಲಂ, ಮೈಸೂರು
ಮುದ್ರಣ : ಎಂ.ಸಿ.&ಎ., ಬೆಂಗಳೂರು

****

VIJAYANAGARA ADHYAYANA : Vol. 20

Publisher
Commissioner, Department of Archaeology, Museums and Heritage
Exhibition Complex, Mysore - 570 010
Ph: 0821-2424673, 2424674

© Reserved

First Edition 2017
Copies : 500
Pages : viii + 272
Price : Rs. 435/-

Cover Design: Sri Melukote N Muralidhar
DTP & Page Layout : Hemalatha, Gokulam, Mysore
Printed at : MC&A, Bengaluru

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

ದೂರವಾಣಿ : ಕಛೇರಿ : 22255282
22033469
ಕೊಠಡಿ ಸಂಖ್ಯೆ : 252, 2ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂದೇಶ

ವಿಜಯನಗರ ಎಂದು ಹಿಂದೆ ಕರೆಸಿಕೊಂಡಿದ್ದ ಇಂದಿನ ಹಂಪಿಯು ಅಂದು ವಿದೇಶೀಯ ಪ್ರವಾಸಿಗರ ಸ್ವರ್ಗವಾಗಿ ಹೆಸರು ಮಾಡಿತ್ತಲ್ಲದೇ, ಇಂದೂ ಸಹ ವಿದೇಶಿಯ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿ, ವಿಶ್ವಪರಂಪರೆಯ ತಾಣವಾಗಿ ರೂಪುಗೊಂಡಿದೆ.

ದಕ್ಷಿಣ ಭಾರತದ ಮೇಲೆ ಉಂಟಾದ ಅಲ್ಲಾವುದ್ದೀನ್ ಮತ್ತು ಮಲ್ಲಿಕಾಫರ್‌ನ ದಾಳಿಗಳು ದಕ್ಷಿಣ ಭಾರತದ ಮೇಲೆ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯ ಮೇಲೆ ಗಾಢವಾದ ಪ್ರಭಾವವನ್ನು ಬೀರಿದವು. ದಖನ್ನಿನ ಯಾದವರು, ಕಾಕತೀಯರು ದಕ್ಷಿಣದ ಕಂಪಿಲ ರಾಜ್ಯ, ಹೊಯ್ಸಳ ರಾಜ್ಯ ಮತ್ತು ಮಧುರೈ ಪಾಂಡ್ಯರು ಮತ್ತು ಅಂತಃಸತ್ವವನು ಕಳೆದುಕೊಂಡು ಪರಾಧೀನವಾದವು. ವಿಜಯನಗರದ ನಾಲ್ಕು ಮನೆತನಗಳ ಸಾಧನೆಯ ಬಗ್ಗೆ ಮತ್ತು ಅವುಗಳ ಕೊಡುಗೆಗಳು, ರಾಜಕೀಯ ಬೆಳವಣಿಗೆಗಳು ಅವರು ಇತರೆ ಸಾಮ್ರಾಜ್ಯದೊಂದಿಗೆ ಹೊಂದಿದ ಸಂಬಂಧಗಳು ಮುಂತಾದ ವಿಷಯಗಳನ್ನು ಕುರಿತು ವಿಶೇಷ ಸಂಶೋಧನೆ ನೆರವೇರದಿರುವುದು ಈ ಸಾಮ್ರಾಜ್ಯದ ಬಗೆಗಿನ ಸಾಹಿತ್ಯ ರಾಶಿಯನ್ನು ಅವಲೋಕಿಸಿದಾಗ ಗಮನಕ್ಕೆ ಬರುತ್ತದೆ. ಈ ದಿಶೆಯಲ್ಲಿ ವಿದ್ವಾಂಸರು ಮುಂದಿನ ದಿನಗಳಲ್ಲಿ ಕಾರ್ಯಪ್ರವೃತ್ತ-ರಾಗುತ್ತಾರೆಂದು ಭಾವಿಸಿದ್ದೇನೆ.

ಇಂತಹ ಸಾಮ್ರಾಜ್ಯವೊಂದರ ಬಗ್ಗೆ ಕಳೆದ ಹತ್ತೊಂಭತ್ತು ವರ್ಷಗಳಿಂದ ವಿಜಯನಗರ ಅಧ್ಯಯನ ಕುರಿತ ವಿಚಾರ ಸಂಕಿರಣದ ದಾರಿ ಅಷ್ಟೇ ಮಹತ್ವವಾದದ್ದು. ವಿಚಾರ ಸಂಕಿರಣದಲ್ಲಿ ಮಂಡನೆಯಾದ ಪ್ರಬಂಧಗಳನ್ನು ಗ್ರಂಥ ರೂಪದಲ್ಲಿ ಪ್ರಕಟಿಸಿ, ಅವುಗಳನ್ನು ನಿರಂತರವಾಗಿ ಕಳೆದ ಇಪ್ಪತ್ತು ವರ್ಷಗಳಿಂದ ಸತತವಾಗಿ ಪ್ರಕಟಿಸುತ್ತಿರುವುದು ಕರ್ನಾಟಕ ರಾಜ್ಯದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮಾತ್ರ. ಈ ವಿಚಾರ ಸಂಕಿರಣವನ್ನು ಆಯೋಜಿಸಿದ ಇಲಾಖೆಯ ಆಯುಕ್ತರಿಗೂ, ಅಧಿಕಾರಿ ಸಿಬ್ಬಂದಿವರ್ಗದವರಿಗೂ ಹಾಗೂ ಈ ಸಂಪುಟಕ್ಕೆ ಉತ್ತಮ ಹಾಗು ಸಂಶೋಧನಾ ಲೇಖನಗಳನ್ನು ನೀಡಿದ ಎಲ್ಲಾ ಲೇಖಕರು ಹಾಗೂ ಸಂಪಾದಕರುಗಳನ್ನು ಅಭಿನಂದಿಸುತ್ತೇನೆ. ಈ ಸಂಪುಟವನ್ನು ವಿದ್ವಾಂಸರುಗಳು, ಸಂಶೋಧಕರು, ಇತಿಹಾಸ ತಜ್ಞರು, ಓದುಗರು ಆದರದಿಂದ ಸ್ವಾಗತಿಸುತ್ತಾರೆಂದು ಭಾವಿಸುತ್ತೇನೆ.

(ಶ್ರೀಮತಿ ಉಮಾಶ್ರೀ)

ಪ್ರಸ್ತಾವನೆ

ವಿಜಯನಗರ ಸಾಮ್ರಾಜ್ಯದ ಬಗೆಗಿನ ಶಾಸ್ತ್ರೀಯ ಅಧ್ಯಯನ ಪ್ರಾರಂಭವಾಗಿ ಒಂದು ಶತಮಾನ ಕಳೆದರೂ ಈ ಸಾಮ್ರಾಜ್ಯ ಕುರಿತಾದ ಅಧ್ಯಯನ, ಸಂಶೋಧನೆ, ಪ್ರಕಟಣೆ ಇಂದಿಗೂ ಮುಂದುವರಿಯುತ್ತಿರುವುದು ಸಾಮ್ರಾಜ್ಯ ಸಾಧಿಸಿದ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಹಿರಿಮೆ ಗರಿಮೆಗಳ ಪರಿಚಯ ಮಾಡಿಕೊಡುತ್ತದೆ. ಇಂತಹ ಮಹಾನ್ ಸಾಮ್ರಾಜ್ಯದ ಸ್ಮಾರಕಗಳ ಪುನರುತ್ಥಾನ ಯೋಜನೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣದ ಸಹಯೋಗದೊಂದಿಗೆ ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆಯು 1979ರಲ್ಲಿ ಪ್ರಾರಂಭಿಸಿತು. ಈ ಯೋಜನೆಯ ಕಾರ್ಯಗಳು ಮತ್ತು ಸ್ಮಾರಕಗಳ ಸಂರಕ್ಷಣಾ ಕಾರ್ಯಗಳು ಹಾಗೂ ಇಲ್ಲಿ ನಡೆದ ಸಂಶೋಧನೆಗಳ ಫಲವಾಗಿ 1986ರಲ್ಲಿ ವಿಜಯನಗರ ಅಂದರೆ ಇಂದಿನ ಹಂಪೆಯ ಸ್ಮಾರಕಗಳು ವಿಶ್ವ ಪರಂಪರೆಯ ಸ್ಮಾರಕಗಳ ಗುಂಪಿಗೆ ಸೇರ್ಪಡೆಯಾದವು. ಇದರಿಂದಾಗಿ ಹಂಪಿ ವಿಶ್ವದ ಪ್ರಮುಖ ಸಂದರ್ಶಕ ಸ್ಥಳವಾಗಿ ಮಾರ್ಪಟ್ಟಿತು.

ಈ ಹಿನ್ನೆಲೆಯಲ್ಲಿ ವಿಜಯನಗರ ಅಧ್ಯಯನ ಮಾಲಿಕೆಯ ವಿಚಾರ ಸಂಕಿರಣಗಳನ್ನು 1994–95ನೇ ಸಾಲಿನಲ್ಲಿ ಹಂಪೆಯಲ್ಲಿ ಆಯೋಜಿಸಲಾಯಿತು. ಇದೇ ಪರಂಪರೆ ಹಂಪಿ ಉತ್ಸವದೊಂದಿಗೆ ಬೆರೆತುಕೊಂಡಿತು. ಹಂಪಿ ಉತ್ಸವವನ್ನು ಅಂದಿನಿಂದ ಇಂದಿನವರೆಗೆ ಬದಲಾದ ವೇಳಾಪಟ್ಟಿಗಳಲ್ಲಿ ಆಯೋಜಿಸುತ್ತಾ ಬರಲಾಗುತ್ತಿದ್ದು, ಪ್ರತೀ ವರ್ಷವೂ ಸಹ ಮಾಲಿಕೆಯ ಸಂಪುಟಗಳನ್ನು ಹೊರತರಲಾಗಿದೆ.

ಹೀಗೆ ಹೊರತರುವ ಸಂಪುಟಗಳನ್ನು ಮುಂದಿನ ವರ್ಷದ ವಿಚಾರ ಸಂಕಿರಣದಲ್ಲಿ ಲೋಕಾರ್ಪಣೆ ಮಾಡುವುದು ಇಲಾಖೆಯ ಸಂಪ್ರದಾಯವಾಗಿ ಮುಂದುವರಿದುಕೊಂಡು ಬಂದಿದೆ. ಪ್ರಸ್ತುತ ಮಾಲಿಕೆಯಲ್ಲಿ ಅಡಕವಾಗಿರುವ ಲೇಖನಗಳು ಹೊಸ ಶಾಸನಗಳು, ದೇವಾಲಯಗಳು, ಶಿಲ್ಪಗಳು, ಸಾಹಿತ್ಯ, ಇತರೇ ವಿಜಯನಗರಕ್ಕೆ ಸಂಬಂಧಿಸಿದ ವಿಷಯಗಳನ್ನು ಆಧರಿಸಿ ಅತ್ಯುತ್ತಮ ಸಂಪುಟವಾಗಿ ರೂಪುಗೊಂಡಿದೆ. ಈ ಸಂಪುಟದಲ್ಲಿರುವ ಎಲ್ಲಾ ಲೇಖನಗಳೂ ಅತ್ಯಂತ ಮಹತ್ವವುಳ್ಳ ವಿಚಾರಗಳನ್ನು ಹೊಂದಿದ್ದು, ವಿಚಾರಪ್ರದವಾದ ಸಂಪುಟವಾಗಿ ಮೂಡಿಬಂದಿದೆ.

ಪ್ರಸ್ತುತ ಸಂಪುಟವನ್ನು ಸಂಪಾದಿಸಿ ಹೊರತರುವಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ಹಲವಾರು ವಿದ್ವಾಂಸರುಗಳು ಸಹಕರಿಸಿರುತ್ತಾರೆ. ಅವರೆಲ್ಲರ ಸಹಕಾರದಿಂದ ಈ ಸಂಪುಟ ಅತ್ಯಂತ ಆಕರ್ಷಕವಾಗಿ ರೂಪುಗೊಂಡಿದೆ.

ಈ ಇಪ್ಪತ್ತನೇ ಸಂಪುಟ ಹೊರತರುವಲ್ಲಿ ಇಲಾಖೆಯ ಉಪ ನಿರ್ದೇಶಕರ ಕಚೇರಿ, ಕಮಲಾಪುರ, ಇಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಗೂ ಕೇಂದ್ರ ಕಚೇರಿಯ ಅಧಿಕಾರಿಗಳು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರಿಗೂ ಅಭಿನಂದನೆಗಳು. ಈ ಪುಸ್ತಕ ಮುದ್ರಣಾ ಕಾರ್ಯವನ್ನು ಎಂ.ಸಿ.ಅಂಡ್ ಎ ಮುಖಾಂತರ ನೆರವೇರಿಸಿಕೊಟ್ಟ ಸುಹಾಸ್ ಗ್ರಾಫಿಕ್ಸ್, ಬೆಂಗಳೂರು ಇವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥವನ್ನು ಸಮಸ್ತರಿಗೂ ಸಲ್ಲಿಸುತ್ತಾ, ಎಲ್ಲರೂ ಸಹ ಆದರದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

ಡಾ. ಮಂಜುಳ ಎನ್, ಭಾ.ಆ.ಸೇ.

ಪರಿವಿಡಿ

01. ಅಚ್ಯುತರಾಯನ ಶೈವ ಶಾಸನಗಳು (ಕ್ರಿ.ಶ. 1529–1542)
ಡಾ. ಡಿ.ಎಂ. ನಾಗರಾಜು 1

02. ವಿಜಯನಗರ ಅರಸರ ಕಾಲದ ಶಾಸನೋಕ್ತ ಮಾಗಣಿ/ಮಾಗಾಣಿ – ಒಂದು ವಿವೇಚನೆ
ಡಾ. ಪಿ.ವಿ. ಕೃಷ್ಣಮೂರ್ತಿ 7

03. ವಿಜಯನಗರ ಕಾಲದ ನಂಜನಗೂಡು ಪ್ರದೇಶದ ಶಾಸನಗಳಲ್ಲಿ ದಾನದತ್ತಿಗಳು
ಡಾ. ಎಸ್. ಶಿವರಾಮು 12

04. ಅಚ್ಯುತ ದೇವರಾಯನ ಕಾಲದ ದಾವಣಗೆರೆ ಜಿಲ್ಲೆ ಶಾಸನಗಳು
ಸಂತೇಬೆನ್ನೂರು ಸುಮತೀಂದ್ರ ನಾಡಿಗ್ 16

05. ಹಾನುಗಲ್ಲು ತಾಲೂಕಿನ ವಿಜಯನಗರದ ಅರಸರುಗಳ ಶಾಸನಗಳು
ಹನುಮಾಕ್ಷಿ ಗೋಗಿ 20

06. ಹರಿಹರರಾಯನ ಬಂದಳಿಕೆ ಶಾಸನದ ಹಿನ್ನೆಲೆಯಲ್ಲಿ ಶಾಕ್ತರು
ಡಾ. ಕಲವೀರ ಮನ್ವಾಚಾರ 30

07. ವಿಜಯನಗರ ಕಾಲದ ರೋಣ ತಾಲೂಕಿನ ಶಾಸನಗಳು ಮತ್ತು ಕುರುಹುಗಳು
ಡಾ. ಮಲ್ಲಿಕಾರ್ಜುನ ಕುಂಬಾರ 33

08. ಬೇಳಿಂಜೆಯ ಶಾಸನೋಕ್ತ ಲೋಹದ ಶಿಲ್ಪಗಳು
ಪ್ರೊ. ಟಿ. ಮುರುಗೇಶಿ 35

09. ವಿಜಯನಗರ ಪತನದ ಮೂಕಸಾಕ್ಷಿಗಳಾದ ಭೂಗತವಾದ ದೇವಿ ದೇಗುಲದ ಪೂಜಾ ಪರಿಕರಗಳು
ವಿಠಲದೇವಾಲಯ, ವೆಂಕಟಾಪುರ, ಹಂಪಿ
ಟಿ.ಎಮ್. ಕೇಶವ 37

10. ಹಂಪಿ ಋಷ್ಯಮೂಕ ಪರ್ವತದ ಬಳಿ ದೊರೆತ ವಿಜಯನಗರ ಕಾಲದ ನಾಲ್ಕು ತಾಮ್ರ ನಾಣ್ಯಗಳು
ಡಾ. ಎಚ್. ತಿಪ್ಪೇಸ್ವಾಮಿ 48

11. ವಿಜಯನಗರ ಕಾಲದ ಅಪ್ರಕಟಿತ ಬಿನ್ನವತ್ತಳೆ ಭಾಷಾ ಪತ್ರ
ಡಾ. ಕೆಳದಿ ವೆಂಕಟೇಶ್ ಜೋಯಿಸ್ 51

12. ಕೂಡ್ಲಿಗಿ ತಾಲೂಕಿನ ವಿಜಯನಗರ ಕಾಲದ ದೇವಾಲಯಗಳು
ಮಂಜನಾಯ್ಕ ಆರ್. 54

13. ಹಂಪಿ ಕೋಟೆ ಶಂಕರ ಬಾಗಿಲ ಬಳಿಯಿರುವ ವೈಷ್ಣವ ದೇವಸ್ಥಾನದ ಸಂರಕ್ಷಣಾ ಕಾರ್ಯ
ವಾಸುದೇವ ಎಸ್.ಕೆ. 73

14. ವಿರೂಪಾಕ್ಷೇಶ್ವರ ದೇವಾಲಯದ ಕಿರುರೂಪ ಚಿತ್ರಗಳು – ಒಂದು ಅವಲೋಕನ
ಪ್ರೊ. ಎಸ್. ಸಿ. ಪಾಟೀಲ 85

15. ಹಂಪಿ ಪರಿಸರದ ಮತ್ಸ್ಯಾವತಾರ ಶಿಲ್ಪಗಳು
ಡಾ. ಸಿ. ಎಸ್. ವಾಸುದೇವನ್ 94

16. ವಿಜಯನಗರ ಕಾಲದ ಆನೆಗೊಂದಿಯ ಅಪರೂಪದ ಆಯುಧಪುರುಷ
ಸುದರ್ಶನಚಕ್ರದ ಶಿಲ್ಪ ಮತ್ತು ಮಂದಿರ
ಡಾ. ಶರಣಬಸಪ್ಪ ಕೋಲ್ಕಾರ ಮತ್ತು ಕುಮಾರಿ ಗೀತಾ ಸಿ. 104

17. ಹಂಪಿ ಪರಿಸರದ ವೀರಭದ್ರನ ಶಿಲ್ಪಗಳು
ಡಾ. ಎನ್.ಎಸ್. ವೀರೇಶ ಉತ್ತಂಗಿ 108

18. ವಿಜಯನಗರ ಕಾಲಾವಧಿಯ ಚಿಂತಲ ವೆಂಕಟರಮಣಸ್ವಾಮಿ ದೇವಾಲಯದಲ್ಲಿನ
ಕೆಲವು ವಿಶಿಷ್ಟ ಶಿಲ್ಪಗಳು
ಧನುಂಜಯ. ಸಿ 115

19. ಹಂಪೆ ಹಜಾರರಾಮ ದೇವಾಲಯದಲ್ಲಿರುವ ವಿಷ್ಣುಚತುರ್ವಿಂಶತಿ ಶಿಲ್ಪಗಳು
ಡಾ. ಪದ್ಮಜಾ ದೇಸಾಯಿ 119

20. ವಿಜಯನಗರ ಕಾಲದ ವೀರಭದ್ರ-ಶರಭ ಪರಂಪರೆ ಮತ್ತು ಶಿಲ್ಪಗಳು
(ಚಿತ್ರದುರ್ಗ-ದಾವಣಗೆರೆ ಜಿಲ್ಲೆಯನ್ನು ಅನುಲಕ್ಷಿಸಿ)
ಡಾ. ಶಕುಂತಲ ವೀರಭದ್ರಯ್ಯ 126

21. ಹಂಪೆ ಅಚ್ಯುತರಾಯ ದೇವಾಲಯದಲ್ಲಿರುವ ಅಪರೂಪದ ಊರ್ಧ್ವತಾಂಡವ ನಟರಾಜ ಶಿಲ್ಪ 134
ಶ್ರೀಶೈಲ ಮನಗುತ್ತಿ

22. ಶ್ರೀಕೃಷ್ಣದೇವರಾಯನ ಕಾಲದ ಸೇನಾಬಲ : ಅವಲೋಕನ
ಪ್ರೊ. ಲಕ್ಷ್ಮಣ್ ತೆಲಗಾವಿ 139

23. ಶ್ರೀ ಕೃಷ್ಣದೇವರಾಯನ ಆಮುಕ್ತ ಮಾಲ್ಯದ ಕೃತಿಯಲ್ಲಿ ಜಲ ವಿಜ್ಞಾನದ ಅಂಶಗಳು
ಡಾ.ಹರಿಹರ ಶ್ರೀನಿವಾಸರಾವ್ 145

24. Issues related to fixing of Birth and Coronation Dates of
Vijayanagara King Achyutaraya
Dr. M. Kotresh 160

25. ವಿಜಯನಗರ ಕಾಲದ ರಾಮನ ಬಿಲ್ಲು ಮತ್ತು ಶಸ್ತ್ರಗಳು
ಜಯದೇವಪ್ಪ ಜೈನಕೇರಿ 165

26. ಚಿತ್ರದುರ್ಗದ ಭೂಕಂದಾಯ ವ್ಯವಸ್ಥೆಯ ಮೇಲೆ ವಿಜಯನಗರ ಕಾಲದ ಪ್ರಭಾವ
ಡಾ. ಎಚ್.ಈ. ಬಸವರಾಜಪ್ಪ 167

27. ಕುರುವಗಡ್ಡೆ ಪರಿಸರದ ವಿಜಯನಗರ ಕಾಲದ ಅವಶೇಷಗಳು
ಡಾ. ಬಿ.ಸಿ. ರಾಕೇಶ್ 170

28. ಶ್ರೀಕೃಷ್ಣದೇವರಾಯನನ್ನು ಹುಡುಕುವಲ್ಲಿ ... ನೂರಾರು ಹೆಜ್ಜೆಗಳು
ಡಾ. ಎಸ್.ಕೆ. ಜೋಶಿ 173

29. ವಿಜಯನಗರ ಕಾಲದ ಪುಲಿಗೆರೆಯ ಕನ್ನಡ ಸಾಹಿತ್ಯ ಪರಂಪರೆ
ಪ್ರೊ. ಶಕುಂತಲಾ ಸಿಂಧೂರ 181

30. ವಿಜಯನಗರ ಪರಿಸರದ ಕೆಲವು ಕವಿಗಳ ಮೂಲ ಮತ್ತು ಸಂಬಂಧ
ಡಾ. ಕೆ. ರವೀಂದ್ರನಾಥ 186

31. ಹಂಪೆಯೊಂದಿಗೆ ಕೆರೆಯ ಪದ್ಮರಸನ ಸಂಬಂಧ : ಕೆಲವು ಸಂಗತಿಗಳು
ಡಾ. ಎಫ್.ಟಿ.ಹಳ್ಳಿಕೇರಿ 189

32. ಪಂಪಾ ಮಹಾತ್ಮೆ ಮತ್ತು ಕಾಳಾಮುಖ ಮತ
ಡಾ. ವಾಸುದೇವ ಬಡಿಗೇರ 193

33. ಸಗರ ಸಂಕ್ರಮಣ ಧುರೀಣ: ಟಿಪ್ಪಣಿ
ಡಾ. ರಮೇಶ ನಾಯಕ 198

34. ಸಂಗಮ ಅರಸರ ಬಿರುದಾವಳಿಗಳು
ಡಾ. ಎಸ್.ವೈ. ಸೋಮಶೇಖರ್ 201

35. ಮಂದಾಲಗಿರಿ ಪರ್ವತ ಮತ್ತು ಮಳಲಕೋಟೆಯ ಶೋಧನೆ
(ಹಂಪಿ ಕುರಿತು ಚಾರಿತ್ರಿಕ ಲಾವಣಿಯೊಂದರ ವಿಶ್ಲೇಷಣೆ)
ಡಾ. ವಿರೂಪಾಕ್ಷಿ ಪೂಜಾರಹಳ್ಳಿ 214

36. ವಿಜಯನಗರ ರಾಯರೇಖೆಯಲ್ಲಿ ವಜ್ರ ಮತ್ತು ಚಿನ್ನದ ಇತಿಹಾಸ
ಡಾ. ಕೆಳದಿ ಗುಂಡಾಜೋಯಿಸ್ ಮತ್ತು ಡಾ. ಕೆಳದಿ ವೆಂಕಟೇಶ್ ಜೋಯಿಸ್ 221

37. ಜಕ್ಕಣಾರ್ಯ (ಸು. 1430) ಸಂಕಲಿತ ಏಕೋತ್ತರ ಶತಸ್ಥಲೀ
ಡಾ. ಬಿ.ನಂಜುಂಡಸ್ವಾಮಿ 224

38. ವಿಜಯನಗರದ ಆರುನೂರು ವರ್ಷಗಳ ಸ್ಮಾರಕೋತ್ಸವದ ನೆನಪುಗಳು (ಕ್ರಿ.ಶ. 1336)
ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ 231

39. ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ ಮತ್ತು ಮಹಿಳೆ
ಡಾ. ಟಿ.ವಿ. ನಾಗರಾಜ 234

40. ರಾಮರಾಜಭೂಷಣ ವಿರಚಿತ 'ವಸುಚರಿತ್ರಮು' ಕಾವ್ಯದಲ್ಲಿ ನಿರೂಪಿತ ವಿಜಯನಗರ ಅರಸರು
ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ 239

41. ವಿಜಯನಗರ ಕಾಲದ ಅಗ್ರಹಾರ: ನೆಳಲಹುಣಸೆ
ಶಶಿಕಲಾ ರಾ. ಇಂಜನಿ 244

42. ರಾಯಚೂರು ಕೋಟೆಯ ನವರಂಗ ದರ್ವಾಜ : ರಚನೆ ಮತ್ತು ಕಲೆ
ಡಾ. ಹೆಚ್. ಚಂದ್ರಶೇಖರ 247

43. ಹಂಪೆಯ ಹೊಸಪಟ್ಟಣ ಒಂದು ಟಿಪ್ಪಣಿ
ಡಾ. ಜಗದೀಶ 254

01. ಅಚ್ಯುತರಾಯನ ಶೈವ ಶಾಸನಗಳು (ಕ್ರಿ.ಶ. 1529–1542)

ಡಾ. ಡಿ.ಎಂ. ನಾಗರಾಜು

ಕರ್ನಾಟಕದ ಅನೇಕ ರಾಜಮನೆತನಗಳು ಇತಿಹಾಸದ ರಜತಪರದೆಯ ಮೇಲೆ ತಮ್ಮ ತಮ್ಮ ಪಾತ್ರಗಳನ್ನು ನಿರ್ವಹಿಸಿ ತಮ್ಮದೇ ಆದ ಕೀರ್ತಿ ಪತಾಕೆಯನ್ನು ಭಾರತದ ನಾನಾ ಭಾಗಗಳಲ್ಲಿ ಹಾರಿಸಿ ಇತಿಹಾಸದ ಪುಟಗಳಲ್ಲಿ ಪ್ರಜ್ವಲಿಸುತ್ತಿವೆ. ಅಂತಹ ರಾಜಮನೆತನಗಳ ಪೈಕಿ ವಿಜಯನಗರವೂ ಒಂದು. ದಕ್ಷಿಣ ಭಾರತದಲ್ಲಿ ಹೊಯ್ಸಳ ಅಧಿಪತ್ಯವೂ ಕೊನೆಗೊಂಡ ನಂತರ ಮುಸಲ್ಮಾನರ ದಾಳಿಯನ್ನು ತಡೆಗಟ್ಟಿ ಹಿಂದೂ ಧರ್ಮವನ್ನು ರಕ್ಷಿಸುವ ದೃಷ್ಟಿಯಿಂದ ವಿಜಯನಗರ ಸಾಮ್ರಜ್ಯವು ಕ್ರಿ.ಶ. 1336ರಲ್ಲಿ ಉದ್ಭವಿಸಿತು. ವಿಜಯನಗರ ಸಾಮ್ರಾಜ್ಯವೂ ಕರ್ನಾಟಕದ ಭವ್ಯ ಪರಂಪರೆಯನ್ನು ಸಾರಿತು.

ತುಳುವ ವಂಶದ ಮೊದಲನೆಯ ಅರಸನಾದ ವೀರನರಸಿಂಹನು ಸಿಂಹಾಸನಕ್ಕೆ ನ್ಯಾಯವಾದ ಹಕ್ಕುದಾರನಾಗಿದ್ದ ಇಮ್ಮಡಿ ರಾಜಕುಮಾರ ಇಮ್ಮಡಿ ನರಸಿಂಹನನ್ನು ಪೆನುಕೊಂಡೆಯಲ್ಲಿ ಕೊಲೆ ಮಾಡಿಸಿ ಕ್ರಿ.ಶ. 1505ರಲ್ಲಿ ತಾನೇ ಪಟ್ಟವನ್ನೇರಿದನು. ಅದಕ್ಕೆ ಮೊದಲು ಅವನು ರಾಜಪ್ರತಿನಿಧಿಯಾಗಿದ್ದನು. ವೀರನರಸಿಂಹನ ರಾಜ್ಯಪಹಾರ ಮಾಡಿದ ರೀತಿಯನ್ನರಿತ ಸಾಮ್ರಾಜ್ಯದ ಜನತೆಯು ಸರದಾರರುಗಳ ನೇತೃತ್ವದಲ್ಲಿ ಬಂಡಾಯವೆದ್ದಿತು. ಎಲ್ಲೆಲ್ಲಿಯೂ ಕ್ಷೋಭೆಯುಂಟಾಯಿತು. ಅವನ ಆರು ವರ್ಷಗಳ ಆಳ್ವಿಕೆ ಬಂಡಾಯಕೋರರ ವಿರುದ್ಧ ಹೋರಾಟಕ್ಕೆ ಮೀಸಲಾಯಿತು. ಕರ್ನಾಟಕ ಮತ್ತು ತುಳು ಜಿಲ್ಲೆಗಳಲ್ಲಿ ಬಂಡಾಯವೆದ್ದಿದ್ದರಿಂದ ದಮನಕ್ಕಾಗಿ ವೀರನರಸಿಂಹನು ಪ್ರಯತ್ನಿಸಿದನು. ಇವನು ರಾಮೇಶ್ವರ, ಶ್ರೀರಂಗಂ, ಕುಂಭಕೋಣಂ, ಚಿದಂಬರ, ಶ್ರೀಶೈಲ, ಕಾಂಚೀಪುರ, ಕಾಳಹಸ್ತಿ, ಮಹಾನಂದಿ, ಗೋಕರ್ಣ ಮುಂತಾದ ಯಾತ್ರಾ ಸ್ಥಳಗಳಿಗೆ ಉದಾರವಾಗಿ ದಾನ ನೀಡಿದನು.

ವಿಜಯನಗರ ಅರಸರಲೆಲ್ಲ ಪ್ರಾಯಶಃ ಇಮ್ಮಡಿ ದೇವರಾಯನನ್ನು ಬಿಟ್ಟರೆ ಅತ್ಯಂತ ಕೀರ್ತಿಶಾಲಿಯಾದ ಕೃಷ್ಣದೇವರಾಯ ಕರ್ನಾಟಕವಷ್ಟೇ ಏಕೆ ಭಾರತ ಇತಿಹಾಸದ ಶ್ರೇಷ್ಠ ನರೇಂದ್ರರುಗಳ ಶ್ರೇಣಿಗೆ ಕೃಷ್ಣದೇವರಾಯನೂ ಸೇರಿದ್ದಾನೆ. ಮಹಾಪರಾಕ್ರಮಿಯೂ, ಉತ್ತಮ ಆಡಳಿತಗಾರನೂ, ಯೋಧನೂ, ಕಲೆ–ಸಾಹಿತ್ಯಗಳ ಪೋಷಕನೂ ಆಗಿದ್ದ ಕೃಷ್ಣದೇವರಾಯನು ವೈಯಕ್ತಿಕ ಜೀವನದಲ್ಲಿ ವೈಷ್ಣವಧರ್ಮದ ಅನುಯಾಯಿಯಾಗಿದ್ದರೂ ಪರಧರ್ಮ ಸಹಿಷ್ಣುತೆಯುಳ್ಳವನಾಗಿದ್ದನು.

ಕೃಷ್ಣದೇವರಾಯನ ಉತ್ತರಾಧಿಕಾರಿಯಾದ ಅಚ್ಯುತರಾಯನ ಬಗ್ಗೆ ಕೃಷ್ಣರಾಯನಪೇಟೆ ಮತ್ತು ನಾಗಮಂಗಲದ ಶಾಸನಗಳು ಕೆಲವು ವಿವರಗಳನ್ನು ಕೊಟ್ಟಿದೆ. ಅಚ್ಯುತನು ಕೃಷ್ಣದೇವರಾಯನ ತಮ್ಮನೆಂದೂ (ಅನುಜನ್ಮ) ಅಂಗ, ಕಳಿಂಗ, ಮತ್ತಿತರ ಅರಸರು ಅವನಿಗೆ ವಿಜಯವನ್ನೂ "ದೀರ್ಘಾಯುಸ್ಸನ್ನು ಹಾರೈಸಿದರೆಂದೂ ಕೃಷ್ಣರಾಜಪೇಟೆಯ ಶಾಸನದಲ್ಲಿ ತಿಳಿಸಲಾಗಿದೆ. ನಾಗಮಂಗಲದ ಶಾಸನದಲ್ಲಿ ನರಸನ ಮೂರನೆಯ ಹೆಂಡತಿಯಾದ ಓಬಾಂಬಿಕೆಯಲ್ಲಿ ರಂಗಕ್ಷಿತೀಂದ್ರ ಮತ್ತು ಅಚ್ಯುತರಾಯನು ಜನಿಸಿದರೆಂದು ತಿಳಿಸಲಾಗಿದೆ. ಮಳವಳ್ಳಿ ಶಾಸನವು ಸಹ ಅಚ್ಯುತನು ನರಸನ ಮಗನೆಂದು ಸ್ಪಷ್ಟವಾಗಿ ತಿಳಿಸುತ್ತದೆ. ಅಚ್ಯುತರಾಯನ ಆಳ್ವಿಕೆ ಸುಗಮವಾಗಿರಲಿಲ್ಲ. ಆದರೆ ಎಲ್ಲ ಕಷ್ಟಗಳನ್ನು ಅವನು ಧೈರ್ಯದಿಂದ ಎದುರಿಸಿದನೆಂದು ಹೇಳಬಹುದು. ರಾಜನಾಥ ಡಿಂಡಿಮನೆಂಬ ಕವಿಯು ಅಚ್ಯುತರಾಯನ ಜೀವನ ಚರಿತ್ರೆಯನ್ನು "ಅಚ್ಯುತರಾಮಾಭ್ಯು"ಯವೆಂಬ ಸಂಸ್ಕೃತ ಕಾವ್ಯದಲ್ಲಿ ಸೊಗಸಾಗಿ ನಿರೂಪಿಸಿದ್ದಾನೆ. ಅಚ್ಯುತದೇವರಾಯನ ಕಾಲದ ವಿಜಯನಗರದ ಚರಿತ್ರೆ ಮತ್ತು ಸಂಸ್ಕೃತಿಯು ತನ್ನದೇ ಆದ ಕೆಲವು ವೈಶಿಷ್ಟ್ಯಗಳಿಂದ ಕೂಡಿದೆ.

ವಿಜಯನಗರದ ತುಳುವ ವಂಶದ ರಾಜ (1520–42) ತುಳುವ ನರಸನಾಯಕನ ಮಗ ಕೃಷ್ಣದೇವರಾಯನ ಬಲತಮ್ಮ. ನಾಗಲಾದೇವಿ ಈತನ ತಾಯಿ. ಕ್ರಿ.ಶ. 1528ರ ಶಾಸನದಿಂದ ಇವನು ಚಕ್ರವರ್ತಿ ಬಿರುದನ್ನು ಹೊಂದಿ ರಾಜ್ಯವನ್ನಾಳುತ್ತಿದ್ದನೆಂದು ತಿಳಿದುಬರುತ್ತದೆ.

ಅಚ್ಯುತರಾಯ ಚಂದ್ರಗಿರಿಯಿಂದ ಮೊದಲು ತಿರುಪತಿಗೆ ಹೋಗಿ ಅಲ್ಲಿ ರಾಜ್ಯ ಪಟ್ಟಾಭಿಷೇಕ ಮಾಡಿಕೊಂಡ. ಕ್ರಿ.ಶ. 1530ರ ಪೂರ್ವಾರ್ಧದಲ್ಲಿ ವಿಜಯನಗರಕ್ಕೆ ಬಂದು ಕೃಷ್ಣದೇವರಾಯನ ಮಗನ ಪರವಾಗಿ ತಾವಿಬ್ಬರೂ ಆಳ್ವಕೆಯಲ್ಲಿ ಸಹಭಾಗಿಗಳಾಗಿರುವಂತೆ ಒಪ್ಪಿದನು. ಇದಾದ ಅನಂತರ ಮೂರನೆಯ ಸಲ ಇವನ ಪಟ್ಟಾಭಿಷೇಕ ವಿಜಯನಗರದಲ್ಲಿ ನಡೆಯಿತು. ಕ್ರಿ.ಶ. 1535ರವರೆಗೆ ಸಮರ್ಪಕವಾಗಿ ಇವನ ಆಳ್ವಿಕೆ ಮುಂದುವರಿಯಿತು. ಅಚ್ಯುತರಾಯನ ತಮ್ಮನ ಮಗನಾದ

ಸದಾಶಿವರಾಯನ ಹೆಸರಿನಲ್ಲಿ ಆಡಳಿತವನ್ನು ನಡೆಸಲಾರಂಭಿಸಿದ. ಅದೇ ವೇಳೆಗೆ ರಾಜ್ಯದ ದಕ್ಷಿಣ ಭಾಗದಲ್ಲಿ ಉದ್ಭವವಾದ ದಂಗೆಗಳನ್ನು ಅಡಗಿಸಲು ರಾಮರಾಯ ರಾಜಧಾನಿಯನ್ನು ಬಿಡಬೇಕಾಯಿತು. ಆ ಸಂದರ್ಭದಲ್ಲಿ ಅಚ್ಯುತರಾಯ ಬಿಡುಗಡೆ ಹೊಂದಿದ. ಕೂಡಲೇ ರಾಮರಾಯ ಹಿಂದುರುಗಿ ಅಚ್ಯುತರಾಯನೊಡನೆ ಒಪ್ಪಂದ ಮಾಡಿಕೊಂಡ. ಈ ಒಪ್ಪಂದದ ಪ್ರಕಾರ ಅಚ್ಯುತರಾಯನ ರಾಜತ್ವ ಭದ್ರವಾಯಿತು.

ಕ್ರಿ.ಶ. 1530–31ರಲ್ಲಿ ಬಿಜಾಪುರದ ಸುಲ್ತಾನನಾಗಿದ್ದ ಆದಿಲ್‌ಷಾ ವಿಜಯನಗರದ ಮೇಲೆ ದಂಡೆತ್ತಿ ಬಂದು, ರಾಯಚೂರು ಮತ್ತು ಮುದ್ಗಲ್ ಪ್ರದೇಶವನ್ನು ಆಕ್ರಮಿಸಿಕೊಂಡನು. ಮತ್ತೆ ಎರಡನೆಯ ಬಾರಿ ನಾಗಲಾಪುರದವರೆಗೆ ದಂಡೆತ್ತಿ ಬಂದು ಅದನ್ನು ಹಾಳುಮಾಡಿದನು. ಆದರೆ ಅಚ್ಯುತರಾಯ ಅವನನ್ನು ಪುನಃ ಸ್ವಾಧೀನಪಡಿಸಿಕೊಂಡ. ಕ್ರಿ.ಶ. 1531–32ರಲ್ಲಿ ತಿರುವಡಿ (ಈಗಿನ ತಿರುವನಂತಪುರ ಮತ್ತು ತಿನ್ನವೆಲ್ಲಿ ಜಿಲ್ಲೆಯ ಭಾಗಗಳು) ರಾಜನ ಮೇಲೆ ದಂಡೆತ್ತಿ ಹೋದ. ಇದರ ಫಲವಾಗಿ ತಿರುವಡಿ ರಾಜ ಅಧೀನನಾಗಿ ಕಪ್ಪ ಕೊಡಲು ಒಪ್ಪಿದನು. ಆಗ ದಂಗೆ ಎದ್ದಿದ್ದ ಉಮ್ಮತ್ತೂರು ಪಾಳೆಯಗಾರರನ್ನೂ ಅಡಗಿಸಿದನು. ಅಚ್ಯುತರಾಯ ಪಾಂಡ್ಯ ರಾಜನಿಗೆ ಅವನ ರಾಜ್ಯವನ್ನು ಪುನಃ ಅವನ ಮಗಳಾದ ವರದಾಂಬಳನ್ನು ವಿವಾಹವಾದನು. ಕ್ರಿ.ಶ. 1531ರಲ್ಲಿ ಒರಿಸ್ಸಾ ರಾಜನಾಗಿದ್ದ ಪ್ರತಾಪರುದ್ರ ಹಿಂದೆ ಕೃಷ್ಣದೇವರಾಯನಿಗೆ ಒಪ್ಪಿಸಿದನು. ಕೃಷ್ಣಾ ನದಿಯ ದಕ್ಷಿಣ ಭಾಗದ ಪ್ರದೇಶಗಳನ್ನು ಸುಲ್ತಾನ ಕುತ್ಬ್‌ಷಾನ ಬೆಂಬಲದೊಡನೆ ಆಕ್ರಮಿಸಿದ. ಅಚ್ಯುತರಾಯ ಅವನನ್ನು ಸೋಲಿಸಿ, ಒರಿಸ್ಸಾದವರೆಗೆ ಹೋಗಿ ಅಲ್ಲಿ ತನ್ನ ವಿಜಯಸ್ತಂಭವನ್ನು ನೆಟ್ಟನು. ಶಾಸನದ ಹೇಳಿಕೆಗಳ ಪ್ರಕಾರ ಸಿಂಹಳ ಅಚ್ಯುತರಾಯನ ಅಧೀನ ರಾಜ್ಯವಾಗಿತ್ತು. ಕ್ರಿ.ಶ. 1534ರಲ್ಲಿ ಇಸ್ಮಾಯಿಲ್ ಆದಿಲ್ ಷಾನ ಮರಣಾನಂತರ ಅಚ್ಯುತರಾಯ ರಾಯಚೂರು ಪ್ರದೇಶವನ್ನು ಆಕ್ರಮಿಸಿಕೊಂಡನು. ಕ್ರಿ.ಶ. 1536–37ರಲ್ಲಿ ಗುತ್ತಿಯ ದಂಗೆಯನ್ನು ಅಡಗಿಸಿದನು. ತನ್ನ ಆಳ್ವಿಕೆಯ ಉದ್ದಕ್ಕೂ ಇವನು ರಾಜಕೀಯ ಪ್ರಕ್ಷುಬ್ಧತೆಯ ಮಧ್ಯೆ ತೊಳಲಾಡಬೇಕಾಗಿ ಬಂದರೂ ಈ ರಾಜ್ಯದ ಒಟ್ಟು ಕ್ಷೇಮಕ್ಕೆ ಭಂಗ ಬರದಂತೆ ಧೈರ್ಯ ಹಾಗು ಉಪಾಯದಿಂದ ಆಡಳಿತ ನಿರ್ವಹಿಸಿದನೆಂದೇ ಹೇಳಬಹುದು.

ಅಚ್ಯುತರಾಯ ದೇವಸ್ಥಾನಗಳಿಗೆ ಅನೇಕ ದಾನವನ್ನು ಮಾಡಿದ್ದಾನೆ. ವೈಷ್ಣವ ಮತಾವಲಂಬಿಯಾಗಿದ್ದ ವರದರಾಜ ದೇವಸ್ಥಾನಕ್ಕೆ ಅನೇಕ ಕೊಡುಗೆಗಳನ್ನು ಕೊಟ್ಟನು. ಹೋಮವನ್ನು ಮಾಡಿ ಅನೇಕ ತೆರಿಗೆಗಳಿಂದ ವಿನಾಯಿತಿ ನೀಡಿದನು. ಅಚ್ಯುತರಾಯನಿಗೆ ವರದಾಂಬಿಕಾ ಅಲ್ಲದೆ ಇನ್ನಿಬ್ಬರು ಪತ್ನಿಯರೂ ಇದ್ದರು. ಈತನಿಗೆ ವೆಂಕಟಾದ್ರಿ ಎಂಬ ಮಗನಿದ್ದು. ಅವನಿಗೆ ಕ್ರಿ.ಶ. 1530ರಲ್ಲಿ ಯುವರಾಜಪಟ್ಟವೂ ಆಗಿತ್ತು. ಅಚ್ಯುತರಾಯ ಕ್ರಿ.ಶ. 1542ರಲ್ಲಿ ಮೃತನಾದನು.

ಕ್ರಿ.ಶ. 1529ರಿಂದ 1542ರವರೆಗೆ ಆಳಿದ ಅಚ್ಯುತದೇವರಾಯನು ತುಳು ವಂಶದ ಪ್ರಮುಖರಲ್ಲಿ ಒಬ್ಬನು. ಇವನ ಕಾಲದ ಶೈವ ಶಾಸನಗಳನ್ನು ಗಮನಿಸಿದಾಗ ಕ್ರಿ.ಶ. 1529ರ ಅಂಕವಳ್ಳಿ ಶಾಸನದಲ್ಲಿ ಶ್ರೀಕಂಠದೇವರ ನಿತ್ಯ ನೈವೇದ್ಯಗೋಸ್ಕರ ಹಾಗೂ ರಾಜನ ಆರೋಗ್ಯದ ಬಗ್ಗೆ ತವನಿದಯ ತಪ್ಪಗೌಡನು ಅಂಕುರವಳ್ಳಿ ಗ್ರಾಮವನ್ನು ಪುನರ್ದತ್ತಿಯಾಗಿ ಕೊಟ್ಟ ವಿವರವಿದೆ.

ಕ್ರಿ.ಶ. 1530ರ ಗೊಲ್ಲರಹೊಸಹಳ್ಳಿ ಶಾಸನದಲ್ಲಿ ಅರ್ಕನಾಥದೇವರ ನಿತ್ಯ ನೈವೆದ್ಯಗೋಸ್ಕರ ಸಾತಿಗ್ರಾಮದ ಅಧಿಕಾರಿ ಲಿಂಗಣ್ಣ ಒಡೆಯ ಆದಾಯಗಳಿಂದ 62 ಗದ್ಯಾಣ ಖರ್ಚುವೆಚ್ಚಗಳಿಗೆ ದೇವರಹಳ್ಳಿ ಗ್ರಾಮವನ್ನು ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಕೊಡಗಹಳ್ಳಿ ಶಾಸನದಲ್ಲಿ ತಲಕಾಡಿನ ಕೀರ್ತಿನಾರಾಯಣ ದೇವರ ರಾಜನ ಅಭಿವೃದ್ಧಿಗೋಸ್ಕರ ಮಾಯನಪುರ ಗ್ರಾಮವನ್ನು ದಾನವಾಗಿ ನೀಡಿದ್ದನ್ನು ತಿಳಿಯಬಹುದು. ಹರಿಹರಶಾಸನದಲ್ಲಿ ಹರಿಹರದೇವರ ನೈವೇದ್ಯ ನಿರ್ವಹಣೆಗೋಸ್ಕರ ರಾಮಚಂದ್ರ ಆರಾಧ್ಯರ ಮಗ ವಿಶ್ವೇಶ್ವರ ಆರಾಧ್ಯ ದಾನ ನೀಡಿದ್ದಾನೆ. ಬೆಳಗುರು ಶಾಸನದಲ್ಲಿ ಸಿದ್ಧರಾಮೇಶ್ವರ ಅಂಗ, ರಂಗ, ವೈಭೋಗಕ್ಕೆ ನೈವೇದ್ಯ, ಪೂಜೆ, ಸಂಗೀತ, ನೃತ್ಯಕ್ಕೆ ಸಿಂಗಣನಾಯಕ ದಾನ ನೀಡಿದ್ದಾನೆ. ಪೂಟ್ಟಿಪಡು ಅಚ್ಯುತರಾಯ ಮಹಾರಾಯ ಶಾಸನದಲ್ಲಿ ಬಾಸಪ್ಪನಾಯಕರು ರಾಜನಿಗೆ ಮತ್ತು ತಂದೆಯವರಿಗೆ ಪುಣ್ಯವಾಗಬೇಕೆಂದು ಕರೂರು ಚನ್ನಕೇಶದ ದೇವರಿಗೆ ಸೇವೆಗೋಸ್ಕರ ಭೂಮಿ ದಾನ ನೀಡಿದ ವಿವರವಿದೆ. ಅಥಮಾನ್ ಕೋಟೆ ಶಾಸನದಲ್ಲಿ ಶ್ರೀ ಮನ್ವಹಾನಾಯಕಾಚಾರ್ಯ ಮದ್ದೆಬೊಮ್ಮಿಯಪ್ಪನಾಯಕ ಅವನ ಮಗ ಕಾಮಿಯಪ್ಪನಾಯಕನು ಕಟ್ಟಳೆಯನ್ನು ಮಾಡಿ ಕೆಲವು ಸುಂಕಗಳನ್ನು ವಿವರ ಹಾಗೂ ಭೈರವರ ದೇವರ ಸನ್ನಿಧಿಯಲ್ಲಿ ಖಿಲವಾಗಿರಲು ಅದನ್ನು ಪುನರಾರಂಭಿಸಿದ ವಿವರವಿದೆ.

ಕ್ರಿ.ಶ. 1530–31ರ ಯಲವುಳಿ ಶಾಸನ ಸವೆದಿದೆ. ಸೋಮದೇವ ದೇವರಿಗೆ ದಶವಂದ ಕೆರೆಯ ಕೆಳಗೆ ಕೆಲವು ಭೂಮಿ ವರದಪ್ಪಯ ದೇವಸ್ಥಾನದ ಸೇನಭೋವ ತಿಮ್ಮರಸ ದೇವನಾಯಕ ಇತರರಿಗೆ ದಾನ ನೀಡಿದ ವಿವರವಿದೆ. ಸಂಜೇದೇವರಪುರ ನಂಜುಂಡೇಶ್ವರ ದೇವರ ಅಭಿಷೇಕ, ಮಧ್ಯಾಹ್ನದ ನೈವೇದ್ಯಗೋಸ್ಕರ ರಾಜನ ಆದೇಶದ ಮೇರೆಗೆ ಪೆರುಮಾಳೆ ಅಧಿಕಾರಿ ಅಯ್ಯನು ದಣ್ಣಾಯಕಪುರ ಗ್ರಾಮವನ್ನು ದಾನ ನೀಡಿದ ದಾಖಲೆಯಿದೆ. ಹರಿಹರದ ಶಾಸನದಲ್ಲಿ ಹರಿಹರದೇವ ಪೂಜೆಗೋಸ್ಕರ ಗಂಗನರಸಿ ಮತ್ತು ಬೆಳವಡಿ ಎರಡು ಗ್ರಾಮಗಳನ್ನು ಅಣ್ಣಾಜಿದೇವನ ಮಗ ಅವಸರದೀಕ್ಷಿತನು ದಾನ ನೀಡಿದ್ದಾನೆ. ದುರ್ಗಾದೇ ವಿದೇವಾಲಯದ ಹತ್ತಿರ ಇರುವ ಮಹಾಲಿಂಗದೇವಾಲಯ ದೇವಸ್ಥಾನಕ್ಕೆ ಲಜ್ಜೆಯ ಸದಾನಂದಸೆಟ್ಟಿ ದಾನ ಕೊಟ್ಟ ದಾಖಲೆಯಿದೆ.

ಕ್ರಿ.ಶ. 1531 ಕಾಳಹಸ್ತಿ ಶಾಸನದಲ್ಲಿ ಕಾಂಚಿಪುರದ ಹರದೇವರ ಮುಂದೆ ರಾಣಿ ವರದಾಂಬಿಕಾ ಮತ್ತು ಅವನ ಮಗ ಚಿಕವೆಂಕಟಾದ್ರಿ ಮುಕ್ತ ತುಲಾಭಾರ ಮಾಡಿದ ವಿವರವಿದೆ. ಲೇಪಾಕ್ಷಿ ಶಾಸನದಲ್ಲಿ ವೀರಭದ್ರ ರಘುನಾಥ ಮತ್ತು ಲೇಪಾಕ್ಷಿಯ ಪಾಪವಿನಾಶದೇವರ ಸೇವೆಗೋಸ್ಕರ ಮುದ್ದಮಾಂಬ ಮತ್ತು ನಂದಿಲಕ್ಕಿಸೆಟ್ಟಿಯ ಮಗ ವೀರಪಂಣನ ವಿನಂತಿ ಮೇರೆಗೆ ಚಲವಿಂಡ್ಲ ಗ್ರಾಮವನ್ನು ಅಚ್ಯುತಕೇಂದ್ರಪುರ ಎಂದು ಪ್ರತಿನಾಮ ಮಾಡಿ ರಾಜನು ದಾನ ನೀಡಿದ ವಿವರವಿದೆ. ಆನೆಗೊಂದಿ ತೃಟಿತ ಶಾಸನ ಆನೆಗುಂದಿಯ ಉತ್ತರದ ಬಾಗಿಲ ಬಳಿ ಪ್ರತಿಷ್ಠಾಪಿಸಲಾದ ಬಸವರಾಜ ದೇವರಿಗೆ ಚವರದ ಕೋನಪ್ಪನಾಯಕನ ಮಗ ಮಾದ್ಯೆಯ, ಪೆನುಗೊಂಸ ನಾಗ್ಯೆಯನು ದೇವರ ನಿತ್ಯನೈವೇದ್ಯಕ್ಕಾಗಿ ದಾನ ನೀಡಿ ಅರವಟ್ಟಿಗೆಯನ್ನು ನಿರ್ಮಿಸಿದನ್ನು ತಿಳಿಸುತ್ತದೆ. ಚಿಪ್ಪಗಿರಿ ಶಾಸನದಲ್ಲಿ ಭೋಗೇಶ್ವರ ಕೊಂಡಭೂಪನು ದೇವಾಲಯಕ್ಕಾಗಿ ದಾನ ನೀಡಿದ ವಿವರ ಹಾಗೂ ಇದೇ ದೇವರಿಗೆ ರಾಜನ ಅಪ್ಪಣೆಯ ಮೇರೆಗೆ ಚಿಕ್ಕತಿಂಮ್ಮಪ್ಪಯ್ಯ ದಾನ ನೀಡಿದ ವಿವರವಿದೆ. ಹೊಸಪೇಟೆ ಶಾಸನದಲ್ಲಿ ತಿರುಮಲದೇವಿ ಅಮ್ಮನವರ ಪಟ್ಟಣದ ಗವುರೇಶ್ವರದೇವರಿಗೆ ಕಂಪಣದೇವರಸ ಅಂಣನವರು ಮತ್ತು ಉಭಯನಾನಾದೇಶಿಗಳು ಭತ್ತದ ಹೇರಿನ ಮೇನೆ 1 ಕಾಸು, ಕಂಡಿಗೆಪೈರು ಹೇರಿನ ಮೇಲೆ 1 ಕಾಸು ಮತ್ತು ಮದುವೆಯ ಹಣ ಮೂರನ್ನು ಬಿಡುತ್ತಾರೆ. ಬಸರೂರ ಶಾಸನದಲ್ಲಿ ಮಹದೇವ ದೇವರ ಸೇವೆಗೋಸ್ಕರ ದೇವಪುಸೆಟ್ಟಿ ಮತ್ತು ಸದಾನಂದಸೆಟ್ಟರ ಹಣ ಮತ್ತು ಭೂಮಿ ದಾನ ನೀಡಿದ ವಿವರವಿದೆ. ಲೇಪಾಕ್ಷಿ ಶಾಸನದಲ್ಲಿ ರಾಜನ ಆಜ್ಞೆಯ ಮೇರೆಗೆ ಚಲುವಿಂಡ್ಲ ಗ್ರಾಮದ ಪ್ರಜೆಗಳಿಗೆ ಕುಮಾರವೆಂಕಟಾದ್ರಿಯಪುರವೆಂದು ಪ್ರತಿನಾಮ ಮಾಡಿ ಗಣಪತಿಹಳ್ಳಿ ಪಾಪವಿನಾಶದೇವರಿಗೆ ರಾಜನು ದಾನ ನೀಡಿದ್ದಾನೆ.

ಕ್ರಿ.ಶ. 1532ರ ದಾಸರಹಳ್ಳಿ ಶಾಸನದಲ್ಲಿ ಈರಯ್ಯ ದೇವಾಲಯದ ನೈವೇದ್ಯ ಮತ್ತು ಪೂಜೆಗೋಸ್ಕರ ಕೆಂಪದೇವರಸ ಚೊಕ್ಕನಹಳ್ಳಿ ಗ್ರಾಮವನ್ನು ದಾನ ನೀಡಿದ್ದಾನೆ. ಶಾಂತಿಗ್ರಾಮದ ಶಾಸನದಲ್ಲಿ ಉತ್ಸವಮೂರ್ತಿ ಧರ್ಮೇಶ್ವರ ದೇವರ ನಿತ್ಯಪೂಜೆಗೋಸ್ಕರ ಶಾಂತಿಗ್ರಾಮ ಸೀಮೆಯನ್ನು ದೇವಾರುಭಟ್ಟರಿಗೆ ದಾನ ನೀಡಿದ ದಾಖಲೆಯಿದೆ. ಬನಶಂಕರಿ ಶಾಸನದಲ್ಲಿ ಬಾದವಿಯ ಕೋಟೆಯ ಅನೇಕ ದೇವಾಲಯಗಳು ಬಂಡಮಹಾಮಾಯಿ ಜೀರ್ಣೋದ್ಧಾರಕ್ಕೆ ಮತ್ತು ರಾಜನ ಅಭಿವೃದ್ಧಿಗೋಸ್ಕರ ದೇವಾಲಯಗಳಿಗೆ ಸಮರ್ಪಿಸಿದ ವಿವರವಿದೆ. ಕಾಳಹಸ್ತಿ ಶಾಸನದಲ್ಲಿ ಕಾಳಹಸ್ತಿದೇವರ ಬೇರೆಬೇರೆ ವಿಧದ ಪೂಜೆಗೋಸ್ಕರ ಮತ್ತು ಮೃಗ ನಕ್ಷತ್ರ ವಿಧವಿಧ ವಸ್ತುಗಳುವಿಗ್ರಹಗಳ ಆಕರ್ಷಣೆ, ದೀಪನಿರ್ವಹಣೆಗೆ ವಿಶೇಷ ಹಬ್ಬಗಳ ಸಂದರ್ಭದಲ್ಲಿ ಆಹಾರ ಭಕ್ಷಗಳನ್ನು ಬೇರೆ ಬೇರೆ ಹಳ್ಳಿಗಳ ಆದಾಯದಿಂದ ದಾನ ನೀಡಿದ ವಿವರವಿದೆ. ಶಿವಗಂಗಾ ಶಾಸನದಲ್ಲಿ ಗಂಗಾಧರದೇವ ದೇವರ ನೈವೇದ್ಯ, ಪೂಜೆಗೋಸ್ಕರ ಶ್ರೀಪತಿಹಳ್ಳಿ ಗ್ರಾಮವನ್ನೂ ಅವರ ಕಟ್ಟಿಗೆ ಕಾಮಂಣ್ಣನಾಯಕ ದಾನ ನೀಡಿದ್ದಾನೆ. ಕುಡಿತಿನಿ ಶಾಸನದಲ್ಲಿ ಅಚ್ಯುತದೇವರಾಯ ಮಹಾರಾಯರ ದಕ್ಷಿಣ ಭುಜಾಭಂಡಾರದ ತಿಂಮ್ಮಪಯ್ಯನವರಿಗೆ ಪುಣ್ಯವಾಗಬೇಕೆಂದು ಅಳಿಯಕೊಂಡಪನು ಕುಡುತಣಿಯ ವೀರಭದ್ರದೇವರ ನೈವೇದ್ಯ ಜೀರ್ಣೋದ್ಧಾರಕ್ಕೆಂದು ಇಕ್ಕುಳ ಕರಿಯ ಹೊಲವನ್ನು ಕೆಲವು ತೆರಿಗೆಗಳನ್ನು ಬಿಡಲಾಗಿದೆ. ಎರಗನಹಳ್ಳಿ ಶಾಸನದಲ್ಲಿ ಕೆಂಪದೇವರಸಂಣನವರ ನಿರೂಪದ ಮೇರೆಗೆ ಹದಿನಾರು ಸ್ಥಾನಿಕರು ಮುಂದಿಟ್ಟು ಗಾಜನೂರು ಸ್ಥಳದ ಪಾರುಪತ್ಯಗಾರ ಸೇನಬೋವ ಮುಂತಾದವರ ಸಮ್ಮುಖದಲ್ಲಿ ನಂಜನಗೂಡಿನ ನಂಜುಂಡೇಶ್ವರದೇವರ ಸನ್ನಿಧಿಯಲ್ಲಿ ನಡೆಯುವ ಜಂಗವ ಛತ್ರದ ಅನ್ನದಾನಿ ಒಡೆಯರಿಗೆ ಎರಗನಹಳ್ಳಿ ಗ್ರಾಮದ ಭೂಮಿಯನ್ನು ಭಾಗ ಮಾಡಿ ದತ್ತಿ ಬಿಟ್ಟ ವಿವರವಿದೆ. ಬನಶಂಕರಿ ಶಾಸನದಲ್ಲಿ ಮುಸಲ್ಮಾನರಿಂದ (ಮಹಾಜನರು) ನಾಶವಾಗಿದ್ದ ಬಾದಾಮಿಯ ಬನಶಂಕರಿ ದೇವಾಲಯವಿದೆ. ಮೊದಲಾದ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಬೇಕೆಂದು ಅಚ್ಯುತರಾಯ ಸೇನಾಪತಿ ಚನ್ನಕನಾಯಕನು ತನ್ನ ಮಗ ಚಿಕ್ಕಚಿನ್ನಪ್ಪನಾಯಕನಿಗೆ ತಿಳಿಸುತ್ತಾನೆ. ಅದರಂತೆ

ಚಿಕ್ಕಚಿನ್ನಪ್ಪನಾಯಕನು ಬಾದಾಮಿಯ ಕೋಟೆಯನ್ನು ಸರಿಪಡಿಸಿ ಬನದದೇವಿಯ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದಂತೆ ತಿಳಿಸುತ್ತದೆ. ಅಚ್ಯುತರಾಯನು ಆಳುತ್ತಿದ್ದಾಗ ವಿಜಯನಗರ ಎರೆಯಮಹಾನಾಡ ಹಲವರು ಸೇರಿ ಮತಂಗಪರ್ವತದ ವೀರೇಶ್ವರದೇವರ ಪಾತ್ರ ವೈಭೋಗಕ್ಕೆ ಎರೆಯ ಹೇರು 1ಕ್ಕೆ 1 ಗಟ್ಟಿ ವೀಸವನ್ನು ಮಂಗಳವಾರದಲ್ಲಿ ನಡೆಯುವ ಅಂಗಡಿ 1ಕ್ಕೆ 1 ಕಾಸನ್ನು ದಾನವಾಗಿ ನೀಡಿದ ವಿವರವಿದೆ.

ಕ್ರಿ.ಶ. 1533ರ ಲೇಪಾಕ್ಷಿ ಶಾಸನದಲ್ಲಿ ವೀರೇಶ್ವರ ದೇವರ ಲೇಪಾಕ್ಷಿಯ (ವೀರಭದ್ರದೇವರ) ಸೇವೆಗೋಸ್ಕರ ರಾಜನು ನಿಗದಿಪಡಿಸಿದ ದಾನ ನೀಡಿದ ವಿವರವಿದೆ. ಈ ಒಂದು ಸಂಸ್ಕೃತ ಶಾಸನ ತುಳುವ ವಂಶದ ವಂಶಾವಳಿಯನ್ನು ಮತ್ತು ರಾಜರುಗಳ ಗೆಲುವುಗಳನ್ನು ತಿಳಿಸುತ್ತದೆ. ಆನೆಗುಂದಿ ಶಾಸನದಲ್ಲಿ ಆನೆಗುಂದಿ ಮಾಗುಣಿಯ ತಿಮ್ಮರಸಯ್ಯನು ಅಚ್ಯುತರಾಯನಿಗೆ ಪುಣ್ಯವಾಗಬೇಕೆಂದು ಮಹೇಸನಗುಡಿಗೆ ನೈವೇದ್ಯಕ್ಕೆ ದಾನ ನೀಡಿದ ದಾಖಲೆಯಿದೆ. ಚಗಲೇರು ಶಾಸನದಲ್ಲಿ ಅವುಭಳದೇವರಿಗೆ ಚಾಗಲೇರ ಕೆಂಪಯ್ಯಗಳ ದೇವರ ನಿತ್ಯ ನೈವೇದ್ಯಕ್ಕೆ 1 ಖಂಡುಗ ಗದ್ದೆಯನ್ನು ಚಾಗಲೇರ ಕಾಂತೇರಿಯ ಕಂಪ್ಪದೇವರಸ ಅಣಂಗಳು ಅಚ್ಯುತರಾಯ ಮಹಾರಾಯರ ಧರ್ಮವಾಗಬೇಕೆಂದು ದಾನ ನೀಡಿದ ವಿವರವಿದೆ. ಹೆಸರುಗಟ್ಟ ಶಾಸನದಲ್ಲಿ ರಾಜನಿಂದ ಅಪ್ಪಣೆ ಪಡೆದು ಅಪ್ಪಣ್ಣ ಮತ್ತು ವೀರಪ್ಪ ಎಂಬುವರು ವೈಯಕ್ತಿಕವಾಗಿ ದೇವಾಲಯ ಕಟ್ಟಿಸಿ ನಂದಿಕೇಶ್ವರ ಮತ್ತು ವಿಘ್ನೇಶ್ವರ ವಿಗ್ರಹ ಪ್ರತಿಷ್ಠಾಪಿಸಿದ ದಾಖಲೆಯಿದೆ. ಹರದನಹಳ್ಳಿ ದಿವ್ಯ ಲಿಂಗಶ್ರೀ ಅಣಿಲೇಶ್ವರ ದೀಪಾರಾಧನೆಗೆ, ಪೂಜೆಗೋಸ್ಕರ ಹಿರಿಯ ಬಾಕರಸಯ್ಯನು ಬೀಕನಹಳ್ಳಿ ಗ್ರಾಮವನ್ನು ಮಗ್ಗದವರು, ಮನೆವಣ, ತೋಟಗಳ ಆದಾಯದಿಂದ ಭೂಮಿ ದಾನ ನೀಡಿದ ವಿವರವಿದೆ. ವಡ್ಡರಹಳ್ಳಿ ಮಲ್ಲಿಕಾರ್ಜುನದೇವರ ಸೇವೆಗೋಸ್ಕರ ಸಾಟೆಯಪ್ಪ ನಾಯಕನ ಮಗ ಎಲ್ಲಪ್ಪನಾಯಕ ರಾಜನ ಸೇವೆಯಲ್ಲಿದ್ದು ಗ್ರಾಮವನ್ನು ದಾನ ನೀಡಿದ ದಾಖಲೆಯಿದೆ. ಹುರಳು ಶಾಸನದಲ್ಲಿ ಹನುಮಂತದೇವರ ಪೂಜೆ, ನೈವೇದ್ಯ ದೀಪಾರಾಧನೆ ನಿರ್ವಹಣೆಗೋಸ್ಕರ ಚನ್ನಪ್ಪಣನ ಮಗ ಅಲ್ಲಪ್ಪನಾಯಕ ಹಣ, ತೋಟ, ಭೂಮಿ ದಾನ ನೀಡಿದ್ದಾನೆ. ದುಮ್ಮಿವೀರಭದ್ರದೇವರ ನೈವೇದ್ಯಗೋಸ್ಕರ ದುಮ್ಮಿ ಗ್ರಾಮದ ಸಭೆಯವರು ಗೌಡ, ಪಟ್ಟಣಸ್ವಾಮಿ ಮತ್ತು ಪ್ರಜೆಗಳು ದಾನ ನೀಡಿದ ದಾಖಲೆಯಿದೆ. ಹರಿಹರ ಶಾಸನದಲ್ಲಿ ಅವಸರದ ಚಂದ್ರಶೇಖರಯ್ಯ ದೇಮೇಶ್ವರ ದೇವಾಲಯದ ಕಳಸ ಕಟ್ಟಿಸಿ ಅವಸರದ ದೇಮರಸಯ್ಯನ ಮಾವ ದಾನ ನೀಡಿದ್ದಾನೆ.

ಕ್ರಿ.ಶ. 1534ರ ಬಳ್ಳಾರಿ ಶಾಸನದಲ್ಲಿ ಅಚ್ಯುತರಾಯ ಮಹಾರಾಯನು ತನ್ನ ತಾತ ಯೀಶ್ವರನಾಯಕ ಅಜ್ಜಿಬುಕ್ಕಾಜಿ ಅಮ್ಮನವರಿಗೆ ಪುಣ್ಯವಾಗಬೇಕೆಂದು ಶ್ರೀ ವಿರೂಪಾಕ್ಷದೇವರ ಗುಡಿಯ ಪಶ್ಚಿಮಕ್ಕೆ ಬುಕ್ಕೇಶ್ವರ ದೇವರನ್ನು ಪ್ರತಿಷ್ಠಾಪಿಸಿ ದೊಡವಟಿ ಗ್ರಾಮವನ್ನು ನಾಲ್ಕು ದಿಕ್ಕಿಗೆ ಲಿಂಗಮುದ್ರೆ ಹಾಕಿರುವುದನ್ನು ಕಾಣುತ್ತೇವೆ. ಗಂಗಾವತಿ ಶಾಸನದಲ್ಲಿ ಕನಕಗಿರಿನಾಥಸ್ವಾಮಿಯ ಅಮೃತಪಡಿ ನೈವೇದ್ಯ, ಪೂಜೆ, ದೀಪಾರಾಧನೆ, ಅಂಗರಂಗ ವೈಭೋಗಗಳಿಗಾಗಿ ತಿರುನಾಳು, ಪಂಚಪರ್ವ ಮುಂತಾದವು ಸಾಂಗವಾಗಿ ನಡೆಯಬೇಕೆಂದು ಕುಷ್ಟಿಗೆಸೀಮೆಯಲ್ಲಿನ ಯಿಂಗಳದಹಾಳು, ಗುಡ್ಡಗಂಗಾವತಿಯ ಸೀಮೆಯಲ್ಲಿನ ಅಚ್ಯುತರಾಯನ ಮಲ್ಲಾಪುರ ಸಿದ್ದನಹಾಳ, ರಾಮಾಪುರ ಈ ನಾಲ್ಕು ಗ್ರಾಮಗಳ ಚತುಸ್ಸೀಮೆಯೊಳಗಣ ನಿಧಿನಿಕ್ಷೇಪ ಜಲಪಾಷಾಣ ಮುಂತಾದವುಗಳ ಸಹಿತವಾಗಿ ನೀಡಿರುತ್ತದೆ. ಕನಕಗಿರಿಯ ಕನಕಗಿರಿನಾಥ ದೇವರ ಪೂಜೆ, ನೈವೇದ್ಯ ನಿತ್ಯಪೂಜೆ, ಸಾಂದರ್ಭಿಕ ಹಬ್ಬಗೋಸ್ಕರ ರಾಜನು ದಾನನೀಡಿದ ದಾಖಲೆಯಿದೆ. ಮೂಗೂರು ಶಾಸನ ಸವೆದಿದೆ. ಮೂಗೂರು ದೇಶೇಶ್ವರ ದೇವರಿಗೆ ಕೇಶವಪ್ಪ ಒಡೆಯನ ಮಗ ದೇವರಸ ಭೂಮಿ ಮತ್ತು ಹೆಚ್ಚಿನ ಆದಾಯದಿಂದ ದಾನ ನೀಡಿದ್ದಾನೆ. ಕೋಡಂಬಳ್ಳಿ ಮಳಲೇಶ್ವರ ದೇವಾಲಯದ ಬೇರೆ ಬೇರೆ ಹಬ್ಬಗಳು, ಪೂಜೆ, ನೈವೇದ್ಯಗೋಸ್ಕರ ಸರಗೂರು ಗ್ರಾಮವನ್ನು ವಾರಣಾಸಿ ಸೂರಪ್ಪನ ಮಗ ಮಾದರಸ ಒಡೆಯನು ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1535ರ ಮಾಡಳ್ಳಿ ಶಾಸನದಲ್ಲಿ ಹದಿನಾರು ಸೀಮೆಯ ಮಾಡಳ್ಳಿ ಹತ್ತಿರ ಹಳೆ ಮಾಡಹಳ್ಳಿ ಮಲ್ಲಿಕಾರ್ಜುನ ದೇವರ ಸೇವೆಗೋಸ್ಕರ ರಾಜನ ಮಂತ್ರಿ ರಾಮಪ್ಪಯ್ಯನ ಕಾರ್ಯಕರ್ತ ಮಾದಪ್ಪಯ್ಯ ಆರತಿ ಕಾಣಿಕೆ ಮತ್ತು ಬೇಡಿಗೆ ಸೇವೆ ಮಾಡಿಸಿದ ದಾಖಲೆಯಿದೆ. ಬನ್ನಿಮಂಗಲ ಮಲ್ಲಿಕಾರ್ಜುನದೇವರ ದೇವಾಲಯಕ್ಕೆ ಬಮ್ಮಮಂಗಲ ಗ್ರಾಮವನ್ನು ವೆಂಕಟಪತಿರಾಯ ದಾನ ನೀಡಿದ್ದಾನೆ. ಕಾಮಗೆರೆ ಶಾಸನದಲ್ಲಿ ಮಾಡಹಳ್ಳಿ ಸ್ಥಳದಲ್ಲಿ ಹಳೆಯ ಮಾಡಹಳ್ಳಿ ಇರುವ ಮಲ್ಲಿಕಾರ್ಜುನ ದೇವರ ಸೇವೆ, ಪೂಜೆಗೋಸ್ಕರ ಭೂಮಿ ದಾನ ನೀಡಿದ ದಾಖಲೆಯಿದೆ. ಪಾಳ್ಯದ ಸೇರಗಿ ಪಾಳ್ಯದ ಜನಾರ್ಧನ ದೇವರ ನಿತ್ಯ ಪೂಜೆಗೋಸ್ಕರ ರಘುಪತಿರಾಜ ಒಡೆಯ ಸಿಗಳೂರು ಗ್ರಾಮವನ್ನು ದಾನ ನೀಡಿದ್ದಾನೆ. ಕಲ್ಲಗೆರೆ ಬಣದ ಚೌಡೇಶ್ವರ ದೇವತೆಯ ಪೂಜೆ ನೈವೇದ್ಯಗೋಸ್ಕರ ತಿರಗರಸರಾಜನ ಕರಣಿಕ ಬುದಿಹಾರ ಸೀಮೆಯ ಕಲ್ಲಗೆರೆ ಗ್ರಾಮ ದಾನ

ನೀಡಿದ್ದಾನೆ. ಚಿಕ್ಕಗಂಡಸಿಯ ಸಂಕಮದೇವತೆ ಮತ್ತು ಕೋಟೆನಾಥದೇವರ ಪೂಜೆಗೋಸ್ಕರ ಅಧಿಕಾರಿಗಳು ಚಂದವಾಗಿ ಕೆಲವು ಹಣವನ್ನು ಕೊಂಡಪ್ಪ ಒಡೆಯ ಹಣ ದಾನ ನೀಡಿದನು.

ಕ್ರಿ.ಶ. 1536ರ ಶಾಸನದಲ್ಲಿ ಪೆನುಗೊಂಡೆಯ ವಿರುಪಣ್ಣನು ಅಚ್ಯುತರಾಯನಿಗೆ ಪುಣ್ಯವಾಗಲೆಂದು ವಿರೂಪಾಕ್ಷ ದೇವರ ಸೇವೆಗೆ ಭೂಮಿ ದಾನ ನೀಡಿದ್ದನ್ನು ಉಲ್ಲೆಖಿಸುತ್ತದೆ. ಕೋಟೇಶ್ವರ ಶಾಸನದಲ್ಲಿ ಕೋಟೆನಾಥದೇವರ ಸಂಕಮಾದೇವಿ ಸೇವೆಗೋಸ್ಕರ ಮತ್ತು ಕೊಂಡಪ್ಪವೊಡೆಯರು ಚಿನ್ನ ಮತ್ತು ಭೂಮಿಯನ್ನು ದಾನ ನೀಡಿದ ದಾಖಲೆಯಿದೆ. ಬಂಡಿಹಾಳ ಶಾಸನದಲ್ಲಿ ಗುಜ್ಜಲ ಯಿಮ್ಮಡಿಯರಪನಾಯಕನ ಮಗ ಮುಮ್ಮಡಿ ಯರಪನಯಕನು ಮತ್ತು ಗುಜ್ಜಲ ಚಿಕ್ಕಹನುಮಂತನಾಯಕನ ಮಗ ಯಿಮ್ಮಡಿ ಹನುಮಂತನಾಯಕನು ಮಲ್ಲಿಕಾರ್ಜುನದೇವರಿಗೆ ದಾನ ನೀಡಿದ ವಿಷಯವಿದೆ.

ಕ್ರಿ.ಶ. 1537ರ ಕೈವಾರ ಭೀಮೇಶ್ವರ ದೇವರ ನಿತ್ಯಪೂಜೆ, ನೈವೇದ್ಯ ತಿಂಗಳ ಹಬ್ಬಗಳಿಗೋಸ್ಕರ ಭೀಮಸೇನ, ದ್ವಾಪರಯುಗದಲ್ಲಿ ಚಕ್ರಪುರ ಆಲಿಯಾಸ್ ಕೈವಾರ ಒಬ್ಬ ವ್ಯಕ್ತಿ ಹೆಸರು ಸ್ಪಷ್ಟವಿಲ್ಲ. ಕಾಣಿಕೆ, ಬೀರಾಡ ತೆರಿಗೆಗಳಿಂದ ಚಿವನಾಭಟ್ಟನ ಮಗ ರಾಮಭಟ್ಟನಿಗೆ ದಾನ ನೀಡಿದ ದಾಖಲೆಯಿದೆ. ಸುಲ್ತಾನಪುರ ಶಾಸನದಲ್ಲಿ ಸಾಮಂತ ಅರಸನಾದ ಗುಜ್ಜಲ ಇಮ್ಮಡಿ ಮೇದಿನಿರಾಯ ಒಡೆಯನು ಮಸ್ಕಿಯ ಮಲ್ಲಯ್ಯ ಚಿಲ್ಲ ಮಲ್ಲಯ್ಯ ಮತ್ತು ಅನಂತಯ್ಯನಿಗೆ ಮಸ್ಕಿ ಸೀಮೆಯ ಉದ್ದಂಡ ಮೇದಿನಪುರವನ್ನು ಅಮರನಾಥದೇವರಿಗೆ ದಾನ ಬಿಡಲಾಗಿದೆ. ಮಸ್ಕಿ ಶಾಸನದಲ್ಲಿ ಗುಜ್ಜಲ ಇಮ್ಮಡಿ ಮೇದಿನಿರಾಯನು ತನ್ನ ಕೈಕೆಳಗಿನ ಮೊಸಗೆಯ ಮೂಲಸ್ಥಾನ ದೇವರಾದ ಮಲ್ಲಿಕಾರ್ಜುನನಿಗೆ ಭೂದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಯೆರೆಯಹಲದ ಗ್ರಾಮದಲ್ಲಿ ಇಕ್ಕುಳ ಭೂಮಿಯನ್ನು ದಾನವಾಗಿ ನೀಡಲಾಗಿದೆ. ಯಲಬುರ್ಗ ಶಾಸನದಲ್ಲಿ ಕಾಶಿವಿಶ್ವನಾಥನಿಗೆ ಸಮಾನರಾದ ಕಲ್ಲೂರ ಕಲ್ಲಿನಾಥದೇವರಿಗೆ ಗುಂಜಲ ಹನುಮಂನಾಯಕನ ಮಗ ಯಂಮಡಿಹನುಮಂತನಾಯಕ ಮತ್ತು ಕುಪ್ಪಗೆಯ ಗುಜಲಯಿಂದುಡಿ ಮರದಿನಾಯಕನ ಮುಂಮಡಿ ಮುಂಗಪನಾಯಕನು ದಾನ ನೀಡಿದ್ದಾನೆ.

ಕ್ರಿ.ಶ. 1538ರ ಶಾಸನದಲ್ಲಿ ಹರದನಹಳ್ಳಿ ದಿವ್ಯಲಿಂಗ ಅಣಿಲೇಶ್ವರದೇವರ ಲಿಂಗ, ರಂಗ, ಭೋಗಕ್ಕೋಸ್ಕರ ಹದಿನಾಡಿನ ಉಂಡುವಂಕನಾಥ ಸ್ಥಳದಲ್ಲಿರುವ ಕಬಾಳ ಗ್ರಾಮವನ್ನು ಹಾಗೂ ಭೂಮಿ ತೆರಿಗೆಗಳಾದ ಮನೆವನ, ತೊಂಡು, ಹಂಡಲುದೆರೆ ದಾನ 'ನೀಡಿದ ದಾಖಲೆಯಿದೆ. ಗುಂಟನೂರು ಗುಂಟನೂರಿ ವಿನಾಯಕದೇವರ ದೇವಾಲಯ ಕಟ್ಟಿಸಿ ದೇವರ ಪ್ರತಿಷ್ಠೆ ಮಾಡಿಸಿ ಹಡಪದ ಪೊಟ್ಟೆನಾಯಕನ ಮಗ ವಿಠಲದಂಣಾಯಕ ಗುಂಟೂರು ಸೀಮೆಯಲ್ಲಿ ಬೆಂಕಪುರ ಎಂದು ಕರೆಯುವ ಮಲ್ಲಾಪುರ ಗ್ರಾಮ ದಾನ ನೀಡಿದ ವಿವರವಿದೆ. ಮಸ್ಕಿ ಶಾಸನದಲ್ಲಿ ಗುಜ್ಜಲ ಇಮ್ಮಡಿ ಮೇದಿರಾಯನು ತನ್ನ ಕೈಕೆಳಗಿನ ಮೊಸಗೆ ಸೀಮೆಗೆ ಸೇರಿದ್ದ ತಿಡಗಿಬಾವಿಯೆಂಬ ಗ್ರಾಮವನ್ನು ರಮರಣೇದ ದೇವರಿಗೆ ಅಮೃತಪಡಿಗಾಗಿ ಭೂದಾನವನ್ನು ನೀಡಿದ ವಿವರವಿದೆ.

ಕ್ರಿ.ಶ. 1539ರ ಖಾಂಡ್ಯ ಶಾಸನದಲ್ಲಿ ವಸುಧರೆ ಸಿಮೆಯ ಎಡವಲೆನಾಡಿನ ಖಾಂಡ್ಯಯ ಮಾರ್ಕಂಡೇಶ್ವರ ಜನಾರ್ಧನ ದೇವಾಲಯಗೋಸ್ಕರ ಕಟೇಗಾರ ಗ್ರಾಮ ಮತ್ತು ಹುಣಿಸೇವಳ್ಳಿ ಗ್ರಾಮಗಳನ್ನು ಮಲ್ಲರಾಜವಡೆಯನ ಮಗ ರಘುಪತಿರಾಜವಡೆಯರಿಗೆ ದಾನ ನೀಡಿದ ದಾಖಲೆಯಿದೆ. ಕೇಶವರಾವುತನ ಗುಂಡೇರಿವೀರಭದ್ರ ದೇವರಿಗೆ, ತೋಟ, ಗದ್ದೆ, ಬೆದ್ದಲು ಭೂಮಿಗಳನ್ನು ಸರ್ವಮಾನ್ಯವಾಗಿ ದಾನ ನೀಡಿದ ವಿವರವಿದೆ. ಹಂಪಿ ಶಾಸನದಲ್ಲಿ ಅಚ್ಯುತರಾಯಮಲ್ಲಪಂಣ ಅಯ್ಯನವರು ರಘುನಾಥದೇವರ ಸೇವೆಗಾಗಿ ಭೂದಾನ ನೀಡಿದ ಉಲ್ಲೇಖವಿದೆ. ವರದಾದೇವಿಅಮ್ಮನವರ ಪಟ್ಟಣದಲ್ಲಿನ ರಘುನಾಥದೇವರ ಸೇವೆಗಾಗಿ ದೊರವದಿ ಸೋಮಲಾಪುರದ ಸೀಮೆಯಲ್ಲಿರುವಂತಹ ತೋಟದ ಬೆಳೆಗಳ ಹಸರುವಾಣಿ ಸುಂಕವನ್ನು 1050 ಗದ್ಯಾಣಗಳ ಲೆಕ್ಕದಲ್ಲಿ ಕಂದಾಚಾರಕ್ಕೆ ನೀಡಿದ ವಿವರವಿದೆ. ಚಿಕ್ಕಕೆರೆಯಾಗಿನಹಳ್ಳಿ ಶಾಸನದಲ್ಲಿ ಪೆದ್ದತಿಮ್ಮಾಪುರದಲ್ಲಿ ಗೋಪಿನಾಥ, ಬಾಚೇಶ್ವರ, ಕೃಷ್ಣೇಶ, ಅಮ್ಮೇಶ, ಮಲ್ಲಿಕಾರ್ಜುನ, ವೀರಭದ್ರ ಮತ್ತು ವಿಶ್ವನಾಥ ದೇವಾಲಯಗಳನ್ನು ಈ ದೇವಾಲಯಗಳ ಪೂಜೆ ಪುರಸ್ಕಾರಕ್ಕಾಗಿ ಹೊಳಗುಂಡಿಯನ್ನು ದಾನ ನೀಡಿದ. ತನ್ನ ಮಗಳ ಹೆಸರಿನಲ್ಲಿ ಅಚ್ಯುತಮ್ಮಪುರವನ್ನು ಕಟ್ಟಿಸಿದ. ಅಲ್ಲಿ ಕೃಷ್ಣನ ಪ್ರತಿಷ್ಠೆ ಮಾಡಿದ ವಿವರವಿದೆ. ಕುಂತೂರು ಶಾಸನದಲ್ಲಿ ಸಾಲೂರು ನಂಜೆಯದೇವಂಗಳ ಸರ್ವಮಾನ್ಯವಾಗಿ ಕುಂತೂರಿನಿಂದ ನಿಗದಿಪಡಿಸಿದ ಆದಾಯಗಳು ರಾಜನ ಅಧಿಕಾರಿ ರಾಮಾಭಟಯ್ಯನು ನಿಗದಿಪಡಿಸಿ ಪಂಪಾಕ್ಷೇತ್ರದ ವಿರೂಪಾಕ್ಷ ದೇವರ ಮುಂದೆ ಪುಂಣ್ಯವಾಗಲೆಂದು ದಾನ ನೀಡಿದ ವಿವರವಿದೆ. ತಿಮ್ಮಲಾಪುರ ಶಾಸನದಲ್ಲಿ ಬಯಕಾರ ರಾಮಪ್ಪಯ್ಯನು ತನ್ನ ಚಿಕ್ಕಪ್ಪ ಬಾಚರಸಯ್ಯ, ಚಿಕ್ಕಮ್ಮ ಅಮಾಜಮ್ಮ ತನ್ನ ತಮ್ಮ ಕೃಷ್ಣಪನಿಗೆ

ಪುಣ್ಯವಾಗಬೇಕೆಂದು ಬಾಚೇಶ್ವರ, ಅಂಮೇಶ್ವರ, ಕೃಷ್ಣೇಶ್ವರ ದೇವಾಲಯವನ್ನು ಕಟ್ಟಿಸಿದ. ಬಯಕಾರ ರಾಮಪ್ಪನು ಅಚ್ಯುತದೇವರಾಯನ ಕೈಕೆಳಗಿನ ಅಧಿಕಾರಿಯಗಿದ್ದು ಹದಿನಾರ ಕೆರೆಗಳನ್ನು ಕಟ್ಟಿಸಿದ ವಿವರವಿದೆ. ಇದರಲ್ಲಿ ರಾಮಪ್ಪಯ್ಯನ ವಂಶಾವಳಿ ಹಾಗೂ ಧಾರ್ಮಿಕ ಕಾರ್ಯಗಳನ್ನು ತಿಳಿಸಿದೆ.

ಕ್ರಿ.ಶ. 1540ರ ಕಡೂರು ಶಾಸನದಲ್ಲಿ ಪಂಡಿದೇಶದಲ್ಲಿ ಬಾಗೂರು ಸೀಮೆಯಲ್ಲಿರುವ ಕಡವೂರು ಗ್ರಾಮವನ್ನು ವೀರೇಶ್ವರ ದೇವರ ಪೂಜೆಗೋಸ್ಕರ ಪೆನುಗೊಂಡೆ ವೀರಪ್ಪ ದಾನ ನೀಡಿದ್ದಾನೆ. ಕಲ್ಲಹಳ್ಳಿ ಶಾಸನದಲ್ಲಿ ಅಚ್ಯುತದೇವಮಹಾರಾಯರು ತಂಮ ತಾಯಿ ಅಂಮಾಜಿ ಅಂಮ್ಮ, ತಂದೆ ನರಸಣನಾಯಕರಿಗೆ, ಪುಣ್ಯವಾಗಬೇಕೆಂದು ಜಂಭುನಾಥದೇವರ ಅಮೃತಪಡಿ ಮುಂತಾದವುಗಳಿಗೆ ತಿರುಮಲದೇವಿ ಅಂಮನವರ ಪಟ್ಟಣಕ್ಕೆ ಸಲುವ ಕಲ್ಲಹಳ್ಳಿಯನ್ನು ದಾನ ನೀಡಿದ ವಿವರವಿದೆ. ಹಂಪಿ ಶಾಸನದಲ್ಲಿ ಹಂಪಿಯ ಹಿರಿಯ ಅಬ್ಬರಾಜನ ಮಗ ತಿಮ್ಮರಾಜನು ವರದರಾಜಅಮ್ಮನ ಪಟ್ಟಣಕ್ಕೆ ಪೂರ್ವ ದಿಕ್ಕಿನ ಪೆನುಗೊಂಡೆ ಬಾಗಿಲ ಬಳಿ ರಘುನಾಥದೇವರನ್ನು ಪ್ರತಿಷ್ಠೆ ಮಾಡಿ ದೇವರ ಅಮೃತಪಡಿಗೆ ದಾನ ನೀಡಿದ ವಿಷಯವಿದೆ.

ಕ್ರಿ.ಶ. 1541ರ ಬನ್ನೂರು ಶಾಸನದಲ್ಲಿ ವಾಹಿನಿಪುರ ಹನುಮಂತೇಶ್ವರದೇವರ ಹೊಸರಥ, ವಿಘ್ನೇಶ್ವರ ಮತ್ತು ಸ್ಕಂದೇಶ್ವೇರ ಉಮಾದೇವತೆ ಹೊಸದಾಗಿ ಪ್ರತಿಷ್ಠಾಪಿಸಿ, ಕಮನಪನಾಯಕನ ಮಗ ತಮ್ಮನಾಯಕ 7 ಖಂಡುಗ ಗದ್ದೆ, 900 ಅಡಿಕೆ ಮರಗಳನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ಕೋಲಾರದ ಕೋಳಾಲದೇವತೆ ದೇವಸ್ಥಾನಕ್ಕೆ ಉತ್ತಮನಾಥ ಅಯ್ಯನಮಗ ವೀರಪ್ಪಯ್ಯನು ಭೂಮಿ ಕೊಂಡು ದಾನ ನೀಡಿದ ವಿವರವಿದೆ.

ಕ್ರಿ.ಶ. 1542ರ ಬಸವನಪುರ ಶಾಸನದಲ್ಲಿ ನಂಜುಡೇಶ್ವರ ದೇವರ ನೈವೇದ್ಯ ಪೂಜೆಗೋಸ್ಕರ ಅಚ್ಯುತರಾಯ ಮತ್ತು ಅಪಯ್ಯ ಆಬೂರು ಗ್ರಾಮವನ್ನು ದಾನ ನೀಡಿದ ದಾಖಲೆಯಿದೆ. ತೆಕಲರಾಮಲಿಂಗದೇವ ಮತ್ತು ಸೋಮಯದೇವರ ದೇವರುಗಳ ಪೂಜೆಗೋಸ್ಕರ ರಾಜನ ಪರವಾಗಿ ದಾನ ನೀಡಿ ದಾನವನ್ನು ದೇವಸ್ಥಾನದ ಸ್ಥಾನಿಕ ನಾಯನಾರ್‌ಗೆ ಒಪ್ಪಿಸಿದ ವಿವರವಿದೆ. ಕಳಸದ ಕಳಸೇಶ್ವರ ದೇವರ ನಿತ್ಯ ನೈವೇದ್ಯ, ಪೂಜೆಗೋಸ್ಕರ ಒಕೆಲಭಟ್ಟನ ಮೊಮ್ಮಗ ಸುರಪ್ಪ ಹಣ ಮತ್ತು ಭತ್ತ ದಾನ ನೀಡಿದ್ದಾನೆ. ನಲ್ಲಾಪುರ ಶಾಸನದಲ್ಲಿ ಅಚ್ಯುತರಾಯನಿಗೆ ಪುಣ್ಯವಾಗಲೆಂದು ಗಂಗನಾಯಕನ ಮಗ ನಲ್ಲಪ್ಪಣನು ನಲ್ಲಾಪುರದಲ್ಲಿ ಸ್ಥಾಪಿಸಿದ ಹನುಮಂತರಾಯ ದೇವರಿಗೆ ಪೂಜೆಗಾಗಿ ಭೂಮಿದಾನ ಮಾಡಿದುದನ್ನು ತಿಳಿಸುತ್ತದೆ. ತೇದಿ ಇಲ್ಲದ ಭೂಕೂಮಡಹಳ್ಳಿ ಶಾಸನದಲ್ಲ ವಡಿಗಿಹಳ್ಳಿ ಸೋಮೇಶ್ವರ ದೇವರಿಗೆ ಮುಡಿಬೆಲೆಸ್ಥಳದ ಚೊಕ್ಕನಹಳ್ಳಿ ಗ್ರಾಮವನ್ನು ಮುಖ್ಯಸ್ಥರು ಉಂಬಳಿಯಾಗಿ ದಾನ ನೀಡಿದ ದಾಖಲೆಯಿದೆ.

ಕೊನೆಯದಾಗಿ ಸಾಂಸ್ಕೃತಿಕ ಪ್ರಗತಿ ಇವನ ಕಾಲದಲ್ಲಿ ಮುಂದುವರೆಯಿತು. ವಿಜಯನಗರ ಸಾಮ್ರಾಜ್ಯದ ಕೊಡುಗೆಯನ್ನು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಕಲಾತ್ಮಕವೆಂದು ವಿವಿಧ ವಿಷಯಗಳನ್ನು ತಿಳಿಯಬಹುದು. ವಿಜಯನಗರ ಸರ್ವಧರ್ಮ ಸಮನ್ವಯವನ್ನು ಸ್ಥಾಪಿಸಿತು. ವಿಜಯನಗರದಲ್ಲಿ ಮತೀಯ ಸ್ವಾತಂತ್ರ್ಯವಿದ್ದು ಇದೊಂದು ಜಾತ್ಯಾತೀತ ರಾಜ್ಯ ಎನಿಸಿತ್ತು. ವಿಜಯನಗರದ ಅರಸರು ವೈಯಕ್ತಿಕವಾಗಿ ಶೈವಧರ್ಮಕ್ಕೂ, ವೈಷ್ಣವ ಧರ್ಮಕ್ಕೂ ಸೇರಿದವರಾಗಿದ್ದರೂ ಅವರೆಲ್ಲರೂ ಪರಮಧರ್ಮಸಹಿಷ್ಣುಗಳಾಗಿದ್ದರು. ಕೃಷ್ಣದೇವರಾಯನ ನಂತರದ ಅರಸನಾದ ಅಚ್ಯುತರಾಯನು ಸರ್ವಧರ್ಮಸಮನ್ವಯ ತತ್ವದಲ್ಲಿ ನಂಬಿಕೆಯುಳ್ಳವನಾಗಿದ್ದನು.

ಆಧಾರ ಗ್ರಂಥಗಳು

1. ಎ.ಎರ್.ಐ.ಇ. ವಾರ್ಷಿಕ ವರದಿಗಳು.
2. *ಎಸ್.ಐ.ಐ. ಸಂಪುಟಗಳು IX* ಭಾಗ-1; XV, XVII, XVIII, XX,
3. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ :* ಹಂಪಿ : ಸಂಖ್ಯೆ 1. 3

02. ವಿಜಯನಗರ ಅರಸರ ಕಾಲದ ಶಾಸನೋಕ್ತ ಮಾಗಣಿ/ಮಾಗಾಣಿ – ಒಂದು ವಿವೇಚನೆ

ಡಾ. ಪಿ.ವಿ. ಕೃಷ್ಣಮೂರ್ತಿ

ಹದಿನಾಲ್ಕನೆಯ ಶತಮಾನದ ಮೂರನೆಯ ದಶಕದಲ್ಲಿ ತಲೆಯೆತ್ತಿದ ವಿಜಯನಗರ ಅರಸರು, ಮುಂದಿನ ಒಂದೆರಡು ದಶಕಗಳಲ್ಲೇ ಭಾರತದ ದಕ್ಷಿಣ ಭೂ–ಭಾಗದ ಒಡೆಯರಾದರು. ಅವರು ಇಷ್ಟು ತ್ವರಿತ ಗತಿಯಲ್ಲಿ ಅಷ್ಟು ವಿಶಾಲ ಪ್ರದೇಶದ ಮೇಲೆ ತಮ್ಮ ಒಡೆತನವನ್ನು ಸ್ಥಾಪಿಸಲು ಕಾರಣ, ಅದಕ್ಕೂ ಹಿಂದಿನ ಒಂದೆರಡು ದಶಕಗಳ ಕಾಲದಲ್ಲಿ ದಕ್ಷಿಣ ಭಾರತದ ಮೇಲೆ ಅವಿರತವಾಗಿ ನಡೆದಿದ್ದ ಪರಕೀಯರ ಆಕ್ರಮಣಗಳೇ ಕಾರಣವೆಂದರೆ ತಪ್ಪಾಗಲಾರದು. ಆಗ ಉಂಟಾಗಿದ್ದ ಅರಾಜಕತ್ವ, ಅಸ್ಥಿರತೆಗಳು ಸಮಾಜದ ಜನರನ್ನು, ಸುಭದ್ರ ಆಡಳಿತಕ್ಕಾಗಿ ಹಾತೊರೆಯುವಂತೆ ಮಾಡಿದ್ದಿತ್ತೆಂದು ಭಾಸವಾಗುತ್ತದೆ. ಅಂತಹ ಒಂದು ಸುಸಮಯದಲ್ಲಿ ಸಂಗಮವಂಶದ ಸೋದರರು ಹಿಂದೂರಾಜ್ಯ ಪ್ರತಿಷ್ಠಾಪನಾ ಕಾರ್ಯದಲ್ಲಿ ಮಗ್ನರಾಗಿ ಸ್ಥಳೀಯರೂ, ಬಂಧುಗಳೂ ಆದ ಹೊಯ್ಸಳ ಮಾಂಡಲಿಕರ, ಮಠಾಧಿಪತಿಗಳ ನೆರವನ್ನು ಪಡೆದು ಪೂರ್ವದಲ್ಲಿ ಕೋಲಾರವನ್ನೊಳಗೊಂಡಂತೆ ತಮಿಳುನಾಡಿನ ತಿರುವಡಿಯಿಂದ ಪಶ್ಚಿಮದ ಮಂಗಳೂರವರೆಗಿನ ಪ್ರದೇಶಗಳನ್ನು ಮೊದಲಿಗೆ ತಮ್ಮ ವಶಕ್ಕೆ ತೆಗೆದುಕೊಳ್ಳುವುದರ ಮೂಲಕ, ಮೊದಲ ದಶಕದಲ್ಲೇ ಅಸ್ತಿಭಾರವನ್ನು ಹಾಕಿ, ಅನಂತರದಲ್ಲಿ ನೆರೆ–ಹೊರೆಯ ಪ್ರದೇಶಗಳನ್ನು ವೇಂಟಿಸಿಕೊಂಡು ಉತ್ತರದಲ್ಲಿ ಕೃಷ್ಣಾ ನದಿಯವರೆಗೂ ದಕ್ಷಿಣದಲ್ಲಿ ಕನ್ಯಾಕುಮಾರಿವರೆಗೂ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡರು.

ವಿಜಯನಗರ ಅರಸರು ಹೀಗೆ ವಿಸ್ತಾರಗೊಂಡ ಭೂಪ್ರದೇಶದ ಮೇಲೆ ಸುಭದ್ರ ಆಡಳಿತವನ್ನು ನೆಲೆಗೊಳಿಸಲು ತನ್ನ ನೆಚ್ಚಿನ ಸಹೋದರರ ಸಹಕಾರದೊಂದಿಗೆ ಸುವ್ಯವಸ್ಥಿತ ಆಡಳಿತ ಕ್ರಮಕ್ಕಾಗಿ ಸೂಕ್ತ ಯೋಜನೆಯನ್ನು ರೂಪಿಸಿದರೆಂದು ತೋರುತ್ತದೆ. ಅದರ ಪರಿಣಾಮವಾಗಿ ರೂಪುಗೊಂಡಿದ್ದ ಅವರ ಆಡಳಿತ ವಿಭಾಗ–ಕ್ರಮವು, ಅವರಿಗೂ ಹಿಂದಿದ್ದ ಕಲ್ಯಾಣದ ಚಾಲುಕ್ಯರ, ಕಾಕತೀಯರ, ದಕ್ಷಿಣದ ಹೊಯ್ಸಳ, ಚೋಳ, ಪಾಂಡ್ಯರ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಆಡಳಿತ ವಿಭಾಗ ಕ್ರಮದಿಂದ ಪ್ರಭಾವಿತವಾಗಿದ್ದರು, ತಮ್ಮ ವಿಶಾಲ ಸಾಮ್ರಾಜ್ಯಕ್ಕೆ ಸೂಕ್ತವಾಗುವಂತೆ ಮಾರ್ಪಾಡುಗಳನ್ನು ಮಾಡಿಕೊಂಡಿರುವಂತೆ ತೋರುತ್ತದೆ.

ಈ ದೃಷ್ಟಿಯಿಂದ ವಿಜಯನಗರ ಅರಸರ ಶಾಸನಗಳನ್ನು ಪರಿಶೀಲಿಸಿದರೆ ರಾಜ್ಯ/ಮಂಡಲ/ದೇಶ ಎಂಬುವು ಮೇಲ್ ಸ್ತರದ ಆಡಳಿತ ಘಟಕಗಳಾಗಿಯೂ ನಾಡು/ಸೀಮೆ/ಕೊಟ್ರಂ ಹಾಗೂ ಸ್ಥಳ ಮತ್ತು ಗ್ರಾಮ ಎಂಬುವು ಕೆಳಸ್ತರದ ಆಡಳಿತ ಘಟಕಗಳಾಗಿ ರೂಪುಗೊಂಡಿದ್ದುದು ಗೋಚರವಾಗುತ್ತದೆ. ಇವಲ್ಲದೆ, ವಳಿತ, ಚಾವಡಿ, ಮಾಗಣೆ, ಪಟ್ಟಡಿ, ಹೋಬಳಿ ಮುಂತಾದ ಹಲವು ಘಟಕ ಸೂಚಕ ನಾಮಗಳೂ ಶಾಸನಗಳಲ್ಲಿ ಕ್ವಚಿತ್ತಾಗಿ ಕಂಡುಬರುತ್ತವೆ. ಇವುಗಳಲ್ಲಿ ವಳಿತ ಎಂಬುದು ನ್ಯಾಯಾಡಳಿತಕ್ಕೆ ಸಂಬಂಧಿಸಿದ್ದೆಂದೂ ಚಾವಡಿ ಎಂಬುದು ಕಂದಾಯ ಆಡಳಿತಕ್ಕೆ ಸಂಬಂಧಿಸಿದ್ದುದೆಂದು ಸೂಕ್ಷ್ಮ ಅಧ್ಯಯನಗಳಿಂದ ಮನಗಾಣಲಾಗಿದೆ.[1] ಪ್ರಸ್ತುತ ಮಾಗಣಿ ಮತ್ತು ಪಟ್ಟಡಿಗಳನ್ನು ಕುರಿತು ಪರಿಶೀಲಿಸುವ ಪ್ರಯತ್ನ ಈ ಪ್ರಬಂಧದ ಆಶಯವಾಗಿದೆ.

ವಿಜಯನಗರ ಅರಸರ ಕಾಲದ ಅನೇಕ ಶಾಸನಗಳಲ್ಲಿ ಮಾಗಣಿ, ಮಾಗಾಣಿ, ಮಾಗಣೆ, ಮಾಗಾಣೆ, ಮಾಗಾನಿ, ಮಾಗಾಣ್ಯೆ ಎಂದು ಮುಂತಾಗಿ ಉಲ್ಲೇಖಗೊಂಡಿರುವ ಈ ಪದಕ್ಕೆ ನಿಘಂಟುಗಳಲ್ಲಿ ವಿಭಿನ್ನ ಅರ್ಥಗಳನ್ನು ನೀಡಿರುವುದು ಕಂಡುಬರುತ್ತದೆ. ಕನ್ನಡ ನಿಘಂಟಿನಲ್ಲಿ 'ಮಾಗಾಣಿ' ಎಂಬುದಕ್ಕೆ ತಾಲೂಕಿನ ಒಂದು ಭಾಗ, ಹೋಬಳಿ ಎಂಬ ಅರ್ಥವನ್ನು ಮಾತ್ರ ನೀಡಲಾಗಿದೆ.[2] ಕನ್ನಡದ ಜಾತಿ ಭಾಷೆಗಳಲ್ಲಿ ಒಂದಾದ ತೆಲುಗಿನಲ್ಲಿ ಗದ್ದೆ, ಪರಿಪೊಲಮು = wet land irrigated for cultivation, ['ವೆಲಿಪೊಲಮುನ್ನ ಚರ್ವುಲು ತೋಂಟಲು ಚೆರುಕು ತೋಂಟಲಲೋನು ಭೂಮಿ ಚತುರಾಂಶಂ ಸರ್ವಮಾನ್ಯಂ –ಗಾನುನ್ನು .....],[3] ಅಲ್ಲದೆ ರಾಷ್ಟ್ರ ಪರಿಪಾಲನಾ ವಿಭಾಗಮು – ************************* [4] ಎಂದೂ ಅರ್ಥ ನೀಡಲಾಗಿದೆ. ತಮಿಳು ನಿಘಂಟುಗಳಲ್ಲಿ ಮಾಕಾಣಿ = 1/16, ************ 1/16. 'ಪೊನ್ ಎಡ್ಯೆಯಿಡುಂ

ಅಳವೈಯುಳ್ ಒರು ಪಗುದಿ,' ಅಲ್ಲದೆ ಇದು 'ಮಾವುಂ ಕಾಣಿಯುಂ ಎಡ್ಡೆಕೊಂಡ ಕಣಕ್ಕಾಗುಂ 1/10 ಮಂಜಾಡಿ–1ಮಾ, 1/40' ಮಂಜಾಡಿ=1ಕಾಣಿ[5] ಅಲ್ಲದೆ 'ಮಾಗಾಣಂ' = province of a country, ಎಂಬ ಅರ್ಥಗಳನ್ನು ನೀಡಿರುವುದು ಕಂಡುಬರುತ್ತದೆ.

ಮಾಕಾಣಿ ಎಂಬುದು ಮಹಾ + ಕಾಣಿ ಎಂಬ ಎರಡು ಪದಗಳಿಂದ ರೂಪುಗೊಂಡುದೆಂದು ಭಾವಿಸಿದರೆ ಮಹಾ ಎಂದರೆ ದೊಡ್ಡದು, ಶ್ರೇಷ್ಠವಾದುದು. 'ಕಾಣಿ/ಕಾಣಿ' ಅಥವಾ 'ಕಾನಿ' ಎಂಬುದಕ್ಕೆ ಕೆರೆ–ಕಟ್ಟೆ ಕೆಳಗಿನ ಭಾಗ ಎಂಬ ಅರ್ಥಗಳನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಶಾಸನೋಕ್ತ ಮಾಗಾಣಿ, ಮಾಗಣಿ ಎಂಬುದು ಯಾವುದೇ ಪ್ರದೇಶದ ಗದ್ದೆ ಭೂಮಿಯ ಉಲ್ಲೇಖವೆಂದು ಮನಗಾಣಬಹುದು. ಇದಕ್ಕೆ ಪೂರಕವಾಗಿ ಮೇಲೆ ಉಲ್ಲೇಖಿಸಿದ ತೆಲುಗು ನಿಘಂಟುಗಳ ಅರ್ಥವಾದ ನೀರಾವರಿ ಇದ್ದ ಭೂಮಿ ಅಥವಾ ಪ್ರದೇಶವೆಂದು ಗ್ರಹಿಸಬಹುದೆಂದು ತೋರುತ್ತದೆ. ಇಲ್ಲಿ 'ಕಾನಿ' ಎಂಬ ಪದದ ಅರ್ಥವನ್ನು ಗಮನಿಸೋಣ: ಕ್ರಿ.ಶ. 1123ರ ಹಾಸನ ತಾಲೂಕಿನ ಶಾಸನದಲ್ಲೇ[6] 'ಕಾನಿ' ಎಂಬ ಪದದ ಪ್ರಯೋಗವಾಗಿದೆ. ಹಾಗೇ ತರೀಕೆರೆ,[7] ಹೊಳಲ್ಕೆರೆ,[8] ಶಾಸನಗಳಲ್ಲೂ 'ಕಾನಿ' ಪದದ ಉಲ್ಲೇಖ ಬಂದಿದೆಯಾದರೂ ಅದಕ್ಕೆ 'ಕಾನ್' ಎಂಬ ಅರ್ಥವನ್ನೇ ಪರಿಷತ್ತಿನ ನಿಘಂಟುಕಾರರು ನೀಡಿದ್ದಾರೆ. ಆದರೆ 'ಕಾನಿ' ಎಂಬುದು ಇಂದಿಗೂ ಕೋಲಾರ, ಬೆಂಗಳೂರು ಜಿಲ್ಲಾ ಪ್ರದೇಶದ ಗ್ರಾಮಾಂತರ ಜನರಲ್ಲಿ ಬಳಕೆಯಲ್ಲಿರುವ ಪದವಾಗಿದ್ದು ಕೆರೆ–ಕಟ್ಟೆಯ ಕೆಳಗೆ ನೀರಾವರಿಗೊಳಗಾದ ಪ್ರದೇಶದ ಸೂಚಕವಾಗಿ ಇರುವುದು ಕಂಡುಬರುತ್ತದೆ. ಹಾಗಾಗಿ ಶ್ರೇಷ್ಠವಾದ ನೀರಾವರಿ ಭೂಮಿ ಎಂಬರ್ಥವೇ 'ಮಾಗಾಣಿ' ಎಂಬುದುರ ಮೂಲಾರ್ಥವಾಗಿದ್ದಿತೆಂದು ಹೇಳಬಹುದಾಗಿದೆ. ವಿಜಯನಗರ ಶಾಸನಗಳಲ್ಲಿ ಮಾಗಾಣಿ/ಮಾಗಣಿ ಎಂಬುದು ಮೇಲು ನೋಟಕ್ಕೆ ರಾಜ್ಯ ಇಲ್ಲವೆ ಸೀಮೆಯ ಕೆಳಗಿನ ಘಟಕವೆಂಬಂತೆ ಉಲ್ಲೇಖಗೊಂಡಿದ್ದರೂ – ಈ ಹೆಸರಿನ ಘಟಕಗಳು ವಿಶಿಷ್ಟವಾದುವೆಂದೇ ಹೇಳಬೇಕು. ಏಕೆಂದರೆ ಶಾಸನೋಕ್ತವಾಗಿರುವ ಪ್ರದೇಶ ಮತ್ತು ಸಂದರ್ಭಗಳನ್ನು ಗಮನಿಸಿದರೆ ಅವು ವಿಪುಲ ನೀರಾವರಿ ಅನುಕೂಲವನ್ನು ಪಡೆದ ಪ್ರದೇಶಗಳೇ ಆಗಿದ್ದವೆಂದು ಹೇಳಬಹುದಾಗಿದೆ. ಉದಾಹರಣೆಗೆ ಕ್ರಿ.ಶ. 1344ರ ಇಮ್ಮಡಿ ಬುಕ್ಕರಾಯನ ಕಾಲದ ಶಾಸನಗಳೆರಡರಲ್ಲಿ[9] ಪೆನ್ನಮಾಗಾಣಿಯ ಉಲ್ಲೇಖ ಬರುತ್ತದೆ. ಪೆನ್ನಮಾಗಾಣಿಗೆ ಸೇರಿದ ಪಿನಾಕಿನಿ ನದಿಯ ದಡದಲ್ಲಿರುವ ಕೋಡೂರಿ ಪೆಂಚಕಲ ದಿನ್ನವನ್ನು ಬುಕ್ಕರಾಯಪುರ ಎಂದು ಪ್ರತಿನಾಮವಿಟ್ಟು ತೆಲುಗಿನ ಪ್ರಸಿದ್ಧ ಕವಿ ನಾಚನನ ಮಗ ಮಹಾಕವಿ ಸೋಮನಾಥನಿಗೆ ಅಗ್ರಹಾರವಾಗಿ ನೀಡಿರುವುದು ಕಂಡುಬರುತ್ತದೆ. ಅದು ಗುತ್ತಿದುರ್ಗ ರಾಜ್ಯದ ಭಾಗವಾಗಿದ್ದಿತು. ಈ ಪೆನ್ನಮಾಗಣಿಗೆ ಸೇರಿದ ಗುತ್ತಿ ತಾಲೂಕಿನ ಜರಿವೂಟ್ಳ, ಆಲಗುವಾಟ, ಕಲ್ಲೂರುಪಾಡು, ತಾಡಪತ್ರಿ ತಾಲೂಕಿನ ಯಕ್ಕಲೂರು, ಪೂಸಲಪಾಡು, ಪೆದ್ದಪಾಪೂರು > ರಾಮಚಂದ್ರಪುರ ಗ್ರಾಮಗಳು ಪೆನ್ನಾನದಿ ಅಂದರೆ ಉತ್ತರ ಪಿನಾಕಿನಿ ನದಿಯ ಸನಿಹದಲ್ಲೇ ಇದ್ದು ನೀರಾವರಿಗೆ ಸುಲಭದಲ್ಲಿ ಒಳಪಡುವ ಗ್ರಾಮಗಳಾಗಿರುವುದನ್ನು ಗಮನಿಸಬಹುದಾಗಿದೆ. ಈ ಪೆನ್ನಮಾಗಣಿ ಪ್ರದೇಶವನ್ನು 12ನೆಯ ಶತಮಾನದ ಶಾಸನವೊಂದು ಪೆನ್ನಪರಿನಾಡು[10] ಎಂದೂ ನಂತರದ ಶಾಸನಗಳಲ್ಲಿ ಪೆನ್ನಬಡಿ[11], ಹೆಂನ್ನೆನಾಡು[12] ಎಂದೂ ಕರೆದಿರುವುದುಂಟು.

ಕ್ರಿ.ಶ. 1430ರ ತಾಮ್ರಪಟವೊಂದು[13] ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಾಲಯದ ಭಂಡಾರದಲ್ಲಿದ್ದು ಇಮ್ಮಡಿ ದೇವರಾಯನ ಆಳ್ವಿಕೆಗೆ ಸೇರಿದುದಾಗಿದೆ. ಮಹಾರಾಜನು ರತ್ನಧೇನು ಮಹಾದಾನವನ್ನು ಮಾಡುವ ಸಂದರ್ಭದಲ್ಲಿ ತೋರಿನಾಡ ವೇಂಠೆಯ ಮೇನಾಪುರ ಮಾಗಾಣಿಯಲ್ಲಿನ ಚಂದಿಗಾಲ ಗ್ರಾಮವನ್ನು > ಪ್ರತಾಪದೇವರಾಯಪುರವೆಂದು ಪ್ರತಿನಾಮವಿಟ್ಟು ಅಗ್ರಹಾರವನ್ನಾಗಿಸಿ ಬ್ರಾಹ್ಮಣರಿಗೆ ದತ್ತಿ ಬಿಡಲಾಗಿದೆ. ಈ ಗ್ರಾಮದ ಎಲ್ಲೆಗಳನ್ನು ವಿವರಿಸುವ ಭಾಗದಲ್ಲಿ ಚಂದಿಗಾಲದ ವಾಯವ್ಯಕ್ಕೆ ಕಾವೇರಿ ಹೊಳೆಯ ಕಾಲುವೆ ಇರುವುದನ್ನು ಖಚಿತಪಡಿಸುತ್ತದೆ. ಅಲ್ಲದೆ, ಸಾನುಗನಹಳ್ಳಿ ಕೆರೆ, ಆದಿಗೌಡನ ಕೆರೆ, ಹಾಗೂ ಕಾನಿ ಕೆರೆಗಳನ್ನು ಉಲ್ಲೇಖಿಸುತ್ತದೆ. ಈ ಹಿನ್ನೆಲೆಯಲ್ಲಿ ಮೇನಾಪುರ ಮಾಗಣಿಯಲ್ಲಿನ ಚಂದಿಗಾಲ ಗ್ರಾಮವೂ ನೀರಾವರಿ ಭರಿತವಾಗಿದ್ದಿತೆಂದು ಹೇಳಲು ಅವಕಾಶವಿದೆ.

ಕ್ರಿ.ಶ. 1513 ಮತ್ತು 1515ರ ಕೃಷ್ಣದೇವರಾಯನ ಕಾಲದ ಹಂಪಿ ಕೃಷ್ಣಸ್ವಾಮಿ ದೇವಾಲಯ ಹಾಗೂ ವಿಠಲಸ್ವಾಮಿ ದೇವಾಲಯದ ಶಾಸನಗಳಲ್ಲಿ 14 ಹೊಸ ಊರ ಮಾಗಣೆಗೆ ಸಲುವ ಮುದಲಾಪುರ, ವಿರುಪಾಪುರಗಳನ್ನು ಉಲ್ಲೇಖಿಸಿ ದಾನವಾಗಿ ಗದ್ದೆ ಭೂಮಿಯನ್ನು ನೀಡಿರುವುದು ಕಾಣಬಹುದು.

ಕಂಪಿಲಿಯ ಮಾಗಣಿಯನ್ನು ಉಲ್ಲೇಖಿಸುವ ಕ್ರಿ.ಶ. 1513ರ ಶಾಸನಗಳು[15] ಆ ಮಾಗಣೆಗೆ ಸೇರಿದ ದೇವಲಾಪುರ ಮತ್ತು ಸಾಯಣಾಪುರಗಳನ್ನು ಉಲ್ಲೇಖಿಸುತ್ತವೆ. ದೇವಲಾಪುರದಲ್ಲಿ 1 ಖಂಡುಗ ಗದ್ದೆ ಸಾಯಣಪುರದ ಸಕಲ ಭತ್ತಾದಾಯ, ಕಾಲುವೆಯ ನೀರ ಜಿರಾಡ ಮುಂತಾದವುಗಳ ಉಲ್ಲೇಖಗಳು ನೀರಾವರಿ ಅಧಿಕ್ಯವನ್ನು ಸೂಚಿಸುತ್ತದೆ. ಕ್ರಿ.ಶ. 1561ರ

ಸದಾಶಿವರಾಯನ ಕಾಲದ ಶಾಸನದಲ್ಲಿ[16] ಕಂಪಿಲೆ ಮಾಗಣಿಗೆ ಸಲುವ ರಾಮಸಾಗರದಲ್ಲಿ ಸಮರ್ಪಿಸಿದ ಗದ್ದೆ, ತೋಟಗಳ ಉಲ್ಲೇಖವಿದೆ. ಕ್ರಿ.ಶ. 1564ರ ಶಾಸನದಲ್ಲಿ[17] ಕಂಪಿಲೆಯ ಮಾಗಣೆವೊಳಗಣ ರಾಮಸಾಗರದಲ್ಲಿ ಎರಡು ಬೆಳೆ ಬೆಳೆಯುವ ಗದ್ದೆಯ ಉಲ್ಲೇಖ ಬಂದಿದೆ.

ಹೀಗೆ ಹಂಪಿ ಪರಿಸರದ ಇತರ ಮಾಗಾಣಿಗಳಾದ ಕಳಾಸಪುರದ ಮಾಗಣೆಗೆ ಸೇರಿದ ಹರಿಯಸಮುದ್ರ, ವೊಳಕೋಟೆ, ರೇವತಾಪುರ ಗ್ರಾಮಗಳು ಹಾಗು ಹುಲಿಗೆಯ ಮಾಗಾಣಿಗೆ ಸೇರಿದ ಅತ್ತಿವಟ್ಟಿ ಮತ್ತು ಹರಿಹರಪುರ ಮುಂತಾದ ಗ್ರಾಮಗಳಲ್ಲಿನ ಶಾಸನಗಳಲ್ಲಿ[18] ದಾನಗದ್ದೆ ಮೊದಲಾದ ನೀರಾವರಿ ಸೌಕರ್ಯವುಳ್ಳ ಪ್ರದೇಶಗಳೇ ಉಲ್ಲೇಖವಾಗಿವೆ. ಕ್ರಿ.ಶ. 1515ರ ಶಾಸನೋಕ್ತ[19] ತಿರುಮಲದೇವಿಯರಪಟ್ಟಣದ ಮಾಗಣಿ ಎಂಬುದು ಇಂದಿನ ಕಮಲಾಪುರದ ತಿರುಮಲದೇವಿಯ ಗುಡಿಯ ಸುತ್ತಲಿನ ಪ್ರದೇಶವೇ ಆಗಿದೆ. ಇದರಲ್ಲಿ ರಾಮಾಪುರ, ಸೋಲೂರು, ತಿಮ್ಮಾಪುರ ಮತ್ತು ತೊಗಲುಗಲ್ಲ ಗ್ರಾಮಗಳು ಅಂತರ್ಗತವಾಗಿದ್ದವೆಂದು ಅಭಿಪ್ರಾಯವಿದೆ.

ಅಚ್ಯುತರಾಯನ ಆಳ್ವಿಕೆಯ, ಮಂಡ್ಯ ಜಿಲ್ಲೆ ದೇವರಹಳ್ಳಿ ಗ್ರಾಮದ ಕ್ರಿ.ಶ. 1537ರ ಶಾಸನವು[20] ಪುರದ ಮಾಗಾಣಿಗೆ ಸೇರಿದ ದೇವಲಾಪುರದ ಸ್ಥಳದಲ್ಲಿನ ಅಮ್ಮನಪುರದ ತೆರಿಗೆಗಳಿಂದ ಬರುವ ಆದಾಯವನ್ನು ವೆಂಕಟಾದ್ರಿನಾಯಕರಿಗೆ ದತ್ತಿ ಬಿಟ್ಟಿರುವ ಸಂಗತಿಯನ್ನು ತಿಳಿಸುತ್ತದೆ.

ಕ್ರಿ.ಶ. 1554ರ ಮಧುಗಿರಿ ತಾಲೂಕು ಜೋಡಿಯಂಗಮ್ಮನಹಳ್ಳಿ ಶಾಸನವು[21] ಪೆನುಗೊಂಡೆದುರ್ಗದ ಮಾಲುಕಿನಾಡಿನ ತೆರೆಯೂರು ಮಾಗಾಣಿಗೆ ಸಲ್ಲುವ ಚನ್ನವಾರಂ ಮತ್ತು ವೆಂಗಳಾಪುರಂ ಎಂಬ ಎರಡು ಗ್ರಾಮಗಳನ್ನು ಪೆನುಗೊಂಡೆಯ ವಸಂತವಲ್ಲಭ ದೇವರಿಗೆ ದತ್ತಿ ಬಿಟ್ಟ ವಿವರಗಳು ದಾಖಲಿಸಿದೆ.

ಪುಲಿಯೇರು ಮಾಗಾಣಿಯನ್ನು ಉಲ್ಲೇಖಿಸುವ ಕ್ರಿ.ಶ. 1554ರ ಸದಾಶಿವರಾಯನ ಶಾಸನ[22] ಹಂಪಿಯ ವಿಠ್ಠಲ ದೇವಾಲಯದಲ್ಲಿದ್ದು, ಗುತ್ತಿಯ ಸೀಮೆಯ ಪುಲಿಯೇರು ಮಾಗಣೆಗೆ ಸಲುವ ಕೊಂಡಕುಂದಿಯ ಉಪಗ್ರಾಮ ತಿರುಮಲಾಪುರ ಗ್ರಾಮವನ್ನು ಉದಯಗಿರಿ ತಿಮ್ಮರಾಜಯ್ಯ ಮಹಾ ಅರಸು ಅವರು, ಆ ಗ್ರಾಮದ 600 ವರಹ ಗದ್ಯಾಣ ಕಂದಾಯವನ್ನು ವಿಠ್ಠಲಸ್ವಾಮಿಯ ಪ್ರಥಮ ಏಕಾದಶಿ ಮತ್ತು ದ್ವಾದಶಿ ಪರ್ವಗಳ ಆಚರಣೆಗಾಗಿ ದತ್ತಿ ಬಿಟ್ಟಿರುವ ವಿವರ ನೀಡುತ್ತದೆ. ಕ್ರಿ.ಶ. 1558ರ ಸದಾಶಿವರಾಯನ ಕಾಲದ ಗುತ್ತಿ ತಾಲೂಕು ಗುಂತಕಲ್ ಗ್ರಾಮದ ಶಾಸನ[23] ಜಗತಾಪಿ ಗುತ್ತಿಸೀಮೆಯ ಪೊಳೆತಿ ಮಾಗಾನಿಯ ಭೂಮಿಯನ್ನು ಗುಂತಕಲ್ಲಿನ ಮಹಾಜನರು ಗುಂತಕಲ್‌ನ ಭೋಗೇಶ್ವರ, ಕೇಶವ ಮತ್ತು ವೀರೇಶ್ವರ ದೇವರುಗಳಿಗೆ ತ್ಯಾಗವರ್ತ್ತನ ದಾನವೆಂದು ನೀಡಿರುವುದನ್ನು ದಾಖಲಿಸಿದೆ.

ಕ್ರಿ.ಶ. 1541, ಅಚ್ಯುತರಾಯನ ಅಳ್ವಿಕೆಯ ಶಾಸನವು[24] ಪೆನುಗೊಂಡೆ ತಾಲೂಕು ಬುಕ್ಕಪಟ್ಟಣದಲ್ಲಿದ್ದು, ರಾಜನಿಗೆ ಶ್ರೇಯಸ್ಸನ್ನು ಬಯಸಿ, ರಾಮಾಭಟ್ಟಯ್ಯನ ಅಪ್ಪಣೆಯ ಮೇರೆಗೆ ಪೆದಿರಾಜಯ್ಯನು ಕೊತ್ತಚೆರುವು ಮಾಗಾಣಿಗೆ ಸೇರಿದ ರಾಜಲುಗುತ್ತಿಯನ್ನು ಅಲ್ಲಿನ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯದ ಪೂಜಾ ಕೈಂಕರ್ಯಗಳಿಗೆ ದತ್ತಿ ಬಿಟ್ಟ ವಿವರ ನೀಡುತ್ತದೆ.

ಸದಾಶಿವರಾಯನ ಆಳ್ವಿಕೆಯ ಕ್ರಿ.ಶ. 1554ರ ತಾಡಪತ್ರಿ ತಾಲೂಕಿನ ಬೇತಪಲ್ಲಿ ಗ್ರಾಮದ ತೃಟಿತ ಶಾಸನ[25] ಜಗತಾಪಿ ಗುತ್ತಿಸೀಮೆಯ ಪಲ್ಲೇಟ ಮಾಗನೆಗೆ ಸಲ್ಲುವ ಬೇತಪಲ್ಲಿ ಗ್ರಾಮದಿಂದ 24 ದೊಂಬರ ಕುಟುಂಬಗಳಿಗೆ ಸಲ್ಲುವ ಮೂರು ವರಹಗಳನ್ನು ತಮ್ಮ ಶ್ರೇಯೋಭಿವೃದ್ಧಿಗಾಗಿ ಆ ಊರಿನ ತಿರುಮಲದೇವರಿಗೆ ದತ್ತಿ ಬಿಟ್ಟ ವಿವರವನ್ನೊಳಗೊಂಡಿದೆ.

ಜೆಂತಗಲ ಮಾಗಣೆಯನ್ನು ಕ್ರಿ.ಶ. 1513ರ ವಿಠಲದೇವರ ದೇವಾಲಯದ ಶಾಸನದಲ್ಲಿ[26] ಉಲ್ಲೇಖಿಸಿದ್ದು ಮುಷ್ಠೂರು ಗ್ರಾಮ ಮತ್ತು ಕುಂಟಜೀಯ ಗ್ರಾಮಗಳು ಆ ಮಾಗಾಣಿಗೆ ಸೇರಿದ್ದವೆಂದು ಹೇಳಿದೆ.

ಕ್ರಿ.ಶ. 1593ರ ಮುಮ್ಮಡಿ ಶ್ರೀರಂಗರಾಯನ ಕಾಲದ ಚಿತ್ರದುರ್ಗ ಜಿಲ್ಲೆ ಕಡಲೆಗುದ್ದು ಗ್ರಾಮದ ಶಾಸನದಲ್ಲಿ[27] ಮಹಾನಾಯಕಾಚಾರ್ಯ ಇಮ್ಮಡಿ ಮದಕರಿನಾಯಕನು ಚಿತ್ರಹಳ್ಳಿ ಸೀಮೆಯ ಹಿರೇಗುಂಟೂರು ಮಾಗಣಗೆ ಸಲುವ ಕಡಲೆಗುದ್ದು ಗ್ರಾಮವನ್ನು ಅಗ್ರಹಾರವನ್ನಾಗಿಸಿ ರಾಮ ಒಡೆಯನಿಗೆ ಏಕಭೋಗವಾಗಿ ಸರ್ವಬಾಧಾ ಪರಿಹಾರವಾಗಿ ದತ್ತಿ ಬಿಟ್ಟ ವಿವರ ಬಂದಿದೆ. ಇದೇ ತಾಲೂಕು ಕ್ಯಾಸಾಪುರದ ಕ್ರಿ.ಶ. 1574ರ ಶಾಸನದಲ್ಲಿ[28] ಇಮ್ಮಡಿ ಮದಕೆರಿನಾಯಕರು ಹಗಲು

ಕಗ್ಗೊಲೆಯ ಮಾಂನ್ಯವಾಗಿ ಚಿತ್ರಹಳ್ಳಿಸೀಮೆಯ ಹಿರೇಕುಂಟನೂರ ಮಾಗಾಣಿಗೆ ಸಲುವ ಕಡಲೆಗುದ್ದು ಗ್ರಾಮವನ್ನು ಪುಟ್ಟಣ್ಣನ ಮಗ ತಿಮ್ಮಪ್ಪನಿಗೆ ದತ್ತಿ ಬಿಟ್ಟ ವಿವರ ಬಂದಿದೆ.

ಅನಂತಪುರ ಜಿಲ್ಲೆ ಧರ್ಮಾವರಂ ತಾಲೂಕು ಪ್ರದೇಶದಲ್ಲಿ ಅಂತರ್ಗತವಾಗಿದ್ದ ಗುತ್ತಿರಾಜ್ಯದ ಭಾಗವೇ ಚೀರಮಾಗಣಿ. ಕ್ರಿ.ಶ. 1529ರ ಧರ್ಮಾವರಂ ತಾಲೂಕು ಮರವಪಲ್ಲಿ ಅಗ್ರಹಾರದ ಶಾಸನದಲ್ಲಿ[29] ಗುತ್ತಿರಾಜ್ಯದ ಚೀರಮಾಗಣಿಯ ಬುಕ್ಕರಾಯಪುರಂನ ಅಪ್ಪರಾಶ್ವೆರುವಿನ ತಿರುವೆಂಗಳನಾಥ ದೇವರಿಗೆ ದಶಮಿ, ಏಕಾದಶೀ ಮುಂತಾದ ಪರ್ವ ಕಾಲದ ಪೂಜಾ ಕೈಂಕರ್ಯಗಳಿಗಾಗಿ ತಂಗಟೂರಿನ ಕೂತಾರಿ ತಿರುಮಲನಾಥನ ಮಗ ದೊಂಬರ ಕೇಶವನಾಥ, ಮಾಚಿರಾಜು ಮೊದಲಾದವರು ತೆರಿಗೆಗಳನ್ನು ದತ್ತಿ ಬಿಟ್ಟಿರುತ್ತಾರೆ. ಕ್ರಿ.ಶ. 1559–60ರ ಕನಿಯಂಪಲ್ಲೆ ಗ್ರಾಮದ ಶಾಸನ[30] ತ್ರುಟಿತವಿದ್ದು, ಅನೇಕ ವಿದ್ವಾಂಸ ಬ್ರಾಹ್ಮಣರಿಗೆ ಗುತ್ತಿ ರಾಜ್ಯದ ಚೀರಮಾಗಣಿಗೆ ಸಲುವ ಸಂಗಾಲ > ವಿಜಯಭೂಪತಿಪುರಂನ ಭೂಮಿಯನ್ನು ದತ್ತಿ ನೀಡಿರುವ ಸಂಗತಿ ತಿಳಿಸುತ್ತದೆ. ಕ್ರಿ.ಶ. 1559–60ರ ಇನ್ನೊಂದು ಸಂಗಾಲ ಗ್ರಾಮದ ಶಾಸನವೂ[31] ವಿಪ್ರವಿನೋದಿಗಳು ಸಂಗಾಲ > ವಿಜಯಭೂಪತಿಪುರಂನ ವಿದ್ವಾನ್ ಮಹಾಜನರಿಗೆ ಗುತ್ತಿರಾಜ್ಯದ ಚೀರಮಾಗಣಿಯ ಸಂಗಾಲ > ವಿಜಯಭೂಪತಿಪುರಂನ ಭೂಮಿಯನ್ನು ದತ್ತಿ ಬಿಟ್ಟ ವಿವರವನ್ನೇ ನೀಡುತ್ತದೆ. ಕ್ರಿ.ಶ. 1629ರ ಧರ್ಮಾವರಂ ತಾಲೂಕು ಚಿನ್ನಕೋಟ್ಲ ಗ್ರಾಮದ ಶಾಸನವು[32] ಅರವೀಡು ರಾಮದೇವನು ವೆಲ್ಲೂರಿನಿಂದ ರಾಜ್ಯವಾಳುತ್ತಿರುವಾಗ ಕೆರೆಯೊಂದನ್ನು ಕಟ್ಟಿಸಿದ್ದಕ್ಕೆ ಗುತ್ತಿ ರಾಜ್ಯಕ್ಕೆ ಸೇರಿದ ಚೀರಮಾಗಾಣಿಯ ಗ್ರಾಮವೊಂದರ ಭೂಮಿಯನ್ನು ಅಮರವಾಗಿ ದತ್ತಿ ನೀಡಿದ ಸಂಗತಿಯನ್ನು ದಾಖಲಿಸಿದೆ.

ತಿರುಮಲೆ ಸ್ಥಳದ ವಿಜಯನಗರ ಕಾಲದ ಶಾಸನಗಳಲ್ಲಿ[33] ತೆರ್ಕುಮಾಗಣ್ಯೆಯ ಉಲ್ಲೇಖಗಳು ಬಂದಿವೆ. ಕ್ರಿ.ಶ. 1583ರ ಶ್ರೀರಂಗರಾಯನ ಕಾಲದ ಶಾಸನದಲ್ಲಿ ತೆರ್ಕುಮಾಗಾಣಿಗೆ ಸೇರಿದ ಪಾಲವೆಟ್ಟು ಶಿರ್ಮೆಯ ಅಯ್ಯಂಬಾಕ್ಕಂ, ಪಿಚಾಳ್ಳೂರ್, ಪುಲಿವಾಯ್ ಗ್ರಾಮಗಳ ಉಲ್ಲೇಖ ಬಂದಿದೆ. ಕ್ರಿ.ಶ. 1592ರ ಇನ್ನೊಂದು ಶಾಸನದಲ್ಲಿ ಮೊದಲ ವೆಂಕಟಪತಿರಾಯನ ಶಾಸನದಲ್ಲಿ ತೆರ್ಕುಮಾಗಣಿಯ ಉಲ್ಲೇಖ ಬಂದಿದೆ. ಆ ಮಾಗಣೆಯಲ್ಲಿ ಪಾಳೈಶಿರ್ಮೆಯ ಅಗರಂ ಪೂಂದಮಲ್ಲಿ ಗ್ರಾಮದ ಉಲ್ಲೇಖ ಬಂದಿದೆ.

ಈ ಮೇಲೆ ಉಲ್ಲೇಖಿಸಲಾಗಿರುವ ಬಹುತೇಕ ಮಾಗಾಣಿ ಸೂಚಕ ಘಟಕಗಳು ನೀರಾವರಿಗೆ ಒಳಪಟ್ಟ ಅಥವಾ ಸಂಬಂಧಿಸಿದ ಭೂಮಿಕಾಣಿಗಳೇ ಆಗಿದ್ದವೆಂದು ದೃಢವಾಗಿ ಹೇಳಬಹುದು. ಹಾಗಾಗಿ ವಿಜಯನಗರ ಆಡಳಿತದಲ್ಲಿ ನೀರಾವರಿ ಬಾಹುಳ್ಯವುಳ್ಳ ಪ್ರದೇಶ ಸೂಚಕ ಘಟಕವಾಗಿ ಮಾಗಾಣಿ ಎಂಬುದು ಅಸ್ತಿತ್ವದಲ್ಲಿತ್ತೆಂದು ಪರಿಭವಿಸಿದರೆ ತಪ್ಪಾಗಲಾರದೆಂದು ತೋರುತ್ತದೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

1. ಅ) ಪಿ.ವಿ. ಕೃಷ್ಣಮೂರ್ತಿ, ವಿಜಯನಗರ ಸಾಮ್ರಾಜ್ಯದ ಆಡಳಿತ ಘಟಕಗಳಲ್ಲಿ 'ವಳಿತ'ದ ಸ್ಥಾನ – ಒಂದು ಪರಿಶೀಲನೆ, ವಿಜಯನಗರ ಅಧ್ಯಯನ, ಸಂ. 13, ಮೈಸೂರು, 2008, ಪು. 135–144.
   ಆ) ಪಿ.ವಿ. ಕೃಷ್ಣಮೂರ್ತಿ, ವಿಜಯನಗರ ಸಾಮ್ರಾಜ್ಯದ ಶಾಸನಗಳಲ್ಲಿ 'ಚಾವಡಿ' – ಒಂದು ಪರಿಶೀಲನೆ, ವಿಜಯನಗರ ಅಧ್ಯಯನ, ಸಂ. 14, ಮೈಸೂರು, 2010, ಪು. 119–124.
   ಇ) ಪಿ.ವಿ. ಕೃಷ್ಣಮೂರ್ತಿ, ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ 'ವೇಂಠೆ' – ಒಂದು ವಿವೇಚನೆ, ವಿಜಯನಗರ ಅಧ್ಯಯನ, ಸಂ. 16, ಮೈಸೂರು, 2014, ಪು. 142–146.
2. *ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು*, ಸಂ. 7, ಬೆಂಗಳೂರು, 1993, ಪು. 7041.
3. Kunduri Iswara Datt., *Inscriptional Glossary of Andhra Pradesh,* Hyderabad, 1967, p. 232.
4. *ಅದೇ.*
5. *The Lifco Tamil Tamil - English Dictionary,* Chennai, 2002, p. 545.
6. *ಎಪಿಗ್ರಾಫಿಯಾ ಕರ್ನಾಟಿಕ* ಸಂ. 8, ಹಾಸನ 167, (ಪರಿಷ್ಕೃತ).
7. *ಎಪಿಗ್ರಾಫಿಯಾ ಕರ್ನಾಟಿಕ,* ಸಂ. 12, ತರೀಕೆರೆ 3, (ಪರಿಷ್ಕೃತ).

8. ಎಪಿಗ್ರಾಫಿಯಾ ಕರ್ನಾಟಿಕ, ಸಂ. XI, ಚಿತ್ರದುರ್ಗ 121, (ರೈಸ್ ಆವೃತ್ತಿ).
9. ಅ) ಎಪಿಗ್ರಾಫಿಯಾ ಕರ್ನಾಟಿಕ, ಸಂ. X, ಮುಳಬಾಗಲು 158, (ರೈಸ್ ಆವೃತ್ತಿ).
   ಆ) ಎಪಿಗ್ರಾಫಿಯಾ ಕರ್ನಾಟಿಕ, ಸಂ. X, ಗೌರಿಬಿದನೂರು 46, (ರೈಸ್ ಆವೃತ್ತಿ).
10. *South Indian Inscriptions,* Vol. VI, No. 798.
11. *South Indian Inscriptions,* Vol. VI, No. 802.
12. *Epigraphia Indica,* Vol. I, p. 40.
13. ಎಪಿಗ್ರಾಫಿಯಾ ಕರ್ನಾಟಿಕ, ಸಂ. 6, ಶ್ರೀರಂಗಪಟ್ಟಣ 25, (ಪರಿಷ್ಕೃತ).
14. .... p. 490.
15. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3, ಹಂಪಿ, ಶಾ.ಸಂ. 73
16. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3, ಹಂಪಿ, ಶಾ.ಸಂ. 183.
17. B.R. Gopal., *Vijayanagara Inscriptions,* Vol. I, No. KN 363, Mysore, 1985.
18. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–2, ಕೊಪ್ಪಳ, ಶಾ.ಸಂ 161.
19. ಅದೇ.
20. ಎಪಿಗ್ರಾಫಿಯಾ ಕರ್ನಾಟಿಕ, ಸಂ. 7, ನಾಗಮಂಗಲ 142, (ಪರಿಷ್ಕೃತ).
21. ಎಪಿಗ್ರಾಫಿಯಾ ಕರ್ನಾಟಿಕ, ಸಂ. XII, ಮಧುಗಿರಿ 78, (ರೈಸ್ ಆವೃತ್ತಿ).
22. B.R. Gopal.,(Ed.) *Vijayanagara Inscriptions,* Vol. I, No. KN 356, Mysore, 1985.
23. B.R. Gopal.,(Ed.) *Vijayanagara Inscriptions,* Vol. IV, No. AP 118, Mysore, 1996.
24. B.R. Gopal.,(Ed.) *Vijayanagara Inscriptions,* Vol. IV, No. AP 314, Mysore, 1996.
25. B.R. Gopal.,(Ed.) *Vijayanagara Inscriptions,* Vol. IV, No. AP 98, Mysore, 1996.
26. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3, ಹಂಪಿ, ಶಾ.ಸಂ 208.
27. B.R. Gopal.,(Ed.) *Vijayanagara Inscriptions,* Vol. II, No. KN 551, Mysore, 1985.
28. B.R. Gopal.,(Ed.) *Vijayanagara Inscriptions,* Vol. II, No. KN 553, Mysore, 1985.
29. B.R. Gopal.,(Ed.) *Vijayanagara Inscriptions,* Vol. IV, No. AP 78, Mysore, 1996.
30. *South Indian Inscriptions,* Vol. XVI, No. 243.
31. *Annual Report on Indian Epigraphy*, 1928, p. 295.
32. B.R. Gopal.,(Ed.) *Vijayanagara Inscriptions,* Vol. IV, No. AP 53, Mysore, 1996.
33. (i) B.R. Gopal.,(Ed.) *Vijayanagara Inscriptions,* Vol. IV, No. AP 818, Mysore, 1996.
    (ii) B.R. Gopal.,(Ed.) *Vijayanagara Inscriptions,* Vol. IV, No. AP 954, Mysore, 1996.

ಆಧಾರ ಸೂಚಿ

1. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟಗಳು 6, 7, 8, 12, (ಪರಿಷ್ಕೃತ).
2. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟಗಳು 10, 11, 12 (ರೈಸ್ ಆವೃತ್ತಿ).
3. ಎಪಿಗ್ರಾಫಿಯಾ ಇಂಡಿಕಾ ಸಂಪುಟಗಳು.
4. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು.
5. *Epigraphia Indica,* vols.
6. *South Indian Inscriptions,* vols.
7. *Annual Reports on Indian Epigraphy*
8. B.R. Gopal.,(Ed.) *Vijayanagara Inscriptions,* Vol. IV, Mysore, 1996.
9. *Inscriptions of Vijyanagar Rulers,* Vol. I, II, III, IV and V, part 1, ICHR, New Delhi, 2014.
10. Noboru Karashima., *A Concordance of Nayakas The Vijyanagar Inscriptions in South India,* New Delhi, 2002.

03. ವಿಜಯನಗರ ಕಾಲದ ನಂಜನಗೂಡು ಪ್ರದೇಶದ ಶಾಸನಗಳಲ್ಲಿ ದಾನದತ್ತಿಗಳು

ಡಾ.ಎಸ್. ಶಿವರಾಮು

ನಂಜನಗೂಡು ಐತಿಹಾಸಿಕ, ಸಾಂಸ್ಕೃತಿಕ ಮಹತ್ವ ಪಡೆದ ತಾಲ್ಲೂಕುಗಳಲ್ಲಿ ಒಂದು. ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾದ ನಂಜನಗೂಡು ತಾಲ್ಲೂಕು ಭೌಗೋಳಿಕವಾಗಿ ಜಿಲ್ಲೆಯಲ್ಲಿ ಎರಡನೆಯ ಸ್ಥಾನದಲ್ಲಿದ್ದು, ಜನಸಂಖ್ಯಾ ದೃಷ್ಟಿಯಿಂದಲೂ ಎರಡನೆಯ ಸ್ಥಾನ ಪಡೆದಿದ್ದು, ಧಾರ್ಮಿಕ ಮಹತ್ವದ ಶ್ರೀನಂಜುಂಡೇಶ್ವರನನ್ನು ತಾಲ್ಲೂಕು ಕೇಂದ್ರ ನಂಜನಗೂಡು ಪಟ್ಟಣದ ಅಧಿದೈವವನ್ನಾಗಿ ಹೊಂದಿದೆ.

ವಿಜಯನಗರ ಕಾಲದಲ್ಲಿ ನಂಜನಗೂಡು ಪ್ರದೇಶವು ಪ್ರಮುಖವಾದ ಆಡಳಿತ ಕೇಂದ್ರವಾಗಿದ್ದು, ಈ ಪ್ರದೇಶಕ್ಕೆ ಸೀಮಿತಗೊಂಡಂತೆ ಲಭ್ಯವಿರುವ ವಿಜಯನಗರಕಾಲದ ಶಾಸನಗಳಲ್ಲಿ ದಾನದತ್ತಿಗಳನ್ನು ಕುರಿತು ಅಧ್ಯಯನ ಮಾಡಿರುವುದು ಈ ಸಂಶೋಧನಾ ಪ್ರಬಂಧದ ಉದ್ದೇಶವಾಗಿದೆ. ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳನ್ನು ಅವಲೋಕಿಸಿದಾಗ ವಿಜಯನಗರದ ಸಾಮ್ರಾಟರು, ಆಡಳಿತಾಧಿಕಾರಿಗಳು, ವರ್ತಕರು, ಶ್ರೀಸಾಮಾನ್ಯರು ಹಾಗೂ ಇನ್ನಿತರರು ದಾನದತ್ತಿಗಳನ್ನು ನೀಡಿರುವುದು ಕಂಡುಬರುತ್ತದೆ.

ನಂಜನಗೂಡು ಪ್ರದೇಶದಲ್ಲಿ ವಿಜಯನಗರ ಕಾಲದ ಮೊದಲ ಉಲ್ಲೇಖಿತ ಶಾಸನವು ಹರಿಹರನ ಸೋದರ ಬುಕ್ಕರಾಯನ ಕಾಲದಾಗಿದ್ದು, ಈತನ ಆಳ್ವಿಕೆಯಲ್ಲಿ ನಂಜನಗೂಡು ಪ್ರದೇಶವು ಸೇರಿದಂತೆ ಸಾಮ್ರಾಜ್ಯದ ದಕ್ಷಿಣ ಭಾಗಕ್ಕೆ ವೀರಕಂಪಣ್ಣನಾಯಕನು ರಾಜಪ್ರತಿನಿಧಿಯಾಗಿದ್ದುದನ್ನು ಕ್ರಿ.ಶ. 1368ರ ತಗಡೂರು ಶಾಸನ ತಿಳಿಸುತ್ತದೆ.[1] ಇದೇ ಗ್ರಾಮದ ಕ್ರಿ.ಶ. 1368ರ ಬುಕ್ಕನ ಶಾಸನವು ಚಿಕ್ಕಕೆಂಪಣ್ಣವೊಡೆಯ ಅಧಿಕಾರದಲ್ಲಿದ್ದಾಗ ತಗಡೂರಿನ ಅರಸುನಾಡಿನಗೌಡ ಪ್ರಭುಗಳೆನಿಸಿದ ಕೊವರು ಕೊಂಮೆಯರು ಮೂಲಸ್ಥಾನೇಶ್ವರ ದೇವರ ನಂದಾದೀಪಕ್ಕೆ ಪರಿಚಾರಕ, ಪೂವಾಡಿಗನ ಜೀವಿತಕ್ಕೆ ತಂಮಡಿಗಳು (ಅರ್ಚಕರು) ತೆರುವ ದೇವದಾನದೊಳಗೆ ಗದ್ಯಾಣ 20ನ್ನು ದೇವರಿಗೆ ಧಾರೆಯೆರೆದುಕೊಟ್ಟರು, ಈ ಗದ್ಯಾಣ 20 ಹೊನ್ನಿಗೆ ಪ್ರತಿಯಾಗಿ ಗದ್ಯಾಣ 20ನ್ನು ಅರಮನೆಗೆ ಆ ತಗಡೂರು ನಾಡುಕೊಡಿ ವರುಷಂಪ್ರತಿ ತಪ್ಪದೆ ತೆರುತ್ತೇವೆಂದು ವೊಡಂಬಟ್ಟು ಅಧಿಕಾರಿ ರಾಯಸಂ ಅವರ ಮುಂದಿಟ್ಟು ಬರೆಸಿದ ಶಿಲಾಶಾಸನ ಎಂದು ಹೇಳಲಾಗಿದೆ. ಇದರಿಂದ ದೇವಾಲಯದಿಂದ ಬರುವ ಆದಾಯಕ್ಕೆ ಧಕ್ಕೆ ಬರದಂತೆ ಕ್ರಮಕೈಗೊಳ್ಳಬೇಕಾಗಿತ್ತು ಎಂಬ ಅಂಶ ದೃಢಪಡುತ್ತದೆ.[2] ನಂತರ ದೊಡ್ಡಕವಲಂದೆ ಮಸೀದಿಯ ಹಿಂಭಾಗದಲ್ಲಿನ ಕ್ರಿ.ಶ. 1356ರ ಶಾಸನ ಪರಮಮಹಾಪಾಸ್ವತ ವ್ರತಾಚಾರ್ಯರಪ್ಪ ಆಕಾಶವಾಸಿ ಸಾಂಕ್ಯಾದಿಗುರು ಅಯ್ಯನವರ ಮನೆಯವರಿಗೆ ವೀರಕೆಂಪಣ್ಣವೊಡೆಯರ ಕುಮಾರ ನಂಜಣ್ಣವೊಡೆಯರು ಕೊಟ್ಟ ಅಗ್ರಹಾರದ ವ್ರಿತ್ತಿ ಸರ್ವಮಾನ್ಯ ಎಂದು ಶಾಸನವು ಸ್ಪಷ್ಟಪಡಿಸುತ್ತದೆ.[3] ಮೊದಲನೇ ಬುಕ್ಕನು 1377ರಲ್ಲಿ ಮರಣ ಹೊಂದಿದನೆಂಬುದನ್ನು ತಜ್ಞರು ಅಭಿಪ್ರಾಯಿಸಿದ್ದಾರೆ. ಆದರೆ ಜಾಲಹಳ್ಳಿ ವೀರಗಲ್ಲು ಶಾಸನ 1378ರಲ್ಲಿ ಶ್ರೀವೀರಭೂಪತಿ ಬುಕ್ಕಂಣವೊಡೆಯರು ರಾಜ್ಯಂಗೆಯುತ್ತಿರ್ದ ವಿಷಯವನ್ನು ತಿಳಿಸುತ್ತದೆ.[4] ಇಮ್ಮಡಿ ಹರಿಹರನ ಕಾಲದಲ್ಲಿ ನಂಜನಗೂಡು ಪ್ರದೇಶದ ರಾಜಪ್ರತಿನಿಧಿಯಾದ ಲಕ್ಕಣ್ಣನು 1399ರಲ್ಲಿ ಹರಿಹರ ರಾಜನ ಧರ್ಮವಾಗಿ ನಂಜುಂಡೇಶ್ವರನಿಗೆ ನಿತ್ಯದೀಪಕ್ಕಾಗಿ ದಾನ ನೀಡಿರುವುದನ್ನು ಬ್ಯಾಳಾರು ಶಾಸನ ದಾಖಲಿಸಿದ್ದು, ನಂಜುಂಡೇಶ್ವರನ ಹೆಸರನ್ನು ಉಲ್ಲೇಖಿಸಿರುವ ಮೊದಲ ಅಧಿಕೃತ ಶಾಸನವೂ ಇದಾಗಿದೆ.[5] ಮೊದಲನೇ ದೇವರಾಯನ ಹೆಸರನ್ನು 1415ರ ದಾಸನೂರು ಶಾಸನವು ಪ್ರಸ್ತಾಪಿಸುತ್ತದೆ.

ವಿಜಯನಗರದ ಶ್ರೇಷ್ಠ ರಾಜರಲ್ಲೊಬ್ಬನಾದ ಇಮ್ಮಡಿದೇವರಾಯನ ಉಲ್ಲೇಖ ದೊಡ್ಡಕವಲಂದೆ ಶಾಸನದಲ್ಲಿದೆ. ಗ್ರಾಮದ ಮಾರಿಚಾವಡಿ ಬಳಿ ತೂಬಿನ ಕಲ್ಲಿನ ಮೇಲಿರುವ ಶಾಸನವು ಶಕವರ್ಷ 1357ನೇ .....ಎಂಬ ಕಾಲದ ಉಲ್ಲೇಖ ಮಾತ್ರವಿರುವ ಈ ಶಾಸನ ಕ್ರಿ.ಶ. 1437ಕ್ಕೆ ಸೇರಿದ್ದೆಂದು ನಿರ್ಧರಿಸಬಹುದು. ಹಿರಿಯ ಕವಲಂದೆಯ ಆಕಾಶವಾಸಿಗಳ ಸ್ವರೂಪದ ಚಂದ್ರಮೌಳಿ ಒಡೆಯರ ಶಿಷ್ಯರಾದ ಹುರಾಳಿಯ ಕರಿಮೆಚಿಗೆಯ ಚಿಟುಭಕನ ಮಗನಾದ ಮಲ್ಲಯ್ಯನು ಏನನ್ನೋ ದಾನ ನೀಡಿದಂತೆ ತೋರುತ್ತದೆ. ಇತರೆ ಯಾವ ವಿವರವೂ ಇಲ್ಲ.[6] ವಿಜಯನಗರ ಕಾಲದಲ್ಲಿ ತಗಡೂರು ಸೀಮೆ ಹೊಯ್ಸಳ ರಾಜ್ಯಕ್ಕೆ ಸೇರಿತ್ತೆಂದು ಉಮ್ಮತ್ತೂರಿನ ಪಾಳೆಯಗಾರರು ಇದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದರೆಂದು ಕ್ರಿ.ಶ. 1467ರ ಶಾಸನ ತಿಳಿಸುತ್ತದೆ. ಈ ಶಾಸನದ ಪ್ರಕಾರ ಈ ಸೀಮೆಗೆ ಸೇರಿದ ಮುಳ್ಳೂರು ಗ್ರಾಮದ ತೆರಿಗೆಗಳಾದ ಗದ್ದೆ,

ಬೆದ್ದಲು, ತೋಟ, ತುಡಿಕೆ, ಕರ, ಮನಿಸುಂಕ, ಸುವರ್ಣಾದಾಯ, ಮಗ್ಗದೆರೆ, ಬಿಳವಾರು, ಹೊದನಾರು, ಬಿಸಿಲುಗಾಣಿ, ತಳವಾರ ಮೊದಲಾದ ತೆರಿಗೆಗಳನ್ನು ನಂಜುಂಡೇಶ್ವರನಿಗೆ ದತ್ತಿ ಬಿಡಲಾಗಿತ್ತು.[7]

ನಂಜನಗೂಡು ನಂಜುಂಡೇಶ್ವರ ಗುಡಿ ಬಳಿ ಇರುವ ಶಾಸನವು ಕ್ರಿ.ಶ. 1432ರ ಕಾಲದಾಗಿದ್ದು, ಅಸ್ಪಷ್ಟತೆಯಿಂದ ಕೂಡಿದೆ. ಪರಿಧಾವಿ ಸಂವತ್ಸರದ ಉಲ್ಲೇಖ ಭಾಗ ಮಾತ್ರ ದೊರಕಿರುವ ಶಾಸನವು ಹರಿಯಪ್ಪಒಡೆಯರಿಗೆ ಧರ್ಮವಾಗಬೇಕೆಂದು ಗಣಾಚಾರಿಯಾದ ಹರಿಯಂಣನು ದಾನಬಿಟ್ಟ ಉಲ್ಲೇಖವಿದೆ. ಹೆಚ್ಚಿನ ವಿವರವಿಲ್ಲ.[8] ನಂಜನಗೂಡು ಶಾನುಭೋಗ ಸುಬ್ಬರಾಯರಲ್ಲಿದ್ದ ತಾಮ್ರಶಾಸನ ಕೃಷ್ಣರಾಯನ ತಂದೆ ನರಸಭೂಪನು ಕ್ರಿ.ಶ. 1498ರಲ್ಲಿ ಹಿರಿಯ ಬಿದರೂರು ಗ್ರಾಮವನ್ನು ನರಸಿಂಹಪುರವೆಂಬ ಹೆಸರಿನಲ್ಲಿ ಅಗ್ರಹಾರವನ್ನು ಮಾಡಿ ದಾನ ಕೊಟ್ಟಿರುವುದನ್ನು ಘನಗಿರಿ ರಾಜ್ಯಕ್ಕೆ ಸೇರಿದ ಹೊಸೂರುನಾಡಿನ ಹಿರಿಯ ಬಿದರೂರಿಗೆ, ವಿಜಯನಗರದ ಅರಸ ಕೃಷ್ಣರಾಯನು ಕ್ರಿ.ಶ.1523 ರಲ್ಲಿ ಕೃಷ್ಣರಾಯಪುರವೆಂಬ ಅಗ್ರಹಾರವನ್ನು ಮಾಡಿ ಅನೇಕ ಬ್ರಾಹ್ಮಣರಿಗೆ 12 ವೃತ್ತಿಗಳನ್ನು ಪುನರ್‌ದತ್ತಿಯಾಗಿ ನೀಡಿದ ಉಲ್ಲೇಖವಿದೆ. ತುಳುವ ವಂಶದ ಸ್ಥಾಪಕನಾದ ನರಸನಾಯಕನ ಆಳ್ವಿಕೆಯಲ್ಲಿ ಶಿರಪ್ರಧಾನ ತಿಪ್ಪರಸಯ್ಯ ಮತ್ತು ಉರುಡು ನಾಯಕರು ಅರಿಯೂರ ತಿರುಮಲೆನಾಡ ದೇವರಿಗೆ ಕ್ರಿ.ಶ. 1502ರಲ್ಲಿ ಕೊಟ್ಟ ದಾನವನ್ನು ಅರಿಯೂರು ಶಾಸನವು ತಿಳಿಸುತ್ತದೆ.[9]

ವಿಜಯನಗರದ ಚರಿತ್ರೆಯಲ್ಲಿ ಕೃಷ್ಣದೇವರಾಯನು ಅತ್ಯಂತ ಜನಪ್ರಿಯ ಅರಸನಾಗಿದ್ದಾನೆ. ಅನೇಕರ ದೃಷ್ಟಿಯಲ್ಲಿ ಇಂದಿಗೂ ವಿಜಯನಗರದ ಚರಿತ್ರೆಯೆಂದರೆ ಕೃಷ್ಣದೇವರಾಯನ ಚರಿತ್ರೆಯೆಂಬಂತೆ ಬಿಂಬಿತವಾಗಿದೆ. ನಂಜನಗೂಡು ಪ್ರದೇಶದಲ್ಲಿ ಈತನ ಕಾಲದ ಸುಮಾರು ಹನ್ನೊಂದು ಶಾಸನಗಳು ಲಭ್ಯವಾಗಿವೆ. ನಂಜನಗೂಡು ಪ್ರದೇಶದಲ್ಲಿ ಸಾಳುವ ತಿಮ್ಮರಸವೊಡೆಯರ ಸೋದರ ಸಾಳುವ ಗೋವಿಂದರಾಜ ಒಡೆಯನೂ ರಾಜಪ್ರತಿನಿಧಿಯಾಗಿದ್ದ ಅಂಶ ರಂಗೂಪುರದ 1513ರ ಶಾಸನದಲ್ಲಿ ಉಲ್ಲೇಖಗೊಂಡಿದೆ ಅಲ್ಲದೆ ಈತನು ಉಮ್ಮತ್ತೂರಿನ ತಿರುಮಲದೇವರಿಗೆ ಮತ್ತು ತಿರುಮಕೂಡಲು ಅಗಸ್ತೇಶ್ವರ ದೇವರಿಗೆ ಮೂಗೂರು ಸ್ಥಳದ ಹೊಸಪುರ ಗ್ರಾಮವನ್ನು ದಾನವಾಗಿ ನೀಡಿದನು. ಈ ರೀತಿ ದಾನ ನೀಡುವಂತೆ ಕೃಷ್ಣದೇವರಾಯನ ಆಜ್ಞೆಯಾಗಿತ್ತು.[10] ಸಾಮಾನ್ಯವಾಗಿ ಹೊಸದಾಗಿ ವಶಪಡಿಸಿಕೊಂಡ ಅಥವಾ ಪರಮಾಧಿಕಾರವನ್ನು ಚಲಾಯಿಸಿದಾಗ ತಮ್ಮ ಅಧಿಕಾರದ ಪ್ರಾಧಾನ್ಯತೆಯನ್ನು ವ್ಯಕ್ತಪಡಿಸಲು ಹಾಗೂ ಆ ಪ್ರದೇಶದ ಜನ ಬೆಂಬಲಗಳಿಸಲು ಅವರ ಧಾರ್ಮಿಕ ಆಚರಣೆಗೆ ಬೆಂಬಲ ಪೋಷಣೆ ನೀಡುವುದು ರಾಜ್ಯಾಧಿಕಾರಿದ ಪ್ರತಿಪಾದನೆಯ ಸಂಕೇತವಾಗಿತ್ತು. ಇಷ್ಟೇ ಅಲ್ಲದೇ ಸಾಳುವ ಗೋವಿಂದರಾಜನು ಉಮ್ಮತ್ತೂರಿನ ದೇವಾಲಯಗಳಿಗೆ ಭೂದಾನ ಮಾಡಿ ವಿಜಯನಗರ ಕೇಂದ್ರದ ಅಧಿಕಾರವನ್ನು ಪ್ರಬಲಗೊಳಿಸಿದನು. ಮರಡೀಪುರದ ಅಗ್ರಹಾರಕ್ಕೆ ಶ್ರೀಕೃಷ್ಣದೇವರಾಯನ ಶ್ರೇಯಸ್ಸಿಗೋಸ್ಕರ ಗ್ರಾಮ ದಾನವನ್ನು ಮಾಡಿದನು.

ಮೈಸೂರು ರಾಜ್ಯವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರದ ಅಧೀನವಾಗಿತ್ತು. ಅವನು ಉಮ್ಮತ್ತೂರಿನ ಗಂಗರಾಜನನ್ನು ಸೋಲಿಸಿ, ಶಿವನಸಮುದ್ರದಕೋಟೆಯನ್ನೂ ಶ್ರೀರಂಗಪಟ್ಟಣವನ್ನೂ ವಶಪಡಿಸಿಕೊಂಡನು. 1512ರ ನಂಜನಗೂಡಿನ ಶಾಸನದ ಪ್ರಕಾರ ಕೃಷ್ಣದೇವರಾಯನು ತಲಕಾಡು–ಉಮ್ಮತ್ತೂರುಗಳೆರಡನ್ನೂ ಗೆದ್ದು ಸಾಳುವ ಗೋವಿಂದರಾಜನನ್ನು ಉಮ್ಮತ್ತೂರಿನ ವೈಸರಾಯಿ ಆಗಿ ನೇಮಕ ಮಾಡಿದನು. ಆ ನಂತರ ಎಲ್ಲಾ ಪ್ರದೇಶಗಳೂ ವಿಜಯನಗರ ಸಾಮ್ರಾಜ್ಯದ ಅಧೀನವಾದವು.[11] ನಂಜನಗೂಡು 100ನೇ ತಾಮ್ರಪಟ ಶಾಸನವು ಕೃಷ್ಣದೇವರಾಯನು ಉದಯಗಿರಿಯನ್ನು ಜಯಿಸಿದ ನಂತರ ವಿಜಯೋತ್ಸವದ ಸ್ಮರಣಾರ್ಥವಾಗಿ ನಂಜನಗೂಡಿನ ರಾಘವೇಂದ್ರಸ್ವಾಮಿ ಮಠದ ವೀರಭದ್ರ ಯತಿಗಳಿಗೆ ಬೆಳದೂನೆ ದೇಶದ ಚಿಕ್ಕಕೂಲಿ ಗ್ರಾಮವನ್ನು ದಾನವಾಗಿ ನೀಡಿದನು.[12] ನಂಜನಗೂಡು ನಂಜುಂಡೇಶ್ವರನ ದೇವಸ್ಥಾನದಲ್ಲಿ ನಾರಾಯಣಸ್ವಾಮಿ ಗುಡಿಯಲ್ಲಿರುವ ಕ್ರಿ.ಶ. 1517ರ ಶಾಸನ ಸಾಳುವ ಗಜಸಿಂಹ ಚಿಕ್ಕೋಜಿಯವರ ಕುಮಾರವೀರ ಖಥೆಯ ನಂಜುಂಡೇಶ್ವರನ ಬೆಳಗಿನ ಜಾವದ ಅಭಿಷೇಕ ನೈವೇದ್ಯಕ್ಕೆ ಪಟ್ಟಣದ ಅಷ್ಟಗ್ರಾಮ ಸೀಮೆಯ ಬಳಗುಳದ ಸಂಮತುವೃತ್ತಿಯ ಸೀಮೆಯೊಳಗೆ ಚಂದಗಾಲಕ್ಕೆ ಸಲ್ಲುವಪುರ ಈ ಎರಡು ಗ್ರಾಮಗಳನ್ನು ಅಗ್ರಹಾರವನ್ನಾಗಿ ಮಾಡಿ ಸ್ವಾಮಿ ಸನ್ನಿಧಿಯಲ್ಲಿ ಗ್ರಾಮಕ್ಕೆ ಸಲ್ಲುವ ಸುವರ್ಣಾದಾಯ ಸುಂಕ ಸಹಿತವಾಗಿ ಧಾರೆಯನೆರೆದು ಶಿಲಾಸ್ಥಾಪನೆಯನ್ನು ಮಾಡಿ ಸ್ವಾಮಿಗೆ ಅಭಿಷೇಕ, ಗಂಧಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲವನ್ನು ಮಾಡಿ ಬರುವ ವಿಸಗಳ ವಿರೂಪಾಕ್ಷಭಟ್ಟರು ನಂಜಿನಾಥ ದೇವರುಗಳ ಲಕ್ಷ್ಮಮಣ್ಣ, ದನಿಗೆಲಿಯ ರೇವಣ್ಣನ ಮಕ್ಕಳು ನಂಜುಂಡದೇವ, ಗುರುಮೂರ್ತಿವೊಡೆಯನ ಮಗ ದೇವರಾಯ, ಬೊಯಲಾಪುರದ ಮೆಗಣದ ಮಕ್ಕಳು ಅಭಿಷೇಕ ನೈವೇದ್ಯವನ್ನು ದಿನವೂ ಮಾಡಿ ಆ ಪ್ರಸಾದವನ್ನು ತಾವೇ ಕೊಂಡುಹೋಗುವಂತೆ ಹೇಳಿ ಈ ಪಾರುಪತ್ಯಗಾರಿಕೆಯನ್ನು ಬಳಗುಳದ

ಅಣ್ಣಮರಸ ಹೆಬ್ಬಾರರು ವಿಚಾರಿಸಿಕೊಳ್ಳುವಂತೆಯೂ ಮತ್ತು ಪುತ್ರಪೌತ್ರ ಪಾರಂಪರಿಕವಾಗಿ ಈ ಸೌಲಭ್ಯವನ್ನು ಅನುಭವಿಸುವಂತೆ ಹೇಳಿದೆ.[13]

ಕೃಷ್ಣದೇವರಾಯನ ಕಾಲದ ಇತರ ಅಧಿಕಾರ ವರ್ಗದವರೂ ರಾಜನ ಏಳಿಗೆ ಶ್ರೇಯಸ್ಸಿಗಾಗಿ ಶ್ರೀನಂಜುಂಡೇಶ್ವರ ದೇವರ ಪೂಜೆ, ನೈವೇದ್ಯಕ್ಕಾಗಿ ಗ್ರಾಮಗಳನ್ನು ದಾನ ಮಾಡಿರುವುದು ಶಾಸನಗಳಲ್ಲಿ ಕಂಡುಬರುತ್ತದೆ. ಸೋಮಣ್ಣಪೊಡೆಯನು ತನ್ನ ಆಳ್ವಿಕೆಗೆ ಸೇರಿದ ವೊರಗಿಹಳ್ಳಿಯ 15 ಗದ್ಯಾಣದ ವೃತ್ತಿಯನ್ನು ಕ್ರಿ.ಶ. 1519ರಲ್ಲಿ ನಂಜುಂಡೇಶ್ವರ ದೇವರ ಭಂಡಾರಕ್ಕೆ ನೀಡಿದನು.[14] ಅದೇ ರೀತಿ ಮಲ್ಲರಸರ ಕಾರ್ಯಕರ್ತರಾದ ಸಗಸಹಳ್ಳಿಯ ಗೋಪಣ್ಣವೊಡೆಯನು 1519ರಲ್ಲಿ ದಾನವನ್ನು ನೀಡಿದ ವಿಚಾರವು ಅಸ್ಪಷ್ಟ ಬರಹಗಳಿಂದ ಕೂಡಿದ ಕಪ್ಪುಸೋಗೆ ಶಾಸನವು ತಿಳಿಸುತ್ತದೆ.[15] ನಂಜನಗೂಡು ಅಂಕುಸಯ್ಯನಪುರದ ಶಾಸನವು ಕೃಷ್ಣದೇವರಾಯನ ನಿರೂಪದಿಂದ ಉಮ್ಮತ್ತೂರನ್ನು ಆಳುತ್ತಿದ್ದ ಗೌರವ ನರಸಪ್ಪಯ್ಯನವರು ಉಮ್ಮತ್ತೂರಿನ ರಂಗನಾಥ ದೇವರ ಸೇವೆಗಾಗಿ ಉಮ್ಮತ್ತೂರು ಸ್ಥಳದ ಚಿಕ್ಕ ಹೊಂಮ ಗ್ರಾಮವನ್ನು ರಂಗನಾಥಪುರವೆಂದು ಹೆಸರಿಟ್ಟು ರಾಮಚಂದ್ರ ದೇವನ ಮಗನಾದ ಅಪ್ಪಣದೇವನಿಗೆ ದಾನವಾಗಿ ನೀಡುತ್ತಾನೆ. ಗ್ರಾಮದ ಮಧ್ಯದಲ್ಲಿ ಶಿಲಾಶಾಸನವನ್ನು ನಡೆಸಿ, ಲಿಂಗಮುದ್ರೆಯ ಸಮೇತ ದಾನ ನೀಡಿದ ವಿಷಯವಿದೆ. ಈ ದಾನವನ್ನು ಕಪಿನೀ ಕಾವೇರಿ ಸಂಗಮದ ಶ್ರೀ ಅಗಸ್ತ್ಯಲಿಂಗನಾರಸಿಂಹ ದೇವರ ಸನ್ನಿಧಿಯಲ್ಲಿ ನೀಡಲಾಗಿದೆ.[16] ನಂಜನಗೂಡು ತಾಲ್ಲೂಕಿನ ತಗಡೂರು ಗ್ರಾಮದ 1527ರ ಏಪ್ರಿಲ್ 3ರ ಶನಿವಾರ ಈ ಶಾಸನದಿಂದ ಕೃಷ್ಣದೇವರಾಯನು ನಂಜನಗೂಡಿನ ನಂಜುಂಡೇಶ್ವರ ದೇವರ ಸೇವೆಗಾಗಿ ತಗಡೂರಿಗೆ ಸಲ್ಲುವ ಕಲ್ಕುಂದ ಗ್ರಾಮವನ್ನು ದಾನ ನೀಡಿದಂತೆ ತಿಳಿಯಬಹುದಾಗಿದೆ.[17] ಇದೇ ತಾಲ್ಲೂಕಿನ ಬಿಳಿಗೆರೆಯ ಶಾಸನವು ಕೃಷ್ಣದೇವ ಮಹಾರಾಯನಿಗೆ ಪುಣ್ಯವಾಗಬೇಕೆಂದು ಉಮ್ಮತ್ತೂರಿನ ನರಸಪ್ಪಯ್ಯನ ಮಗ ರಾಮಪ್ಪನು ಬಿಳಿಗೆರೆಯಪುರವನ್ನು ನಂಜನಗೂಡಿನ ನಂಜುಂಡೇಶ್ವರನಿಗೆ ದಾನವಾಗಿ ನೀಡಿದ್ದಾನೆ.[18]

ನಂಜನಗೂಡು ಪಟ್ಟಣದ ಭದ್ರಕಾಳೇಶ್ವರ ದೇವಾಲಯದ ಬಲಗೋಡೆಯ ಕಲ್ಲಿನ ಶಾಸನವು ಕೃಷ್ಣದೇವಮಹಾರಾಯರು ನಂಜನಗೂಡಿನ ಶ್ರೀನಂಜುಂಡೇಶ್ವರ ದೇವರ ಸೇವೆಗಾಗಿ ಬೋವನಹಳ್ಳಿ, ವೋಲೆಹಳ್ಳಿಯನ್ನು ದಾನಮಾಡಿ ರಾಜಧಾನಿಗೆ ಹಿಂತಿರುಗುತ್ತಿದ್ದಾಗ ವಾರಣಾಸಿ ಕೆಂಪದೇವರ ಸಂಣನವರನ್ನು ಕೇಳಿ ತಿರುಮಲೆರಾಯ ಮಹಾರಾಯನಿಗೆ ಅಕ್ಷಯ ಪುಣ್ಯಲೋಕವಾಗಬೇಕೆಂದು ಈ ಧರ್ಮವನ್ನು ಬಿಡುತ್ತಾನೆ. ಇಲ್ಲಿ ಉಲ್ಲೇಖವಾಗಿರುವ ತಿರುಮಲೆರಾಯ ಮಹಾರಾಯನೆಂದರೆ ಕೃಷ್ಣದೇವರಾಯನ ಪುತ್ರನೇ ಆಗಿದ್ದಾನೆ. ಈ ಶಾಸನ ಹಾಕಿಸುವ ಪೂರ್ವದಲ್ಲಿ ಇವನು ನಿಧನ ಹೊಂದಿದ್ದು, ಇವನಿಗೆ ಸ್ವರ್ಗ ಪ್ರಾಪ್ತಿಯಾಗಲೆಂದು (ಅಕ್ಷಯ ಪುಣ್ಯಲೋಕ) ಈ ದಾನ ನೀಡಿದ್ದಾನೆ.[19]

ನಂಜನಗೂಡು ತಾಲ್ಲೂಕಿನ ಶಾಸನದಲ್ಲಿ ಸಭಾಪತಿ ಸ್ವಯಂಭು ಎಂಬ ಹೆಸರಿನ ಸಂಸ್ಕೃತ ಶಾಸನ ಕವಿಯ ಉಲ್ಲೇಖವಿದೆ. ಕ್ರಿ.ಶ. 1513ರ ನಂಜನಗೂಡಿನ ತಾಮ್ರ ಶಾಸನವು ಈತನಿಂದ ರಚನೆಗೊಂಡಿದ್ದು, ವಿಜಯನಗರದರಸನಾದ ಕೃಷ್ಣದೇವರಾಯನ ಹಲವಾರು ಶಾಸನಗಳ ಕರ್ತೃವಾದ ಈತನು ಚಿರಪರಿಚಿತ ಕವಿಯಾಗಿದ್ದನು. ಈತನು ವಿಜಯನಗರ ರಾಜರ ಆಸ್ಥಾನದಲ್ಲಿದ್ದುಕೊಂಡು ರಾಯರು ತಮ್ಮ ವಿಶಾಲ ರಾಜ್ಯದಲ್ಲಿ ಅಲ್ಲಲ್ಲಿ ಕೊಡುವ ದಾನ ದತ್ತಿಗಳ ತಾಮ್ರ ಶಾಸನಗಳನ್ನು ಸಂಸ್ಕೃತದಲ್ಲಿ ರಚಿಸಿಕೊಡುತ್ತಿದ್ದನು. ಈ ಸಭಾಪತಿ ಸ್ವಯಂಭುವಿನ ತಾಮ್ರ ಶಾಸನಗಳು ಕರ್ನಾಟಕದ ನಾನಾ ಭಾಗಗಳಲ್ಲಿ ದೊರೆತಿವೆ. ಕ್ರಿ.ಶ. 1513ರಿಂದ 1551ರವರೆಗೂ ಈತನ ಕರ್ತೃತ್ವದ ಉಲ್ಲೇಖವನ್ನು ಕಾಣಬಹುದು. ನಂಜನಗೂಡು, ಹುರುಗಲವಾಡಿ (ಮಂಡ್ಯ) ಬ್ಯಾಲದಕೆರೆ, ಹೊನ್ನೇನಹಳ್ಳಿ, ಗುಂಡ್ಲುಪೇಟೆ ಮೊದಲಾದ ಊರುಗಳಲ್ಲಿ ಇವನ ತಾಮ್ರಪಟಗಳು ದೊರೆತಿವೆ. ಇವೆಲ್ಲವುಗಳ ಕಾಲದ ಉಲ್ಲೇಖಗಳಿಂದ ಸಭಾಪತಿ ಸ್ವಯಂಭುವಿನ ಜೀವಿತಕಾಲ ಕ್ರಿ.ಶ. 15ನೆಯ ಶತಮಾನದ ಕೊನೆಯಿಂದ 16ನೆಯ ಶತಮಾನದ ಮಧ್ಯವನ್ನು ದಾಟುತ್ತದೆಂದು ಹೇಳಬಹುದು. ಕೃಷ್ಣದೇವರಾಯ ಮತ್ತು ಅಚ್ಯುತರಾಯ, ಸದಾಶಿವರಾಯರ ಶಾಸನಗಳನ್ನು ರಚಿಸಿದ್ದಾನೆ. ಈತನ ನಾಮನಿರ್ದೇಶನದ ಶ್ಲೋಕವು ಸಾಮಾನ್ಯವಾಗಿರುವುದು ಇದು : ಕೃಷ್ಣದೇವ ಮಹಾರಾಯ ಶಾಸನೇನ ಸಭಾಪತಿ : ಆಭಾಣೆ ಮೃದುಸಂದರ್ಭಂ ತದಿದಂ ತಾಮ್ರ ಶಾಸನಂ॥[20] ನಂಜನಗೂಡಿನಲ್ಲಿರುವ ಕ್ರಿ.ಶ. 1580ರ ತಾಮ್ರಪಟದಲ್ಲಿ ಚಿನ್ನಚಾವಪ್ಪ ಅರಸ ಅನೇಕ ಅಗ್ರಹಾರಗಳನ್ನು ನಿರ್ಮಿಸಿ ವೇದ, ವೇದಾಂಗವನ್ನು ಬಲ್ಲಂತಹ ಬ್ರಾಹ್ಮಣರಿಗೆ, ವೈಷ್ಣವರಿಗೆ ಮುಖ್ಯಸ್ಥರಾದ ವಿಜೇಂದ್ರನಿಗೆ ಶಾಸ್ತ್ರಗಳ ಬಗ್ಗೆ ಅಧಿಕಾರಿಯುತವಾಗಿ ಹೇಳಬಲ್ಲ ಶೈವದ್ವೈತ ಅಪ್ಪಯ್ಯ ದೀಕ್ಷಿತರಿಗೆ ದಾನವಾಗಿ ನೀಡಿದ ವಿಷಯವಿದೆ.[21]

ನಂಜನಗೂಡು ತಾಲ್ಲೂಕಿನ ತಾಯೂರ ತೃಣೇಶ್ವರ ಗುಡಿಯ ದಕ್ಷಿಣ ಪ್ರಾಕಾರದಲ್ಲಿರುವ ಕ್ರಿ.ಶ. 1586ರ ಶಾಸನ

ವೆಂಕಟಪತಿರಾಯನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರ ತಿರುಮಲರಾಜನು, ಹದಿನಾಡ ರಾಮರಾಯನಾಯಕನಿಗೆ ಪಲ್ಲಕ್ಕಿ ಕೊಡುಗೆಯಾಗಿ ಮೂಗೂರು ಸೀಮೆ ತಾಯೂರು ಸ್ಥಳದ ತಾಯೂರು, ಈಶ್ವರಗೊಂಡಹಳ್ಳಿ, ಡಣಾಯಕನಪುರ, ವೋಟುಹಾಳು (ವಾಟಾಳು), ಪುರ, ಗಣಿಗನೂರು, ಆಲದೂರು, ಗೆಜೆಗನಪುರ ಮುಂತಾದ 15 ಗ್ರಾಮಗಳಲ್ಲಿಯ ಉಭಯಮಾರ್ಗದ ಸುಂಕವನ್ನು ಪಲ್ಲಕ್ಕಿಯ ಉಂಬಳಿಯಾಗಿ ಕೊಟ್ಟ ದೇವದಾಯ, ಬ್ರಹ್ಮದಾಯವನ್ನು ಪೂರ್ವ ಮರ್ಯಾದೆಯಲ್ಲಿ ನಡೆಸಿಕೊಂಡುಬರುವಂತೆ ಸೂಚಿಸಿದೆ.[22] ನಂಜನಗೂಡು ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿರುವ ಐದನೆಯ ತಾಮ್ರ ಶಾಸನದಲ್ಲಿ ಅರವೀಡು ವಂಶದ ರಾಮರಾಜನು ಮಠದ ಯತಿ ರಘುನಂದನರಿಗೆ ವಿಜಯವಿಠಲ ದೇವಾಲಯದ ದಕ್ಷಿಣದಲ್ಲಿ ರಾಮಚಂದ್ರ ದೇವರನ್ನು ಪೂಜಿಸಲು ತುಂಗಾಭದ್ರ ನದಿ ತೀರದ ತೊಳಲಿ ಕಂಮಾರಕಟ್ಟೆ ಹಾಗೂ ಚಿಕ್ಕಮೊರಟಿ ಎಂಬ ಮೂರು ಹಳ್ಳಿಗಳನ್ನು ಭೂದಾನವಾಗಿ ನೀಡಲಾಗಿರುವುದು ಕಂಡುಬರುತ್ತದೆ.[23]

ವಿಜಯನಗರ ಕಾಲದಲ್ಲಿ ಸಾಮ್ರಾಟರ ಹಾಗೂ ಅಧೀನ ಆಡಳಿತವರ್ಗದವರ ಉದಾರ ನಿಲುವಿನಿಂದ ನಂಜನಗೂಡು ಪ್ರದೇಶವು ಹಲವು ದಾನದತ್ತಿಗಳನ್ನು ಪಡೆಯಿತು. ಆ ದಾನದತ್ತಿಗಳ ನೆರವಿನಿಂದ ಈ ಪ್ರದೇಶವು ಅಭಿವೃದ್ಧಿಗೊಂಡಿತು. ನಂಜನಗೂಡಿನ ವಿಜಯನಗರ ಕಾಲದ ಶಾಸನಗಳ ವೈಶಿಷ್ಟವೆಂದರೆ ಹೆಚ್ಚಿನವು ದೇವಾದಾಯವಾಗಿವೆ. ಈ ದೇವದಾಯ ಹಾಗೂ ಹಲವು ಬ್ರಹ್ಮದೇಯಗಳಿಂದ ಈ ಪ್ರದೇಶದ ದೇವಾಲಯಗಳ ಪೂಜಾ ಕೈಂಕರ್ಯಗಳು ನಿರಾತಂಕವಾಗಿ ನಡೆಯುತ್ತಿದ್ದವು ಎಂದು ಹೇಳಬಹುದು.

ಅಡಿ ಟಿಪ್ಪಣಿಗಳು

1. *E.C.*, III, NJ.258. p. 338-339.
2. *Ibid.*, III, NJ.258. p. 338-339.
3. *Ibid.* III, NJ.308. p. 376
4. *Ibid.* III, NJ.378. p. 419
5. *Ibid.* III, NJ.135. p. 256-257
6. ಪರಮಶಿವಮೂರ್ತಿ.ಡಿ.ವಿ. (ಸಂ.), *ಪ್ರೌಢದೇವರಾಯನ ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007, ಪು. 304.
7. *E.C.*, III, NJ.181, p. 285.
8. ಪರಮಶಿವಮೂರ್ತಿ ಡಿ.ವಿ. (ಸಂ.), *ಪೂರ್ವೋಕ್ತ*, ಪು. 220.
9. *E.C.*, III, NJ.377, p. 418-419.
10. E.C., III, NJ.285, p. 360-361.
11. *ಕರ್ನಾಟಕ ಚರಿತ್ರೆ*, ಸಂಪುಟ–3, ಪು. 121.
12. ಮುರಿಗೆಪ್ಪ (ಪ್ರ.ಸಂ.), *ಕೃಷ್ಣದೇವರಾಯ ಆಯ್ದಲೇಖನ ಸಂಪುಟ*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008, ಪು. 103.
13. *E.C.*, III, NJ.17, p.168, ಹಯವದನರಾವ್.ಸಿ., *ಮೈಸೂರು ಗ್ಯಾಸೆಟಿಯರ್*, ಸಂಪುಟ 5. ಪು. 230.
14. *E.C.*, III, NJ.143, p. 264.
15. *Ibid.*, III, NJ.149, p. 267.
16. *Ibid.*, III, NJ.298, p. 369-370
17. *Ibid.*, III, NJ.251, p. 334.
18. *Ibid.*, III, NJ.246, p. 330.
19. ಪರಮಶಿವಮೂರ್ತಿ ಡಿ.ವಿ. (ಸಂ.), *ಕೃಷ್ಣದೇವರಾಯನ ಶಾಸನಗಳು*. ಸಂಪುಟ–01 ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010, ಪು. 520–521.
20. ಮೇವುಂಡಿಮಲ್ಲಾರಿ, *ಕನ್ನಡನಾಡಿನ ಶಾಸನಕವಿಗಳು*, ಧಾರವಾಡ, 1974, ಪು. 291–292.
21. *E.C.*, III, NJ.116, p.218.
22. *ನಂಜನಗೂಡು ತಾಲ್ಲೂಕು ಗ್ಯಾಸೆಟಿಯರ್*, ಬೆಂಗಳೂರು, 2011, ಪು. 185.
23. *E.C.*, III, NJ.114, p. 209-210.

04. ಅಚ್ಯುತ ದೇವರಾಯನ ಕಾಲದ ದಾವಣಗೆರೆ ಜಿಲ್ಲೆ ಶಾಸನಗಳು

ಸಂತೇಬೆನ್ನೂರು ಸುಮತೀಂದ್ರ ನಾಡಿಗ್

ನಮ್ಮ ರಾಜ್ಯವನ್ನು ಗಂಗರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಅರಸರು, ಬಹುಮನಿ ಸುಲ್ತಾನರು ಮೈಸೂರು ಅರಸರು ಸೇರಿ ಅನೇಕ ಸಣ್ಣ ಪುಟ್ಟ ನಾಯಕ ವಂಶಸ್ಥರು ಆಳಿ ಹೋಗಿದ್ದಾರೆ. ಅವರು ತಮ್ಮ ಆಡಳಿತದ ಕುರುಹಾಗಿ, ತಾವು ನಡೆಸಿದ ಅನೇಕ ಸಮಾಜ ಸೇವಾ ಕಾರ್ಯದ ಅಂಗವಾಗಿ ಅನೇಕ ದೇವಸ್ಥಾನ, ಅರಮನೆ, ಕೋಟೆ, ಕೊತ್ತಲ, ಕೆರೆ, ಕೊಳ ನಿರ್ಮಿಸಿದ್ದಾರೆ. ಅವುಗಳ ನಿರ್ಮಾಣ, ಪೂಜೆ ಪುನಸ್ಕಾರ ಜೀರ್ಣೋದ್ಧಾರಕ್ಕಾಗಿ ಅನೇಕ ದತ್ತಿ ದಾನ ನೀಡಿರುವುದು ಅವರು ಹಾಕಿಸಿದ ಶಾಸನಗಳಿಂದ ನಮಗೆ ತಿಳಿದುಬರುತ್ತದೆ. ಈ ನಿಟ್ಟಿನಲ್ಲಿ ವಿಜಯನಗರದ ಅರಸರು ಮತ್ತು ಅವರ ಮಾಂಡಲೀಕರು, ಸಾಮಂತರು, ಮಂತ್ರಿಗಳು, ಕಾರ್ಯಕರ್ತರು ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಹಾಕಿಸಿದ 50ಕ್ಕೂ ಹೆಚ್ಚು ಶಾಸನಗಳು ನಮಗೆ ಲಭ್ಯವಾಗಿದೆ. ವಿಜಯನಗರ ರಾಜವಂಶಗಳಲ್ಲಿ ಸಂಗಮ, ಸಾಳುವ ವಂಶದ ತರುವಾಯ ಅಧಿಕಾರ ವಹಿಸಿದವರು ತುಳುವ ವಂಶಸ್ಥರು. ಅದರ ಕಟ್ಟಕಡೆಯ ಪ್ರಖ್ಯಾತ ದೊರೆ ಕೃಷ್ಣದೇವರಾಯನ ನಂತರ ಅವನ ಮಲತಾಯಿಯ ಮಗ ಅಚ್ಯುತರಾಯ (1529–1542) ಆಡಳಿತ ಚುಕ್ಕಾಣಿ ಹಿಡಿದನು. ಇವನ ತಂದೆಯೂ ನರಸನಾಯಕ ತಾಯಿ ಓಬಾಂಬಿಕೆ (ಆತನ 3ನೇ ಹೆಂಡತಿ) ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ ಅಚ್ಯುತದೇವರಾಯನ ಕಾಲದ ಶಾಸನಗಳ ಕುರಿತು ಈ ಸಂಪ್ರಬಂಧದಲ್ಲಿ ಚರ್ಚಿಸುತ್ತಿದ್ದೇನೆ.

ಕೃಷ್ಣದೇವರಾಯನ ಕಾಲದಲ್ಲಿಯೇ, ಸ್ವಜನರಿಂದ ನಡೆಯುವ ಪಿತೂರಿ ತಪ್ಪಿಸಲು ಅವನು ಅಚ್ಯುತದೇವರಾಯನನ್ನು ಸ್ವಲ್ಪಕಾಲ ಚಂದ್ರಗಿರಿಯಲ್ಲಿ ಬಂಧನದಲ್ಲಿಟ್ಟಿದ್ದನು. ಆದರೆ ಕೃಷ್ಣದೇವರಾಯ ತನ್ನ ಆಡಳಿತದ ಕೊನೆಯ ಕಾಲದಲ್ಲಿ ತನ್ನ ಮಕ್ಕಳು ಅಪ್ರಾಪ್ತರಾದ್ದರಿಂದ ತನ್ನ ಮಲ ತಮ್ಮನನ್ನು ಸಿಂಹಾಸನಕ್ಕೆ ಉತ್ತರಾಧಿಕಾರಿ ಎಂದು ನೇಮಿಸಿದ ಕಾರಣ ಕೃಷ್ಣದೇವರಾಯನ ನಿಧನದ ನಂತರ ಅಚ್ಯುತರಾಯ ಆಡಳಿತ ಸೂತ್ರ ವಹಿಸಿಕೊಂಡ. 1528ರ ಒಂದು ಶಾಸನ ಇವನನ್ನು ಚಕ್ರವರ್ತಿ ಬಿರುದು ಹೊಂದಿ ಆಳುತ್ತಿದ್ದುದನ್ನು ತಿಳಿಸುತ್ತದೆ.

ಕೃಷ್ಣದೇವರಾಯ ಮೃತನಾದಾಗ ಅಚ್ಯುತರಾಯ ಚಂದ್ರಗಿರಿಯಲ್ಲಿದ್ದ. ಅಳಿಯ ರಾಮರಾಯನ ಪಿತೂರಿ ತಿಳಿದಿದ್ದ ಅಚ್ಯುತರಾಯ ಚಂದ್ರಗಿರಿಯಿಂದ ಮೊದಲು ತಿರುಪತಿಗೆ ಹೋಗಿ ಅಲ್ಲಿ ಪ್ರಥಮವಾಗಿ ವಿಜಯನಗರದ ಅರಸನಾಗಿ ರಾಜ್ಯ ಪಟ್ಟಾಭಿಷೇಕ ಮಾಡಿಕೊಂಡ ಅಲ್ಲಿಂದ ಮುಂದೆ ಕಾಳಹಸ್ತಿಗೆ ಹೋಗಿ ಅಲ್ಲಿ 2ನೇ ಸಲ ರಾಜ್ಯಭಿಷೇಕ ಮಾಡಿಕೊಂಡ. ನಂತರ ಅಳಿಯ ರಾಮರಾಯನೊಂದಿಗೆ ಒಪ್ಪಂದ ಮಾಡಿಕೊಂಡ, ಅದರಂತೆ ರಾಮರಾಯ ಅಚ್ಯುತದೇವರಾಯ ಇಬ್ಬರೂ ಅಪ್ರಾಪ್ತ ಕೃಷ್ಣದೇವರಾಯನ ಮಗನ ಹೆಸರಿನಲ್ಲಿ ಆಡಳಿತ ನಡೆಸಿದರು. ಆದರೆ ಕೃಷ್ಣದೇವರಾಯನ ಮಗ ಆಕಾಲಿಕ ಮರಣಕ್ಕೆ ತುತ್ತಾದಾಗ ಅಚ್ಯುತದೇವರಾಯನನ್ನು ಮೂಲೆಗೆ ತಳ್ಳಿ, ಅಳಿಯರಾಮರಾಯ ಅಚ್ಯುತರಾಯನ ತಮ್ಮನ ಮಗ ಸದಾಶಿವರಾಯನ ಹೆಸರಿನಲ್ಲಿ ಆಡಳಿತ ತನ್ನ ಕೈಗೆ ತೆಗೆದುಕೊಂಡು, ಅಚ್ಯುತನನ್ನು ಬಂಧಿಸಿದ. ಮುಂದೆ ಬಿಜಾಪುರದವರ ದಂಗೆ ಅಡಗಿಸುವ ಕಾಲದಲ್ಲಿ ಅಚ್ಯುತನನ್ನು ಬಿಡುಗಡೆಗೊಳಿಸಿದ. ಹೀಗೆ ಅನೇಕ ಏಳು ಬೀಳುಗಳ ನಡುವೆ ತನ್ನ ದಾಯಾದಿಗಳ ಅಂತಃಕಲಹ ನೆರೆ ಸುಲ್ತಾನರ ಹಾವಳಿಗಳ ನಡುವೆಯೂ ವಿಜಯನಗರದ ಆಡಳಿತ ನಡೆಸಿದ ಅಚ್ಯುತರಾಯ ತನ್ನ ಅಳ್ವಿಕೆಯ ಉದ್ದಕ್ಕೂ ರಾಜಕೀಯ ಪ್ರಕ್ಷುಬ್ದತೆಯಿಂದ ತೊಳಲಾಡಿದರೂ. ಅವನ ಮಾಂಡಲೀಕರ ಸಹಾಯದಿಂದ ಉಪಾಯದಿಂದ ರಾಜ್ಯದ ಆಡಳಿತ ನಡೆಸಿದ. ರಾಜಧಾನಿ ಜನರಿಗೂ, ರಾಜ್ಯದ ಜನತೆಗೂ ಇವನ ಬಗ್ಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲವೆಂದೂ ಅಚ್ಯುತರಾಯ ಅನೀತಿಯಿಂದ ರಾಜ್ಯಾಡಳಿತ ನಡೆಸುತ್ತಿದ್ದುದಾಗಿ ಇವನ ಕಾಲಕ್ಕೆ ವಿಜಯನಗರಕ್ಕೆ ಬಂದ ಪೋರ್ಚ್‌ಗೀಸ್ ಯಾತ್ರಿಕ ನ್ಯೂನಿಜ್ ಬರೆದಿದ್ದಾನೆ.

ತನ್ನ ರಾಜ್ಯದ ಆಂತರಿಕ ಅರಾಜಕತೆ ನಡುವೆಯೂ ಬಿಜಾಪುರದವರು ವಶಪಡಿಸಿಕೊಂಡಿದ್ದ ರಾಯಚೂರು. ಮುದಗಲ್ಲು ಕೋಟೆಯನ್ನು ಮರಳಿ ಅಚ್ಯುತದೇವರಾಯ ತನ್ನ ವಶಕ್ಕೆ ತೆಗೆದುಕೊಂಡಿದ್ದು ಸಾಹಸವೇ ಸರಿ. ತನ್ನ ಅಲ್ಪ ಆಡಳಿತಾವಧಿಯಲ್ಲಿಯೇ ಅಚ್ಯುತದೇವರಾಯ ಅನೇಕ ದೇವಸ್ಥಾನಗಳಿಗೆ ಮತ್ತು ಬ್ರಾಹ್ಮಣರಿಗೆ ಅನೇಕ ದತ್ತಿ ನೀಡಿದ್ದಾನೆ.

ಅನೇಕ ವೈಷ್ಣವ ದೇವಾಲಯಕ್ಕೆ ದಾನ ನೀಡಿದ್ದು ಶಾಸನಗಳಿಂದ ತಿಳಿದುಬರುತ್ತದೆ. ಪ್ರಮುಖವಾಗಿ ಕಂಚಿ ವರದರಾಜ ದೇವಾಲಯಕ್ಕೆ, ಹಂಪೆ ವಿಜಯವಿಠಲ ಮಂದಿರಕ್ಕೆ ಇವನು ನೀಡಿದ ದಾನದ ಉಲ್ಲೇಖ ಸಿಗುತ್ತದೆ. ದೇವಾಲಯ ನಿರ್ವಹಣೆಗೆ ಆನಂದನಿಧಿಯೆಂಬ ಮದವಟ್ಟು ಇವನು ಸ್ಥಾಪಿಸಿದ್ದ.

ಅಚ್ಯುತರಾಯಾಭ್ಯುದಯಮ್ ಮತ್ತು ಭಾಗವತ ಚಂಪೂ ಬರೆದ ರಾಜನಾಥದಿಂಡಿಮ, ವರದಾಂಬಾಪರಿಣಯ ಬರೆದ ತಿರುಮಲಾರ್ಯ ಇವನ ಪೋಷಣೆಯಲ್ಲಿದ್ದ ಮುಖ್ಯ ಕವಿಗಳು. ಅಚ್ಯುತನಿಗೆ ವರದಾಂಬಿಕೆ ಅಲ್ಲದೆ ಇನ್ನಿಬ್ಬರು ಪತ್ನಿಯರಿದ್ದರು. ಈತನಿಗೆ ವೆಂಕಟಾದ್ರಿ ಎಂಬ ಮಗನಿದ್ದ. ಅವನಿಗೆ 1530ರಲ್ಲಿ ಯುವರಾಜ ಪಟ್ಟಾಭಿಷೇಕವೂ ಆಗಿತ್ತು. ಅಚ್ಯುತ 1542ರಲ್ಲಿ ಮೃತನಾದ.

ಪ್ರಸ್ತುತ ದಾವಣಗೆರೆ ಜಿಲ್ಲೆ ಸೇರಿದಂತೆ ವಿಜಯನಗರದ ಅರಸು ಅಚ್ಯುತದೇವರಾಯನ ಕಾಲದ 7 ಶಾಸನಗಳು ಲಭ್ಯವಿದ್ದು, ಅದರಲ್ಲಿ 5 ಶಾಸನಗಳೂ ಹರಿಹರ ತಾಲ್ಲೂಕುಗಳಲ್ಲಿ ತಲಾ ಒಂದೊಂದು ಶಾಸನಗಳು. ಜಿಲ್ಲೆಯ ಜಗಲೂರು ಮತ್ತು ಹರಪನಹಳ್ಳಿ ತಾಲೂಕುಗಳಲ್ಲೂ ದೊರೆತಿವೆ. ಜಿಲ್ಲೆಯ ಉಳಿದ ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕಿನಲ್ಲಿ ಈತನ ಶಾಸನಗಳಾವು ದೊರತಿಲ್ಲ. ಹರಿಹರ ಮತ್ತು ಜಗಲೂರು ತಾಲೂಕು ಶಾಸನಗಳನ್ನು ಕರ್ನಾಟಕ ಶಾಸನ ಪಿತಾಮಹ ಬಿ.ಎಲ್. ರೈಸರು ತಮ್ಮ ಶಾಸನ ಸಂಪುಟದಲ್ಲಿ ಪ್ರಶಂಶಿಸಿದ್ದಾರೆ ಉಳಿದಂತೆ ಹರಪನಹಳ್ಳಿ ತಾಲ್ಲೂಕಿನಲ್ಲಿ ದೊರೆತ ಶಾಸನ ದಕ್ಷಿಣ ಭಾರತ ಶಾಸನ ಸಂಪುಟದಲ್ಲಿ ಪ್ರಟಿಸಲಾಗಿದ್ದು ಅದನ್ನು ಈಚೆಗೆ ಹಂಪಿ ಕನ್ನಡ ವಿಶ್ವವಿದ್ಯಾನಿಲಯ ತನ್ನ ಬಳ್ಳಾರಿ ಶಾಸನ ಸಂಪುಟದಲ್ಲಿ ಪ್ರಕಟಿಸಿದೆ. ಈ ಎಲ್ಲಾ ಶಾಸನಗಳು ಸಂಸ್ಕೃತ ಭಾಷೆಯಲ್ಲಿದ್ದು ಕನ್ನಡ ಲಿಪಿಯಲ್ಲಿವೆ.

ಹರಿಹರ ತಾಲೂಕಿನ ಶಾಸನಗಳು

ಅಚ್ಯುತ ದೇವರಾಯನ ಕಾಲಕ್ಕೆ ಸಂಬಂಧಿಸಿದಂತೆ 5 ಶಾಸನಗಳು ತಾಲೂಕಿನ ಹರಿಹರದಲ್ಲೇ ಹರಿಹರೇಶ್ವರ ದೇವಸ್ಥಾನದ ಪ್ರಾಂಗಾಣದಲ್ಲಿ ದೊರೆತಿವೆ. ಕ್ರಿ.ಶ. 1530ರ 22 ಸಾಲುಗಳ ಒಂದು ಶಾಸನ ಶಕ 1452 ವಿಕೃತಿ ಸಂ.ದ ಶ್ರಾವಣ ಬಹುಳ ಕೃಷ್ಣಾಷ್ಟಮಿ ಎಂದು ವಶಿಷ್ಟ ಗೋತ್ರದ ಆಶ್ವಲಾಯನ ಸೂತ್ರದ ಚಿನ್ನ ಭಂಡಾರದ ತಿಮ್ಮರಸನ ಮಕ್ಕಳು ನಾರಾಯಣದೇವರುಗಳು ಬುಳ್ಳಾಪುರ ಎಂಬ ಗ್ರಾಮವನ್ನು ಅಚ್ಯುತರಾಯಪುರ ಎಂದು ಹೆಸರಿಸಿ ಹರಿಹರ ದೇವರ ಅವಸರದ ನೈವೇದ್ಯಕ್ಕೆ ಸಮರ್ಪಿಸಿದ್ದನ್ನು ತಿಳಿಸುತ್ತದೆ. ಇದರಲ್ಲಿ ಎರಡು ಭಾಗ ಹರಿಹರ ದೇವರಿಗೆ ಮತ್ತೊಂದು ಭಾಗ ಗೌತಮ ಗೋತ್ರದ ಆಶ್ವಲಾಯನ ಸೂತ್ರದ ರಾಮಚಂದ್ರಾರಾಧ್ಯರ ಮಕ್ಕಳು ವಿಶ್ವೇಶ್ವರಾಧ್ಯರಿಗೆ ಭೂಮಿ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಈ ಶಾಸನದಿಂದ ತಿಮ್ಮರಸ ಮತ್ತು ಅವರ ಮಕ್ಕಳಿಗೆ ವಿಜಯನಗರದ ಅಚ್ಯುತದೇವರಾಯ ಹರಿಹರ ಸೀಮೆಯ ಕೊಟ್ಟೂರು ಚಾವಡಿಗೆ ಸೇರಿದ ಬುಳ್ಳಾಪುರ ಗ್ರಾಮವನ್ನು ತಿಮ್ಮರಸನ ಮಕ್ಕಳಿಗೆ ಅಮರ ನಾಯಕತ್ವಕ್ಕೆ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.

ಕ್ರಿ.ಶ. 1531ನೇ ಇಸವಿಯ 27 ಸಾಲುಗಳ ಶಾಸನ ಶಕ 1453ನೇ ಖರ ಸಂ.ದ ಆಶ್ವೀಜ ಶುದ್ಧ ವಿಜಯದಶಮಿಯಂದು ಗಾರ್ಗ್ಯೆ ಗೋತ್ರದ ಆಪಸ್ತಂಭ ಸೂತ್ರದ ಯಜುಶಾಖೆಯ ಅಣ್ಣಾಜಿ ದೇವರ ಮಕ್ಕಳು ಅವಸರದ ದೀಕ್ಷಿತರು ಆಪಸ್ತಂಭ ಸೂತ್ರದ ಬಾದಾನಾರಾಯಣ ಗೋತ್ರದ ಅವಸರದ ದೇವರಸರಿಗೆ ಅಕ್ಷಯ ಪುಣ್ಯ ಲೋಕವಾಗಲೆಂದು ಪಾಂಡ್ಯ ನಾಡಿನ ಉಚ್ಚಂಗಿ ಪ್ರದೇಶದ ಹರಿಹರ ಸೀಮೆಯಲ್ಲಿದ್ದ ವಿಜಯನಗರ ಅರಸರಿಂದ ತಮಗೆ ಅಮರ ಮಾಗಣಿಯಾಗಿ ಬಂದ ಬೆಳ್ಳೂಡಿ, ಗಂಗನರಸಿ ಗ್ರಾಮಗಳನ್ನು ಹರಿಹರ ದೇವರ ಅಮೃತಪಡಿ, ನೈವೇದ್ಯಕ್ಕೆ ಸಮರ್ಪಿಸಿದ್ದು, ಹಾಗೇಯೆ ಅವರು ಆತ್ರೇಯ ಗೋತ್ರದ ಆಪಸ್ತಂಭ ಸೂತ್ರದ ಯಜುಶಾಖೆಯ ತಾಯ ತಿಮ್ಮಣ್ಣನ ಮಕ್ಕಳು ಸಾವಿತೆ ಭಟ್ಟರಿಗೆ ದೇವರಸರು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಇದಲ್ಲದೇ ಅವರಸದ ದೀಕ್ಷಿತರು ಅಕ್ಕಸಾಲೆ ಕೆಲಸ ಮಾಡುತ್ತಿದ್ದ ನೀರೋಜನ ಮಗ ಕರಿಯ ತಿಮ್ಮೋಜನಿಗೆ ಈ ಶಾಸನ ತಿದ್ದಿದ್ದಕ್ಕೆ ಬೆಳವಡಿ ಗ್ರಾಮದಲ್ಲಿ ಒಕ್ಕಳ ಎರೆಯ ಭೂಮಿ ದಾನ ಕೊಟ್ಟಿದ್ದನ್ನು ಸೂಚಿಸುತ್ತದೆ.

ಕ್ರಿ.ಶ. 1533ರ ವಿಜಯ ಸಂ.ದ ಪುಷ್ಯ ಶುದ್ಧ ದ್ವಾದಶಿ ಉತ್ತರಾಯಣ ಪುಣ್ಯ ಕಾಲದಲ್ಲಿ ಹಾಕಿದ 21 ಸಾಲುಗಳ ಇನ್ನೊಂದು ದ್ವಿಮುಖ ಶಾಸನ ಅವಸರದ ಚಂದ್ರಶೇಖರಯ್ಯ ತನ್ನ ಮಾವ ಅವಸರದ ದೇವರಸಯ್ಯನ ಹೆಸರಿನಲ್ಲಿ ಹರಿಹರ ದೇವರ ದೇವಸ್ಥಾನದ ಉತ್ತರ ಭಾಗದಲ್ಲಿ ದೇವಾಲಯವೊಂದನ್ನು ಕಟ್ಟಿಸಿ ಅದಕ್ಕೆ ದೇಮೇಶ್ವರ ದೇವಾಲಯವೆಂದು

ಹೆಸರಿಸಿ ಪ್ರತಿಷ್ಠಾಪಿಸಿದ್ದನ್ನು ಶಾಸನ ನಿರೂಪಿಸುತ್ತದೆ. ಈ ಶಾಸನ ಅಚ್ಯುತನ ನಿರೂಪದಂತೆ ನಡೆಯಿತೆಂದು, ಅಲ್ಲಿನ ಸತ್ರದಲ್ಲಿ ಪ್ರತಿನಿತ್ಯ ಅರವತ್ತು ಬ್ರಾಹ್ಮಣರಿಗೆ ಭೋಜನ, ದೇವರ ನೈವೇದ್ಯಕ್ಕೆ ಏರ್ಪಾಡು ಮಾಡಲಾಗಿತ್ತೆಂದು ತಿಳಿಸುತ್ತದೆ. ಶಾಸನದಲ್ಲಿ ಉಲ್ಲೇಖಿತ ದೇಮೇಶ್ವರ ದೇವಾಲಯ ಈಗ ಇಲ್ಲ.

ಕ್ರಿ.ಶ. 1538ರ 31 ಸಾಲುಗಳ ಇನ್ನೊಂದು ಶಾಸನ ಶಕ 1480ನೇ ವಿಳಂಬಿ ಸಂ.ದ ಕಾರ್ತೀಕ ಶುದ್ಧ ಪೌರ್ಣಮಿ ಬುಧವಾರ ಚಂದ್ರಗ್ರಹಣದಂದು ಮಹಾರಾಜ ಅಚ್ಯುತ ಮಲ್ಲಪ್ಪಣ್ಣನು ತನ್ನ ಸ್ವಾಮಿಯಾದ ಅಚ್ಯುತರಾಯನಲ್ಲಿ ವಿಜ್ಞಾಪಿಸಿಕೊಂಡು ಅವನ ಅಪ್ಪಣೆ ಪಡೆದುಕೊಂಡು ಕುಂದುವಾಡವೆಂಬ ಗ್ರಾಮವನ್ನು ಹರಿಹರದೇವರಿಗೆ ದತ್ತಿ ಬಿಟ್ಟಿದ್ದನ್ನು ಸೂಚಿಸುತ್ತದೆ. ಮಲ್ಲಪ್ಪಣ್ಣನ ಪರವಾಗಿ ಈ ಕಾರ್ಯ ಮಾಡಿದವನು ಅವನ ಅಧಿಕಾರಿ ಅಕ್ಕಪ. ಈ ದತ್ತಿ ಬಿಟ್ಟ ಉದ್ದೇಶವೂ ಹರಿಹರ ದೇವರ ನೈವೇದ್ಯಕ್ಕೆ ಮತ್ತು ಬ್ರಾಹ್ಮಣರ ಭೋಜನಕ್ಕೆ. ದತ್ತಿ ಬಿಟ್ಟ ಗ್ರಾಮವನ್ನು ಅಚ್ಯುತರಾಯೇಂದ್ರ ಮಲ್ಲಾಪುರ ಎಂದು ಹೆಸರಿಡಲಾಗಿದೆ ಶಾಸನದಲ್ಲಿ ಉಲ್ಲೇಖಿತ ಚರ್ತುಗಡಿ ಗ್ರಾಮಗಳಾದ ಶಾಬನೂರು, ಸಾಲುಗಕಟ್ಟೆ, ಬಾತಿ, ಯರಗುಂಟೆ ಈ ಗ್ರಾಮಗಳು ಈಗಲೂ ಅದೇ ಹೆಸರಿನಿಂದ ಕರೆಯಲ್ಪಡುತ್ತಿವೆ. ಕೋಟೇಶ ವಂಶದಲ್ಲಿ ಹುಟ್ಟಿದ ತಿಮ್ಮಣಾರಾಧ್ಯನ ಮಗ ಮಲ್ಲಣಾರಾಧ್ಯನು ಈ ಶಾಸನ ರಚಿಸಿದನೆಂದು ಹೇಳಿದೆ.

ಕ್ರಿ.ಶ. 1539ರ ಮತ್ತೊಂದು 17 ಸಾಲುಗಳ ಶಾಸನ ವಿಜಯನಗರ ಅಚ್ಯುತರಾಯ ಮಾಧವನ ಪ್ರೀತಿಗಾಗಿ ಬ್ರಾಹ್ಮಣರನ್ನು ಧನವಂತರನ್ನಾಗಿ ಮಾಡುವ ಆನಂದ ನಿಧಿಯೆಂಬ ಪುದವಟ್ಟು ಸ್ಥಾಪಿಸಿದ ವಿಷಯ ತಿಳಿಸುತ್ತದೆ. ಸಂಸ್ಕೃತ ಭಾಷೆಯಲ್ಲಿರುವ ಈ ಶಾಸನದ ಕಾಲ ಶಕ 1461ನೇ ವಿಕಾರಿ ಸಂ.ದ ಭಾದ್ರಪದ ಶುಕ್ಲ ದ್ವಾದಶಿ ಮಂಗಳವಾರ ಶ್ರವಣ ನಕ್ಷತ್ರ. ಆನಂದ ನಿಧಿ ಎಂದರೆ ಏನೆಂದು ಸ್ಪಷ್ಟವಾಗಿ ಗೊತ್ತಾಗದಿದ್ದರೂ ಇದೊಂದು ದೇವಾಲಯದ ಜೀರ್ಣೋದ್ಧಾರಕ್ಕೆ ಬ್ರಾಹ್ಮಣ ಸುವಾಸಿನಿಯರಿಗೆ ಭೋಜನಗಳನ್ನು ಏರ್ಪಡಿಸಲು ಮಾಡಿದ ನಿಧಿ ಎಂದು ತಿಳಿಯಬಹುದಾಗಿದೆ.

ಜಗಳೂರು ತಾಲೂಕು ಶಾಸನ

ಜಗಳೂರು ತಾಲೂಕು ಬಿಳಿಚೋಡು ಗ್ರಾಮದ ವಿಘ್ನೇಶ್ವರ ದೇವಸ್ಥಾನದ ಬಳಿ ಇರುವ 15 ಸಾಲುಗಳು ಮಾತ್ರ ಲಭ್ಯವಿರುವ ಒಂದು ತೃಟಿತ ಶಾಸನ ಕ್ರಿ.ಶ. 1537 ರಂದು ಅಂದರೆ ಶಕ 1459ನೇ ಹೇವಿಳಂಬಿ ಸಂ.ದ ಫಾಲ್ಗುಣ 10 ಆದಿತ್ಯವಾರ ಶ್ರೀಮನ್ಮಹಾರಾಜಾಧಿರಾಜ, ರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ಅಚ್ಯುತರಾಯರು ಪೃಥ್ವಿರಾಜ್ಯಾಂಗೈಯುತ್ತಿರಲು ಅವರ ಕಾರ್ಯಕರ್ತರಾದ ಮುರಾರಿರಾವುತರು ಬ್ರಂಹ್ಮಿ ಶೆಟ್ಟಿ ಮುಂತಾದ ಶೆಟ್ಟಿಗಳಿಗೆ ಕೊಟ್ಟ ದಾನದ ಬಗ್ಗೆ ತಿಳಿಸುತ್ತಿದ್ದು, ಶಾಸನ ಬಹಳಷ್ಟು ತೃಟಿತವಾಗಿರುವುದರಿಂದ ಹೆಚ್ಚಿನ ವಿಚಾರ ತಿಳಿದುಬರುತ್ತಿಲ್ಲ ಈ ಶಾಸನದಿಂದ ಅಚ್ಯುತರಾಯನ ಕಾರ್ಯಕರ್ತನ ಹೆಸರು ಮಾತ್ರ ತಿಳಿಯಬಹುದಾಗಿದೆ.

ಹರಪನಹಳ್ಳಿ ತಾಲೂಕು ಶಾಸನ

ಹರಪನಹಳ್ಳಿ ತಾಲೂಕು ಮುಸವನಕಲ್ಲಹಳ್ಳಿಯ ಕಲ್ಲೇಶ್ವರ ದೇವಸ್ಥಾನದ ಬಳಿಯಿರುವ ತೇದಿಯಿಲ್ಲದ 17 ಸಾಲಿನ ಶಾಸನ ವಿಜಯನಗರದ ಅಚ್ಯುತನ ಪ್ರಿತನಾದ ಅಣ್ಣಾಜಿ ಎಂಬುವನು ಯಜುಶಾಖೆಯ ಆಪಸ್ತಂಭ ಸೂತ್ರದ ಭಾರದ್ವಾಜ ಗೋತ್ರದ ಲಿಂಗಾಭಟ್ಟನ ಮಗ ಸಿಂಗಾಭಟ್ಟನಿಗೆ ಕಲ್ಲಹಳ್ಳಿ ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ.

ಈ ಎಲ್ಲಾ ಶಾಸನಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಕಂಡುಬರುತ್ತವೆ.

1. ಇಲ್ಲಿ ದೊರೆತ ವಿಜಯನಗರದ ಅರಸು ಅಚ್ಯುತದೇವರಾಯನ ಕಾಲದ ಎಲ್ಲಾ ಶಾಸನಗಳು ಅವನ ಕಾರ್ಯಕರ್ತರು, ಅಮರನಾಯಕರು ಹಾಕಿಸಿದ್ದಾಗಿದೆ.

2. ಈ ಎಲ್ಲಾ ಶಾಸನಗಳು ಶಿಲಾ ಶಾಸನಗಳೇ ಆಗಿದ್ದು ಶಾಸನದ ಆರಂಭದಲ್ಲಿ ಶ್ರೀಮದ್ ರಾಜಾಧಿರಾಜ ಶ್ರೀ ವೀರ ಪ್ರತಾಪ ಅಚ್ಯುತ ದೇವರಾಯಮಹಾರಾಯರು, ವಿದ್ಯಾನಗರ (ವಿಜಯನಗರ) ರಾಜ್ಯವನ್ನು ಆಳುತ್ತಿದ್ದಾಗ ಎಂದು ಉಲ್ಲೇಖಿಸಲಾಗಿದೆ.

3. ಎಲ್ಲಾ ಶಾಸನಗಳು ದಾನ ಶಾಸನಗಳಾಗಿದ್ದು ಬ್ರಾಹ್ಮಣರಿಗೆ ಕೊಟ್ಟ ಭೂದಾನವನ್ನು ಸೂಚಿಸುತ್ತವೆ.

4. ಈ ಶಾಸನಗಳಿಂದ ದಾವಣಗೆರೆ ಜಿಲ್ಲೆಯ ಬುಳ್ಳಾಪುರ ಎಂಬ ಗ್ರಾಮ ಅಚ್ಯುತರಾಯ ಪುರ ಎಂದು, ಕುಂದವಾಡ ಎಂಬ ಗ್ರಾಮ ಅಚ್ಯುತರಾಯೇಂದ್ರ ಮಲ್ಲಾಪುರ ಎಂದು ನಾಮಕರಣಗೊಂಡಿದ್ದು, ಅವು ಅಗ್ರಾಹಾರಗಳಾಗಿದ್ದವೆಂದು ತಿಳಿಯಬಹುದಾಗಿದೆ. ಕನ್ನಡದ ಹೆಸರಿನ ಗ್ರಾಮಗಳು ಸಂಸ್ಕೃತೀಕರಣಗೊಂಡಿದ್ದರ ಪ್ರಭಾವ ಶಾಸನಗಳಿಂದ ತಿಳಿಯಬಹುದಾಗಿದೆ.

5. ಶಾಸನದಲ್ಲಿ ಉಲ್ಲೇಖಿತ ಎಲ್ಲಾ ಗ್ರಾಮಗಳೂ ಈಗಲೂ ಅಸ್ಥಿತ್ವದಲ್ಲಿವೆ.

6. ದಾವಣಗೆರೆ 31 ಶಾಸನದಿಂದ ಅವಸರದ ದೀಕ್ಷಿತರಿಗೂ ದೇವರಸರಿಗೂ ಇದ್ದ ಸಂಬಂಧ ಸ್ಪಷ್ಟವಿರಲಿಲ್ಲ. ಆದರೆ ದಾವಣಗೆರೆ ಶಾಸನ 46 ಅವರ ಸಂಬಂಧದ ಕೊಂಡಿಯನ್ನು ತಿಳಿಸುತ್ತದೆ.

7. ವಿಜಯನಗರ ಕಾಲದಲ್ಲಿ ಕೇವಲ ಅಮರನಾಯಕರಾಗಿ ಬೇಡ ನಾಯಕರಲ್ಲದೆ ಬ್ರಾಹ್ಮಣರೂ ಅಮರ ನಾಯಕತ್ವ ಪಡೆದಿದ್ದರೆಂದು ಈ ಶಾಸನಗಳು ನಿರೂಪಿಸುತ್ತವೆ. 1530ರ ಕಾಲದ ಶಾಸನ ಚೆನ್ನಾ ಭಂಡಾರದ ತಿಮ್ಮರಸನ ಮಕ್ಕಳು ನಾರಾಯಣ ದೇವರು, 1531ರ ಕಾಲದ ಶಾಸನ ಅವಸರ ದೀಕ್ಷಿತರು ವಿಜಯನಗರದ ಅಮರನಾಯಕರಾಗಿದ್ದರೆಂದು ತಿಳಿಸುತ್ತವೆ. (ಈಗಲೂ ಹರಿಹರದ ಬ್ರಾಹ್ಮಣ ಕುಟುಂಬಗಳು ಉಪನಾಮ ನಾಯಕರೆಂದು ಕರೆದುಕೊಳ್ಳುತ್ತಿದ್ದಾರೆ.)

8. ಅಚ್ಯುತರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ಕ್ಷೋಭೆಗೆ ಒಳಪಟ್ಟಿದ್ದರೂ ಅವುಗಳ ಪರಿಣಾಮ ಈ ಜಿಲ್ಲೆಯ ಮೇಲಾದಂತೆ ಕಂಡುಬರುವುದಿಲ್ಲ.

9. ಮಲ್ಲಣಾರಾಧ್ಯ ಎಂಬುವನು 1538ರಲ್ಲಿ ಒಂದು ಶಾಸನ ರಚಿಸಿದ್ದು ಜಿಲ್ಲೆಯ ಪ್ರಾಚೀನ ಕವಿಯೊಬ್ಬನನ್ನು ಇದರಿಂದ ಗುರುತಿಸಿದಂತಾಗಿದೆ.

10. 1531ರ ಕಾಲದ ಶಾಸನ, ಆ ಶಾಸನ ತಿದ್ದಿದ ಅಕ್ಕಸಾಲೆ ನಿರೋಜನ ಮಗ ತಿಪ್ಪೋಜನಿಗೂ ಭೂದಾನ ನೀಡಿದ್ದನ್ನು ತಿಳಿಸುತ್ತದೆ.

ಆಧಾರ ಗ್ರಂಥಗಳು

1. ಬಿ.ಎಲ್.ರೈಸ್ (ಸಂ), *ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–11*, ಚಿತ್ರದುರ್ಗ, ಮೈಸೂರು ಸರ್ಕಾರ, ಬೆಂಗಳೂರು, 1903, ಶಾಸನ: ದಾವಣಗೆರೆ–28, 31, 46, 27, 24, ಜಗಳೂರು–4

2. ದೇವರಕೊಂಡಾರೆಡ್ಡಿ (ಸಂ), *ಕನ್ನಡ ವಿಶ್ವವಿದ್ಯಾನಿಲಯ ಶಾಸನ ಸಂಪುಟ–1*, ಬಳ್ಳಾರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998, ಶಾಸನ: ಹರಪನಹಳ್ಳಿ–214)

3. ಹೆಚ್.ಎಂ. ಶಂಕರ ನಾರಾಯಣ, *ಹರಿಹರದ ದೇವಾಲಯ*, ಶಾರದಾ ಮಂದಿರ, ಮೈಸೂರು, 1982.

4. ಹಾ.ಮಾ. ನಾಯಕ (ಸಂ), *ಕನ್ನಡ ವಿಷಯ ವಿಶ್ವಕೋಶ* (ಕರ್ನಾಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1979.

5. ಅಂಬಳಿಕೆ ಹಿರಿಯಣ್ಣ (ಸಂ), ಅದೇ, ಇತಿಹಾಸ ಮತ್ತು ಪುರಾತತ್ವ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1979.

6. ಎ.ಎಸ್. ನಂಜುಂಡ ಸ್ವಾಮಿ, *ವಿಜಯನಗರದ ಇತಿಹಾಸ*, ಸಮಾಜ ಪುಸ್ತಕಾಲಯ, ಧಾರವಾಡ, 1999.

05. ಹಾನುಗಲ್ಲು ತಾಲೂಕಿನ ವಿಜಯನಗರದ ಅರಸರುಗಳ ಶಾಸನಗಳು

ಹನುಮಾಕ್ಷಿ ಗೋಗಿ

ಕರ್ನಾಟಕದ ಪ್ರಸಿದ್ಧ ಅರಸು ಮನೆತನಗಳಲ್ಲಿ ಒಂದಾದ ವಿಜಯನಗರದ ಅರಸರು ಇಂದಿನ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡುಗಳ ಬಹುಭಾಗಗಳನ್ನು ಆಳಿದ್ದಾರೆ. ಇವರನ್ನು ಕುರಿತು ಹಾನುಗಲ್ಲು ತಾಲೂಕಿನಲ್ಲಿಯೂ 13 ಶಾಸನಗಳು ದೊರೆಯುತ್ತಿದ್ದು, ಅವುಗಳಲ್ಲಿ 1 ಮಾತ್ರ ಪ್ರಕಟಿತ ಶಾಸನವಾಗಿದೆ. 3 ಹೊಸ ಶಾಸನಗಳಾಗಿದ್ದು, 9 ಅಪ್ರಕಟಿತ ಶಾಸನಗಳಾಗಿವೆ. ಕಾರಣ, 12 ಶಾಸನಗಳ ಪಠ್ಯವು ಇಲ್ಲಿ ಮೊದಲ ಬಾರಿಗೆ ಪ್ರಕಟಗೊಳ್ಳುತ್ತಿವೆ. ಇವುಗಳಲ್ಲಿ 6 ದಾನ ಶಾಸನಗಳು, 3 ವೀರ-ಮಾಸ್ತಿ ಕಲ್ಲು, 4 ನಿಷಧಿ ಶಾಸನಗಳು ಸೇರಿವೆ. ಹೀಗೆ ವೈವಿಧ್ಯಮಯವಾದ ವಿಷಯಗಳನ್ನು ಈ ಶಾಸನಗಳು ಒಳಗೊಂಡಿವೆ ಎಂಬುದನ್ನು ಗಮನಿಸಬಹುದು. ಇವುಗಳಲ್ಲಿ ಮೊದಲನೆಯ ಹರಿಹರನ 1, ಎರಡನೆಯ ಹರಿಹರನ 5, ಪ್ರೌಢ ದೇವರಾಯನ 1, ನರಸಿಂಹರಾಯನ 1, ಅಚ್ಯುತದೇವರಾಯನ 2 ಶಾಸನಗಳಿವೆ. ಕ್ರಿ.ಶ.1336 ರಿಂದ 1535ರವರೆಗಿನ ಶಾಸನಗಳಿವೆ. ಎರಡು ಶಾಸನಗಳಲ್ಲಿ ಅರಸನ ಹೆಸರಿಲ್ಲದಿದ್ದರೂ ಅಕ್ಷರಗಳ ರೂಪ ಸಾದೃಶ್ಯದಿಂದ ವಿಜಯನಗರದ ಅರಸರ ಶಾಸನಗಳೆಂಬುದು ಸ್ಪಷ್ಟವಾಗಿದೆ. ಅಲ್ಲಾಪುರದ ಶಾಸನ ಮಾತ್ರ ಗದ್ಯ-ಪದ್ಯಗಳಿಂದ ಕೂಡಿದ್ದು, ಇನ್ನುಳಿದವುಗಳೆಲ್ಲ ಗದ್ಯ ಶಾಸನಗಳಾಗಿವೆ. ತ್ರುಟಿತ ಶಾಸನಗಳ ಸಂಖ್ಯೆ ಹೆಚ್ಚಿದೆ.

1

ಅರಿಷಿಣಗುಪ್ಪಿ

ಹನುಮಂತ ದೇಗುಲದ ಎಡಭಾಗದಲ್ಲಿ ನಿಲ್ಲಿಸಿದ ಶಾಸನ ಕ್ರಿ.ಶ. 1559

ARSIE, 1945-46, No. 210 ಅಪ್ರಕಟಿತ

ವಿಜಯನಗರದ ಅರಸರ ಕಾಲದ ಅಕ್ಷರಗಳಲ್ಲಿ ಬರೆದ (1) ಹನುಮಂತ – ಅಂ, (2) ಈಶ್ವರ – ಅಲ್ಲಾ, (3) ರಾಮಯ್ಯದೇವರು (ಬೈ), (4) ...... (5) ನರಸಿಂಹ – ಮ, (6) ರಾಮೇಶ್ವರ – ಹೊಂ. **ಈ ದಾನ ಶಾಸನದಲ್ಲಿ ಲಖರಸಯ್ಯಗಳಿಗೆ ಪುಣ್ಯವಾಗಲೆಂದು ಬೆಳುವತ್ತಿಯ ಲಿಂಗರಸಯ್ಯನೆಂಬಾತ ಅರಿಷಿನಗುಪ್ಪೆ ಹನುಮಂತದೇವರಿಗೆ ಹುಗ್ಗಿ ಮಹಾನವಮಿಗಳಲ್ಲಿ ಪ್ರತಿಫಲವಿಲ್ಲದೆ ಬಿಟ್ಟಿ ಕೆಲಸ ಮಾಡಲು ಒಪ್ಪಿಕೊಂಡ ವಿಷಯ ಹೇಳುವಂತಿದೆ.** ಫಲಶ್ರುತಿಯೊಂದಿಗೆ ಶಾಸನ ಮುಕ್ತಾಯಗೊಳ್ಳುತ್ತದೆ.

15-16ನೆಯ ಶತಮಾನದಲ್ಲಿ ಬರುವ ಸಿದ್ಧಾರ್ಥಿ ಸಂವತ್ಸರವು 1439, 1499ರಲ್ಲಿ ಬರುತ್ತಿದ್ದು ಉಳಿದ ವಿವರಗಳು ಹೊಂದುವುದಿಲ್ಲ. ಆದರೆ ಕ್ರಿ.ಶ. 1559ರ ಡಿಸೆಂಬರ್ 29ರಂದು ಉಳಿದ ವಿವರಗಳು ಹೊಂದುತ್ತವೆ.

1 ಶ್ರೀ ಶುಭಮಸ್ತು । ಸಿ[ದ್ಧಾರ್ಥಿ ಸಂ*]-
2 ವತ್ಸರದ ಪುಷ್ಯ [ಶು 1*]
3 ಶುಕ್ರವ(ವಾ)ರದ । ಮಕ[ರ ಸಂ*]-
4 ಕರಾಂತಿ ಪುಂಣ್ಯ
5 ಆದಲೂ । ಲಖರಸಯ್ಯಗ-
6 ಳಿಗೆ ಪುಂಣ್ಯವಾಗಲೆಂ-
7 ದು । ಬೆಳುವತ್ತಿಯ ಲಿಂಗ-
8 ರಸಯಗಳೂ ಅರಿಸಿನ-
9 ಗುಪ್ಪೆಯ ಹನುಮಂತದೇವರಿ-
10 ಗೆ । ಹುಗ್ಗಿ ಮಹಾನವಮಿಗಳ-

11 ಲು ಬಿಟಿ ಬೆಸವನೂ . .
12 ಲವೆಂದು ಬಿಟ ವಾಸಾ
13 ಆರು ತಪ್ಪಿದರೂ ವಾ–
14 ಣರಾ(ರಣಾ)ಸಿಯಲು ತಂಮ ತಂ(ದೆ)
15 ತಾಯ ಕೊಂದ ಪಾತಕ[ದ*]–
16 ಲ್ಲಿ ಬ್ರಂಹ್ಮರ ಕೊಂದ ಪಾ(ಪ)–
17 ಕೆ ಹೋಹರು । ಮಂಗಳ

2

ಅಲ್ಲಾಪುರ

ಕಂತಿಸ್ವಾಮಿ ಮಠದ ಮುಂದಿರುವ ಶಾಸನ ಕ್ರಿ.ಶ.1399

ARSIE, 1946-47, No. 199 ಅಪ್ರಕಟಿತ

ಶಾಸನದ ಮೇಲೆ 12" ಉದ್ದ 16" ಅಗಲದ ನಂದಿಯಿದೆ. ಕೆಳಗಿನ 43" ಎತ್ತರ 15" ಅಗಲದ ಕರಿಕಲ್ಲಿನಲ್ಲಿ ಈ ಶಾಸನವಿದೆ.

ವಿಜಯನಗರದ ಚಕ್ರವರ್ತಿ ಇಮ್ಮಡಿ ಹರಿಹರನ ಕಾಲದ ತ್ರುಟಿತ ದಾನ ಶಾಸನವಿದಾಗಿದ್ದು, ಸೋಮೆನಾಯಕಿತಿ ಕುಂದೂರ 30ರಲ್ಲಿಯ ಎತ್ತಿಹಳ್ಳಿಯನ್ನು (ಈಶ್ವರಪುರ) ದಾನ ನೀಡಿದ ಉಲ್ಲೇಖವಿದೆ. ಇದರಲ್ಲಿ ಈಶ್ವರಯ್ಯ, ಪರ್ವತಯ್ಯ, ಮಾಳಪಯ್ಯ, ರೇವಣಯ್ಯ ಎಂಬ ಹೆಸರುಗಳು ಕಂಡುಬರುತ್ತವೆ. 'ನೆಲದ ಮನೆಯ ನಿದಾನದಂತೆ ತಿಲದ ಮರೆಯ ತೈಲದಂತೆ' ಈಶ್ವರಯ್ಯ ಇದ್ದನೆಂದು ಹೇಳುತ್ತದೆ.

1 @ ಶ್ರೀ ನಮಸ್ತುಂಗ ಶಿರಸ್ತುಂಬಿ ಚಂದ್ರ ಚಾ–
2 ಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ–
3 ಸ್ತಂಭಾಯ ಸಂಭವೇ @ ಸ್ವಸ್ತಿ ಸಮಸ್ತ ಭುವನಾಸ್ರಯ ಶ್ರೀ ಪ್ರಿಥ್ವೀವಲ್ಲಭ
4 ಮಹಾರಾಜಾಧಿರಾಜ ರಾಜ ಸಿರೋಮಣಿ ಶ್ರೀ ವೀರಹರಿಹರರಾಯ ಹೇಮಕೂಟ
5 ಹಸ್ತಿನಾವತಿ ವಿಜ್ಯಾನಗರಿಯ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯು–
6 ತ್ತಂಮಿರೆ [।*] ತತ್ಪಾದಪದ್ಮೋಪಜೀವಿ ॥ ವೃ ॥ ಗಂಡರ ಗಂಡ ಬಿಂದಾಮಱ ದಿಕ್ಕರಿ–
7 ವ ಮಹಾಪ್ರಚಂಡನುದ್ದಂಡರ ಗಂಡನುಂ ಕರದಾಳಿಂಡೆಯನಾಡುವ
8 ಕಾಲಭೈರವನ್ಮಂಡಲ ಭೂಪರಾಳ್ವ ಧರೆಯೊಳೆಂಬ ಗಡಿಯಂಕ ಭೀಮನಾ
9 ರ್ದ್ದಂಡರು ಕಾವದೇವವೆನಿಕುಂ ನೆಱೆ ಮಾದನ ಸೋಮನೊಪ್ಪುಗುಂ ॥ ಸೋಮನಾ–
10 ಯಕನ ಅರಸಿಯ ಗುಣ ಪ್ರಭಾವಮೆಂತೆಂದರೆ ॥ ಕಂ ॥ ಪತಿಹಿತ–
11 ವೆ ದಾನಗುಣನಿಧಿ ಅತಿಸಯ ಗುರುಭಕ್ತಿ ಸಿವ ಪಾದಾದ್ವಯಂ ಭಾಳಾ–
12 ನ್ವಿತೆಯೆನಿಪ ಸೋವಲವ್ವೆಯ ಕ್ಷಿತಿಯೊಳು ಪೊಗಳದರಾರು । ಸುಗು–
13 ಣಾನ್ವಿತೆಯಂ ॥ ಆ ಸೋಮೆನಾಯಕನ । ಸೋಮೆನಾಯಕಿತಿಯ ಕು–
14 ಮಾರರ ಗುಣಪ್ರಭಾವಮೆಂತೆಂದರೆ ॥ ವ್ರಿ ॥ ಚಾಪದೊಳಿಕ್ಕಿ ಕಟ್ಟಿದ
15 ಶಸ್ತ್ರದೊಳಂದಿದಿರಾದ ವೈರಿಯಂ ಕೋಪವನಾಚ್ಚುಗ . . ದರ
16 ನಿಟ್ಟೆಲುವಂ ಮುಱಿದೊತ್ತಿ ವೀರದಿಂ ರೂಪನೆ ತೋಱಿ ವಂ . . ಜನಕಂ ಜೀಮೂ–
17 ತವಾಹನಂ . . ಶಾಂತನುಂ ಬಾಮುರೆ ವೀರನಪ್ರತಿಮನೊಪ್ಪಿದನಗ್ಗದ

18 ಡಾಕೆನಾಯಕಂ ॥ ಕಂ ॥ ಕೈಯಲಿ ಬಿಲ್ಲ ಪಿಡಿದೀ ಹನೊಯ
19 ಕೈಲಿತ್ತ ನಾಗನೆಂಬುದು ನಾಮಂ ಮುಯ್ಯಂನಾತನನುಜಂ ಸಯ
20 ಸಱಸಮಯ್ಯನಾಯಕಂ ಗು . . . ಟ್ಟಿಗಳೂ ॥ ವೃ ॥ . ವಗೆ
21 ಸ ಆಂನಯವಾರಂದರಾ . . . .
22 ಱದಾಹ ನಕ್ಷತ್ರದಲ್ಲಿಯಂತೆಂದಡೆ ಮತ್ತವಾಗಿಯಂ ತಾಜರ
23 . . . .
24 . . . . . ನುದನ ಪಿಡಿದು ಧರಿತ್ರಿಯೊಳಱದನಗ್ಗದ . ಗ್ರದಲಿದ್ದು
25 . . ಮಗೆ ಪಾಯಂತು ಪರಮ ಮುನೀಶ್ವರ ಇಶ್ವರಯ್ಯನು ಮು-
26 ಗಿಲ ಮಱಯ ಕಲ್ಪಾಂತಕ ತ್ರಿನಾತಕುಲಕುಂ ಮಱ ಮಾಡಿ ಪಿರಿಯ-
27 ಯೊಕ್ಕು ॥ ಕಂ ॥ (ಪಠ್ಯ ಮುಂದುವರೆದಿದೆ)

3

ಕಲಕೇರಿ

ಹನುಮಾನ್ ದೇವರ ಗುಡಿಯ ಪಕ್ಕದಲ್ಲಿ ನಿಲ್ಲಿಸಿದ ವೀರ ಮಾಸ್ತಿಕಲ್ಲು (ಸು. 14ನೆಯ ಶತಮಾನ)

ಹೊಸತು

50" ಎತ್ತರ 20" ಅಗಲದ ಕರಿಕಲ್ಲಿನ ಶಾಸನವಿದಾಗಿದೆ. 1ನೆಯ ಸ್ತರದಲ್ಲಿ ವೀರನೊಬ್ಬ ಖಡ್ಗವನ್ನು ಬಿಲ್ಲು-ಬಾಣ ಹಿಡಿದ ವೀರನೊಬ್ಬನ ಹೊಟ್ಟೆಯಲ್ಲಿ ಚುಚ್ಚಿದ್ದಾನೆ. ಚುಚ್ಚಿದ ವೀರನ ಹಿಂದೆಯೂ ಒಬ್ಬ ವೀರನಿದ್ದಾನೆ. ಚುಚ್ಚಿಸಿಕೊಂಡ ವೀರನ ಹಿಂದೆಯೂ ಬಿಲ್ಲು ಬಾಣ ಹಿಡಿದ ಒಬ್ಬ ವೀರನಿದ್ದಾನೆ. ವೀರನ ಕಾಲ ಕೆಳಗೆ ಶವವೊಂದು ಬಿದ್ದಿದೆ. 2ನೆಯ ಸ್ತರದಲ್ಲಿ 6 ಸಾಲುಗಳ ಶಾಸನವಿದೆ. 3ನೆಯ ಸ್ತರದಲ್ಲಿ ಅಪ್ಸರೆಯರು ವೀರ ಮತ್ತು ಆತನ ಹೆಂಡತಿ ಕುಳಿತ ಪಲ್ಲಕ್ಕಿಯನ್ನು ಹೊತ್ತೊಯ್ಯುತ್ತಿದ್ದಾರೆ. 4ನೆಯ ಸ್ತರದಲ್ಲಿ ವೀರ ಮಾಸ್ತಿ ದಂಪತಿಗಳು ಕೈಜೋಡಿಸಿ ಒಬ್ಬರನ್ನೊಬ್ಬರು ನೋಡುತ್ತ ಮಂಟಪದಲ್ಲಿ ಕುಳಿತಿದ್ದು, ಮಂಟಪದ ಎಡಬಲಗಳಲ್ಲಿ ಸೊಂಟದ ಮೇಲೆ ಕೈ ಇಟ್ಟುಕೊಂಡು ಒಬ್ಬೊಬ್ಬ ಅಪ್ಸರೆಯರು ಮಂಟಪವನ್ನು ಹಿಡಿದು ನಿಂತಿದ್ದಾರೆ. 5ನೆಯ ಸ್ತರದಲ್ಲಿ ವೀರ ಮತ್ತು ಮಾಸ್ತಿಯರು ಕೈಲಾಸದಲ್ಲಿ ಇರುವುದನ್ನು ಸೂಚಿಸುವಂತೆ ಕೈಮುಗಿದು ಕುಳಿತಿದ್ದು, ಪೂಜಾರಿ ಧೂಪಾರತಿ ಹಿಡಿದು ಶಿವಲಿಂಗವನ್ನು ಪೂಜಿಸುತ್ತಿದ್ದಾನೆ. ಶಿವಲಿಂಗದ ಎದುರಿಗೆ ಕುಳಿತ ನಂದಿಯಿದೆ. ಮೇಲೆ ಎಡಬಲಗಳಲ್ಲಿ ಸೂರ್ಯ-ಚಂದ್ರರಿದ್ದಾರೆ. ಅಕ್ಷರಗಳು ಸರಿಯಿಲ್ಲದೇ ಇರುವುದರಿಂದ, 4-5ನೆಯ ಸಾಲುಗಳ ಪಠ್ಯ ಅಸ್ಪಷ್ಟವಾಗಿದೆ. ಕಾರಣ ವಿವರಗಳೂ ಸ್ಪಷ್ಟವಿಲ್ಲ.

ವಿಜಯನಗರದ ಅರಸು ಹರಿಹರದೇವರಾಯನ ಕಾಲದಲ್ಲಿ, ಮಂಗಪ್ಪ ದಣ್ಣಾಯಕರು ಮತ್ತು ಕುಮಾರ ಹರಿಹರರಾಯರ ಗೋಗ್ರಹಣದಲ್ಲಿ ಸೋಮನೆಂಬ ವೀರನೊಬ್ಬನು ಮಡಿದುದನ್ನು ತಿಳಿಸುತ್ತದೆ.

"ಸ್ವಭಾನು ಸಂವತ್ಸರದ ಭಾದ್ರಪದ ಶುದ್ಧ" ಎಂಬ ಮಿತಿಯು ಕ್ರಿ.ಶ.1343ರ ಆಗಸ್ಟ್‌ನಲ್ಲಿ ಮತ್ತು 1403ರ ಆಗಸ್ಟ್‌ನಲ್ಲಿ ಬರುತ್ತದೆ.

1 ಶ್ರೀಮನ್ಮಹಾ ರ(ರಾ)ಜಾಧಿರಾಜ ಪರಮೇಸ್ವ(ಶ್ವ)ರ ಶ್ರೀಮ ಹರಿಹರರಾ-
2 ಯರು ಸುಖರಾಜ್ಯಂ ಗೆಯಿಉತ್ತಮಿರೆ ॥ ಶ್ರೀಮಂನ್ಮಹಾ ಪ್ರಥ(ಧಾ)ನಂ ಮಂಗ-
3 ಪ್ಪ ದಣ್ಣಾಯ[ಕ]ರು ಕುಮಾರ ಹರಿಹರರಾಯನ ತುರುವ ತಳುತಲಿರೆ ಜಾನ-
4 ಯ ಮೊರಿಜ ರಾಜಮನಸಂಖ್ಯತ್ವನು ಸ್ವಭಾನು ಸಂವತ್ಸರದ ಭಾದ್ರಪ-
5 ದ ಶುದ್ಧ ಮಹೂರಂ ಸಾರಿ ನಳತುದ ತಾಖರಿ ಬಂದನು ಯನಿಬಮ ಭಿವಪ್ಪ
6 ಸೋಮಂ ಪಡೆದನೂ ॥

4

ತಿಳವಳ್ಳಿ

ಬಸವಣ್ಣನ ದೇವಾಲಯದಲ್ಲಿಯ ವೀರ–ಮಾಸ್ತಿಕಲ್ಲು (ಕ್ರಿ.ಶ. 1449)

ARSIE, 1945-46 No. 31 — *K.I.* V. No.49

ವಿಜಯನಗರದ ಅರಸನೊಬ್ಬನು ಆಳುವಾಗ, ಗೋವೆಯ ಹೊನ್ನಪ್ಪರಸನ ರಾಜ್ಯ, ಚಂದ್ರಗುತ್ತಿ, ನಾಗರಖಂಡೆ, ಎಡೆಬೊಳಲು, ದೇವರ ಆಚಾರ್ಯ್ಯ ಶಿವರಾಮ ಒಡೆಯ, ವೀರ ಮಾಸತಿ ತಿಳವಳ್ಳಿಯ ಭೈರಗೊಂಡನ ಸುಪುತ್ರ, ಅಂಣನೃಪಾತ್ಮಜೆ, ಭೈರವಾಂಕನ ಕಾಂತೆ ಎಂಬ ಶಬ್ದಗಳು ಮಾತ್ರ ಕಾಣಿಸುತ್ತವೆ. ಅತ್ಯಂತ ತ್ರುಟಿತಗೊಂಡಿರುವುದರಿಂದ ಅರ್ಥ ಸ್ಪಷ್ಟವಾಗುವುದಿಲ್ಲ.

"ಶಕವರುಷ 1370 ನೆಯ . . . [ಷಾ]ಢ ಬ 11 ಮಂಗಳವಾರ ಸೂರ್ಯ್ಯ ಉದೆಯದಲೂ" ಎನ್ನುವ ದಿನಾಂಕವು ಕ್ರಿ.ಶ.1449ರ ಜುಲೈ 15ಕ್ಕೆ ಹೊಂದುತ್ತದೆ.

1 *ಚಂದ್ರಾರ್ಕ್ಕತಾರಕ ಚಾಮರೇ ತ್ರಯಿ(ತ್ರೈ)ಲೋಕ್ಯ ನಗರಾರಂಭಂ ಮೂಲ ಸ್ತ[ಂ]ಭಾಯ ಶಂಭವೇ*]
2 *ಮಂಡಳೇಶ್ವರಂ ಅರಿರಾಯವಿಭಾಡ ಭಾಷೆಗೆ ತಪು(ಪ್ಪು)ವ ರಾಯರ ಗಂಡ ತ್ರಿಣ . . . . .
3 [ರಾ]ಯರ ಗಂಡ ಗಜಬೇಂಟೆಕಾಱ ಪ್ರಉಡ(ಪ್ರೌಢ) ಪ್ರತಾಪರಾಯ[ರಸರು] . . . .
4 ಪ್ರತಾಪ ಗೋವೆಯ ಹೊಂನಪ(ಪ್ಪ)ರಸನ ರಾಜ್ಯಂ ಚಂದ್ರಗುತ್ತಿಯ . . . . . .
5 ಸುವನ(ರ್ಣ)ೞ ನಾಗರಖಂಡೆಯ ಕೆಯಿ ಎಡೆಬೊಳಲು ಕಟುಳದ ಬ[ಯ]
6 ಥ . ದೇವರ ಆಚಾರ್ಯ್ಯ[ಶಿವರಾಮ ಒ]ಡೆಯ ಕಾರುಂಣ್ಯ ಸೀಮೆ ಕೊಂ–
7 ಗಂಡ ಗಡಿಯಂಕ ಸಿಂಹ್ವ ತಿಳವಳಿ(ಳ್ಳಿ)ಯ ಭುರಗೊಂಡನ ಸುಪುತ್ರ ಕುಲದೀಪಕ ಚಿಕೇ . . . .
8 ಯ ಕುಲ ಪ್ರಸಿಧ(ದ್ಧ)ನು ॥ ಸ್ವಸ್ತಿ ಶ್ರೀ ಜಯಾದ್ಬುದಯ ಶಕವರುಷ 1370 ನೆಯ
9 . . . [ಷಾ]ಢ ಬ 11 ಮಂಗಳವಾರ ಸೂರ್ಯ್ಯ ಉದೆಯದಲೂ ಭೈರ[ವ]
10 . . . ರೆಯಾ[ಸಿ]ಸ್ಯಾಸಾಡ ಕ್ರುಷ್ಣಪಕ್ಷಕೆ ಏಕಾದಸ್ಯಾಂ ಭೂಮವಾರೇ ಭುರರಸ[ಪ್ಪ]
11 . . . ಭವ ಭೈರವನಾ ತೇಜ ॥ ಸಾಹಸ ಶಕ್ತಿ ಪರಾಕ್ರಮ ರಾಜಮ(ವೈ)ರಿ ಪಂನಗ ವೈನ[ತೇಯ]
12 . . . ಕೀರ್ತಿ ನಿ . . . ದದಾನಿ ಭೋಜನೆಂದರ್ತ್ಥಿಜನಂಗಳುಂ ಪೊಗಳೆ ಭೈ .
13 . . . ॥ ಅಧಿಕ ಮಾತಿಗನೀತೆರದ . . . . ಚೆಂ ನಲಿದುದೊ ಬೇಡುವೆ ಯಾಚ . .
14 . . . . . ವಿದ . . ಟಿಗಗ್ಗಳದ ಸಾಹಸ ಬಣ್ಣಿಗೆ[ಕುಸಂ]ನಲಿದುದಿಂ . .
15 . . ನಿ . . ಕಸ ಸುಭ(ಚ)ರಿತ್ರರುಂ ॥ ನುಡಿದರಡನಾಡಿ ತ[ಪ್ಪು]ವ
16 . . . ರ ಗಂಡಂ ನುಡಿದದೆ ರಾಮನ ಬಾಣಂ ಕಡುಗಲಿ ಗಡಿಯ್ಕಂ ಸಿ . . .
17 . . . ನ ಪುಲಿಗೆಱಿಯ ಸೋಮನುನುಂನತ ಶಿವರಾಮ ಚರಣ ಸರ . . . .
18 . . . ಭೈರವ . . ನನ ವಿಮುಕ್ತ [ಗ]ಣದ ಪ್ರಭು ಕುಲತಿಳಕಂ ॥ 5 ॥ ಹ–
19 . . ರಿತ್ರ[ಜ]ತಿ ಅಂಣನೃಪಾತ್ಮಜೆ ಅ"[ಶ] . . ಭೈರವಾಂಕನ .
20 . . . . ಕೆಯುಂ ॥ 6 ॥ ಮಂ[ಗ]ಳಂದಾದಿನಾಥನ ತುಂಗಭುಜ . ದಿ[ಪು]ತ್ರ . .
21 . . . ಮಾಲಿತಿ [ಸಂ]ನಿತನು ಹಾರ ಭೈರವಾಂಕನ ಕಾಂತೆ ॥ 7 ॥ ಮಂಗಳ ಮಹಾ[ಶ್ರೀ ಶ್ರೀ*]

5

ಬಾಳಂಬೀಡ

ಬಸದಿಯ ಕಟ್ಟೆಯ ಮೇಲಿನ ನಿಷಧಿಗಲ್ಲು (ಕ್ರಿ.ಶ.1400)

ಹೊಸತು

35" ಉದ್ದ 17" ಅಗಲದ ಕರಿಕಲ್ಲಿನಲ್ಲಿ ಈ ಶಾಸನವನ್ನು ಕಂಡರಿಸಲಾಗಿದ್ದು, ಮೊದಲ ಪಟ್ಟಿಕೆಯಲ್ಲಿ ಸುಖಾಸೀನನಾದ ಧ್ಯಾನಾಸಕ್ತ ತೀರ್ಥಂಕರ ಮೂರ್ತಿ ಮುಕ್ಕೊಡೆ ಸಹಿತ ಇದ್ದು, ಎಡ ಬಲಗಳಲ್ಲಿ ಚಾಮರಗಳಿವೆ. ಎರಡನೆಯ ಪಟ್ಟಿಕೆಯಲ್ಲಿ

ಶಾಸನವಿದ್ದು, ಮೂರನೆಯ ಪಟ್ಟಿಕೆಯಲ್ಲಿ ಎಡಭಾಗದಲ್ಲಿ ಮುಕ್ಕೊಡೆ ಸಹಿತ ತೀರ್ಥಂಕರ ಪೀಠದ ಮೇಲೆ ಕುಳಿತಿದ್ದು, ಶಿಷ್ಯ ಕೈಮುಗಿದು ಕುಳಿತಿದ್ದಾನೆ. ನಾಲ್ಕನೆಯ ಪಟ್ಟಿಕೆಯಲ್ಲಿ ಮತ್ತೆ ಶಾಸನವಿದ್ದು, ಐದನೆಯ ಪಟ್ಟಿಕೆಯಲ್ಲಿ ಬಹುಶಃ ಗುರು ಶಿಷ್ಯರಿದ್ದು ಒಡೆದಿದೆ. ರುಂಡಗಳು ಮಾತ್ರ ಕಾಣಿಸುತ್ತವೆ. ಬಹಳಷ್ಟು ಕಚ್ಚುಗಳು ಬಿದ್ದಿರುವುದರಿಂದ ಶಾಸನ ಅಸ್ಪಷ್ಟವಾಗಿದೆ.

ಮಹಾಮಂಡಳೇಶ್ವರ ವೀರ ಹರಿಹರ ರಾಜ್ಯವಾಳುತ್ತಿರುವಾಗ, ವರವಾಡದ ಸೂರಿಸೆಟ್ಟಿಯರು ದೇಸಿಯ ಗಣದಲ್ಲಿ ಅಗ್ರಗಣ್ಯರೆನಿಸಿದ ಆರೆಯ ಚಂದ್ರ ಸಿದ್ಧಾಂತಿ ಪಂಡಿತರಿಂದ ಸಲ್ಲೇಖನ ವ್ರತ ಸ್ವೀಕರಿಸಿ ಸ್ವರ್ಗಸ್ಥರಾದರೆಂದು, ಗೊಂಕಿಯ ಸಿಂಗಣಗೌಡರು ನಿಸ್ತಿಕೆಯ ಮಾಡಿಸಿದರೆಂದು ತಿಳಿಸುತ್ತದೆ.

ಶಾಸನದ 3–4 ನೆಯ ಸಾಲುಗಳಲ್ಲಿ ಬರುವ "1327ನೆಯ ವಿಕ್ರಮ ಸಂವತ್ಸರ . . . ಬ 5ನೆಯ ಶುಕ್ರವಾರದಲು" ಎಂಬ ಮಿತಿಯು ಅಪೂರ್ಣವಿದ್ದು, ಶಕವರ್ಷ 1322ರಲ್ಲಿ ವಿಕ್ರಮ ಸಂವತ್ಸರವಿದ್ದು ಆಶ್ವಿನ ಬಹುಳ 5ನೆಯ ಶುಕ್ರವಾರವಾಗಿದ್ದರೆ, ಅಕ್ಟೋಬರ್ 8ನೆಯ ತಾರೀಖು 1400ನೆಯ ಕ್ರಿಸ್ತ ವರ್ಷಕ್ಕೆ ಸರಿಹೊಂದುತ್ತದೆ.

ನಾಲ್ಕನೆಯ ಸ್ತರ

1 @ ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಂ ಜೀಯಾ–
2 ಯ ತ್ರೈಲೋಕಸ್ಸ[ನಾಥಸ್ಯ*]ಶಾಸನಂ ಜಿನಸಾ(ಶಾ)ಸನಂ ॥ ಸಕಲೋ–
3 . . . 1327ನೆಯ ವಿಕ್ರಮ ಸಂವತ್ಸರ
4 . . . ಬ 5ನೆಯ ಶುಕ್ರವಾರದಲು

ಎರಡನೆಯ ಸ್ತರ

5 ಸ್ವಸ್ತಿ ಶ್ರೀಮನ್ಮಹಾಮಂಡಳೇಸ್ವ(ಶ್ವ)ರಂ ಅರಿರಾಯ ವಿಭಾಡ ಭಾಸೆ(ಷೆ)ಗೆ ತ–
6 ಪ್ಪುವ ರಾಯರ ಗಂಡ ಶ್ರೀ ವೀರ ಹರಿಹರ ರಾಜ್ಯಂಗೆಯ್ಯುತ್ತಮಿರೆ ॥ ಅ–
7 ಕಾಲ ವರವಾಡದ ಸೂರಿಸೆಟ್ಟಿಯರು ನಿರ್ವ್ವೇಗ ಪರಾಯಣರಾಗಿ
8 ದೇಸಿಯ ಗಣಾಗ್ರಗಣ್ಯರುಮಪ್ಪ ಆರೆಯ ಚಂದ್ರಸಿದ್ಧಾಂತಿ ಪಂಡಿತರು ದ–
9 . . ಹರಿಸಿ ದೇವತಿ ನಿವಾಸಿ ಮುಗುಳಿ ವಿ . ಲೋಕ್ಯ ಗೋಮಿನಿ ಗಣಧರರುತ್ತ
10 ಸೂರಿಸೆಟ್ಟಿ . . ಪುತ್ರ ವೀರಸ ಸ್ವಸ್ತಿ . . ರಾಜ್ಯ ಭಾಯಿಮ .
11 ಮುಕ್ತಿ . ಸುಗತಿ . . . ಆ . ರಪ್ಪ . ಹಿರಿಯ . . ಹದವೊ(ವೀ) . . . ಸವಿಟ್ಟ
12 . . ಸ್ವರ್ಗ್ಗವೇಜಿದನು ॥ ಹಿರಿಯ . . ರಪ್ಪ ಗೊಂಕಿಯ ಸಿಂಗಣಗೌಡಂ
13 . . . . . ಮೋ(ಗೋ)ಪಯ್ಯ ತರಸ್ತರವಿಯ ನಿಸ್ತಿಕೆಯ ಮಾ–
14 ಡಿಸಿ . . ತಗೊಪ್ಪ . . . . . . ಮಂಗಳ ಮಹಾ ಶ್ರೀ ಶ್ರೀ ಶ್ರೀ*

---

* ಬಹಳಷ್ಟು ಕಚ್ಚು ಬಿದ್ದಿರುವುದರಿಂದ ಶಾಸನ ಅಸ್ಪಷ್ಟವಾಗಿದೆ.

6

ಬೈಚವಳ್ಳಿ

ಹನುಮಂತದೇವರ ಗುಡಿ ಎದುರಿನ ಶಾಸನ (ಕ್ರಿ.ಶ.1535)

ARSIE, 1950-51, No. 48 — ಅಪ್ರಕಟಿತ

ಕೆಳಭಾಗ ನೆಲದಲ್ಲಿ ಹೂಳಿರುವ, ಬೆಣಚುಕಲ್ಲಿನ ಮೇಲೆ ಕೆತ್ತಿದ ಈ ಶಾಸನವು 23" ಅಗಲ 20" ಎತ್ತರವಾಗಿದೆ. ಮೇಲೆ ಯಾವುದೇ ಚಿತ್ರಗಳಿಲ್ಲ.

ವಿಜಯನಗರದ ಅರಸು ಅಚ್ಯುತರಾಯರ ಕಾಲದಲ್ಲಿ ತಿರುಪತಯ್ಯಸೆಟ್ಟಿಯರ ಮಕ್ಕಳು ನಾರಾಯಣಸೆಟ್ಟಿಯು ಬಂಕಾಪುರದಲ್ಲಿ ಜೀರ್ಣೋದ್ಧಾರ ಮಾಡಿಸಿದ ರಾಮಯ್ಯದೇವರಿಗೆ ತಮ್ಮ ತಂದೆತಾಯಿಗಳಿಗೆ ಪುಣ್ಯವಾಗಬೇಕೆಂದು ಅಚ್ಯುತರಾಯರ ನಿರೂಪದಿಂದ

ತುಂಗಭದ್ರಾ ತೀರದ ವಿಠಲೇಶ್ವರನ ಸನ್ನಿಧಿಯಲ್ಲಿ ಗ್ರಾಮವನ್ನು ದಾನವಾಗಿ ನೀಡಿದುದನ್ನು ತಿಳಿಸುತ್ತದೆ.

ಶಾಸನದಲ್ಲಿ ಬರುವ "ಶಾಲಿವಾಹನ ಶಕವರುಷ 1457 ನೆಯ ಮನ್ಮಥ ಸಂವತ್ಸರದ ಜೇಷ್ಟ ಸು . . " ಎನ್ನುವ ಮಿತಿಯನ್ನು ಉಳಿದ ವಿವರಗಳೊಂದಿಗೆ ಗಮನಿಸಿದಾಗ ಶಾಸನ ರಚನಾ ಕಾಲವು ಕ್ರಿ.ಶ. 1535ರ ಮೇ ತಿಂಗಳಲ್ಲಿ ಬರುತ್ತದೆ ಎನ್ನಬಹುದು.

1 ಶುಭಮಸ್ತು । ನಮಸ್ತುಂಗ ಸಿ(ಶಿ)ರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈ–
2 ಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ । ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹ–
3 ನ ಶಕವರುಷ 1457 ನೆಯ ಮನ್ಮಥ ಸಂವತ್ಸರದ ಜೇಷ್ಟ ಸು(ಶು)ಧ(ದ್ಧ)1ರಲೂ ಶ್ರೀಮನ್ ಮಹಾರಾಜಾ–
4 ಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರ ಅಚ್ಯುತರಾಯ ಮಹಾರಾಯ ನೂ ವಿಜಯನ–
5 ಗರದಲ್ಲಿ ಸಿಂಹಾಸನಾರೂಢನಾಗಿ ಪ್ರುಥ್ವೀರಾಜ್ಯಂ ಆಳುತ್ತಮಿರಲು ಬಂಕಾಪುರದಲೂ ತಿರುಪತಯ
6 ಸೆಟ್ಟಿಯರ ಮಕ್ಕಳು ನಾರಾಯಣಸೆಟ್ಟಿ ಜೀರ್ನೋದ್ಧಾರ ಮಾಡಿದ ರಾಮಯ್ಯದೇವರಿಗೆ ಸಿವೆತಿ ಪುತ್ತೂರ ಸೂದಿ
7 ಸರುತ ನಾಚಿಯಾರ ಹಾಮರ ತಿರುವೆಂಗಳ ಅಣ್ಣನ . ಕಾಟಿ ಸಿಂಹಾಕಮ ಶ್ರೀ . . ಕ್ರಮವೆಂತೆಂದರೆಲ್ಲಾಮಿನಮಾ
8 ಭ್ರಮರಮಗಣಿಮಾನ ಪಾಲಿಸಿದ ಮಾನ್ಯಗಳ ಸೀಮೆಯಗಳನುಭಯ . . . ಮಾ ದೇವರ ಅಮೃತಪಡಿ
9 ಅಂಗರಂಗವಯಾರವಕ್ಕೆ ಅಚ್ಯುತರಾಯ ಮಹಾರಾಯರ ನಿರೂಪದಿಂದಲು ಅಂತವಾ ತಿಥಿಯ ಸೂರ್ಯ್ಯಗ್ರಹಣ
10 ದ ಪುಂಣ್ಯಕಾಲದಲೂ **ತುಂಗಭದ್ರಾತೀರ ವಿಠಲೇಶ್ವರನ ಸಂನಿಧಿಯಲೂ** ಅಚ್ಯುತರಾಯ ಪೆಧರಾಯರಿನ್ನಂ
11 ನಂಮ ತಂದೆತಾಯಿಗಳಿಗೂ ಪುಂಣ್ಯವಾಗಬೇಕೆಂದು ಸಹಿರಣ್ಯೋದಕ ದಾನ ಧಾರಾಪೂರ್ವ್ವಕವಾಗಿ . .
12 ಣ ಚರ ಬಿಟ್ಟೆವಾಗಿ ಆ ಗ್ರಾಮಕೆ ಸಲುವ ಚತುಸ್ಸೀಮೆಯೊಳಗಾದ ಕೋಟಿ ಸಹಾ ನೀರಾರಂಭ ನಿಧಿ ನಿಕ್ಷೇಪ ಜಲ ಪಾ–
13 ಷಾಣ ಅಕ್ಷೀಣಿ ಆಗಾಮಿ ಸಿದ್ಧ ಸಾಧ್ಯಂಗಳೆಂಬ ಅಷ್ಟಭೋಗ ತೇಜಸ್ವಾಮ್ಯ ಸರ್ವ್ವಾವೃತ್ತಿ ಸಮಸ್ತ ಬಳಿ ಸಹ ಆ
14 ಚಂದ್ರಾರ್ಕವಾಗಿ ಅನು ಮಾಡಿಕೊಂಡು ಯಿಹುದು ಸಿಂಧು ಬಲ ಭೂದಾನ ಧರ್ಮ್ಮಶಾಸನ
15 [ಇಂ*]ತೊಪ(ಪ್ಪು)ದಕೆ(ಕ್ಕೆ) ಧರ್ಮಸಾಕ್ಷಿಗಳು ಆದಿತ್ಯ ಚಂದ್ರಾನನ ತಾನೇನಲಶಕ್ಯಃ ಭೂರ್ಗವಿನಾಚ . .
16 ಯಾಯಮಶ್ಕಲಹಶ್ಚ ರಾತ್ರೆಶ್ಚ ಶೌಚ ಸಂಧ್ಯಾ ಧರ್ಮ್ಮನಸ್ಯ ಜಾನಾತ್ತಿನತಸ್ಯ . .*

---

* ಶಾಸನದ ಮುಂದಿನ ಭಾಗ ನೆಲದಲ್ಲಿ ಹೂಳಿದೆ.

7

ಬೈಚವಳ್ಳಿ

ಹನುಮಂತದೇವರ ಗುಡಿ ಎದುರಿನ ಇನ್ನೊಂದು ಶಾಸನ (ಕ್ರಿ.ಶ.1535)

ARSIE, 1950-51, No. 47 ಅಪ್ರಕಟಿತ

ಬೆಣಚುಕಲ್ಲಿನ ಮೇಲೆ ಕೆತ್ತಿದ, ಈ ಶಾಸನವು 20" ಅಗಲ 16" ಎತ್ತರವಾಗಿದೆ. ಮೇಲೆ ಯಾವುದೇ ಚಿತ್ರಗಳಿಲ್ಲ. ಈ ಶಾಸನದಲ್ಲಿ ಕೇವಲ ಸಂಸ್ಕೃತ ಫಲಶ್ರುತಿ ಪದ್ಯಗಳಿವೆ. ಶಾಸನದಲ್ಲಿರುವ ಪಠ್ಯ ಮತ್ತು ಲಿಪಿ ಸಾದೃಶ್ಯದಿಂದ ಇದನ್ನು ಮೇಲಿನ ಶಾಸನದ ಮುಂದುವರಿದ ಭಾಗವೆಂದು ಗುರುತಿಸಬಹುದು. ಆದರೆ ವರದಿಗಳಲ್ಲಿ ಇದನ್ನು ಪ್ರತ್ಯೇಕ ಶಾಸನವೆಂದು ಭಾವಿಸಿ ಸಂಖ್ಯೆಯನ್ನು ನೀಡಿದ್ದಾರೆ.

1 ದಾನಪಾಲನಯೋರ್ಮ್ಮಧ್ಯೇ ದಾನಾತ್ ಶ್ರೇಯೋನುಪಾಲನಂ । [ದಾನಾತ್ ಸ್ವರ್ಗ್ಗ*]–
2 ಮವಾಪ್ನೋತಿ ಪಾಲನಾದಚ್ಯುತಂ ಪದಂ । ಸ್ವದತ್ತಾಂ ಪರದತ್ತಾಂ ವಾಯೋ ಹರೇತಿ
3 ವಸುಂಧರಾ ಷ್ಟವರ್ರುಷ(ರ್ಷ) ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ । ಸ್ವದತ್ತಾಂ

4 ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ [ಪರದತ್ತಾಪಹಾ*]–
5 [ರೇಣ*] ಸ್ವದತ್ತಂ ನಿಷ್ಫಲಂ ಭವೇತ್ ॥ ಸಾಮಾನ್ಯೋಯಂ ಧರ್ಮಸೇತು
6 ನೃಪಾಣಾಂ ಕಾಲೇಕಾಲೇ ಪಾಲನಿಯೋ ಭವದ್ಭಿಃ ಯಿವಂ ಸರ್ವಾನೇ–
7 ತಾಂ ಭಾವಿನಃ ಪಾರ್ಥಿವೇಂದ್ರ(ದ್ರಾ)ಂ ಭೂಯೋ ಭೂಯೋ ಯಾಚತೇ
8 ರಾಮಚಂದ್ರ [ಃ॥]

8

ಮಕರವಳ್ಳಿ

ಕೆರೆ ಮೇಲೆ ಗರುಡಗಂಬಕ್ಕೆ ಬರೆದ ಶಾಸನ (ಕ್ರಿ.ಶ. 1399)

ARSIE, 1949-50 No.121 ಅಪ್ರಕಟಿತ

ವಿಜಯನಗರದ ಅರಸ ಇಮ್ಮಡಿ ಹರಿಹರನ ಕಾಲದ ಶಾಸನವಿದು. ತ್ರುಟಿತಗೊಂಡಿದ್ದು, ಗೋವೆಯ ಪ್ರಧಾನಿ ಬಾಚಣ್ಣ ಒಡೆಯನಿಂದ ನರಸಿಂಹ ದೇವರಿಗೆ ಮಕರವಳ್ಳಿಪುರವನ್ನು ದಾನವಾಗಿ ನೀಡಿದುದನ್ನು ತಿಳಿಸುತ್ತದೆ.

"ಶಕವರುಷ 1321 ನೆಯ ಪ್ರಮಾಧಿ ಸಂವತ್ಸರ ಸು(ಶು)ಕ್ಲಪಕ್ಷ ಸೋಮವಾರದಲು" ಎನ್ನುವ ಮಿತಿಯು ಕ್ರಿ.ಶ. 1399ರಲ್ಲಿ ಬರುತ್ತದೆ.

1 @ ಶ್ರೀಮನ್ಮಹಾಮಂಡಳೇಸ್ವ(ಶ್ವ)ರ ಅರಿರಾ–
2 ಯ ವಿಭಾಡ ಚತುಸಮುದ್ರಾಧಿಪತಿ ಶ್ರೀ ವೀ–
3 ರ ಬುಕ್ಕಂಣ್ನ ವೊಡೆಯರ ಕುಮಾರಂ ಶ್ರೀ ವೀ–
4 ರ ಹರಿಹರ ರಾಜ್ಯಂಗೆಯ್ಯುತ್ತಂಮಿರೆ ॥
5 ಶಕವರುಷ 1321 ನೆಯ ಧಾತ (ಪ್ರಮಾಧಿ) ಸಂ–
6 ವತ್ಸರ ಸು(ಶು)ಕ್ಲಪಕ್ಷ ಸೋಮವಾರದಲು ಗೋವೆ–
7 ಯ ಪ್ರಧಾನಿ ಬಾಚಂಣ ಒಡೆಯರು ಎ–
8 ರಬರಗೆಯ ನಾರಸಿಂಹ್ವದೇವರಿ–
9 ಗೆ ಕೊಟ್ಟ ಮಕರವಳ್ಳಿಪುರ ॥ .
10 ದ ಸ್ತಾನಿಕ ಪೂಜೇಂದ್ರ ವೋಬಳದೇವನು ॥

9

ಮಂತಗಿ

ಧರ್ಮಾ ನದಿಯ ದಂಡೆಯಲ್ಲಿರುವ ನಿಷಧಿಗಲ್ಲು

ಸು.13–14ನೆಯ ಶತಮಾನ

ARSIE, 1947-48, No.209 ಅಪ್ರಕಟಿತ

ಹಾನುಗಲ್ಲು ನಾಡಿನ ಹಳ್ಳಿ ಮಂತಗೆಯ ಮುರಾಗಿ ಎನ್ನುವವನು ಸ್ವರ್ಗಸ್ಥನಾದಾಗ, ನಿಲ್ಲಿಸಿದ ನಿಷಧಿಗಲ್ಲು ಇದೆಂದು ಸು.13–14ನೆಯ ಶತಮಾನದ ಅಕ್ಷರಗಳಲ್ಲಿ ಸೂಚಿಸುತ್ತದೆ. ಶಾಸನವು ತ್ರುಟಿತಗೊಂಡಿರುವುದರಿಂದ ವಿವರಗಳು ತಿಳಿದುಬರುವುದಿಲ್ಲ.

ಭಾಗ 1

1 ಹಾನುಗಲ್ಲ ನಾಡು ಬಾಡು ಮಂತಗೆಯ ಮು–
2 ರಾಗಿ ಸ್ವರ್ಗ್ಗಸ್ತರಾದಲ್ಲಿ ನಿಲಿ(ಲ್ಲಿ)ಸಿದ ನಿಸ್ತಿಕೆ [।*] ಮಂಗಳ [॥*]

ಭಾಗ 2

3 ಮಂನ್ಮಹಾರಾಜಾಧಿರಾಜ ರ
4 . . . .
5 ಮನ್ನೆಯ ಮಹಾಪ್ರಭುಗಳು ಮು . .
6 ಭೂಂಮರವಾ . . . .

10
ವೀರಾಪುರ
ಬಸದಿಯಲ್ಲಿರುವ ನಿಷಧಿ ಶಾಸನ (ಕ್ರಿ.ಶ. 1394)

ARSIE, 1949-50, No. 131 ಅಪ್ರಕಟಿತ

ವರ್ಧಮಾನ ಮಹಾವೀರ ಬಸದಿಯ ಕಟ್ಟೆಯ ಮೇಲೆ ನಿಲ್ಲಿಸಿದ 35" ಎತ್ತರ 18" ಅಗಲದ ಕರಿಕಲ್ಲಿನಲ್ಲಿ ಶಾಸನವನ್ನು ಕೆತ್ತಲಾಗಿದ್ದು, ಮೊದಲ ಸ್ತರದಲ್ಲಿ ಮುಕ್ಕೊಡೆಯ ಕೆಳಗೆ ಸುಖಾಸೀನದಲ್ಲಿ ಕುಳಿತ ಧ್ಯಾನಾಸಕ್ತ ತೀರ್ಥಂಕರನಿದ್ದು, ಎಡಬಲಗಳಲ್ಲಿ ಚಾಮರಗಳಿವೆ. ಎರಡನೆಯ ಸ್ತರದಲ್ಲಿ ಶಾಸನವಿದ್ದು, ಮೂರನೆಯ ಸ್ತರದಲ್ಲಿ ಮಧ್ಯೆ ಅಟ್ಟವಣೆ ಕೋಲಿದ್ದು, ಬಲದಲ್ಲಿ ಶಿಷ್ಯ ಕೈಮುಗಿದು ಕುಳಿತಿದ್ದು, ಎಡದಲ್ಲಿ ಪಿಂಛಿ ಪಕ್ಕದಲ್ಲಿಟ್ಟುಕೊಂಡು ಇನ್ನೊಬ್ಬ ಶಿಷ್ಯನ ಸಹಿತ ಕುಳಿತ ಗುರು ಉಪದೇಶಿಸುವ ಚಿತ್ರಣವಿದೆ.

ವಿಜಯನಗರದ ಕರ್ನಾಟಕ ಸಾಮ್ರಾಜ್ಯದ ಅರಸು ಎರಡನೆಯ ಹರಿಹರನ ಕಾಲದ ಶಾಸನವಿದಾಗಿದ್ದು, ನಾಗರಹಳ್ಳಿಯ ಚಂದೋಜನ ಮಗ ಚಿಕ್ಕ ಚಂದಪ್ಪನು (ಸಮಾಧಿ ವಿಧಿಯಿಂದ ಮುಡುಪಿ) ಸ್ವರ್ಗಸ್ಥನಾದುದನ್ನು ತಿಳಿಸುತ್ತದೆ.

ಶಾಸನದ 4–5ನೆಯ ಸಾಲುಗಳಲ್ಲಿ ಬರುವ "ಶ್ರೀ ವೀರ ಹರಿಹರ ಮಹಾರಾಯ ರಾಜ್ಯೋದ್ಭವ ಸ(ಶ)ಕವರುಸ(ಷ) 1317 ಭಾವ ಸಂವಛ(ತ್ಸ)ರದ ಭಾದ್ರಪದ ಬಹುಳ ಅಮಾವಾಸ್ಯೆ 30 ಬುಧವಾರದಲ್ಲಿ" ಎಂಬ ಮಿತಿಯು 25–9–1394ಕ್ಕೆ ಸರಿ ಹೊಂದುತ್ತದೆ.

1 @ ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಂ ಜೀಯಾ ತ್ರೈ[ಲೋ*]ಕ್ಯನಾ–
2 ಥಶ್ಯ(ಸ್ಯ) ಸಾ(ಶಾ)ಸನಂ ಜಿನಸಾ(ಶಾ)ಸನಂ ॥ @ ॥ ಶ್ರೀಮನ್ಮಹಾಮಂಡಳೇ–
3 ಶ್ವರ ರಾಜಾಧಿರಾಜ ಸತಬಿಟ್ಟ ಅರಿರಾಯ ವಿಭಾಡ ಬಾಸೆ(ಭಾಷೆ)ಗೆ ತಪ್ಪುವ ರಾ–
4 ಯರ ಗಂಡ ಶ್ರೀ ವೀರ ಹರಿಹರ ಮಹಾರಾಯ ರಾಜ್ಯೋದ್ಭವ
5 ಸ(ಶ)ಕವರುಸ(ರ್ಷ) 1317 ಭಾವ ಸಂವಛ(ತ್ಸ)ರದ ಭಾದ್ರಪದ ಬಹುಳ
6 ಅಮಾವಾಸ್ಯೆ 30 ಬುಧವಾರದಲ್ಲಿ ನಾಗರಹಳ್ಳಿಯ ಚಂದೋಜ–
7 ನ ಮಗ ಚಿಕ್ಕ ಚಂದಪ್ಪನು ಸ್ವರ್ಗಸ್ಥನಾದನು ॥

11
ಶಿರಗೋಡ
ಹೊಲದಲ್ಲಿರುವ ವೀರ ಮಾಸ್ತಿಕಲ್ಲು (ಕ್ರಿ.ಶ. 1353)

ARSIE, 1950-51, No. 88 ಅಪ್ರಕಟಿತ

ವಿಜಯನಗರದ ಚಕ್ರವರ್ತಿ ವೀರದೇವರಾಯನು ಆಳ್ವಿಕೆಯಲ್ಲಿ, ಭೀಮ ಮತ್ತು ಮಾದಣ ಇವರು ಹಾನುಗಲ್ಲಿನಲ್ಲಿ ಯುದ್ಧಕ್ಕೆ ಬಂದಾಗ, ಹರಿಗನಾಯಕನ ಮಗ ಓಬೆನಾಯಕ ಹೋರಾಡಿ ವೀರಮರಣವನ್ನು ಅಪ್ಪಿದಾಗ, ಆತನ ಹೆಂಡತಿಯರಾದ ಕಾಮವ್ವೆ ಹಾಗೂ ಲಕ್ಕವ್ವೆ ನಾಯಕಿತಿಯರು ಗಂಡನೊಡನೆ ಕಿಚ್ಚು ಹಾಯ್ದರೆಂದು ಈ ಶಾಸನವು ತಿಳಿಸುತ್ತದೆ.

"ಶಕವರುಷ ಸಾ 1340ನೆಯ ಸಾಧಾರಣ ಸಂವತ್ಸರ ಕಾ[ರ್ತಿಕ*] . . . ಆದಿವಾರದಂದು" ಎನ್ನುವ ಮಿತಿಯು ಸರಿಯಿಲ್ಲ. ಶಕವರ್ಷ 1340ರಲ್ಲಿ ವಿಳಂಬ ಸಂವತ್ಸರವಿದ್ದು, ಕಾರ್ತಿಕ ಮಾಸ ನವೆಂಬರ್‌ನಲ್ಲಿ ಬರುತ್ತದೆ. ಅಂತೆಯೇ ಸಾಧಾರಣ ಸಂವತ್ಸರವು ಶಕವರ್ಷ 1353ರಲ್ಲಿ ಬರುತ್ತಿದ್ದು, ಕಾರ್ತಿಕ ಮಾಸವು ಅಕ್ಟೋಬರ್–ನವೆಂಬರ್‌ಗಳಲ್ಲಿ ಬರುತ್ತದೆ.

1 ಸ್ವಸ್ತಿ ಶ್ರೀಮತು ಶು(ಶ)ಕವರುಷ ಸಾ 1340ನೆಯ ಸಾಧಾರಣ ಸಂವತ್ಸರ ಕಾ[ರ್ತಿಕ*] . .
2 ಆದಿವಾರದಂದು ಶ್ರೀಮಂನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರದೇವರಾ[ಯ*]. .
3 ಯ್ಯುತ್ತುಮಿಂದಂದು ಶ್ರೀಮತು ಸದಿಯರಕ ಭೀಮ ಮಾದಣರು ಹಾನುಗಲ್ಲಲಿ ಮಾದ . .
4 ಗವಾದಲ್ಲಿ ತಗುಳ್ದು ಹರಿಗೆನಾಯ್ಕನ ಮಗ ಓಬೆನಾಯ್ಕ ಸತ್ತು ಸುರಲೋಕಪ್ರಾಪ್ತನಾ[ದಂ ॥ ಮ*]
5 ಂಗಳ ಮಹಾಶ್ರೀ ಶ್ರೀ [॥*] ಕಮವೆ(ಕಾಮವ್ವೆ) ನಾಯಕತಿ ಲ್ಕವೆ(ಲಕ್ಕವ್ವೆ) ನಾ[ಯ*]ಕಿತಿ ಒಡನೆ ಕಿಚ್ಚ ಹಾಯಿದರು [॥*]

12

ಹಾವಣಗಿ

ಅಂಗನವಾಡಿ ಶಾಲೆಯ ಆವರಣದಲ್ಲಿಯ ಶಾಸನ (ಸದ್ಯ ಬಸದಿಯ ಎದುರಿಗಿದೆ)

— ಹೊಸತು

20" ಅಗಲ 30" ಎತ್ತರದ ಕರಿಕಲ್ಲಿನಲ್ಲಿ ಈ ನಿಷಧಿಶಾಸನವನ್ನು ಕೆತ್ತಿದ್ದು, ಎಡಭಾಗ ಒಡೆದಿದೆ. ಮೇಲಿನ 20" ಭಾಗದಲ್ಲಿ ಆಮಲಕ ಶಿಖರಚಿರುವ ಮಂಟಪದೊಳಗೆ ಸುಖಾಸೀನನಾದ ತೀರ್ಥಂಕರ ವಿಗ್ರಹವಿದೆ. ಕೆಳಗೆ 10 ಸಾಲಿನ ಶಾಸನವಿದೆ. ಶಾಸನದ ಕೆಳಗೆ ಬಲಭಾಗದಲ್ಲಿ ಶಿಷ್ಯೆ ಕುಳಿತಿದ್ದು, ಎಡಭಾಗದಲ್ಲಿ ಗುರು ಬಲಗೈ ಎತ್ತಿ ಉಪದೇಶಿಸುತ್ತಾನೆ. ಇಬ್ಬರ ಮಧ್ಯೆ ಅಟ್ಟವಣೆ ಕೋಲಿದೆ.

ತುಂಬ ಸುಂದರವಾದ ಉಬ್ಬುಶಿಲ್ಪಗಳ ಕೆತ್ತನೆಯನ್ನು ಈ ನಿಷಧಿ ಶಾಸನವು ಹೊಂದಿದೆ.

ವಿಜಯನಗರದ ಅರಸು ವೀರ ಹರಿಹರ ಮಹಾರಾಯರ ಆಡಳಿತಾವಧಿಯಲ್ಲಿ ಎಂದು ಮಾತ್ರ ಕಾಣಿಸುತ್ತದೆ. ಮುಂದಿನ ಮೂರು ಸಾಲುಗಳ ಅಕ್ಷರ ಅಸ್ಪಷ್ಟವಾಗಿವೆ. ಆದರೆ ಕೇಶವದೇವ ಎನ್ನುವವನು ಸಮಾಧಿಮರಣ ಹೊಂದಿದ್ದನ್ನು ತಿಳಿಸುತ್ತದೆ.

"ಶಕವರುಶ(ರ್ಷ) 1 . . . . ಧಾತು ಸಂವಛ(ತ್ಸ)ರದ ಆಶಾಢ ಗುರುವಾರದಲು" ಎನ್ನುವ ತಿಥಿಯು ಕ್ರಿ.ಶ. 1336ರ 4 ಜುಲೈದಂದು ಬರುತ್ತದೆ.

1 @ ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಚನಂ ಜೀಯಾ ತ್ರೈ-
2 ಲೋಖ್ಯನಾಥಸ್ಯ ಶಾಸನಂ ಜಿನಶಾಸನಂ ॥ ಶ್ರೀಮನ್ಮಹಾ [ಮಂಡಳೇಶ್ವರಂ ಭಾಷೆಗೆ*]
3 ತಪ್ಪುವ ರಾಯರ ಗಂಡ ಶ್ರೀ ವೀರಹರಿಹರ ಮಹಾರಾಯರಾ[ಳುತ್ತ*]-
4 [ಮಿರೆ*] ಸಕವರುಶ(ರ್ಷ) 1310 ಧಾತು ಸಂವಛ(ತ್ಸ)ರದ ಆಸಾಢ . .
5 2 ಗುರುವಾರದಲು . . . . ರಾಯ ರಾಜಗುರು ಮಂಡ[ಲಾ*]-
6 ಚಾರ್ಯ್ಯ ಮಹಾರಾಜ ಪಾದಸ್ಮರಂ ಮ . . ಬರಾ ಮಹಾ ಸಕಲ . .
7 ಚಕ್ರವರ್ತ್ತಿಗಳುಂ ಸಿಗವಿರಗಯ್ಯ ರಾಮಪ್ಪ . . . . ರಸನ ವದನ ಸುತ್ತಿ . .
9 ಗುಡನು ಸುಭ ಸುಕಾ ಮಹಾಪ್ರಭಾ ಭುಗಾಂಕನ ಮಗ ಕೇಸವದೇವ ಸ್ವ[ರ್ಗ್ಗ*]-
10 ಸ್ಥನಾದನು ।*

---

* 5ನೆಯ ಸಾಲಿನ ನಂತರದ ಅಕ್ಷರಗಳು ಅಸ್ಪಷ್ಟವಾಗಿವೆ. ಪಠ್ಯ ಪರಿಷ್ಕರಿಸಬೇಕಿದೆ.

13

ಹೊಂಬಳಿ

ರಾಮಲಿಂಗ ದೇವಾಲಯದಲ್ಲಿ (ಕ್ರಿ.ಶ. 1486-1490)

ARSIE, 1946-47, No. 219 ಅಪ್ರಕಟಿತ

ಅತ್ಯಂತ ತ್ರುಟಿತವೂ ಅಸ್ಪಷ್ಟವೂ ಆಗಿರುವ **ಈ ಶಾಸನವು, ವಿಜಯನಗರದ ಅರಸು ವೀರ ನರಸಿಂಹರಾಯ ಮಹಾರಾಯರ ಆಳ್ವಿಕೆಯಲ್ಲಿ, ಸಹವಾಸಿ ಸಪ್ತರಸರ ಮಕ್ಕಳಾದ ಹೊನ್ನರಸನು ರಾಮೇಶ್ವರ ದೇವಾಲಯ ನಿರ್ಮಾಣ ಮಾಡಿ, ದೇವರನ್ನು ಪುನಃ ಸ್ಥಾಪಿಸಿದ ಹಾಗೂ ಅಚ್ಚಪ್ಪನಾಯಕ ದತ್ತಿ ನೀಡಿದ ಉಲ್ಲೇಖವನ್ನು ಒಳಗೊಂಡಿದೆ.**

"ಶಾಲಿವಾಹನ ಶಕವರ್ಷ 1410ನೆಯ ಶುಕ್ಲ ಸಂವಛ(ತ್ಸ)ರದ ಫಾಲ್ಗುಣ ಶು 1 ಸೋಮವಾರ" ಎನ್ನುವ ಶಾಸನೋಕ್ತ ಮಿತಿಯು ಶಕವರ್ಷ 1410ರಲ್ಲಿ ಶುಕ್ಲ ಸಂವತ್ಸರವಿಲ್ಲ. ವಿಜಯನಗರದ ವೀರನರಸಿಂಹನ ಕಾಲವಾದ ಕ್ರಿ.ಶ. 1486–1490ರ ನಾಲ್ಕೂ ವರ್ಷಗಳಲ್ಲಿ ಶುಕ್ಲ ಸಂವತ್ಸರವಾಗಲಿ ಫಾಲ್ಗುಣ ಶು 1 ಮಿತಿಯು ಸೋಮವಾರದಂದು ಬರುವುದಿಲ್ಲ.

ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರು(ತ್ರೈ)ಲೋಕ್ಯ
ನಗರಾರಂಭ ಮೂಲಸ್ತಂಭಾಯ ಶಂಭವೇ ॥ ಸ್ವಸ್ತಿ ಶ್ರೀ ಜಯಾಭ್ಯುದ–
ಯ ಶಾಲೀವಾಹನ ಶಕವರ್ಷ 141(9)0ನೆಯ ಶುಕ್ಲ ಸಂವಛ(ತ್ಸ)ರದ ಫಾ–
ಲ್ಗುಣ ಶು 1 ಸೋಮವಾರ ಶ್ರೀಮನ್ಮಹಾರಾಜಾಧಿರಾಜ ಪರಮೇಶ್ವರ ಶ್ರೀ
ವೀರಪ್ರತಾಪ ಶ್ರೀ ವೀರನರಸಿಂಹರಾಯ ಮಹಾರಾಯರು । ಸು–
ಖರಾಜ್ಯಂಗೆಯ್ಯುತ್ತಿರೆ . . . .
ಹರ ಶ್ರೀಮನ್ಮಹಾನಾಯಕಾಚಾರ್ಯ್ಯರು ಸಾವಿಕಣ . . . . . ದಂದು
ಗಡಿಯಂಕ ನಿಲಯ . . ಯಾತನಯ ಧರ್ಮ್ಮ . . . . ನಾ–
ಯಕರ ಮಕ್ಕಳು . . . .
ಭಿದಾನ ಚಕಾ . ರ ವಂಶದ ಕಾಣ್ವಾಯನ ಸೂತ್ರದ ಪಾ . . . ಭರ
ಸಹವಾಸಿ ಸಪ್ತರಸರ ಮಕ್ಕಳು ಹೊಂನ್ನರಸರು ಹೊಂಬೊಳಿ–
ಯಲು ಹನ ಶಾಸನ ರಘುನಾಥ ಜೀರ್ನ್ನೋದ್ಧಾರ ರಾಮೇಶ್ವರದೇ–
ವರನು ಪುನಪ್ರತಿಷ್ಠೆಯಾಗಿ ಜೀರ್ನ್ನೋದ್ಧಾರವ ಮಾಡಿದಲ್ಲಿ ಅರಸು
ಮಡಿ ಅಚ್ಚಪ್ಪನಾಯಕರು ರಾಮೇಶ್ವರದೇವರ ಅಂಗಭೋ–
ಗ ಸರ್ವನಮಸ್ಯದ ದಾನ ಧಾರಾಪೂರ್ವಕವಾಗಿ
ಧಾರೆಯನೆರೆದು ಪೂರ್ವ ರಾಮೇದೇವರಿಗೆ ರಘು–
ನಾಮಾ . . . . ರಾಮನ ಗ್ರಾಮ । 1 । ಭಿಂಗಾ–
ರಳ ಗೋಭೂಮಿ . . ಬಾಯರ ಗ್ರಾಮದೇವರ ಮಧ್ಯಂ
. . . . ಬೆದಲು ಬಡ ಗಟ್ದ್ದಿಯ ಕೆಳಗಣ
. . . . ನ . . . . ಬ 3 ದೇವರ ಛತ್ರಕೆ ಅವರ ಮಕ್ಕಳು
ಯರದ . . . . ನಾಯಕರು ಬಿಟ್ಟುಕೊಟ್ಟ ಮನೆ . .
. . ಗ್ರಾಮದ . . . . . ದೇವರ ಯವಿರುವೊದಯಲ್ದು
. . . . ಳಗೆ . . ಧರ್ಮ್ಮ ನಿವಿಗೆಯಲು ವೊಡ್ಡಿನ ಕೆಳಗೆ ಬಿಟ್ಟ
ಸಹವಾಸಿ . . . . . ಲು ಮೊಗೆಯ ಹೊಲವಾಗಿ ಬಳನ ಬಿ–
. . . . . . ದಯಗೆ ಫಲವಹ ಅಡಕೆಯ ಮರನು
500 . . . . ಗೆ . . . ಶಾದ್ದು ಸ್ತಳದಿಂದಲ್ಲು ಸೆಟ್ಟಿ
ಯ . . . . ಸ್ತಳದಿಂದಲು ಫಲ ಬಾಹ
. . . . ಸಾಸಿರ 1000 । ಅಡಕೆ ಮರ ಸಹ ಯಿಪ್ಪ
. . . . ಸಾುಗಳಾಗಿ ಪ್ರತಿಪಾಲಿಸಿ
. . . . ಧರ್ಮ್ಮಶಾಸನ [॥*]

06. ಹರಿಹರರಾಯನ ಬಂದಳಿಕೆ ಶಾಸನದ ಹಿನ್ನೆಲೆಯಲ್ಲಿ ಶಾಕ್ತರು

ಡಾ. ಕಲವೀರ ಮನ್ವಾಚಾರ

ಭಾರತದ ಧಾರ್ಮಿಕ ಚರಿತ್ರೆಯಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಶಕ್ತಿ ಆರಾಧನೆ ಒಂದು ಪ್ರಮುಖವಾದ ಘಟ್ಟ ಎನ್ನಬಹುದು. ಆದರೆ, ವೈದಿಕ, ವೈದಿಕೇತರ ನಡುವಿನ ಸಂಶೋಧನೆಯಲ್ಲಿ ಕೆಲವೊಂದು ಧಾರ್ಮಿಕ ಅಧ್ಯಯನಗಳು ನಡೆಯದೇ ಹೋದವು. ಕೆಲವು ಸಾರಿ ಕ್ಷೀಣ ಸ್ವರದಲ್ಲಿ ಸಂಶೋಧನೆಗಳು ಕಿರುಚಿದರು ಅದು ದೊಡ್ಡ ಧ್ವನಿಯಾಗಲೇ ಇಲ್ಲ. ಅಂತಹ ಅಧ್ಯಯನಗಳಲ್ಲಿ ಶಾಕ್ತ ಅಥವಾ ಕೌಲ, ಕೌಲಾಚಾರ ಎಂದು ಕರೆಯುವ ಆರಾಧನೆಯ ಪಂಥವನ್ನು ಚಾರಿತ್ರಿಕ ನೆಲೆಯಲ್ಲಿ ನೊಡಲೇ ಇಲ್ಲ. ನೋಡಿದರೂ ಅದು ದೇವತೆಯ ಹೆಸರಲ್ಲಿ ಬಲಿಕೊಡುವ, ಮಾಂಸ ತಿನ್ನುವ ಮದ್ಯಪಾನ ಮಾಡುವ ಕ್ರಿಯೆಗಳಿಗೆ ನಾಡಿಗಿಂತ ಕಾಡೇ ಲೇಸೆಂದು ಭಾವಿಸಿ ಭಕ್ತರು ಈ ದೇವತಾ ಆರಾಧಕರು ವನದಲ್ಲಿ ದೇವಾಲಯಗಳನ್ನು ಸ್ಥಾಪಿಸಿರಬೇಕೆಂದು ಹಿರಿಯ ವಿದ್ವಾಂಸರೊಬ್ಬರು ತೀರ್ಮಾನಿಸುತ್ತಾರೆ. ಹಾಗೆಯೇ ಆಧುನಿಕ ಕಾಲದ ಶಾಕ್ತ ಆರಾಧನೆಯೆಂದರೆ ಅದೊಂದು ಜಾನಪದೀಯ ಶ್ರೇಷ್ಠವಲ್ಲದ್ದು ಎಂಬ ಉದಾಸೀನತೆಯಲ್ಲಿಯೇ ಅಧ್ಯಯನಗಳು ನಡೆದಿವೆ.

ಪಾಶುಪತ, ಕಾಪಾಲಿಕ, ನಾಥ, ಭೈರವಾರಾಧನೆಗಳು ಸ್ವಲ್ಪ ಮಟ್ಟಿಗೆ ಅಧ್ಯಯನಗಳು ನಡೆದಿವೆ. ಆದರೂ ಕಾಳಾಮುಖ, ಕೌಳದಂತಹ ಆರಾಧನಾ ಪಂಥಗಳನ್ನು ಅಧ್ಯಯನಕ್ಕೆ ವಸ್ತುನಿಷ್ಠವಾಗಿ ಅಧ್ಯಯನಕ್ಕೆ ಒಳಪಡಿಸದೆ ಇದ್ದುದು ಉಂಟು. ಚಾರಿತ್ರಿಕ ನೆಲೆಯ ಅಧ್ಯಯನದಲ್ಲಿ ಇದೊಂದು ರೀತಿ ನಿರ್ಲಕ್ಷಿತ ಕ್ಷೇತ್ರ ಎನ್ನಬಹುದು.

ಶಕ್ತಿ ಆರಾಧನೆ ಜಗತ್ತಿನ ಪ್ರಾಚೀನ ಆರಾಧನಾ ರೂಪದಲ್ಲಿ ಅತೀ ಪ್ರಾಚೀನವಾದುದು. ನಂತರದ ಕಾಲಘಟ್ಟದಲ್ಲಿ ಅದು ಕ್ಷೀಣಿಸಿ ಸಂಕುಚಿತಗೊಂಡು ಭಾರತದಲ್ಲಿ ಅದರಲ್ಲೂ ದಕ್ಷಿಣದಲ್ಲಿ ಪ್ರತಿ ಗ್ರಾಮಗಳಲ್ಲಿ ಜೀವಂತವಾಗಿ ಇದೆ. ಮಾತೃಮೂಲಿಯ ವ್ಯವಸ್ಥೆಯ ಪಳೆಯುಳಿಕೆಯಾದ ಇದು ಮೊದಲು ಕಾಣುವುದು ಕ್ರಿ.ಶ.ಪೂ. 5500 ವರ್ಷಗಳ ಪೂರ್ವದಲ್ಲಿ. ಲಿಖಿತ ದಾಖಲೆಗಳ ಮೂಲಕ ನೋಡುವುದಾದರೆ ಮಹಾಭಾರತದ ಯುದ್ಧ ಪರ್ವದ ಆರಂಭದಲ್ಲಿ. ಯುದ್ಧಕ್ಕೆ ಹೊರಡುವ ಸಂದರ್ಭದಲ್ಲಿ ದುರ್ಗೆಯನ್ನು ಅಥವಾ ಕೊಳ್ದೀವಿ ಎಂದು ಕರೆಯುವ ಶಕ್ತಿಯನ್ನು ಪೂಜಿಸುವ ಮೂಲಕ. ಇದು ಮೂಲ ಜನಾಂಗದ ರೂಪವಾದ ಇದು ಶಿಷ್ಟತೆಯಲ್ಲಿ ಪ್ರವೇಶ ಪಡೆಯುವ ಮೊದಲ ಘಟ್ಟ ಎನ್ನಬಹುದು. ಶಾತವಾಹನರ ಕಾಲದ ಶಾಸನಗಳಲ್ಲಿ ಮಾತೃಮೂಲೀಯ ವ್ಯವಸ್ಥೆಯ ಪ್ರತೀಕವಾಗಿ ಕಾಣುವ ವ್ಯಕ್ತಿನಾಮಗಳು ಕಂಡುಬರುತ್ತವೆ. ಆದರೆ, ಶಕ್ತಿ ಆರಾಧನೆಯ ದೇವತೆಗಳು ಕಂಡುಬರುವುದಿಲ್ಲ.

ನಂತರದ ಕಾಲದಲ್ಲಿ ಕಂಡುಬರುವ ರಾಜಕೀಯ ಪಲ್ಲಟಗಳನ್ನು ಗಮನಿಸಿದಾಗ ಮಾತೃಮೂಲೀಯವಾದ ವ್ಯವಸ್ಥೆಯಿಂದ ಪುರುಷ ಕೇಂದ್ರಿತವಾದ ವ್ಯವಸ್ಥೆಗೆ ಹೊರಳುವುದನ್ನು ನೋಡುತ್ತವೆ. ಆದರೆ, ಶಕ್ತಿದೇವತೆಗಳು ಅಂಕ ಪರದೆಗೆ ಸ್ಥಾನವನ್ನು ಪಡೆದುಕೊಳ್ಳುತ್ತಿರುವ ಹಂತವು ಇಲ್ಲಿ ಕಾಣುತ್ತೇವೆ. ಕದಂಬ-ಚಾಲುಕ್ಯರು ತಮ್ಮನ್ನು "ಸಪ್ತಮಾತೃಕಾ ಪರೀರಕ್ಷಿತರು" ಎಂದು ಕರೆದುಕೊಳ್ಳುವುದು ಅವರ ಶಕ್ತಿ ಆರಾಧನೆಕಾರರಾಗಿ ಮೂಲನಿವಾಸಿಗಳಾಗಿರಬಹುದಾದ ಸಾಧ್ಯತೆಯನ್ನು ತೋರಿಸುತ್ತದೆ. ಅಲ್ಲದೆ, ಶಿವನ ಆರಾಧನೆಯ ಸ್ಥಾಣಗುಂದೂರು ಈ ಕಾಲಕ್ಕೆ ಆಗತಿ ಈ ಪ್ರದೇಶದಲ್ಲಿ ರೂಪುಗೊಂಡಿತ್ತು. ಈ ಪ್ರದೇಶ ನಾಗಾರಾಧನೆ, ಸಿರಿ ಆರಾಧನೆಯಂಥ ರೂಪಗಳು ಇಂದಿಗೂ ಉಳಿದುಕೊಂಡು ಬಂದಿವೆ.

ಶಾಕ್ತ ಅಥವಾ ಕೌಳರು ಕರ್ನಾಟಕದಲ್ಲಿ ಇದ್ದರೇ ಅವರು ಯಾರು ಎಂಬ ಪ್ರಶ್ನೆಗಳಿಗೆ ಸರಳ ಉತ್ತರ ಎಂದರೆ ಅದು 'ತಂತ್ರ'-ತಂತ್ರಾರಾಧಕ'ರು ಎಂಬ ಉತ್ತರ ಬರುತ್ತದೆ. 'ತಂತ್ರ' ಎಂದರೆ ವಾಮಾಚಾರ ಎನ್ನುವ ಪರಿಕಲ್ಪನೆಯು ನಮ್ಮಲ್ಲಿ ರೂಢಿಯಾಗಿ ಬಿಟ್ಟಿದೆ. ಮದ್ಯ ಮಾಂಸಗಳ-ಪಂಚ'ಮ'ಕಾರಗಳ ಸೇವೆಯೇ ಅವರ ಆದ್ಯಂತ ಗುರಿ ಎಂಬುದು ಸಾಮಾನ್ಯ ಗ್ರಹಿಕೆ. ಆದರೆ, ತಂತ್ರದಲ್ಲಿ ವಾಮಾಚಾರವೆಂಬುದು ಮೊದಲನೆಯ ಹಂತವಷ್ಟೇ. ಅದರ ಮುಂದುವರೆದ, ಹಾಗೂ ವಾಮವಲ್ಲದ ಮದ್ಯಮಾಂಸಾದಿಗಳ ಸೇವನೆಯಲ್ಲದ ಮತ್ತೊಂದು ದಕ್ಷಿಣಾಚಾರವು ಅಥವಾ ಸಮಯಾಚಾರವು ಇಲ್ಲಿದೆ. ಇದು ಭಕ್ತಿಯ ಇನ್ನೊಂದು ಪ್ರಬೇಧವೆಂದೇ ಗುರುತಿಸಬಹುದು. ಇದನ್ನು ಕುಲಾಚಾರವೆಂದು ಕರೆಯಲಾಗಿದೆ.

ಕರ್ನಾಟಕದಲ್ಲಿ ಕಂಡುಬರುವ ಶಕ್ತಿ ಆರಾಧನೆಯು ಶಾಕ್ತ-ಕೌಲರಿಗೆ ಸೇರಿದ ಪರಂಪರೆಯಲ್ಲಿ ಬಂದಿರುವಂತೆ ಕಾಣುತ್ತದೆ. ಅಲ್ಲದೇ, ಯೋನಿ ಆರಾಧನೆಯ ರೂಪಗಳಾದ ಲಜ್ಜಾಗೌರಿಯ ವಿಗ್ರಹಗಳು ಕಂಡುಬರುತ್ತದೆ. ಆದರೂ ಅದು ಮಹಾಕೂಟದಂತ ಬೆರಳೆಣಿಕೆಯ ಸ್ಥಳಗಳಲ್ಲಿ ಕಂಡುಬರುವುದು ವಿಶೇಷವೇ ಸರಿ. ಅಲ್ಲದೆ, ದೇವಾಲಯಗಳ ಸುತ್ತ ಮಿಥುನ ಶಿಲ್ಪಗಳು ದೊರಕುವುದು ಶಾಕ್ತ ಸಂಪ್ರದಾಯಕ್ಕೆ ಸೇರದೆ ಬೇರೊಂದು ವಿಷಯವಾಗಿರಬೇಕು.

ಕರ್ನಾಟಕದ ಶಕ್ತಿ ಆರಾಧನೆಯನ್ನು ಗಮನಿಸಿದಾಗ ಗ್ರಾಮ ದೇವತೆಗಳಾಗಿ ದ್ಯಾಮವ್ವ, ದುರಗವ್ವ, ಮಾರಿ, ಮಸಣಿ, ಮಾರಿಕಾಂಬ, ಊರಮ್ಮ ಮುಂತಾದ ಹೆಸರುಗಳಿಂದ ಕಂಡುಬರುತ್ತಾರೆ. ಶಿಷ್ಟ ದೇವತೆಗಳಾದ ಕೊಲ್ಲಾಪುರದ ಮಹಾಲಕ್ಷ್ಮಿ, ಕೊಲ್ಲೂರಿನ ಮುಕಾಂಬಿಕಾ, ಕುಕ್ಕನೂರಿನ ಕಾಳಿಕಾ ಮಹಾಮಾಯಿ, ಬನಶಂಕರಿಯ ಬನಶಂಕರಿ ಇವೆಲ್ಲವು ಕೌಳರ ಕೇಂದ್ರಗಳಾಗಿದ್ದವು.

ಬಾದಾಮಿಯ ಬನಶಂಕರಿ-ಬಳಾರಿ ದೇವತೆಯು ಅತ್ಯಂತ ಪ್ರಾಚೀನವಾದುದು. ಸುಮಾರು ಆರನೆಯ ಶತಮಾನದ ನಂತರದಲ್ಲಿ ಈ ಶಾಕ್ತ ಸಂಪ್ರದಾಯ ಆಕಾರ ಪಡೆಯುವುದನ್ನು ಶಾಸನಗಳ ಮೂಲಕ ಗುರುತಿಸಬಹುದು. ವಿಜಯನಗರದ ಅಚ್ಯುತರಾಯನ ಕಾಲದಲ್ಲಿ ಜೀರ್ಣೋದ್ಧಾರವಾದ ಈ ದೇವಾಲಯ ಅತ್ಯಂತ ಪ್ರಾಚೀನವಾದುದು. ಇಲ್ಲಿಯ ಒಂದು ಶಾಸನದಲ್ಲಿ ಬನಶಂಕರಿಯಲ್ಲಿ ನಿರಂತರವಾಗಿ ನಡೆಯುವಂತೆ ಸತ್ರವನ್ನು, ವಿದ್ಯಾದಾನ, ಷೋಡಶ ದಾನಗಳನ್ನು ನಡೆಯುವಂತೆ ಏರ್ಪಾಡು ಮಾಡುತ್ತಾನೆ. ಇದೊಂದು ತಾಂತ್ರಿಕ ಕೇಂದ್ರ ಎಂದಾಗಲು ಅದು ವಿದ್ಯಾಕೇಂದ್ರವೂ ಆಗಿರುವುದನ್ನು ಗಮನಿಸಬಹುದು. ಅದೇ ರೀತಿ ಉಚ್ಚಂಗಿದುರ್ಗದ ಉಚ್ಚೆಂಗಮ್ಮ, ಕೊಲ್ಲಾಪುರದ ಮಹಾಲಕ್ಷ್ಮಿ ಮುಂತಾದ ದೇವಾಲಯಗಳು ಪ್ರಾಚೀನವೆನಿಸಿದರು ಅವು ವಿಜಯನಗರ ಕಾಲಕ್ಕೆ ತಮ್ಮ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುವುದು ಕಂಡುಬರುವುದು.

ಈ ಹಿನ್ನೆಲೆಯಲ್ಲಿ ಬಂದಳಿಕೆಯ ಬಂದಮ್ಮ, ಬನದಮ್ಮ, ಬನದ ದೇವಿಯನ್ನು ಗಮನಿಸಬಹುದು.

ತುಂಗಾ ಮತ್ತು ವರದಾ ನದಿಗಳ ಮಧ್ಯಪ್ರದೇಶ ಸಾಂಸ್ಕೃತಿಕ - ರಾಜಕೀಯ ನೆಲೆಯಲ್ಲಿ ಮಹತ್ವ ಪಡೆದುದಾಗಿದೆ. ಇಲ್ಲಿಯ ಕಾಳಾಮುಖರು ಪ್ರಸಿದ್ಧರಾದ ಧಾರ್ಮಿಕ ಪಂಥವೊಂದರ ಮೂಲ ಕೇಂದ್ರವಾಗಿ ಕೆಲಸ ಮಾಡಿದವರು. ಬಳ್ಳಿಗಾವೆಯ ಹೆಸರು ಬಂದಿರುವುದು ಒಂದು ಗ್ರಾಮ ದೇವತೆಯ ಹೆಸರಿನಲ್ಲಿ. ಇಲ್ಲಿಯ ಶಾಸನವೊಂದರಲ್ಲಿ 'ಬಳ್ಳಿಗಾವೆಯ ಬಲಿಯ ಪ್ರತಿಷ್ಠೆಯ ಬಳ್ಳಿಯಬ್ಬೆ ದೇವಿಯ ದೇವಾಲಯದ ಸ್ಥಾನದಾಚಾರ್ಯ ಲಕ್ಷಣೇಶ್ವರ ಪಂಡಿತ' ಎಂಬಲ್ಲಿ ಬಳ್ಳಿ+ಅಬ್ಬೆ ಎನ್ನುವುದು ಬಳ್ಳಿ+ಗಾವೆಯ ರೂಪವಾಗಿ ಬದಲಾಗಿದೆ.

ಬಂದಳಿಕೆಯನ್ನು ಹಾಗೂ ಸುತ್ತುಮುತ್ತಲಿನ ಪ್ರದೇಶಗಳನ್ನು ಗಮನಿಸಿದಾಗ ಈ ಪ್ರದೇಶದಲ್ಲಿ ಕೋಣವೃತ್ತಿ (ಕೌಳಂಗೇರಿ), ಸಾಲೇನಹಳ್ಳಿ (ಕೌಳಗಡ್ಡೆ), ಮುಚಡಿ, ಕಚವಿ, ಚಿಕ್ಕೆರೂರು, ಬಾರಂಗಿ, ಹಿರೇಕೆರೂರು ಮತ್ತು ಬಂದಳಿಕೆ, ಸಾತೇನಹಳ್ಳಿ ಮುಂತಾದ ಗ್ರಾಮಗಳು ಅತೀ ಪ್ರಾಚೀನವಾದ ಶಾಕ್ತ ಕೇಂದ್ರಗಳಾಗಿದ್ದವು. ಮಂಚ್ಚುಂಡಿ (ಮುಚುಡಿ)ಯಲ್ಲಿ ಮುಳ್‌ಚಂಟ ದೇವತೆಯ ಹೆಸರು ಹೇಳಿದರೆ, ಕಚವಿಯಲ್ಲಿ ಮಾರಿಬ್ಬೆ (ಮಾರಿಕಾಂಬಾ) ದೇವತೆಯನ್ನು 8ನೆಯ ಶತಮಾನದ ಶಾಸನವೊಂದರಲ್ಲಿ ಉಲ್ಲೇಖವಿದೆ. ಚಿಕ್ಕೆರೂರಿನಲ್ಲಿ ಬಳರಿಯ ವಿಗ್ರಹ 10ನೆಯ ಶತಮಾನದಲ್ಲಿ ಪ್ರತಿಷ್ಠಾಪನೆಗೊಂಡ ವಿಷಯವನ್ನು ತಿಳಿಸುತ್ತದೆ. ಈ ಪ್ರದೇಶಗಳಲ್ಲಿ ಬಳರಿ ಎಂಬ ಹೆಸರಿನಲ್ಲಿ ಆರಾಧನೆಗೊಳ್ಳುವುದನ್ನು ನೋಡಬಹದು.

ವಿಜಯನಗರ ಕಾಲದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಪಲ್ಲಟಗಳ ಪರಿಣಾಮವಾಗಿ ಅನೇಕ ಸ್ಥಿತ್ಯಂತರಗಳು ಆಗತೊಡಗಿದವು. ಇತಿಹಾಸದಲ್ಲಿ ಕಾಣಲಾರದ ಆರಾಧನಾ ಪಂಥಗಳಾದ ಎಲ್ಲಮ್ಮ, ಉಚ್ಚೆಂಗ್ಯೆಮ್ಮ, ಗುತ್ತೆಮ್ಮ, ಎಕ್ಕನಾತಿ, ಮುಂತಾದ ಸ್ಥಳೀಯ ಮೂಲದ ಶಾಕ್ತ, ಮೈಲಾರದಂತ ಶೈವ ಪ್ರಭೇಧದ ಆಚರಣೆಗಳು ಮುನ್ನೆಲೆಗೆ ಬಂದುದನ್ನು ನೋಡುತ್ತೇವೆ. ಅಲ್ಲದೇ ಸ್ಥಳೀಯ ಆಡಳಿತ ಹಾಗೂ ರಾಜ್ಯ ವ್ಯವಸ್ಥೆ ಈ ಆಚರಣೆಗಳಿಗೆ ಪೂರಕವಾಗಿ ನಿಲ್ಲತೊಡಗಿದ್ದು ಇದೇ ಕಾಲದಲ್ಲಿ. ಕೆಳವರ್ಗಗಳು ಆಡಳಿತದಲ್ಲಿ ಪ್ರವೇಶ ಪಡೆದದ್ದು ಇದಕ್ಕೆ ಮುಖ್ಯ ಕಾರಣವಾಗಿದೆ.

ಶಕ ವರ್ಷ 1310, ಧಾತು ಸಂವತ್ಸರದ ಆಶಾಡ ಶು. 1 ಆದಿತ್ಯವಾರ ಅಂದರೆ, ಕ್ರಿ.ಶ. 1396, ಜೂನ್ 4 ಬುಧವಾರಕ್ಕೆ ಸರಿ ಹೊಂದುವ ಬಂದಳಿಕೆಯ ಹರಿಹರ ಮಹಾರಾಯನ ಕಾಲದಲ್ಲಿ ಬಂದ ಶಾಸನವು ಈ ಪ್ರದೇಶದಲ್ಲಿ ಪ್ರಮುಖವಾದುದು. ಬಂದಳಿಕೆ ನಾಗರಖಂಡ-70 ರಾಜಧಾನಿ. ಇದರ ಅಸ್ತಿತ್ವ ಕ್ರಿ.ಶ. 7ನೇ ಶತಮಾನಕ್ಕೂ ಪೂರ್ವದಿಂದ ಆರಂಭವಾಗಿರುವುದನ್ನು

ಇತಿಹಾಸದಲ್ಲಿ ನೋಡಬಹುದು. ಕದಂಬ ದೊರೆ ಎರಡನೆಯ ಕೃಷ್ಣವರ್ಮನ ಶಿವಳ್ಳಿ ತಾಮ್ರಪಟದಲ್ಲಿ ಬಂದಳಿಕೆಯ ಉಲ್ಲೇಖ ಬಂದಿದೆ. ಇಲ್ಲಿಯ ಶಕ್ತಿಯನ್ನು ಮಾಹೇಶ್ವರಿ ಕ್ಷೇತ್ರವೆಂದು ಗುರುತಿಸಿದೆ. ಅಂದಾಗ ಆ ಕಾಲದಿಂದಲೂ ಸಪ್ತಮಾತೃಕೆಯರಲ್ಲಿ ಒಬ್ಬಳಾದ ಮಹೇಶ್ವರಿ, ಬನದಮ್ಮ ಪ್ರಸಿದ್ಧಿಯನ್ನು ಹೊಂದಿದ್ದಾಳೆ.

ಬಂದಳಿಕೆಯ ಗ್ರಾಮನಾಮ, ಆರಾಧನೆ, ಆರಾಧಕರು ಮುಂತಾದ ವಿಷಯಗಳನ್ನು ಈ ಶಾಸನ ಬಿಚ್ಚಿಡುತ್ತದೆ. ಬಂದಣಿಕೆಯ ಈ ಶಕ್ತಿಯ ಆರಾಧನೆಯನ್ನು ಅತ್ಯಂತ ಗ್ರಾಮ್ಯ ಭಾಷೆಯಲ್ಲಿ ಹಿಡಿದಿಟ್ಟಿರುವ ಈ ಶಾಸನವು ದೇವಿಗೆ ಸ್ಥಳೀಯ ನಾಯಕರು ಭೂಮಿಯನ್ನು ದಾನವಾಗಿ ಬಿಟ್ಟ ವಿಷಯವಿದೆ.

ಈ ದೇವಿಯನ್ನು ಬನ್ನದೇವಿಯ ಬನ್ನದೇವಿಯೆಂದು, ಬನದದೇವಿ ಕರೆಯಲಾಗಿದೆ. ಅಲ್ಲದೇ ಬನ್ನದಲಿ ಬಂದಳಾಗಿ ಬಂದಳಿಕೆಯ ದೇವಿ ಎಂದು ಕರೆಯಲಾಗಿದೆ. ಡಾ. ಕಲಬುರ್ಗಿ ಅವರು ಬಂದಳಿಕೆ ಎನ್ನುವ ರೂಪದ ಬಗೆಗೆ ಚರ್ಚಿಸುತ್ತಾ ಬಂದಣ+ಇಕ್ಕೆ ಎನ್ನುತ್ತಾರೆ. ವ್ಯಕ್ತಿನಾಮಕ್ಕಿಂತ ಬನದಲ್ಲಿ ಇರುವ ದೇವತೆಯ ಹೆಸರಿನಲ್ಲಿ ಈ ಊರನ್ನು ಕರೆಯಲಾಗಿದೆ. ಬಳ್ಳಿಗಾವೆಯನ್ನು ಬಳ್ಳಿಯಬ್ಬೆ ಎಂಬ ದೇವತೆಯ ಹೆಸರಿನಲ್ಲಿ ಕರೆದಿರುವಂತೆ ಇಲ್ಲಿಯೂ ದೇವತೆಯ ಹೆಸರಿನಲ್ಲಿ ಈ ಊರನ್ನು ಕರೆಯಲಾಗಿದೆ.

ಶಿರಸಿಯ ಮಾರಿಕಾಂಬೆಯ ಪೂಜಾರಿಗಳು ಆಚಾರಿಗಳಾಗಿರುವಂತೆ ಇಲ್ಲಿಯ ಆಚಾರಿಗಳನ್ನು ತಿಳಿಸುತ್ತದೆ. ದೇವಿಯ ದಿವ್ಯಪಾದ ಪದ್ಮಾರಾಧಕರು ಮೌನಾನುಷ್ಠಾಣ ಜಪ ತಪ ಸಮಾಧಿಶೀಲ ಗುಣಸಂಪನ್ನರಪ್ಪ ಕಂಸಾಲ ಮಜಿತ ಆಭರಣ ದೇವಿಯ ಆಚಾರ್ಯರು ಮಲ್ಲಿದೇವರ ಮಗ ಬಾಚಯದೇವ ಎನ್ನುವುದು ಒಂದು ವಿಶೇಷ ಇವರು ಪಂಚಕಾರುಕರಾಗಿದ್ದರು ಎನ್ನುವಲ್ಲಿ ಸಾಬೀತು ಮಾಡುತ್ತದೆ.

07. ವಿಜಯನಗರ ಕಾಲದ ರೋಣ ತಾಲೂಕಿನ ಶಾಸನಗಳು ಮತ್ತು ಕುರುಹುಗಳು

ಡಾ. ಮಲ್ಲಿಕಾರ್ಜುನ ಕುಂಬಾರ

ಕಾಲವೆಂಬುದು ವಿಸ್ಮಯದ ಮಹಾಗುಹೆ. ಕಾಲ ಪುರುಷನು ತನ್ನ ಜಠರಾಗ್ನಿಯಲ್ಲಿ ಎಲ್ಲವನ್ನು ಭಸ್ಮಮಾಡಿ, ಮರವೆಯ ಹೊಗೆಯನ್ನು ಉಗುಳುತ್ತಾನೆ. ಜೀವನದಲ್ಲಿ ನಡೆದ ಅನೇಕ ಸಂಗತಿಗಳೇ ಕೆಲವು ಸಲ ಜ್ಞಾಪಕಕ್ಕೆ ಬರುವುದಿಲ್ಲ. ನಮ್ಮ ಅಸಂಖ್ಯ ಜನಗಳ ಜೀವನ, ಗತಿಸಿದ ತಲೆಮಾರುಗಳ ವಿಷಯಗಳಂತೂ ನೆನಪಿರುವುದು ಬಹಳ ದೂರದ ಮಾತು. ಈ ಹಿನ್ನೆಲೆಯಲ್ಲಿ ನಮ್ಮ ಜನಾಂಗದಿಂದ ಕಣ್ಮರೆಯಾದ ಸಂಸ್ಕೃತಿಯ ಕಣಜದಂತೆ ಶೋಭಿಸುತ್ತಿರುವ ಶಾಸನಗಳು ಈ ನಾಡಿನ ಅಮೂಲ್ಯ ನಿಧಿಗಳಾಗಿವೆ. ಅಲ್ಲಿರುವ ಒಂದೊಂದು ಅಕ್ಷರಗಳು ಒಂದೊಂದು ದೀಪದ ಕುಡಿಗಳಾಗಿವೆ.

"ಸರ್ವ ಧರ್ಮಧೇನುನಿಹವಕ್ಕೆ ಆಡಂಬೊಲಂ ಬೆಳ್ವೊಲಂ" ಎಂಬ ಗಮನಾರ್ಹವಾದ ಮಾತೊಂದು ಶಾಸನದಲ್ಲಿ ಬರುತ್ತದೆ. ಬೆಳ್ವೊಲ ನಾಡೆಂದು ಕರೆಯಿಸಿಕೊಂಡ ಗದಗ ಜಿಲ್ಲೆಯ ರೋಣ ತಾಲೂಕ ಸರ್ವ ಧರ್ಮಗಳ ನೆಲೆ ಬೀಡು. ರೋಣ ತಾಲೂಕಿನ ಕೆಲವು ಪ್ರದೇಶಗಳು ಕಿಸುಕಾಡು–70, ಮತ್ತು ಬೆಳ್ವಲ–300ಕ್ಕೆ ಸೇರಿವೆ. ಇದು ಸುಮಾರು 103 ಹಳ್ಳಿಗಳನ್ನು ಹೊಂದಿದೆ. ತಾಲೂಕಿನ ತುಂಬೆಲ್ಲಾ ಶಾಸನಗಳು ಅಲ್ಲಲ್ಲಿ ಚದುರಿ ಬಿದ್ದಿವೆ. ಸದ್ಯಕ್ಕೆ 30 ಊರುಗಳಲ್ಲಿ 110ಕ್ಕೂ ಹೆಚ್ಚು ಶಾಸನಗಳು ದೊರೆಕಿವೆ. ಇನ್ನೂ ಕೆಲವು ಶಾಸನಗಳು ಬೆಳಕನ್ನು ಕಾಣಬೇಕಾಗಿದೆ. ಅವುಗಳಲ್ಲಿ ದತ್ತಿ, ದಾನ ಶಾಸನಗಳೇ ಹೆಚ್ಚಾಗಿವೆ. ರಾಷ್ಟ್ರಕೂಟರು, ದೇವಗಿರಿಯ ಯಾದವರು. ಕಲಚೂರಿಗಳು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರದ ಅರಸರ ಕಾಲದ ಶಾಸನಗಳಿವೆ. ಈ ಶಾಸನಗಳಲ್ಲಿ ರಾಜರುಗಳ, ದತ್ತಿ, ದಾನದ ವರ್ಣನೆಗಳಿವೆ. ಇದರಲ್ಲಿ ನಾಲ್ಕು ಶಾಸನಗಳು ವಿಜಯನಗರದ ಅರಸರ ಕಾಲಕ್ಕೆ ಸೇರಿವೆ.

ಅಬ್ಬಿಗೇರಿಯಲ್ಲಿ ದೊರೆದ ಶಾಸನವು ವಿಜಯನಗರ ಅರಸ ಎರಡನೆಯ ಹರಿಹರನ ಕಾಲದ ಕ್ರಿ.ಶ. 1379ಕ್ಕೆ ಸೇರಿದ ಈ ಶಾಸನವು 'ಶ್ರೀಮತ್ ಪಂಚಮುಖ ಹನುಮಾನ್ವಿಜಯ' ಎಂದು ಆರಂಭವಾಗುತ್ತದೆ. ಇದು ಬಹು ಕುತೂಹಲದಿಂದ ಕೂಡಿದೆ. ಈ ದತ್ತಿ ಶಾಸನದಲ್ಲಿ 'ಆನೆಗುಂದಿ ವೀರಪ್ರತಾಪ ಹರಿಹರ ಮಹಾರಾಯನ ಕಾಲದಲ್ಲಿ...... ಯರಗೇರಿಯ ಹೇಮಾದ್ರಿ ಆಚಾರ್ಯಗೆ ಅವ್ವಗೇರಿ' ಎಂಬ ಊರನ್ನು ದಾನವಾಗಿ ನೀಡಲಾಗಿದೆ. ಮುಂದುವರಿದು ನಾಗನೂರು, ಸಿಂಗಾಪೂರ, ಹಿರೇಗುಳ, ಕೊಪ್ಪಗ್ರಾಮ, ಗುಲೆಗುಳಿಯ (ಗುಳಗುಳಿ) ಗ್ರಾಮಸ್ಥರು ಈ ದಾನವನ್ನು ಪ್ರಭುಗಳ ಕಣ್ಣಾವಲಿನಲ್ಲಿ ಮುಂದುವರಿಸಿಕೊಂಡು ಹೋಗಬೇಕು ಎಂದು ವಿವರಣೆಯನ್ನು ನೀಡುತ್ತದೆ. ಇಲ್ಲಿ ಉಲ್ಲೇಖಗೊಂಡ ಗ್ರಾಮಗಳಲ್ಲಿ ಕೊಪ್ಪ ಗ್ರಾಮವೆಂದರೆ ಈಗಿನ ನಿಡಗುಂದಿ ಕೊಪ್ಪವಾದರೆ, ಹಿರೇಗುಳವೆಂದರೆ ಹಿರೇಹಾಳ, ಗುಲೆಗುಳಿ ಈಗಿನ ಗುಳಗುಳಿ ಗ್ರಾಮವಾಗಿವೆ. ಆದರೆ ಅವ್ವಗೇರಿ, ಸಿಂಗಾಪೂರ ಗ್ರಾಮಗಳು ಯಾವುವು? ಎಂಬುವುದನ್ನು ಶೋಧಿಸಬೇಕಾಗಿದೆ.

ಕಾಲಕಾಲೇಶ್ವರ ಕ್ಷೇತ್ರದಲ್ಲಿರುವ ಶಾಸನವು ಕೂಡಾ ಇದೇ ಕಾಲದ ಎರಡನೆಯ ಹರಿಹರನ ಕಾಲದ್ದು (1379), ಈ ಶಾಸನವು ತೃಟಿತವಾಗಿದ್ದು, 'ಬೊಮ್ಮಗೌಡನ ಮಗ' ಎಂಬ ಉಲ್ಲೇಖವಿದೆ. ಇದರಿಂದ ಒಂದು ಐತಿಹ್ಯದ ಪ್ರಕಾರ ಬೊಮ್ಮಗೌಡ ಮತ್ತು ಸಾಯಿಮಗೌಡರು ಈ ದೇವಾಲಯಕ್ಕೆ ದತ್ತಿ ನೀಡಿದ್ದಾರೆ. ಇಲ್ಲಿನ ಶಾಸನೊಕ್ತ ಬೊಮ್ಮಗೌಡನು ಈತನೇ ಆಗಿರಬೇಕು. ಈ ದೇವಾಲಯವನ್ನು ಬಹಳಷ್ಟು ಜೀರ್ಣೋದ್ಧಾರಗೈದವರು ವಿಜಯನಗರದ ಅರಸರು. ದೇವಾಲಯದ ಅನತಿ ದೂರದಲ್ಲಿ ಸಂಪೂರ್ಣವಾಗಿ ಕಾಡು ಕಲ್ಲಿನಲ್ಲಿಯೇ ಕೆತ್ತಿದ ನಂದಿಶಿಲ್ಪವಿದೆ. ಆದರ ಕೆತ್ತನೆಯು ನಾಜೂಕಲ್ಲದಿದ್ದರೂ ನೋಡುಗರ ಗಮನವನ್ನು ಸೆಳೆಯುತ್ತದೆ. ಈ ಬೃಹದಾಕಾರದ ಏಕಶಿಲೆಯ ನಂದಿಯು ಪ್ರಚಾರವಿಲ್ಲದೆ ಎಲೆಯ ಮರೆಯ ಫಲದಂತೆ, ಕಾಲಕಾಲೇಶ್ವರದಿಂದ ಗುಡೂರಿಗೆ ಹೋಗುವ ಕಣಿವೆಯ ಮಾರ್ಗದಲ್ಲಿ ರಸ್ತೆಗೆ ಹೊಂದಿ ನಿಂತಿದೆ. ಇದು 25 ಅಡಿ ಉದ್ದ, 12 ಅಡಿ ಅಗಲ ಮತ್ತು 23 ಅಡಿ ಎತ್ತರವನ್ನು ಹೊಂದಿದೆ. ಈ ಭಾಗದಲ್ಲಿ ಇದನ್ನು ಆನೆಗುಂದಿ ಬಸವಣ್ಣನೆಂದು ಕರೆಯುತ್ತಾರೆ. ಈ ಹೆಸರಿನ ಸುಳಿವಿನಿಂದ ಇದು 16ನೆಯ ಶತಮಾನಕ್ಕೆ ಸೇರಿದೆ. ಈ ಹಿನ್ನೆಲೆಯಲ್ಲಿ ನಂದಿಯನ್ನು ವಿಜಯನಗರ ಅರಸರ ಕೊನೆಯ ಸಂತತಿಯವರಾದ ಆನೆಗುಂದಿ ಅರವೀಡು ಅರಸರ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ.1572–

1680) ಕೆತ್ತಿದ್ದಾರೆಂದು ಸ್ಪಷ್ಟವಾಗುತ್ತದೆ. ವಿಜಯನಗರ ಪತನದ ನಂತರ ಅರವೀಡು ಸಂತತಿಯ ಅರಸರ ಶಾಖೆಯೊಂದು ಸ್ವಲ್ಪ ದಿನಗಳ ಕಾಲ ಆನೆಗುಂದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿತು. ಇದೇ ಅರಸರು ಮುಂದೆ ಪೆನಗೊಂಡೆಗೆ ಹೋದರು. ಇವರು ಆನೆಗುಂದಿಯಲ್ಲಿರುವಾಗ ಅರವೀಡು ಸಂತತಿಯ ಮೊದಲ ಅರಸ ಶ್ರೀರಂಗರಾಯರು (ಕ್ರಿ.ಶ.1572–85) ಆಳ್ವಿಕೆ ಮಾಡಿದರು. ಈ ಅರಸನಿಗೆ ಬೇಟೆಯ ಖಯ್ಯಾಲಿ ಇತ್ತೆಂದು, ಈ ಪ್ರದೇಶದಲ್ಲಿ ಈ ಅರಸರು ಬೇಟೆಗೆ ಬರುತ್ತಿದ್ದರೆಂದು ಬಹಳಷ್ಟು ಕಥೆ ಮತ್ತು ಐತಿಹ್ಯಗಳು ಈ ಭಾಗದಲ್ಲಿವೆ. ಇಲ್ಲಿಂದ ಸ್ವಲ್ಪ ದೂರದಲ್ಲಿರುವ ನಾಗೇಂದ್ರಗಡ ಗ್ರಾಮದ ಸನಿಹದ ಹೊಗರಿ ಕೆರೆಯ ಪ್ರದೇಶದ, ಶಾಸನಗಳಲ್ಲಿ ಪೊಂಗರಿ ಎನ್ನಿಸಿಕೊಂಡ ಪರಿಸರದಲ್ಲಿ ಈ ಅರಸನು ಬೇಟೆಗೆ ಬಂದು ಪೊಂಗರಿಯ ಒಡತಿ ಹೊಂಬಾಳೆ ಎಂಬವಳನ್ನು ಮೋಹಿಸಿದನೆಂದು ನಾಗೇಂದ್ರಗಡದ ಪರಿಸರ ಜನರು ಕಥೆಯನ್ನು ಹೇಳುತ್ತಾರೆ. ಇದೆಲ್ಲವನ್ನು ಗಮನಿಸಿದರೆ ಅರಸ ಶ್ರೀರಂಗರಾಯನು ಈ ಭಾಗದಲ್ಲಿ ಬಹಳಷ್ಟು ಸಖ್ಯವನ್ನು ಹೊಂದಿರಬೇಕು. ವಿಜಯನಗರದ ಪತನದ ನಂತರ ಜಿಗುಪ್ಸೆಯನ್ನು ಹೊಂದಿದ ಈ ಅರಸನು ದೇವತಾ ಸೇವೆ, ಮಂದಿರಗಳ ಜೀರ್ಣೋದ್ಧಾರ, ಮೂರ್ತಿಗಳನ್ನು ಕೆತ್ತಿಸುವ ಕೈಂಕರ್ಯವನ್ನು ಕೈಗೊಂಡಿರಬೇಕು. ಈ ಭಾಗದಲ್ಲಿ ಸಂಚರಿಸುವಾಗ ಈ ಅರಸನು ಕ್ರಿ.ಶ.1572–85 ರ ಸಮಯದಲ್ಲಿಯೇ ನಂದಿ ಮೂರ್ತಿಯನ್ನು ಕೆತ್ತಿಸಿದ್ದಲ್ಲದೇ, ಪಕ್ಕದಲ್ಲಿರುವ ಕಾಲಕಾಲೇಶ್ವರ ದೇವಾಲಯದ ಜೀರ್ಣೋದ್ಧಾರಗೈದರು. ಅದಕ್ಕೆ ಸಾಕ್ಷಿಯಾಗಿ ಇಲ್ಲಿನ ಕಟ್ಟಡಗಳು ವಿಜಯನಗರದ ಶೈಲಿಯಲ್ಲಿವೆ. ಈ ದೇವಾಲಯದ ತಪ್ಪಲಿನಲ್ಲಿ ವಿಜಯನಗರ ಅರಸರ ಕಾಲಕ್ಕೆ ಸೇರಿದ ನಂದಿ ಸ್ಮಾರಕ ಸ್ಥಂಭವಿದೆ.

ಪಂಚತಂತ್ರ ಬರೆದ ದುರ್ಗಸಿಂಹ ಮತ್ತು ನಾಗವರ್ಮರ ಜನ್ಮ ಭೂಮಿ ಸವಡಿಯಲ್ಲಿ (ಸಯ್ಯಡಿ) ದೊರೆತ ಶಾಸನವು ಎರಡನೆಯ ದೇವರಾಯನ ಕಾಲದ್ದು (1431), ಶಾಸನದಲ್ಲಿ ಬಾಗಿಲವಾಡದ ತಿಪ್ಪಣ್ಣ ನಾಯಕರ ಮಕ್ಕಳಾದ ಚೌಡನಾಯಕರು ಬಾದಾಮಿ ಸೀಮೆಯೊಳಗಣ ಸವಡಿ ತ್ರೈಮೂರ್ತಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದರು. ಇದನ್ನು ಗಮನಿಸಿದಾಗ ಅಂದು ಸಯ್ಯಡಿಯು ಬಾದಾಮಿ ಪ್ರದೇಶಕ್ಕೆ ಸೇರಿತ್ತೆಂದು ಸ್ಪಷ್ಟವಾಗುತ್ತದೆ. ಇದನ್ನು ಪುಷ್ಟೀಕರಿಸುವಂತೆ ಬಾದಾಮಿ ಶಾಸನದಲ್ಲಿ ಕೂಡಾ ಸವಡಿಯ ಉಲ್ಲೇಖವಿದೆ.

ರೋಣದ ಸನಿಹದಲ್ಲಿರುವ ಗಾಡಗೋಳಿ ಗ್ರಾಮದಲ್ಲಿರುವ ಶಾಸನವು ಅರಸ ಕೃಷ್ಣದೇವರಾಯನ (1520) ಕಾಲದ್ದು. ಇದರಲ್ಲಿ ಈ ಊರಿನಲ್ಲಿರುವ ಹನುಮಂತ ದೇವರ ನೈವೇದ್ಯಕ್ಕಾಗಿ ದಾನವನ್ನು ನೀಡಿದ ಉಲ್ಲೇಖವಿದೆ. ಇದು ಪೂರ್ತಿಯಾಗಿ ಸಂಸ್ಕೃತ ಶ್ಲೋಕದಿಂದ ಕೂಡಿದೆ. ಹೀಗೆ ಈ ತಾಲೂಕಿನಲ್ಲಿ ನಾಲ್ಕು ಶಾಸನಗಳು ವಿಜಯನಗರ ಅರಸರ ಕಾಲಕ್ಕೆ ಸೇರಿವೆ.

08. ಬೇಳಿಂಜೆಯ ಶಾಸನೋಕ್ತ ಲೋಹದ ಶಿಲ್ಪಗಳು

ಪ್ರೊ. ಟಿ. ಮುರುಗೇಶಿ

ಉಡುಪಿ ಜಿಲ್ಲೆ ಕಾರ್ಕಳ ತಾಲೂಕಿನ ಹೆಬ್ರಿಯ ಸಮೀಪದಲ್ಲಿರುವ ಬೇಳಿಂಜೆ ಶ್ರೀಜನಾರ್ಧನ ದೇವಾಲಯದಲ್ಲಿ ಶಾಸನೋಕ್ತ ಶ್ರೀವಿಠಲ ಮತ್ತು ಜನಾರ್ಧನ ದೇವರ ಪಂಚಲೋಹದ ವಿಗ್ರಹಗಳು ಪತ್ತೆಯಾಗಿವೆ.

ಮೂರ್ತಿಶಿಲ್ಪಶಾಸ್ತ್ರ ಮತ್ತು ಸಾಂಸ್ಕೃತಿಕ ಇತಿಹಾಸ ದೃಷ್ಟಿಯಿಂದ ಈ ಸಂಶೋಧನೆ ಅತ್ಯಂತ ಮಹತ್ವ ಪೂರ್ಣವಾಗಿದೆ. ಏಕೆಂದರೆ ಈ ಶಿಲ್ಪಗಳನ್ನು ಶಾಸನದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಆದ್ದರಿಂದ ಈ ಶಿಲ್ಪಗಳನ್ನು ವಿಜಯನಗರ ಕಾಲದ ಸಂಗಮ ಶೈಲಿಯ ಖಚಿತ ಮಾದರಿಗಳಾಗಿ ಇಟ್ಟುಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಬಹುದಾಗಿದೆ. ದೇವಾಲಯದಲ್ಲಿರುವ ಅಪ್ರಕಟಿತ ಶಾಸನ ಜಯಾಭ್ಯುದಯ ಶಕವರುಷ ಸಾವಿರದ ಮೂರುನೂರ ಯಿಪ್ಪತ್ತಾರನೇ ತಾರಣ ಸಂವತ್ಸರದಲ್ಲಿ ಅಂದರೆ ಕ್ರಿ.ಶ. 1404ರಲ್ಲಿ ಶ್ರೀ ವೀರಪ್ರತಾಪ ಹರಿಹರ ಮಹಾರಾಯರು ವಿಜಯನಗರಿಯಲಿ ಆಳುತಿಹ ಕಾಲದಲ್ಲಿ, ಪಂಡರಿದೇವರು ಬಾರಕೂರ ರಾಜ್ಯವ ಆಳುತಿಹ ಕಾಲದಲಿ, ಮಲ್ಲಿಕಾರ್ಜುನ ರಾಯರ ನಿರೂಪದಿಂದ ಕಂಗು ಮಠದ ಶ್ರೀಪಾದ ಒಡೆಯರ ಶಿಷ್ಯರಾದ ಭೋದಣತೀರ್ಥ ಶ್ರೀ ಪಾದಂಗಳು ಸಹಾ ಆರಾಧನೆ ಮಾಡುವ ಶ್ರೀವಿಠಲ ದೇವರ ಅಮ್ರತಪಡಿ ಮತ್ತು ನಂದಾದೀಪಕ್ಕೆ, ಆರು ನೂರು ಕಾಟಿಯ ಗದ್ಯಾಣಗಳನ್ನು ಮತ್ತು ಆ ವಿಠಲ ದೇವರ ನೆಯಿವೇದ್ಯಕ್ಕೆ ನಾಲ್ವತ್ತರಲಿ ಒಂಭತ್ತು ಮೂಡೆ ಅಕ್ಕಿಯನು ಬ್ರೆಳಂಜೆಯ ಬುದ್ಧಿವಂತರು ಮತ್ತು ಜನನಿಗಳ ಅನುಮತದಿಂದ ದಾನವಾಗಿ ನೀಡಲಾಯಿತು ಎಂದು ಹೇಳಲಾಗಿದೆ. ಶಾಸನದ ಮೇಲ್ಭಾಗದಲ್ಲಿ ವಿಠಲನ ಉಬ್ಬುಶಿಲ್ಪವಿದೆ ಮತ್ತು ಈ ಶಿಲ್ಪ ಲೋಹ ಶಿಲ್ಪದ ತದ್ರೂಪಿಯಾಗಿದೆ. ಶಿಲ್ಪದ ಬಲಭಾಗದಲ್ಲಿ ಚಕ್ರ ಮತ್ತು ಎಡಭಾಗದಲ್ಲಿ ಶಂಖುವಿನ ಉಬ್ಬುಶಿಲ್ಪಗಳಿವೆ. ಆದ್ದರಿಂದ, ವಿಜಯನಗರ ಕಾಲದ ವಿಠಲ ಶಿಲ್ಪಗಳ ಪ್ರತಿಮಾಶಾಸ್ತ್ರದ ಅಧ್ಯಯನಕ್ಕೆ ಬೇಳಿಂಜೆಯ ಶಿಲ್ಪಗಳನ್ನು ಪ್ರಮಾಣಭೂತ ಮಾದರಿಗಳಾಗಿ ಬಳಸಿಕೊಳ್ಳಬಹುದಾಗಿದೆ.

ಮದ್ಯಯುಗೀನ ತುಳುನಾಡಿನಲ್ಲಿ ವೈಷ್ಣವ ಪಂಥದ ಅನೇಕ ದೇವಾಲಯಗಳು ಹಾಗೂ ನೂರಾರು ಶಿಲ್ಪಗಳು ಕಂಡುಬರುತ್ತವೆ. ವಿಠಲ ಪಂಥಕ್ಕೆ ಸೇರಿದ ಏಕೈಕ ದೇವಾಲಯ ಉಡುಪಿ ಜಿಲ್ಲೆ, ಉಡುಪಿ ತಾಲೂಕಿನ ಭದ್ರಗಿರಿಯಲ್ಲಿ ಕಂಡುಬರುತ್ತದೆ. ಇಲ್ಲಿನ ವಿಠಲ ಶಿಲ್ಪವನ್ನು ಕ್ರಿ.ಶ. 16ನೇ ಶತಮಾನದ ಶಿಲ್ಪವೆಂದು ಡಾ. ಪಿ. ಗುರುರಾಜ ಭಟ್ಟರು ಕಾಲ ನಿರ್ಣಯ ಮಾಡಿರುತ್ತಾರೆ. ಉಡುಪಿ ತಾಲೂಕಿನ ಶಿರೂರು ಮಠದ ಎರಡು ಲೋಹದ ವಿಠಲ ಶಿಲ್ಪಗಳು, ಅದೇ ತಾಲೂಕಿನ, ಕುಂಜಾರುವಿನಲ್ಲಿರುವ ಪಾಜಕದ ಒಂದು ಲೋಹದ ವಿಠಲ ಶಿಲ್ಪ ಹಾಗೂ ಮಂಗಳೂರು ತಾಲೂಕಿನ ಕರ್ನಿರೆಯಲ್ಲಿರುವ ಒಂದು ವಿಠಲನ ಲೋಹದ ಶಿಲ್ಪವನ್ನು ಡಾ. ಪಿ. ಗುರುರಾಜ ಭಟ್ಟರು ಪ್ರಕಟಿಸಿದ್ದಾರೆ. ಶಿರೂರು ಮಠದ ಶಿಲ್ಪಗಳ ಕಾಲವನ್ನು 14ನೇ ಶತಮಾನವೆಂದು, ಪಾಜಕದ ಶಿಲ್ಪದ ಕಾಲವನ್ನು 16ನೇ ಶತಮಾನದ್ದೆಂದು ಮತ್ತು ಕರ್ನಿರೆಯ ಶಿಲ್ಪದ ಕಾಲವನ್ನು 15ನೇ ಶತಮಾನದ್ದೆಂದು ಕಾಲ ನಿರ್ದೇಶನ ಮಾಡಿರುತ್ತಾರೆ. ಶಿರೂರಿನ ವಿಠಲ ಶಿಲ್ಪಗಳು ಸಂಪೂರ್ಣವಾಗಿ ಬೇಳಿಂಜೆಯ ಶಿಲ್ಪವನ್ನು ಹೋಲುತ್ತವೆ. ಕೇವಲ ವಸ್ತ್ರ ವಿನ್ಯಾಸದಲ್ಲಿ ಮಾತ್ರವೇ ಭಿನ್ನತೆಯಿದೆ. ಆದರೆ, ಕರ್ನಿರೆ ಮತ್ತು ಪಾಜಕದ ಶಿಲ್ಪಗಳು ವಿನ್ಯಾಸ ಮತ್ತು ಶೈಲಿಯಲ್ಲಿ ಭಿನ್ನವಾಗಿದ್ದು, ಬೇಳಿಂಜೆಯ ವಿಠಲ ಶಿಲ್ಪದ ನಂತರ ಕಾಲದಲ್ಲಿ ರೂಪುಗೊಂಡ ಶಿಲ್ಪಗಳೆಂದು ಸ್ಪಷ್ಟವಾಗುತ್ತದೆ.

ಬೇಳಿಂಜೆಯ ವಿಠಲ ದೇವರು

ಪದ್ಮಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ವಿಠಲ ಶಿಲ್ಪ 28 ಸೆ.ಮೀ. ಎತ್ತರವಿದೆ. ಎರಡೂ ಕೈಗಳು ಕಟಿ ಸ್ಥಾನದಲ್ಲಿವೆ, ಬಲಗೈ ಹಸ್ತ ಕೆಳಮುಖವಾಗಿ ತೋರುತ್ತದೆ. ಎಡಗೈಯಲ್ಲಿ ಶಂಖವಿದೆ. ತಲೆಯಲ್ಲಿ ಕರಂಡ ಮುಕುಟವಿದ್ದು, ಕಿವಿಯಲ್ಲಿ ಮಕರ ಕುಂಡಲಗಳಿವೆ. ಕಂಠದಲ್ಲಿ ಕಂಠಾಭರಣ, ತೋಳು ಮತ್ತು ಕೈಗಳಲ್ಲಿ ಬಳೆಗಳಿವೆ. ದುಂಡು ಮುಖ, ಪದ್ಮಲೋಚನ ಮತ್ತು ನೀಳ ನಾಸಿಕದ ಈ ಶಿಲ್ಪ ಅತ್ಯಂತ ಸುಂದರವಾಗಿದೆ. ಸೊಂಟದಿಂದ ಮೊಣಕಾಲಿನವರೆಗೆ ಪಾರದರ್ಶಕವಾದ ಉಡುಗೆಯಿದೆ. ಸೊಂಟದಿಂದ ಪಾದದವರೆಗೆ ನಡುವೆ ನೆರಿಗೆಗಳನ್ನು ಇಳಿಬಿಡಲಾಗಿದೆ. ಇದು ಶಾಸನೋಕ್ತ ಶಿಲ್ಪವಾಗಿದ್ದು, 14ನೇ ಶತಮಾನದ ಶಿಲ್ಪವೆಂದು ಖಚಿತವಾಗುತ್ತದೆ. ಆದ್ದರಿಂದ ತುಳುನಾಡಿನಲ್ಲಿ ಈವರೆಗೆ ದೊರೆತ ವಿಠಲ ಶಿಲ್ಪಗಳಲ್ಲಿ ಬೇಳಿಂಜೆಯ ವಿಠಲ ಶಿಲ್ಪವೇ ತುಳುನಾಡಿನ ಅತ್ಯಂತ ಪ್ರಾಚೀನ ಶಿಲ್ಪ ಎನ್ನುವುದರಲ್ಲಿ ಯಾವುದೇ ಸಂಶಯಗಳಿಲ್ಲ.



ಬೇಳಿಂಜೆಯ ವಿಠಲ ದೇವರು

ಬೇಳಿಂಜೆಯ ಜನಾರ್ಧನ ಶಿಲ್ಪ

ದೇವಾಲಯದ ಬಲಿ ಮೂರ್ತಿಯಾಗಿರುವ ಜನಾರ್ಧನ ಶಿಲ್ಪ, ಚತುರ್ಭುಜ ಮೂರ್ತಿಯಾಗಿದ್ದು, ಸಮಭಂಗಿಯಲ್ಲಿ ಪದ್ಮ ಪೀಠದ ಮೇಲೆ ನಿಂತಿದೆ. ಹಿಂದಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖ, ಮುಂದಿನ ಬಲಗೈಯಲ್ಲಿ ಪಿಂಡ ಮತ್ತು ಎಡಗೈಯನ್ನು ಕಟಿಯಲ್ಲಿ ಇಡಲಾಗಿದೆ. ಉಪವೀತ ಮತ್ತು ಉದರಬಂಧಗಳೊಂದಿಗೆ ಸರ್ವಾಲಂಕೃತವಾದ ಈ ಶಿಲ್ಪ ಕರಂಡ ಮುಕುಟಧಾರಿಯಾಗಿದೆ. ಶಿಲ್ಪಗಳ ಶೈಲಿ ಮತ್ತು ಶಾಸನದ ಆಧಾರದ ಮೇಲೆ ಈ ಶಿಲ್ಪಗಳನ್ನು 14ನೇ ಶತಮಾನದ ಶಿಲ್ಪಗಳೆಂದು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಈ ಶಿಲ್ಪಗಳ ಅಧ್ಯಯನ ಮತ್ತು ಶಾಸನವನ್ನು ಪ್ರತಿ ಮಾಡಲು ಅವಕಾಶ ನೀಡಿದ ದೇವಾಲಯದ ಅನುವಂಶಿಕ ಮೊಕ್ತೇಸರರಾದ ಸುಬ್ರಹ್ಮಣ್ಯ ಹೊಳ್ಳ ಮತ್ತು ಅವರ ಅಳಿಯ ವಾಸುದೇವ ಸಾಮಗ ಹಾಗು ಅವರ ಪತ್ನಿ ಶುಭಲಕ್ಷ್ಮಿ, ನನ್ನ ವಿದ್ಯಾರ್ಥಿಗಳಾದ ವಿಶ್ವರಾಜ ಭಟ್ ಮತ್ತು ಶ್ರೀಕಾಂತ್ ನಾಯಕ್ ಇವರಿಗೆ ನಾನು ಅಭಾರಿಯಾಗಿದ್ದೇನೆ.



ಬೇಳಿಂಜೆಯ ಜನಾರ್ಧನ ಶಿಲ್ಪ

ಅಡಿಟಿಪ್ಪಣಿಗಳು

1. *Archaeologists Discover Rare Vijayangar Icons,* Bangalore Mirror: 11/12/2014
2. Dr. P. Gururaja Bhatt: *Studies in Tuluva History and Culture*, pp. 333. 2014 (reprint), Dr. Paduru Gururaja Bhatt Memorial Trust. Udupi.
3. *Ibid.*, Plate 203 (a), (c), 272 (a)

9. ವಿಜಯನಗರ ಪತನದ ಮೂಕಸಾಕ್ಷಿಗಳಾದ ಭೂಗತವಾದ ದೇವಿ ದೇಗುಲದ ಪೂಜಾ ಪರಿಕರಗಳು : ವಿಠಲ ದೇವಾಲಯ, ವೆಂಕಟಾಪುರ, ಹಂಪಿ

ಟಿ.ಎಮ್. ಕೇಶವ

ವಿಜಯನಗರ ಸಾಮ್ರಾಜ್ಯದ ಮಹಾನಗರವಾದ ವಿಜಯನಗರದಲ್ಲಿ (ಹಂಪಿ) ಪುರಾತತ್ವ ಶಾಸ್ತ್ರಜ್ಞನ ಬರುವಿಕೆಗೆ, ಆತನ ಸೂಕ್ಷ್ಮ ಕಣ್ಣಿಗೆ ಗೋಚರವಾಗಲು ಇನ್ನೂ ಅಸಂಖ್ಯಾತ ಮಹತ್ವ ಪೂರ್ಣವಾದ ಅಂಶಗಳು ಕಾದು ಕುಳಿತಿವೆಯೆಂದರೆ ಆಶ್ಚರ್ಯಪಡಬೇಕಾದ ವಿಷಯವೇನಲ್ಲ. ಈ ಕೆಲಸ ಎಷ್ಟು ಬೇಗ ಆದರೆ ಅಷ್ಟು ಒಳ್ಳೆಯದು. ಹಂಪಿಯ ಒಡನಾಟದಲ್ಲಿ ಆಗೊಮ್ಮೆ ಈಗೊಮ್ಮೆ ಕೆಲಸ ಮಾಡುತ್ತಾ 35 ವರ್ಷಗಳ ಕೇಂದ್ರ ಸರ್ಕಾರದ ಅಧಿಕಾರಿಯಾಗಿದ್ದ ನನಗೆ ಇತ್ತೀಚಿನ ಒಂದು ದಶಕದಲ್ಲಿ ಭಾ.ಪು.ಸ., ಬೆಂಗಳೂರು ವಲಯ ನಡೆಸಿದ ಸಂರಕ್ಷಣಾ ಕಾರ್ಯದಲ್ಲಿ ಹಂಪಿಯಲ್ಲಿ ದೊರೆತ ಅಮೂಲ್ಯ ಚಿನ್ನಾಭರಣಗಳು, ವಿಜಯನಗರದಲ್ಲಿ ಇದ್ದಿರಬಹುದಾದ ಅತುಲ ಸಂಪತ್ತಿನ ಬಗ್ಗೆ ಒಂದು ಸೂಕ್ಷ್ಮ ಮಾಹಿತಿಯನ್ನು ನೀಡುವುದರಲ್ಲಿ ಯಶಸ್ವಿಯಾಗಿದೆ ಎಂದರೆ ತಪ್ಪಾಗಲಾರದು. ಅವುಗಳು ದೊರೆತ ಸ್ಥಳ, ರೀತಿ, ಸಂದರ್ಭಗಳೆಲ್ಲವನ್ನು ವಿಶ್ಲೇಷಿಸುತ್ತಾ ಹೋದಲ್ಲಿ ವಿಜಯನಗರದ ಅಂತ್ಯ ಮತ್ತು ಅವಸಾನ ಕಾಲದಲ್ಲಿ ಅಂದಿನ ಪ್ರಜೆಗಳು ತಮ್ಮ ಹಾಗೂ ತಾವು ದಿನ ನಿತ್ಯ ಆರಾಧಿಸುತ್ತಿದ್ದ ದೈವದ ಪೂಜಾ ಪರಿಚರ್ಯೆಯ ಪರಿಕರಗಳನ್ನು, ಧಾಳಿಯ ಕಾರ್ಮೋಡದ ನೆರಳು ಸರಿಯುವ ತನಕ ಕಾಪಾಡಲು ಭೂಮಿಗತ ಮಾಡಿದ್ದರೆಂಬುದನ್ನು ನಿರ್ವಿವಾದವಾಗಿ ಕೈ ತೋರಿಸುವುದಂತೂ ನಿಜ.

ಪುನಃ ವಿಜಯನಗರದ ಸಂಶೋಧನೆಯಲ್ಲಿ, ಯಾವತ್ತೂ ತೊಡಗಿಸಿಕೊಂಡಿರುವ ವಿದ್ವಾಂಸರುಗಳಿಗೆ, ಮತ್ತೊಮ್ಮೆ ಭಾ.ಪು.ಸಾ. ಕೈಗೆತ್ತಿಕೊಂಡಿದ್ದ ಸಂರಕ್ಷಣಾ ಕೆಲಸಗಳನ್ನು ನೆನಪಿಸುತ್ತಾ

1. 1986ನೇ ಇಸವಿಯಲ್ಲಿ ಅಚ್ಯುತ ಬಜಾರಿನಲ್ಲಿ ದೊರಕಿದ ಚಿನ್ನದ ಹಣ.
2. 2000ರಲ್ಲಿ ಪ್ರಸನ್ನ ನರಸಿಂಹ ದೇವಾಲಯದ ದಕ್ಷಿಣ ದೇವಾಲಯದ ದ್ವಾರದ ತಿರುವಿನಲ್ಲಿ, ನೆಲಮಟ್ಟದಿಂದ ಕೇವಲ 10–20 ಸೆಂ.ಮೀ. ಆಳದಲ್ಲಿ ದೊರೆತ ಚಿನ್ನದ ಪದಕ ಮತ್ತು ಕಂಕಣಗಳ ತುಣುಕುಗಳು.
3. 2003, 04, 05ರ ಆಸುಪಾಸಿನಲ್ಲಿ ವಿಠಲ ದೇಗುಲದ ಪೂರ್ವ ಬಜಾರಿನ ಉತ್ತರ ದಿಕ್ಕಿನ ಮಂಟಪಗಳನ್ನು ದುರಸ್ಥಿಗೊಳಿಸುವಾಗ ಪಾವಟಿಕೆಗಳ ಬಳಿ ದೊರೆತ 80ಕ್ಕೂ ಮಿಗಿಲಾದ ಚಿನ್ನದ ಬೇಳೆಕಾಳುಗಳು.
4. 2006ರಲ್ಲಿ ರಾಜ ಪ್ರಾಂಗಣದ ಪೂರ್ವದ ಎರಡನೇ ಆವರಣದ ಗೋಡೆಯನ್ನು ದುರಸ್ಥಿಗೊಳಿಸುವಾಗ ದೊರೆತ 30ಕ್ಕೂ ಮಿಗಿಲಾದ ವೇಂಕಟ ವರಹಗಳು
5. 2006–7ರಲ್ಲಿ ಅಚ್ಯುತ ಬಜಾರಿನ ಜರುಗಿದ ಪೂರ್ವ ಮಂಟಪಗಳ ಅಧಿಷ್ಠಾನವನ್ನು ಪುನಃ ಜೋಡಿಸುವಾಗ ಮಂಟಪ ಅಂಕಣದ ನೆಲದಲ್ಲಿ ಬಚ್ಚಿಟ್ಟಿದ್ದ ಆಭರಣಗಳ ತುಣುಕುಗಳಿದ್ದ ಆಭರಣಗಳ ತಾಮ್ರ ಕರಂಡಕ (ಪೆಟ್ಟಿಗೆ). ಅದೇ ಸಮಯದಲ್ಲಿ ಋಶ್ಯಮೂಕ ಪರ್ವತದ ಪಶ್ಚಿಮದ ಇಳಿಜಾರಿನಲ್ಲಿ ನಿರ್ಮಿತವಾಗಿದ್ದ ಈಗ ಖಂಡಿತವಾಗಿರುವ ವೇಣುಗೋಪಾಲ ಸ್ವಾಮಿಯ ಅರ್ಚಕ/ಪರಿಚಾರಕನ ಮನೆಯ ಹಿಂಬದಿಯ ಗಟಾರದಲ್ಲಿ ದೊರೆತ ಚಿನ್ನದ ಆಭರಣಗಳು ಮತ್ತು ಚಿನ್ನದ ನಾಣ್ಯಗಳು.
6. 2008–09ರಲ್ಲಿ ವಿಠಲ ದೇಗುಲದ ಪ್ರವೇಶ ಚೀಟಿ ಕೊಡುವ ಮಂಟಪದ ಹಿಂಬದಿಯಲ್ಲಿ ಸ್ವಚ್ಛಗೊಳಿಸುವಾಗ ದೊರೆತ ಚಿನ್ನದ ಕಲಶದ ತುಣುಕುಗಳು, ಅಂದಿನ ಕಾಲದಲ್ಲಿ ವೈಭವೋಪೇತವಾಗಿದ್ದ ವಿಜಯನಗರದ ಬಗ್ಗೆ ತಿಳಿಸುತ್ತವೆ ಎಂಬುದನ್ನು ಮನಗಾಣಬಹುದು.

ಇದಕ್ಕೆ ಪೂರಕವಾಗಿ ವಿಜಯನಗರದಲ್ಲಿಯೇ ದೊರಕುವ ಅನೇಕ ಶಾಸನಗಳು ಅವರ ರಾಜಧಾನಿಯಲ್ಲಿದ್ದ ಅನೇಕ ದೇವಾಲಯಗಳ ಮೂಲದೇವರಿಗೆ ನವರತ್ನಖಚಿತ ಆಭರಣಗಳನ್ನು, ನಿತ್ಯ ನೈಮಿತ್ತಿಕ ಪೂಜಾದಿಗಳು ಸುಸೂತ್ರವಾಗಿ

ನಡೆಸಿಕೊಂಡು ಹೋಗಲು ಅನುವಾಗುವಂತೆ ಹೊನ್ನಿನ ಹರಿವಾಣಗಳನ್ನು, ವಿವಿಧ ಬಗೆಯ ಆರತಿ ಹಲಗೆಗಳನ್ನು, ಧೂಪ ಹಾಕುವ ಕರಂಡಿಕೆ, ತಟ್ಟೆಗಳನ್ನು ವಿಪುವಾಗಿ ದಾನ ಮಾಡುತ್ತಿದ್ದರ ಉಲ್ಲೇಖವಿದೆ.

ಉದಾಹರಣೆಗಾಗಿ ಹೇಳುವುದಾದರೆ ಶ್ರೀ ಕೃಷ್ಣದೇವರಾಯರು ಶ್ರೀ ವಿರೂಪಾಕ್ಷ ದೇವರಿಗೆ ರತ್ನಖಚಿತ ನಾಗಾಭರಣವನ್ನು, ಚಿನ್ನದ ಮತ್ತು ಬೆಳ್ಳಿಯ ಆರತಿ ಹಲಗೆಗಳನ್ನು ದಾನ ಮಾಡಿದುದರ ವಿವರ ವಿರೂಪಾಕ್ಷ ದೇವಾಲಯದ ದಕ್ಷಿಣ ಪ್ರವೇಶ ದ್ವಾರದಲ್ಲಿರುವ ಶಾಸನದಲ್ಲಿ ದೊರೆಯುತ್ತದೆ. (*ಹಂಪಿ ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3, ಶಾಸನ ಸಂಖ್ಯೆ 17–18, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, 2000, ಪು. 33). ವಿಠಲ ದೇಗುಲದಲ್ಲಿರುವ ಅದೇ ಅರಸನ ಮತ್ತೊಂದು ಶಾಸನದಲ್ಲಿ ದೇವರಿಗಾಗಿ ನೀಡಿದ ಪೂಜಾ ಪರಿಕರಗಳ ಯಾದಿಯನ್ನು ಕೆಳಗೆ ನಮೂದಿಸಿದಂತೆ ನೀಡಿರುವುದನ್ನು ಕಾಣಬಹುದು. ಇದು ಪ್ರಸ್ತುತ ಲೇಖನಕ್ಕೆ ಸಹಕಾರಿಯೂ ಹೌದು.

1. ಚಿಂನದ ಹರಿವಾಣ: 1, 11.3.1913ರ ಶಾಸನ
2. ನೀರಾಂಜನ ಕಲಿಗೆ: 9 – ಬೆಳ್ಳಿ
3. ಹಿರಿಯ ಆರತಿ: 8
4. ನಾಗಾರತಿ: 3
5. ಧೂಪಾರತಿ: 1
6. ಕಖಿಡಿ ಬರ್ತಿ: 2
7. ಪ್ರತುಮೆ ಆರತಿ: 1

(*ಹಂಪಿ ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3, ಶಾಸನ ಸಂಖ್ಯೆ 181, 182, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, 2000, ಪು. 130–134)

ಶ್ರೀಮುಖ ಸಂವತ್ಸರದ ಚೈತ್ರ ಶು. ಪಂಚಮಿ ಶುಕ್ರವಾರ ಶಕ ವರ್ಷ 1435ರಲ್ಲಿ ಶ್ರೀ ಕೃಷ್ಣದೇವರಾಯನ ಅರಸಿಯರಾದ ಚಿಂನ್ನಾದೇವಿ ಮತ್ತು ತಿರುಮಲ ದೇವಿಯರು ಶ್ರೀವಿಠಲ ದೇವರಿಗೆ ಗೋಪುರಗಳನ್ನು ಕಟ್ಟಿಸಿ, ದೇವರ ಪೂಜೆ ಮತ್ತು ಆರೋಗಣೆಗೆ ಮೇಲೆ ತಿಳಿಸಿದ ಪೂಜಾ ಪರಿಕರಗಳನ್ನು ಸಮರ್ಪಿಸಿರುತ್ತಾರೆ ಎಂಬುದಾಗಿ ಈ ಶಾಸನಗಳು ತಿಳಿಸುತ್ತವೆ. ಅಮೂಲ್ಯವಾದ ಈ ವಸ್ತುಗಳು ರಾಜ ಕೃಪೆ. ಆದುದರಿಂದ ಅವುಗಳ ಯಾದಿಯನ್ನು ಶಾಸನಗಳ ರೂಪದಲ್ಲಿ ಪ್ರಜೆಗಳ/ಶ್ರೀಸಾಮಾನ್ಯನ ಗಮನದಲ್ಲೂ ಇರುವಂತೆ, ಮಹಾದ್ವಾರದ ಇಕ್ಕೆಲಗಳಲ್ಲಿ ಕೆತ್ತಿಸಲಾಗಿದೆ. ನಿತ್ಯ ನೈಮಿತ್ತಿಕ ಪೂಜಾ ಕೈಂಕರ್ಯಗಳಿಗೆ ಬೇಕಾದ ಈ ವಸ್ತುಗಳು ದೇವಾಲಯದಲ್ಲಿಯೇ ಇರಿಸಲಾಗುತ್ತಿತ್ತು.

ಈ ಲೇಖನವು, ಇತ್ತೀಚೆಗೆ ಅಂದರೆ 2010–11 ಮತ್ತು 2012ರಲ್ಲಿ ಭಾ.ಪು.ಸಾ.ದ ಇಲಾಖೆಯು ಮೂಲ ವಿಠಲ ದೇವಾಲಯದ ವಾಯವ್ಯಕ್ಕೆ ಇರುವ ದೇವಿ ದೇವಾಲಯದ ಮುಖಮಂಟಪದ ಜೀರ್ಣೋದ್ಧಾರವನ್ನು ಕೈಗೆತ್ತಿಕೊಂಡ ಸಂದರ್ಭದಲ್ಲಿ, ಒಂದೇ ಸ್ಥಳದಲ್ಲಿ, ಉತ್ತರ ಭಾಗದಲ್ಲಿ, ಸುಮಾರು 50ಕ್ಕೂ ಮಿಗಿಲಾದ ಮೇಲೆ ತಿಳಿಸಿದಂತಹ ಪೂಜಾ ಪರಿಕರಗಳನ್ನು ಭೂಮಿಗತ ಮಾಡಿರುವುದು ಅಚ್ಚರಿಗೊಳಿಸಿತು. ಇದೊಂದು ವಿಶಿಷ್ಟವಾದ ಅಪರೂಪದ ಪತ್ತೆಯಾಗಿದ್ದು ನಿರ್ಣಾಯಕ ಯುದ್ಧದಲ್ಲಿ 1565ರಲ್ಲಿ ವಿಜಯನಗರದ ಪತನಾನಂತರ ವಿಜಯನಗರವನ್ನಾಕ್ರಮಿಸಿ ಲೂಟಿ ಮಾಡಲು ಬಂದಿದ್ದ ಶತ್ರು ಸೇನೆಯವರ ಕಣ್ತಪ್ಪಿಸಿ ರಕ್ಷಣೆಗಾಗಿ ಭೂಮಿಗತ ಮಾಡಲ್ಪಟ್ಟ ವಸ್ತುಗಳೆಂಬುದು ನಿರ್ವಿವಾದವಾಗಿ ಹೇಳುವ ಮೂಕ ಸಾಕ್ಷಿಗಳೆಂಬುದಾಗಿ ಹೇಳಬಹುದೇನೋ. ಆತುರಾತುರವಾಗಿ ಶುದ್ಧಿ ಮಾಡಲು/ತೊಳೆಯಲು ಇಟ್ಟಿದ್ದ ಪ್ರಸಾದ ತಯಾರಿಸುವ ಮಸಿ ಹಿಡಿದು ಇನ್ನೂ ಇದ್ದಲಿನ ಕಪ್ಪಿನಿಂದ ಕರೆಗೊಂಡ ತಪ್ಪಲೆಗಳು, ಕೊಳಗಗಳು, ಆರೋಗಣೆ ನೀಡುವ ಪಾತ್ರೆಗಳು, ಎಣ್ಣೆ ಕುಪ್ಪಿಗಳು, ವಿವಿಧ ರೀತಿಯ ತಟ್ಟೆಗಳು, ವಿವಿಧ ಬಗೆಯ ಆರತಿ ದೀಪಗಳು, ಅವುಗಳನ್ನಿಡುವ ಚಿನ್ನದ ಹೊಳಪಿಸಿದ ಹರಿವಾಣಗಳು, ಪ್ರಸಾದ ವಿನಿಯೋಗ ಮಾಡುವ ತಟ್ಟೆಗಳು, ಅಭಿಷೇಕದ ಶಂಖು, ಅದನ್ನಿಡುವ ಪುಟ್ಟ ಮಂದಲಿಗೆ, ಗಂಟೆ, ಪುಟ್ಟ ಗರುಡ, ಹನುಮಂತನ ಅಭಿಷೇಕ ಮೂರ್ತಿಗಳು, ವಿವಿಧ ಮುದ್ರೆಗಳು ಇತ್ಯಾದಿ ಎಲ್ಲವನ್ನೂ ಕ್ಲಿಷ್ಟ ಪರಿಸ್ಥಿತಿ ದೂರವಾದ ಮೇಲೆ ಮಗದೊಮ್ಮೆ ಉಪಯೋಗಕ್ಕೆ ಮುಖಮಂಟಪದ ದಕ್ಷಿಣ ದಿಕ್ಕಿನ ಕಲ್ಲನ್ನು ಸರಿಸಿ ಒಳಗಿನ ಮರಳನ್ನು ಸುಮಾರು 1.40 ಮೀ. ಆಳ, 75–80 ಸೆಂ.ಮೀ. ಅಗಲದ ಕುಣಿಯೊಳಗೆ ಓರಣವಾಗಿರಿಸಿ ಮತ್ತೆ ಚಪ್ಪಡಿ ಕಲ್ಲಿನಿಂದ ಮುಚ್ಚಲಾಗಿತ್ತು. ಇದರಿಂದ ತಿಳಿದುಬರುವುದೇನೆಂದರೆ – ಈ ವಸ್ತುಗಳನ್ನು ತಕ್ಷಣವೇ ರಕ್ಷಿಸಬೇಕಾದ ಅವಶ್ಯಕತೆ, ಧಾಳಿ ನಡೆಸುತ್ತಿದ್ದವರು ಬಹು ಸಮೀಪ ಬಂದಿದ್ದಿರಬೇಕು, ಸಮಯದ ಅವಕಾಶ, ತತ್ ಕ್ಷಣದ ಅಪಾಯದ ಅರಿವು ಮತ್ತು

ನಿವಾರಣೋಪಾಯ. ಇದೇ ಅಲ್ಲದೆ ಬಹು ತಡವಾಗಿ ಆಕಸ್ಮಿಕದ ಅರಿವು, ಅವುಗಳನ್ನು ತೆಗೆದುಕೊಂಡು ಹೋಗಿ ಜತನ ಮಾಡಲಾಗದ ವಿಷಮ ಸ್ಥಿತಿ. ಇದಕ್ಕೆ ಪೂರಕವಾಗಿ ವೇಣುಗೋಪಾಲ ದೇವಾಲಯದ ಪರಿಚಾರಕನೂ ತನ್ನ ಮನೆ ಧ್ವಂಸ ಆಗುವುದನ್ನು ತಪ್ಪಿಸಲಾರ ಎಂಬುದನ್ನು ಮನಗಂಡ ಮೇಲೆ ದೇವರ ಆಭರಣಗಳನ್ನು ತಾನು ಕೂಡಿಟ್ಟ ಕೆಲವು ವರಹಗಳನ್ನು ದಾಳಿಕೋರರಿಂದ ಮತ್ತು ಕಳ್ಳಕಾಕರು/ಸುಲಿಗೆ ಕೋರರಿಂದ ರಕ್ಷಿಸಲು ಬಚ್ಚಲು ಮನೆಯ ಮೋರಿಯೊಳಗೆ ಇಟ್ಟಿರುವುದರ ಮತ್ತು ತಾನು ವ್ಯಾಪಾರಕ್ಕಾಗಿ ಕುಳಿತುಕೊಳ್ಳುತ್ತಿದ್ದ ಮಂಟಪದಲ್ಲಿಯೇ ಅಚ್ಯುತ ಬಜಾರಿನ ವ್ಯಾಪಾರಿ ಆಭರಣಗಳ ಅಮೂಲ್ಯ ಹರಳುಗಳ, ಚಿನ್ನದ ತಗಡಿನ ಚೂರಿನ ಕರಂಡಕವನ್ನು ಅವುಗಳನ್ನು ಮನೆಗೆ ಒಯ್ಯಲು ವ್ಯವಧಾನವಿಲ್ಲದೆ ಬಚ್ಚಿಟ್ಟಿದ್ದು.

ಹೀಗೆ ದೊರೆತ ಕೆಲವೊಂದು ಮುಖ್ಯ ಪೂಜಾ ಸಾಮಗ್ರಿಗಳನ್ನು ಮತ್ತಿತರ ಪರಿಕರಗಳನ್ನು ಇಲ್ಲಿ ಉದಾಹರಿಸಿ, ಶಾಸನಗಳಲ್ಲಿ ಬರುವ ವಿವರಣೆಗಳನ್ನು ಅಧಿಕಾರಯುತವಾಗಿ ಸಮರ್ಥಿಸುವ ಕೆಲಸವನ್ನು ಈ ರೀತಿಯಾಗಿ ದೊರಕುವ ವಸ್ತುಗಳು ಮಾಡುತ್ತವೆಂಬುದನ್ನು ತಿಳಿಸುವ ಪ್ರಯತ್ನ ಈ ಲೇಖನದಿಂದಾಗುತ್ತದೆ ಎಂದು ರುಜುವಾತಾಗುತ್ತದೆಯಲ್ಲದೆ ಯಾವುದೇ ಊಹಾಪೋಹಗಳಿಗೆ ಚರ್ವಿತ ಕಪೋಲ ಭಾವನೆಗಳಿಗೆ ಎಡೆಯುಂಟುಮಾಡುವುದಿಲ್ಲ ಎಂಬುದನ್ನು ಮನಗಾಣಬೇಕೆಂದು ವಾಚಕರಲ್ಲಿ ಪ್ರಾರ್ಥನೆ.

ಶಂಖ ಇತ್ಯಾದಿ ಅಂದಿನ ಲೋಹದ ಪಾಕಶಾಲೆಯ ಅಡುಗೆ ಪಾತ್ರೆಗಳು, ದೇಗುಲದ ಪೂಜಾ ಪರಿಕರಗಳ ಬಗ್ಗೆ ವಿಶೇಷ ಮಾಹಿತಿ ನೀಡುವುದಲ್ಲದೆ ಅವುಗಳ ತಯಾರಿಕೆ ಬಗ್ಗೆಯೂ ಅಮೂಲ್ಯ ಮಾಹಿತಿ ನೀಡುತ್ತವೆ. ಈ ರೀತಿಯಾಗಿ ಸಂರಕ್ಷಣಾ ಸಮಯದಲ್ಲಿ ಉತ್ಖನನಗಳಿಂದ ವಿಜಯನಗರದ ಇತಿಹಾಸಕ್ಕೆ ಹೊಸ ಪುಟಗಳೂ ಸೇರ್ಪಡೆ ಆಗುತ್ತಿರುವುದೂ ಸೂರ್ಯಾ–ಚಂದ್ರರಷ್ಟೇ ಸತ್ಯ. ಇದೇ ರೀತಿ ಸಂಶೋಧನೆಗಳಿಂದ ಬದಲಾಗುತ್ತಿರುವ ಅಚ್ಯುತ ಬಜಾರದ ಬಗ್ಗೆಯೂ ಮಾಹಿತಿಯ ಸಂಗ್ರಹಣೆ ನಡೆಸಲಾಗುತ್ತಿದ್ದು ಸಹೃದಯ ವಿದ್ವಾಂಸರುಗಳ ಗಮನಕ್ಕೆ ತರಲಾಗುವುದು.

ಆಕರಗಳು

1. ಲೇಖಕರ ಪ್ರಥಮ ಮಾಹಿತಿ ಡೈರಿ.
2. ಟೆಂಪಲ್ ಟ್ರೆಷರ್ಸ್, ಸಂ. 1, ಡಾ. ಚೂಡಾಮಣಿ ನಂದಗೋಪಾಲ್, (ಸಂ). ಎಂ.ವಿ. ನಾರಾಯಣ ರಾವ್, ಪ್ರಕಟಣೆ "ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕ, 2006.

ನೈಮಿತ್ತಿಕ ಪೂಜಾ ಲೋಹ ಮೂರ್ತಿಗಳು



ದ್ವಿಭುಜ ಅಂಜಲೀಹಸ್ತ ಗರುಡ
(ಮುಂಬದಿ)



ದ್ವಿಭುಜ ಅಂಜಲೀಹಸ್ತ ಗರುಡ
(ಹಿಂಬದಿ)



ದ್ವಿಭುಜ ಅಂಜಲೀಹಸ್ತ ಗರುಡ
(ಪಾರ್ಶ್ವನೋಟ)



ದ್ವಿಭುಜ ಅಂಜಲೀಹಸ್ತ ಹನುಮ
(ಮುಂಬದಿ)



ದ್ವಿಭುಜ ಅಂಜಲೀಹಸ್ತ ಹನುಮ
(ಹಿಂಬದಿ)



ದ್ವಿಭುಜ ಅಂಜಲೀಹಸ್ತ ಹನುಮ
(ಪಾರ್ಶ್ವನೋಟ)

ಆರತಿ ಪರಿಕರಗಳು


1. ನಾಗ–ಪಂಚಾರತಿ : (ಶಾಸನದಲ್ಲಿ ಉಲ್ಲೇಖಿತವಾಗಿದೆ) : ಸಾಮಾನ್ಯವಾಗಿ ತುಪ್ಪದಲ್ಲಿ ಮಾಡಿದ ಐದು ಬತ್ತಿಗಳನ್ನು ಪಂಚ ಶೀರ್ಷ ನಾಗನ ಹೆಡೆಯ ಮೇಲಿನ ಕಿರು ಬಟ್ಟಲಿನಲ್ಲಿಟ್ಟು ಆರತಿ ಬೆಳಗುವುದು ಪದ್ಧತಿ. ಇಲ್ಲಿಯೂ ಸಹ ಅದೇ ರೀತಿ ನಾಗಾರತಿಯನ್ನು ರೂಪಿಸಿ ಹೆಡೆಯ ನಂತರ ಶರೀರ ಭಾಗವನ್ನು ಸಮಪ್ರಮಾಣದ "ಹ" ಅಕ್ಷರದಂತೆ ರೂಪಿಸಿ






ಬಾಲದ ಭಾಗವನ್ನು ಎರಡು ವರ್ತುಲಗಳ ನಡುವೆ ಬರುವಂತೆಯೂ ತದನಂತರ ಅದೇ ಭಾಗದಲ್ಲಿ ಮುಂಬದಿಗೊಂದು ನೇರ ಪೀಠವನ್ನು ಮತ್ತು ಹಿಂಬದಿಗೊಂದು ಕಮಾನಿನ ಆಕಾರದ ಪೀಠವನ್ನು ಇರಿಸಿ ಹಿಂಬದಿಯ ಕಮಾನಿನ ಮೇಲೆ ಒಂದು ತುಸುವೇ ಮುಂಚಾಚಿದ ಹೆಬ್ಬೆಟ್ಟು ಒತ್ತನ್ನು ಕೊಡಲಾಗಿದೆ. ತಾಮ್ರದಲ್ಲಿ ಮಾಡಿರುವ ಈ ಆರತಿಗೆ ಚಿನ್ನದ ಮೆರುಗನ್ನು ನೀಡಲಾಗಿದೆ.


ನಾಗರ ಹೆಡೆಯ ಒಳಭಾಗದಲ್ಲಿ ಬಾಲಗೋಪಾಲನ ಹೆಜ್ಜೆಯ ಗುರುತನ್ನೂ ತೋರಿಸಲಾಗಿದ್ದು ಕಣ್ಣುಗಳನ್ನು ದಪ್ಪ ಮಣಿಗಳಂತೆ ತೋರಿಸಲಾಗಿದೆ. ಹೆಡೆಯ ಮಣಿಯನ್ನು ದೀಪ ಹಚ್ಚಿಡುವ ಬಟ್ಟಲಿನಂತೆ ತೋರಿಸಲಾಗಿದೆ.






2. ಪಂಚದಳ ಪುಷ್ಪಾರತಿ : ಪಂಚದಳ ಪುಷ್ಪಾರತಿಯು ಎರಡು ಪಾದಗಳನ್ನು ಮತ್ತು ಮೂರು ಕೊಂಬೆಗಳನ್ನು ಒಳಗೊಂಡ ಕಮಲ ಪುಷ್ಪದ ದಳಗಳಂತೆ ರೂಪಿಸಲ್ಪಟ್ಟಿರುವ ಪಂಚಾರತಿ. ಪಾದಗಳು ಒಂದೇ ತೆರನಾಗಿದ್ದು ಮೂಲ ಕವಲಿನಿಂದ ಪಾರ್ಶ್ವಕ್ಕೆರಡು ಕವಲುಗಳೂ ಮತ್ತು ನೇರಕ್ಕೆ ಒಂದು ಕವಲು ಹೊರಟಿದ್ದು ಕಮಲ ದಳ ಬಟ್ಟಲುಗಳನ್ನು ಆಧರಿಸಿದೆ. ದಳದ ಅಷ್ಟೂ ತುದಿಗಳು ಹೊರ ಮುಖವಾಗಿದ್ದು ದಳಗಳ ನಡುವಿನ ವರ್ತುಲ ಶಿರೋಭಾಗದಲ್ಲಿ ಕಲಶದಂತೆ ಆಯೋಜಿಸಲಾದ ಇನ್ನೂ ಮೊಗ್ಗಾದ ದಳಗಳಿವೆ. ಮುಖ್ಯ ಕಾಂಡದ ಅಥವಾ ಹಿಡಿಕೆಯ ಭಾಗದಲ್ಲಿ ಅಗ್ರದಲ್ಲಿ ಹೊರಮುಖವಾಗಿ ತಿರುಚಿಕೊಂಡಿರುವ ಎಳೆಯ ಬಳ್ಳಿಗಳನ್ನು ತೋರಿಸಲಾಗಿದೆ.

3. ಪಾಣಿಬಟ್ಟಲು ಏಕಾರತಿ : ಮೇಲೆ ತಿಳಿಸಿದಂತೆ, ಪಾದಗಳಿರುವ ವಂಕಿಯಾಕಾರದ ಹಿಡಿಗಳನ್ನು ಹೊಂದಿರುವ ಕೈಪಿಡಿಯ ಭಾಗದಲ್ಲಿ ಏಕ ದಳವಿರುವ ಒಂದು ಬತ್ತಿಯ ಆರತಿ. ಪೀಠಭಾಗವು ತುಸು ಆಳವಾಗಿದ್ದು ಪ್ರನಾಳ ಭಾಗದ ಹೊರ ವಲಯವು ಒಂದು ಶಿವಲಿಂಗದ ಪಾಣಿಬಟ್ಟಲಿನಂತೆ ಹೊರಭಾಗಕ್ಕೆ ತಿರುಚಿಕೊಂಡಿವೆ. ಪ್ರನಾಳದ ಒಳ ವಲಯವು ತುಸುವೇ ಎತ್ತರಿಸಲ್ಪಟ್ಟು ಯಾವುದೇ ದ್ರವ ರೂಪದ ಎಣ್ಣೆ ಅಥವಾ ತುಪ್ಪ ಹೊರಚೆಲ್ಲದಂತೆ ರೂಪಿತವಾಗಿದೆ.




ಒಟ್ಟಿನಲ್ಲಿ ಹೇಳುವುದಾದರೆ, ಪಂಚಲೋಹದಿಂದ ಮಾಡಿದ ಈ ಆರತಿ ಪರಿಕರಗಳ ಭಾಗಗಳನ್ನು ಆರತಿ ಬಟ್ಟಲು, ಕೈಪಿಡಿ, ಪಾದ ಮತ್ತು ಅಲಂಕರಣಾ ಕೊಕ್ಕೆ, ವಂಕಿಗಳು ಎಂದು ಬಿಡಿ–ಬಿಡಿಯಾಗಿ ರೂಪಿಸಿ ಅವುಗಳನ್ನು ನಂತರ ಪ್ರಸ್ತುತ ರೂಪಕ್ಕೆ ಬೆಸೆದು ನಂತರ ಅವುಗಳಿಗೆ ಚಿನ್ನದ ಅಥವಾ ಬೆಳ್ಳಿಯ ಲೇಪನ ಕೊಟ್ಟಿರುವುದನ್ನು ಅವುಗಳ ದೀಪದ ತಟ್ಟೆಗಳನ್ನು ಆಧರಿಸುತ್ತಿದ್ದ ಭಾಗಗಳನ್ನು ಜಿನುಗುತ್ತಿದ್ದ ಎಣ್ಣೆ ಅಥವಾ ತುಪ್ಪದ ಕರೆಗಳಿಂದ ಶುಭ್ರವಾಗಿಡಲು ಶ್ರಮಪಡಬೇಕಾಗಿತ್ತೆಂಬುದನ್ನು ತೋರಿಸುತ್ತದೆ. ಅದಕ್ಕೂ ಮಿಗಿಲಾಗಿ ಆ ದುರ್ದಿನದಂದು ಅವುಗಳನ್ನು ಶುಚಿಯಾಗಿಸಲೂ ವ್ಯವಧಾನವಿಲ್ಲದೆ ಭೂಗತ ಮಾಡಲಾಗಿತ್ತೆಂಬುದನ್ನು ಸಾಕ್ಷೀಕರಿಸುತ್ತವೆ.

4. ಬಟ್ಟಲಾರತಿ : ಹೂಬಳ್ಳಿಯ ಕಾಲನ್ನು ಹೊಂದಿರುವ ತುಸುವೇ ಆಳದ ಬಟ್ಟಲಿರುವ ಆರತಿ. ಪ್ರಾಯಶಃ ಸ್ವಲ್ಪ ದೀರ್ಘ ಕಾಲ ಬತ್ತಿ ಉರಿಯುವಂತೆ ರೂಪಿಸಿದ ಏಕಾರತಿ. ಅದನ್ನು ಧೂಪ ಹಾಕಲಿಕ್ಕೂ ಸಹ ಉಪಯೋಗಿಸಿರಬಹುದು.






5. ಧೂಪಾರತಿ: ದೈನಂದಿನ ಪೂಜೆಗಳಲ್ಲಿ ಆರತಿಗೆ ಮೊದಲು ದೇವರ ಸೇವೆಯಲ್ಲಿ ತೊಡಗಿಸಿಕೊಳ್ಳುವ ಒಂದು ಸೇವೆಯೆಂದರೆ, ಅಭಿಷೇಕ ನಂತರ "ಧೂಪಂ ಆಗ್ರಾಪಯಾಮಿ", "ನೀರಾಜನಂ ದರ್ಶಯಾಮಿ" ಇತ್ಯಾದಿ.




ಉತ್ಖನನದಲ್ಲಿ ಹಿಡಿಕೆ ಉಳ್ಳ ಅನೇಕ ಮಣ್ಣಿನ ಧೂಪದ ಆರತಿ ಬಟ್ಟಲುಗಳು ದೊರೆತಿವೆ. ಭಾರವಾದ ಲೋಹದ ಅಗ್ಗಿಷ್ಟಿಕೆಯ ತರಹದ ಸುಡುವ ಲೋಹದ ಧೂಪದ ಬಟ್ಟಲುಗಳಿಗಿಂತ ಮಣ್ಣಿನ ಹಿಡಿಕೆಯುಳ್ಳ ಧೂಪ ಆಘ್ರಾಣಿಕೆಗಳನ್ನು ಸೂಕ್ತ ಎಂದು ರಾಜವಾಡೆಯಲ್ಲಿ, ಜನಸಾಮಾನ್ಯರ ವಸತಿಗಳಲ್ಲಿ ಉಪಯೋಗಿಸಲಿಕ್ಕೂ ಸಾಕು. ಆದರೆ ಪಂಚ ಲೋಹ/ತಾಮ್ರದ ಧೂಪಾರತಿಯನ್ನು ಇಲ್ಲಿ ದೊರೆತಿರುವ ಪರಿಕರಗಳಲ್ಲಿ ಒಂದನ್ನಾಗಿ ನಾವಿಲ್ಲಿ ಕಾಣುತ್ತೇವೆ. ಸಣ್ಣ ವರ್ತುಲ ಬಳೆಗಳ ಬೋಗುಣಿಗೆ ಅಧೋಮುಖವಾದ ಪಾದವನ್ನು ಕೊಟ್ಟು ಆ ಬಟ್ಟಲಿಗೆ ಸಂಪೂರ್ಣ ಆವರಿಸುವ ನಡುವೆ ಒಂದು ಸಣ್ಣ ರಂಧ್ರವಿರುವ ಮುಚ್ಚಳವನ್ನಿಟ್ಟು ನವಿರಾದ ಹೊಗೆ ಬರುವಂತೆ ಹೊಂದಿಸಿದ್ದಾರೆ.

ಘಂಟೆ :

ದೇವತಾ ಕಾರ್ಯಕ್ಕೆ ಬೇಕಾದ ಅಗತ್ಯ ಪರಿಕರ ಪಂಚ ಲೋಹದಿಂದ ಮಾಡಿರುವ ಈ ಘಂಟೆಯ ಹಿಡಿ ಭಾಗ ತ್ರುಟಿತವಾಗಿದೆ.



ಅಭಿಷೇಕ ಶಂಖ ಮತ್ತದರ ಪೀಠ :








ಮೂರು ಕಾಲಿನ ಬೆಳ್ಳಿ ಪೀಠದ ಮೇಲೆ ಇರಿಸಿದ್ದ ಬಲಮುರಿ ಅಭಿಷೇಕದ ಶಂಖ.

ಕಲಶ-ಕುಂಭ : ದೇವರಿಗೆ ಸರ್ವಾಲಂಕಾರಗಳಾದ ಮೇಲೆ ಸೇಸೆಯಿಕ್ಕಿ, ಕನ್ನಡಿ-ಕಲಶಗಳನ್ನು ತೋರುವುದು ಪೂಜಾನುಷ್ಠಾನಗಳಲ್ಲಿ ಒಂದು. ಮುಚ್ಚಳ ಸಹಿತವಾದ ಒಂದು ಕಲಶ-ಕುಂಭ ದೊರೆತಿದೆ. ಸಾಮಾನ್ಯವಾಗಿ ಪೂಜೆಗೆ ಬೇಕಾದ ಪವಿತ್ರ ಜಲವನ್ನು ಉದ್ದೀಪನಗೊಳಿಸಲು, ದೇವತಾ ಮೂರ್ತಿಯನ್ನು ಪ್ರತಿಷ್ಠಾಪಿಸಲು ಶುಭಪ್ರದವಾದ ಚಿಹ್ನೆಗಳನ್ನು ಹೊಂದಿರುವ ಕಲಶವನ್ನು ಉಪಯೋಗಿಸುತ್ತಾರೆ.





ಮಾಧ್ವ ಸಂಪ್ರದಾಯದ ಅಡ್ಡ ಗಂಧ

ಸಣ್ಣ ವರ್ತುಲದ ಪೀಠದ ಮೇಲೆ, ಭುಜ-ಜಾರಿದ (shoulder carinated) ಶರೀರ ಭಾಗವಿದ್ದು, ತುಸುವೇ ನಿಡಿದಾದ ಕಂಠವನ್ನು ಹೊಂದಿದ್ದು, ಕಲಶಕ್ಕೆ ಕಿರಿದಾದ ಬಾಯಿ ಇದೆ. ಕಲಶದ ಬಾಯನ್ನು ಕಮಲದ ಮೊಗ್ಗಿನಾಕಾರದಲ್ಲಿ ರೂಪಿಸಿರುವ ಭದ್ರವಾದ ಕೂರುವ ಮುಚ್ಚಳವಿದೆ. ಅಷ್ಟ ಮಂಗಲಗಳ ಚಿಹ್ನೆಗಳನ್ನು ಕಲಶದ ಹೊರಮೈನ ಭಾಗದಲ್ಲಿ ರೇಖಾರೂಪದಲ್ಲಿ ಕೊರೆಯಲಾಗಿದ್ದು ಅವುಗಳಲ್ಲಿ ಸೂರ್ಯ, ಚಂದ್ರ, ಸ್ವಸ್ತಿಕ ಮುಖ್ಯವಾದವು. ಕಲಶ ತ್ರೈಪುರುಷ ರೂಪ ಎಂಬುದು ಎಲ್ಲರಿಗೂ ತಿಳಿದ ವಿಷಯ. ಅದನಿಲ್ಲಿ ವಿಷದೀಕರಿಸುವ ಅವಶ್ಯಕತೆಯಿಲ್ಲ. ಕಲಶದ ಭುಜಭಾಗದಲ್ಲಿ ಮತ್ತು ಮಧ್ಯ ಭಾಗದಲ್ಲಿ ಸಣ್ಣ ಸಣ್ಣ ಚೌಕಗಳಿರುವ ಪಟ್ಟಿಕೆಯಿದ್ದು ದಿಕ್ಪಾಲಕರ ಮತ್ತಿತರ ದೇವತೆಗಳ ರೂಪವಿದ್ದಿರಬಹುದೆಂದು ಭಾವಿಸಬಹುದು. ಕಲಶಗಳು ಅಷ್ಟಮಂಗಲಗಳ ಚಿಹ್ನೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.


ಎಣ್ಣೆಯ ಕುಂಭಗಳು (ನಳಿಕೆಯುಳ್ಳ) :

ತಾಮ್ರದ ಈ ಕುಂಭಕ್ಕೆ ಕಂಠ ಭಾಗದಲ್ಲಿ ಸರಪಳಿ ಮುಚ್ಚಳವಿದೆ. ಕಿರು ಪೀಠದ ಮೇಲೆ ಗೋಳಾಕಾರದ ಕುಂಭವಿದ್ದು ಮಧ್ಯಮ ಗಾತ್ರದ ಕೊಳವೆ ಆಕಾರದ ಕುತ್ತಿಗೆ ಇದ್ದು ಕಿರಿದಾದ ಹೊರಚಾಚಿದ ಕಂಠವಿದೆ.






ಎಣ್ಣೆಯ ಕುಡಿಕೆಗಳು :



ಅನೇಕ ತೈಲ ಕುಡಿಕೆಗಳು ದೊರೆತಿದ್ದು ಅವುಗಳಲ್ಲಿ ತಾಮ್ರದ, ಬೆಳ್ಳಿಯ, ಚಿನ್ನದ ಗಿಲೀಟು ಮಾಡಿದ ಕಿರು ಕಂಠ, ಅಗಲ ಬಾಯಿ ಮತ್ತು ಹೆಚ್ಚು ಕಮ್ಮಿ ಅಂಡಾಕಾರದ ಶರೀರ ಭಾಗವನ್ನು ಕಾಣಬಹುದು.


ನೀರಿನ ಕುಡಿಕೆಗಳು :


ಎಣ್ಣೆಯ ಕುಡಿಕೆಗಳಂತೆಯೇ ರಚನೆಯಿರುವ ಈ ಕುಡಿಕೆಗಳು ಸ್ವಲ್ಪ ದಪ್ಪ ಶರೀರವನ್ನು ಹೊಂದಿದ್ದು, ಕುತ್ತಿಗೆ, ಶರೀರ ಸೇರುವ ಭಾಗದಲ್ಲಿ ಒಂದು ಕುಳಿಯ ತರಹ ರಚನೆಯಿದ್ದು ತುಸು ಅಗಲದ ಕಂಠ ಮತ್ತು ಹೊರಚಾಚಿದ ಅಂಚುಳ್ಳ ಕಂಠ–ಬಾಯಿ ಹೊಂದಿದೆ.





ಆರಾಧನಾ ಬೋಗುಣಿಗಳು


ಸಣ್ಣ ಸಣ್ಣ ದೇವತಾ ಮೂರ್ತಿಗಳನ್ನು, ಸಾಲಿಗ್ರಾಮವನ್ನು ಇಟ್ಟು ಅವುಗಳನ್ನು ನೀರು, ಸಕ್ಕರೆ, ಮೊಸರು, ಜೇನುತುಪ್ಪ, ತುಪ್ಪದಿಂದ ಮಂತ್ರೋಕ್ತವಾಗಿ ಅಭ್ಯಂಜನ ಮಾಡಿಸಲಿಕ್ಕೆ ಪಂಚಪಾತ್ರೆಯ ಜೊತೆಗೆ ನಾಲ್ಕು–ಐದು ತೆರೆದ ಬಾಯಿಯ ಒಂದು ಹರಿವಾಣದಲ್ಲಿ ಜೋಡಿಸಿ ಮೂಲ ದೇವರ ಮುಂದೆ ಒಂದು ಪೀಠದ ಮೇಲೆ ಜೋಡಿಸಿರುತ್ತಾರೆ. ಸಾಮಾನ್ಯವಾಗಿ ಇವುಗಳನ್ನು ಬೆಳ್ಳಿ ಅಥವಾ ತಾಮ್ರದಲ್ಲಿ ಮಾಡಿಸಿರುತ್ತಾರೆ. ಸ್ಥಿತಿವಂತರು ಇವುಗಳನ್ನು ಚಿನ್ನದಲ್ಲಿಯೂ ಮಾಡಿಸುತ್ತಾರೆ. ಈ ತರಹದ ಬೋಗುಣಿಗಳೂ ದೊರೆತಿವೆ. ತಾಮ್ರ ಮತ್ತು ಬೆಳ್ಳಿಯ ಈ ಬೋಗುಣಿಗಳು ಒಂದೇ ತೆರನಾಗಿದ್ದು, ಅವುಗಳ ವ್ಯಾಸದಲ್ಲಿ ಸ್ವಲ್ಪ ಬದಲಾವಣೆಗಳನ್ನು ಕಾಣಬಹುದು. ಈ ಬೋಗುಣಿಗಳ ಮೇಲ್ಮೈಯಲ್ಲಿ ಯಾವುದೇ ರೀತಿಯ ಚಿಹ್ನೆ ಅಥವಾ ಗುರುತುಗಳಿಲ್ಲ. ಬೋಗುಣಿಯ ತಳಭಾಗದಲ್ಲಿ ತುಸುವೇ ಇಳಿಯಿದ್ದು ಬೋಗುಣಿ ಉರುಳಾಡದಂತೆ ನೋಡಿಕೊಳ್ಳುತ್ತದೆ.













ಉದ್ಧರಣೆ :

ತಾಮ್ರದ ತೀರ್ಥ ನೀಡುವ ಸಲಕರಣೆ



ಬೋಗುಣಿಗಳು :


ನೇರ ಶರೀರದ ಅಗಲ ಬಾಯಿಯ ಪ್ರಸಾದ ವಿನಿಯೋಗ ಮಾಡಲು, ಶೇಖರಿಸಲು ಉಪಯೋಗಿಸುವ ತಾಮ್ರದ ಬೋಗುಣಿಗಳು. ಇವು ಸಾಮಾನ್ಯವಾಗಿ ಇದೇ ತರಹನಾದ ಕೊಳದಪ್ಪಲೆಗಳಿಗಿಂತ ಗಾತ್ರದಲ್ಲಿ ಕಿರಿದು.





ನೀರಿನ ತಪ್ಪಲೆಗಳು :

ತುಸು ವಿಭಿನ್ನವಾದ ಒಲೆಯ ಮೇಲೆ ಇಡಬಹುದಾದ ದುಂಡು ತಳದ ಅಗಲ ಬಾಯಿಯ ತೆಳು ಹೊರಚಾಚಿದ ಅಂಚುಳ್ಳ ಪಾತ್ರೆಗಳು. ಪ್ರಾಯಶಃ ಹಾಲು ಇತ್ಯಾದಿ ದ್ರವ ಪದಾರ್ಥಗಳನ್ನು ತಯಾರಿಸಲು ಉಪಯೋಗಿಸಿದ್ದಿರಬಹುದು. ಪಾತ್ರೆಗಳು ಬಾಣಸಿಗನ ಕೈಸೇರಿದ ಮೇಲೆ ಅವನ ಆ ಕ್ಷಣದ ಉಪಯೋಗಕ್ಕನುಗುಣವಾಗಿ ಅಗ್ನಿಪ್ರವೇಶ ಮಾಡುತ್ತವೆ.












ಹರಿವಾಣ ಮತ್ತು ಬಾಣಲೆಗಳು :





ಪೂಜಾ ಪರಿಕರಗಳನ್ನಿಡುವ ತಟ್ಟೆ



ಪದಾರ್ಥಗಳನ್ನು ಬೇಯಿಸಲು, ಹುರಿಯಲು ಉಪಯೋಗಿಸುವ ಅಗಲ ಬಾಯಿ ಪಾತ್ರೆ

ಹೀಗೆ ಸುಮಾರು 25ಕ್ಕೂ ಹೆಚ್ಚಿನ ತಾಮ್ರ, ಕಂಚಿನ ಪಾತ್ರೆ–ಪಡಗಗಳು, 11 ವಿವಿಧ ಅಳತೆಯ ಹರಿವಾಣಗಳು (ಅದರಲ್ಲಿ ಚಿನ್ನದ ಗಿಲೀಟಿನ ಹರಿವಾಣವೂ ಸೇರಿದೆ), ಮುದ್ರೆ, ಉದ್ಧರಣೆ ಕಲಶ, ವಿವಿಧ ಬಗೆಯ ಆರತಿಗಳು, ಗಂಟೆ ಸೇರಿದೆ.


ನೀರಿನ ಹೂಜಿಗಳು :



ಅಗಲ ಪೀಠದ ಮೇಲೆ, ಸ್ವಲ್ಪ ದೊಡ್ಡದಾಗಿರುವ ನೀಳ ಮೂತಿಯಿರುವ, ಅಗಲ ಕಂಠದ ತಾಮ್ರದ ಹೂಜಿ. ಇದನ್ನು ಕಮಂಡಲು ಎನ್ನಲಿಕ್ಕೆ ಹಿಡಿಕೆಯಿಲದ್ದಿರುವುದು ಕಾರಣವಾಗಿದೆ. ಪ್ರಾಯಶಃ ಇದನ್ನು ಮಡಿ ನೀರು ಇಡಲಿಕ್ಕೆ ಅಥವಾ ದೇವರ ಪೂಜೆಯ ನಂತರ ತೀರ್ಥ ಇಡಲಿಕ್ಕೆ ಅಥವಾ ನೀಡಲಿಕ್ಕೆ ಉಪಯೋಗಿಸುತ್ತಿದ್ದಿರಬಹುದು ಪೀಠ, ಶರೀರ ಮತ್ತು ಕಂಠ ಭಾಗವನ್ನು ಬೇರೆಯದಾಗಿ ಮಾಡಿಸಿ ಬೆಸೆದಿರುವುದು ತಿಳಿದುಬರುತ್ತದೆ.

ಕಿರಿ ಪೀಠದ ಮೇಲೆ, ಗೋಳಾಕಾರದ ಶರೀರ, ಕಿರು ರಂಧ್ರವುಳ್ಳ ಅಗಲ ಬುಡದ ಸಣ್ಣ








ನಳಿಕೆಯ, ನೀಳ ಕುತ್ತಿಗೆ, ಅಗಲ ಬಾಯಿಯ ತಾಮ್ರದ ಹೂಜಿ, ಶರೀರ ಮತ್ತು ನಳಿಕೆಯ ಪ್ರಾರಂಭದಲ್ಲಿ ಜಾಲರವಿದೆ.

ತಪ್ಪಲೆ ಮತ್ತು ಬೋಗುಣಿಗಳು :

ಅಗಲ ಬಾಯಿಯ ಅಡುಗೆ ಮಾಡಲು ಅನುವಾಗುವ











ಅಗಲ ಕಂಠದ ಮಸಿ ಹಿಡಿದಿರುವ ತಾಮ್ರದ ತಪ್ಪಲೆಗಳು, ಒಳಭಾಗಕ್ಕೆ ತುಸುವೇ ಬಾಗಿರುವ ಭುಜದಿಂದ ಬೇಯುತ್ತಿರುವ ಪ್ರಸಾದ ಉಕ್ಕಿ ಹರಿಯದಂತೆ ತಡೆಯಬಹುದು. ಮಸಿ ಹಿಡಿದಿರುವ ಪಾತ್ರೆ ಎಂಬುದು ಅವುಗಳನ್ನು ಆತುರ ಆತುರವಾಗಿ ಕುಣಿಯಲ್ಲಿ ಇರಿಸಿರುವುದರ ಸಾಕ್ಷಿ.

ಅಮೂಲ್ಯ ಪೂಜಾ ಪರಿಕರಗಳು ದೊರೆತ ವಿವಿಧ ಹಂತಗಳು :

ನೆಲಮಟ್ಟದಿಂದ ಕೇವಲ 20 ಸೆಂ.ಮೀ. ಆಳದಲ್ಲಿ ದೊರೆತಿರುವ ವಸ್ತುಗಳು, ಮಸಿ ಹಿಡಿದಿರುವ ಪಾತ್ರೆಗಳು










ಜೋಡಿಸಿಟ್ಟಿದ್ದ ಶೈಲಿ



ದೇಗುಲಕ್ಕೆ ಸಂಬಂಧಿಸಿದಂತೆ ದೊರೆತ ಪದಾರ್ಥಗಳು



ದೊರೆತ ವಸ್ತುಗಳು

10. ಹಂಪಿ ಋಷ್ಯಮೂಕ ಪರ್ವತದ ಬಳಿ ದೊರೆತ ವಿಜಯನಗರ ಕಾಲದ ನಾಲ್ಕು ತಾಮ್ರ ನಾಣ್ಯಗಳು

ಡಾ. ಎಚ್. ತಿಪ್ಪೇಸ್ವಾಮಿ

ದಕ್ಷಿಣ ಕಾಶಿ ಎಂದು ಖ್ಯಾತವಾದ ಹಂಪಿ ವಿವಿಧ ಕಾಲಘಟ್ಟಗಳಲ್ಲಿ ತನ್ನದೇ ಆದ ಪ್ರಮುಖ ಪಾತ್ರ ನಿರ್ವಹಿಸಿದೆ. ಇಲ್ಲಿನ ತುಂಗಭದ್ರಾ ನದಿ ಮತ್ತು ನೈಸರ್ಗಿಕವಾಗಿರುವ ಬೆಟ್ಟಗುಡ್ಡಗಳು ಮಾನವನ ವಾಸಕ್ಕೆ ಬಹು ಹಿಂದಿನಿಂದ ಅವಕಾಶ ಕಲ್ಪಿಸಿಕೊಟ್ಟಿವೆ. ಇದರ ಪರಿಣಾಮವಾಗಿ ಇಲ್ಲಿ ಜಗದ್ವಿಖ್ಯಾತವಾದ ವಿಜಯನಗರ ಸಾಮ್ರಾಜ್ಯ ಹುಟ್ಟಿ ಅವಸಾನ ಹೊಂದಿತು. ಇಲ್ಲಿ ಆಳ್ವಿಕೆ ಮಾಡಿದ ವಿಜಯನಗರ ಸಾಮ್ರಾಜ್ಯ ತನ್ನ ಆಳ್ವಿಕೆಯ ಕಾಲದಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ವಿವಿಧ ಮೌಲ್ಯಗಳ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದ ವಿವರ ಆ ಕಾಲದ ಸಾಹಿತ್ಯ ಗ್ರಂಥಗಳಿಂದ ಮತ್ತು ಶಾಸನಗಳಿಂದ ತಿಳಿದುಬರುತ್ತದೆ. ಗದ್ಯಾಣ, ವರಹಾ ಅಥವಾ ಪೊನ್, ಪ್ರತಾಪ, ಕಾಟಿ, ಪಣ ಮತ್ತು ಹಾಗ ಎಂಬ ಚಿನ್ನದ ನಾಣ್ಯಗಳು ಅಂದು ಅಸ್ತಿತ್ವದಲ್ಲಿದ್ದವು. ಇವುಗಳಲ್ಲದೇ ಘಟ್ಟಿವರಾಹ, ಶುದ್ಧವರಾಹ, ದೊಡ್ಡವರಾಹ ಎಂಬ ನಾಣ್ಯಗಳ ಹೆಸರು ಸಹ ಸಮಕಾಲೀನ ಆಕರಗಳಲ್ಲಿ ಕಾಣಸಿಗುತ್ತದೆ.[1]

ಹಂಪಿಯ ಚಕ್ರತೀರ್ಥದ ಬಳಿಯ ರಾಮ ಲಕ್ಷ್ಮಣ ದೇವಾಲಯಕ್ಕೆ ಅಭಿಮುಖವಾಗಿ ಹರಿಯುವ ತುಂಗಭದ್ರಾ ನದಿಯ ಉತ್ತರದ ದಂಡೆಯ ಮೇಲೆ ಶ್ರೀ ಚಂದ್ರಮೌಳೇಶ್ವರ ದೇವಾಲಯವಿದೆ. ಈ ದೇವಾಲಯ ಪ್ರಸ್ತುತ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಹನುಮನಹಳ್ಳಿಯ ಋಷ್ಯಮೂಖ ಎಂದು ಕರೆಯುವ ಪರ್ವತದ ಸರಹದ್ದಿನಲ್ಲಿ ಬರುತ್ತದೆ.[2] ಈ ದೇವಾಲಯವನ್ನು ದಕ್ಷಿಣ ಭಾಗದಲ್ಲಿ ಹಂಪಿಯಿಂದ ಹರಿದು ಬರುವ ತುಂಗಭದ್ರಾ ನದಿ ಮತ್ತು ಉತ್ತರ ಭಾಗದಲ್ಲಿ ಇದೇ ನದಿಯ ಮತ್ತೊಂದು ಟಿಸಲು (ಸಾಣಪುರದಿಂದ ಹರಿದು ಬರುವ) ಸುತ್ತುವರಿದಿದೆ. ಈ ದೇವಾಲಯ ನೋಡಲು ದ್ವೀಪದಂತಿದ್ದು, ನದಿ ನೀರು ಎರಡು ಕಡೆ ಸುತ್ತುವರಿದಿರುವುದರಿಂದ ಹಂಪಿ ಕಡೆಯಿಂದ ಇಲ್ಲಿ ಬರುವವರು ಸದಾ ಹರಿಗೋಲು ಬಳಸಿ ಬರಬೇಕಾಗುತ್ತದೆ. ಇದೇ ರೀತಿ ಹನುಮನಹಳ್ಳಿ ಕಡೆಯಿಂದ ಬರುವವರು ಬೇಸಿಗೆ ಹೊರತುಪಡಿಸಿ ಉಳಿದ ದಿನಗಳಲ್ಲಿ ಅವರು ಸಹಾ ಹರಿಗೋಲು ಬಳಸಬೇಕಾಗುತ್ತದೆ. ಇಲ್ಲಿ ಹಿಂದೆ ಅನೇಕ ಸಾಧುಸಂತರು ವಾಸವಾಗಿದ್ದರಂತೆ, ಅಲ್ಲದೆ ಇದು ರಾಮಾಯಣ ಕಾಲದ ಸುಗ್ರೀವನ ನಿವಾಸ ಸ್ಥಾನವಾಗಿತ್ತು. ಈ ಪ್ರದೇಶ ರಾಜಮಹಾರಾಜರ ಕಾಲದಲ್ಲಿ ಒಂದು ರಹಸ್ಯ ತಾಣವಾಗಿತ್ತು ಎನ್ನುವ ಪ್ರತೀತಿ ಜನರಲ್ಲಿದೆ. ಇಲ್ಲಿಗೆ ವಿಜಯನಗರದ ಅರಸರು ಕೆಲ ಪ್ರಮುಖ ರಹಸ್ಯ ಮಾತುಕತೆಗಳನ್ನು ನಡೆಸಲು ಬರುತ್ತಿದ್ದರೆಂದು ಕೆಲವರು ಹೇಳುತ್ತಾರೆ. ವಿಜಯನಗರದ ಸಂಗಮ ದೊರೆಗಳ ಕಾಲದಲ್ಲಿ ನಿರ್ಮಿತವಾದ ಈ ದೇವಾಲಯ ಕಲೆ ಮತ್ತು ವಾಸ್ತುಶಿಲ್ಪ ದೃಷ್ಟಿಯಿಂದ ಅತ್ಯಂತ ಪ್ರಮುಖವಾಗಿದೆ. ಇದು ಆನೆಗೊಂದಿ ರಾಜರ ಮತ್ತು ವಿಜಯನಗರದ ಅರಸರ ಮನೆ ದೈವವಾಗಿತ್ತೆಂದು ಸ್ಥಳೀಯರು ಹೇಳುತ್ತಾರೆ.

ಜಿಂದಾಲ್ ಉಕ್ಕು ಕಾರ್ಖಾನೆಯ ಹಂಪಿ ಫೌಂಡೇಷನ್‌ರವರು ಪ್ರಸಕ್ತ ದೇವಾಲಯವನ್ನು ಇಂಗ್ಲೆಂಡ್‌ನ ಗ್ಲೋಬಲ್ ಹೆರಿಟೇಜ್ ಫಂಡ್ ಸಹಯೋಗದಿಂದ ಜೀರ್ಣೋದ್ಧಾರ ಕಾರ್ಯವನ್ನು 2005ರಲ್ಲಿ ಆರಂಭಿಸಿದರು. ಇದರ ಮೊದಲ ಹಂತವಾಗಿ ಸಣ್ಣ ಪ್ರಮಾಣದ ಉತ್ಖನನವನ್ನು ಕನ್ನಡ ವಿಶ್ವವಿದ್ಯಾಲಯದ ಪುರಾತತ್ವ ವಿಭಾಗದ ಅಂದಿನ ಮುಖ್ಯಸ್ಥರಾಗಿದ್ದ ಡಾ. ಬಾಲಸುಬ್ರಹ್ಮಣ್ಯರವರು ನಡೆಸಿದರು.[3] ನಂತರ 2007ರಲ್ಲಿ ದೇವಾಲಯದ ಸಂರಕ್ಷಣಾ ಕಾರ್ಯವನ್ನು ಆರಂಭಿಸಲಾಯಿತು. ಈ ಸಂರಕ್ಷಣಾ ಕೆಲಸದ ಅವಧಿಯಲ್ಲಿ ಈ ದೇವಾಲಯದ ಹೊರ ಭಾಗದ ವಿವಿಧ ಕಡೆ ವಿಜಯನಗರ ಕಾಲಕ್ಕೆ ಸೇರಿದ ನಾಲ್ಕು ತಾಮ್ರದ ನಾಣ್ಯಗಳು ದೊರೆತಿವೆ. ಅವುಗಳನ್ನು ವ್ಯವಸ್ಥಿತವಾಗಿ ದಾಖಲಿಸಿಕೊಂಡು ಕಮಲಾಪುರದ ರಾಜ್ಯ ಪುರಾತತ್ವ ಇಲಾಖೆಯ ಅಂದಿನ ಉಪನಿರ್ದೇಶಕರಾಗಿದ್ದ ಶ್ರೀ ಚಿಕ್ಕಮಾರೇಗೌಡ ಅವರಿಗೆ ಸಲ್ಲಿಸಲಾಯಿತು. ವಿಜಯನಗರ ಕಾಲದ ನಾಣ್ಯ ವ್ಯವಸ್ಥೆಯ ಪ್ರತೀಕಗಳಾದ ಈ ನಾಲ್ಕು ನಾಣ್ಯಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿರುವ ಈ ಲೇಖನ ಅವುಗಳ ವೈಶಿಷ್ಟ್ಯತೆಯನ್ನು ದಾಖಲಿಸುವ ಉದ್ದೇಶವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಆ ತಾಮ್ರದ ನಾಣ್ಯಗಳ ವಿವರವನ್ನು ಈ ಮುಂದೆ ನೀಡಲಾಗಿದೆ.

ತಾಮ್ರದ ನಾಣ್ಯ–1: ಸು. 1.39 ಗ್ರಾಂ ತೂಕವಿರುವ ತಾಮ್ರದ ನಾಣ್ಯವು ಈ ದೇವಾಲಯದ ಮುಖಮಂಟಪದ ಆಗ್ನೇಯ ದಿಕ್ಕಿನಲ್ಲಿ ದೊರಕಿದ್ದು, ಇದರ ವ್ಯಾಸ 9 ಮಿ.ಮೀ. ಇದೆ. ಇದರ ಮುಮ್ಮುಖದಲ್ಲಿ ಬಲಕ್ಕೆ ಮುಖ ತಿರುಗಿಸಿ ಮಲಗಿರುವ ನಂದಿಯ ಚಿತ್ರವಿದೆ. ಅದರ ಮೇಲ್ಭಾಗದಲ್ಲಿ ಸೂರ್ಯಚಂದ್ರರ ಚಿತ್ರಗಳನ್ನು ಬಿಡಿಸಲಾಗಿದೆ. ಇದರ ಹಿಂಬದಿಯ ಮುಖದಲ್ಲಿ ಕನ್ನಡ ಭಾಷೆಯಲ್ಲಿ ಮೂರು ಸಾಲಿನ "ಬುಕ... ಪ... ರಾಯ" ಎಂಬ ಬರಹವಿದೆ. ಇದನ್ನು ಸುತ್ತುವರೆದಂತೆ ನಾಣ್ಯದ ಮೇಲಿರುವ ಬರಹ ಮತ್ತು ಚಿಹ್ನೆಯ ಆಧಾರದ ಮೇಲೆ ಇದು ಎರಡನೇ ಬುಕ್ಕರಾಯನ ಕಾಲಾವಧಿಯಲ್ಲಿ ಟಂಕಿಸಲ್ಪಟ್ಟ ನಾಣ್ಯ ಎಂದು ಹೇಳಬಹುದು.

ತಾಮ್ರದ ನಾಣ್ಯ–2: ಸು. 0.38 ಗ್ರಾಂ ತೂಕವಿರುವ ತಾಮ್ರದ ಅತಿ ಚಿಕ್ಕ ನಾಣ್ಯವು ಈ ದೇವಾಲಯದ ಪೂರ್ವ ಭಾಗದ ದಾರಿಯ ಬಳಿ ದೊರಕಿದ್ದು, ಇದರ ವ್ಯಾಸ 6 ಮಿ.ಮೀ. ಇದೆ. ಇದರ ಮುಮ್ಮುಖದಲ್ಲಿ ತನ್ನ ಬಲ ಮೊಣಕಾಲೂರಿ ಹಾರುತ್ತಿರುವ ಗರುಡನ ಚಿತ್ರವಿದೆ. ಇದರ ಹಿಂಬದಿಯಲ್ಲಿ ನಾಗರೀ ಭಾಷೆಯಲ್ಲಿ "ಪ್ರತಾಪ ಕೃಷ್ಣ ರಾಯ" ಎಂಬ ಬರಹವಿದೆ. ಇದೇ ಮಾದರಿಯ ನಾಣ್ಯಗಳನ್ನು ಕೃಷ್ಣದೇವರಾಯ ತನ್ನ ಕಾಲದಲ್ಲಿ ಹೊರಡಿಸಿದ್ದಕ್ಕೆ ಉದಾಹರಣೆಗಳು ದೊರೆತಿವೆ. ಅಲ್ಲದೆ ಈ ನಾಣ್ಯದ ಮೇಲಿರುವ ಬರಹ ಮತ್ತು ಚಿಹ್ನೆಯ ಆಧಾರದ ಮೇಲೆ ಇದು ಪ್ರಾಯಶಃ ಕೃಷ್ಣದೇವರಾಯನ ಕಾಲಾವಧಿಯಲ್ಲಿ ಟಂಕಿಸಲ್ಪಟ್ಟ ನಾಣ್ಯ ಎಂದು ಹೇಳಬಹುದು

ತಾಮ್ರದ ನಾಣ್ಯ–3: ಸು. 1.74 ಗ್ರಾಂ ತೂಕವಿರುವ ತಾಮ್ರದ ನಾಣ್ಯವು ಈ ದೇವಾಲಯದ ಮುಖಮಂಟಪದ ಹಿಂಬದಿಯ ಎರಡನೆ ಕಂಬದ ಬಳಿಯಲ್ಲಿ ದೊರಕಿದ್ದು, ಇದರ ವ್ಯಾಸ 9 ಮಿ.ಮೀ. ಇದೆ. ಇದರ ಮುಮ್ಮುಖದಲ್ಲಿ ಸೊಂಡಿಲನ್ನು ಮೇಲಕ್ಕೆತ್ತಿ ನಿಂತಿರುವ ಆನೆ(ಗಜ) ಇದ್ದು, ಅದರ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಚಿತ್ರಗಳಿವೆ. ಇದರ ಹಿಂಬದಿಯ ಮುಖದಲ್ಲಿ ನಾಗರೀ ಭಾಷೆಯಲ್ಲಿ "ಶ್ರೀ ಪ್ರತಾಪ ದೇವರಾಯ" ಎಂಬ ಬರಹವಿದೆ. ಈ ನಾಣ್ಯದ ಮೇಲಿರುವ ಬರಹ ಮತ್ತು ಚಿಹ್ನೆಯ ಆಧಾರದ ಮೇಲೆ ಇದು ಪ್ರಾಯಶಃ ಶ್ರೀ ಪ್ರತಾಪ ದೇವರಾಯನ ಕಾಲಾವಧಿಯಲ್ಲಿ ಟಂಕಿಸಲ್ಪಟ್ಟ ನಾಣ್ಯ ಎಂದು ಹೇಳಬಹುದು.

ತಾಮ್ರದ ನಾಣ್ಯ–4: ಸು. 0.38 ಗ್ರಾಂ ತೂಕವಿರುವ ಈ ಚಿಕ್ಕ ತಾಮ್ರದ ನಾಣ್ಯವು ಇದೇ ದೇವಾಲಯದ ಉತ್ತರ ಭಾಗಕ್ಕೆ ಸು. 20 ಅಡಿ ದೂರದಲ್ಲಿ ದೊರಕಿದ್ದು, ಇದರ ವ್ಯಾಸ 6 ಮಿ.ಮೀ. ಇದೆ. ಇದರ ಮುಮ್ಮುಖದಲ್ಲಿ ಅಂಜಲಿ ಹಸ್ತನಾಗಿರುವ ಗರುಡನ ಚಿತ್ರವಿದೆ. ಇದರ ಹಿಂಬದಿಯಲ್ಲಿ ಸವೆದು ಹೋಗಿರುವ ಅಸ್ಪಷ್ಟ ಅಕ್ಷರಗಳಿವೆ. ಇದರ ಅಂಚಿನಲ್ಲಿ ದುಂಡಾಕೃತಿಯ ಚುಕ್ಕೆಗಳಿದ್ದು, ಅವು ಈ ನಾಣ್ಯದ ಮೇಲ್ಭಾಗದಲ್ಲಿ ಮಾತ್ರ ಇವೆ (ನಾಣ್ಯದ ಅರ್ಧ ಭಾಗದವರೆಗೆ ಮಾತ್ರ ಇವೆ). ಈ ನಾಣ್ಯದ ಮೇಲಿರುವ ಬರಹ ಮತ್ತು ಚಿಹ್ನೆಯ ಆಧಾರದ ಮೇಲೆ ಇದು ಪ್ರಾಯಶಃ ಕೃಷ್ಣದೇವರಾಯನ ಕಾಲಾವಧಿಯಲ್ಲಿ ಟಂಕಿಸಲ್ಪಟ್ಟ ನಾಣ್ಯ ಎಂದು ಹೇಳಬಹುದು.

ಈ ಮೇಲಿನ ನಾಣ್ಯಗಳಲ್ಲಿ ದೊಡ್ಡ ಗಾತ್ರದ ನಾಣ್ಯಗಳನ್ನು (1ನೇ ಮತ್ತು 3ನೇ ನಾಣ್ಯಗಳು) ಜಿತಾಲ್ ಪ್ರಕಾರಕ್ಕೆ ಸೇರಿಸಬಹುದಾಗಿದ್ದು, ಇವು ಅಂದಿನ ಅರ್ಧ ಜಿತಾಲ್ (1/2)ಗೆ ಸಮವಾಗಿವೆ ಮತ್ತು ಸಣ್ಣ ಪ್ರಮಾಣದ (2ನೇ ಮತ್ತು 4ನೇ ನಾಣ್ಯಗಳು) ನಾಣ್ಯಗಳನ್ನು ತುಸು ಪ್ರಕಾರಕ್ಕೆ ಸೇರಿಸಬಹುದಾಗಿದೆ. ಇವುಗಳು ಅಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಅತಿ ಮುಖ್ಯವಾದ ಪಾತ್ರವನ್ನು ನಿರ್ವಹಿಸಿವೆ. ಶ್ರೀ ಸಾಮಾನ್ಯರ ಮತ್ತು ಸಣ್ಣ ವ್ಯಾಪಾರಿಗಳಿಗೆ ತಮ್ಮ ದಿನನಿತ್ಯದ ವ್ಯಾಪಾರ ಮತ್ತು ವಹಿವಾಟಿನಲ್ಲಿ ವಿನಿಮಯದ ಸಾಧನಗಳಾಗಿ ಬೇರೆ ಲೋಹ ಮತ್ತು ಮೌಲ್ಯದ ನಾಣ್ಯಗಳಿಗಿಂತಲೂ ಇವು ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗಿರುವ ಸಾಧ್ಯತೆ ಇದೆ. ಅಲ್ಲದೆ ವಿಜಯನಗರದ ವಿವಿಧ ಅರಸರಿಂದ ಹೊರಡಿಸಲ್ಪಟ್ಟ ಈ ನಾಣ್ಯಗಳು ಅಂದಿನ ಧಾರ್ಮಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಚರಿತ್ರೆಯನ್ನು ಕಟ್ಟಿಕೊಡಲು ಸಹಾಯಕವಾಗಿದ್ದು, ಅವುಗಳ ಸಂರಕ್ಷಣೆ ಮತ್ತು ವ್ಯವಸ್ಥಿತ ಅಧ್ಯಯನದ ಅವಶ್ಯಕತೆ ಇದೆ.

ಅಡಿ ಟಿಪ್ಪಣಿಗಳು

1. ನರಸಿಂಹಮೂರ್ತಿ ಎ.ವಿ., 1997, *ಕಾಯನ್ಸ್ ಅಂಡ್ ಕರೆನ್ಸಿ ಸಿಸ್ಟಂ ಇನ್ ಕರ್ನಾಟಕ*, ಪು. 221–302.
2. ಡಾ. ತಿಪ್ಪೇಸ್ವಾಮಿ ಎಚ್., *ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ವ್ಯಾಪ್ತಿಯ ಸ್ಮಾರಕಗಳು*, ಸಂ. 3.
3. ಬಾಲಸುಬ್ರಮಣ್ಯ, ಚಂದ್ರಮೌಳೇಶ್ವರ ದೇವಾಲಯದ ಉತ್ಖನನ ವರದಿ.

ಹಂಪಿಯ ನಕ್ಷೆ



೧. ವಿರೂಪಾಕ್ಷ ಬಜಾರು
೨. ಪಾನ್ ಸುಪಾರಿ ಬಜಾರು
೩. ವಿಠ್ಠಲ ಬಜಾರು
೪. ಕೃಷ್ಣ ಬಜಾರು
೫. ಅಚ್ಯುತ ಬಜಾರು
೬. ಮಾಲ್ಯವಂತ ಬಜಾರು
೭. ವರದರಾಜಮ್ಮನ ಬಜಾರು

● ನಾಣ್ಯಗಳು ದೊರೆತ ಪ್ರದೇಶ (ಋಷ್ಯಮೂಕ ಪರ್ವತದ ಚಂದ್ರಮೌಳೇಶ್ವರ ದೇವಾಲಯದ ಬಳಿ)

11. ವಿಜಯನಗರ ಕಾಲದ ಅಪ್ರಕಟಿತ ಬಿನ್ನವತ್ತಳೆ ಭಾಷಾ ಪತ್ರ

ಡಾ. ಕೆಳದಿ ವೆಂಕಟೇಶ್ ಜೋಯಿಸ್

ಹಿಂದಿನ ಸಾರಿ ನಡೆದ ವಿಜಯನಗರ ವಿಚಾರ ಸಂಕಿರಣದಲ್ಲಿ ಶ್ರೀ ಶೃಂಗೇರಿ ಶಂಕರನಾರಾಯಣ ಜೋಯಿಸರ ಸಂಗ್ರಹದಲ್ಲಿದ್ದ ಹಸ್ತಪ್ರತಿಯಲ್ಲಿ ದಾಖಲಾಗಿರುವ 'ಅಪ್ರಕಟಿತ ವಿಜಯನಗರ ಶಾಸನಗಳು' ಎಂಬ ವಿಷಯದಲ್ಲಿ ಪ್ರಬಂಧ ಮಂಡಿಸಿದ್ದೆ. ಈ ಸಂಗ್ರಹದಲ್ಲಿರುವ ಗರಿ 4 ಮತ್ತು 5ರಲ್ಲಿ ದಾಖಲಾಗಿರುವ 'ಕಾರಕಳದವರ ಕಟ್ಟಿನ ಭಿನ್ನವತ್ತಳೆ' ಗಮನ ಸೆಳೆಯುವಂತಹುದಾದ್ದರಿಂದ ಅದರ ಪೂರ್ಣ ಪಾಠ ಕೊಡುವುದರ ಜೊತೆಗೆ ಅಲ್ಲಿ ಉಲ್ಲೇಖಿಸಿರುವ ಕೆಲ ವಿಚಾರಗಳ ಕುರಿತು ಬೆಳಕು ಚೆಲ್ಲಲು ಇಲ್ಲಿ ಪ್ರಯತ್ನಿಸಿದ್ದೇನೆ.

ಈ ಗರಿ ಸಿಕ್ಕಿರುವುದು ಶೃಂಗೇರಿ ಶ್ರೀ ವೇದಬ್ರಹ್ಮ ಕುಲಪತಿ ಶಂಕರನಾರಾಯಣ ಜೋಯಿಸರ ಮನೆಯಲ್ಲಿ. ಈ ಕುಟುಂಬದ ಹಿರಿಯರು ಸುಮಾರು 500 ವರ್ಷಗಳಿಂದ ಶೃಂಗೇರಿಯಲ್ಲಿ ನೆಲೆಸಿರುವವರು. ಈ ಕುಟುಂಬಕ್ಕೆ ಸುಪ್ರಸಿದ್ಧ ಶ್ರೀ ಶಾಂಕರ ದಾಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ ಜಗದ್ಗುರು ಸಂಸ್ಥಾನದಲ್ಲಿ ಆಸ್ಥಾನ ಜ್ಯೋತಿಷ ವಿದ್ವಾಂಸರಾಗಿ ಆಶ್ರಯ ದೊರೆತಿತ್ತು. ಈ ವಂಶದವರಿಗೆ ಭೂಮಿ, ಮನೆಗಳು ಸರ್ವಮಾನ್ಯವಾಗಿ ವಿಜಯನಗರ ಕಾಲದಿಂದಲೂ ಲಭಿಸಿತ್ತು.

ಜೋಯಿಸರ ಪುಸ್ತಕ ಭಂಡಾರದಲ್ಲಿ ಜ್ಯೋತಿಷ್ಯ, ಧರ್ಮಶಾಸ್ತ್ರ ಮೊದಲಾದವುಗಳ ಜೊತೆಗೆ ಸಾಕಷ್ಟು ಹಸ್ತಪ್ರತಿಗಳು ಹಿಂದೆ ಇದ್ದು ಅದರಲ್ಲಿ ಬಹುತೇಕ ಭಾಗವನ್ನು ಶ್ರೀ ಶ್ರೀ ಜಗದ್ಗುರು ಸನ್ನಿಧಾನಕ್ಕೆ 1988ರಲ್ಲಿ ನೀಡಿರುವುದು ತಿಳಿದು ಬರುತ್ತದೆ. ಇವರಲ್ಲಿ ಉಳಿದಿದ್ದ ಕೆಲವು ಹಸ್ತಪ್ರತಿಗಳನ್ನು ಮಾನ್ಯ ಶ್ರೀ ಸೀತಾರಾಮ ಎಂಬುವರು ಸಂಗ್ರಹಿಸಿ ಸಂಶೋಧನೆಗೆ ಒಳಪಡಿಸಿದ್ದಾರೆ. ಅದರಲ್ಲಿರುವ ಅಪ್ರಕಟಿತ ಕೃತಿಗಳನ್ನು ಹೊರತರುವ ಪ್ರಯತ್ನ ನಡೆಸಿದ್ದಾರೆ. ಇವರ ಸಂಗ್ರಹದಲ್ಲಿರುವ ಒಂದು ಕಟ್ಟಿನಲ್ಲಿ ಹಲವು ಶಾಸನ ಪ್ರತಿಗಳಿವೆ. ಅದರಲ್ಲಿ ದಾಖಲಾಗಿರುವ ಈ 'ಕಾರಕಳದವರ ಕಟ್ಟಿನ ಭಿನ್ನವತ್ತಳೆ' ವಿಜಯನಗರ ಅಧ್ಯಯನಕ್ಕೆ ಪ್ರಮುಖ ಆಕರವಾಗಿದೆ.

ಈ ಕಟ್ಟಿನಲ್ಲಿರುವ ಗರಿಗಳು ಸುಮಾರು 38 ಇಂಚು ಉದ್ದ ಮತ್ತು 4.8 ಇಂಚು ಅಗಲ ಇದೆ. ಪ್ರತಿ ಗರಿಯಲ್ಲಿ ಸುಮಾರು 6 ರಿಂದ 8 ಸಾಲು ಬರೆಯಲ್ಪಟ್ಟಿದೆ. ಅಕ್ಷರಗಳು ಸ್ಫುಟವಾಗಿವೆ. ತಾಮ್ರಶಾಸನದ ಪ್ರತಿಯ ಪ್ರತಿ ಇದಾಗಿದೆ. ಈ ಕಟ್ಟಿನಲ್ಲಿ ಒಟ್ಟು 65 ಗರಿಗಳಿದ್ದು ಅದೆಲ್ಲವೂ ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿದೆ. ಈ ಹಸ್ತಪ್ರತಿಯಲ್ಲಿ ಹಲವು ಶಾಸನ ಪ್ರತಿಗಳಿವೆ. ಅದರಲ್ಲಿ ಇದೂ ಒಂದು.

ಈ ಬಿನ್ನವತ್ತಳೆ ನಾಲ್ಕನೇ ಗರಿಯ ಮುಂಭಾಗದ ಕೊನೆಯಲ್ಲಿ ಸಾಲು 6 ರಲ್ಲಿ 'ಕಾರಕಳದವರ ಕಟ್ಟಿನ ಭಿನ್ನವತ್ತಳೆ' ಎಂಬುದಾಗಿ ಪ್ರಾರಂಭವಾಗುತ್ತದೆ. 7ನೆಯ ಸಾಲಿನಲ್ಲಿ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ 1437ನೆಯ ಪರಿವರ್ತಮಾನಕ್ಕೆ ಸಲ್ಲುವ ಧಾತು ಸಂವತ್ಸರದ ವೈಶಾಖ ಶು 5 ಯು ಆದಿವಾರದಲ್ಲು ಎಂದು ಪ್ರಾರಂಭವಾಗುತ್ತದೆ. ಇಲ್ಲಿ ದಾಖಲಾಗಿರುವ ಕಾಲಮಾನ ಕ್ರಿ.ಶ. 1515ಕ್ಕೆ ಸರಿಹೊಂದುತ್ತದೆ. ಅನಂತರ ಗರಿ 5ರಲ್ಲಿ ಭಿನ್ನವತ್ತಳೆ ಮುಂದುವರೆಯುತ್ತ ಒಟ್ಟು 18 ಸಾಲುಗಳಲ್ಲಿ ದಾಖಲಾಗಿದೆ.

ಗರಿ 4 ಮುಂಭಾಗ

6. ಕಾರಕಳದವರ ಕಟ್ಟಿನ ಬಿನ್ನವತ್ತಳೆ
7. ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲ್ಲಿವಾಹನ ಶಕ ವರುಷ 1437ನೆ ಪರಿವರ್ತಮಾನಕ್ಕೆ ಸಲುವ। ಧಾತು ಸಂವತ್ಸರದ ವಯಿಶಾಖ ಶು 5 ಯು ಆದಿವಾರದಲು।

ಗರಿ 4 ಹಿಂಭಾಗ

1. ಶ್ರೀಮತ್ಪರಮಹಂಸ ವರ್‍ರಿವ್ರಾಜಕಾಚಾರ್ಯ ವರ್ಯ ಪದವಾಖ್ಯ ಪ್ರಮಾಣ । ಪಾರಾವಾರ ಪಾರಿಣ ಯಮನಿಯಮದ್ಯಷ್ಟಾಂಗ ಯೋಗ ನಿರತರ ।
2. ದ । ಶ್ರುಂಗೆರಿ । ರಾಮಚಂದ್ರಭಾರತ್ತಿ ವಡ್ಡೆಯರ । ದಿವ್ಯ ಶ್ರಿಪಾದಪದ್ಮಂಗಳಿಗಮಂ । ಯಜನಾತಿ ಶಟ್ಟು ಕರ್ಮ ನಿರತರಾದ । ಶ್ರುಂಗೆರಿಯ ಅಶೆಶ ವಿದ್ವಂನು
3. ಮಹಾಜನಂಗಳಿಗು । ಕಾರಕಳದ ಪದುಮಲಿದೆವಿ ಕಲಿಕುಮಾರ ಬೈರಸನು । ಕೊಟ್ಟ ಕಟ್ಟಿನ ಬಿನ್ನವತ್ತಳೆ ಕ್ರಮವೆಂತೆಂದರೆ । ಪೂರ್ವದಲ್ಲಿ ವಿದ್ಯಾನಗ ।
4. ರದಲ್ಲಿ । ರಯ ಮಂನ್ವಂತರ ಅವಾಂತರವಾದ ಕಾಲದಲ್ಲಿ । ಶ್ರುಂಗೆರಿಯಲ್ಲಿ । ನರಸಿಂಹ್ಹ ಭಾರ್‍ರತ್ತಿ ವಡ್ಡೆರ । ಪೂರ್ವಾಶ್ರಮದ । ಮಲ್ಲಿ
5. (ಕಾ)ಅಧಿಕಾರಿ ಯಂಬವನು ನಮ್ಮ ಹಿರೆಯರ ಕೂಡೆ ಆಳಕಟ್ಟಿ ಜಗಳವ ಮಾಡಲಾಗಿ ನಂಮ ಹಿರೆಯರು। ಶ್ರುಂಗೆ
6. ರಿಗೆ ಸಲುವ ಕೆಲ್ಲನಾಡು । ಕ್ಕಿಕ್ಕುಂದ । ಕ್ಕಿಗ್ಗನೆಮ್ಮಾರು । ಹರಊರು । ಮಂಡನಾಡು । ಬಾಗಹೆಸರೂರ್‍ರು । ಮುಳವಳಿ । ಕುಡನಾಡು ಮೊದಲಾದ
7. ಆರುಸಾವಿರ ಸಿಮೆಯಂನು ಕಟ್ಟಿಕೊಂಡು ಯಿರಲಾಗಿ ವಿದ್ಯಾನಗರ್‍ರದಲ್ಲಿ । ಕ್ರುಷ್ಣರಾಯರಿಗೆ ಪಟ್ಟವಾಗಿ ರಾಜ್ಯವಂನು ಪ್ರತಿಪಾಲ್ಲಿಸು ।

5ನೇ ಗರಿ ಮುಂಭಾಗ

1. ಪ್ರತ್ತಿಪಾಲಿಸುವಾಗ ನಿಂಮ ಶಿಶ್ಯ ವಿದ್ಯಾರಣ್ಯ ವಡೆರು ವಿದ್ಯಾನಗರ ವಿದ್ಯಾನಗರಕ್ಕೆ ಹೋಗಿ ಕ್ರುಷ್ಣರಾಯ ಮಹಾರಾಯರಿಗೆ । ದರುಶನವ ಕೊಟ್ಟು । ಆ ।
2. ಮಹಾರಯರ ಕೂಡೆ । ನಂಮ ಶ್ರುಂಗೆರಿ ಸಿಮೆಯಂನು । ಕಾರಕಳದವರು ಕಟ್ಟಿಕೊಂಡು ಯಿದಾರೆ ಆ ಸಿಮೆಯಂನು ಬಿಡಿಸಿಕೊಡಬೆಕೆಂದು ಹೆಳಲಾಗಿ
3. ಆ ಕ್ರುಷ್ಣರಾಯ ಮಹಾರಾಯರ ಮುದ್ರಾಮನುಷ್ಯರು ನಂಮ ಕೂಡೆ । ಶ್ರುಂಗೆರಿಗೆ ಸಲುವ ಸಿಮೆಯ ಬಿಟ್ಟಲ್ಲದೆ । ಆಗದೆಂದು ನಿಷ್ಪಂಕ ಮಾಡ ।
4. ಲಾಗಿ । ಕೊಪ ಬಗುಂಜಿ (ಮೂರ್ರ್ತೆನಾಡು) ಕುಮುಂಡೆಕಾರು ನಾಬಳ ಆಡುವಳ್ಳಿನಾಡವರು । ಹೆಬಸೆ ನಾಡವರು ಕಾರಕಳದ ಪಟ್ಟದ ಗುರುಗಳೂ
5. ಕ್ಕಿಗ್ಗ ಸಾತಳಿಗೆ ನಾಡು ಮುಂತಾದ । ನಾಲ್ಕು ದೆಶದವರ ಮುಂತಿಟ್ಟು । ನಂಮ ಕಾರಕಳದ ಮನೆಯಲ್ಲಿ । ಬಾಳುವವರಿಗೂ । ನಿಂಮ ಶ್ರುಂಗೆರಿ
6. ಯ ಸಾಂಉತ್ತಾನ ಅಗ್ರಹಾರದಲ್ಲಿ ಯಿಹ ಅವರಿಗೂ । ಕ್ಷಿಣೊದಕ ನ್ಯಾಯವಾಗಿ ನಡ್ಡೆಯ ಬೆಕಾಗಿ । ಮಾಡಿಕೊಟ್ಟ ಕಟ್ಟಿನ । ವಿವರ । ನಾಲು ಕಟ್ಟಿಕೊಂಡು ಯಿದ ।

7. ಆರುಸಾವಿರ ಸಿಮೆವಳಗೆ । ನೆಮ್ಮಾರು ಹರಊರು ಮುಂಡಕಾರು ಮಿಗಹೆಸರೂರು ಮುಳುವಳ್ಳಿ ಕೊಡನಾಡು ಮುಂತಾದ ಸಿಮೆಯಂನು।
8. ನಿಂಮ ಕೈಯಾ ನಾಲು ಬಿಡಸಿಕೊಂಡು। ಕೆಲನಾಡು ಸಿರಕದವಡ್ಡಿ ಬಾನುವಳ್ಳಯಲು ಯಿದ । ಕೊಟ್ಟ ಹೆಗಾರು ಹೆಬಸೆ ವಳಗುಳ್ಳ ಮಲ್ಲಿಕಾರ್ಜುನ ದೆವರ

5ನೇ ಗರಿ ಹಿಂಭಾಗ

1. ದೆವಸ್ವ ಬಗುಂಜೆ ಸಿಮೆವಳಗೆ । ಕೆಳಭಾಗದ ಚಿತೆಮಕ್ಕಿ ಮೊದಲಾದ । ಚಿಕಕೊಡನಾಡು ಸಹವಾದ ಮೂರುಸಾವಿರದ ಸಿಮೆಯಂನು ಹೆಗಾರು ಹೆಬಸೆ ಬೆಳರೆ
2. ಯರಗನಹಳಿಯಂನು ನಿಮಗೆ ಬಿಟ್ಟೆವಾಗಿ । ನಿಮಗೆ ಶಕ್ತಿಯಾಯಿತೆಂದು । ನಿಂಮ ಶಿಶ್ಯ ಪರಂಪರೆಯಾಗಿ ನಿಮಗೆ ಬಿಟ್ಟ ಮೂರು ಸಾವಿರ ಸಿಮೆಯಂನು ।
3. ಕಾರಕಳದವರು ತೆಗದುಕೊಂಡರೆಂದು ಹೆಳಸಲ್ಲದು । ನಮಗೆ ಶಕ್ತಿಯಾಯಿತ್ತೆಂದು । ನಿಂಮ ಪರಂಪರೆಯಾಗಿ ನಿಮಗೆ ಬಿಟ್ಟ ಸಿಮೆಯಂನು
4. ಅಳಪಸಲ್ಲದು । ನಿಂಮ ಶಿಶ್ಯ ಪರಂಪರೆಯಾಗಿ ಯಿ ಕಟ್ಟೆಗೆ ಅಳುಪಿದರೆ ನಿಮಗೆ ಬಿಟ್ಟ ಮೂರು ಸಾವಿರ ಸಿಮೆಯಂನು ನಾವೆ ಕಟ್ಟು ।
5. ಕೊಂಬೆಲು. ನಂಮ ಸಂಧನದವರು । ಯಿ ಮಾಡಿಕೊಂಡ ಕಟ್ಟು ಮಿರಿ ಯಿದಕ್ಕೆ ತಪ್ಪಿದರೆ ಗುಂಮ್ಟನಾಥನ ಸಿವೆಯನಳುಪಿದವರು ।
6. ನಂಮ ಗುರುಗಳ ಕೊಂದ ದೊಶಕ್ಕೆ ಹೊಹರು ಯಂದು ನಾವು ನಂಮ ಸ್ವರುಚ ವಡಂಬಟ್ಟು । ಕೊಟ್ಟ ಕಟ್ಟಿನ ಬಿಂನವತಳೆ ಸ್ವ ಹಸ್ತದ ।
7. ವಪ್ಪಿತ ಶ್ರಿ ವಿತರಾಗ ಯಂದು ವಪ್ಪವದೆ । ಪಂಡರಿಸೆನಬೊವನ ಬರಹ

ಈ ಬಿನ್ನವತ್ತಳೆಯಲ್ಲಿ ಶೃಂಗೇರಿ ನರಸಿಂಹಭಾರತಿ ಸ್ವಾಮಿಗಳ ಕಾಲದಲ್ಲಿ ಕಾರಕಳದ ಪದುಮಲದೇವಿಯ ಕುಮಾರ ಬೈರರಸ ದೇವನು ಮಲ್ಲಿಕಾ ಅಧಿಕಾರಿಯವರೊಡನೆ ಜಗಳವಾಡಿ ಶೃಂಗೇರಿಗೆ ಸೇರಿದ್ದ ಸುಮಾರು ಆರು ಸಾವಿರ ಸೀಮೆಯಲ್ಲಿ ವಶಪಡಿಸಿಕೊಂಡದ್ದನ್ನು ಅನಂತರ ವಿದ್ಯಾರಣ್ಯ ವಡೇರು ವಿದ್ಯಾನಗರಕ್ಕೆ ಹೋಗಿ ಕೃಷ್ಣರಾಯ ಮಹಾರಾಯರಿಗೆ ದರುಶನ ಕೊಟ್ಟು ಅವರಲ್ಲಿ ತಮ್ಮ ಶೃಂಗೇರಿ ಸೀಮೆಯನ್ನು ಕಾರ್ಕಳದವರು ಕಟ್ಟಿಕೊಂಡಿದ್ದು ಅದನ್ನು ಬಿಡಿಸಿಕೊಡಬೇಕೆಂದು ಕೇಳಿಕೊಳ್ಳಲಾಗಿ ಆ ಕೃಷ್ಣದೇವರಾಯರ ಮುದ್ರಾಧಿಕಾರಿ (ಮುದ್ರಾಮನುಷ್ಯ) ಯು ಕಾರಕಳದವರಿಂದ ವಶಪಡಿಸಿಕೊಳ್ಳಲ್ಪಟ್ಟಿದ್ದ ಸೀಮೆಯನ್ನು ಹಿಂತಿರುಗಿಸಿ ಕೊಟ್ಟ ವಿಷಯವನ್ನು ಇದು ದಾಖಲಿಸುತ್ತದೆ. ಅಲ್ಲದೆ ಮಲ್ಲಿಕಾರ್ಜುನ ದೇವರ ದೇವಸ್ವ ಮೊದಲಾದ ವಿಷಯಗಳೂ ಇಲ್ಲಿ ಪ್ರಸ್ತಾಪಿಸಲ್ಪಡುತ್ತದೆ. ಹೀಗೆ ಮಾಡಿಕೊಂಡಿರುವ ಕಟ್ಟನ್ನು ಮೀರಿದಲ್ಲಿ ಗುಮ್ಮಟನಾಥನ ಶಿವೆಯನ್ನು ಅಳುಪಿದವರು ಮತ್ತು ಶೃಂಗೇರಿ ಗುರುಗಳ ಕೊಂದ ದೋಷಕ್ಕೆ ಹೋಗುತ್ತಾರೆಂದು ಉಲ್ಲೇಖಿಸುತ್ತದೆ. ಭಿನ್ನವತ್ತಳೆ ಶ್ರೀ ವೀತರಾಗ ಎಂಬ ಒಪ್ಪಿತ ಮತ್ತು ಇದನ್ನು ಪಂಡರಿ ಸೇನಬೋವನ ಬರಹ ಎಂಬುದಾಗಿ ಕೊನೆಗೊಳ್ಳುತ್ತದೆ. ಈ ಭಿನ್ನವತ್ತಳೆಯಲ್ಲಿ ಈ ಮೊದಲು ವಶ ಮಾಡಿಕೊಂಡಿದ್ದ ಆರು ಸಾವಿರ ಸೀಮೆಯಲ್ಲಿ ಮೂರು ಸಾವಿರ ಸೀಮೆಯನ್ನು ಹಿಂತಿರುಗಿಸಿ ತಾವು ಮೂರು ಸಾವಿರ ಸೀಮೆಯನ್ನು ಇಟ್ಟಿಕೊಂಡುದ್ದನ್ನು ಉಲ್ಲೇಖಿಸುತ್ತದೆ.

ಸ್ಥಳನಾಮ, ಸಾಮಾಜಿಕ ಮತ್ತು ಧಾರ್ಮಿಕ ವಿಷಯದ ಮೇಲೆ ಬೆಳಕು ಚೆಲ್ಲುವಂತಹ ದಾಖಲೆ ಇದಾಗಿದೆ. ಇದರಲ್ಲಿ ಉಲ್ಲೇಖಿಸಲ್ಪಟ್ಟ ಮೇಲಿನ ವಿಷಯಗಳ ಕುರಿತು ಇನ್ನೂ ಹೆಚ್ಚಿನ ಸಂಶೋಧನೆಗೆ ಒಳಪಡಿಸಲು ಸಹಕಾರಿಯಾದಂತಹ ಮಾಹಿತಿಯನ್ನು ಒದಗಿಸುತ್ತದೆ.

12. ಕೂಡ್ಲಿಗಿ ತಾಲೂಕಿನ ವಿಜಯನಗರ ಕಾಲದ ದೇವಾಲಯಗಳು

ಮಂಜನಾಯ್ಕ ಆರ್.

ಕೂಡ್ಲಿಗಿ ಪರಿಸರವು ಸಶಕ್ತವಾದ ದಖ್ಖನ್ ಪ್ರಸ್ಥಭೂಮಿಯಲ್ಲಿರುವುದರಿಂದ ಸಹಜವಾಗಿ ಪ್ರಾಚೀನ ಕಾಲದಿಂದಲೂ ಜನವಸತಿಗೆ ತಕ್ಕುದಾದ ಪ್ರದೇಶವಾಗಿದೆ. ಶಿಲಾಯುಗದಲ್ಲಿ ಮಾನವ ಜೀವನ ಚಟುವಟಿಕೆಗೆ ಪೂರಕವಾದ ಬೆಟ್ಟಗುಡ್ಡಗಳು ಅಲ್ಲಲ್ಲಿ ನೀರಿನ ಮೂಲಗಳು ಇಲ್ಲಿರುವುದರಿಂದ ಆ ಕಾಲದ ಮಾನವ ತನ್ನ ವಾಸ್ತವ್ಯಕ್ಕೆ ಈ ಪ್ರದೇಶವನ್ನು ಆಯ್ದುಕೊಂಡು ಜೀವನ ನಡೆಸಿರುವುದು ಪ್ರಾಚ್ಯಾವಶೇಷಗಳಿಂದ ತಿಳಿದು ಬರುತ್ತದೆ. ಹಿರೇಹಗರಿ ಎಂಬ ಹೊಳೆಯು ತಾಯಕನಹಳ್ಳಿ, ಚಿನ್ನೋಬನಹಳ್ಳಿ ಭಾಗದಲ್ಲಿ ಹರಿದು ಮೊಣಕಾಲ್ಮೂರು ತಾಲೂಕಿನ ಮಾರ್ಗವಾಗಿ ಸಾಗಿ ಹೋಗಿ ಮುಂದೆ ಆಂಧ್ರದಲ್ಲಿ ಹಗರಿಗೆ ಕೂಡಿಕೊಂಡು ತುಂಗಾಭದ್ರಾ ನದಿಗೆ ಸೇರಿಕೊಳ್ಳುತ್ತದೆ.[1]

ಜರ್ಮಲಿ ಹಾಗೂ ಗುಡೇಕೋಟೆ ಗುಡ್ಡಗಳ ಸಮೂಹಗಳನ್ನು ಬಿಟ್ಟರೆ ಈ ತಾಲೂಕಿನ ಉಳಿದೆಲ್ಲ ಭಾಗವು ಬಯಲು ಸೀಮೆಯೇ ಆಗಿದೆ. ಇದರ ಸುತ್ತಮುತ್ತಲಿನ ಹಂಪಿ, ಸಂಗನಕಲ್ಲು, ಕುರುಗೋಡು, ಕಪ್ಪಗಲ್ಲು, ಮೊಣಕಾಲ್ಮೂರು, ಚಿತ್ರದುರ್ಗ ಮೊದಲಾದ ಗುಡ್ಡಗಳ ಪ್ರದೇಶಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಅನೇಕ ಪುರಾತತ್ವ ಅವಶೇಷಗಳು ದೊರೆತಿವೆ. ಈ ತಾಲೂಕಿನ ಗುಡೇಕೋಟೆ, ಅಪ್ಪಯ್ಯನಹಳ್ಳಿ, ಕುಮತಿ, ತಿಮ್ಮಲಾಪುರ, ಬೆಳ್ಳಘಟ್ಟ, ರಾಮದುರ್ಗ, ಹಳಸಗ್ರಾಮ (ಹಳೆಸಾಗರ), ಹುಲಿಕುಂಟ ಮುತಾಂದ ಕಡೆ ಶಿಲಾಯುಗದ ಮಾನವನ ಕುರುಹುಗಳು ದೊರೆತಿವೆ.[2]

ಚಾರಿತ್ರಿಕ ಕಾಲಘಟ್ಟದಲ್ಲಿ ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ನೊಳಂಬ, ಸೇವುಣರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ವಿವಿಧ ಪಾಳೆಯಗಾರರು ತಮ್ಮ ಆಳ್ವಿಕೆಯನ್ನು ಈ ಭಾಗದವರೆಗೂ ವಿಸ್ತರಿಸಲು ಮತ್ತು ಕಲಾ ಕೇಂದ್ರಗಳಾದ ದೇವಾಲಯಗಳನ್ನು ನಿರ್ಮಿಸಿ ಅವುಗಳನ್ನು ಪೋಷಿಸಲು ಇಲ್ಲಿನ ಭೌಗೋಳಿಕ ಪರಿಸರವೇ ಪರೋಕ್ಷ ಸ್ಫೂರ್ತಿ ನೀಡಿದೆ. ಇದರಿಂದಾಗಿ ಇತರೆಡೆಯಂತೆ ಇಲ್ಲಿಯೂ ವಿಜಯನಗರ ಕಾಲದಲ್ಲಿ ಹಲವಾರು ದೇವಾಲಯಗಳು ನಿರ್ಮಾಣವಾಗಿ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿವೆ. ಕೂಡ್ಲಿಗಿ ತಾಲೂಕಿನ ವಿವಿಧೆಡೆ ಧಾರ್ಮಿಕ, ಲೌಕಿಕ, ಸೈನಿಕ ವಾಸ್ತುಶಿಲ್ಪಕ್ಕೆ ಸೇರಿದ ಹಲವಾರು ಕಟ್ಟಡಗಳು ನಮಗೆ ದೊರೆಯುತ್ತವೆ. ಇಲ್ಲಿ ದೊರೆಯುವ ಧಾರ್ಮಿಕ ವಾಸ್ತುಶಿಲ್ಪದ ಪ್ರತೀಕಗಳಾದ ದೇವಾಲಯಗಳನ್ನು ಮಾತ್ರ ಅದರಲ್ಲೂ ಪ್ರಮುಖ ದೇವಾಲಯಗಳನ್ನು ವಿಶ್ಲೇಸುವುದು ಈ ಲೇಖನದ ಪ್ರಧಾನ ಉದ್ದೇಶ. ಅಲ್ಲದೆ ಈ ತಾಲ್ಲೂಕಿನಾದ್ಯಂತ ವಿಜಯನಗರ ಕಾಲದಲ್ಲಿರುವ ದೇವಾಲಯಗಳನ್ನು ಅವುಗಳೊಂದಿಗೆ ಪ್ರಾಸಂಗಿಕವಾಗಿ ಅಲ್ಲಿ ದೊರೆಯುವ ಪ್ರಧಾನ ಮೂರ್ತಿ ಇಲ್ಲವೇ ಶಿಲ್ಪಗಳನ್ನು ದೇವಾಲಯಗಳೊಂದಿಗೆ ಪರಿಚಯಿಸುವುದು ಈ ಲೇಖನದ ಮತ್ತೊಂದು ಉದ್ದೇಶವಾಗಿದೆ.

ಮಧ್ಯಕಾಲೀನ ವ್ಯವಸ್ಥೆಯಲ್ಲಿ ಇಡೀ ದಕ್ಷಿಣ ಭಾರತದಲ್ಲೇ ಹೆಚ್ಚು ಪ್ರಬಲವು ಹಾಗೂ ಪ್ರಮುಖವಾಗಿ ಆಳಿದ ವಿಜಯನಗರ ಸಾಮ್ರಾಜ್ಯವು ಕರ್ನಾಟಕದ ಕಲೆ, ವಾಸ್ತುಶಿಲ್ಪಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದೆ. ಹೊಯ್ಸಳರ ನಂತರ ಬೆಳೆದುಬಂದ ಇವರು ತಮ್ಮದೆ ಆದ ಒಂದು ವಿಶೇಷವಾದ ದೇವಾಲಯ ವಾಸ್ತುಶಿಲ್ಪವನ್ನು ಪರಿಚಯಿಸಿದರು. ಅದು ವಿಜಯನಗರ ವಾಸ್ತುಶೈಲಿ ಎಂದು ಪ್ರಸಿದ್ಧಿ ಪಡೆದಿದೆ. ಇಡೀ ದಕ್ಷಿಣ ಭಾರತದ ಹಲವು ಭಾಗಗಳಲ್ಲಿ ಇವರ ಕಾಲದ ಹಾಗೂ ಈ ಶೈಲಿಯ ದೇವಾಲಯಗಳು ಕಂಡುಬಂದಿವೆ. ದ್ರಾವಿಡ ಮತ್ತು ಹೊಯ್ಸಳ ಶೈಲಿಗಳ ಸುಂದರ ಸಂಯೋಜನೆಯನ್ನು ರೂಢಿಸಿ, ರೂಪಿಸಿಕೊಂಡ ವಿಜಯನಗರ ಶಿಲ್ಪಗಳು ವಿಜಯನಗರ ಶೈಲಿಯೆಂದೂ ಪ್ರಸಿದ್ಧವೂ, ನವೀನವೂ ಖಚಿತವೂ ಆದ ಶೈಲಿಯ ಪ್ರವರ್ತಕರಾದರು. ಇವರ ಕಾಲದ ದೇವಾಲಯಗಳ ತಳವಿನ್ಯಾಸ ಹೆಚ್ಚು ವಿಸ್ತಾರವಾಗತೊಡಗಿದವು. ಈ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಪ್ರದಕ್ಷಿಣಾಪಥ, ಸುಕನಾಸಿ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿರುತ್ತವೆ. ನವರಂಗಕ್ಕೆ ಮೂರು ಪ್ರವೇಶದ್ವಾರಗಳಿದ್ದು, ಪಕ್ಕದಲ್ಲಿರುವ ಪ್ರವೇಶ ದ್ವಾರಗಳು, ನವರಂಗವನ್ನು ಚಿಕ್ಕದ್ವಾರ ಮಂಟಪಗಳಿಗೆ ಕೂಡಿಸಿರುತ್ತವೆ. ದೇವಾಲಯದ ಸುತ್ತಲೂ ನಿರ್ದಿಷ್ಟಪಡಿಸಿದ ದಿಕ್ಕಿನಲ್ಲಿ ಪರಿವಾರ ದೇವತೆಗಳಿಗಾಗಿ ಚಿಕ್ಕ ಗುಡಿಗಳಿರುತ್ತವೆ. ವಿಶಾಲವಾದ ಪ್ರಾಕಾರದ ಸುತ್ತಲೂ ಎತ್ತರವಾದ ಗೋಡೆಯಿದ್ದು ಪ್ರಾಕಾರವನ್ನು ಎರಡು ಅಥವಾ ಮೂರು ಕಡೆಗಳಿಂದ ಪ್ರವೇಶಿಸಲು ಪ್ರವೇಶ ಮಂಟಪಗಳು ಕಂಡುಬರುತ್ತವೆ. ಈ ಪ್ರವೇಶ ಮಂಟಪಗಳ ಮೇಲೆ ಎತ್ತರವಾದ ಗೋಪುರಗಳನ್ನು ಕಟ್ಟಿರುತ್ತಾರೆ. ಅಲ್ಲದೆ ಪ್ರಾಕಾರದಲ್ಲಿ ಕಲ್ಯಾಣ ಮಂಟಪ, ಉತ್ಸವ ಮಂಟಪಗಳಿರುತ್ತವೆ. ವಿಜಯನಗರ

ಕಾಲದ ಪ್ರದಕ್ಷಿಣಾಪಥ ಗರ್ಭಗೃಹದ ನೆಲೆಗಟ್ಟಿಗಿಂತ ಕೆಳಮಟ್ಟದಲ್ಲಿದ್ದು ಸೋಪಾನವೊಂದರ ಮೂಲಕ ಕೆಳಗಿಳಿಯುವ ವ್ಯವಸ್ಥೆ ಇರುತ್ತದೆ. ವಿಜಯನಗರ ಕಾಲದ ದೇವಾಲಯಗಳು ಎತ್ತರವಾದ ಅಧಿಷ್ಠಾನವನ್ನು ಹೊಂದಿರುತ್ತವೆ. ವಿಜಯನಗರ ಕಾಲದ ಕಂಬಗಳು ತುಂಬಾ ಕಲಾತ್ಮಕವಾಗಿ ಕಂಡುಬರುತ್ತವೆ. ಇವರ ಕಾಲದ ಕಂಬಗಳಲ್ಲಿನ ಪುಷ್ಪ ಬೋದಿಗೆಯು ಹೆಚ್ಚು ಬಾಗಿದ್ದು ಅಲಂಕೃತವಾಗಿರುತ್ತವೆ. ಅಲ್ಲದೆ ಅಶ್ವಸ್ಥಂಭ, ಯ್ಯಾಳಿಸ್ಥಂಭ ವಿವಿಧ ಮಾದರಿ ಸ್ಥಂಬಗಳು ಬೆಳೆದುಬಂದವು. ವಿಜಯನಗರ ಕಾಲದ ದೇವಾಲಯಗಳಲ್ಲಿ ಗರ್ಭಗೃಹದ ಮೇಲೆ ದ್ರಾವಿಡ ಶಿಖರವನ್ನೆ ಕಟ್ಟುವುದು ಹೆಚ್ಚಾಗಿ ಬಳಕೆಯಲ್ಲಿ ಬಂತು. ಇವರು ದೇವಾಲಯಗಳನ್ನು ಗ್ರಾನೈಟ್ ಶಿಲೆಯಲ್ಲಿ ಕಟ್ಟುತ್ತಿದ್ದರು.

ಕೂಡ್ಲಿಗಿ ತಾಲೂಕಿನಲ್ಲಿ ಕಂಡುಬರುವ ಪ್ರಮುಖ ವಿಜಯನಗರ ಕಾಲದ ದೇವಾಲಯಗಳ ವಾಸ್ತುಶಿಲ್ಪವನ್ನು ಈ ಕೆಳಕಂಡಂತೆ ನೋಡಬಹುದಾಗಿದೆ.

1. ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ದೇವಾಲಯ

ಗ್ರಾಮದ ಒಳಗೆ ಇರುವ ಈ ದೇವಾಲಯವು ಪೂರ್ವಭಿಮುಖವಾಗಿದ್ದು, ಗರ್ಭಗುಡಿ, ಕಟಾಂಜನವುಳ್ಳ ವಿಶಾಲ ಸಭಾಮಂಟಪ, ಮುಖಮಂಟಪಗಳನ್ನೊಂದಿದೆ. ಈ ದೇವಾಲಯವನ್ನು ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ. ಚೌಕಕಾರದ ಗರ್ಭಗುಡಿಯಲ್ಲಿ ಶ್ರೀಗಳ ಗದ್ದುಗೆಯಿದೆ. ಎತ್ತರದ ಗದ್ದುಗೆಯ ಮೇಲೆ ಶ್ರೀಗಳ ಲೋಹದ ಪ್ರತಿಮೆ ಹಾಗೂ ಲಿಂಗಗಳಿವೆ. ಸಭಾಮಂಟಪ ಮತ್ತು ಮುಖಮಂಟಪಗಳಲ್ಲಿನ ಕಂಬಗಳು ವಿಜಯನಗರ ಶೈಲಿಯಲ್ಲಿವೆ. ಇವು ಚಚ್ಚೌಕಾಕಾರದಲ್ಲಿದ್ದು, ನೆಗೆಯುತ್ತಿರುವ ಸಿಂಹ ಯಾಳಿಗಳಿಂದ ಕೂಡಿವೆ. ಕಂಬಗಳಲ್ಲಿ ಶಿವ ಪಾರ್ವತಿ, ನೃತ್ಯಸ್ತ್ರೀ, ಯತಿ, ನರಸಿಂಹ, ಕಾಳಿಂಗ ಮರ್ಧನ, ಆಂಜನೇಯ, ಗಣಪತಿ, ಬೇಡರ ಕಣ್ಣಪ್ಪ, ಯಾಳಿ, ಸರಸ್ವತಿ, ಬ್ರಹ್ಮ, ಹಾವಾಡಿಗ, ಮಿಥುನ ಶಿಲ್ಪಗಳು, ನಂದೀಶ್ವರ, ಕತ್ತಿವರಸೆಯಲ್ಲಿ ತೊಡಗಿರುವ ಜಟ್ಟಿಗಳು ಇನ್ನೂ ಮುಂತಾದ ಉಬ್ಬು ಶಿಲ್ಪಗಳ ಕೆತ್ತನೆಯನ್ನು ಕಾಣಬಹುದು.

ಗರ್ಭಗೃಹದ ಮೇಲೆ ಮೂರು ತಲಗಳುಳ್ಳ ಶಿಖರವನ್ನು ಗಾರೆ ಇಟ್ಟಿಗೆ ಬಳಸಿ ಚತುರ್ಮುಖಗಳಲ್ಲಿ ಕಟ್ಟಿದ್ದಾರೆ. ಶಿಖರ ಭಾಗದಲ್ಲಿ ಅರೆಗಂಬ, ಗೂಡು, ಕಪೋತ, ಮೂರ್ತಿಶಿಲ್ಪ ಮತ್ತು ಕೀರ್ತಿಮುಖಗಳನ್ನು ಚಿತ್ರಿಸಿದ್ದಾರೆ. ತುದಿಯಲ್ಲಿ ಲೋಹದ ಕಳಸವಿದೆ. ಮುಖಮಂಟಪದ ಮೇಲಿನ ಕೈಪಿಡಿ ಗೋಡೆಯ ಗೂಡುಗಳಲ್ಲಿ ವಿವಿಧ ದೇವತೆಗಳ ಮೂರ್ತಿಗಳಿವೆ. ಈ ದೇವಾಲಯದ ವಾಸ್ತು ಲಕ್ಷಣಗಳಿಂದ ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿರಬಹುದು ಎಂದು ಹೇಳಬಹುದಾಗಿದೆ.[3] ಪ್ರಸ್ತುತದಲ್ಲಿ ಈ ದೇವಾಲಯವನ್ನು ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ.

2. ಕೊಟ್ಟೂರಿನ ಶ್ರೀ ಗಚ್ಚಿನ ಮಠ

ಗ್ರಾಮದ ಪೂರ್ವಕ್ಕೆ ಇರುವ (ಗಚ್ಚಿನ ಮಠವು) ಕೊಟ್ಟೂರೇಶ್ವರ ಸ್ವಾಮಿಗಳು ಕೊಟ್ಟೂರಿನಲ್ಲಿ ಜೀವಿಸಿ ಪವಾಡ ಮೆರೆದು ನಂತರ ಜೀವಂತ ಸಮಾಧಿಯಾದ ನಂತರ ಆ ಸ್ಥಳದಲ್ಲಿ ದೇಗುಲವನ್ನು ಕಟ್ಟಲಾಯಿತು. ಅದೇ ಇಂದಿನ ಗಚ್ಚಿನ ಮಠ ಅಥವಾ ಯೋಗ ಸಮಾಧಿ ಸ್ಥಳ. ಗಚ್ಚಿನ ಮಠವು ಕೊಟ್ಟೂರಿನಲ್ಲೇ ಬೃಹದಾಕಾರವಾದ ಮತ್ತು ಕಲಾತ್ಮಕ ಕೆತ್ತನೆಯಿಂದ ಕೂಡಿದ ನಲವತ್ತು ವಿಜಯನಗರ ಶೈಲಿಯ ಕಂಬಗಳುಳ್ಳ ದೇವಾಲಯವಾಗಿದೆ. ಈ ದೇವಾಲಯಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣಕ್ಕೆ ಪ್ರವೇಶದ್ವಾರಗಳಿವೆ. ಪೂರ್ವ ದ್ವಾರವೇ ಮುಖ್ಯ ದ್ವಾರವಾಗಿರಬಹುದು. ಎಲ್ಲಾ ದ್ವಾರಗಳೂ ಅಲಂಕೃತವಾಗಿವೆ. ಪದ್ಮಾಂಬಿಕೆಯ ಚಿಹ್ನೆಗಳಿವೆ. ನವರಂಗದಲ್ಲಿ ಹದಿನಾರು ಬೃಹತ್ ಕಂಬಗಳಿಂದ ತುಂಬಾ ವಿಶಾಲವಾಗಿವೆ. ಹಜಾರದಲ್ಲಿ ಆರು ಕಂಬಗಳು ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಕೂಡಿವೆ. ಉಳಿದ ಹದಿನಾಲ್ಕು ಕಂಬಗಳಲ್ಲಿ ಮಹಿಷಾಸುರಮರ್ಧಿನಿ, ನಂದಿ, ಆನೆ, ವೀರಭದ್ರ, ಗಣಪತಿ, ಆಂಜನೇಯ, ಸರಸ್ವತಿ, ಬ್ರಹ್ಮ, ವಿಷ್ಣುವಿನ ದಶಾವತಾರ ಶಿಲ್ಪಗಳು ಹಾಗೂ ಕಾಲ್ಪನಿಕ ಪ್ರಾಣಿಗಳ ಶಿಲ್ಪಗಳು ಹೀಗೆ ಅನೇಕ ಬಗೆಯ ಉಬ್ಬುಶಿಲ್ಪಗಳನ್ನು ಕಾಣಬಹುದಾಗಿದೆ.

ಗರ್ಭಗೃಹದಲ್ಲಿ ಶ್ರೀಗಳ ಜೀವ ಸಮಾಧಿಯ ಮೇಲೆ ಗದ್ದುಗೆಯನ್ನು ಕಟ್ಟಲಾಗಿದ್ದು ಅದರ ಮೇಲೆ ಲೋಹದ ಮಂಟಪವಿದೆ. ಮಂಟಪದಲ್ಲಿ ಶ್ರೀಗಳ ಪ್ರತಿಮೆಯನ್ನಿಟ್ಟು ಆರಾಧಿಸುತ್ತಿದ್ದಾರೆ. ಹಾಗೂ ಈ ದೇವಾಲಯದಲ್ಲೇ ಅಕ್ಬರ್ ಚಕ್ರವರ್ತಿ ಈ ದೇವರಿಗೆ ನೀಡಿದ ಮಂಚವೊಂದಿದ್ದು ತುಂಬಾ ಸುಂದರವಾಗಿದೆ. ಈ ದೇವಾಲಯದ ವಾಸ್ತು ಲಕ್ಷಣಗಳಿಂದ ಕ್ರಿ.ಶ. ಸು. ಹದಿನಾರನೆಯ ಶತಮಾನದಲ್ಲಿ ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ತಿಳಿಯಬಹುದು.[4]

3. ಕೊಟ್ಟೂರಿನ ಶ್ರೀ ತೊಟ್ಟಿಲು ಮಠ

ಗ್ರಾಮದ ಶ್ರೀ ಕೊಟ್ಟೂರೇಶ್ವರ ದೇವಾಲಯದ ಪೂರ್ವಕ್ಕೆ ಇರುವ ಈ ಮಠವು (ದೇವಾಲಯ)

ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಸಭಾಮಂಟಪ, ಮುಖಮಂಟಪಗಳಲ್ಲದೆ, ಪ್ರಾಕಾರ ಗೋಡೆ ಹಾಗೂ ಮಂಟಪಗಳನ್ನೊಳಗೊಂಡ ದ್ವಾರಗೋಪುರಗಳಿವೆ ಈ ದೇವಾಲಯಕ್ಕೆ ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ.

ಗರ್ಭಗುಡಿಯು ಚೌಕಕಾರವಾಗಿದ್ದು ಅದರಲ್ಲಿ ಎತ್ತರದ ಗದ್ದುಗೆಯ ಮೇಲೆ ಶಿವಲಿಂಗಕ್ಕೆ ಒಟ್ಟು ಆರುಮುಖಗಳುಳ್ಳ ಲೋಹದ ಮುಖವಾಡವಿದೆ. ಇದಕ್ಕೆ ಚಿಕ್ಕ ಲೋಹದ ಮಂಟಪವನ್ನು ಮಾಡಲಾಗಿದೆ. ಸಭಾಮಂಟಪದಲ್ಲಿ ನಾಲ್ಕು, ಮುಖಮಂಟಪದಲ್ಲಿ ಎರಡು ಕಂಬಗಳಿವೆ. ಇವು ಚಚ್ಚೌಕ ಹಾಗೂ ಅಷ್ಟ ಮುಖಗಳಲ್ಲಿವೆ. ಮೇಲಿನ ಕೈಪಿಡಿ ಗೋಡೆಯ ಗೂಡುಗಳಲ್ಲಿ ವಿವಿಧ ದೇವತೆಗಳ ಶಿಲ್ಪಗಳನ್ನು ಅಳವಡಿಸಲಾಗಿದೆ ಈ ದೇವಾಲಯದ ವಾಸ್ತು ಲಕ್ಷಣಗಳಿಂದ ಕ್ರಿ.ಶ.ಸು. ಹದಿನಾರನೆಯ ಶತಮಾನದಲ್ಲಿ ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ತಿಳಿಯಬಹುದು.[5]

4. ಗುಣಸಾಗರದ ಶ್ರೀ ವೇಣುಗೋಪಾಲ ದೇವಾಲಯ

ಗ್ರಾಮದ ಒಳಗೆ ಇರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ಅರ್ಧಮಂಟಪ ಹಾಗೂ ಸಭಾಮಂಟಪಗಳನ್ನು ಹೊಂದಿದೆ. ಈ ಸಭಾಮಂಟಪಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣಕ್ಕೆ ಪ್ರವೇಶದ್ವಾರಗಳಿವೆ ಇದರಲ್ಲಿನ ಪೂರ್ವದ್ವಾರವೇ ಮುಖ್ಯ ದ್ವಾರವಾಗಿದೆ. ಹಾಗೂ ಇದರಲ್ಲಿನ ನಾಲ್ಕು ಕಂಬಗಳು ಚಚ್ಚೌಕವಾಗಿದ್ದು, ವಿಜಯನಗರ ದೇಗುಲಗಳಲ್ಲಿರುವ ಮೊಗ್ಗಿನಾಕಾರದ ಚಾಚುಪೀಟಗಳನ್ನು ಹೊಂದಿವೆ ಕಂಬಗಳಲ್ಲಿ ಆಂಜನೇಯ, ಬಾಲಕೃಷ್ಣ ಮತ್ತು ಯಾಳಿ ಮುಂತಾದ ಉಬ್ಬು ಶಿಲ್ಪಗಳನ್ನು ಕಾಣಬಹುದು. ಈ ದೇವಾಲಯವನ್ನು ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ.

ಗರ್ಭಗುಡಿಯು ಚೌಕಾಕಾರವಾಗಿದ್ದು ಅದರಲ್ಲಿ ಮೂರೂವರೆ ಅಡಿ ಎತ್ತರದ ವೇಣುಗೋಪಾಲನ ಶಿಲ್ಪವಿದೆ. ಇದರಲ್ಲಿ ಕೊಳಲನ್ನು ಊದುತ್ತಿರುವ ಕೃಷ್ಣ, ಗೋಪಿಕಾ ಸ್ತ್ರೀಯರು ಮತ್ತು ಹಸುಗಳನ್ನು ಮೂಡಿಸಲಾಗಿದೆ. ಕೃಷ್ಣನ ಸುತ್ತಲೂ ಹೂಬಳ್ಳಿಗಳಿಂದ ಕೂಡಿದ ಪ್ರಭಾವಳಿಯಿದೆ. ಗರ್ಭಗೃಹದ ಮೇಲೆ ಏಕತಲವುಳ್ಳ ಶಿಖರವನ್ನು ಗಾರೆ ಮತ್ತು ಇಟ್ಟಿಗೆಗಳನ್ನು ಬಳಸಿ ಕಟ್ಟಲಾಗಿದೆ.[6] ಇದರಲ್ಲಿ ವಾಸ್ತು ಅಲಂಕರಣೆಗಳಾದ ಕಂಬ, ಗೂಡು ಮತ್ತು ಕಪೋತದಲ್ಲಿ ಕೀರ್ತಿಮುಖ ಮತ್ತು ವಿಗ್ರಹಗಳಿವೆ. ಈ ದೇವಾಲಯದ ವಾಸ್ತು ಲಕ್ಷಣಗಳಿಂದ ಕ್ರಿ.ಶ.ಸು. ಹದಿನಾರನೆಯ ಶತಮಾನದಲ್ಲಿ ವಿಜಯನಗರದ ಕಾಲದಲ್ಲಿ ನಿರ್ಮಾಣವಾಗಿರುವುದನ್ನು ಸ್ಪಷ್ಟಪಡಿಸಬಹುದು. ಈ ದೇವಾಲಯದ ಸುತ್ತಮುತ್ತ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯದ ಅವಶೇಷಗಳನ್ನು ಕಾಣಬಹುದು.

5. ಅಗ್ರಹಾರದ ಶ್ರೀ ಈಶ್ವರ ದೇವಾಲಯ

ಗ್ರಾಮದ ಈಶಾನ್ಯಕ್ಕೆ ಇರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗುಡಿ, ಅಂತರಾಳ ಮತ್ತು ಸಭಾಮಂಟಪಗಳನ್ನು ಹೊಂದಿದ ಈ ದೇವಾಲಯವು ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ. ಚಚ್ಚೌಕಾಕಾರದಲ್ಲಿರುವ ಗರ್ಭಗೃಹದಲ್ಲಿ ಶಿವಲಿಂಗ ಮತ್ತು ಲಿಂಗದ ಹಿಂಬದಿಯಲ್ಲಿ ಬೇರೆ ಕಡೆಯಿಂದ ತಂದಿರಿಸಲಾದ ಪದ್ಮಾವತಿ ಶಿಲ್ಪವಿದೆ. ಇದನ್ನು ಸ್ಥಳೀಯರು ಕನ್ನೀರಮ್ಮ ಎಂದು ಕರೆಯುತ್ತಾರೆ. ಈ ಶಿಲ್ಪದ ಕೈಗಳಲ್ಲಿ ಪದ್ಮ ಮತ್ತು ಫಲಗಳಿವೆ. ಅಂತರಾಳದಲ್ಲಿ ನಂದಿಯಿದ್ದು ಸಭಾಮಂಟಪದಲ್ಲಿ ಎಂಟು ಕಂಬಗಳಿವೆ. ಇವು ವಿಜಯನಗರ ಕಾಲದ ಮಂಟಪಗಳಲ್ಲಿ ಬಳಸಲಾದ ಅಲಂಕರಣೆಯಿರದ ಕಂಬಗಳಂತೆ ಇವೆ. ತುಂಬಾ ಶಿಥಿಲವಾದ ಈ ದೇಗುಲದ ಮುಂದೆ ನೀರಿನ ಕೊಳವಿದೆ. ದೇವಾಲಯದ ಬಲಬದಿಯ ಮಂಟಪವೊಂದರಲ್ಲಿ ಮೂರು ಶಿಲ್ಪಪಟ್ಟಿಕೆಗಳಿವೆ. ಇವುಗಳಲ್ಲಿ ಗಿರಿಜಾ ಕಲ್ಯಾಣ, ಗೋಪಿಕಾ ಸ್ತ್ರೀಯರೊಂದಿಗೆ ಇರುವ ಕೃಷ್ಣ ಮತ್ತು ಏಳುಜನ ಯುವತಿಯರ ಮಧ್ಯೆ ಕುಳಿತ ಯೋಧನಂತೆ ಕಾಣುವ ವ್ಯಕ್ತಿಯ ಶಿಲ್ಪಗಳು ಗಮನಾರ್ಹವೆನಿಸಿವೆ.[7]

ದೇವಾಲಯದ ಎಡಬಲದಲ್ಲಿ ಹಲವು ಅವಶೇಷಗಳು ಕಂಡುಬರುತ್ತವೆ. ಇಲ್ಲಿನ ಗ್ರಾಮದ ಹೆಸರೇ ಹೇಳುವಂತೆ ಇದೊಂದು ಅಗ್ರಹಾರವಾಗಿತ್ತು. ಈ ದೇವಾಲಯದ ವಾಸ್ತು ಲಕ್ಷಣಗಳಿಂದ ಕ್ರಿ.ಶ.ಸು. ಹದಿನಾರನೆಯ ಶತಮಾನದಲ್ಲಿ ವಿಜಯನಗರದ ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ತಿಳಿಯಬಹುದು.

6. ಮೊರಬದ ಶ್ರೀ ವೀರಭದ್ರೇಶ್ವರ ದೇವಾಲಯ

ಗ್ರಾಮದ ಪೂರ್ವಕ್ಕೆ ಇರುವ ಈ ದೇವಾಲಯವು ಉತ್ತರಾಭಿಮುಖವಾಗಿದ್ದು ಗರ್ಭಗೃಹ, ಸಭಾಮಂಟಪ, ಅದರ ಇಕ್ಕೆಲಗಳಲ್ಲಿ ಎರಡು ತೆರೆದ ಗರ್ಭಗೃಹ ಹಾಗೂ ಮುಖಮಂಟಪಗಳನ್ನು ಹೊಂದಿದ ಈ ದೇವಾಲಯವು ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಐದು ಅಡಿ ಎತ್ತರದ ವೀರಭದ್ರನ ಶಿಲ್ಪವಿದೆ. ವೀರಭದ್ರನು ಕೈಗಳಲ್ಲಿ ಬಿಲ್ಲು–ಬಾಣ, ಕತ್ತಿ–ಗುರಾಣಿಗಳನ್ನು ಹಿಡಿದಿದ್ದಾನೆ. ಸಭಾಮಂಟಪದ ಬಲಬದಿಯ ತೆರೆದ ಗರ್ಭಗೃಹದಲ್ಲಿ ನಾಲ್ಕು ನಂದಿ ಮತ್ತು ಎರಡು ಶಿವಲಿಂಗಗಳಿವೆ. ಇವುಗಳ ಜೊತೆಗೆ ವೀರಭದ್ರನ ಲೋಹದ ಪ್ರತಿಮೆ ಕೂಡ ಇದೆ.

ಸಭಾಮಂಟಪ, ಮುಖಮಂಟಪದಲ್ಲಿ ವಿಜಯನಗರ ಶೈಲಿಯ ಕಂಬಗಳಿವೆ. ಗರ್ಭಗೃಹದ ಬಾಗಿಲುವಾಡವನ್ನು ಹೂ-ಬಳ್ಳಿಗಳಿಂದ ಅಲಂಕರಿಸಲಾಗಿದೆ. ಗರ್ಭಗೃಹದ ಮೇಲೆ ದ್ವಿತಲದ ಶಿಖರವಿದೆ ಇದರಲ್ಲಿ ದೇಗುಲದ ವಾಸ್ತು ಅಲಂಕರಣವಾದ ಅರೆಗಂಬ, ಗೋಪುರ, ಗೂಡುಗಳು, ಕೀರ್ತಿಮುಖ ಮತ್ತು ನಂದಿಗಳನ್ನೂ ಚಿತ್ರಿಸಲಾಗಿದೆ ಶಿಖರದ ಮೇಲ್ಭಾಗದಲ್ಲಿ ಲೋಹದ ಕಳಸವಿದೆ. ಈ ದೇವಾಲಯದ ವಾಸ್ತು ಲಕ್ಷಣಗಳಿಂದ ಕ್ರಿ.ಶ.ಸು. ಹದಿನಾರನೇಯ ಶತಮಾನದಲ್ಲಿ ವಿಜಯನಗರದ ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ತಿಳಿಯಬಹುದು.

ಈ ಗ್ರಾಮದಲ್ಲಿ ಕ್ರಿ.ಶ. 1528ರ ಶಾಸನ ವಿಜಯನಗರ ಶ್ರೀಕೃಷ್ಣದೇವರಾಯನ ಕಾಲದಲ್ಲಿ ಎಲಬರಿಗೆಯ ಮಲ್ಲಪಂಣನು ತನ್ನ ತಾಯಿ ವೀರಮ್ಮಳಿಗೆ ಪುಣ್ಯವಾಗಲೆಂದು ಒಂದು ಮಳಿಗೆಯನ್ನು ಕಟ್ಟಿಸಿ, ಅದನ್ನು ಮಲಪುರದಲ್ಲಿ ನಡೆಯುವ ಜಾತ್ರೆಯಿಂದ ಬಂದ ಸುಂಕದ ಜೊತೆಗೆ ಮತ್ತು ಪಾಂಡ್ಯನಾಡಿನಲ್ಲಿರುವ ಮೊರಬದಲ್ಲಿ ಭೂಮಿಯನ್ನು ಸೂರ್ಯನಾರಾಯಣ ದೇವರಿಗೆ (?) ದಾನ ನೀಡಿದ್ದನ್ನು ತಿಳಿಸುತ್ತದೆ.[8]

7. ಬೊಪ್ಪಲಾಪುರದ ಶ್ರೀ ಈಶ್ವರ (ಬಿಷ್ಟಪ್ಪಯ್ಯ) ದೇವಾಲಯ

ಗ್ರಾಮದ ಪಶ್ಚಿಮಕ್ಕಿರುವ ಈ ದೇವಾಲಯವು ಉತ್ತರಾಭಿಮುಖವಾಗಿದ್ದು ವಿಶಾಲವಾದ ಗರ್ಭಗೃಹ, ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದ ಈ ದೇವಾಲಯವು ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ. ಗರ್ಭಗೃಹದ ನಾಲ್ಕು ಕಂಬಗಳ ಮಧ್ಯದಲ್ಲಿ ಎತ್ತರದ ಕಟ್ಟೆಯ ಮೇಲೆ ಕಟ್ಟಿದ ಪ್ರತಿಷ್ಠಾಪನ ಶಿವಲಿಂಗವಿದೆ. ಶಿವಲಿಂಗದ ಮುಂಭಾಗದಲ್ಲಿ ನಂದಿಶಿಲ್ಪವಿದೆ. ಈ ದೇಗುಲದ ಕಂಬಗಳು ಚಚ್ಚೌಕ ಹಾಗೂ ಮಧ್ಯಭಾಗವನ್ನು ಬಹುಮುಖಗಳಲ್ಲಿ ಕಡೆದು ಅಲಂಕರಿಸಲಾಗಿದೆ. ಕಂಬದ ದಿಂಡುಗಳಲ್ಲಿ ಉಬ್ಬುಗೆತ್ತನೆಗಳಿವೆ. ಮುಖಮಂಟಪದ ಮೇಲ್ಭಾಗದಲ್ಲಿ ಹಂಪಿಯ ಗಾಣಗಿತ್ತಿ ಜಿನಾಲಯದಲ್ಲಿರುವಂತೆ ಕೈಪಿಡಿಗೋಡೆಯು ಕೂಡುಗಳಿಂದ ಅಲಂಕೃತಗೊಂಡಿದೆ.

ಮೂಲತಃ ಈ ಈಶ್ವರ ದೇವಾಲಯವನ್ನು ಸ್ಥಳೀಯರು ಬಿಷ್ಟಪ್ಪಯ್ಯನ ಗುಡಿಯೆಂದೇ ಕರೆಯುತ್ತಾರೆ. ಈ ದೇವಾಲಯದ ವಾಸ್ತು ಲಕ್ಷಣಗಳಿಂದ ಕ್ರಿ.ಶ.ಸು. ಹದಿನಾರನೇಯ ಶತಮಾನದಲ್ಲಿ ವಿಜಯನಗರದ ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ತಿಳಿಯಬಹುದು.

8. ದೇವಲಾಪುರದ ಶ್ರೀ ವಸಂತೇಶ್ವರ ದೇವಾಲಯ

ದೇವಲಾಪುರ ಗ್ರಾಮವು ಈಗ ಬೇಚಿರಾಕ ಗ್ರಾಮವಾಗಿದೆ. ಈ ದೇವಲಾಪುರವು ಗಜಾಪುರದ ಆಗ್ನೇಯಕ್ಕೆ ಬಡೇಲಡಕು ಗ್ರಾಮದ ಕೆರೆಯ ಬಳಿ ಬರುತ್ತದೆ. ಈ ಗ್ರಾಮದಲ್ಲಿರುವ ಶ್ರೀ ವಸಂತೇಶ್ವರ ದೇವಾಲಯವು ಉತ್ತರಾಭಿಮುಖವಾಗಿದ್ದು ಗ್ರಾನೈಟ್ ಶಿಲೆಯಿಂದ ನಿರ್ಮಾಣವಾಗಿದೆ. ಈ ದೇವಾಲಯವು ವಿಶಾಲವಾದ ಪ್ರಾಂಗಣದಲ್ಲಿರುವ ಈ ದೇವಾಲಯ ಗರ್ಭಗೃಹ, ಅಂತರಾಳ, ಅರ್ಧಮಂಟಪ, ಸಭಾಮಂಟಪ, ಮಹಾಮಂಟಪ, ಮುಖಮಂಟಪ ಹಾಗೂ ಎರಡು ದ್ವಾರಬಾಗಿಲುಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಹಾಸು ಬಂಡೆಯಲ್ಲಿ ಕೆತ್ತಲಾದ ಶಿವಲಿಂಗವಿದೆ. ಇದು ಅರ್ಧ ಅಡಿ ಎತ್ತರವಾಗಿದೆ ಇದರ ಬಳಿ ಇನ್ನೊಂದು ಇತ್ತೀಚ್ಚಿನ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪಕ್ಕೆ ಮೂರು ಬಾಗಿಲುಗಳಿದ್ದು ಮಧ್ಯದಲ್ಲಿ ನಾಲ್ಕು ಕಂಬಗಳಿವೆ ಇವು ಚಚ್ಚೌಕವಾಗಿದ್ದು ಉಬ್ಬು ಶಿಲ್ಪಗಳನ್ನು ಹೊಂದಿದೆ. ಇದೇ ಮಾದರಿಯ ನಾಲ್ಕು ಕಂಬಗಳು ಮಹಾಮಂಟಪದಲ್ಲಿವೆ. ಈ ಕಂಬಗಳ ಮೇಲ್ಭಾಗದಲ್ಲಿ ದಿಂಬಿನಾಕಾರ, ವೃತ್ತಾಕಾರ ಹಾಗೂ ಮುಗುಚಿದ ಬೋಗುಣಿಯಂತಿರುವ ಬೋದಿಗೆಗಳಿವೆ.

ಈ ಗ್ರಾಮವು ವಿಜಯನಗರ ಕಾಲದಲ್ಲಿ ವಾಸ್ತವ್ಯವಿದ್ದ ಎಲ್ಲ ಲಕ್ಷಣಗಳು ಕಂಡುಬರುತ್ತವೆ. ದೇಗುಲ, ಕೋಟೆ, ಕೆರೆ, ಬಾವಿ ಇನ್ನೂ ಮುಂತಾದ ಅವಶೇಷಗಳನ್ನು ಇಲ್ಲಿ ಕಾಣಬಹುದು.

ಈ ದೇವಾಲಯದ ಮುಂದೆ ಬಿದ್ದಿರುವ ಮುರಿದ ಕಂಬದಲ್ಲಿನ ಕ್ರಿ.ಶ. 1552ರ ಶಾಸನ ವಿಜಯನಗರ ಸದಾಶಿವರಾಯನ ಆಳ್ವಿಕೆಯಲ್ಲಿ ಬಯಪ್ಪನಾಯಕನ ಮಗ ಕೃಷ್ಣಪ್ಪನಾಯಕನ ಕಾರ್ಯಕರ್ತನು ಮತ್ತು ವೇಲೂರಿನ ತಿಮ್ಮಪ್ಪನಾಯಕನ ಮಗನಾದ ರಾಮಪ್ಪನಾಯಕನು ದೇವಲಾಪುರದ ಶ್ರೀ ವಸಂತಮಲ್ಲಿಕಾರ್ಜುನ ದೇವರಿಗೆ ಪನ್ನುಲ-ಸುಂಕನಹಳ್ಳಿಯನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಈ ಗ್ರಾಮವನ್ನು ಕೋನಯ್ಯರಾವುತನ ಮಗ ಮುಖವೇಣಿಯ ಮುಸಿಯ ರಾವುತನು ದೇವಸ್ಥಾನದಲ್ಲಿ ಎರಡು ನಾಗಸ್ವರ ಮತ್ತು ಎರಡು ಡೋಳುಗಳನ್ನು ನುಡಿಸುವುದಕ್ಕೆ ಅನುಭೋಗಿಸುವುದೆಂದು ತಿಳಿಸುತ್ತದೆ. ಈ ಶಾಸನವನ್ನು ಕೆತ್ತಿದ ಅಕ್ಕಸಾಲಿಗ ಸಿರಿಯಣ್ಣನಿಗೆ ಗ್ರಾಮದಲ್ಲಿ ಒಂದು ಮಾನ್ಯದ ಭೂಮಿಯನ್ನು ದಾನ ನೀಡಲಾಯಿತು ಎಂದು ತಿಳಿಸುತ್ತದೆ.[9]

9. ಜಂಗಮ ಸೋವೇನಹಳ್ಳಿಯ ಶ್ರೀ ಕಲ್ಲೇಶ್ವರ ದೇವಾಲಯ

ಗ್ರಾಮದ ಹಗರಿಬೊಮನಹಳ್ಳಿ ರಸ್ತೆಯ ಎಡ ಬದಿಯಲ್ಲಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಕಣ ಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ. ಈ ದೇವಾಲಯವು ಗರ್ಭಗೃಹ, ಅಂತರಾಳಗಳಿದ್ದು ಸಭಾಮಂಟಪದ ಲಕ್ಷಣಗಳು ತಳವಿನ್ಯಾಸದಿಂದ ತಿಳಿದುಬರುತ್ತದೆ. ಗರ್ಭಗೃಹದಲ್ಲಿ ಲಿಂಗ ಮತ್ತು ಅಂತರಾಳದಲ್ಲಿ ನಂದಿ ಶಿಲ್ಪಗಳಿವೆ. ಈ ದೇವಾಲಯದ ವಾಸ್ತು ಲಕ್ಷಣಗಳಿಂದ ಕ್ರಿ.ಶ. ಸು. ಹದಿನಾರನೆಯ ಶತಮಾನದಲ್ಲಿ ವಿಜಯನಗರದ ಕಾಲದಲ್ಲಿ ನಿರ್ಮಾಣವಾಗಿರಬಹುದೆಂದು ತಿಳಿಯಬಹುದು.[10]

10. ಕೈವಲ್ಯಾಪುರದ ಶ್ರೀ ಅನಂತಪದ್ಮನಾಭ ದೇವಾಲಯ

ಗ್ರಾಮದ ಒಳಗೆ ಇರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಕಣಶಿಲೆಯನ್ನು ಬಳಸಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಈ ದೇವಾಲಯವು ಗರ್ಭಗೃಹ, ಸಭಾಮಂಟಪಗಳಿಂದ ಕೂಡಿದೆ ಈ ದೇಗುಲಕ್ಕೆ ಇತ್ತೀಚೆಗೆ ನಾಲ್ಕು ಕಂಬಗಳಿಂದ ಕೂಡಿದ ಮತ್ತೊಂದು ಮಂಟಪವನ್ನು ಸೇರಿಸಲಾಗಿದೆ.

ಗರ್ಭಗೃಹದಲ್ಲಿ ಮಲಗಿದ ಅನಂತಶಯನನಿದ್ದಾನೆ. ಈತನಿಗೆ ಆದಿಶೇಷನು ಏಳು ಹೆಡೆಗಳನ್ನು ಬಿಚ್ಚಿ ರಕ್ಷಣೆ ನೀಡಿರುವಂತಿದೆ. ವಿಷ್ಣುವಿನ ನಾಭಿಯಿಂದ ಹೊರಟ ಕಮಲದಲ್ಲಿ ಬ್ರಹ್ಮನಿದ್ದು, ಪಾದದಲ್ಲಿ ಲಕ್ಷ್ಮಿಯು ಕಾಲನ್ನು ಒತ್ತುತ್ತಿದ್ದಾಳೆ. ಈ ದೇವಾಲಯದ ಗರ್ಭಗೃಹ ಮತ್ತು ಸಭಾಮಂಟಪದ ಭಾಗಗಳು ವಿಜಯನಗರ ಶೈಲಿಯಲ್ಲಿವೆ. ಅನಂತರ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದ ಮೇಲೆ ಸುಮಾರು ಇಪ್ಪತ್ತೈದು ಅಡಿ ಎತ್ತರದ ಶಿಖರವಿದೆ. ಇದರಲ್ಲಿ ದೇಗುಲದ ವಾಸ್ತು ಅಲಂಕರಣೆಗಳಿವೆ. ಶಿಖರದ ಮೇಲ್ಭಾಗದಲ್ಲಿ ಲೋಹದ ಕಳಸವಿದೆ. ಗರ್ಭಗೃಹದ ಮುಂದಿನ ಗೋಡೆಯಲ್ಲಿ ಕೆಲವು ವೈಷ್ಣವ ಶಿಲ್ಪಪಟ್ಟಿಕೆಗಳಿವೆ.

ಹೀಗೆ ಕೂಡ್ಲಿಗಿ ತಾಲೂಕಿನ ವಿಜಯನಗರ ಕಾಲದ ದೇವಾಲಯಗಳ ವಾಸ್ತುಶಿಲ್ಪವನ್ನು ನೋಡಬಹುದಾಗಿದೆ. ಈ ಲೇಖನದಲ್ಲಿ ಸುಮಾರು ಹತ್ತು ದೇವಾಲಯಗಳ ವಾಸ್ತುಶಿಲ್ಪವನ್ನು ಕುರಿತು ವಿವರಿಸಲಾಗಿದೆ. ಈ ಹತ್ತು ದೇವಾಲಯಗಳ ವಾಸ್ತುಶೈಲಿ, ದೇವಾಲಯ ನಿರ್ಮಾಣಕ್ಕೆ ಬಳಸಿಕೊಂಡಿರುವ ಸಾಮಗ್ರಿಗಳನ್ನು ಹಾಗೂ ಶಾಸನಗಳ ಹಿನ್ನೆಲೆಯನ್ನು ಆಧರಿಸಿ ವಿಜಯನಗರ ಕಾಲದ ದೇವಾಲಯಗಳೆಂದು ಗುರುತಿಸಬಹುದಾಗಿದೆ.


ಅಡಿ ಟಿಪ್ಪಣಿಗಳು

1. ರವಿಕುಮಾರ್ ಎನ್.ಎಂ. ಮತ್ತು ವೃಷಭೇಂದ್ರಾಚಾರ್ ಎ. (ಸಂ), 1998, ಮುನ್ನಡೆಯ ಕೂಡ್ಲಿಗಿ, ಪು. 1.
2. ಶಿವತಾರಕ್ ಕೆ.ಬಿ., 2001, *ಕರ್ನಾಟಕದ ಪುರಾತತ್ವ ನೆಲೆಗಳು,* ಪು. 352–354.
3. ಸುರೇಶ್ ಕೆ.ಎಂ., ವಾಸುದೇವ ಬಡಿಗೇರ, ಮಾಡಲಗೇರಿ ಕೊಟ್ರೇಶ್ ಮತ್ತು ಸೋಮಶೇಖರ್ ಎಸ್.ವೈ.(ಸಂ), 1999, *ಕರ್ನಾಟಕ ದೇವಾಲಯ ಕೋಶ,* ಬಳ್ಳಾರಿ ಜಿಲ್ಲೆ., ಪು. 175.
4. ಅದೇ, ಪು. 176.
5. ಅದೇ, ಪು. 176.
6. ಅದೇ, ಪು. 184.
7. ಅದೇ, ಪು. 163.
8. ಚನ್ನಬಸಪ್ಪ ಎಸ್ ಪಾಟೀಲ್. ಮತ್ತು ವಿನೋದಾ ಪಾಟೀಲ್ (ಸಂ), 1997, *ಕರ್ನಾಟಕ ಶಾಸನಗಳು ಸಂಪುಟ : 2,* ಬಳ್ಳಾರಿ ಜಿಲ್ಲೆಯ ಶಾಸನಗಳು, ಶಾ.ಸಂ. 479, ಪು. 156.
9. ದೇವರಕೊಂಡಾರೆಡ್ಡಿ (ಪ್ರ.ಸಂ.), ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ., ಪರಮಶಿವಮೂರ್ತಿ ಡಿ.ವಿ. (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : 1,* ಬಳ್ಳಾರಿ ಜಿಲ್ಲೆ, ಪು. 220.
10. ಸುರೇಶ್ ಕೆ.ಎಂ, ವಾಸುದೇವ ಬಡಿಗೇರ, ಮಾಡಲಗೇರಿ ಕೊಟ್ರೇಶ್ ಮತ್ತು ಸೋಮಶೇಖರ್ ಎಸ್.ವೈ.(ಸಂ), *ಪೂರ್ವೋಕ್ತ,* ಪು. 186.

(ದೇವಾಲಯಗಳ ತಲನಕ್ಷೆಯ ರೇಖಾಚಿತ್ರವನ್ನು ಮಾಡಿಕೊಟ್ಟ ಉಪ ನಿರ್ದೇಶಕರ ಕಚೇರಿ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕಮಲಾಪುರ. ಈ ಕಚೇರಿಯ ದಿನಗೂಲಿ ನೌಕರರಾದ ಶ್ರೀ ಹನುಮಂತಪ್ಪ ದುರ್ಗಪ್ಪ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.)


ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ದೇವಾಲಯದ ತಲನಕ್ಷೆ

1. ಗರ್ಭಗೃಹ, 2. ವಿಶಾಲ ಸಭಾಮಂಟಪ, 3. ಮುಖಮಂಟಪ, 4. ದಕ್ಷಿಣಕ್ಕಿರುವ ದ್ವಾರ, 5. ದಕ್ಷಿಣಕ್ಕಿರುವ ಮತ್ತೊಂದು ದ್ವಾರ, 6. ಪೂರ್ವಕ್ಕಿರುವ ದ್ವಾರ



ಕೊಟ್ಟೂರಿನ ಶ್ರೀ ಗಚ್ಚಿನಮಠದ ತಲನಕ್ಷೆ

1. ಗರ್ಭಗೃಹ, 2. ವಿಶಾಲ ಸಭಾಮಂಟಪ, 3. ಮುಖಮಂಟಪ, 4. ಉತ್ತರ ಭಾಗಕ್ಕೆ ಇರುವ ದ್ವಾರ, 5. ದಕ್ಷಿಣ ಭಾಗಕ್ಕಿರುವ ದ್ವಾರ, 6. ಪೂರ್ವಕ್ಕಿರುವ ದ್ವಾರ



ಕೊಟ್ಟೂರಿನ ಶ್ರೀ ತೊಟ್ಟಿಲುಮಠದ ತಲನಕ್ಷೆ

1. ಗರ್ಭಗೃಹ, 2. ನವರಂಗ, 3. ಮುಖಮಂಟಪ, 4. ಉತ್ತರಕ್ಕಿರುವ ದ್ವಾರ, 5. ಪೂರ್ವಕ್ಕಿರುವ ದ್ವಾರ, 6. ಉತ್ತರಕ್ಕಿರುವ ಉಪದ್ವಾರ, 7. ದಕ್ಷಿಣಕ್ಕಿರುವ ದ್ವಾರ




ಗುಣಸಾಗರ ಶ್ರೀ ವೇಣುಗೋಪಾಲ ದೇವಾಲಯದ ತಲನಕ್ಷೆ

1. ಗರ್ಭಗೃಹ, 2. ಅಂತರಾಳ, 3. ಅರ್ಧಮಂಟಪ, 4. ನವರಂಗ, 5. ಉತ್ತರಕ್ಕಿರುವ ದ್ವಾರ, 6. ಪೂರ್ವಕ್ಕಿರುವ ದ್ವಾರ, 7. ದಕ್ಷಿಣಕ್ಕಿರುವ ದ್ವಾರ



ಮೊರಬದ ಶ್ರೀ ವೀರಭದ್ರೇಶ್ವರ ದೇವಾಲಯದ ತಲನಕ್ಷೆ

1. ಗರ್ಭಗೃಹ, 2. ಸಭಾಮಂಟಪ, 3. ತೆರೆದ ಗರ್ಭಗೃಹ, 4. ತೆರೆದ ಗರ್ಭಗೃಹ
5. ಪೂರ್ವಕ್ಕಿರುವ ದ್ವಾರ



ದೇವಲಾಪುರದ ಶ್ರೀ ವಸಂತೇಶ್ವರ ದೇವಾಲಯದ ತಲನಕ್ಷೆ

1. ಗರ್ಭಗೃಹ, 2. ಅಂತರಾಳ, 3. ನವರಂಗ, 4. ಸಭಾಮಂಟಪ, 5. ಮತ್ತೊಂದು ನವರಂಗ,
6. ಪೂರ್ವಕ್ಕಿರುವ ದ್ವಾರ, 7. ಪಶ್ಚಿಮಕ್ಕೆ ಇರುವ ದ್ವಾರ, 8. ಪೂರ್ವಕ್ಕಿರುವ ಮತ್ತೊಂದು ದ್ವಾರ
9. ಪಶ್ಚಿಮಕ್ಕೆ ಇರುವ ದ್ವಾರ, 10. ಉತ್ತರಕ್ಕಿರುವ ಮುಖ್ಯದ್ವಾರ






ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ದೇವಾಲಯ



ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ದೇವಾಲಯದ ಕಂಬಗಳು

ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ದೇವಾಲಯದ ಕಂಬಗಳಲ್ಲಿರುವ ಶಿಲ್ಪಗಳು



ಮಹಿಷಾಸುರ ಮರ್ಧಿನಿ



ಕತ್ತಿವರಸೆ ಮಾಡುತ್ತಿರುವ ಸೈನಿಕರು



ಮಿಥುನ ಶಿಲ್ಪಗಳು



ರಾಕ್ಷಸನನ್ನು ಸಂಹಾರ ಮಾಡುತ್ತಿರುವ ಶಿವನ ಶಿಲ್ಪ



ಗಣಪತಿ ಶಿಲ್ಪ



ಬ್ರಹ್ಮನ ಶಿಲ್ಪ



ಸರಸ್ವತಿ ಶಿಲ್ಪ



ಹಾವಾಡಿಗ



ನಂದೀಶ್ವರ




ಗಣಪತಿಶಿಲ್ಪ



ಗೋಪಾಲಕೃಷ್ಣ



ಮಿಥುನ ಶಿಲ್ಪಗಳು



ಮಿಥುನ ಶಿಲ್ಪಗಳು



ಕೊಟ್ಟೂರಿನ ಶ್ರೀ ತೊಟ್ಟಿಲು ಮಠ



ಕೊಟ್ಟೂರಿನ ಶ್ರೀ ತೊಟ್ಟಿಲು ಮಠದಲ್ಲಿನ ಕಂಬಗಳು



ಕೊಟ್ಟೂರಿನ ಶ್ರೀ ತೊಟ್ಟಿಲು ಮಠದಲ್ಲಿನ ಭುವನೇಶ್ವರಿ (ಮುಚ್ಚಿಗೆ)



ಕೊಟ್ಟೂರಿನ ಶ್ರೀ ಗಚ್ಚಿನ ಮಠ




ಕೊಟ್ಟೂರಿನ ಶ್ರೀ ಗಚ್ಚಿನ ಮಠದಲ್ಲಿನ ಬಾಗಿಲುವಾಡ



ಕೊಟ್ಟೂರಿನ ಶ್ರೀ ಗಚ್ಚಿನ ಮಠದಲ್ಲಿನ ಕಂಬ



ಗುಣಸಾಗರದ ಶ್ರೀ ವೇಣುಗೋಪಾಲ ದೇವಾಲಯದ ಪಾರ್ಶ್ವನೋಟ



ಶ್ರೀ ವೇಣುಗೋಪಾಲ ದೇವಾಲಯದಲ್ಲಿನ ಕಂಬಗಳು



ಶ್ರೀ ವೇಣುಗೋಪಾಲ ದೇವಾಲಯದ ಕಂಬದಲ್ಲಿರುವ ಬಾಲಕೃಷ್ಣ



ಶ್ರೀ ವೇಣುಗೋಪಾಲ ದೇವಾಲಯದ ಕಂಬದಲ್ಲಿರುವ ಕಾಳಿಂಗಮರ್ಧನ



ಶ್ರೀ ವೇಣುಗೋಪಾಲ ದೇವಾಲಯದ ಕಂಬದಲ್ಲಿರುವ ಆಂಜನೇಯ



ಶ್ರೀ ವೇಣುಗೋಪಾಲ ದೇವಾಲಯದ ಮುಂಭಾಗದಲ್ಲಿರುವ ಕಂಬ



ಮೊರಬದ ಶ್ರೀ ವೀರಭದ್ರೇಶ್ವರ ದೇವಾಲಯದ ಪಾರ್ಶ್ವನೋಟ



ಮೊರಬದ ಶ್ರೀ ವೀರಭದ್ರೇಶ್ವರ ದೇವರ ಮೂರ್ತಿ




ಮೊರಬದ ಶ್ರೀ ವೀರಭದ್ರೇಶ್ವರ ದೇವಾಲಯದಲ್ಲಿನ ಕಂಬ



ಮೊರಬದ ಶ್ರೀ ವೀರಭದ್ರೇಶ್ವರ ದೇವಾಲಯದಲ್ಲಿನ ನಂದಿ ಶಿಲ್ಪಗಳು



ಮೊರಬದ ಶ್ರೀ ವೀರಭದ್ರೇಶ್ವರ ದೇವಾಲಯದ
ಬಳಿಯಿರುವ ವೀರಗಲ್ಲು



ಮೊರಬ ಗ್ರಾಮದಲ್ಲಿರುವ ಶಾಸನ



ಮೊರಬ ಗ್ರಾಮದಲ್ಲಿರುವ ಶಾಸನ



ದೇವಲಾಪುರ (ಬೇಚಿರಾಕ್ ಗ್ರಾಮ) ಗಜಾಪುರದ ಆಗ್ನೇಯಕ್ಕೆ
(ಬಡೇಲಡುಕು ಗ್ರಾಮದ ಕೆರೆಯ ಬಳಿ) ಶ್ರೀ ವಸಂತೇಶ್ವರ ದೇವಾಲಯ



ದೇವಲಾಪುರ (ಬೇಚಿರಾಕ್ ಗ್ರಾಮ) ಗಜಾಪುರದ ಆಗ್ನೇಯಕ್ಕೆ (ಬಡೇಲಡುಕು ಗ್ರಾಮದ ಕೆರೆಯ ಬಳಿ ಇರುವ) ಶ್ರೀ ವಸಂತೇಶ್ವರ ದೇವಾಲಯದ ಕಂಬಗಳು



ದೇವಲಾಪುರ (ಬೇಚಿರಾಕ್ ಗ್ರಾಮ) ಗಜಾಪುರದ ಆಗ್ನೇಯಕ್ಕೆ (ಬಡೇಲಡುಕು ಗ್ರಾಮದ ಕೆರೆಯ ಬಳಿ ಇರುವ) ಶ್ರೀ ವಸಂತೇಶ್ವರ ದೇವಾಲಯದ ಭುವನೇಶ್ವರಿ (ಮುಚ್ಚಿಗೆ)




ದೇವಲಾಪುರ (ಬೇಚಿರಾಕ್ ಗ್ರಾಮ) ಗಜಾಪುರದ ಆಗ್ನೇಯಕ್ಕೆ (ಬಡೇಲಡುಕು ಗ್ರಾಮದ ಕೆರೆಯ ಬಳಿ ಇರುವ) ಶ್ರೀ ವಸಂತೇಶ್ವರ ದೇವಾಲಯದ ಪ್ರವೇಶದ್ವಾರ



ದೇವಲಾಪುರ (ಬೇಚಿರಾಕ್ ಗ್ರಾಮ) ಗಜಾಪುರದ ಆಗ್ನೇಯಕ್ಕೆ (ಬಡೇಲಡುಕು ಗ್ರಾಮದ ಕೆರೆಯ ಬಳಿ ಇರುವ) ಶ್ರೀ ವಸಂತೇಶ್ವರ ದೇವಾಲಯದ ಮಂಟಪ




ಕೈವಲ್ಯಾಪುರದ ಶ್ರೀ ಅನಂತಪದ್ಮನಾಭ ದೇವಾಲಯ



ಕೈವಲ್ಯಾಪುರದ ಶ್ರೀ ಅನಂತಪದ್ಮನಾಭ ದೇವಾಲಯದಲ್ಲಿರುವ ಕಂಬ



ಕೈವಲ್ಯಾಪುರದ ಶ್ರೀ ಅನಂತಪದ್ಮನಾಭ ದೇವರ ಮೂರ್ತಿ



ಕೈವಲ್ಯಾಪುರದ ಶ್ರೀ ಅನಂತಪದ್ಮನಾಭ ದೇವವಾಲಯದಲ್ಲಿ ಗರ್ಭಗೃಹದ ಮುಂದಿನ ಗೋಡೆಯಲ್ಲಿ ಕೆಲವು ವೈಷ್ಣವ ಶಿಲ್ಪಪಟ್ಟಿಕೆ.

13. ಹಂಪಿ ಕೋಟೆ ಶಂಕರ ಬಾಗಿಲ ಬಳಿಯಿರುವ ವೈಷ್ಣವ ದೇವಸ್ಥಾನದ ಸಂರಕ್ಷಣಾ ಕಾರ್ಯ

ಡಾ. ವಾಸುದೇವ ಎಸ್.ಕೆ.

ಸ್ಮಾರಕದ ಶಿಥಿಲತೆಗೆ ಕಾರಣಗಳು

* ವಿಜಯನಗರದ ತಾಳಿಕೋಟೆ ಯುದ್ಧದ ನಂತರ ಹಂಪಿಯಲ್ಲಿನ ವೈಷ್ಣವ ದೇವಾಲಯಗಳ ಮೇಲೆ ಉಂಟಾದ ದಾಳಿ.
* ಸ್ಮಾರಕದಲ್ಲಿ ಹಾಗೂ ಸುತ್ತಲೂ ಬೆಳೆದಿರುವ ಗಿಡಗಂಟಿಗಳು
* ಸ್ಮಾರಕದ ಪಕ್ಕದಲ್ಲಿನ ಕೋಟೆಯ ನಾಶದಿಂದ ಉಂಟಾದ ಮಣ್ಣಿನ ಜಾರುವಿಕೆ
* ಮಳೆಗಾಲದಲ್ಲಿ ಸ್ಮಾರಕದ ದಕ್ಷಿಣ ದಿಕ್ಕಿನಲ್ಲಿ ಹರಿಯುವ ನೀರಿನಿಂದಾಗಿ ಮಣ್ಣಿನ ಸವೆತದಿಂದ ಉಂಟಾದ ಕೊರಕಲುಗಳು
* ಹಲವಾರು ನೈಸರ್ಗಿಕ ಕಾರಣದಿಂದ ಸ್ಮಾರಕದ ಮೇಲೆ ಉಂಟಾದ ಪರಿಣಾಮಗಳು
* ಮಣ್ಣಿನಿಂದ ಸ್ಮಾರಕದಲ್ಲಿ ನಿಧಿ ಆಶೆಗೆ ಮಾಡಿದ ಹಾನಿಗಳು ಹಾಗೂ ಸ್ಮಾರಕದ ಹತ್ತಿರ ವ್ಯವಸಾಯದ ಸಮಯದಲ್ಲಿ ಗಿಡಗಂಟಿಗಳನ್ನು ಸುಡಲು ಹಾಕಿದ ಬೆಂಕಿ
* ಸ್ಮಾರಕದ ನಿರ್ವಹಣಾ ಕೊರತೆಯಿಂದ ಉಂಟಾದ ಹಾನಿಗಳು

ಸ್ಮಾರಕದಲ್ಲಿ ಉಂಟಾಗುವ ಶಿಥಿಲತೆಯ ಅಂಶಗಳು


* ಅಡಿಪಾಯದ ಅಭದ್ರತೆಯಿಂದ ಉಂಟಾಗಿರುವ ಕುಸಿತ
* ಸ್ಮಾರಕದಲ್ಲಿ ಗಿಡಗಂಟಿಗಳು ಬೆಳೆದು ಹೊರ ಮತ್ತು ಒಳ ಗೋಡೆಗಳು ಕಲ್ಲುಗಳು ಸ್ಥಳಾಂತರ
* ದೇವಾಲಯದ ಗರ್ಭಗುಡಿ ಮತ್ತು ಮುಖಮಂಟಪದಲ್ಲಿ ನಿಧಿಗಳ್ಳರು ಉಂಟು ಮಾಡಿರುವ ಹಾನಿಯಿಂದ ಉಂಟಾದ ನೆಲಹಾಸಿನ ಶಿಥಿಲತೆ
* ದೇವಾಲಯದ ಮೇಲ್ಭಾಗದ ಛಾವಣಿ ಕಲ್ಲಿನಲ್ಲಿ ಶಿಥಿಲತೆ ಹಾಗೂ ಜಲ ನಿರೋಧಕ ಹೊದಿಕೆಯಲ್ಲಿ ಉಂಟಾದ ಬಿರುಕುಗಳು
* ದೇವಸ್ಥಾನದ ಸಮೀಪದಲ್ಲಿ ಹಾಕಿದ ಬೆಂಕಿಯಿಂದ ಉಂಟಾದ ಕಲ್ಲುಗಳ ಸಿಡಿಯುವಿಕೆ
* ಮಳೆಯ ನೀರು ಸೂಕ್ತವಾಗಿ ಹರಿದು ಹೋಗುವ ವ್ಯವಸ್ಥೆ ಇಲ್ಲದ ಕಾರಣ ಉಂಟಾದ ಅಡಿಪಾಯದ ಕುಸಿಯುವಿಕೆ

ಸ್ಮಾರಕದ ಸಂರಕ್ಷಣೆಗೆ ತೆಗೆದುಕೊಳ್ಳಲಾದ ಕ್ರಮಗಳು


* ಸ್ಮಾರಕದ ಅಡಿಪಾಯವನ್ನು ಭದ್ರಪಡಿಸಲು ಸ್ಮಾರಕದ ಕಲ್ಲುಗಳಿಗೆ ವೈಜ್ಞಾನಿಕ ರೀತಿಯಲ್ಲಿ ನಕ್ಷೆ ಸಿದ್ಧಪಡಿಸಿ ಸಂಖ್ಯೆಗಳನ್ನು ನಮೂದಿಸಿ ಪೂರ್ಣವಾಗಿ ಸ್ಮಾರಕವನ್ನು ಬಿಚ್ಚಿ ಕಲ್ಲುಗಳನ್ನು ಶೇಖರಿಸಿಡುವುದು
* ಸ್ಮಾರಕದ ಬುನಾದಿಯ ಭದ್ರತೆಗಾಗಿ ತಳಮಟ್ಟದಲ್ಲಿ ಅವಶ್ಯಕ ಸಿಮೆಂಟ್ ಕಾಂಕ್ರೀಟ್ ಪದರಿನ ನಿರ್ಮಾಣ

* ಶಿಥಿಲಗೊಂಡ ಹಾಗೂ ನಾಶಗೊಂಡ ಸ್ಮಾರಕದ ಕಲ್ಲುಗಳ ಜಾಗದಲ್ಲಿ ಹೊಸ ಕಲ್ಲುಗಳನ್ನು ಸರಬರಾಜು ಮಾಡಿ ಜೋಡಿಸುವುದು
* ಹೊಸ ಕಲ್ಲುಗಳಿಗೆ ಸ್ಮಾರಕದ ವಿನ್ಯಾಸಕ್ಕೆ ಹೊಂದುವ ರೀತಿಯಲ್ಲಿ ನಯಗೊಳಿಸಿ ಆಕಾರಕ್ಕೆ ತಕ್ಕಂತೆ ಸಿದ್ಧಪಡಿಸುವುದು
* ಬಿಚ್ಚಿ ಶೇಖರಿಸಿಡಲಾದ ಕಲ್ಲುಗಳನ್ನು ಮರು ಜೋಡಿಸುವುದು
* ಒಳ ಮತ್ತು ಹೊರ ಗೋಡೆಯ ಪದರುಗಳ ಮಧ್ಯದ ಸಂದುಗಳಿಗೆ ಇಟ್ಟಿಗೆ ಮತ್ತು ಗಾರೆಯನ್ನು ತುಂಬುವುದು (ಕೋರ್ ಫಿಲ್ಲಿಂಗ್)
* ವಿನ್ಯಾಸಕ್ಕೆ ಹೊಂದುವ ರೀತಿಯಲ್ಲಿ ನೆಲಹಾಸನ್ನು ನಿರ್ಮಿಸುವುದು
* ಸ್ಮಾರಕದ ಛಾವಣಿಯ ಮೇಲ್ಭಾಗದಲ್ಲಿ ಜಲನಿರೋಧಕ ಹೊದಿಕೆಯ ನಿರ್ಮಾಣ
* ಛಾವಣಿಯ ಮೇಲೆ ಬೀಳುವ ಮಳೆಯ ನೀರು ಹರಿದುಹೋಗಲು ನೀರಿನ ದೋಣಿಗಳನ್ನು ಅಳವಡಿಸುವುದು
* ಅಡಿಪಾಯದಲ್ಲಿ ಮಳೆನೀರು ಸೇರಿದಂತೆ ಸ್ಮಾರಕದ ಸುತ್ತಲೂ ನೆಲಹಾಸಿನ ನಿರ್ಮಾಣ
* ಸಂರಕ್ಷಣಾ ಕಾಮಗಾರಿ ಮುಗಿದ ನಂತರ ಸ್ಮಾರಕವನ್ನು ಶುದ್ಧ ನೀರಿನಿಂದ ಸ್ವಚ್ಛಪಡಿಸಿ ಶೇಖರಣೆಗೊಂಡ ಅನುಪಯುಕ್ತ ವಸ್ತುಗಳು ವಿಸರ್ಜಿಸಿ ಅವರಣವನ್ನು ಸ್ವಚ್ಛಗೊಳಿಸುವುದು.

ಸಂರಕ್ಷಣಾ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರು : ಶ್ರೀ ಆರ್. ಗೋಪಾಲ್, ಕಮಲಾಪುರ
ಸ್ಮಾರಕದ ಮೇಲ್ವಿಚಾರಕರು : ಶ್ರೀ ಸುಂದರವಡಿವೇಲು, ಪು.ಸಂ.ಸ.
ಸಂರಕ್ಷಣಾ ಕಾಮಗಾರಿ ಉಸ್ತುವಾರಿ : ಶ್ರೀ ಎಸ್.ಕೆ. ವಾಸುದೇವ್, ಪು.ಸಂ.ಇಂ.
ಸಂರಕ್ಷಣ ಕಾಮಗಾರಿಯನ್ನು ನಿರ್ವಹಿಸಿದ ಇಲಾಖೆಯ ಮುಖ್ಯಸ್ಥರು : ಶ್ರೀ ಡಾ. ಆರ್. ಗೋಪಾಲ್
ಕಾಮಗಾರಿಗೆ ತಗುಲಿದ ವೆಚ್ಚ : ರೂ. 20.00 ಲಕ್ಷಗಳು
ಸಂರಕ್ಷಣಾ ವರ್ಷ : 2010



ಕೋಟೆ ಶಂಕರ ಬಾಗಿಲು, ಹಂಪಿ



ವೈಷ್ಣವ ದೇವಸ್ಥಾನ, ಕೋಟೇಶ್ವರ ಬಾಗಿಲು, ಹಂಪಿ



ದೇವಸ್ಥಾನದ ಮುಂಭಾಗ ಸಂರಕ್ಷಣೆಯ ಪೂರ್ವದಲ್ಲಿ



ದೇವಸ್ಥಾನದ ಮುಂಭಾಗ ಸಂರಕ್ಷಣೆಯ ನಂತರದಲ್ಲಿ



ದೇವಸ್ಥಾನದ ಉತ್ತರ ದಿಕ್ಕಿನ ನೋಟ ಸಂರಕ್ಷಣೆಯ ಪೂರ್ವದಲ್ಲಿ



ದೇವಸ್ಥಾನದ ಉತ್ತರ ದಿಕ್ಕಿನ ನೋಟ ಸಂರಕ್ಷಣೆಯ ನಂತರದಲ್ಲಿ



ದೇವಸ್ಥಾನದ ಈಶಾನ್ಯ ದಿಕ್ಕಿನ ನೋಟ ಸಂರಕ್ಷಣೆಯ ಪೂರ್ವದಲ್ಲಿ



ದೇವಸ್ಥಾನದ ಈಶಾನ್ಯ ದಿಕ್ಕಿನ ನೋಟ ಸಂರಕ್ಷಣೆಯ ನಂತರದಲ್ಲಿ




ದೇವಸ್ಥಾನದ ದಕ್ಷಿಣ ದಿಕ್ಕಿನ ನೋಟ ಸಂರಕ್ಷಣೆಯ ಪೂರ್ವದಲ್ಲಿ



ದೇವಸ್ಥಾನದ ದಕ್ಷಿಣ ದಿಕ್ಕಿನ ನೋಟ ಸಂರಕ್ಷಣೆಯ ನಂತರದಲ್ಲಿ



ದೇವಸ್ಥಾನದ ದಕ್ಷಿಣ ದಿಕ್ಕಿನ ಗರ್ಭಗುಡಿ ಹೊರನೋಟ ಸಂರಕ್ಷಣೆಯ ಪೂರ್ವದಲ್ಲಿ



ದೇವಸ್ಥಾನದ ದಕ್ಷಿಣ ದಿಕ್ಕಿನ ಗರ್ಭಗುಡಿ ಹೊರನೋಟ ಸಂರಕ್ಷಣೆಯ ನಂತರದಲ್ಲಿ



ದೇವಸ್ಥಾನದ ಗರ್ಭಗುಡಿಯ ಪ್ರವೇಶದ್ವಾರದ ನೋಟ ಸಂರಕ್ಷಣೆಯ ಪೂರ್ವದಲ್ಲಿ



ದೇವಸ್ಥಾನದ ಗರ್ಭಗುಡಿಯ ಪ್ರವೇಶದ್ವಾರದ ನೋಟ ಸಂರಕ್ಷಣೆಯ ನಂತರದಲ್ಲಿ



ದೇವಸ್ಥಾನದ ಹೊರಗೋಡೆ ಶಿಥಿಲಗೊಂಡ ನೋಟ ಸಂರಕ್ಷಣೆಯ ಪೂರ್ವದಲ್ಲಿ



ದೇವಸ್ಥಾನದ ಹೊರಗೋಡೆ ನೋಟ ಸಂರಕ್ಷಣೆಯ ನಂತರದಲ್ಲಿ




ದೇವಸ್ಥಾನದ ಆಗ್ನೇಯ ದಿಕ್ಕಿನ ನೋಟ ಸಂರಕ್ಷಣೆಯ ಪೂರ್ವದಲ್ಲಿ



ದೇವಸ್ಥಾನದ ಆಗ್ನೇಯ ದಿಕ್ಕಿನ ನೋಟ ಸಂರಕ್ಷಣೆಯ ನಂತರದಲ್ಲಿ



ದೇವಸ್ಥಾನದ ನೆಲಹಾಸಿನ ನೋಟ ಸಂರಕ್ಷಣೆಯ ಪೂರ್ವದಲ್ಲಿ



ದೇವಸ್ಥಾನದ ನೆಲಹಾಸಿನ ನೋಟ ಸಂರಕ್ಷಣೆಯ ನಂತರದಲ್ಲಿ

14. ವಿರೂಪಾಕ್ಷೇಶ್ವರ ದೇವಾಲಯದ ಕಿರುರೂಪ ಚಿತ್ರಗಳು – ಒಂದು ಅವಲೋಕನ

ಪ್ರೊ. ಎಸ್. ಸಿ. ಪಾಟೀಲ

ಭಾರತದಲ್ಲಿ ಲಲಿತಕಲೆಗಳ ಪರಂಪರೆ ಬಹು ಪ್ರಾಚೀನವಾದುದು, ಇದಕ್ಕೆ ಕರ್ನಾಟಕವು ಹೊರತಾದುದಲ್ಲ, ಲಲಿತಕಲೆಗಳನ್ನು ಸಾಮಾನ್ಯವಾಗಿ ಎರಡು ರೀತಿಯಲ್ಲಿ ವರ್ಗೀಕರಿಸಲಾಗುತ್ತುದೆ. 1. ದೃಶ್ಯಕಲೆಗಳು, 2. ಪ್ರದರ್ಶಕ ಕಲೆಗಳು. ಪಾಶ್ಚಿಮಾತ್ಯ ದೇಶಗಳಲ್ಲಿಯೂ ಸಹ ಇಂದು ಇದೇ ರೀತಿಯಲ್ಲಿ ಲಲಿತಕಲೆಗಳನ್ನು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗುತ್ತದೆ. ಪ್ರಸ್ತುತ ಲಲಿತಕಲೆಗಳ ಪರಮೋದ್ಧೇಶ ಸಂತೋಷವನ್ನು ನೀಡುವಂತಹದ್ದು. ಜಡತ್ವದಿಂದ ಕೂಡಿದ ಮನುಷ್ಯನ ಮಾನಸಿಕ ಆಯಾಸವನ್ನು ಹಗುರಗೊಳಿಸುವಂತಹ, ಆನಂದವನ್ನು ನೀಡುವಂತಹ ವಿಶಿಷ್ಟ ಗುಣಗಳನ್ನು ಈ ಲಲಿತಕಲೆಗಳು ಹೊಂದಿವೆ. ಈ ಪರಂಪರೆ ಜಾನಪದ ಲಲಿತಕಲಾ ಪರಂಪರೆಯಾಗಿ ಹಾಗೆಯೇ ಶಿಷ್ಟಪದ ಲಲಿತಕಲಾ ಪರಂಪರೆಯಾಗಿ ಇಂದಿಗೂ ಉಳಿದುಕೊಂಡು ಬಂದಿರುವುದು ಗಮನಾರ್ಹ ಸಂಗತಿಯಾಗಿದೆ.

ಲಲಿತಕಲೆಯ ಪ್ರಮುಖ ಪ್ರಕಾರಗಳಲ್ಲೊಂದಾದ ದೃಶ್ಯಕಲೆಯಲ್ಲಿಯೂ ಹಲವಾರು ವೈವಿಧ್ಯತೆಗಳುಂಟು. ಇಲ್ಲಿ ಉದಾ: ಛಾಯಾಚಿತ್ರ, ಅನ್ವಯಿಕ ಕಲೆ, ಶಿಲ್ಪಕಲೆ, ವಾಸ್ತುಶಿಲ್ಪ, ಕಲಾಇತಿಹಾಸ, ಮುದ್ರಣಕಲೆ, ಚಿತ್ರಕಲೆ ಇತ್ಯಾದಿ ಪ್ರಕಾರಗಳಿವೆ. ಚಿತ್ರಕಲೆಯು ರೇಖಾಚಿತ್ರ ಮತ್ತು ವರ್ಣಚಿತ್ರಗಳಿಂದ ಕೂಡಿದ ಒಂದು ಕಲಾಪ್ರಕಾರವಾಗಿದೆ. ಈ ಚಿತ್ರಕಲಾ ಸಂಪ್ರದಾಯದಲ್ಲಿ ಮತ್ತೆ ಹಲವಾರು ಪ್ರಕಾರಗಳನ್ನು ಕಾಣುತ್ತೇವೆ. ಹಸ್ತಪ್ರತಿ ಚಿತ್ರಕಲೆ, ಕಾವಿ ಚಿತ್ರಕಲೆ, ಭಿತ್ತಿ ಚಿತ್ರಕಲೆ, ಕಲಂಕಾರಿ ಚಿತ್ರಕಲೆ, ಬಾಟಿಕ್ ಚಿತ್ರಕಲೆ, ಕೋಲಾಜ ಚಿತ್ರಕಲೆ, ಬಾಂಧಿನಿ ಚಿತ್ರಕಲೆ, ಜನಪದ ಚಿತ್ರಕಲೆ ಹೀಗೆ ಈ ಕಲಾಪ್ರಕಾರಗಳಲ್ಲಿ ಕಿರುರೂಪ ಚಿತ್ರಕಲಾ ಪ್ರಕಾರವೂ ಒಂದು.

ಚಿತ್ರಕಲೆಯ ಬಹುಮುಖ್ಯ ಪ್ರಕಾರಗಳಲ್ಲೊಂದಾದ ಈ ಕಲೆಯು ಇಂಗ್ಲೀಷ್ 'Miniature' ಪದಕ್ಕೆ ಪರ್ಯಾಯವಾಗಿ ಕನ್ನಡದಲ್ಲಿ 'ಕಿರುರೂಪ ಚಿತ್ರಕಲೆ', 'ಚಿಕಣಿ ಚಿತ್ರಕಲೆ' ಇನ್ನೂ ಕೆಲವು ಸಲ 'ಸೂಕ್ಷ್ಮ ಚಿತ್ರಕಲೆ' ಎಂದು ಕರೆಯಲಾಗುತ್ತದೆ. ಭಾರತದಲ್ಲಿ, ಪಾಶ್ಚಿಮಾತ್ಯ ದೇಶಗಳಲ್ಲಿ ಈ ಚಿಕ್ಕ ಪ್ರಮಾಣದ ಅಥವಾ ರೂಪದ ಈ ಕಲೆಗೆ ಬಹುದೊಡ್ಡ ಇತಿಹಾಸವಿದೆ. ಲ್ಯಾಟಿನ್ ಭಾಷೆಯಲ್ಲಿ 'ಮೀನಸ್' ಎಂದು ಈ ಕಲೆಯನ್ನು ಕರೆಯಲಾಗಿದೆ. ಕರ್ನಾಟಕದಲ್ಲಿ ಪ್ರಾಚೀನ ಕಾಲದಲ್ಲಿ 'ಚಿಕಣಿ ಚಿತ್ರಕಲೆ' ಎಂದೂ, ಸಮಕಾಲೀನ ಸಂದರ್ಭದಲ್ಲಿ ಈಗ 'ಕಿರುರೂಪ ಚಿತ್ರಕಲೆ' ಎಂದು ಈ ಕಲೆಯನ್ನು ಕರೆಯಲಾಗುತ್ತಿದೆ.

ಈ ಚಿತ್ರಗಳ ಪ್ರಮುಖ ವೈಶಿಷ್ಟ್ಯವೆಂದರೆ, ದೊಡ್ಡ ಚಿತ್ರಗಳು ಕೊಡುವ ಸೌಂದರ್ಯಾನುಭವವನ್ನು ಯಾವುದಕ್ಕೂ ಕಡಿಮೆಯಿಲ್ಲದಂತೆ ಈ ಕಿರುರೂಪ ಚಿತ್ರಗಳು ನೀಡುತ್ತವೆ. ಇದು ಚಿತ್ರ ರಚನೆಯ ಸ್ಥಳಾವಕಾಶ ಮತ್ತು ಚಿತ್ರದ ವಸ್ತುವಿಷಯ ಮುಂತಾದ ಅಂಶಗಳ ಹಿನ್ನೆಲೆಯಲ್ಲಿ ರಚನೆಗೊಂಡ ಒಂದು ಕಲಾಪ್ರಕಾರವೆಂದು ಹೇಳಿದರೆ ತಪ್ಪಾಗಲಾರದು. ಜಪಾನ್, ಚೀನಾ, ಮಧ್ಯ ಏಷಿಯಾ, ಅಮೇರಿಕಾದ ಪೂರ್ವ ಕೋಲಂಬಿಯಾದಲ್ಲಿ, ಯುರೋಪಿನ ಪೂರ್ವ ಮತ್ತು ಪಶ್ಚಿಮ ಭಾಗ, ಭಾರತ ಮುಂತಾದ ದೇಶಗಳಲ್ಲಿ ಈ ಕಿರುರೂಪ ಚಿತ್ರಕಲಾ ಪ್ರಕಾರ ದೊಡ್ಡ ಪ್ರಮಾಣದಲ್ಲಿ ಬೆಳೆದು ಬಂದಿರುವುದನ್ನು ಗುರುತಿಸುತ್ತೇವೆ. ಸಹಜವಾಗಿ ಈ ಚಿತ್ರಗಳ ವಸ್ತುವಿಷಯ ಆಯಾ ದೇಶದ ಧರ್ಮ, ಸಂಸ್ಕೃತಿ, ಇತಿಹಾಸ, ರಾಜರು, ದೇವಾನುದೇವತೆಗಳು ಮುಂತಾದ ಅಂಶಗಳನ್ನು ಅವು ಒಳಗೊಂಡಿರುತ್ತವೆ.

ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಬೌದ್ಧ, ಜೈನ, ಪರ್ಷಿಯನ್, ಶೈವ, ವೈಷ್ಣವ ಮುಂತಾದ ಧಾರ್ಮಿಕ ಹಿನ್ನೆಲೆಯಲ್ಲಿ ಈ ಕಿರುರೂಪ ಚಿತ್ರಕಲಾ ಪರಂಪರೆ ಬೆಳೆದು ಬಂದಿರುವುದು ಕಂಡುಬರುತ್ತದೆ. ಆದರೆ ಈ ಕಲಾಪ್ರಕಾರಕ್ಕೆ ಹೆಚ್ಚಿನ ಅಧ್ಯಯನದ ಕೊರತೆಯಿಂದ ಕರ್ನಾಟಕದ ಈ ಕಲಾಪ್ರಕಾರ ಭಾರತದಲ್ಲಿ ಅಷ್ಟೊಂದು ಪ್ರಚಾರಕ್ಕೆ ಬರದೇ ಇರುವುದು ಈ ಕ್ಷೇತ್ರದ ಅಧ್ಯಯನದ ಕೊರತೆಯೆಂದೇ ಹೇಳಬೇಕಾಗುತ್ತದೆ. ಈ ಕಲಾಪ್ರಕಾರವನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೊಳಪಡಿಸಿ ಅದರ ಪರಂಪರೆಯನ್ನು ಕಟ್ಟಿಕೊಡುವ ಕೆಲಸ ಈ ಕ್ಷೇತ್ರದಲ್ಲಿ ಕೆಲಸ ಮಾಡುವವರ ಮೇಲಿದೆ. ಈ

ಕೊರತೆಯನ್ನು ಹೋಗಲಾಡಿಸುವ ದಿಸೆಯಲ್ಲಿ ಪ್ರಸ್ತುತ ವಿಜಯನಗರ ಪರಂಪರೆಯ ವಿರೂಪಾಕ್ಷ ದೇವಾಲಯದಲ್ಲಿರುವ ಈ ಕಿರುರೂಪ ಚಿತ್ರಗಳನ್ನು ಸ್ಥೂಲವಾಗಿ ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

ಭಿತ್ತಿ ಚಿತ್ರಗಳ ಕಾಲ

ಈಗಾಗಲೇ ಹಲವಾರು ಜನರು ಈ ಕಲ್ಯಾಣ ಮಂಟಪದ ಭಿತ್ತಿ ಚಿತ್ರ ರಚನೆಯ ಕಾಲದ ಕುರಿತು ತಮ್ಮದೇ ಆದ ಅಭಿಪ್ರಾಯಗಳನ್ನು ನೀಡಿದ್ದಾರೆ. ಈ ಚರ್ಚೆ ಇನ್ನೂ ನಡೆಯುತ್ತಲೇ ಇದೆ. ಹಂಪೆಯ ಈ ವರ್ಣ ಚಿತ್ರಗಳ ಕುರಿತು ಸಿ.ಟಿ.ಎಂ. ಕೊಟ್ರಯ್ಯನವರು[1] 1959ರಲ್ಲಿ ಮತ್ತು 1978ರಲ್ಲಿ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಎರಡು ಲೇಖನಗಳನ್ನು ಬರೆದಿದ್ದಾರೆ. ಅವರು ಕ್ರಿ.ಶ. 1510 ರಿಂದ ಕ್ರಿ.ಶ. 1565ರ ಒಳಗೆ ಚಿತ್ರಗಳು ರಚನೆಯಾಗಿವೆ ಎಂದು ಅಭಿಪ್ರಾಯಪಡುತ್ತಾರೆ. ಕೃಷ್ಣದೇವರಾಯನು ಕ್ರಿ.ಶ. 1510ರಲ್ಲಿ ಈ ರಂಗಮಂಟಪವನ್ನು ಕಟ್ಟಿಸಿದ್ದಾನೆ ಮತ್ತು ಕ್ರಿ.ಶ. 1565ರಲ್ಲಿ ವಿಜಯನಗರ ಪತನವಾಗಿರುವುದನ್ನು ಉಲ್ಲೇಖಿಸಿ ಮೇಲೆ ತಿಳಿಸಿದ ಅವಧಿಯಲ್ಲಿ ಇಲ್ಲಿ ಚಿತ್ರರಚನಾ ಕಾರ್ಯ ನಡೆದಿರುವ ಸಾಧ್ಯತೆಯನ್ನು ವ್ಯಕ್ತಪಡಿಸಿದ್ದಾರೆ. ಆರ್. ಎನ್. ಸಾಲತೊರೆಯವರು[2] ವಿಜಯನಗರ ಆರ್ಟ್ ಎಂಬ ತಮ್ಮ ಪುಸ್ತಕದಲ್ಲಿ ವೀರಮಾನಪ್ಪ ಒಡೆಯನ ಕಾಲದ ಮಂಟಪದಲ್ಲಿ ಚಿತ್ರಗಳಿರುವುದರಿಂದ ಮಂಟಪದ ಕಾಲ ಕ್ರಿ.ಶ. 1347ರಲ್ಲಿಯೇ ಚಿತ್ರಗಳನ್ನು ಬರೆಯಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಸಿ. ಶಿವರಾಮಮೂರ್ತಿಯವರು ಕ್ರಿ.ಶ. 15ನೆಯ ಶತಮಾನಕ್ಕೆ ಸೇರಿಸುತ್ತಾರೆ. ಇವರಿಗಿಂತ ಭಿನ್ನವಾಗಿ ಎಸ್. ರಾಜಶೇಖರ ಅವರು 17ನೆಯ ಶತಮಾನಕ್ಕೆ, ಶ್ರೀಮತಿ ಎ.ಎಲ್. ದೆಲ್ಲಾಪಿ ಕೋಲಾರವರು 18–19ನೇ ಶತಮಾನಕ್ಕೆ ಒಯ್ಯುತ್ತಾರೆ. ಶ್ರೀರಂಗಪಟ್ಟಣ ಮೈಸೂರು ಶೈಲಿಯನ್ನು ಅನುಸರಿಸಿ ಡಾ. ಅ.ಲ. ನರಸಿಂಹನ್‌ರವರು, ಡಾ. ಎಸ್. ರಾಜಶೇಖರ ಅವರ ಅಭಿಪ್ರಾಯಕ್ಕೆ ಇವರೂ ಬರುತ್ತಾರೆ. ಕೋವಿಯ ಬಳಕೆ ಸೈನ್ಯದಲ್ಲಿದ್ದು ಅವು 17ನೆಯ ಶತಮಾನದಲ್ಲಿ ಬಳಕೆಯಾದ ಕುರಿತು ಹೇಳುತ್ತಾರೆ. ಎಸ್. ವೆಂಕಟೇಶ ಅವರು ಡಾ. ಅ.ಲ.ನರಸಿಂಹನ್ ಅವರ ವಾದವನ್ನೇ ಪುಷ್ಟೀಕರಿಸಿದ್ದಾರೆ. ಡಾ. ಶಿವರಾಮಕಾರಂತರು ಇವು ಕೃಷ್ಣದೇವರಾಯನ ಕಾಲದವು. ಆದರೆ ಅವುಗಳ ಮೇಲೆ ಮತ್ತೆ ಪುನಃ ಚಿತ್ರರಚನೆಯಾದ ಕಾರಣ ಅವುಗಳ ಕಾಲ ತೊಡಕಾಗಿದೆ ಎನ್ನುತ್ತಾರೆ. ಡಾ. ಯಾದಪ್ಪ ಪರದೇಶಿಯವರು ಇವು ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣವಾದ ರಂಗಮಂಟಪ ಆ ಕಾಲದಲ್ಲಿಯೇ ರಚನೆಯಾದ ಕುರಿತು ಅನೇಕ ವಿವರ ನೀಡುತ್ತಾರೆ. ಡಾ. ಆರ್. ಎಚ್. ಕುಲಕರ್ಣಿ ಇದೇ ಅಭಿಪ್ರಾಯಪಡುತ್ತಾರೆ. ನನ್ನ ಅಭಿಪ್ರಾಯವು ಇದೆ ಆಗಿದೆ. ಅಂದರೆ ಕ್ರಿ.ಶ. 1510 ರಿಂದ 1565ರ ವರೆಗಿನ ಕಾಲದಲ್ಲಿ ಈ ಚಿತ್ರಗಳು ರಚನೆಯಾಗಿವೆ. ಚಿತ್ರದ ಮೇಲೆ ಮತ್ತೆ 17–18ನೆಯ ಶತಮಾನದಲ್ಲಿ ಚಿತ್ರ ಬರೆಸಿರುವುದರಿಂದ ಚಿತ್ರದಲ್ಲಿ ಆಯಾಕಾಲದ ಅಂಶಗಳು ಅಲ್ಲಿ ಸಹಜವಾಗಿ ಚಿತ್ರಣಗೊಂಡಿವೆ. ಆದರೆ ಮೂಲ ಚಿತ್ರಗಳು ಕೃಷ್ಣದೇವರಾಯನ ಕಾಲದವುಗಳಾಗಿವೆ.

ಚಿತ್ರಗಳ ವಸ್ತುವಿಷಯ ಮತ್ತು ವೈವಿಧ್ಯತೆ

ಮೇಲ್ಭಾವಣೆಯ ಚಿತ್ರಗಳು ಮೂರು ದೊಡ್ಡ ಪಟ್ಟಿಕೆಗಳಲ್ಲಿದ್ದು, ದಕ್ಷಿಣದಿಂದ ಉತ್ತರಕ್ಕೆ ಮೊದಲನೆಯ ಪಟ್ಟಿಯಲ್ಲಿ ವಿಷ್ಣು ಮತ್ತು ಲಕ್ಷ್ಮೀ, ಎರಡನೆಯ ಚಿತ್ರದಲ್ಲಿ ಶಿವಪಾರ್ವತಿಯ ಚಿತ್ರ, ಮೂರನೆಯ ಚಿತ್ರದಲ್ಲಿ ಬ್ರಹ್ಮ, ಸರಸ್ವತಿಯ ಚಿತ್ರಗಳಿದ್ದು, ಮೊದಲನೆಯ ಚಿತ್ರದಲ್ಲಿ ವಿಷ್ಣು ಮತ್ತು ಲಕ್ಷ್ಮಿ ಪ್ರಧಾನವಾಗಿದ್ದರೆ, ಆ ಚಿತ್ರಕ್ಕೆ ಪೂರಕವಾಗಿ ಚೌಕಾಕಾರದಲ್ಲಿ (ಆಯತಾಕಾರದಲ್ಲಿ) ಮಂಟಪದ ರೀತಿಯಲ್ಲಿ ಸಣ್ಣ ಸಣ್ಣ ಚೌಕ ಮತ್ತು ಆಯತಕಾರದ ಪಟ್ಟಿಗಳನ್ನು ಮಾಡಿಕೊಂಡು, ಅಲ್ಲಿ ಕಿರುರೂಪ ಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ವಿಷ್ಣು ಲಕ್ಷ್ಮಿಯ ದಕ್ಷಿಣ ಭಾಗದಲ್ಲಿ ಆಯಾತಾಕಾರದ ಉದ್ದನೆಯ ಪಟ್ಟಿಯಲ್ಲಿ ಗರುಡನ ಚಿತ್ರವಿದೆ, ಮುಖವು ವಿಷ್ಣುವಿನ ಕಡೆಗಿದ್ದು, ಕೈಮುಗಿದ ಭಂಗಿಯಲ್ಲಿದೆ. ಅದಕ್ಕೆ ಎದುರಾಗಿ ಉತ್ತರಭಾಗದಲ್ಲಿ ಕೈಮುಗಿದು ನಿಂತ ಆಂಜನೇಯನ ಚಿತ್ರವಿದೆ. ಅವು ಪೂರ್ಣ ಪ್ರಮಾಣದಲ್ಲಿ ನಿಂತ ಭಂಗಿಯ ಕಿರುರೂಪ ಚಿತ್ರಗಳಾಗಿವೆ.

ಕೆಳಬದಿಯಲ್ಲಿ ಚಿಕ್ಕ ಚಿಕ್ಕ ಪಟ್ಟಿಕೆಗಳಿದ್ದು, ಕಮಲಾಕಾರದ ಹೂಬಳ್ಳಿಯ ಚಿತ್ರಗಳನ್ನು ಚಿತ್ರಿಸಲಾಗಿದೆ. ಮೇಲ್ಬದಿಯಲ್ಲಿ ಮೂರು ಪಟ್ಟಿಕೆಗಳಿದ್ದು, ಗೋಪುರಗಳ ವಿನ್ಯಾಸವಿದ್ದು, ಅವುಗಳ ಕಮಾನುಗಳ ಒಳಗೊಳಗೆ ಪ್ರತಿಯೊಂದಕ್ಕೆ ಮೂರರಂತೆ ಸಣ್ಣ ಸಣ್ಣ ಕಮಾನುಗಳನ್ನು ಮಾಡಲಾಗಿದ್ದು, ಅವುಗಳ ಒಳಗೆ ಕುಳಿತಿರುವ, ನಿಂತಿರುವ ವಿವಿಧ ಭಂಗಿಯ ಋಷಿಮುನಿಗಳ ಚಿತ್ರಗಳನ್ನು ಚಿತ್ರಿಸಲಾಗಿದೆ. ಅವು ಅತ್ಯಂತ ಸಣ್ಣ ಗಾತ್ರದ ಕಿರುರೂಪ ಚಿತ್ರಗಳಾಗಿವೆ. ಈ ಗೋಪುರಗಳ ಎಡಬಲದಲ್ಲಿ

ಕೃಷ್ಣನ ಬಾಲ್ಯದಲ್ಲಿ ಕಾಲಿನ ಹೆಬ್ಬೆರಳನ್ನು ಬಾಯಲ್ಲಿಟ್ಟುಕೊಂಡು ಆಡುತ್ತಿರುವ ಭಂಗಿಯ ಚಿಕ್ಕ ಗಾತ್ರದ ವರ್ಣಚಿತ್ರಗಳಿವೆ. ಈ ಚಿತ್ರದ ಕೆಳಬದಿಯ ಸಾಲಿನ ಅಲ್ಲಿಯೂ ಗೋಪುರದ ವಿನ್ಯಾಸವಿದ್ದು, ದಕ್ಷಿಣಾಭಿಮುಖವಾಗಿ ವೀಣಾಪಾಣಿ ಸರಸ್ವತಿಯ ಚಿತ್ರವಿದೆ. ಅದರ ಎದುರುಬದಿಯಲ್ಲಿ ಇಂತಹದ್ದೇ ಮಂಟಪವಿದ್ದು, ಒಳಗಡೆ ದೇವಿಯ ಚಿತ್ರವಿದ್ದು, ಅದು ಅಸ್ಪಷ್ಟವಾಗಿ ಕಾಣುತ್ತದೆ.

ಮಧ್ಯದಲ್ಲಿ ಶಿವಪಾರ್ವತಿಯ ಈ ಚಿತ್ರದಲ್ಲಿ ಎಡ ಮತ್ತು ಬಲಬದಿಯಲ್ಲಿ ಇವರಿಗೆ ಸೇರಿದ ಪರಿವಾರ, ಪರಿಚಾರ ದೇವತೆಗಳ ಚಿತ್ರಗಳನ್ನು ಚಿತ್ರಿಸಲಾಗಿದೆ. ಉದಾ: ನಿಂತ ಭಂಗಿಯ ಬೃಂಗಿಯ ಚಿತ್ರ, ಕೈಯಲ್ಲಿ ತಂಬೂರಿಯನ್ನು ಹಿಡಿದ ದೇವಗಣಗಳ ಚಿತ್ರವಿದ್ದರೆ, ಶಿವಪಾರ್ವತಿಯ ಪಾದದ ಕೆಳಬದಿಯಲ್ಲಿ ಎರಡು ನಂದಿಯ ಚಿತ್ರಗಳಿವೆ. ದೇವಗಣಗಳ ಮೇಲ್ಭಾಗದ ಎರಡೂ ಬದಿಯೂ ಎರಡು ಗೋಪುರಾಕೃತಿಯ ವಿನ್ಯಾಸವಿದ್ದು, ಅದರಲ್ಲಿ ಕೈಯಲ್ಲಿ ಪುಷ್ಪವನ್ನು ಹಿಡಿದುಕೊಂಡು ಆಕಾಶದಿಂದ ಕೆಳಗೆ ಬರುತ್ತಿರುವ ಭಂಗಿಯ ಎರಡು ಸಣ್ಣ ಗಾತ್ರದ ಚಿತ್ರಗಳನ್ನು ತುಂಬಾ ಸುಂದರವಾಗಿ ಚಿತ್ರಿಸಲಾಗಿದೆ.

ಈ ಎರಡು ಚಿತ್ರಗಳ ಮಧ್ಯದ ಆಯತಾಕಾರದ ಪಟ್ಟಿಯ ಮೇಲೆ ಗೋಪುರ ವಾಸ್ತುವಿನ್ಯಾಸದ ಮೂರು ಗೋಪುರಗಳಲ್ಲಿ ಪ್ರತಿಯೊಂದರಲ್ಲೂ ಮೂರು ಸಣ್ಣ ಗೋಪುರಗಳನ್ನು ಮಾಡಿಕೊಂಡು ಅವುಗಳೊಳಗೆ ಋಮುನಿಗಳು, ದೇವತೆಗಳ ಚಿತ್ರಗಳನ್ನು ವಿವಿಧ ಭಂಗಿಯ ಅತ್ಯಂತ ಸಣ್ಣ ಪ್ರಮಾಣದಲ್ಲಿ ಚಿತ್ರಿಸಿದ್ದು ಗಮನಾರ್ಹವಾಗಿದೆ.

ಕುಳಿತ ಭಂಗಿಯ ಬ್ರಹ್ಮ ಮತ್ತು ಸರಸ್ವತಿಯ ಚಿತ್ರವೂ ಕೂಡ ಮೊದಲಿನಂತೆಯೇ ಚಿತ್ರರಚನಾ ವಿನ್ಯಾಸವನ್ನು ಹೊಂದಿದ್ದು, ಇಲ್ಲಿ ಎಡಬದಿಯಲ್ಲಿ ನಿಂತ ಭಂಗಿಯ ಇಬ್ಬರು ದ್ವಾರಪಾಲಕರನ್ನು ಚಿತ್ರಿಸಲಾಗಿದೆ. ಮೇಲ್ಬದಿಯ ಎರಡೂ ಬದಿಯ ಗೋಪುರದ ವಿನ್ಯಾಸದ ಚಿತ್ರಗಳಿದ್ದು, ಒಳಗಡೆ ಇರುವ ಚಿತ್ರಗಳು ಅಸ್ಪಷ್ಟವಾಗಿವೆ. ಈ ಚಿತ್ರಗಳ ಮೇಲೆ ಕುಳಿತ ಭಂಗಿಯ ಶೇಷಶಯನ, ಕೃಷ್ಣನ ಚಿತ್ರಗಳು ಎರಡೂ ಬದಿಯಲ್ಲಿ ಸುಂದರವಾಗಿ ಚಿತ್ರಿಸಲಾಗಿದೆ. ನಡುಮಧ್ಯೆ ಈ ಹಿಂದೆ ಚಿತ್ರಿಸಿದ್ದಂತೆ ಮೂರು ಗೋಪುರಾಕೃತಿಗಳು ಆ ಗೋಪುರಗಳಲ್ಲಿ ಮತ್ತೆ ಮೂರು ಉಪಗೋಪುರಗಳ ಅವುಗಳ ಒಳಗೆ ಕುಳಿತ ಭಂಗಿಯ ಋಷಿಮುನಿಗಳ, ದೇವತೆಗಳ ಚಿತ್ರಗಳು ಹಿಂದಿನಂತೆಯೇ ಇಲ್ಲಿಯೂ ಚಿತ್ರಿಸಲಾಗಿದೆ. ಪಾದದ ಕೆಳಭಾಗದಲ್ಲಿ ಗಿಳಿಯ ವಿನ್ಯಾಸದ ಹೂಬಳ್ಳಿಗಳನ್ನು ಅಲಂಕೃತವಾಗಿ ಚಿತ್ರಿಸಿದ್ದಾರೆ.

ಎರಡನೆಯ ದೊಡ್ಡ ಪಟ್ಟಿಯು ಪ್ರಮುಖವಾಗಿ ಗಿರಿಜಾಕಲ್ಯಾಣಕ್ಕೆ ಸಂಬಂಧಿಸಿದ ಕತೆಯನ್ನು ಹೊಂದಿರುವ ಪಟ್ಟಿಕೆಯಾಗಿದೆ. ಚಿತ್ರದ ಮಧ್ಯ ಭಾಗದಲ್ಲಿ ದೊಡ್ಡ ಗಾತ್ರದ ಪಟ್ಟಿಯಲ್ಲಿ ಶಿವನು ಗಿರಿಜೆಯ ಕೈಹಿಡಿದು ನಿಂತಿರುವ ಭಂಗಿಯ ಚಿತ್ರವಿದ್ದು, ಶಿವ ಗಿರಿಜೆಯ ಜೊತೆಗೆ ಮತ್ತು ಗಿರಿಜೆಯ ತಂದೆಯಾದ ಪರ್ವತರಾಜನು ಸಹ ನಿಂತಿರುವ ಭಂಗಿಯಲ್ಲಿ ಚಿತ್ರಿಸಿದ್ದಾರೆ. ಪಕ್ಕದ ಆಯಾತಕಾರದ ಎರಡು ಪಟ್ಟಿಕೆಗಳಲ್ಲಿ ಚಿತ್ರಗಳಿವೆ. ಈ ಎಲ್ಲ ಚಿತ್ರಗಳು ಗಿರಿಜಾಕಲ್ಯಾಣದ ಚಿತ್ರಗಳಾಗಿವೆ. ಈ ಚಿತ್ರದಲ್ಲಿ ದಕ್ಷಿಣಾಭಿಮುಖದಲ್ಲಿ ಬ್ರಹ್ಮ, ಮತ್ತೊಂದು ಪಟ್ಟಿಯಲ್ಲಿ ವಿಷ್ಣು, ಸರಸ್ವತಿ, ಹಾಗೆಯೇ ಇನ್ನೊಂದು ಪಟ್ಟಿಯಲ್ಲಿ ನಾರದ, ಬೃಂಗಿ, ಹನುಮಂತನ ಚಿತ್ರಗಳು ನಿಂತ ಭಂಗಿಯಲ್ಲಿ ಚಿತ್ರಿಸಲಾಗಿದೆ. ಹಾಗೆಯೇ ಶಿವಗಿರಿಜೆಯ ಚಿತ್ರಗಳು ಉತ್ತರಭಾಗದಲ್ಲಿ ಎರಡು ಪಟ್ಟಿಕೆಗಳಿದ್ದು, ಒಂದು ಪಟ್ಟಿಕೆಯಲ್ಲಿ ಮೂರು ಜನ ಪರಿವಾರ ದೇವತೆಗಳ ಚಿತ್ರಗಳಿದ್ದರೆ, ಇನ್ನೊಂದು ಪಟ್ಟಿಯಲ್ಲಿ ಗಣೇಶ, ನಂದಿ, ನಾರದರು ನಿಂತ ಚಿತ್ರಗಳಿವೆ. ಈ ಎರಡು ಪಟ್ಟಿಗಳ ಮೇಲ್ಬದಿಯಲ್ಲಿ ಒಂದು ಪಟ್ಟಿಯಲ್ಲಿಯೇ ಮೂರು ಗೋಪುರಗಳ ವಿನ್ಯಾಸವಿದ್ದು, ಅವುಗಳ ಕೆಳಗೆ ಮತ್ತೆ ಮೊದಲಿನಂತೆಯೇ ದೇವಾನುದೇವತೆಗಳ, ಋಷಿಮುನಿಗಳ ಚಿತ್ರಗಳಿವೆ. ಮತ್ತೊಂದು ಪಟ್ಟಿಯಲ್ಲಿ ಮೂವರು ದೇವತೆಗಳ ಚಿತ್ರಗಳಿವೆ. ಕೆಳಬದಿಯಲ್ಲಿರುವ ಸಣ್ಣ ಪಟ್ಟಿಕೆಯಲ್ಲಿ ನಗಾರಿ, ಓಲಗ ಬಾರಿಸುತ್ತಿರುವ ವಾದ್ಯವೃಂದದ ಚಿತ್ರಗಳು ಮತ್ತು ಮಧ್ಯಭಾಗದಲ್ಲಿ ಶಿವಗಿರಿಜೆಯ ಮದುವೆ ಸಂದರ್ಭವನ್ನು ಮೇಲ್ಮುಖವಾಗಿ ನೋಡುತ್ತಿರುವ ನಂದಿಯ ಚಿತ್ರವು ತುಂಬಾ ಕಲಾತ್ಮಕವಾಗಿ ನಿರೂಪಣೆಗೊಂಡಿದೆ.

ಈ ಶಿವಗಿರಿಜೆಯ ಮದುವೆಯನ್ನು ಸ್ಥಳೀಯರು ಪಂಪಾವಿರೂಪಾಕ್ಷ–ಪಂಪಾಂಬಿಕೆಯ ವಿವಾಹವೆಂದು ಕರೆಯುತ್ತಾರೆ. ಮೇಲೆ ತಿಳಿಸಿದಂತೆ ಇಲ್ಲಿಯೂ ಕೂಡ ಗೋಪುರಗಳ ಸಾಲು ಮತ್ತು ತಾಳೆಮರಗಳನ್ನು ಸಹಜವಾಗಿ ಚಿತ್ರಿಸಲಾಗಿದೆ. ಈ ಕೆಳಭಾಗದ ಮೂರನೆಯ ಪಟ್ಟಿಕೆಯಲ್ಲಿ ಗಿರಿಜಾ ಕಲ್ಯಾಣದ ಅರ್ಧ ಈ ಪಟ್ಟಿಯಲ್ಲಿ ಎಂಟು ಸಮನಾದ ಪಟ್ಟಿಕೆಗಳ ಅಷ್ಟದಿಕ್ಪಾಲಕರ ಕಿರುರೂಪ ಚಿತ್ರಗಳಿವೆ. ಇಲ್ಲಿ ಅಷ್ಟದಿಕ್ಪಾಲಕರು ತಮ್ಮ ತಮ್ಮ ವಾಹನಗಳೊಂದಿಗಿರುವ ಚಿತ್ರಗಳನ್ನು ಚಿತ್ರಿಸಿದ್ದಾರೆ. ಇಂದ್ರ, ವರುಣ, ಅಗ್ನಿ, ವಾಯು, ಈಶಾನ್ಯ, ಯಮ, ನೈಋತಿ, ಕುಬೇರ ಈ ದಶದಿಕ್ಪಾಲಕರನ್ನು ಕಾಣಬಹುದು.

ಮೇಲ್ಚಾವಣೆಯ ಮಧ್ಯದ ಇನ್ನೊಂದು ದೊಡ್ಡ ಪಟ್ಟಿಕೆಯಲ್ಲಿ ಚೌಕಾಕಾರದ ಮೂರು ಪಟ್ಟಿಕೆಗಳಿವೆ. ಮಧ್ಯದ ಪಟ್ಟಿಯಲ್ಲಿ ಭೂಮಿತಿಯಾಕೃತಿಯ ವರ್ತುಳಾಕಾರದ ಮತ್ತು ಚೌಕಾಕಾರದ ವಿನ್ಯಾಸಗಳಿದ್ದು, ಅವುಗಳಲ್ಲಿ ಹೂಬಳ್ಳಿಯ ಸುರಳಿಯ ಚಿತ್ರಗಳಿವೆ. ಇದರ ದಕ್ಷಿಣಾ ಭಾಗದಲ್ಲಿ ಮನ್ಮಥವಿಜಯದ ಚಿತ್ರಗಳಿದ್ದು, ರಥದಲ್ಲಿ ಮೇಲೆ ಕುಳಿತ ಬಾಣದಾರಿಯಾಗಿರುವ ಮನ್ಮಥನ ಚಿತ್ರವಿದೆ. ರಥದಲ್ಲಿ ಕುಳಿತ ಮನ್ಮಥನು ಧ್ಯಾನ ಮಾಡುತ್ತಿರುವ ಶಿವನ ತಪಸ್ಸನ್ನು ಬಂಗ ಮಾಡುತ್ತಿರುವ ಭಂಗಿಯಲ್ಲಿದೆ. ಮನ್ಮಥನ ಹಿಂಭಾಗದಲ್ಲಿ ನಿಂತಿರುವ ರತಿಯ ಚಿತ್ರವಿದೆ. ಮನ್ಮಥನ ರಥದ ಕೆಳಭಾಗದಲ್ಲಿ ಜಲಾವೃತವಾದ ಭಾಗದಲ್ಲಿ ವಿವಿಧಾಕಾರದ ಮೀನುಗಳನ್ನು ಚಿತ್ರಿಸಲಾಗಿದೆ.

ಉತ್ತರಕ್ಕೆ ಶಿವನು ತ್ರಿಪುರಾಸುರರನ್ನು ಕೊಲ್ಲುವ ದೃಶ್ಯವಿದೆ. ಈ ತ್ರಿಪುರಾಸುರರು ಮೂರು ವರ್ತುಳಗಳಲ್ಲಿ ಸುಂದರವಾದ ಕಿರುರೂಪ ಚಿತ್ರಗಳಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಶಿವನು ರಥದ ಮೇಲೆ ಬಿಲ್ಲುಬಾಣಗಳನ್ನು ಹಿಡಿದುಕೊಂಡು ನಿಂತಿರುವ ಭಂಗಿಯಲ್ಲಿದ್ದು, ಭೂಮಿಯೇ ರಥ, ಬ್ರಹ್ಮನೇ ಸಾರಥಿ, ಸೂರ್ಯಚಂದ್ರರೇ ರಥದ ಗಾಲಿಗಳು, ಇಂದ್ರ, ವರುಣ, ಯಮ, ಕುಭೇರ, ಅಗ್ನಿಗಳು ರಥಾಶ್ವಗಳಾಗಿ ಐದು ಕುದುರೆಗಳನ್ನು ಚಿತ್ರಿಸಲಾಗಿದೆ. ಶಿವನ ಕೈಯಲ್ಲಿರುವ ಬಿಲ್ಲು ಮಂದಾರ ಪರ್ವತ ವಾಸುಕಿ ಬಿಲ್ಲಿನ ದಾರ, ಅಗ್ನಿ ವಿಷ್ಣು, ವಾಯು ಇದರ ಬಾಣಗಳಾಗಿದ್ದಾರೆ. ಇದರಿಂದಲೇ ಶಿವನು ತ್ರಿಪುರಸಂಹಾರವನ್ನು ಧ್ವಂಸಮಾಡುವ ರೀತಿಯಲ್ಲಿ ಚಿತ್ರಿಸಲಾಗಿದೆ. ಶಿವನ ಹಿಂಬದಿಯಲ್ಲಿ ಛತ್ರಿ ಚಾಮರವನ್ನು ಹಿಡಿದಿರುವ ನಾಗದೇವತೆ ಮತ್ತು ರಥದ ಹಿಂಬದಿಯಲ್ಲಿ ನಂದಿಯ ಚಿತ್ರವಿದೆ. ಐದು ಹೆಡೆಯ ನಾಗನನ್ನು ಇಲ್ಲಿ ಎಲ್ಲ ಚಿತ್ರಗಳಿಗೆ ಸಂಯೋಜನೆಗೊಳಿಸಿ ಚಿತ್ರಿಸಲಾಗಿದೆ. ಇಲ್ಲಿನ ಸಂಯೋಜನೆಯಲ್ಲಿ ಎಲ್ಲಾ ಆಕೃತಿಗಳ ಮಧ್ಯೆ ಒಂದು ಆಂತರಿಕ ಸಂಬಂಧವನ್ನು ಕಲ್ಪಿಸಲಾಗಿದ್ದು, ಮತ್ತು ಎಲ್ಲಾ ಆಕೃತಿಗಳಲ್ಲಿ ಚಲನಶೀಲತೆ ಎದ್ದುಕಾಣುತ್ತದೆ.

ಕೆಳಭಾಗದಲ್ಲಿ ದಶಾವತಾರದ ಚಿತ್ರಗಳು ನಿಂತ ಭಂಗಿಯಲ್ಲಿ ಚಿತ್ರಿಸಲಾಗಿದೆ. ಇವು ಎರಡು ಬದಿಯಲ್ಲಿ ಆನೆಯ ಮೇಲೆ ಕುಳಿತು ಬಾಣ ಬಿಡುತ್ತಿರುವ ಮತ್ತು ಅಶ್ವದ ಮೇಲೆ ಕುಳಿತು ಬಾಣ ಬಿಡುತ್ತಿರುವ ಚಿತ್ರಗಳನ್ನು ಕಾಣಬಹುದು. ಕೆಳಪಟ್ಟಿಯಲ್ಲಿ ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಮೂರು ಚಿತ್ರಗಳಿವೆ. ಇವುಗಳಲ್ಲಿ ರಾಮಾಯಣಕ್ಕೆ ಸಂಭಂದಿಸಿದ ರಾಮ ನಿಂತಿರುವ ಮದುವೆಯ ಮತ್ತು ಸೀತಾ ಸ್ವಯಂವರದ ಎರಡು ಚಿತ್ರಗಳಿದ್ದರೆ, ಮೂರನೆಯದು ದ್ರೌಪದಿಯ ಸ್ವಯಂವರದ ಚಿತ್ರವಾಗಿದೆ. ಇಲ್ಲಿ ಅರ್ಜುನನು ಮತ್ಸ್ಯಯಂತ್ರವನ್ನು ಭೇದಿಸುತ್ತಿರುವ ಚಿತ್ರವಿದೆ. ಹೀಗೆ ರಾಮ-ಸೀತೆಯರು, ಅರ್ಜುನ-ದ್ರೌಪದಿಯರ ಸ್ವಯಂವರ ಚಿತ್ರಗಳು ಪ್ರಮುಖವಾಗಿದ್ದರೆ, ಕೆಳಸ್ತರದಲ್ಲಿ ಸ್ವಯಂವರಕ್ಕೆ ಭಾಗವಹಿಸಲು ಬಂದ ರಾಜಕುಮಾರರ ಚಿತ್ರ ಅತ್ಯಂತ ಸಣ್ಣ ಪ್ರಮಾಣದಲ್ಲಿ ಜನಸ್ತೋಮದ ಚಿತ್ರಗಳನ್ನು ಒಂಭತ್ತು ಪಟ್ಟಿಕೆಗಳಲ್ಲಿ ಚಿಕ್ಕ ಪ್ರಮಾಣದಲ್ಲಿ ನೈಜವಾಗಿ ಕಿರುರೂಪ ಚಿತ್ರಗಳಲ್ಲಿ ಚಿತ್ರಿಸಲಾಗಿದೆ. ಸೀತೆಯ ತಂದೆ-ತಾಯಿ, ರಾಮನ ತಂದೆ-ತಾಯಿ ಮತ್ತು ಬದಿಯಲ್ಲಿ ವಶಿಷ್ಟ, ವಿಶ್ವಾಮಿತ್ರ ಋಷಿಗಳನ್ನು ಕಾಣಬಹುದಾಗಿದೆ.

ಕೆಳಬದಿಯಲ್ಲಿ ಮತ್ತೊಂದು ದೊಡ್ಡ ಪಟ್ಟಿಕೆಯ ರಥಗಳಲ್ಲಿ ಸಾಗುತ್ತಿರುವ ಪ್ರಮುಖರು ಮತ್ತು ವಿವಿಧ ವೇಷಭೂಷಣಗಳ ಸೈನಿಕರು, ಎತ್ತಿನರಥ, ಕುದುರೆ ರಥ, ಆನೆಯ ರಥಗಳು ಮತ್ತು ಮುಂದೆ ಹೋಗುತ್ತಿರುವ ಸೈನಿಕ ಸಮೂಹ ಮುಂತಾದ ದೃಶ್ಯಗಳನ್ನು ಇಲ್ಲಿ ಅತ್ಯಂತ ನೈಜವಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಈ ಚಿತ್ರಗಳ ಕೆಳಬದಿಯಲ್ಲಿ ಮೇಣೆಯಲ್ಲಿ ಕುಳಿತಿರುವ ಮೆರವಣಿಗೆಯ ಚಿತ್ರವಿದೆ. ಬದಿಯಲ್ಲಿ ಕೃಷ್ಣನು ಗೋಪಿಕೆಯ ವಸ್ತ್ರಾಪಹರಣ ದೃಶ್ಯವನ್ನು ಚಿತ್ರಿಸಿದ್ದಾರೆ. ಮತ್ತೊಂದು ಬದಿಯಲ್ಲಿ ವಿರೂಪಾಕ್ಷ ದೇವಾಲಯದ ಗೋಪುರವನ್ನು ತೋರುವ ಚಿತ್ರ ಮತ್ತು ಲಿಂಗರೂಪಿ ಅಲಂಕೃತವಾದ ವಿರೂಪಾಕ್ಷನ ಮೂರ್ತಿಯ ಚಿತ್ರ ಮತ್ತು ನಿಂತ ನಂದಿಯ ಚಿತ್ರವನ್ನು ಕಾಣಬಹುದು. ಪಲ್ಲಕ್ಕಿಯಲ್ಲಿ ಮೆರವಣಿಗೆ ಹೊರಟ ಯತಿಯ ಚಿತ್ರದ ಹಿಂದು-ಮುಂದುಗಡೆ ಪರಿಚಾರಕರು, ರಾಜಭಟರು, ಪ್ರಮುಖರು, ಸೈನಿಕರು, ಆನೆ, ಕುದುರೆ, ಒಂಟೆಗಳು ಮೆರವಣಿಗೆಯಲ್ಲಿ ಹೊರಟಿರುವ ದೃಶ್ಯವಿದೆ.

ಪ್ರಮುಖ ಮೂರು ಸರಣಿಯ ಕಿರುರೂಪ ಚಿತ್ರಗಳು

ವಿರೂಪಾಕ್ಷೇಶ್ವರ ದೇವಾಲಯದ ನವರಂಗ ಮಂಟಪದ ಮೇಲ್ಚಾವಣೆಯ ಕೆಳಬದಿಯಲ್ಲಿ ಈ ಕಿರುರೂಪ ಚಿತ್ರಗಳು ಹೇರಳವಾಗಿ ಕಂಡುಬರುತ್ತವೆ. ನಾಲ್ಕು ದಿಕ್ಕಿನ ಪಟ್ಟಿಕೆಯಲ್ಲಿ ಪಶ್ಚಿಮ, ಉತ್ತರ ಮತ್ತು ದಕ್ಷಿಣ ಭಾಗದ ಪಟ್ಟಿಕೆಗಳಲ್ಲಿ ಒಟ್ಟು 64 ವಿವಿಧ ರೀತಿಯ ಕಿರುರೂಪ ಚಿತ್ರಗಳು ಒಂದೇ ಅಳತೆಯಲ್ಲಿ ರಚಿಸಿರುವುದನ್ನು ಕಾಣಬಹುದು. ಇನ್ನುಳಿದ ಪೂರ್ವಭಾಗದಲ್ಲಿ

ಯುದ್ಧ ಮತ್ತು ಯತಿಗಳ ಮೆರವಣಿಗೆಯ ದೊಡ್ಡ ಗಾತ್ರದ ಚಿತ್ರಗಳಿವೆ. ಪ್ರಸ್ತುತ ಇಲ್ಲಿನ ಮೂರು ಮೇಲ್ಛಾವಣಿಯ ಪಟ್ಟಿಕೆಯಲ್ಲಿ ಸಾಲುಸಾಲಾಗಿ ರಚನೆಗೊಂಡ 64 ಚಿತ್ರಗಳ ವಸ್ತು ವಿಷಯಗಳನ್ನು ಇಲ್ಲಿ ಸ್ಥೂಲವಾಗಿ ಗಮನಿಸಲಾಗಿದೆ.

1. ಪಶ್ಚಿಮ ಮೇಲ್ಛಾವಣೆಯ ಕೆಳಬದಿಯ ಕಿರುರೂಪ ಚಿತ್ರಗಳು
2. ಉತ್ತರ ಮೇಲ್ಛಾವಣೆಯ ಕೆಳಬದಿಯ ಕಿರುರೂಪ ಚಿತ್ರಗಳು
3. ದಕ್ಷಿಣ ಮೇಲ್ಛಾವಣೆಯ ಕೆಳಬದಿಯ ಕಿರುರೂಪ ಚಿತ್ರಗಳು

1. ಪಶ್ಚಿಮ ಮೇಲ್ಛಾವಣೆಯ ಕೆಳಬದಿಯ ಕಿರುರೂಪ ಚಿತ್ರಗಳು

ಈ ಪಟ್ಟಿಕೆಯಲ್ಲಿ ಒಟ್ಟು 16 ಚಿತ್ರಗಳಿದ್ದು, ಪಶ್ಚಿಮ ಭಾಗದ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ನೃತ್ಯಭಂಗಿಯ ನರ್ತಕಿಯ ಚಿತ್ರಗಳಿದ್ದು, ಡೋಲು ಬಾರಿಸುವವರು, ಚಳ್ಳಂ ಬಾರಿಸುವವರು, ತುತ್ತೂರಿ ಊದುವವರು, ವಾದ್ಯದವರು, ಇಬ್ಬರು ವಟುಗಳು, ನೃತ್ಯಗಾರ್ತಿಯರು, ಪೂಜಾ ಸಾಮಗ್ರಿಯೊಂದಿಗೆ ಮೂರು ಜನ ಸ್ತ್ರೀಯರು, ಋಷಿಮುನಿಗಳು, ವಿರೂಪಾಕ್ಷೇಶ್ವರನ ಮೂರ್ತಿ, ಕುಳಿತ ನಂದಿ, ನೃತ್ಯ ನಗಾರಿ ಬಾರಿಸುವವರು, ಕೈಯಲ್ಲಿ ಡೋಲು ಬಾರಿಸುವವರು, ಹೆಗಲ ಮೇಲೆ ಕಂಬಿ ಹೊತ್ತ ವ್ಯಕ್ತಿ, ಸೈನಿಕರು, ಮಂತ್ರಿಗಳು, ಗಣ್ಯವ್ಯಕ್ತಿಗಳು, ಛತ್ರಿ ಚಾಮರದವರ ಚಿತ್ರಗಳಿವೆ.

2. ಉತ್ತರ ಮೇಲ್ಛಾವಣಿಯ ಕೆಳಬದಿಯ ಕಿರುರೂಪ ಚಿತ್ರಗಳು

ಈ ಪಟ್ಟಿಕೆಯಲ್ಲಿ 24 ಚಿತ್ರಗಳಿದ್ದು, ನವಿಲಿನ ಮೇಲೆ ಕುಳಿತ ಸರಸ್ವತಿಯ ಚಿತ್ರ, ವಿವಿಧ ಪ್ರಾಣಿಗಳ ಅಂಗಾಂಗಳನ್ನು ಹೊಂದಿರುವ ವಿಚಿತ್ರ ಪ್ರಾಣಿಯು ತನ್ನ ಮುಂಭಾಗದಲ್ಲಿರುವ ವ್ಯಕ್ತಿಗೆ ಹೂಗುಚ್ಚವನ್ನು ನೀಡುತ್ತಿದ್ದು, ಹಿಂದೆ ಹೆಂಗಸೊಬ್ಬಳು ನಿಂತಿರುವ ಚಿತ್ರ, ಯೋಗಿಯೊಬ್ಬ ಹುಲಿಯ ಮೇಲೆ ಕುಳಿತಿರುವುದು, ಇಬ್ಬರು ಹುಲಿಯನ್ನು ಬರ್ಚಿಯಿಂದ ತಿವಿಯುತ್ತಿರುವುದು, ಹೆಣ್ಣಿನ ಮುಖ ಆಕಳಿನ ದೇಹವನ್ನು ಹೊಂದಿರುವ ಕಾಮಧೇನು ಕರುವಿಗೆ ಹಾಲು ಕೊಡುತ್ತಿರುವುದು, ಹುಲಿಗಳೊಂದಿಗೆ ಹೋರಾಟದ ದೃಶ್ಯ, ಕುದುರೆ ಮುಖ ಮಾನವನ ಕಾಲು, ಪ್ರಾಣಿಯ ಶರೀರ, ಹಾವಿನ ಬಾಲದ ವಿಚಿತ್ರ ಪ್ರಾಣಿ, ಗರುಡ ಪಕ್ಷಿ, ತಾಳೆಗರಿಯನ್ನು ಓದುತ್ತಿರುವ ಮುನಿವರು, ಮಾವುತ ಆನೆಯು ಹುಲಿಯನ್ನು ತುಳಿಯುತ್ತಿರುವುದು, ತಾಯಿಯೊಂದಿಗೆ ಬಾಲಕೃಷ್ಣ, ಶರೀರ ಒಂದು ಐದುಮುಖದ ಆಕಳು ಲಿಂಗಕ್ಕೆ ಹಾಲುಣಿಸುತ್ತಿರುವುದು, ನೃತ್ಯಗಾರ್ತಿಯರು, ಹುಲಿಯೊಂದಿಗೆ ಬೇಟೆಯಾಡುತ್ತಿರುವವರು, ಆನೆಯ ಮೇಲೇರಿ ಬೇಟೆಯಾಡುತ್ತಿರುವ ಹುಲಿ, ಮಹಿಷಾಸುರಮರ್ದಿನಿ ದೇವಿ, ಕುಳಿತ ಭಂಗಿಯ ದೇವತೆಯ ಚಿತ್ರ, ಮಗುವೊಂದಿಗೆ ಆಟವಾಡುತ್ತಿರುವ ಹೆಣ್ಣಿನ ಚಿತ್ರ, ನಿಂತ ಭಂಗಿಯಲ್ಲಿರುವ ಪದ್ಮಾವತಿ ಲಕ್ಷ್ಮೀ ಮತ್ತು ವೆಂಕಟೇಶ್ವರ ಚಿತ್ರ, ನೃತ್ಯಭಂಗಿಯ ಕೃಷ್ಣನ ಚಿತ್ರ, ಇಬ್ಬರು ವ್ಯಕ್ತಿಗಳು ಸೆಣಸಾಡುತ್ತಿರುವ ದೃಶ್ಯ, ನವಿಲೊಂದಿಗಿರುವ ಷಣ್ಮುಖ, ನಿಂತ ಭಂಗಿಯಲ್ಲಿರುವ ವಿಷ್ಣು, ಇಬ್ಬರು ಸಖಿಯರು, ಕುಳಿತ ಭಂಗಿಯಲ್ಲಿರುವ ಮುನಿಯ ಚಿತ್ರಗಳಿರುವುದು ಕಂಡುಬರುತ್ತದೆ.

3. ದಕ್ಷಿಣ ಮೇಲ್ಛಾವಣಿಯ ಕೆಳಬದಿಯ ಕಿರುರೂಪ ಚಿತ್ರಗಳು

ಈ ಪಟ್ಟಿಕೆಯಲ್ಲಿ 24 ಚಿತ್ರಗಳಿದ್ದು, ಆನೆ ಮತ್ತು ಆಕಳಿಗೆ ಒಂದೇ ಮುಖವನ್ನು ಕಲಾತ್ಮಕವಾಗಿ ಸಂಯೋಜನೆಗೊಳಿಸಿ ಚಿತ್ರಿಸಲಾಗಿದೆ, ನೃತ್ಯ ಭಂಗಿಯಲ್ಲಿರುವ ಗಣೇಶ, ಇಬ್ಬರು ಸ್ತ್ರೀಯರೊಂದಿಗೆ ನೃತ್ಯದ ಭಂಗಿಯಲ್ಲಿರುವ ದೇವತೆ, ಲಕ್ಷ್ಮೀ ಮತ್ತು ಉಗ್ರನರಸಿಂಹ, ಸ್ತ್ರೀಯರೊಂದಿಗೆ ನಿಂತಭಂಗಿಯ ಗಣ್ಯವ್ಯಕ್ತಿ ಚಿತ್ರ, ಇಬ್ಬರು ಸ್ತ್ರೀಯರೊಂದಿಗೆ ಪಗಡೆಯಾಡುತ್ತಿರುವ ಗಣ್ಯವ್ಯಕ್ತಿಯ ಚಿತ್ರ, ಇಬ್ಬರು ಮುನಿಗಳು ತಾಡೋಲೆ ಪತ್ರಗಳ ಅಧ್ಯಯನ ಮಾಡುತ್ತಿರುವ ದೃಶ್ಯ, ರಾಮ, ಲಕ್ಷ್ಮಣ, ಸೀತೆ ಮತ್ತು ಆಂಜನೇಯನ ಚಿತ್ರ, ಶೇಷಶಯನ ವಿಷ್ಣು, ದನಗಳೊಂದಿಗೆ ಇರುವ ವ್ಯಕ್ತಿ, ನಾಗ ದೇವತೆಗಳ ಮದುವೆ, ಹುಲಿಯೊಂದಿಗೆ ಹೋರಾಟ ಮಾಡುತ್ತಿರುವ ಯೋಧ, ಆನೆಯ ಮೇಲೆ ಕುಳಿತು ಹುಲಿಯನ್ನು ಬೇಟೆಯಾಡುತ್ತಿರುವ ಯೋಧ, ರಾಜ ಗಿಳಿಗೆ ಪತ್ರವನ್ನು ಕಳುಹಿಸುತ್ತಿರುವ ದೃಶ್ಯ, ಕೃಷ್ಣ, ಬಲರಾಮ ಮತ್ತು ತಾಯಿ ಯಶೋಧೆಯ ಚಿತ್ರ, ವ್ಯಕ್ತಿಯನ್ನು ತುಳಿಯುತ್ತಿರುವ ಆನೆ, ಕುಳಿತ ಭಂಗಿಯ ಋಷಿಮುನಿಗಳು, ಲಿಂಗಕ್ಕೆ ಹಾಲುಣಿಸುತ್ತಿರುವ ಹಸು, ಲಿಂಗಗಳಿಗೆ ಪೂಜೆ ಮಾಡುತ್ತಿರುವ ಪುರುಷಮೃಗ, ಕುಳಿತ ಭಂಗಿಯ ಯತಿಗಳ ಚಿತ್ರ ಹಾಗೂ ಕೊನೆಯಲ್ಲಿ ಗಣೇಶನ ಚಿತ್ರಗಳು ಕಂಡುಬರುತ್ತವೆ.

ಹೀಗೆ ವಿರೂಪಾಕ್ಷೇಶ್ವರ ದೇವಾಲಯದ ನವರಂಗ ಮಂಟಪದ ಮೇಲ್ಛಾವಣೆಯ ಕೆಳಬದಿಯಲ್ಲಿ ಮೂರು ಪಟ್ಟಿಕೆಯ ಸಾಲುಗಳಲ್ಲಿ 64 ಕಿರುರೂಪ ಚಿತ್ರಗಳು ವಿಜಯನಗರ ಚಿತ್ರ ಶೈಲಿಯಲ್ಲಿ ನಿರೂಪಣೆಗೊಂಡಿದ್ದು, ಅಲ್ಲದೆ, ಮೇಲೆ ಸುತ್ತಲೂ ಇರುವ ಮೇಲ್ಛಾವನೆಯ ಹೊದಿಕೆಯಲ್ಲಿ ದೊಡ್ಡ ದೊಡ್ಡ ಚಿತ್ರಗಳೊಂದಿಗೆ ಕೆಳಬದಿ, ಮೇಲ್ಬದಿಯ ಎಡಬಲಗಳಲ್ಲಿ ಸಣ್ಣ ಸಣ್ಣ ಪಟ್ಟಿಕೆಗಳೊಂದಿಗೆ ಸಹ ಹಲವಾರು ಕಿರುರೂಪ ಚಿತ್ರಗಳಿದ್ದು, ಮುಖ್ಯ ಚಿತ್ರಕ್ಕೆ ಪೂರಕವಾಗಿ ಈ ಚಿತ್ರಗಳು ಬಹುಪಾಲು ರಚನೆಗೊಂಡಿವೆ. ಹೀಗಾಗಿ ಈ ನೆಲೆಯು ಕಿರುರೂಪ ಚಿತ್ರಕಲೆಯ ಬಹುಮುಖ್ಯವಾದ ವೇದಿಕೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ವಿರೂಪಾಕ್ಷೇಶ್ವರ ದೇವಾಲಯದ ಕಿರುರೂಪ ಚಿತ್ರಗಳ ಕೆಲವು ಪ್ರಮುಖ ವೈಶಿಷ್ಟ್ಯತೆಗಳು

1. ಇಲ್ಲಿ ರಚನೆಯಾದ ಚಿತ್ರಗಳು ದೊಡ್ಡ ಗಾತ್ರದ ಚಿತ್ರಕ್ಕೆ ಪೂರಕವಾಗಿ ಎಡ–ಬಲ, ಮೇಲ್ಬದಿ–ಕೆಳಬದಿಯಲ್ಲಿ ರಚನೆಯಾಗಿವೆ.
2. ಇನ್ನೂ ಕೆಲವು ಸಲ ಮೇಲ್ಛಾವಣಿಯ ಕೆಳಸ್ಥರದಲ್ಲಿ ದೊಡ್ಡದಾದ ಪಟ್ಟಿಯನ್ನು ಹೊಂದಿ, ಆ ಪಟ್ಟಿಯಲ್ಲಿ ಸಣ್ಣ ಸಣ್ಣ ಗಾತ್ರದ ಚೌಕಾಕೃತಿ, ಆಯಾತಕೃತಿಗಳಲ್ಲಿ ನೂರಾರು ಈ ಕಿರುರೂಪ ಚಿತ್ರಗಳು ರಚನೆಯಾಗಿವೆ.
3. ಇಲ್ಲಿ ವಾಸ್ತವವಲ್ಲದ ಹಾಗೂ ಬಹುಕೇಂದ್ರಿತ (Multi point perspective) ಯಥಾದರ್ಶನವನ್ನು ನೀಡುವ ಕಿರುರೂಪ ಚಿತ್ರಗಳಿವೆ.
4. ಇಲ್ಲಿ ವರ್ಣಗಳನ್ನು ಹಿನ್ನೆಲೆಯಾಗಿ ಲೇಪಿಸಿಕೊಂಡು ಅದರ ಮೇಲೆ ಕಿರು ಗಾತ್ರದ ಬಹುವರ್ಣಿತ ಚಿತ್ರಗಳನ್ನು ಬಳಿಸಿರುವ ಕ್ರಮ ಕಂಡುಬರುತ್ತದೆ.
5. ವಿಶೇಷವಾಗಿ ದ್ವಿಮಾನದ (2ಡಿ) ಮೂಲಕ ತ್ರಿಮಾನದ (3ಡಿ) ಪರಿಣಾಮವನ್ನು ತರುವ ವಿಶಿಷ್ಟವಾದ ತಂತ್ರಗಾರಿಕೆಯನ್ನು ಇಲ್ಲಿನ ಕಲಾವಿದರು ಮಾಡಿದ್ದಾರೆ.
6. ಈ ಕಲಾಕೃತಿಗಳಲ್ಲಿ ಪ್ರಖರ ವರ್ಣಗಳ ಬಳಕೆ ವಿಶೇಷವಾಗಿ ಕಂಡುಬರುತ್ತದೆ.
7. ಇಲ್ಲಿ ಚಿತ್ರಗಳ ಅಥವಾ ಆಕೃತಿಗಳ ಶೈಲೀಕರಣ ವಾಸ್ತವಕ್ಕಿಂತ ಭಿನ್ನವಾಗಿ, ವ್ಯಕ್ತಿ, ಪ್ರಾಣಿ–ಪಕ್ಷಿ ಅಥವಾ ನೈಸರ್ಗಿಕ ವಸ್ತುಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ.
8. ಇಲ್ಲಿನ ಚಿತ್ರಗಳು ಪ್ರಮುಖ ಕಥೆಯ ಅಥವಾ ಸನ್ನಿವೇಶವೊಂದರ ವಿವಿಧ ವಿಷಯಗಳನ್ನು ಅಥವಾ ಘಟ್ಟಗಳನ್ನು ಒಂದೇ ಚಿತ್ರದಲ್ಲಿ ಸಂಯೋಜಿಸುವ ರೀತಿಯು ಅದ್ಭುತವಾಗಿ ಮೂಡಿಬಂದಿರುವುದು ಗಮನ ಸೆಳೆಯುತ್ತದೆ.
9. ಇಲ್ಲಿ ಚಿಕ್ಕ ಚಿಕ್ಕ ಚೌಕ, ಆಯಾತಗಳಲ್ಲಿ ಖಾಲಿಯಿರುವ ಸ್ಥಳವನ್ನು ಮೂಲ ಚಿತ್ರಕ್ಕೆ ಪೂರಕವಾಗಿ, ಇಲ್ಲವೇ ಸ್ವತಂತ್ರವಾಗಿ, ಕಾಲ್ಪನಿಕವಾಗಿ ಚಿತ್ರಿಸುವಲ್ಲಿ ಕಲಾವಿದರ ಸೃಜನಶೀಲ ಪ್ರತಿಭೆ ವಿಶೇಷವಾಗಿ ಕೆಲಸ ಮಾಡಿದೆ.
10. ಕರ್ನಾಟಕದ ಕಿರುರೂಪ ಚಿತ್ರಕಲಾ ಪರಂಪರೆಗೆ ದೊಡ್ಡ ವೇದಿಕೆಯೊಂದು ಈ ವಿರೂಪಾಕ್ಷೇಶ್ವರ ದೇವಸ್ಥಾನದ ಚಿತ್ರಗಳು ಒದಗಿಸಿವೆ.
11. ಇಲ್ಲಿನ ಕಿರುರೂಪ ಚಿತ್ರಕಲೆಯು ಜನಪದ ಮತ್ತು ಶಿಷ್ಟಪದ ಚಿತ್ರಗಳ ಸಮ್ಮಿಶ್ರಣದ ಶೈಲಿಯ ಕೊಡುಗೆಯಾಗಿದೆ.
12. ಸೀಮಿತ ಸ್ಥಳಾವಕಾಶದಲ್ಲಿ ದೊಡ್ಡ ಚಿತ್ರಗಳು ಚಿತ್ರಿಸುವ ಅನುಭವವನ್ನು ಈ ಕಿರು ಚಿತ್ರಗಳಲ್ಲಿ ಚಿತ್ರಣಗೊಂಡಿರುವುದು ಇಲ್ಲಿ ಕಂಡುಬರುವ ಅಂಶವಾಗಿದೆ.

ವಿಜಯನಗರ ಕಲೆಯ ಪ್ರಭಾವವು ಮಹಾರಾಷ್ಟ್ರ, ಒರಿಸ್ಸಾ ಹಾಗೂ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೂ ಹಬ್ಬಿತ್ತು. ಇವರು ಲಲಿತಕಲೆಗೆ ಪ್ರೋತ್ಸಾಹ ನೀಡಿದ್ದರು. ಇವರ ಕಾಲದ ಪ್ರಮುಖ ನಗರಗಳು ಎಲ್ಲ ಪ್ರದೇಶಗಳಿಗೆ ಹಾಗೂ ವಿಜಯನಗರ ಸಾಮ್ರಾಜ್ಯಕ್ಕೆ ಪ್ರಮುಖ ಕೇಂದ್ರವಾಗಿ ಹಂಪೆಯು ರೂಪುಗೊಂಡಿತು. ವಿಜಯನಗರದ ಕಲಾ ಇತಿಹಾಸವನ್ನು ಗಮನಿಸಿದಾಗ ಇಲ್ಲಿನ ಚಿತ್ರ, ಶಿಲ್ಪ ಮತ್ತು ವಾಸ್ತುಗಳು ದೀರ್ಘ ಪರಂಪರೆಯನ್ನು ಹೊಂದಿವೆ ಎಂದು ಹೇಳಬಹುದು.

ವಿಜಯನಗರ ಕಿರುರೂಪ ಚಿತ್ರಕಲಾ ಶೈಲಿಯ ಪ್ರಭಾವಗಳು

ಈ ಕಲಾಕೃತಿಯ ಪ್ರಭಾವವನ್ನು 'ದಖ್ಖನ್'ದ ಕಲಾಶೈಲಿಯ ಮೇಲೂ ಹಾಗೂ ಮೈಸೂರು ಶೈಲಿ, ತಂಜಾವೂರು ಶೈಲಿಯ ಬೆಳವಣಿಗೆಯಲ್ಲಿಯೂ ಪ್ರಮುಖವಾಗಿ ಕಾಣುತ್ತವೆ. ಅನಂತರ ಬೆಳೆದು ಬಂದ ಕಲಾಪ್ರಕಾರಗಳೆಲ್ಲವುದರಲ್ಲಿ ಈ ಪರಂಪರೆ ಮುಂದುವರಿದುಕೊಂಡು ಬಂದಿದೆ. ಕಡಪಾ ಚಿತ್ರಕಲಾ ಶೈಲಿಯ ಮೇಲೂ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಇಷ್ಟೇ ಅಲ್ಲದೆ ನೆರೆಯ ಮಹಾರಾಷ್ಟ್ರದ ಕಿರುರೂಪ ಕಲೆಯ ಮೇಲೆ ಹಾಗೂ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೆ ವಿಜಯನಗರ ಶೈಲಿಯ ಪ್ರಭಾವವಿರುವುದು ಕಂಡುಬರುತ್ತದೆ.

ಮೈಸೂರು ಶೈಲಿ ಹಾಗೂ ತಂಜಾವೂರು ಕಲಾಶೈಲಿಗಳು ಸಂಪೂರ್ಣವಾಗಿ ವಿಜಯನಗರ ಕಲಾವಿದರ ಮತ್ತು ಕಲಾಕೃತಿಗಳ ಮುಂದುವರೆದ ವಿಶಿಷ್ಟ ಪರಂಪರೆಗಳಾಗಿವೆ. ವಿಜಯನಗರ ಸಾಮ್ರಾಜ್ಯದ ಕೊನೆಯ ದೊರೆಯಾದ ತಿರುಮಲರಾಯನು ಶ್ರೀರಂಗಪಟ್ಟಣದಲ್ಲಿರುತ್ತಿದ್ದು, ಆ ಮನೆತನ ಆಳಿದ ಮೇಲೆ ಮೈಸೂರಿನ ರಾಜ ಒಡೆಯರ್ ಅವರು ಅಧಿಕಾರಕ್ಕೆ ಬಂದರು. ಅವರು ಶ್ರೀರಂಗಪಟ್ಟಣವನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದು, ವಿಜಯನಗರ ಕಲಾವಿದರನ್ನೆಲ್ಲ ತನ್ನಲ್ಲಿಗೆ ಕರೆಸಿಕೊಂಡು ಅವರಿಗೆ ಆಶ್ರಯ ನೀಡಿದ್ದು, ಆ ಸಂದರ್ಭದಲ್ಲಿ ಅಲ್ಲಿ ಚಿತ್ರ ರಚನೆಯಾಗಿರುವುದನ್ನು ಗುರುತಿಸಬಹುದಾಗಿದೆ.

ಹೀಗೆ ಮೈಸೂರು ಚಿತ್ರಕಲೆಯೊಂದಿಗೆ ಸೀಬಿ, ಶಿರಾ, ಮುಡುಕುತೊರೆ ಮುಂತಾದ ದೇವಸ್ಥಾನಗಳ ಭಿತ್ತಿಚಿತ್ರಗಳಲ್ಲಿ ಈ ಪರಂಪರೆಯ ಕಿರುರೂಪ ಚಿತ್ರಗಳು ರಚನೆಯಗಿವೆ. ಉತ್ತರ ಕನ್ನಡದ ಕರಾವಳಿ ಪ್ರದೇಶದ ಉದ್ದಕ್ಕೂ ನೂರಾರು ದೇವಾಲಯಗಳಲ್ಲಿ ಕಾವಿ ಚಿತ್ರಕಲೆಯಲ್ಲಿ ಕಿರುರೂಪಚಿತ್ರಗಳ ರಚನೆ ಹೇರಳವಾಗಿ ಸಿಗುತ್ತವೆ. ಹಾಗೆಯೇ ಸುರಪುರ ಗರುಡಾದ್ರಿ ಪರಂಪರೆಯ ಕಿರುರೂಪ ಚಿತ್ರಗಳು, ರಾಯಚೂರಿನ ಗಾಜಿನಗೌಡರ ಮನೆಯ ಕಿರುರೂಪ ಚಿತ್ರಗಳು, ನವಲಗುಂದ ಗವಿಮಠ, ನರಗುಂದ ಅರಮನೆ, ಹೊಸಮನಿಗೌಡರ ಮನೆಯ ಚಿತ್ರಗಳು, ಗುಳೇದಗುಡ್ಡ, ಅಮ್ಮಿನಭಾವಿ, ಬಿ.ಕೆ. ಹಳ್ಳಿ, ಮಹಾಲಿಂಗಪುರ, ನಿಪ್ಪಾಣಿ ವಾಡೆ, ಕಿನ್ನಾಳ, ಕಲಘಟಗಿ, ಗೋಕಾಕ್, ಚನ್ನಪಟ್ಟಣ ಮುಂತಾದ ಜನಪದ ಚಿತ್ರಕಲಾ ಪರಂಪರೆಯಲ್ಲಿ ಸಹ ಈ ಶೈಲಿಯ ಪ್ರಭಾವದಿಂದ ಇಂದಿಗೂ ಈ ಕಿರುರೂಪ ಚಿತ್ರಕಲಾ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ. ಹೀಗೆ ಉತ್ತರ ಕರ್ನಾಟಕದ ಉದ್ದಕ್ಕೂ ವಿಜಯನಗರ ಕಿರುರೂಪ ಚಿತ್ರಕಲಾ ಪರಂಪರೆ ಬೆಳೆದು ಬಂದಿದೆ.

ಶೈಲಿ

ಈ ಕಿರುರೂಪ ಚಿತ್ರಗಳ ಶೈಲಿಯು ಸ್ವತಂತ್ರವಾದ ವಿಜಯನಗರ ಚಿತ್ರಕಲಾ ಶೈಲಿಯಾಗಿಯೇ ರೂಪುಗೊಂಡಿದೆ. ರಾಜಸ್ಥಾನದ ಕಲಾಶೈಲಿಗಳಿರುವಂತೆ ಇಲ್ಲಿಯೂ ರಾಮಾಯಣ, ಮಹಾಭಾರತ, ಕೃಷ್ಣಲೀಲೆ, ಮುಂತಾದ ಶೃಂಗಾರ ಪ್ರಧಾನ ಚಿತ್ರಗಳು ಅಲ್ಲದೇ, ದೇವತಾ ಚಿತ್ರಗಳು, ನೈಸರ್ಗಿಕ ಚಿತ್ರಗಳು ಕಲಾವಿದರ ವಿಶಿಷ್ಟವಾದ ಸೃಜನಶೀಲ ಚಿತ್ರಗಳು ಉದಾ: ಒಂದು ದೇಹ ಆರು ಮುಖಗಳಿರುವ ಪ್ರಾಣಿ ಇತ್ಯಾದಿ ಇಂತಹ ಚಿತ್ರಗಳು ಇಲ್ಲಿ ವಿಶೇಷವಾಗಿ ರಚನೆಯಾಗಿವೆ. ಇವೆಲ್ಲವೂ ಕಲಾವಿದರ ಸ್ವತಂತ್ರವಾದ ಸೃಜನಶೀಲ ಮನೋಧೋರಣೆಗೆ ಸಾಕ್ಷಿಯಾಗಿವೆ.

ಗುಜರಾತ, ರಾಜಸ್ಥಾನ ಜೈನ ಹಸ್ತಪ್ರತಿ, ಬೌದ್ಧ ಹಸ್ತಪ್ರತಿ ಹಾಗೂ ನಳಂದ ಮತ್ತು ವಿಕ್ರಮ ಶಿಲೆಯ ಶಿಲ್ಪಗಳ ಪ್ರಭಾವಗಳನ್ನು ಅವು ಹೊಂದಿದ್ದರೆ, ವಿಜಯನಗರ ಕಿರುರೂಪ ಚಿತ್ರಕಲೆಯಲ್ಲಿ ಸ್ಥಳೀಯ ಜನಪದ ಚಿತ್ರಕಲೆಯ ಹಾಗೂ ತೊಗಲುಗೊಂಬೆ ಚಿತ್ರಕಲಾ ಪ್ರಭಾವವನ್ನು ವಿಶೇಷವಾಗಿ ಗುರುತಿಸಬಹುದಾಗಿದೆ.

ಹೀಗೆ ಕರ್ನಾಟಕದ ಈ ವಿಜಯನಗರ ಕಿರುರೂಪ ಚಿತ್ರಕಲಾ ಪರಂಪರೆ ಭಾರತೀಯ ಚಿತ್ರಕಲಾ ಕ್ಷೇತ್ರಕ್ಕೆ ತನ್ನದೇ ಆದ ದೊಡ್ಡ ಪರಂಪರೆಯನ್ನು ಸೃಷ್ಟಿಸುವುದರ ಮೂಲಕ ಕರ್ನಾಟಕವು ಕಿರುರೂಪ ಚಿತ್ರಕಲೆಯ ದೊಡ್ಡ ನೆಲೆಯಾಗಿರುವುದನ್ನು ಗುರುತಿಸಬಹುದಾಗಿದೆ.

ಗ್ರಂಥಋಣ


1. ಡಾ. ಎಸ್. ಸಿ. ಪಾಟೀಲ, *ಕರ್ನಾಟಕ ಜನಪದ ಚಿತ್ರಕಲೆ*, ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಮಠ, ಗದಗ–ಡಂಬಳ, 1993
2. ಡಾ. ಯಾದಪ್ಪ ಪರದೇಶಿ, *ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ–ಒಂದು ಅಧ್ಯಯನ*, ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2001
3. ಡಾ. ಎಸ್. ಸಿ. ಪಾಟೀಲ, *ವರ್ಣಸಂಚಯ*, ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ, ಇಳಕಲ್. 2004
4. ಡಾ. ಆರ್. ಹೆಚ್. ಕುಲಕರ್ಣಿ (ಲೇಖನ), ವಿಜಯನಗರ ಅಧ್ಯಯನ, ಸಂಪುಟ–3, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. 1998
5. ಡಾ. ಆರ್. ಹೆಚ್. ಕುಲಕರ್ಣಿ (ಲೇಖನ): *ವಿಜಯನಗರ ಅಧ್ಯಯನ, ಸಂಪುಟ–6*, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. 2001
6. ಡಾ. ಪಿ. ಕೆ. ಖಂಡೋಬಾ ಮತ್ತು ಡಾ. ಎಸ್. ಸಿ. ಪಾಟೀಲ (ಸಂ.), *ಹೈದ್ರಾಬಾದ್–ಕರ್ನಾಟಕ ಸಾಂಸ್ಕೃತಿಕ ವಿಷಯ ವಿಶ್ವಕೋಶ*, ಲಲಿತಕಲೆಗಳ ಸಂಪುಟ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. 2012
7. ಡಾ. ಎಂ. ಎಚ್. ಕೃಷ್ಣಯ್ಯ ಮತ್ತು ಡಾ. ವಿಜಯಾ (ಸಂ.), ಕರ್ನಾಟಕ ಕಲಾದರ್ಶನ, ಸಂಪುಟ–1, ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು. 2010.
8. ಡಾ. ವಿ. ಎಂ. ಬಾಗಾಯತ್, *ಮುಸ್ಲಿಂ ಅರಸರ ಕಾಲದ ಚಿತ್ರಕಲೆ*, ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ನಿರಂಜನ (ಸಂ.), *ಜ್ಞಾನಗಂಗೋತ್ರಿ ಲಲಿತಕಲೆಗಳ ಸಂಪುಟ–5*, ಕರ್ನಾಟಕ ಸರ್ಕಾರಿ ಪ್ರಕಾಶನ ಮಂದಿರ, ಬೆಂಗಳೂರು. 1973.
10. ಎನ್. ಮರಿಶಾಮಾಚಾರ್, *ಭಾರತೀಯ ಕಲೆ*, ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು. 2001.


ಅಡಿ ಟಿಪ್ಪಣಿಗಳು

1. ಸಿ.ಟಿ.ಎಂ. ಕೊಟ್ರಯ್ಯ : *ಹೇಮಕೂಟ*, ಪತ್ರಿಕೆ ಸಂ. 3 ಸಂಚಿಕೆ 9, ಪುಟ 2–20, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ, ಹಂಪಿ, 1978; C.T.M. Kotraiah : *Vijayanagara paintings at Virupaksha Temple*, Hampi, *QJMS* II, Jan 1959. pp. 231-232.
2. R.N. Saletore : *Vijayanagar Art*, pp. 220.









15. ಹಂಪಿ ಪರಿಸರದ ಮತ್ಸ್ಯಾವತಾರ ಶಿಲ್ಪಗಳು

ಡಾ. ಸಿ. ಎಸ್. ವಾಸುದೇವನ್

ಎಲ್ಲರಿಂದ ಒಪ್ಪಿತ ಮತ್ತು ಪ್ರಸಿದ್ಧವಾದ ವಿಷ್ಣುವಿನ ಅವತಾರಗಳು ಹತ್ತು. ಅವುಗಳನ್ನು ದಶಾವತಾರ ಎಂದು ಕರೆಯಲಾಗುತ್ತದೆ. ಈ ಪ್ರಪಂಚಕ್ಕೆ ಅಸುರರುಗಳಿಂದ ಆಪತ್ತು ಒದಗಿದಾಗ ವಿಷ್ಣುವು ವಿವಿಧ ಕಾಲಘಟ್ಟಗಳಲ್ಲಿ ಹತ್ತು ಅವತಾರಗಳನ್ನು ತಾಳಿ ಅಸುರರನ್ನು ನಿಗ್ರಹಿಸಿ ತಪ್ಪು ದಾರಿಯಲ್ಲಿದ್ದವರನ್ನು ಸರಿ ದಾರಿಗೆ ತಂದನು. ಧರ್ಮವನ್ನು ಸ್ಥಾಪಿಸಲು ಇಂತಹ ಅವತಾರಗಳನ್ನು ವಿಷ್ಣುವು ತಾಳಿದನು. ವಿಷ್ಣುವಿನ ದಶಾವತಾರಗಳು ಇಂತಿವೆ: ಮತ್ಸ್ಯ (ಮೀನು), ಕೂರ್ಮ (ಆಮೆ), ವರಾಹ (ಹಂದಿ), ನರಸಿಂಹ (ಮನುಷ್ಯ-ಸಿಂಹ), ವಾಮನ (ಕುಬ್ಜ), ತ್ರಿವಿಕ್ರಮನನ್ನು ಒಳಗೊಂಡಂತೆ ಪರಶುರಾಮ, ರಘುರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ. ಕೆಲವು ಹಿಂದೂ ಸಂಪ್ರದಾಯವಾದಿಗಳು ಬುದ್ಧನನ್ನು ವಿಷ್ಣುವಿನ ಅವತಾರ ಅಲ್ಲವೆಂದು ವಾದಿಸಿ ಅವನ ಸ್ಥಳದಲ್ಲಿ ಬಲರಾಮನನ್ನು ಉಲ್ಲೇಖಿಸುತ್ತಾರೆ. ಇವನು ಕೃಷ್ಣನ ಅಣ್ಣ.[1]

ವಿಷ್ಣುವು ತಾಳಿದ ಅವತಾರಗಳಲ್ಲಿ ಮತ್ಸ್ಯ ಅಥವಾ ಮೀನು ಮೊದಲನೆಯ ಅವತಾರವಾಗಿದೆ. ಹಿಂದೂ ಸಂಸ್ಕೃತಿಯ ಅನೇಕ ಐತಿಹ್ಯಗಳು ಮೀನಿನ ಅವತಾರವನ್ನು ಕುರಿತು ಉಲ್ಲೇಖಿಸುತ್ತವೆಯಾದ್ದರಿಂದ ವಿಷ್ಣುವಿನ ಮತ್ಸ್ಯಾವತಾರವನ್ನು ಕುರಿತ ಮೂಲ-ಚೂಲಗಳು ಮತ್ತು ಅದರ ವಿವರಣೆಗಳು ದೊರೆಯುವುದು ಐತಿಹ್ಯಗಳಿಂದ ಮಾತ್ರ. ಶತಪಥ ಬ್ರಾಹ್ಮಣದಲ್ಲಿ ಈ ಅವತಾರವನ್ನು ಕುರಿತ ಪ್ರಸ್ತಾಪವಿಲ್ಲ. ಇನ್ನೊಂದು ಮೂಲದಂತೆ ಮನುವಿನ ಬಳಿ ಆಶ್ರಯ ಪಡೆದ ಮೀನು, ಮನುವನ್ನು ರಕ್ಷಿಸುವುದರೊಂದಿಗೆ ಒದಗಿದ ಪ್ರಳಯದ ಕುರಿತು ಎಚ್ಚರಿಕೆಯನ್ನು ಸಹ ನೀಡುತ್ತದೆ.

ಶ್ರೀವಿಷ್ಣುವು ಮತ್ಸ್ಯ ಅವತಾರವನ್ನು ತಾಳಿದನೆಂಬ ಸಾಮಾನ್ಯ ನಂಬಿಕೆಗೆ ವಿರುದ್ಧವಾಗಿ ಪ್ರಜಾಪತಿಯು ಈ ಅವತಾರವನ್ನು ತಾಳಿದನೆಂದು ಮಹಾಭಾರತವು ಉಲ್ಲೇಖಿಸುತ್ತದೆ. ವೈವಸ್ವತಮನುವು ಮೀನಿನ ರೂಪದ ವಿಷ್ಣುವಿಗೆ ಮೊದಲು ರಕ್ಷಣೆಯನ್ನು ನೀಡಿದನು. ನಂತರದಲ್ಲಿ ಮೀನು ಮನುವನ್ನು ಪ್ರಳಯದಿಂದ ರಕ್ಷಣೆಯನ್ನು ನೀಡಿತು. ಕೆಲವು ಶಿಲ್ಪಗಳಲ್ಲಿ ಮತ್ತು ನಂತರ ಕಾಲಘಟ್ಟದಲ್ಲಿ ರಚಿತವಾದ ವರ್ಣಚಿತ್ರಗಳಲ್ಲಿ ಮನು ಮತ್ತು ಸಪ್ತಋಷಿಗಳು ಅಬ್ಬರವಾಗಿರುವ ಸಮುದ್ರದಲ್ಲಿ ಅವರ ದೋಣಿಯು ಸಿಲುಕಿಕೊಂಡಾಗ ಆ ದೋಣಿಯನ್ನು ಮೀನು ಎಳೆದುಕೊಂಡು ಸುರಕ್ಷಿತವಾಗಿ ದಡ ಸೇರುವ ನಿರೂಪಣೆಗಳು ಕೆಲವು ಶಿಲ್ಪಗಳಲ್ಲಿ ಮತ್ತು ನಂತರ ಕಾಲಘಟ್ಟಗಳಲ್ಲಿ ರಚಿಸಲಾದ ವರ್ಣಚಿತ್ರಗಳಲ್ಲಿ ತೋರಲಾಗಿದೆ.

ಮಹಾಭಾರತದಲ್ಲಿ ಉಲ್ಲೇಖಗೊಂಡಿರುವ ಇನ್ನೊಂದು ಐತಿಹ್ಯದಂತೆ ಕೊಂಬು ಇರುವ ಮೀನನ್ನು ಶೃಂಗಿ ಎಂದು ವಿವರಿಸಲಾಗಿದೆ. ವಿಷ್ಣುವಿನ ಬದಲಾಗಿ ಮೀನು ಪ್ರಜಾಪತಿಯ ಅವತಾರವೆಂದು ಪರಿಗಣಿಸಲಾಗಿದ್ದು ಆತನು ಮಹಾಪ್ರಳಯದಿಂದ ಮನುವನ್ನು ರಕ್ಷಿಸುವವನಾಗಿರುವುದರಿಂದ, ಆತನು ಸೃಷ್ಟಿಕರ್ತ ಎಂದು ಭಾವಿಸಲಾಗಿದೆ.

ವಿಷ್ಣು ಮತ್ಸ್ಯಾವತಾರವನ್ನು ತಾಳಿರುವ ವಿವರಗಳು ಅಗ್ನಿಪುರಾಣದಲ್ಲಿಯೂ ದೊರಕುತ್ತದೆ. ಮತ್ಸ್ಯದ ಹುಟ್ಟಿನ ಕುರಿತಾದ ಕುತೂಹಲಕಾರಿ ಕಥೆಯು ಬೃಹದ್ದೇವತೆಯಲ್ಲಿದೆ. ಅದರಂತೆ ಮಿತ ಮತ್ತು ವರುಣ ಎಂಬ ಇಬ್ಬರು ಆದಿತ್ಯರುಗಳು ಊರ್ವಶಿಯನ್ನು (Nymph) ನೋಡುತ್ತಾರೆ. ಆಕೆಯನ್ನು ನೋಡಿದ ಕೂಡಲೆ ಅವರ ವೀರ್ಯವು ಚಿಮ್ಮಿ ನೆಲ, ನೀರು ಮತ್ತು ಒಂದು ಹೂಜಿಯಲ್ಲಿ ಬೀಳುತ್ತದೆ. ಇದರ ಫಲಿತವಾಗಿ ವಶಿಷ್ಠನು ಭೂಮಿಯಲ್ಲಿ, ಅಗಸ್ತ್ಯನು ಹೂಜಿಯಿಂದ ಮತ್ತು ಪ್ರಕಾಶಮಾನವಾದ ಮತ್ಸ್ಯವು ನೀರಿನಿಂದ ಜನಿಸುತ್ತಾರೆ. ನೀರಿನಿಂದ ಜನಿಸಿದ ಪ್ರಕಾಶಮಾನವಾದ ಮತ್ಸ್ಯವು, ಎಲ್ಲಾ ಜೀವಿಗಳಿಗೆ ಅತ್ಯವಶ್ಯವಾದ, ನೀರಿನ ರೂಪ ಹಾಗೂ ಫಲವತ್ತತೆಯ ಪ್ರತಿರೂಪವಾಗಿದೆ. ಈ ರೀತಿಯಾಗಿ ಮತ್ಸ್ಯ ರೂಪದ ವಿಷ್ಣುವಿಗೆ ನೀರಿನೊಂದಿಗೆ ಇರುವ ನಂಟು ಮತ್ತು ಆತನು ತಾಳಿರುವ ಅನೇಕ ಅವತಾರಗಳನ್ನು ವಿಷ್ಣುವಿನೊಂದಿಗೆ ಸಮೀಕರಿಸಿ ಗುರುತಿಸಲು ದಾರಿ ಮಾಡಿಕೊಟ್ಟಿದೆ.[2]

ವಿಷ್ಣುವಿನ ಮೊದಲ ಎರಡು ಅವತಾರಗಳಾದ ಮತ್ಸ್ಯ ಮತ್ತು ಕೂರ್ಮ ಅವತಾರಗಳನ್ನು ಕುರಿತ ಉಲ್ಲೇಖಗಳು ಸಾಹಿತ್ಯದಲ್ಲಿ ಅತ್ಯಲ್ಪವಾಗಿ ದೊರಕುತ್ತವೆ.[3] ವಿಷ್ಣುವು ತಾಳಿದ ಉಳಿದ ಹತ್ತು ಅವತಾರಗಳಿಗೆ ಹೋಲಿಸಿದರೆ ಇವೆರಡು ಅವತಾರಗಳು ಕಿರು ಅವತಾರಗಳಂತೆ ಕಂಡುಬರುತ್ತವೆ. ಇವುಗಳನ್ನು ಶಿಲ್ಪಗಳ ರೂಪದಲ್ಲಿ ಮತ್ತು ಸಾಹಿತ್ಯದಲ್ಲಿ ವಿಪುಲವಾಗಿ

ಪ್ರತಿನಿಧಿಸಿಲ್ಲ. ಮತ್ಸ್ಯಾವತಾರದ ಬಿಡಿಶಿಲ್ಪಗಳು ಅತ್ಯಲ್ಪ ಸಂಖ್ಯೆಯಲ್ಲಿ ದೊರಕಿದ್ದು ಅಂತಹ ಕೆಲವು ಶಿಲ್ಪಗಳನ್ನು ಪೂಜಿಸಲಾಗುತ್ತಿದೆ.

ಸಾಮಾನ್ಯವಾಗಿ ವಿಷ್ಣುವಿನ ಮತ್ಸ್ಯಾವತಾರ ಶಿಲ್ಪವನ್ನು ಅರ್ಧ ಮನುಷ್ಯ ಮತ್ತು ಅರ್ಧ ಮೃಗ ರೂಪದಲ್ಲಿ, ಅಂದರೆ ನರಮೃಗ ರೂಪದಲ್ಲಿ ತೋರಲಾಗುತ್ತದೆ. ದೇಹದ ಕೆಳಗಿನ ಅರ್ಧ ಭಾಗವು ಮತ್ಸ್ಯದಾಗಿದ್ದು (ಮೀನು) ಮೇಲಿನ ಭಾಗವನ್ನು ಮನುಷ್ಯನ ರೂಪದಲ್ಲಿ ತೋರಲಾಗುತ್ತದೆ. ಶಿಲ್ಪದಲ್ಲಿ ನಾಲ್ಕು ಕೈಗಳಿದ್ದು ಕ್ರಮವಾಗಿ ಮೇಲಿನ ಎರಡು ಬಲಗೈ ಮತ್ತು ಎಡಗೈಗಳಲ್ಲಿ ಚಕ್ರ ಮತ್ತು ಶಂಖ ಹಿಡಿದಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿರುತ್ತವೆ. ದೇವತೆಯು ಕಿರೀಟಮಕುಟ ಧಾರಿಯಾಗಿದ್ದು, ಕಿವಿಯೋಲೆ, ಕಂಠಾಭರಣ, ಹಾರ, ಕುಚ್ಚುಗಳಿರುವ ಕಟಿಬಂಧ, ಉಂಗುರಗಳು, ಕೈಗಡಗ ಮತ್ತು ತೋಳುಬಂಧಿ, ಮುಂತಾದ ಆಭರಣಗಳನ್ನು ಧರಿಸಿರುವನು. ಮೀನಿನ ಬಾಲದ ಭಾಗವನ್ನು ಎಡ ಅಥವಾ ಬಲಬದಿಗೆ ತಿರುಗಿರುವಂತೆ ಹಾಗೂ ಅದನ್ನು ಆಧಾರವಾಗಿರಿಸಿಕೊಂಡು ನಿಂತಿರುವಂತೆ ತೋರಲಾಗುತ್ತದೆ. ಕೆಲವೊಮ್ಮೆ ಬಾಲದ ತುದಿಯು ನೇರವಾಗಿದ್ದು ಅದರ ಮೇಲೆ ನಿಂತಿರುವಂತೆ ತೋರಲಾಗುತ್ತದೆ. ಮೀನಿಗಳಿಗೆ ಇರುವಂತೆ ಎರಡೂ ಪಕ್ಕಗಳಲ್ಲಿ ರೆಕ್ಕೆಗಳನ್ನು (Fin) ಹಾಗೂ ದೇಹದ ಮೇಲಿರುವ ಪೊರೆಗಳನ್ನು (Scale) ಕೆಲವೊಂದು ಶಿಲ್ಪಗಳಲ್ಲಿ ತೋರಲಾಗುತ್ತದೆ.

ಹಂಪಿ ಪರಿಸರದಲ್ಲಿ ಮತ್ಸ್ಯ ಅವತಾರದ ಉಬ್ಬುಶಿಲ್ಪಗಳು ದೊರಕಿವೆ ಆದರೆ ಬಿಡಿ ಶಿಲ್ಪಗಳು ದೊರಕಿಲ್ಲ. ಹಂಪಿಯ ಕೇಂದ್ರ ವಲಯದಲ್ಲಿ ನರಮೃಗ ಮತ್ತು ಪ್ರಾಣಿ ರೂಪದ ಸುಮಾರು 28 ಉಬ್ಬುಶಿಲ್ಪಗಳು ಕಂಡುಬಂದಿವೆ. ಈ 28 ಶಿಲ್ಪಗಳಲ್ಲಿ ನರಮೃಗ ರೂಪದ 22 ಮತ್ತು ಮೃಗರೂಪದ 6 ಉಬ್ಬುಶಿಲ್ಪಗಳಿವೆ. ಇಲ್ಲಿನ ಬಹುಪಾಲು ಶಿಲ್ಪಗಳು ಅಧಿಕವಾಗಿ ವೈಷ್ಣವ ಧರ್ಮಕ್ಕೆ ಸೇರಿದ ದೇವಾಲಯಗಳಲ್ಲಿ ಮತ್ತು ಕಡಿಮೆ ಸಂಖ್ಯೆಯಲ್ಲಿ ಇತರ ಧರ್ಮಕ್ಕೆ ಸೇರಿದ ದೇವಾಲಯಗಳ ಕಂಬಗಳಲ್ಲಿ ತೋರಲಾಗಿದೆ. ಇವುಗಳೊಂದಿಗೆ ಹಂಪಿ ಪರಿಸರದಲ್ಲಿರುವ ದೇವಾಲಯಗಳ ಬಾಗಿಲವಾಡದ ಲತಾಸುರುಳಿ ಅಲಂಕರಣೆ ಮತ್ತು ಇತರೆ ಭಾಗಗಳಲ್ಲಿ ದಶಾವತಾರ ಶಿಲ್ಪಗಳನ್ನು ತೋರುವಾಗ ಮತ್ಸ್ಯವನ್ನು ಕಿರು ಉಬ್ಬುಶಿಲ್ಪವಾಗಿ ತೋರಲಾಗಿದೆ. ಅವುಗಳನ್ನು ಇಲ್ಲಿ ಪರಿಗಣಿಸಿಲ್ಲ. ಪ್ರಧಾನವಾಗಿ ಕಂಡುಬರುವ ಉಬ್ಬುಶಿಲ್ಪಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ.

ಕೋಟಿಲಿಂಗ ಮತ್ತು ಕಮಲಮಹಲದ ಹತ್ತಿರವಿರುವ ನೈಸರ್ಗಿಕ ಕಣಶಿಲೆಯ ಬೆಟ್ಟದಲ್ಲಿರುವ ಒಂದು ಬಂಡೆಯಲ್ಲಿ ದಶಾವತಾರದ ಉಬ್ಬುಶಿಲ್ಪಗಳಿವೆ. ಇದರಲ್ಲಿ ದಶಾವತಾರಗಳನ್ನು ಕ್ರಮವಾಗಿ ಸಾಲಿನಲ್ಲಿ ಕೆತ್ತಲಾಗಿದ್ದು ಮತ್ಸ್ಯಾವತಾರವನ್ನು

ಹಂಪಿ ಪರಿಸರದ ದೇವಾಲಯಗಳಲ್ಲಿರುವ ಮತ್ಸ್ಯ ಶಿಲ್ಪಗಳ ಕೋಷ್ಟ

	ವಿರೂಪಾಕ್ಷ (ಕ್ರಿ.ಶ.9–16ನೇ ಶತಮಾನ)	ಪ್ರಸನ್ನ ವಿರೂಪಾಕ್ಷ (ಕ್ರಿ.ಶ.13–14ನೇ ಶತಮಾನ)	ಹಜಾರ ರಾಮಚಂದ್ರ (ಕ್ರಿ.ಶ.13–14ನೇ ಶತಮಾನ)	ಕೃಷ್ಣ (ಕ್ರಿ.ಶ. 1513)	ವಿಠಲ (ಕ್ರಿ.ಶ. 1422–46)	ಪಟ್ಟಾಭಿರಾಮ (ಕ್ರಿ.ಶ. 1530–40)	ಮಾಲ್ಯವಂತ ರಘುನಾಥ (ಕ್ರಿ.ಶ.1534–42)	ತಿರುವೇಂಗಳನಾಥ (ಅಚ್ಯುತರಾಯ) (ಕ್ರಿ.ಶ.1534)	ಒಟ್ಟು
ನರಮೃಗ ರೂಪದ ಮತ್ಸ್ಯ	1	0	1	2	2	8	7	1	22
ಮೃಗ ರೂಪದ ಮತ್ಸ್ಯ	2	0	0	0	0	1	0	2	5+1

ಮೊದಲನೆಯ ಅವತಾರವಾಗಿ ತೋರಲಾಗಿದೆ.[4] ವಿಷ್ಣುವು ದಶಾವತಾರ ತಾಳಿದ ಅನುಕ್ರಮದಂತೆ ಇಲ್ಲಿ ಕೆತ್ತಲಾಗಿದೆ. ಮತ್ಸ್ಯನು ಮೊದಲನೆಯ ಸ್ಥಾನವನ್ನು ಪಡೆದಿದ್ದಾನೆ. ಈ ಎರಡೂ ಶಿಲಾಫಲಕಗಳು ಕಡಿದಾದ ಕಣಶಿಲೆಯಲ್ಲಿ, ಸುಲಭವಾಗಿ

ತಲುಪಲಾಗದ ಎತ್ತರದ ಸ್ಥಳದಲ್ಲಿ ಕೆತ್ತಿರುವುದರಿಂದ ಅವುಗಳು ಒರಟಾಗಿ ಮೂಡಿದೆ. ಈ ಶಿಲ್ಪವು ಸಮಭಂಗಿಯಲ್ಲಿದ್ದು ನಾಲ್ಕು ಕೈಗಳಿವೆ. ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವಿದ್ದು, ಕೆಳಗಿನ ಎರಡು ಕೈಗಳು ಕ್ರಮವಾಗಿ ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ದೇವತೆಯು ಧೋತಿಯನ್ನು ಧರಿಸಿದ್ದು, ಕಿರೀಟ ಮಕುಟಧಾರಿಯಾಗಿ ಕಂಠದಲ್ಲಿ ಹಾರವನ್ನು ಧರಿಸಿದ್ದಾನೆ. ಶಿಲ್ಪವು ಒರಟಾಗಿ ಇರುವುದರಿಂದ ದೇವತೆಯು ಧರಿಸಿರುವ ಕೈಗಡಗ, ಕಾಲ್ಗಡಗ, ಕರ್ಣಕುಂಡಲ, ಮುಂತಾದ ಆಭರಣಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಕಮಲಮಹಲದ ಹತ್ತಿರವಿರುವ ನೈಸರ್ಗಿಕ ಬಂಡೆಯ ಮೇಲೆ ದಶಾವತಾರ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಇಲ್ಲಿ ತೋರಲಾಗಿರುವ ಮತ್ಸ್ಯಾವತಾರ ಶಿಲ್ಪವು ಮೇಲೆ ವಿವರಿಸಿದ ಕೋಟಿಲಿಂಗದ ಬಳಿಯಿರುವ ಮತ್ಸ್ಯಾವತಾರ ಶಿಲ್ಪವನ್ನು ಹೋಲುತ್ತದೆ. ಇವೆರಡೂ ಉದಾಹರಣೆಗಳಲ್ಲಿ ಶಿಲ್ಪಗಳನ್ನು ಒರಟಾದ ಬಂಡೆಗಲ್ಲಿನ ಮೇಲೆ ಕೆತ್ತಲಾಗಿರುವುದರಿಂದ ಅವುಗಳು ಅಷ್ಟು ನಯವಾಗಿರದೆ, ಒರಟಾಗಿ ಮೂಡಿ ಬಂದಿದೆ. ಆದರೆ ಇವೆರಡೂ ಶಿಲ್ಪ ಸಮೂಹಗಳು ಒಂದೇ ಶೈಲಿ ಮತ್ತು ಸಾಮಾನ್ಯ ಅಂಶಗಳನ್ನು ಹೊಂದಿವೆ.

ವಿರೂಪಾಕ್ಷ ದೇವಾಲಯದ ಪ್ರಾಕಾರ ಗೋಡೆಯನ್ನು ಸುತ್ತುವರಿದ ಆವರಣ ಮಂಟಪದ ಕಂಬದ ಮೇಲೆ ನರಮೃಗ ರೂಪದ ಮತ್ಸ್ಯಾವತಾರ ಉಬ್ಬುಶಿಲ್ಪವೊಂದಿದೆ. ಇದರಲ್ಲಿ ದೇವತೆಯನ್ನು ಅರ್ಧ ಮೃಗ ರೂಪದಲ್ಲಿ ಮತ್ತು ಇನ್ನರ್ಧ ಮನುಷ್ಯನಂತೆ ತೋರಲಾಗಿದೆ. ಸೊಂಟದ ಕೆಳಭಾಗವನ್ನು ಮೃಗರೂಪದಲ್ಲಿ ಪೂರ್ಣ ಮೀನಿನಂತೆ ತೋರಲಾಗಿದೆ. ದೇವತೆಯ ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವಿದೆ. ಕೆಳಗಿನ ಎರಡು ಕೈಗಳು ಕ್ರಮವಾಗಿ ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ಅವನು ಕಿರೀಟಮಕುಟಧಾರಿಯಾಗಿದ್ದು, ಕಿವಿಯೋಲೆ, ಕಂಠಾಭರಣ, ಹಾರ, ಕುಚ್ಚುಗಳಿರುವ ಕಟಿಬಂಧ, ಉಂಗುರಗಳು, ಕೈಗಡಗ ಮತ್ತು ತೋಳುಬಂಧಿ, ಮುಂತಾದ ಆಭರಣಗಳನ್ನು ಧರಿಸಿರುವನು. ಒಂದು ಪೀಠದ ಮೇಲೆ ತನ್ನ ಬಾಲದ ತುದಿಯಲ್ಲಿ ಸಮಭಂಗಿಯಲ್ಲಿ ನಿಂತಿರುವಂತೆ ಕೆತ್ತಲಾಗಿದೆ.

ವಿಠಲ ದೇವಾಲಯದ ಗರ್ಭಗೃಹದ ದಕ್ಷಿಣಕ್ಕೆ ಇರುವ ಮಂಟಪದ ಕಂಬದ ಮೇಲೆ ಮತ್ಸ್ಯಾವತಾರದ ಎರಡು ಉಬ್ಬುಶಿಲ್ಪಗಳಿವೆ. ಇವೆರಡೂ ಶಿಲ್ಪಗಳು ವಿರೂಪಾಕ್ಷ ದೇವಾಲಯದಲ್ಲಿರುವ ಮತ್ಸ್ಯ ಅವತಾರದ ಶಿಲ್ಪವನ್ನು ಹೋಲುತ್ತವೆ. ವಿಠಲ ದೇವಾಲಯದ ಶಿಲ್ಪದ ಕೆಳಗಿನ ಅರ್ಧ ಭಾಗವು ಮತ್ಸ್ಯದಾಗಿದ್ದು (ಮೀನು) ಮೇಲಿನ ಭಾಗವು ಮನುಷ್ಯನದ್ದಾಗಿದೆ. ಶಿಲ್ಪದ ಮೇಲಿನ ಭಾಗದಲ್ಲಿ ದೇವತೆಗೆ ನಾಲ್ಕು ಕೈಗಳಿವೆ. ಮೇಲಿನ ಎರಡು ಕೈಗಳಲ್ಲಿ ಕ್ರಮವಾಗಿ ಬಲ ಮತ್ತು ಎಡಗೈಗಳಲ್ಲಿ ಚಕ್ರ ಮತ್ತು ಶಂಖ ಹಿಡಿದಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿರುತ್ತವೆ. ದೇವತೆಯು ಕಿರೀಟಮಕುಟಧಾರಿಯಾಗಿದ್ದು, ಕಿವಿಯೋಲೆ, ಕಂಠಾಭರಣ, ಹಾರ, ಕುಚ್ಚುಗಳಿರುವ ಕಟಿಬಂಧ, ಉಂಗುರಗಳು, ಕೈಗಡಗ ಮತ್ತು ತೋಳುಬಂಧಿ, ಮುಂತಾದ ಆಭರಣಗಳನ್ನು ಧರಿಸಿರುವನು. ಮೀನಿನ ಅವತಾರದ ದೇವತೆಯು ಪೀಠದ ಮೇಲೆ ಬಾಲದ ತುದಿಯ ಮೇಲೆ ನಿಂತಿರುವನು. ಬಾಲದ ಒಂದು ಭಾಗವು ಎಡ ಭಾಗಕ್ಕೆ ತಿರುಗಿರುವುದು. ಶಿಲ್ಪವನ್ನು ಸುಂದರವಾಗಿ ಕೆತ್ತಲಾಗಿದ್ದು ಮೀನಿನ ಹೊರಮೈನ ವಿವರಗಳನ್ನು ಕೆತ್ತಲಾಗಿದೆ. ದೇವತೆಯ ಹಣೆಯಲ್ಲಿ ವೀರ ರೇಖೆಯನ್ನು ತೋರಲಾಗಿದೆ. ವಿಜಯನಗರಪಟ್ಟಣದಲ್ಲಿರುವ ಬಹುಪಾಲು ಶಿಲ್ಪಗಳಲ್ಲಿ ದೇವತೆಯ ಹಣೆಯಲ್ಲಿ ವೀರರೇಖೆಯನ್ನು ತೋರಲಾಗುತ್ತದೆ.

ಕಮಲಾಪುರದಲ್ಲಿರುವ ಪಟ್ಟಾಭಿರಾಮ ದೇವಾಲಯದಲ್ಲಿರುವ ನೂರ ಕಂಬಗಳ ಮಂಟಪದಲ್ಲಿ ಒಟ್ಟು ಎಂಟು ಮತ್ಸ್ಯಾವತಾರದ ಉಬ್ಬುಶಿಲ್ಪಗಳಿವೆ. ಈ ದೇವಾಲಯದಲ್ಲಿಯೇ ಅಧಿಕ ಸಂಖ್ಯೆಯಲ್ಲಿ ಮತ್ಸ್ಯಾವತಾರ ಶಿಲ್ಪಗಳು ದೊರಕಿವೆ. ಈ ಎಲ್ಲಾ ಉಬ್ಬುಶಿಲ್ಪಗಳು ಮೇಲೆ ವಿವರಿಸಿದ ಲಕ್ಷಣಗಳನ್ನು ಹೊಂದಿದ್ದು ನೋಡಲು ಒಂದೇ ರೀತಿಯಲ್ಲಿವೆ. ಆದರೆ ದೇವತೆಯ ಸೊಂಟದ ಕೆಳಭಾಗವಾದ ಮೃಗರೂಪವನ್ನು ತೋರುವಲ್ಲಿ ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿರುವುದನ್ನು ಕಾಣಬಹುದು. ಒಂದು ಉಬ್ಬುಶಿಲ್ಪದಲ್ಲಿ ಬಾಲದ ಭಾಗವನ್ನು ತೋರಿಲ್ಲ. ಆದರೆ ಮೀನಿನ ಭಾಗವು ದೇವತೆಯು ಧೋತಿಯನ್ನು ಧರಿಸಿರುವಂತೆ ಕೆತ್ತಿರುವುದು ಗಮನಾರ್ಹ. ವಿವಿಧ ರೀತಿಯ ಹೊರ ಮೈನ ಪೊರೆಗಳನ್ನು ಮೀನಿಗಳಲ್ಲಿ ಕಾಣಬಹುದು. ಅವುಗಳಿಂದ ಮೀನುಗಳ ಪ್ರಭೇದಗಳನ್ನು ಗುರುತಿಸಬಹುದಾಗಿದೆ. ಇಲ್ಲಿನ ಒಂದು ಉಬ್ಬುಶಿಲ್ಪದಲ್ಲಿ ದೇವತೆಯ ಸೊಂಟದ ಭಾಗದಲ್ಲಿ ಹೊರಮೈನ ಪೊರೆಗಳನ್ನು ಪ್ರಧಾನವಾಗಿ ತೋರಲಾಗಿರುವುದು ಗಮನಾರ್ಹ.

ಪಟ್ಟಾಭಿರಾಮ ದೇವಾಲಯದ ತರುವಾಯ ಮಾಲ್ಯವಂತ ದೇವಾಲಯದಲ್ಲಿ ಅಧಿಕ ಸಂಖ್ಯೆಯಲ್ಲಿ ಒಟ್ಟು ಏಳು ಮತ್ಸ್ಯಾವತಾರ ವಿಷ್ಣುವಿನ ಉಬ್ಬುಶಿಲ್ಪಗಳಿವೆ. ಕೃಷ್ಣ ದೇವಾಲಯದಲ್ಲಿ ಎರಡು, ಅಚ್ಯುತರಾಯ (ತಿರುವೇಂಗಳನಾಥ) ಮತ್ತು

ಹಜಾರ ರಾಮಚಂದ್ರ ದೇವಾಲಯದಲ್ಲಿ ತಲಾ ಒಂದು ಉಬ್ಬುಶಿಲ್ಪವಿದೆ. ಇವೆಲ್ಲಾ ಉಬ್ಬುಶಿಲ್ಪಗಳು ಒಂದೇ ರೀತಿಯ ಗುಣಲಕ್ಷಣಗಳನ್ನು ಹೊಂದಿದ್ದು ಅವುಗಳಲ್ಲಿ ಮೇಲೆ ವಿವರಿಸಿದ ಸಾಮ್ಯತೆಗಳನ್ನು ಗಮನಿಸಬಹುದು.

ಬಹುಪಾಲು ಉಬ್ಬುಶಿಲ್ಪಗಳು ಒಂದನ್ನು ಮತ್ತೊಂದು ಹೋಲುತ್ತವೆಯಾದರೂ ಕೆಲವು ಸಣ್ಣ ವ್ಯತ್ಯಾಸಗಳನ್ನು ಕೆತ್ತನೆಗಳಲ್ಲಿ ಕಾಣಬಹುದು. ವಿವಿಧ ಶಿಲ್ಪಿಗಳು ಕೆತ್ತನೆ ಕೆಲಸಗಳನ್ನು ಮಾಡಿರುವುದರಿಂದ ಇಂತಹ ವ್ಯತ್ಯಾಸಗಳು ಕಂಡುಬರುತ್ತವೆ. ಮತ್ತೊಂದು ಕಾರಣವೆಂದರೆ, ಕೆತ್ತನೆಯ ಕೆಲಸವನ್ನು ಮಾಡುವ ಶಿಲ್ಪಿಯು ತನ್ನದೇ ಆದ ಶೈಲಿಯನ್ನು ಶಿಲ್ಪಗಳಲ್ಲಿ ಮೂಡಿಸುವುದರಿಂದ ವಿವಿಧ ಶಿಲ್ಪಗಳಲ್ಲಿ ಕೆಲವೊಂದು ವ್ಯತ್ಯಾಸಗಳು ಸಹಜವಾಗಿಯೇ ಮೂಡಿಬರುತ್ತವೆ. ಆದರೆ ಇವೆಲ್ಲಾ ಶಿಲ್ಪಗಳಲ್ಲಿ ವಸ್ತ್ರ, ಆಭರಣ, ಮುಖಭಾವ ಮತ್ತು ಭಂಗಿ ಹಾಗೂ ರಚನಾ ವಿಧಾನಗಳು ಒಂದೇ ರೀತಿಯಲ್ಲಿ ಇವೆ. ದೇವತೆಯ ಮತ್ಸ್ಯ ಭಾಗದ ಬಾಲವನ್ನು ಉದ್ದ, ತ್ರಿಕೋನ ಮತ್ತು ದುಂಡಗೆ ಇದ್ದು ಅವುಗಳಿಗೆ ಬಾಲದ ರೆಕ್ಕೆ (ಟೈಲ್ ಫಿನ್) ಇರುವಂತೆ ಮತ್ತು ಕೆಲವಕ್ಕೆ ಅವುಗಳು ಇಲ್ಲದಂತೆ ತೋರಲಾಗಿದೆ.

ಹಂಪಿಯಲ್ಲಿ ಐದು ಸಂಪೂರ್ಣ ಮೃಗರೂಪದ ಮತ್ಸ್ಯ ಶಿಲ್ಪಗಳು ದೊರಕಿವೆ. ಈ ಮೃಗರೂಪದ ದೇವತೆಯ ಶಿಲ್ಪಗಳು ಸಾಮಾನ್ಯ ಮೀನಿನಂತೆ ತೋರಲಾಗಿದೆ. ಮತ್ಸ್ಯ ಉಬ್ಬುಶಿಲ್ಪಗಳನ್ನು ಸಾಮಾನ್ಯ ಮೀನಿನಂತೆ ತೋರಲಾಗಿದೆ. ಮತ್ಸ್ಯ ಶಿಲ್ಪಗಳು ಉಬ್ಬುಶಿಲ್ಪಗಳಾಗಿದ್ದು, ಮೀನಿನ ದೇಹ, ತಲೆ ಮತ್ತು ಬಾಲವನ್ನು ತೋರಲಾಗಿದೆ.

ವಿರೂಪಾಕ್ಷ ದೇವಾಲಯದಲ್ಲಿ ಮೃಗರೂಪದ ಮತ್ಸ್ಯಾವತಾರ ವಿಷ್ಣುವಿನ ಎರಡು ಮತ್ತು ಪಟ್ಟಾಭಿರಾಮ ದೇವಾಲಯದಲ್ಲಿ ಒಂದು ಉಬ್ಬುಶಿಲ್ಪಗಳಿವೆ. ಅಚ್ಯುತರಾಯ (ತಿರುವೇಂಗಳನಾಥ) ದೇವಾಲಯದಲ್ಲಿ ಎರಡು ಉಬ್ಬುಶಿಲ್ಪಗಳು ಮಹಾಮಂಟಪದ ಕಂಬದಲ್ಲಿವೆ. ಇವೆಲ್ಲಾ ಉಬ್ಬುಶಿಲ್ಪಗಳಲ್ಲಿ ವಿಷ್ಣುವನ್ನು ಮೃಗರೂಪದಲ್ಲಿ ಸಾಮಾನ್ಯ ಮೀನಿಗೆ ಇರುವಂತಹ ದೇಹ, ತಲೆ ಮತ್ತು ಬಾಲದೊಂದಿಗೆ ತೋರಲಾಗಿದೆ. ಈ ಮೀನುಗಳು ವಿಷ್ಣುವಿನ ದಶಾವತಾರ ಉಬ್ಬುಶಿಲ್ಪಗಳನ್ನು ತೋರುವ ಉಪಕ್ರಮ ಮತ್ತು ಸಮೂಹಗಳಲ್ಲಿ ತೋರಲಾಗಿರುವುದರಿಂದ ಮೀನಿನ ಉಬ್ಬುಶಿಲ್ಪವು ಕೇವಲ ಮೃಗವಾಗಿರದೆ, ವಿಷ್ಣುವಿನ ದಶಾವತಾರ ಶಿಲ್ಪವಾಗಿಯೇ ಪರಿಗಣಿಸಬೇಕಾಗುತ್ತದೆ. ಇದರಿಂದ ಶಿಲ್ಪಿಯು ಸಾಮಾನ್ಯ ಮೀನಿಗೂ ಮತ್ತು ವಿಷ್ಣುವಿನ ಅವತಾರಕ್ಕೂ ಇರುವ ವ್ಯತ್ಯಾಸಗಳನ್ನು ತೋರುವಲ್ಲಿ ಯಶಸ್ವಿಯಾಗಿರುವನು. ಹಂಪಿ ಪರಿಸರದಲ್ಲಿ ಮೀನಿನ ಅನೇಕ ಉಬ್ಬುಶಿಲ್ಪಗಳನ್ನು ಸ್ವತಂತ್ರವಾಗಿ ಅಥವಾ ಇತರೆ ಪ್ರಾಣಿಗಳಾದ ಹಾವು, ಆಮೆ, ಮೊಸಳೆ, ಇತ್ಯಾದಿಗಳೊಂದಿಗೆ ದೇವಾಲಯದ ಪ್ರಾಕಾರ ಗೋಡೆ ಮತ್ತು ಕೋಟೆ ಗೋಡೆಗಳಲ್ಲಿ ಕೆತ್ತಲಾಗಿದೆ. ಈ ಉಬ್ಬುಶಿಲ್ಪಗಳನ್ನು ವಿಷ್ಣುವಿನ ಮತ್ಸ್ಯಾವತಾರದ ಶಿಲ್ಪಗಳಾಗಿ ಪರಿಗಣಿಸಲು ಸಾಧ್ಯವಿಲ್ಲ. ಆದರೆ ಯಾವ ಮೀನಿನ ಶಿಲ್ಪವು ವಿಷ್ಣುವಿನ ದಶಾವತಾರ ಉಬ್ಬುಶಿಲ್ಪಗಳ ಸಮೂಹದಲ್ಲಿ ಇರುತ್ತವೆಯೋ ಅವುಗಳನ್ನು ಮಾತ್ರ ಮತ್ಸ್ಯಾವತಾರ ಶಿಲ್ಪವೆಂದು ಪರಿಗಣಿಸಬೇಕು.

ಹಂಪಿ ಪರಿಸರದಲ್ಲಿ ದೊರೆತಿರುವ 28 ಮತ್ಸ್ಯಾವತಾರ ವಿಷ್ಣು ಶಿಲ್ಪಗಳಲ್ಲಿ 22 ನರಮೃಗ ರೂಪ ಮತ್ತು 5 ಮೃಗರೂಪದ್ದಾಗಿವೆ. ಇವುಗಳೆಲ್ಲವೂ ದೇವಾಲಯಗಳ ಕಂಬಗಳ ಮೇಲಿವೆ. ಆದರೆ ಒಂದು ಮೃಗರೂಪದ ಮತ್ಸ್ಯ ಅವತಾರದ ವಿಷ್ಣುವಿನ ಶಿಲ್ಪವನ್ನು ಪೂಜಿಸಲಾಗುತ್ತಿದೆ. ವೆಂಕಟಾಪುರ ವ್ಯಾಪ್ತಿಯಲ್ಲಿರುವ ಮಾಲ್ಯವಂತ ರಘುನಾಥ ದೇವಾಲಯದ ಎದುರು ಇರುವ ಕಣಶಿಲೆಗಳಿಂದ ಕೂಡಿದ ಬೆಟ್ಟವಿದೆ. ಅದರ ಮೇಲ್ಭಾಗದಲ್ಲಿ ಮತ್ಸ್ಯವೆಂಕಟರಮಣ ದೇವಾಲಯವಿದೆ. ಈ ದೇವಾಲಯದಲ್ಲಿ ಕಣಶಿಲೆಯ ಸ್ವಾಭಾವಿಕ ಹುಟ್ಟುಬಂಡೆಯ ಮೇಲೆ ಅಸ್ಪಷ್ಟವಾಗಿ ಕೆತ್ತಿರುವ ಉಬ್ಬುಶಿಲ್ಪವಿದೆ. ಅದನ್ನು ಸ್ಥಳೀಯ ಜನರು ಮತ್ಸ್ಯ ಅವತಾರದ ವೆಂಕಟರಮಣ ಅಥವಾ ವಿಷ್ಣುವೆಂದು ಭಾವಿಸಿ ಪೂಜಿಸುತ್ತಲಿದ್ದಾರೆ. ಬಂಡೆಯ ಮೇಲೆ ತೆಳುವಾದ ಗೆರೆಯನ್ನು ಮೀನಿನ ಆಕಾರದಲ್ಲಿ ಕೊರೆಯಲಾಗಿದೆ. ಮತ್ಸ್ಯಕ್ಕೆ ಅರಿಶಿನದ ಪುಡಿಯ ಮುದ್ದೆಯಿಂದ ಅಥವಾ ಅರಿಶಿನದ ಪುಡಿಯನ್ನು ಲೇಪಿಸಲಾಗುತ್ತದೆ. ಮತ್ಸ್ಯದ ತಲೆಯ ಮುಖ ಭಾಗದಲ್ಲಿ ಕಣ್ಣಿನ ಗುಡ್ಡೆಯನ್ನು ಅಳವಡಿಸಿರುವುದರಿಂದ ಉಬ್ಬುಶಿಲ್ಪವು ನಿಜವಾದ ಮೀನಿನಂತೆ ಕಾಣುತ್ತದೆ. ತಲೆಯ ಭಾಗದಲ್ಲಿ ಕಿರೀಟ ಭಾಗವನ್ನು ಮತ್ತು ದೇಹದ ಭಾಗದಲ್ಲಿಯೂ ಮೀನಿನ ಆಕಾರದ ಕವಚವನ್ನು ಹೊದಿಸಲಾಗುತ್ತದೆ. ಇದರಿಂದ ಉಬ್ಬುಶಿಲ್ಪವು ನೈಜ ಮೀನು ಅಥವಾ ಮತ್ಸ್ಯಾವತಾರ ವಿಷ್ಣುವಿನಂತೆ ಕಾಣುತ್ತದೆ. ಈ ಉಬ್ಬುಶಿಲ್ಪಕ್ಕೆ ತೋರಣವಿರುವ ಗೂಡನ್ನು ಬಂಡೆಗೆ ಹೊಂದಿದಂತೆ ಜೋಡಿಸಿ ನಿರ್ಮಿಸಲಾಗಿದೆ. ಅದರ ಕೆಳಭಾಗದಲ್ಲಿ ಒಂದು ಕಟ್ಟೆಯನ್ನು ನಿರ್ಮಿಸಿ ಅದಕ್ಕೆ ನವೀನ ಟೈಲ್ಸ್‌ಗಳನ್ನು ಅಳವಡಿಸಲಾಗಿದೆ. ಗೂಡಿನ ಇಕ್ಕೆಲಗಳಲ್ಲಿ ಒರಟು ರಚನೆಯ ದ್ವಾರಪಾಲಕರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ಕಟ್ಟೆಯನ್ನು ಪೂಜಾ

ಸಾಮಗ್ರಿಗಳನ್ನು ಇರಿಸಲು ಬಳಸಲಾಗುತ್ತಿದೆ. ಮೂಲ ಉಬ್ಬುಶಿಲ್ಪವನ್ನು ಹೊರತುಪಡಿಸಿ ಉಳಿದ ಭಾಗಗಳನ್ನು ಟೈಲ್ಸ್‌ಗಳಿಂದ ಹೊದಿಸಲಾಗಿದೆ. ಇದರಿಂದ ಮೂಲ ಸ್ವರೂಪ ಮರೆಯಾಗಿದೆ.

ಉಬ್ಬುಶಿಲ್ಪವಿರುವ ಬಂಡೆಗೆ ಹೊಂದಿಕೊಂಡಂತೆ ಗರ್ಭಗೃಹವನ್ನು ರಚಿಸಲಾಗಿದೆ. ಅದರ ಮುಂಭಾಗದಲ್ಲಿ ಇನ್ನೊಂದು ಕೋಣೆಯಿದ್ದು ಅದನ್ನು ಅರ್ಧಮಂಟಪವೆಂದು ಕರೆಯಬಹುದು. ಇದು ಉತ್ತರಾಭಿಮುಖವಾಗಿದೆ. ಈ ಅರ್ಧಮಂಟಪದ ಉತ್ತರ ಗೋಡೆಯಲ್ಲಿ ಚೌಕಾಕಾರದ ಸಣ್ಣ ಕಿಂಡಿಯಿದೆ ಹಾಗೂ ಪೂರ್ವ ಗೋಡೆಯಲ್ಲಿ ಬಾಗಿಲನ್ನು ಅಳವಡಿಸಲಾಗಿದೆ. ಇದರ ಮೂಲಕವೇ ಪ್ರವೇಶ ಪಡೆಯಬೇಕು. ಮುಚ್ಚಿರುವ ಈ ಮಂಟಪದ ಪೂರ್ವಕ್ಕೆ ಸಾದಾ ಅಲಂಕರಣೆಯಿಂದ ಕೂಡಿದ ಸರಳ ಕಂಬಗಳಿರುವ ಆಯತಾಕಾರದ ತೆರೆದ ಪ್ರವೇಶಮಂಟಪವಿದೆ. ಕಂಬಗಳಲ್ಲಿ ಹೆಚ್ಚಿನ ಅಲಂಕರಣೆಗಳಾಗಲಿ ಅಥವಾ ಉಬ್ಬುಶಿಲ್ಪಗಳು ಇರುವುದಿಲ್ಲ.

ಪ್ರವೇಶಮಂಟಪದಲ್ಲಿರುವ ಬಾಗಿಲವಾಡದಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ದೇವಾಲಯವನ್ನು ಈ ತೆರೆದ ಪ್ರವೇಶಮಂಟಪದ ಮೂಲಕ ಪ್ರವೇಶ ಪಡೆಯಬೇಕು. ಮಂಟಪದ ಪ್ರಸ್ತರ ಭಾಗದಲ್ಲಿ ಹಂಸಗಳ ಉಬ್ಬುಶಿಲ್ಪಗಳಿರುವ ಸಾಲು ಇದೆ. ಪ್ರವೇಶಮಂಟಪದ ಈ ಭಾಗವನ್ನು ದೇವಾಲಯದ ಅರ್ಚಕರು ಮತ್ತು ಅವರ ಕುಟುಂಬ ವರ್ಗದವರು ವಾಸದ ಮನೆಯಂತೆ ಉಪಯೋಗಿಸುತ್ತಿದ್ದಾರೆ.

ಉಬ್ಬುಶಿಲ್ಪವಿರುವ ಗರ್ಭಗೃಹ ಮತ್ತು ಬಂಡೆಯ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ ಮೂರು ತಳಗಳ ನಾಗರ ವಿಮಾನವನ್ನು ನಿರ್ಮಿಸಲಾಗಿದೆ. ತಳಗಳಲ್ಲಿ ಶಾಲ ಮತ್ತು ಕೂಟ ಭಾಗಗಳು ಒಳಗೊಂಡಿರುವ ಹಾರ ಭಾಗವಿದೆ. ಅಧಿಷ್ಠಾನ ಮತ್ತು ಭಿತ್ತಿ ಭಾಗಗಳು ಸರಳವಾಗಿವೆ.


ದೇವಾಲಯದ ಪಕ್ಕದಲ್ಲಿ ಇತರೆ ದೇವತೆಗಳಿಗೆ ಕಿರು ಗುಡಿಗಳನ್ನು ನಿರ್ಮಿಸಲಾಗಿದೆ. ಅವುಗಳೆಲ್ಲವೂ ವಿಜಯನಗರೋತ್ತರ ಕಾಲದ ನಿರ್ಮಿತಿಗಳಾಗಿವೆ. ಮತ್ಸ್ಯ ವೆಂಕಟರಮಣ ದೇವಾಲಯವು ಸಹ ವಿಜಯನಗರೋತ್ತರ ಕಾಲಕ್ಕೆ ಸೇರಿದ್ದಾಗಿದ್ದರೆ, ಮತ್ಸ್ಯ ಅವತಾರದ ವಿಷ್ಣುವಿನ ಉಬ್ಬುಶಿಲ್ಪವು ಕ್ರಿ.ಶ. ಸುಮಾರು 14–15ನೇ ಶತಮಾನದ್ದಾಗಿದೆ. ದೇವಾಲಯದ ಮುಂಭಾಗದ ಮಂಟಪ, ಗರ್ಭಗೃಹ, ಅದರ ಮೇಲಿನ ವಿಮಾನದ ಶಿಖರ ಭಾಗ ಮತ್ತು ಇತರೆ ವಾಸ್ತು ನಿರ್ಮಿತಿಗಳು ನಂತರ ಸೇರ್ಪಡೆಗಳಾಗಿವೆ. ಪ್ರಸ್ತುತ ಈ ದೇವಾಲಯದಲ್ಲಿ ಪೂಜೆಗಳು ನಡೆಯುತ್ತಿರುವುದರಿಂದ ಕಾಲಾಕಾಲಕ್ಕೆ ನವೀಕರಣಗಳನ್ನು ಮಾಡಿ ಟೈಲ್ಸ್‌ಗಳನ್ನು ಹೊದಿಸಲಾಗುತ್ತಿದೆ. ಮಂಟಪದ ಭಾಗದಲ್ಲಿಯೂ ಟೈಲ್ಸ್‌ಗಳನ್ನು ಅಳವಡಿಸಲಾಗಿದೆ. ಮೆಟ್ಟಿಲುಗಳಿರುವ ಕಲ್ಲಿನ ಬಾವಿಯು ದೇವಾಲಯದ ಹೊರಭಾಗದಲ್ಲಿ, ಪಶ್ಚಿಮಕ್ಕೆ ಇದೆ. ನಯವಾಗಿ ಕಡಿದ (ಡ್ರೆಸ್ಡ್) ಕಲ್ಲುಗಳನ್ನು ಬಾವಿಯ ಒಳಗೋಡೆಯ ಭಾಗಕ್ಕೆ ಹೊದಿಸಲಾಗಿದೆ. ಕಣಶಿಲೆಯ ಮೆಟ್ಟಿಲುಗಳ ಮೂಲಕ ನೀರಿರುವ ಭಾಗವನ್ನು ತಲುಪಬಹುದು. ಹಂಪಿ ಪರಿಸರದಲ್ಲಿ ಮತ್ಸ್ಯ ಅವತಾರದ ವಿಷ್ಣುವಿಗೆ ನಿರ್ಮಿಸಿದ ಏಕ ಮಾತ್ರ ದೇವಾಲಯ ಇದಾಗಿದೆ.

ವಿಜಯನಗರಪಟ್ಟಣದಲ್ಲಿ (ಹಂಪಿ) ಅಥವಾ ಹಂಪಿ ಪರಿಸರದಲ್ಲಿ ಒಟ್ಟು 28 ಮತ್ಸ್ಯ ಅವತಾರದ ವಿಷ್ಣುವಿನ ಉಬ್ಬುಶಿಲ್ಪಗಳು ದೊರಕಿವೆ. ಎಲ್ಲಾ ಶಿಲ್ಪಗಳು ಉಬ್ಬುಶಿಲ್ಪಗಳಾಗಿದ್ದು, ಯಾವುದೇ ಬಿಡಿ ಶಿಲ್ಪ ದೊರಕಿಲ್ಲ. 22 ನರಮೃಗ ರೂಪದ ಶಿಲ್ಪಗಳು ಮತ್ತು 5 ಮೃಗ ರೂಪದ ಶಿಲ್ಪಗಳು ಇಲ್ಲಿ ದೊರಕಿವೆ. ಒಂದು ಉಬ್ಬುಶಿಲ್ಪವು ಅಸ್ಪಷ್ಟವಾಗಿದ್ದು, ಅದನ್ನು ಸಹ ಮೃಗರೂಪ ಶಿಲ್ಪವೆಂದು ಪರಿಗಣಿಸಲಾಗಿದೆ. ಹಂಪಿ ಪರಿಸರದಲ್ಲಿ ಮೇಲೆ ಉಲ್ಲೇಖಿದ ಸಂಖ್ಯೆಗಿಂತ ಅಧಿಕ ಸಂಖ್ಯೆಯಲ್ಲಿ ಮತ್ಸ್ಯ ಶಿಲ್ಪಗಳಿವೆ. ಆದರೆ ಪ್ರಸ್ತುತ ಲೇಖನದಲ್ಲಿ ಕೇಂದ್ರ ವಲಯದಲ್ಲಿರುವ ಮತ್ಸ್ಯ ಶಿಲ್ಪಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ. ಎಲ್ಲಾ ನರಮೃಗ ಮತ್ತು ಮೃಗರೂಪಿ ಉಬ್ಬುಶಿಲ್ಪಗಳು ಬಹುಪಾಲು ಒಂದೇ ಗುಣಲಕ್ಷಣಗಳು ಮತ್ತು ಶೈಲಿಯನ್ನು ಹೊಂದಿವೆ. ಕೆಲವು ಅಲ್ಪ ಪ್ರಮಾಣದ ವ್ಯತ್ಯಾಸಗಳನ್ನು ಹೊರತುಪಡಿಸಿದರೆ ಎಲ್ಲಾ ಶಿಲ್ಪಗಳು ಒಂದೇ ರೀತಿಯಲ್ಲಿವೆ. ಅನೇಕ ಶಿಲ್ಪಿಗಳು ಕೆತ್ತನೆಯ ಕೆಲಸವನ್ನು ಮಾಡಿರುವುದರಿಂದ ಅಂತಹ ವ್ಯತ್ಯಾಸಗಳು ಶೈಲಿಯಲ್ಲಿ ಕಂಡುಬರುತ್ತವೆ. ಕೂರ್ಮ ಮತ್ತು ವರಾಹ ಅವತಾರಗಳಿಗಿಂತ ಮತ್ಸ್ಯ ಅವತಾರವು ಪ್ರಸಿದ್ಧಿಯಾಗಿರಲಿಲ್ಲ ಮತ್ತು ಪ್ರಚಲಿತವಾಗಿರಲಿಲ್ಲ. ಹಂಪಿ ಪರಿಸರದಲ್ಲಿ ಕೂರ್ಮ ಅವತಾರವು ಅಧಿಕ ಪ್ರಚಲಿತವಾಗಿ 75 ಉಬ್ಬುಶಿಲ್ಪಗಳಿಂದ ಪ್ರಸಿದ್ಧವಾಗಿತ್ತು ಎಂಬುದನ್ನು ಈಗಾಗಲೇ ಗಮನಿಸಲಾಗಿದೆ.[5] ವರಾಹ ಅವತಾರವು ಸಹ ಅಷ್ಟೇ ಪ್ರಸಿದ್ಧವಾಗಿತ್ತೆಂಬುದು ಇಲ್ಲಿ ದೊರಕಿರುವ ಅನೇಕ ಉಬ್ಬುಶಿಲ್ಪ ಮತ್ತು ಬಿಡಿಶಿಲ್ಪಗಳ ಮೂಲಕ ತಿಳಿಯಬಹುದು.[6]


ಅಡಿಟಿಪ್ಪಣಿಗಳು

1. ಗೋಪಿನಾಥರಾವ್, ಟಿ.ಎ, *ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ*, ಸಂ. II, ಪು. 120–127; ಸುರೇಶ್ ಕೆ.ಎಂ., *ಸ್ಕಲ್ಪ್‌ಚರಲ್ ಆರ್ಟ್ ಆಫ್ ಹಂಪಿ*, ಪು. 85–86.
2. ಗೋಪಿನಾಥರಾವ್, ಟಿ.ಎ, *ಪೂರ್ವೋಕ್ತ*, ಸಂ. II, ಪು. 120–127.
3. ವಿಜಯನಗರ ಕಾಲದಲ್ಲಿ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನು ಮಾಡುವ ಸಂದರ್ಭದಲ್ಲಿ ದೇವಾಲಯಗಳಲ್ಲಿ ಅನೇಕ ಹೊಸ ವಾಸ್ತು ಸೇರ್ಪಡೆಗಳನ್ನು ಸೇರಿಸಿರುವರು. ಅವುಗಳಲ್ಲಿ ಮುಖ್ಯವಾಗಿ ರಂಗಮಂಟಪ ಅಥವಾ ಮಹಾಮಂಟಪಗಳು ಪ್ರಮುಖವಾಗಿವೆ. ಅರಸರು, ರಾಣಿಯರು, ಯುವರಾಜ, ಯುವರಾಣಿ, ಸಾಮಂತರು, ಪ್ರತಿಷ್ಠಿತರು, ವರ್ತಕರು ಮತ್ತು ಜನಸಾಮಾನ್ಯರು ಸಹ ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ ಕೆಲಸಗಳನ್ನು ಮಾಡಿರುವರು. ಅಂತಹ ಜೀರ್ಣೋದ್ಧಾರದ ಉದಾಹರಣೆಗಳು ನಮಗೆ ತಮಿಳುನಾಡಿನ ದೇವಾಲಯಗಳಲ್ಲಿ ಕಂಡುಬರುತ್ತವೆ. ಈಗಾಗಲೇ ನಿರ್ಮಿಸಿದ ದೇವಾಲಯಗಳ ವಿಸ್ತರಣಾ ಕಾರ್ಯವನ್ನು ವಿಜಯನಗರ ಅರಸರ ಕಾಲದಲ್ಲಿ ಮಾಡಲಾಯಿತು.
4. ಹಳೇಬೀಡಿನಲ್ಲಿರುವ ಹೊಯ್ಸಳರ ಕಾಲದ ವಿಷ್ಣುವಿನ ದೇವಾಲಯದಲ್ಲಿ ಜಲಸಾಯಿ ವಿಷ್ಣುವಿನ ಕುತೂಹಲಕಾರಿಯಾದ ವಿಷ್ಣುವಿನ ಮೂರ್ತಿಶಿಲ್ಪವಿದೆ. ಇದರಲ್ಲಿ ವಿಷ್ಣುವು ಮಲಗಿರುವಂತೆ ತೋರಲಾಗಿದೆ. ವಿಷ್ಣುವಿನ ಪತ್ನಿ ಲಕ್ಷ್ಮಿಯು ಕಾಲ ಬಳಿಯಲ್ಲಿ ಮತ್ತು ಭೂದೇವಿಯು ತಲೆಯ ಬಳಿ ಕುಳಿತಿರುವಳು. ಸಂಸ್ಕೃತ ಪಠ್ಯಗಳಿಗೆ ಅನುಗುಣವಾಗಿ ಈ ರೀತಿಯಾಗಿ ದೇವಿಯರನ್ನು ತೋರಲಾಗಿದೆ. ಜಲಸಾಯಿಯ ಒಂದು ಕೈ ಕಟಕ ಹಸ್ತದಲ್ಲಿದೆ. ಆಯುಧಗಳನ್ನು ಆಯುಧ ಪುರುಷರುಗಳಾಗಿ (ನರರೂಪದಲ್ಲಿ) ತೋರಿಲ್ಲ. ಆದರೆ ನೈಜ ಆಯುಧಗಳಂತೆಯೇ ತೋರಲಾಗಿದೆ. ವಿಷ್ಣುವಿನ ತಲೆಯ ಬಳಿ ಕಾಲುಗಳನ್ನು ಮಡಚಿ (ಪದ್ಮಾಸನ) ಕುಳಿತಿರುವಂತೆ ಒಂದು ಆಕೃತಿಯಿದೆ; ಇದು ಪ್ರಪಂಚವು ಪ್ರಳಯದಲ್ಲಿ ನಾಶವಾದಾಗಲೂ ಉಳಿದುಬಂದಿರುವ ಚಿರಂಜೀವಿಯಾದ ಮಾರ್ಕಂಡೇಯನ ಶಿಲ್ಪವಾಗಿರಬೇಕು. ರೂಪಮಂಡನದಲ್ಲಿ ಉಲ್ಲೇಖಿತವಾಗಿರುವಂತೆ ಮಲಗಿರುವ ವಿಷ್ಣುವಿನ ಮೇಲಿನ ಭಾಗದಲ್ಲಿ ವಿಷ್ಣುವಿನ ದಶಾವತಾರವನ್ನು ಕೆತ್ತಲಾಗಿದೆ. ಇವುಗಳಲ್ಲಿ ಮತ್ಸ್ಯ ಮತ್ತು ಕೂರ್ಮ ಅವತಾರಗಳನ್ನು ಮೃಗರೂಪದಲ್ಲಿ ತೋರಲಾಗಿದೆ ಮತ್ತು ಬುದ್ಧನನ್ನು ಧ್ಯಾನಿಬುದ್ಧನಾಗಿ ಮತ್ತು ಕಲ್ಕಿಯ ಅವತಾರವನ್ನು ಓರ್ವ ವ್ಯಕ್ತಿಯು (ವಿಷ್ಣು) ಕುದುರೆ ಸವಾರಿ ಮಾಡುತ್ತಿರುವಂತೆ ತೋರಲಾಗಿದೆ. ವಿಷ್ಣುವಿನ ಕಾಲ ಬಳಿಯಿರುವ ಆಕೃತಿಯು ಅಂಜಲಿ ಮುದ್ರೆಯಲ್ಲಿರುವುದರಿಂದ ಅದು ಗರುಡನೆಂಬುದು ಸ್ಪಷ್ಟವಾಗುತ್ತದೆ. ನೋಡಿ ಗೋಪಿನಾಥರಾವ್, ಟಿ.ಎ, *ಪೂರ್ವೋಕ್ತ*, ಸಂ. II, ಪು. 264–268.
5. ಶ್ರೀ ವಿಜಯಶ್ರೀ, ಸಿ.ಎಸ್, 'ಎ ಸ್ಟಡಿ ಆಫ್ ವಿಜಯನಗರ ಪೈಟಿಂಗ್ಸ್ ವಿಥ್ ಸ್ಪೆಷಲ್ ರೆಫರೆನ್ಸ್ ಟು ದಿ ಸೀಲಿಂಗ್ ಪೈಟಿಂಗ್ಸ್ ಅಟ್ ಹಂಪಿ, ಎಂ.ಎ. (ಕಲಾ ಇತಿಹಾಸ) ಪದವಿಗಾಗಿ ನ್ಯಾಷನಲ್ ಮ್ಯೂಸಿಯಂ ಇನ್ಸ್‌ಟಿಟ್ಯೂಟ್ ಆಫ್ ಹಿಸ್ಟರಿ ಆಫ್ ಆರ್ಟ್ಸ್, ಕನ್ಸರ್‌ವೇಷನ್ ಅಂಡ್ ಮ್ಯೂಸಿಯಾಲಜಿ, ನವದೆಹಲಿ, 2014, ಪು. 37–38 ಮತ್ತು ಛಾಯಚಿತ್ರಗಳು
6. ವಾಸುದೇವನ್ ಸಿ.ಎಸ್, 'ಹಂಪಿ ಪರಿಸರದ ಕೂರ್ಮ ಶಿಲ್ಪಗಳು', *ವಿಜಯನಗರ ಅಧ್ಯಯನ*, ಸಂ. 19, ಪು. 152–160.
7. ವಾಸುದೇವನ್ ಸಿ.ಎಸ್, 'ಹಂಪಿ ಪರಿಸರದ ವರಾಹ ಶಿಲ್ಪಗಳು', *ವಿಜಯನಗರ ಅಧ್ಯಯನ*, ಸಂ. 18, ಪು. 126–132.


ಹಂಪಿ ಪರಿಸರದ ಮುಖ್ಯ ಮತ್ಸ್ಯಾವತಾರ ಶಿಲ್ಪಗಳ ಸಂಖ್ಯೆ




ನರಮೃಗ ರೂಪದ ಮತ್ಸ್ಯಾವತಾರ ಶಿಲ್ಪಗಳು



ಮೃಗ ರೂಪದ ಮತ್ಸ್ಯಾವತಾರ ಶಿಲ್ಪಗಳು






ಚಿತ್ರ – 1, ದಶಾವತಾರ ಶಿಲಾಫಲಕ, ಕೋಟಿಲಿಂಗ




ಚಿತ್ರ – 2, ಮತ್ಸ್ಯಾವತಾರ ವಿಷ್ಣು, ದಶಾವತಾರ ಶಿಲಾಫಲಕ, ಕೋಟಿಲಿಂಗ



ಚಿತ್ರ – 3, ಮತ್ಸ್ಯಾವತಾರ ವಿಷ್ಣು, ಪಟ್ಟಾಭಿರಾಮ ದೇವಾಲಯ, ಕಮಲಾಪುರ



ಚಿತ್ರ – 4, ಮತ್ಸ್ಯಾವತಾರ ವಿಷ್ಣು, ಪಟ್ಟಾಭಿರಾಮ ದೇವಾಲಯ, ಕಮಲಾಪುರ



ಚಿತ್ರ – 5, ಮತ್ಸ್ಯಾವತಾರ ವಿಷ್ಣು, ಪಟ್ಟಾಭಿರಾಮ ದೇವಾಲಯ, ಕಮಲಾಪುರ



ಚಿತ್ರ – 6, ಮತ್ಸ್ಯಾವತಾರ ವಿಷ್ಣು, ಪಟ್ಟಾಭಿರಾಮ ದೇವಾಲಯ, ಕಮಲಾಪುರ



ಚಿತ್ರ – 7, ಮತ್ಸ್ಯಾವತಾರ ವಿಷ್ಣು, ವಿಠಲ ದೇವಾಲಯ, ಕಮಲಾಪುರ



ಚಿತ್ರ – 8, ಗುಡ್ಡದ ತಿಮ್ಮಪ್ಪ ದೇವಾಲಯದ ಹೊರ ನೋಟ, ವೆಂಕಟಾಪುರ



ಚಿತ್ರ – 9, ಮತ್ಸ್ಯಾವತಾರ ವಿಷ್ಣು, ಗುಡ್ಡದ ತಿಮ್ಮಪ್ಪ ದೇವಾಲಯ, ವೆಂಕಟಾಪುರ



ಚಿತ್ರ – 11, ಮತ್ಸ್ಯಾವತಾರ ವಿಷ್ಣು, ವಿರೂಪಾಕ್ಷ ದೇವಾಲಯದ ಛತ್ತಿನಲ್ಲಿರುವ ದಶಾವತಾರ ವರ್ಣಚಿತ್ರ, ಹಂಪಿ



ಚಿತ್ರ – 10, ವಿರೂಪಾಕ್ಷ ದೇವಾಲಯದ ಛತ್ತಿನಲ್ಲಿರುವ ದಶಾವತಾರ ವರ್ಣಚಿತ್ರ, ಹಂಪಿ

16. ವಿಜಯನಗರ ಕಾಲದ ಆನೆಗೊಂದಿಯ ಅಪರೂಪದ ಆಯುಧಪುರುಷ ಸುದರ್ಶನಚಕ್ರದ ಶಿಲ್ಪ ಮತ್ತು ಮಂದಿರ

ಡಾ. ಶರಣಬಸಪ್ಪ ಕೋಲ್ಕಾರ ಮತ್ತು ಕುಮಾರಿ ಗೀತಾ ಸಿ.

ಭಾರತೀಯ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ವಿಜಯನಗರ ಸಾಮ್ರಾಜ್ಯದ ಕೊಡುಗೆ ಅನನ್ಯವಾದದ್ದು. ದಾಕ್ಷಿಣಾತ್ಯ ದ್ರಾವಿಡ ಶೈಲಿಯನ್ನು ಅನುಸರಿಸಿ, ಅದನ್ನು ಉನ್ನತೀಕರಿಸಿದ ಹಿರಿಮೆ ವಿಜಯನಗರದ ಸಾಮ್ರಾಟರಿಗೆ ಸಲ್ಲುತ್ತದೆ. ವಿಜಯನಗರದರಸರು ದಾರ್ಮಿಕ ಮತ್ತು ಲೌಕಿಕ ಪ್ರಕಾರಗಳಲ್ಲಿ ಹಲವು ವೈವಿಧ್ಯಮಯ ಸ್ಮಾರಕಗಳನ್ನು ಮತ್ತು ಶಿಲ್ಪಗಳನ್ನು ನಿರ್ಮಿಸಿದ್ದಾರೆ. ಹಂಪಿ–ವಿಜಯನಗರ ಪಟ್ಟಣಗಳಲ್ಲಿ ಅವರ ಎಲ್ಲ ರೀತಿಯ ಸ್ಮಾರಕಗಳನ್ನು ಕಾಣಬಹುದು.

ಹಂಪಿಗೆ ಹೊಂದಿಕೊಂಡಂತೆ ತುಂಗಭದ್ರಾ ನದಿಯ ಎಡತೀರದ ಮೇಲೆ ಇರುವ ಆನೆಗೊಂದಿ, ವಿಜಯನಗರದ ಮಾತೃ ಸ್ಥಾನವಾಗಿತ್ತು. ಕ್ರಿ.ಶ. 1535 ರಲ್ಲಿ ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಾಗ ಆನೆಗೊಂದಿಯೇ ಮೊದಲ ರಾಜಧಾನಿಯಾಗಿತ್ತು. ಮೊದಲ ದೊರೆ ಹರಿಹರ ಆನೆಗೊಂದಿಯಿಂದಲೇ ಆಡಳಿತ ನಡೆಸಿದನು. ಆನೆಗೊಂದಿ ವಿಜಯನಗರ ಪೂರ್ವದಿಂದಲೂ ಬೇರೆ ಬೇರೆ ಅರಸರ ಆಳ್ವಿಕೆಯನ್ನು ಕಂಡಿದೆ. ವಿಜಯನಗರದ ಪತನಾನಂತರ ಅರವೀಡು ಮನೆತನದ ನರಪತಿ ಸಂಸ್ಥಾನ ಆನೆಗೊಂದಿಯಲ್ಲಿ ಅಸ್ತಿತ್ವಕ್ಕೆ ಬಂದು ಕ್ರಿ.ಶ. 1948ರವರೆಗೂ ಅಸ್ತಿತ್ವದಲ್ಲಿತ್ತು. ಈ ಮೂರು ಕಾಲಘಟ್ಟಗಳುದ್ದಕ್ಕೂ ಆನೆಗೊಂದಿಯಲ್ಲಿ ಹಲವು ಸ್ಮಾರಕಗಳು ನಿರ್ಮಾಣವಾಗಿವೆ. ಅವುಗಳನ್ನು ವಿಜಯನಗರ ಪೂರ್ವ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ಸ್ಮಾರಕಗಳು ಎಂದು ಮೂರು ವರ್ಗಗಳಲ್ಲಿ ಗುರುತಿಸಬಹುದು.[1]

ವಿಜಯನಗರ ಪೂರ್ವ ಸ್ಮಾರಕಗಳಲ್ಲಿ ಚಿಂಚಲಕೋಟೆಯ ನಾಗನಾಥ ದೇವಾಲಯ, ಹೊಯ್ಸಳ ಕಾಲದ ಸ್ತಂಭಗಳು, ವಿಜಯನಗರೋತ್ತರ ಸ್ಮಾರಕಗಳಲ್ಲಿ ಗಗನಮಹಲ್, ಕಮಲಮಹಲ್ ಪ್ರಮುಖವಾಗಿವೆ. ವಿಜಯನಗರ ಕಾಲದ ಸ್ಮಾರಕಗಳಲ್ಲಿ ರಂಗನಾಥ ದೇವಾಲಯ, ಗವಿರಂಗನಾಥ, ಚಂದ್ರಮೌಳೇಶ್ವರ, ಸೆರೆಮನೆ ಪ್ರಮುಖವಾಗಿವೆ. ಇವುಗಳ ಜೊತೆಗೆ ವಾಸ್ತು ಹಾಗೂ ಮೂರ್ತಿಶಿಲ್ಪ ದೃಷ್ಟಿಯಿಂದ ತುಂಬಾ ವಿಶಿಷ್ಟವಾದ ಸ್ಮಾರಕ ಮತ್ತು ಶಿಲ್ಪವೆಂದರೆ ಆನೆಗೊಂದಿಯ ಆಯುಧಪುರುಷ ಸುದರ್ಶನಚಕ್ರದ ಶಿಲ್ಪ ಮತ್ತು ಮಂದಿರ.

ಸ್ಥಾನ ನಿರ್ದೇಶನ

ಆಯುಧಪುರುಷ ಸುದರ್ಶನಚಕ್ರ ಮಂದಿರವು ಆನೆಗೊಂದಿ ಗ್ರಾಮದ ಪೂರ್ವ ಬದಿಗೆ ಹರಿಯುತ್ತಿರುವ ತುಂಗಭದ್ರಾ ನದಿಯ ಚಿಕ್ಕ ನಡುಗಡ್ಡೆಯೊಂದರ ಮೇಲೆ ಇದೆ. ಈ ಸ್ಮಾರಕದ ಜೊತೆಗೆ ಇತರ ಕಟ್ಟಡದ ಅವಶೇಷಗಳೂ ಅಲ್ಲಿವೆ. ಧಾರ್ಮಿಕವಾಗಿ ತುಂಬಾ ಪ್ರಸಿದ್ಧಿ ಪಡೆದಿರುವ ನವವೃಂದಾವನ ನಡುಗಡ್ಡೆಗೆ ತೆರಳುವ ನದಿ ಮಾರ್ಗದಿಂದಲೇ ಈ ನಡುಗಡ್ಡೆಗೆ ಬೋಟ್‌ನಲ್ಲಿ ತೆರಳಬಹುದು. 64 ಕಂಬಗಳ ಮಂಟಪ ಈ ಮಂದಿರದ ಹತ್ತಿರದಲ್ಲಿದೆ.

ನಡುಗಡ್ಡೆಯು ಬಹುಮಟ್ಟಿಗೆ ಶಿಲಾಬಂಡೆಯದಾಗಿದ್ದು, ತಕ್ಕಮಟ್ಟಿಗೆ ವಿಸ್ತಾರವಾಗಿದೆ. ಈ ಬಂಡೆಯ ಮೇಲೆ ಸುದರ್ಶನಚಕ್ರ ಶಿಲ್ಪಮಂದಿರ, ಶಿಥಿಲವಾದ ಮಂಟಪ, ಶಿಲಾ ಕೋಣೆಗಳು ಇತರ ಕಟ್ಟಡಗಳ ಅವಶೇಷಗಳಿವೆ. ಇವುಗಳಲ್ಲಿ ಆಯುಧಪುರುಷ ಸುದರ್ಶನಚಕ್ರಶಿಲ್ಪ ಮತ್ತು ಮಂದಿರ ವಿಶಿಷ್ಟ ಸ್ಮಾರಕವಾಗಿದೆ. ಸ್ಥಳೀಯರು ಈ ಮಂದಿರಕ್ಕೆ ಮತ್ತು ಅದರೊಳಗಿನ ಶಿಲ್ಪಕ್ಕೆ ಸೂರ್ಯ ದೇವಾಲಯ ಹಾಗೂ ಶಿಲ್ಪವೆಂದು ಕರೆಯುತ್ತಾರೆ. ಆದರೆ ಪ್ರತಿಮಾಶಿಲ್ಪ ಶಾಸ್ತ್ರಗ್ರಂಥಗಳ ಅನುಲಕ್ಷಿಸಿದಾಗ ಅದು ಸೂರ್ಯನ ಶಿಲ್ಪವಾಗಿರದೇ ಆಯುಧಪುರುಷ ಸುದರ್ಶನಚಕ್ರ ಶಿಲ್ಪವೆಂಬುದಾಗಿ ತಿಳಿದುಬಂತು. ಕರ್ನಾಟಕದಲ್ಲಿ ಬಹುಮಟ್ಟಿಗೆ ಅಪರೂಪವಾಗಿರುವ ಈ ಶಿಲ್ಪದ ಕುರಿತಾದ ವಿವೇಚನೆಯನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಆಯುಧಪುರುಷ ಸುದರ್ಶನಚಕ್ರ ಮಂದಿರ

ಆಯುಧಪುರುಷ ಸುದರ್ಶನಚಕ್ರ ಮಂದಿರದ ತಲವಿನ್ಯಾಸ, ಊರ್ಧ್ವವಿನ್ಯಾಸ ವಿಶಿಷ್ಟವಾಗಿದೆ. ಇದು ಸಾಂಪ್ರದಾಯಿಕ ದೇವಾಲಯದ ಸ್ವರೂಪದಲ್ಲಿರದೆ ಮುಚ್ಚಿದ ಮಂಟಪವಾಗಿದೆ. ಬಿಳಿಕಣಶಿಲೆಯ ಈ ಮಂಟಪ ಆಯತಾಕಾರದ ತಲವಿನ್ಯಾಸ ಹೊಂದಿದೆ. ಮಂಟಪ ಪೂರ್ವಾಭಿಮುಖವಾಗಿದ್ದು ಮುಂಭಾಗದಲ್ಲಿ ತೆರೆದ ಮುಖಮಂಟಪವಿದ್ದಿತು. ಆದರೆ ಈಗ ಅದು

ನಾಶವಾಗಿದೆ. ಅದರ ಎರಡು ಕಂಬಗಳನ್ನು ಬಂಡೆಯ ಮೇಲೆ ಕೂಡಿಸಿದ ಕುಳಿಗಳು ಮುಖಮಂಟಪ ಇದ್ದ ಬಗ್ಗೆ ಸೂಚಿಸುತ್ತವೆ.

ಮಂಟಪವು 15.93 ಅಡಿ ಅಗಲ ಹಾಗೂ 8.84 ಅಡಿ ಅಗಲದ ವಿಸ್ತಾರವನ್ನು 8.65 ಅಡಿ ಎತ್ತರವಾಗಿದೆ. ಮಧ್ಯದಲ್ಲಿ ಕಂಬಗಳು ಇರದೆ ಸುತ್ತಲ ಗೋಡೆಯೊಳಗೆ ಸಂಯೋಜಿತವಾಗಿರುವ ಒಟ್ಟು ಹತ್ತು ಕಂಬಗಳಿವೆ. ನಾಲ್ಕು ಮೂಲೆಗಂಬಗಳು ಮತ್ತು ಇವುಗಳಿಗೆ ಲಂಬವಾಗಿ ಮಧ್ಯದಲ್ಲಿ ಎರಡು, ಅಡ್ಡಲಾಗಿ ಒಂದೊಂದು ಕಂಬಗಳಿವೆ. ನಾಲ್ಕು ಮೂಲೆಗಂಬಗಳು ಆಕರ್ಷಕವಾಗಿದ್ದು, ಅವು ಹೊರಬಂದಿಯಲ್ಲಿ ಭಿತ್ತಿಯಿಂದ ಹೊರಗೆ ಗೋಚರಿಸುತ್ತವೆ. ಇದರಿಂದಾಗಿ ಅವು ಮಂಟಪದ ಸೌಂದರ್ಯವನ್ನು ಹೆಚ್ಚಿಸಿವೆ. ಕಂಬಗಳ ನಡುವೆ ನುಣುಪುಗೊಳಿಸಿದ ಶಿಲಾ ಹಲಗೆಗಳನ್ನು ಜೋಡಿಸಿ ಭಿತ್ತಿಯನ್ನು ನಿರ್ಮಿಸಲಾಗಿದೆ. ಈ ಶಿಲಾ ಹಲಗೆಗಳಲ್ಲಿ ನೈರುತ್ಯ ಹಾಗೂ ಈಶಾನ್ಯ ಮೂಲೆಗಳ ಹಲಗೆಗಳು ಕಿತ್ತುಹೋಗಿವೆ.

ಅಧಿಷ್ಠಾನವು 28 ಇಂಚು ಎತ್ತರವಿದ್ದು, ಉಪಾನಗಳನ್ನು ಹೊಂದಿದ್ದು, ಆಕರ್ಷಕವಾಗಿದೆ. ಭಿತ್ತಿಯು ಮಟ್ಟಸಗೊಳಿಸಿದ ಶಿಲಾ ಹಲಗೆಗಳಿಂದ ನಿರ್ಮಿಸಿರುವುದರಿಂದ ಯಾವುದೇ ಅಲಂಕರಣೆಯನ್ನು ಹೊಂದಿರುವುದಿಲ್ಲ. ಆದರೆ ಭಿತ್ತಿಯಿಂದ ಹೊರಗೆ ಗೋಚರಿಸುವ ಕಂಬಗಳು, ಕಾಂಡ, ಫಲಕ, ಬೋದುಗೆಗಳನ್ನು ಹೊಂದಿವೆ. ಈ ಕಂಬಗಳ ಮೇಲೆಲ್ಲಾ ಆಕರ್ಷಕವಾಗಿ ಬಳ್ಳಿಗಳ ಕೆತ್ತನೆಗಳಿವೆ. ಈ ರೀತಿಯ ಕಂಬಗಳು ಅಪರೂಪವೆನಿಸುತ್ತವೆ. ಬೋದಿಗೆಗಳನ್ನು ಕಂಬಗಳಲ್ಲಿಯೇ ಕೆತ್ತಲಾಗಿದೆ. ಭಿತ್ತಿಂದ ಸುತ್ತಲೂ ಮುಂಚಾಚಿರುವ ಕಪೋತ ಸು. 9 ಇಂಚು ದಪ್ಪವಾಗಿದ್ದು, ಅದರಲ್ಲಿ ಅಲ್ಲಲ್ಲಿ ಚೈತ್ಯಾಕೃತಿಗಳ ಅಲಂಕರಣೆಗಳಿವೆ.

ಇಡೀ ಆಯತಾಕಾರದ ಕಟ್ಟಡದ ಉದ್ದಗಲಕ್ಕೆ ವ್ಯಾಪಿಸಿರುವ ಕಡಿಮೆ ಎತ್ತರದ ಮೂರು ತಲಗಳ ಶಿಖರವಿದೆ. ಹಲ್ಲಿನ ಮಾದರಿಯ ಸಾಲುಗಳಿದ್ದು, ಕದಂಬ/ಪಾಂಸನ ಶೈಲಿಯ ಶಿಖರವನ್ನು ನೆನಪಿಸುತ್ತದೆ. ಪ್ರತಿ ತಲದ ನಾಲ್ಕು ಮೂಲೆಗಳು ಎಲೆಯಾಕಾರದಲ್ಲಿ ಮೇಲಕ್ಕೆ ಚೂಪಾಗಿವೆ. ಶಿಖರದ ತುದಿಯೂ ಕೂಡಾ ಆಯತಾಕಾರದಲ್ಲಿದ್ದು, ಮೇಲೆ ಸ್ತೂಫಿ ಇರುವುದಿಲ್ಲ.

ಬಾಗಿಲು 1 ಅಡಿ 56 ಸೆಂ.ಮೀ. ಅಗಲ, 3 ಅಡಿ 12 ಸೆಂ.ಮೀ. ಎತ್ತರವಿದೆ. ಬಾಗಿಲ ಎಡಬದಿಯ ತೋಳು (ಪಟ್ಟಿಕೆ) ನಾಶವಾಗಿದೆ. ಎಡಬದಿಯ ಪಟ್ಟಿಯಲ್ಲಿ ಐದು ಶಾಖಗಳಿವೆ. ಮೇಲೆ ತಿರುವಿದ ಎಲೆಯಾಕೃತಿಗಳು, ಲತಾಖಾಖೆ, ವಜ್ರಶಾಖೆ, ಮೇಲ್ಮುಖ ಎಲೆಯಾಕೃತಿಗಳು, ಇವೆ. ಈ ಲತೆಗಳು ಕೆಳಭಾಗದಲ್ಲಿ ಮಕರದ ಬಾಯಿಯಿಂದ ಹೊರಟಿರುವುದು ವಿಶೇಷ. ಬಾಗಿಲ ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರ ಆಕರ್ಷಕವಾದ ಶಿಲ್ಪಗಳಿವೆ. ಚತುರ್ಭುಜರಾದ ಇವರ ಹಿಂದಿನ ಕೈಗಳಲ್ಲಿ ಶಂಖ, ಚಕ್ರಗಳಿದ್ದರೆ ಮುಂದಿನ ಬಲಗೈ ಎಡಭಾಗದಲ್ಲಿಯ ಗದೆಯ ಮೇಲೆ ಇದೆ. ಎಡಗೈ ಅಭಯ ಮುದ್ರೆಯಲ್ಲಿದೆ. ಕಾಲುಗಳನ್ನು ಪರಸ್ಪರ ವಕ್ರವಾಗಿಸಿ ನಿಂತಭಂಗಿಯಲ್ಲಿದೆ. ಲಲಾಟಬಿಂಬದಲ್ಲಿ ಆಸೀನನಾದ ಗಣೇಶನ ಶಿಲ್ಪವಿದೆ. ಬಾಗಿಲ ಹೊಸ್ತಿಲ ಮಧ್ಯ ಮುಂಬದಿಯಲ್ಲಿ ಕುಳಿತ ಸಿಂಹದ ಶಿಲ್ಪವಿರುವುದು ಗಮನಾರ್ಹ.

ದೇವಾಲಯದ ಛತ್ತು ಸುತ್ತಲೂ ಮಟ್ಟಸವಾಗಿದ್ದು ಮಧ್ಯದಲ್ಲಿ ಅರೆವೃತ್ತಾಕಾರದಲ್ಲಿ ಪೊಳ್ಳಾದ ಆಕರ್ಷಕವಾದ ಭುವನೇಶ್ವರಿ ಇದೆ. ಮಧ್ಯದಲ್ಲಿ ಕಮಲದ ದೊಡ್ಡ ಮೊಗ್ಗು ಇದೆ. ಇಡೀ ಛತ್ತು ಒಂದೇ ಅಖಂಡ ಶಿಲೆಯಾಗಿರುವುದು ವಿಶೇಷ.

ಆಯುಧಪುರುಷ ಸುದರ್ಶನಚಕ್ರ ಶಿಲ್ಪ

ಮಂದಿರದ ಒಳಗೆ ಅಪರೂಪದ ಆಯುಧಪುರುಷ ಸುದರ್ಶನಚಕ್ರ ಶಿಲ್ಪ ಫಲಕವಿದೆ. ಕಂದುಬಣ್ಣದ ಅಗ್ನಿ ಶಿಲೆಯ (Black Basalt) ಈ ಶಿಲ್ಪ 3 ಅಡಿ 73 ಸೆಂ.ಮೀ. ಅಗಲ ಹಾಗೂ 3 ಅಡಿ ಎತ್ತರ ವ್ಯಾಸದ ಅಳತೆಯನ್ನು ಹೊಂದಿದೆ. ಈ ಶಿಲ್ಪವನ್ನು ಯಾವುದೇ ಪೀಠದ ಮೇಲಿರಿಸದೆ ನೇರವಾಗಿ ನೆಲದಲ್ಲಿ ಕೂಡಿಸಲಾಗಿದೆ. ವೃತ್ತಾಕಾರದ ಸುದರ್ಶನ ಚಕ್ರದ ಮಧ್ಯ ಆಯುಧಪುರುಷನ ಸಮಭಂಗಿಯ ಶಿಲ್ಪವಿದೆ. ಈತನು. ಹದಿನಾರು ಕೈಗಳನ್ನು ಹೊಂದಿದ್ದು, ಮೊದಲ ಕೈಗಳು ಬದ್ಧ ಅಂಜಲಿ ಮುದ್ರೆಯಲ್ಲಿವೆ. ಉಳಿದಂತೆ ಪರಸ್ಪರ ಎರಡೂ ಬದಿಗೆ ಕ್ರಮವಾಗಿ ಶಂಖ-ಚಕ್ರ, ಬಿಲ್ಲು-ಬಾಣ, ಪಾಶ-ಪರಶು, ಗದೆ-ತ್ರಿಶೂಲ, ಕಮಲ-ಗದೆ, ಗುರಾಣಿ-ಖಡ್ಗ ಮತ್ತು ಅಂಕುಶ-ಕತ್ತಿಗಳಿವೆ.

ತಲೆಯ ಮೇಲೆ ಕಿರೀಟಮುಕುಟ, ಭುಜಹಾರ, ಕೊರಳಲ್ಲಿ ಸರ, ಮುಂಗೈ ಕಡಗ, ಸೊಂಟದ ಹಾರಗಳು, ಕೌಸ್ತುಭ ಹಾರ, ಕಾಲ್ಗಡಗ, ಪಾದಸರ ಮುಂತಾದ ಆಭರಣಗಳಿವೆ. ಸುತ್ತಲು ಪ್ರಭಾವಳಿಯಲ್ಲಿ ತಲೆಯ ಮೇಲೆ ಕೀರ್ತಿಮುಖವಿದ್ದರೆ, ಸುತ್ತಲೂ ಒಟ್ಟು ಹದಿನೈದು ಜ್ವಾಲೆಯ ರೀತಿಯ ಕೆತ್ತನೆಗಳಿವೆ. ಇದರಿಂದ ಇದು ವೃತ್ತಾಕಾರದ ಆಯುಧಪುರುಷ ಸುದರ್ಶನ ಚಕ್ರವಾಗಿದೆ.[2]

ಸುದರ್ಶನ ಚಕ್ರವು ವಿಷ್ಣುವಿನ ಒಂದು ಆಯುಧ. ತನ್ನ ಚತುರ್ಭಾವುಗಳಲ್ಲಿ ಶಂಖ, ಗದ ಮತ್ತು ಪದ್ಮದ ಜೊತೆಗೆ ಬಲ ಮೇಲಿನ ಕೈಯ ತೋರುಬೆರಳಿನಲ್ಲಿ ಧರಿಸಿರುತ್ತಾನೆ. ಸುದರ್ಶನ ಚಕ್ರದ ಸೃಷ್ಟಿಯ ಬಗೆಗೆ ಬೇರೆ ಬೇರೆ ಮಾಹಿತಿಗಳಿವೆ. ಅದು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಸಂಯುಕ್ತ ಶಕ್ತಿಯಿಂದ ಹುಟ್ಟಿದ್ದೆಂದು, ತನ್ನ ಆರಾಧನೆಯಿಂದ ಸಂಪ್ರೀತನಾದ ಶಿವನು ವಿಷ್ಣುವಿಗೆ ಅನುಗ್ರಹಿಸಿದ್ದೆಂದು, ದೇವತೆಗಳ ಗುರುವಾದ ಬೃಹಸ್ಪತಿಯು ವಿಷ್ಣುವಿಗೆ ನೀಡಿದ್ದೆಂದು ಪುರಾಣಗಳಲ್ಲಿ ಹೇಳಲಾಗಿದೆ.

ಅಪರಿಮಿತ ಶಕ್ತಿಯನ್ನು ಹೊಂದಿರುವ ಸುದರ್ಶನ ಚಕ್ರವನ್ನು ಶತ್ರುವಿನ ಅಂತಿಮ ಸಂಹಾರಕ್ಕಾಗಿ ಮಾತ್ರ ಉಪಯೋಗಿಸುವಂತಹದು. ಒಮ್ಮೆ ಇದನ್ನು ಪ್ರಯೋಗಿಸಿದರೆ ಇದು ಶತ್ರುವನ್ನು ಸಂಹರಿಸಿ ಪುನಃ ಹಿಂದಿರುಗಿ ಬರುತ್ತಿತ್ತು. ಇದನ್ನು ದೂರ್ವಾಸಮುನಿ, ಬ್ರಹ್ಮ ಮತ್ತು ಶಿವನಿಗೆ ಮಾತ್ರವಲ್ಲದೆ ಬೇರೆ ಯಾರಿಂದಲೂ ತಡೆಯಲು ಸಾಧ್ಯವಿರಲಿಲ್ಲ.

ಕೃಷ್ಣನ ಅವತಾರವಾದಾಗ ವಿಷ್ಣು ಆತನಿಗೆ ಸುದರ್ಶನ ಚಕ್ರವನ್ನು ನೀಡುತ್ತಾನೆ. ಕೃಷ್ಣನು ಅದನ್ನು ತನ್ನ ಕಿರುಬೆರಳಿನಲ್ಲಿ ಹಿಡಿದುಕೊಂಡನು. ಅವನು ಗೋವರ್ಧನ ಗಿರಿಯನ್ನು ಎತ್ತಿ ಹಿಡಿದಾಗ ಅದರ ಕೆಳಗೆ ಆಧಾರಕ್ಕಾಗಿ ಸುದರ್ಶನ ಚಕ್ರವನ್ನು ಹಿಡಿದಿದ್ದನು. ಮತ್ತು ಶಿಶುಪಾಲನನ್ನು ಈ ಚಕ್ರದಿಂದಲೇ ಸಂಹರಿಸುತ್ತಾನೆ.[3]

ಹೀಗೆ ವಿಶಿಷ್ಟ ಹಿನ್ನಲೆ ಹೊಂದಿರುವ ಸುದರ್ಶನ ಚಕ್ರವನ್ನು ವಿಷ್ಣುವಿನ ವಿವಿಧ ಅವತಾರಗಳೊಂದಿಗೆ ಆತನ ಕೈಯಲ್ಲಿಯ ಆಯುಧವಾಗಿ ಚಿತ್ರಿಸುತ್ತಾ ಬರಲಾಗಿದ್ದರೂ ದಕ್ಷಿಣ ಭಾರತದ ಕೆಲವು ದೇವಾಲಯಗಳಲ್ಲಿ ಸುದರ್ಶನ ಚಕ್ರವನ್ನು ಆಯುಧಪುರುಷ ರೂಪದಲ್ಲಿ ಸ್ವತಂತ್ರ ಗುಡಿಗಳಲ್ಲಿರಿಸಿ ಪೂಜೆ ಸಲ್ಲಿಸುವ ಪರಂಪರೆ ಇದೆ.

ಇಂತಹ ಕೆಲವು ದೇವಾಲಯಗಳೆಂದರೆ, ನಾಗಮಂಗಲದ ಸುದರ್ಶನ ಭಗವಾನ್ ದೇವಾಲಯ, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ಸುದರ್ಶನಗುಡಿ, ನಂಜನಗೂಡಿನ ನಂಜುಂಡೇಶ್ವರ ದೇವಾಲಯ, ಕುಂಭಕೋಣಂನ ಚಕ್ರಪಾಣಿ ದೇವಾಲಯ, ಮಧುರೈನ ತಿರುಮೊಗುರ್ ದೇವಾಲಯ, ಶ್ರೀರಂಗಂನ ಚಕ್ರತಲವಾರ್ ದೇವಾಲಯ, ತುರವೂರ್ ದೇವಾಲಯ, ಅಂಜುಮೂರ್ತಿ ಮಂಗಲಂ ದೇವಾಲಯ ಇವುಗಳಲ್ಲಿ ಸುದರ್ಶನ ಚಕ್ರದ ಶಿಲ್ಪಗಳಿವೆ.[4] ಹಂಪಿಯ ಯಂತ್ರೋದ್ಧಾರಕ ಆಂಜನೇಯ ಬಳಿಯ ಚಿಕ್ಕಗುಡಿಯಲ್ಲಿ ಆಯುಧಪುರುಷ ಸುದರ್ಶನಚಕ್ರ ಶಿಲ್ಪವಿದೆ.[5]

ಈ ಎಲ್ಲಾ ಶಿಲ್ಪಗಳ ಹಿನ್ನೆಲೆಯಲ್ಲಿ ಮತ್ತು ಪ್ರಸ್ತುತ ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಅನುಲಕ್ಷಿಸಿ ಇದು ಸ್ಥಳೀಯರು ನಂಬಿದಂತೆ ಸೂರ್ಯನಾರಾಯಣನ ಶಿಲ್ಪವಲ್ಲವೆಂದು ಮತ್ತು ಮೂರ್ತಿಶಿಲ್ಪ ಕ್ಷೇತ್ರದಲ್ಲಿ ಅಪರೂಪವಾಗಿ ಕಾಣಿಸಿಕೊಳ್ಳುವ ಆಯುಧಪುರುಷ ಸುದರ್ಶನಚಕ್ರ ಶಿಲ್ಪವೆಂದೇ ಖಚಿತವಾಗಿ ನಿರ್ಧರಿಸಬಹುದು.

ಇತರ ಸ್ಮಾರಕಗಳು

ಆಯುಧಪುರುಷ ಸುದರ್ಶನಚಕ್ರ ಮಂದಿರದ ಬಳಿಯಲ್ಲಿ ಇಂತಹದೇ ಇನ್ನೊಂದು ಆಕರ್ಷಕವಾದ ಮಂದಿರವಿದ್ದಿತು. ಆದರೆ ಅದು ಇಂದು ಬಿದ್ದುಹೋಗಿದೆ. ಅದರ ಸುಂದರವಾದ ಛತ್ತು ವಿಶಿಷ್ಟ ವಿನ್ಯಾಸದ ತುಂಡಾದ ಕಂಬಗಳು ಅಲ್ಲಲ್ಲಿ ಬಿದ್ದಿವೆ. ಈ ಕಂಬಗಳ ವಿನ್ಯಾಸ ಅವುಗಳ ಮೇಲಿನ ಉಬ್ಬುಶಿಲ್ಪಗಳು ಮನಮೋಹಕವಾಗಿವೆ. ಉಳಿದಂತೆ ನಾಲ್ಕು ಕಾಲುಗಳ (ನೈಸರ್ಗಿಕ ಕಲ್ಲು) ಮೇಲೆ ನಿಲ್ಲಿಸಿರುವ ಬೃಹತ್ ಬಂಡೆಯೊಂದು ಇಲ್ಲಿದ್ದು, ಕುತೂಹಲ ಮೂಡಿಸುತ್ತದೆ. ಅದೇ ರೀತಿ ಶಿಲಾ ಹಲಗೆಗಳಿಂದ ನಿರ್ಮಿಸಿರುವ, ಅಲ್ಲಲ್ಲಿ ಶಿಥಿಲವಾಗಿರುವ ಕಟ್ಟಡವೊಂದು ಇಲ್ಲಿದೆ. ಪ್ರಾಯಶಃ ಸ್ನಾನದ ಮನೆಗಳೆಂದು ತೋರುತ್ತದೆ.

ಕಾಲಮಾನ

ಸ್ಮಾರಕದ ಕಂಬಗಳು, ಅವುಗಳ ಮೇಲಿನ ಬಳ್ಳಿಗಳ ಸೂಕ್ಷ್ಮರೀತಿಯ ಕೆತ್ತನೆ, ಭುವನೇಶ್ವರಿ, ಇಲ್ಲಿರುವ ಇನ್ನೊಂದು ಶಿಥಿಲ ಸ್ಮಾರಕದ ಕಂಬಗಳ ಮೇಲಿನ ಉಬ್ಬುಶಿಲ್ಪಗಳ ಕೆತ್ತನೆ, ವಿನ್ಯಾಸ, ಸ್ಪಷ್ಟತೆಗಳನ್ನು ಅನುಲಕ್ಷಿಸಿ ಇದು ವಿಜಯನಗರ ಪ್ರಬುದ್ಧ ಕಾಲದ ಪ್ರಾಯಶಃ ಕೃಷ್ಣದೇವರಾಯನ ಕಾಲದ ನಿರ್ಮಾಣವೆಂದು (ಕ್ರಿ.ಶ. 1510–30) ಅಭಿಪ್ರಾಯಪಡಬಹುದು.

ಸಮಾರೋಪ

ವಿಜಯನಗರದ ಮಾತೃಸ್ಥಾನವಾಗಿರುವ ಆನೆಗೊಂದಿಯು ವಿಜಯನಗರಪೂರ್ವ, ವಿಜಯನಗರ, ವಿಜಯನಗರೋತ್ತರ ಹತ್ತು ಹಲವಾರು ಸ್ಮಾರಕಗಳು ಮತ್ತು ಶಿಲ್ಪಗಳನ್ನು ಹೊಂದಿದ್ದು ಕರ್ನಾಟಕದ ಇತಿಹಾಸದಲ್ಲಿ ಮಹತ್ವದ ಸಾಂಸ್ಕೃತಿಕ ನೆಲೆ ಎನಿಸಿದೆ. ಇಲ್ಲಿರುವ ಹಲವಾರು ಶಿಲ್ಪಗಳಲ್ಲಿ ತುಂಬಾ ಮಹತ್ವವಾದುದು. ಆಯುಧಪುರುಷ ಸುದರ್ಶನಚಕ್ರ ಶಿಲ್ಪ ಹಾಗೂ ಅದನ್ನು ಒಳಗೊಂಡಿರುವ ಮಂದಿರ. ಹಂಪಿ ಸಹಿತ ಆನೆಗೊಂದಿಯ ಸ್ಮಾರಕಗಳಲ್ಲಿ ತನ್ನ ಸರಳ ಮತ್ತು ವಿಶಿಷ್ಟ ವಾಸ್ತುಲಕ್ಷಣಗಳಿಂದ ಗಮನ ಸೆಳೆಯುವ ಪ್ರಸ್ತುತ ಮಂದಿರವು ಆಯತಾಕಾರ ವಿನ್ಯಾಸದಲ್ಲಿರುವುದು ಏಕಶಿಲೆಯ ಅರೆ ಗುಮ್ಮಟಾಕಾರದ ಭುವನೇಶ್ವರಿಯನ್ನು ಹೊಂದಿರುವ ಛತ್ತು, ಎತ್ತರವಲ್ಲದ ಕದಂಬನಾಗರ ಶೈಲಿಯನ್ನು ಭಾಗಶಃ ಹೋಲುವ ಶಿಖರ, ಭುವನೇಶ್ವರಿ ಹಾಗೂ ಶಿಖರ ಒಂದೇ ಶಿಲೆಯಲ್ಲಿರುವುದು ಈ ಮಂದಿರದ ವೈಶಿಷ್ಟ್ಯಗಳಾಗಿವೆ. ಅದೇ ರೀತಿ ಆಕರ್ಷಕ ಕೆತ್ತನೆಯ ಕಂಬಗಳು, ಮಕರ ತೋರಣದ ಲತಾಶಾಖೆಗಳು ಹೊಸ್ತಿನಲ್ಲಿ ಸಿಂಹಸಹಿತ ಬಾಗಿಲು ಈ ಮಂದಿರದ ಇತರ ವಾಸ್ತುವಿಶೇಷಗಳು. ಅದೇ ರೀತಿ ಒಳಗಡೆ ಇರುವ ಆಯುಧಪುರುಷ ಸುದರ್ಶನಚಕ್ರ ಶಿಲ್ಪವು ಕೂಡಾ ಹಂಪಿ-ಆನೆಗೊಂದಿಯಲ್ಲಿ ಎರಡನೆಯದಾಗಿ ಆನೆಗೊಂದಿಯಲ್ಲಿ ಮೊದಲನೆಯದಾಗಿ ಕಾಣಿಸಿಕೊಳ್ಳುವುದರ ಮೂಲಕ ತನ್ನ ಅಪರೂಪತೆಯನ್ನು ನಿದರ್ಶಿಸುತ್ತದೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಇದೊಂದು ಅಪರೂಪದ ಶಿಲ್ಪವೆಂದು ಗುರುತಿಸಬಹುದು. ಪ್ರಾಯಶಃ ಕರ್ನಾಟಕದ ಮೂರ್ತಿಶಿಲ್ಪ ಕ್ಷೇತ್ರದಲ್ಲಿ ಈ ರೀತಿಯ ಶಿಲ್ಪ ಐದನೆಯ ಬಾರಿಗೆ ಕಾಣಿಸಿಕೊಳ್ಳುತ್ತದೆ. ಹಾಗಾಗಿ ಕರ್ನಾಟಕದ ಮೂರ್ತಿಶಿಲ್ಪ ಕ್ಷೇತ್ರಕ್ಕೆ ಇದು ವಿಜಯನಗರದ ವಿಶಿಷ್ಟ ಕೊಡುಗೆ ಎನ್ನಬಹುದು.

ಆಕರಗಳು

1. ಡಾ. ಶರಣಬಸಪ್ಪ ಕೋಲ್ಕಾರ, 2013, ವಿಜಯನಗರ ಮಾತೃಸ್ಥಾನ ಆನೆಗೊಂದಿ, ಬಸವ ಪ್ರಕಾಶನ ಗುಲಬರ್ಗಾ.
2. ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ.
3. Hindu Janajagruti Samiti, "How did Lord Krishna acquire Sudarshana Chakra", pp. 1-9, article published at Internet. (www.hindujagruti.org)
4. 'Sudarshana Chakra', article from Wikipedia, The free Encylopedia, pp. 1-4
5. Anil Vargees 1995, 'Rare image of Sudarshana Chakra at Hampi', M.S. Nagarajrao Felicitation volume. p. 494.





17. ಹಂಪಿ ಪರಿಸರದ ವೀರಭದ್ರನ ಶಿಲ್ಪಗಳು

ಡಾ. ಎನ್.ಎಸ್. ವೀರೇಶ ಉತ್ತಂಗಿ

'ಹಂಪಿ' ಸಂಸ್ಕೃತಿ ಮತ್ತು ಕಲೆಗಳ ಸುಗಮ ಕ್ಷೇತ್ರ ಹಲವು ಧರ್ಮ ಪಂಥಗಳ ಆಶ್ರಯ, ಪೋಷಣೆಗಳ ತಾಣ ಇದು ಧಾರ್ಮಿಕ ಸಮನ್ವಯ ಕೇಂದ್ರವೂ ಹೌದು. ವಿಜಯನಗರ ಸಾಮ್ರಾಟರು ಸಾಹಿತ್ಯಕ್ಕೆ ಪ್ರಾಶಸ್ತ್ಯ ನೀಡಿದಂತೆ ಕಲೆಗೂ ಅಷ್ಟೇ ಪ್ರಾಶಸ್ತ್ಯ ನೀಡಿದ್ದಾರೆ. ಕಲೆ ಎಂಬುದು ಹತ್ತಾರು ಮುಖಗಳನ್ನು ಹೊಂದಿದೆ. ಅದರಲ್ಲಿ ಶಿಲ್ಪ ಕಲೆಯೂ ಒಂದು. ವಿಜಯನಗರ ಸಾಮ್ರಾಟರು ಶಿಲ್ಪಕಲೆಗೆ ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಹಂಪಿಯ ನೂರಾರು ದೇಗುಲಗಳ ಬಿತ್ತಿಗಳಲ್ಲಿ, ಗುಡಿಗೋಪುರಗಳಲ್ಲಿ ಶಿಲ್ಪಿಗಳಿಂದ ಅನೇಕ ತೆರನಾದ ಶಿಲ್ಪಗಳು ನಿರ್ಮಾಣವಾಗಿರುವುದನ್ನು ಕಾಣಬಹುದು. ಇಲ್ಲಿ ಕಂಡು ಬರುವ ಶಿಲ್ಪಗಳು ವಿವಿಧ ಮತ ಪಂಥಗಳಿಗೆ, ಜನಸಂಸ್ಕೃತಿಗೆ ಸಂಬಂಧಿಸಿವೆ. ಈ ಒಂದೊಂದು ಮೂರ್ತಿಗಳು ಒಂದೊಂದು ಅರ್ಥವನ್ನು ಪ್ರತಿಬಿಂಬಿಸುತ್ತವೆ.

ಹಂಪಿ ಬಹು ಹಿಂದಿನಿಂದಲೂ ವಿರೂಪಾಕ್ಷ ಸೀಮೆಯಾಗಿದ್ದಂತೆ ವೀರಭದ್ರ ಕ್ಷೇತ್ರವಾಗಿತ್ತೆಂದು ಹೇಳಲಾಗುತ್ತದೆ. ಇದಕ್ಕೆ ಪೂರಕವೆಂಬಂತೆ ಹಂಪಿಯ ನಾನಾ ಭಾಗಗಳಲ್ಲಿ ನಾಲ್ಕಾರು ಬೆಟ್ಟಗಳಲ್ಲಿ ವಿವಿಧ ಗಾತ್ರಗಳಲ್ಲಿ ದೊರೆಯುವ ವೀರಭದ್ರ ಶಿಲ್ಪಗಳೇ ಸಾಕ್ಷಿ ಕೆಲವು ದೇವಾಲಯಗಳ ಗರ್ಭಗುಡಿಗಳಲ್ಲಿ, ಕೆಲವು ದೇವಾಲಯಗಳ ಕಂಭಗಳಲ್ಲಿ ಮತ್ತೆ ಕೆಲವು ಹೆಬ್ಬಂಡೆಗಳಲ್ಲಿ ಕಂಡರಿಸಲ್ಪಟ್ಟ ಶಿಲ್ಪಗಳಾಗಿ ಕಂಡುಬರುವುದನ್ನು ಕಾಣಬಹುದು.

ಈಗಲೇ ಹಂಪಿಯ 2–3 ವೀರಭದ್ರ ಶಿಲ್ಪಗಳನ್ನು ಕುರಿತು ಡಾ. ಎಂ.ಎಂ. ಕಲಬುರ್ಗಿ, ಡಾ. ಕೆ.ಎಂ. ಸುರೇಶ, ಶ್ರೀ. ಟಿ.ಎಂ ಮಂಜುನಾಥಯ್ಯ, ಶ್ರೀ. ಎಂ.ಜಿ. ನಾಗಾರಾಜ ಮೊದಲದವರು ಪ್ರಾಸಂಗಿಕವಾಗಿ ಚರ್ಚಿಸಿದ್ದಾರೆ. ನಾನು ಕೇವಲ ಹಂಪಿ ಪರಿಸರದ ವೀರಭದ್ರ ಶಿಲ್ಪಗಳ ಸ್ವರೂಪ ಅವುಗಳ ವೈಶಿಷ್ಟತೆ ಹಾಗೂ ಆ ಶಿಲ್ಪಗಳ ನಿರ್ಮಾಣದ ಹಿನ್ನಲೆ ಮೊದಲಾದ ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಮತಂಗ ಪರ್ವತ, ಕೋದಂಡರಾಮ ದೇವಾಲಯ, ಪ್ರಸನ್ನ ವಿರೂಪಾಕ್ಷ ದೇವಾಲಯ, ಕಮಲ ಮಹಲ್, ಕೃಷ್ಣಾಪುರ ಪೇಟೆ, ವಿರೂಪಾಕ್ಷಪುರ ಈ ಪ್ರದೇಶ ಅಥವಾ ಸ್ಥಳಗಳಲ್ಲಿ ದೊರೆಯುವ ವೀರಭದ್ರನ ಶಿಲ್ಪಗಳಿಗೆ ಪ್ರಸ್ತುತ ಲೇಖನವನ್ನು ಸೀಮಿತಗೊಳಿಸಿಕೊಳ್ಳಲಾಗಿದೆ. ಈ ಸ್ಥಳಗಳನ್ನೇ ನಾನು 'ಹಂಪಿ ಪರಿಸರ' ಎಂದು ಗುರುತಿಸಿ ಕೊಂಡಿದ್ದೇನೆ.

ಹಂಪಿ ವಿರೂಪಾಕ್ಷ ಕ್ಷೇತ್ರ, ವಿರೂಪಾಕ್ಷ ಸೀಮೆ, ವಿರೂಪಾಕ್ಷ ತೀರ್ಥ ಆಗಿರುವಂತೆ ವೀರಭದ್ರ ಕ್ಷೇತ್ರ, ವೀರಭದ್ರ ಸೀಮೆ, ವೀರಭದ್ರತೀರ್ಥ ಆಗಿತ್ತೆಂಬುದನ್ನು ಇಲ್ಲಿ ಸಿಗುವ ಶಾಸನ ಶಿಲ್ಪಗಳ ಆಧಾರದಿಂದ ಗ್ರಹಿಸಬಹುದು. ಏಕೆಂದರೆ ಬೇರೆ ಕಡೆ ಸಿಗದೇ ಇರುವಷ್ಟು ವೀರಭದ್ರ ಶಿಲ್ಪಗಳು ಇಲ್ಲಿ ಸಿಗುತ್ತವೆ. ಹಂಪಿ ಪರಿಸರದಲ್ಲಿ ಸಿಗುವ ವೀರಭದ್ರನ ಶಿಲ್ಪಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಕಾಲ, ಸ್ಥಳ, ಪರಿಸರ ಆಧರಿಸಿ 3 ರೀತಿಯಲ್ಲಿ ವರ್ಗೀಕರಿಸಲಾಗಿದೆ.

ಅ) ಕಾಲವನ್ನು ಆಧರಿಸಿ ಮಾಡಿದ ವರ್ಗೀಕರಣ.

1) ವಿಜಯನಗರ ಪೂರ್ವದ ವೀರಭದ್ರ ಶಿಲ್ಪಗಳು.
2) ವಿಜಯನಗರ ಕಾಲದ ವೀರಭದ್ರ ಶಿಲ್ಪಗಳು.

ಆ) ಸ್ಥಳ ಆಧರಿಸಿ ಮಾಡಿದ ವರ್ಗೀಕರಣ

1) ದೇವಾಲಯಗಳ ಗರ್ಭಗೃಹಗಳಲ್ಲಿರುವ ವೀರಭದ್ರ ಶಿಲ್ಪಗಳು.
2) ದೇವಾಲಯ ಕಂಬಗಳಲ್ಲಿರುವ ವೀರಭದ್ರ ಶಿಲ್ಪಗಳು.
3) ಹೆಬ್ಬಂಡೆಗಳ ಮೇಲಿರುವ ವೀರಭದ್ರ ಶಿಲ್ಪಗಳು.
4) ಹೆಬ್ಬಂಡೆಗಳ ಮಂಟಪದೊಳಗಿರುವ ವೀರಭದ್ರ ಶಿಲ್ಪಗಳು.

ಇ) ಪರಿಸರ ಆಧರಿಸಿ ಮಾಡಿದ ವರ್ಗೀಕರಣ

1) ವಿರೂಪಾಕ್ಷ ದೇವಾಲಯ ಪರಿಸರದ ವೀರಭದ್ರ ಶಿಲ್ಪಗಳು.

2) ಕೃಷ್ಣಾಪುರ ಪೇಟೆ ಪರಿಸರದ ವೀರಭದ್ರ ಶಿಲ್ಪಗಳು.

3) ಪತಂಗ ಪರ್ವತ ಪರಿಸರದ ವೀರಭದ್ರ ಶಿಲ್ಪಗಳು.

4) ಕಮಲ ಮಹಲ್ ಪರಿಸರದ ವೀರಭದ್ರ ಶಿಲ್ಪಗಳು.

ಪ್ರಸ್ತುತ ಲೇಖನ/ಪ್ರಬಂಧವನ್ನು ಕೊನೆಯ ವರ್ಗೀಕರಣ ಅಂದರೆ ಪರಿಸರ ಆಧರಿಸಿ ಮಾಡಿದ ವರ್ಗೀರಕಣದ ಹಿನ್ನೆಲೆಯಲ್ಲಿ ಸಿದ್ಧ ಪಡಿಸಲಾಗಿದೆ.

1. ವಿರೂಪಾಕ್ಷ ದೇವಾಲಯ ಪರಿಸರದ ವೀರಭದ್ರ ಶಿಲ್ಪಗಳು

ಪಂಪಾ ವಿರೂಪಾಕ್ಷ ದೇವಾಲಯದಲ್ಲಿ 5 ವೀರಭದ್ರನ ಶಿಲ್ಪಗಳಿವೆ. ಅಲ್ಲದೆ ವಿರೂಪಾಕ್ಷ ದೇವಾಲಯದ ಬಳಿ ನದಿ ದಂಡೆಯ ಸ್ನಾನ ಘಟ್ಟದ ಮಂಟಪದ ಮುಂಭಾಗದಿಂದ ಹೇಮಕೂಟಕ್ಕೆ ಹೋಗುವ ಹೇಮಕೂಟ ದ್ವಾರದಲ್ಲಿ ಒಂದು ವೀರಭಧ್ರನ ಶಿಲ್ಪವಿದೆ ಒಟ್ಟು 8 ವೀರಭದ್ರದ ಶಿಲ್ಪಗಳು ಈ ಪರಿಸರದಲ್ಲಿ ಕಂಡುಬರುತ್ತವೆ.

ವಿರೂಪಾಕ್ಷ ದೇವಾಲಯದ ಉತ್ತರಾಭಿಮುಖ ಬಾಗಿಲು ಎದುರಿಗಿರುವ ಕಟ್ಟೆಯ ಮೇಲಿನ ನವಗ್ರಹ ಮಂಟಪ ಬಳಿ 1 ಅಡಿ ಎತ್ತರದ ಚಿಕ್ಕ ಕಪ್ಪು ಕಲ್ಲಿನ ವೀರಭದ್ರನ ಶಿಲ್ಪವನ್ನು ಗೋಡೆಗೆ ನಿಲ್ಲಿಸಲಾಗಿದೆ. ಇದು ಹಂಪಿಯಲ್ಲಿ ದೊರೆಯುವ ವೀರಭದ್ರ ಶಿಲ್ಪಗಳಲ್ಲಿಯೇ ಅತ್ಯಂತ ಹಳೆಯದೆಂದು ಹೇಳಬಹುದು. ಇದು ನಾಲ್ಕು ಕೈಗಳನ್ನು ಹೊಂದಿದ್ದು, ಬಲಗೈಯಲ್ಲಿ ಉದ್ದವಾದ ಖಡ್ಗ, ಡಮರು, ಎಡಗೈಯಲ್ಲಿ ಗುರಾಣಿ, ಬಾಣ ಹಿಡಿದಿದೆ. ಕಿರೀಟ ಹೊಂದಿದ್ದರೂ ಅದರಲ್ಲಿ ಶಿವಲಿಂಗ ಕಾಣುತ್ತಿಲ್ಲ.

ದೇವಾಲಯದಿಂದ ಹೊರಗೆ ಬರುವಾಗ ಇರುವ ದ್ವಾರಬಾಗಿಲ ಬಳಿ ಎಡಭಾಗದಲ್ಲಿ 2 ಅಡಿ ಎತ್ತರದ ಕಪ್ಪು ಕಲ್ಲಿನ ವೀರಭದ್ರನ ಮೂರ್ತಿ ಶಿಲ್ಪ ನಿಲ್ಲಿಸಲಾಗಿದೆ. ಇದು ಪಾಣಿಪೀಠದ ಮೇಲೆ ನಿಂತಿದೆ. ಅಲ್ಲದೆ ನಾಲ್ಕು ಕೈಗಳಿದ್ದು ವೀರಭದ್ರನ ಸಾಮಾನ್ಯ ಶೈಲಿಯ ಲಕ್ಷಣ ಹೊಂದಿದೆ. ಈ ದೇವಾಲಯ 1 ಮತ್ತು 2ನೇ ಪ್ರವೇಶ ಮಹಾದ್ವಾರಗಳ ನಡುವೆ ಬಲ ಮೂಲೆಗೆ ಹತ್ತಿಕೊಂಡಿರುವ ನೃತ್ಯಮಂಟಪದ ಮುಂಭಾಗದ ಕಂಭದ ಮೇಲೆ ಸು. 1½ ಅಡಿ ಎತ್ತರವಿರುವ ಪಂಜೆ ಉಟ್ಟ ಸಾಮಾನ್ಯ ಲಕ್ಷಣ ಹೊಂದಿದ ವೀರಭದ್ರನ ಶಿಲ್ಪ ಕಂಡರಿಸಲಾಗಿದೆ.

ಹಾಗೆಯೇ ವಿರೂಪಾಕ್ಷ ದೇವಾಲಯದ ಪ್ರವೇಶ ಮಹಾದ್ವಾರ ಬಂಧದ ಎಡಕಟ್ಟೆಯ ಮೇಲೆ ನಿಲ್ಲಿಸಲಾದ ವೀರಭದ್ರ ಬಿಳಿಕಲ್ಲಿನಲ್ಲಿ ಕೆತ್ತಲ್ಪಟ್ಟಿದ್ದು 5½ ಅಡಿ ಎತ್ತರ ಹೊಂದಿದೆ. ನಾಲ್ಕು ಕೈಗಳಿದ್ದು, ಖಡ್ಗ, ಬಿಲ್ಲು, ಬಲಗೈಯಲ್ಲಿ ಬಾಣ ಗುರಾಣಿ ಎಡಗೈಯಲ್ಲಿ ಹಿಡಿದಿದೆ. ತ್ರಿನೇತ್ರ, ಕೋರೆಹಲ್ಲು, ಕೋರೆ ಮೀಸೆ, ಕರ್ಣಾಭರಣ ಹೊಂದಿದ್ದು ವೀರಭಾವ ಹೊಂದಿದೆ. ತಲೆಯ ಮೇಲೆ ಕಿರೀಟವಿದ್ದು ಅದರಲ್ಲಿ ಶಿವಲಿಂಗವಿದೆ. ಕೊರಳು, ಕೈ-ಕಾಲುಗಳಲ್ಲಿ ರುದ್ರಾಕ್ಷಿ ಸರ ಧರಿಸಿದೆ. ಬಲಪಾದದ ಬಳಿ ನಿಂತಿರುವ ಟಗರಿನ ತಲೆಯ ದಕ್ಷ ತಲೆ ಎತ್ತಿ ಮೇಲ್ಮುಖ ಮಾಡಿದ್ದಾನೆ. ಸೊಂಟ ಸ್ವಲ್ಪ ಬಾಗಿದರೂ ಪಾದಗಳು ಸಮಭಂಗಿಯಲ್ಲಿವೆ.

ಇದೇ ದೇವಾಲಯದ ಬಿಷ್ಟಪ್ಪಯ್ಯನ ಗೋಪುರದ ದಕ್ಷಿಣಾಭಿಮುಖದಲ್ಲಿ ನಗ್ನ ಸ್ತ್ರೀ ಶಿಲ್ಪದ ಬಲಭಾಗದ ಪಟ್ಟಿಕೆಯಲ್ಲಿ ಸು. 2 ಅಡಿ ಎತ್ತರದ ಖಡ್ಗ, ಗುರಾಣಿ, ಬಿಲ್ಲು, ಬಾಣ ಹಿಡಿದ ದಕ್ಷಕನಿಲ್ಲದ ವೀರಭದ್ರ ಶಿಲ್ಪವಿದೆ. ಇದು ಕೈ-ಕಾಲುಗಳಲ್ಲಿ ರುದ್ರಾಕ್ಷಿ ಸರ ಹಾಕಿಕೊಂಡಿದೆ. ಎದೆಯ ಮೇಲೆ ಫಲಕದ ಹಾರ ಹಾಕಿಕೊಂಡಿದೆ. ಎಲ್ಲಾ ಅಂತಸ್ತುಗಳಲ್ಲಿ ಒಂದೇ ಸಮಾನವಾದ ಪಟ್ಟಿಕೆಗಳಲ್ಲಿ ಈ ವೀರಭದ್ರ ಶಿಲ್ಪಗಳನ್ನು ನಿಲ್ಲಿಸಲಾಗಿದೆ. ಈ ಶಿಲ್ಪಗಳನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದೆ. ಇದೇ ದ್ವಾರ ಬಾಗಿಲಿನಿಂದ ದಕ್ಷಿಣಾಭಿಮುಖವಾಗಿ ಹೇಮಕೂಟಕ್ಕೆ ಹೋಗುವಾಗ ಹೇಮಕೂಟದ ದ್ವಾರಬಾಗಿಲ ಉತ್ತರಾಭಿಮುಖ ಗೋಡೆಯಲ್ಲಿ 1½ ಅಡಿ ಎತ್ತರದ ವೀರಭದ್ರ ಶಿಲ್ಪ ಕೆತ್ತಲಾಗಿದೆ. ಇದನ್ನು ಪಾಣೀಪೀಠದ ಮೇಲೆ ನಿಲ್ಲಿಸಲಾಗಿದೆ. ಬಲಗಡೆ ದಕ್ಷನನ್ನು ಗೆರೆಯಿಂದ ಕೊರೆಯಲಾಗಿದೆ. ಇದು ಸಹ ಸಾಮಾನ್ಯ ಲಕ್ಷಣ ಹೊಂದಿದೆ.

ಈ ವಿರೂಪಾಕ್ಷ ದೇವಾಲಯದ ಉತ್ತರಕ್ಕೆ ನದಿದಂಡೆಯ ಸ್ನಾನಘಟ್ಟ ಮಂಟಪದ ಮುಂಭಾಗದ ಬಂಡೆಯ ಮೇಲೆ ಶಿವಲಿಂಗ, ನಂದಿ, ವಿನಾಯಕ ಸರ್ಪ ಮತ್ತು ವೀರಭದ್ರ ಶಿಲ್ಪವನ್ನು ಕಂಡರಿಸಲಾಗಿದೆ. ಈ ವೀರಭದ್ರ ನಾಲ್ಕು ಕೈಗಳನ್ನು ಹೊಂದಿದ್ದು ಸಾಮಾನ್ಯ ಲಕ್ಷಣ ಹೊಂದಿದೆ. ಮೀಸೆ ಇರುವುದಿಲ್ಲ, ಎದೆಯ ಮೇಲೆ ಲಿಂಗ ಕಟ್ಟಿದ ಹಾರ ಧರಿಸಿದೆ. ಈ ಶಿಲ್ಪದ ಮೇಲ್ಭಾಗದಲ್ಲಿ "ಶ್ರೀ ವೀರಬತ್ರಡಲಿಂಗ ಶ್ರೀ ವಿರೂಪಾಕ್ಷದೇವ ಎಂದೂ ಇದೇ ಬಂಡೆಯ ಮೇಲೆ ನಂದಿ, ಲಿಂಗದ ಕೆಳಭಾಗದಲ್ಲಿರುವ ಸ್ತ್ರೀ ಶಿಲ್ಪಗಳ ಎರಡೂ ಬದಿಯಲ್ಲಿ ಶ್ರೀ ವೀರಭದ್ರುಡಲಿಂಗಂ"[1] ಎಂದು ಕಾಲದ ನಿರ್ದೇಶನವಿಲ್ಲದ 16ನೇ ಶತಮಾನಕ್ಕೆ ಸೇರಿರಬಹುದಾದ ಶಾಸನವು ದಾಖಲಿಸಿದೆ.

ಈ ಶಾಸನಗಳನ್ನು ಗಮನಿಸಿದಾಗ, ವೀರಭದ್ರನು ಲಿಂಗರೂಪಿಯಾಗಿದ್ದು ನಂತರದಲ್ಲಿ ವೀರಯೋಧನ ರೂಪ ತಾಳಿದಂತಿದೆ. ವಿರೂಪಾಕ್ಷ ಲಿಂಗವು ಮೂಲತ ವೀರಭದ್ರಲಿಂಗವಾಗಿದ್ದಂತೆ ತೋರುತ್ತದೆ. ಕಾರಣ ವಿರೂಪಾಕ್ಷ ದೇವಾಲಯದಲ್ಲಿಯೇ 5 ವೀರಭದ್ರ ಶಿಲ್ಪಗಳಿರುವುದನ್ನು ಗಮನಿಸಬಹುದು. ನದಿ ದಂಡೆಯ ವೀರಭದ್ರ ಶಿಲ್ಪವು ಮೀಸೆ ರಹಿತವಾಗಿದ್ದು, ವಿಶಿಷ್ಟತೆಯಿಂದ ಕೂಡಿದೆ. ಹಾಗೆಯೇ ರಜತಗಿರಿ ಪರ್ವತದಲ್ಲಿರುವ ಜೈನಮಠದ ಮರದ ಬೀಳಲುಗಳ ನಡುವೆ ಒಂದೇ ರುಂಡವನ್ನೊಳಗೊಂಡ ರುಂಡ ಮಾಲೆ ಹಾಕಿಕೊಂಡ ವೀರಭದ್ರ ಶಿಲ್ಪವನ್ನು ಕಂಡರಿಸಲಾಗಿದೆ.

2. ಕೃಷ್ಣಾಪುರ ಪೇಟೆ ಪರಿಸರದ ವೀರಭದ್ರಶಿಲ್ಪಗಳು:

ಸಾಸಿವೆ ಕಾಳು ಗಣಪತಿ ಮಂಟಪದಿಂದ ಉದ್ದಾನ ವೀರಭದ್ರದೇವಾಲಯದವರೆಗೆ ಇರುವ ಪ್ರದೇಶವನ್ನು ಕೃಷ್ಣಾಪುರವೆಂದು ವಿದ್ವಾಂಸರು ಗುರುತಿಸಿದ್ದಾರೆ. ಈ ಕೃಷ್ಣಾಪುರದ ಸುತ್ತಮುತ್ತಲ ಪ್ರದೇಶವನ್ನು ಕೃಷ್ಣಾಪುರ ಪರಿಸರವೆಂದು ಪ್ರಸ್ತುತ ಲೇಖನದಲ್ಲಿ ಪರಿಭಾವಿಸಲಾಗಿದೆ. ಈ ಪರಿಸರದಲ್ಲಿ ಉದ್ದಾನ ವೀರಭದ್ರ ಶಿಲ್ಪ ಕೃಷ್ಣ ದೇವಾಲಯ ಕಂಭದ ವೀರಭದ್ರ ಶಿಲ್ಪ ಮತ್ತು ಸಾಸಿವೆ ಕಾಳು ಗಣಪತಿ ಎದುರಿಗಿರುವ ಹೆಬ್ಬಂಡೆಯ ಪಾರ್ಶ್ವದಲ್ಲಿರುವ ವೀರಭದ್ರಶಿಲ್ಪ ಒಟ್ಟು ಈ ಪರಿಸರದಲ್ಲಿ 4 ವೀರಭದ್ರಶಿಲ್ಪಗಳು ಕಂಡುಬರುತ್ತವೆ.

ಕೃಷ್ಣದೇವಾಲಯದಿಂದ ವಿರೂಪಾಕ್ಷ ದೇವಾಲಯಕ್ಕೆ ಹೋಗುವ ಹಳೆ ದಾರಿಯ ಎಡಗಡೆ ಮೊದಲ ಹೆಬ್ಬಂಡೆಯ ಮೇಲೆ ಸಾಲು ಕೋಷ್ಟಗಳಲ್ಲಿ, ಭದ್ರಕಾಳೀಲಿಂಗ, ನಂದಿ ಸ್ಥಾನಕ ಪ್ರಣಾಮಭಂಗಿ, ಭಕ್ತ, ದಕ್ಷಸಹಿತ ವೀರಭದ್ರ ಶಿಲ್ಪಗಳನ್ನು ಕೆತ್ತಲಾಗಿದೆ. ಇದು ನಾಲ್ಕು ಕೈಗಳನ್ನು ಹೊಂದಿದ್ದು ಕೈಗಳಲ್ಲಿ ಕಿರುಗತ್ತಿ, ಬಾಣ, ಬಿಲ್ಲು, ಗುರಾಣಿ ಹಿಡಿದು ನಿಂತಿದೆ. ಸುಮಾರು 2 ಅಡಿ ಎತ್ತರ ಹೊಂದಿರುವ ಈ ಶಿಲ್ಪಕ್ಕೆ ಸುತ್ತುವರಿದು ಚಿಕ್ಕ ಮಂಟಪ ನಿರ್ಮಿಸಲಾಗಿದೆ. ಬಲಭಾಗದಲ್ಲಿರುವ ದಕ್ಷ ವೀರಭದ್ರನ ಕಡೆ ತಿರುಗಿ ಕೈಮುಗಿಯುತ್ತಾ ನಿಂತಿರುವುದನ್ನು ಕಾಣಬಹುದು.

ಕೃಷ್ಣ ದೇವಾಲಯದ ಮುಖಮಂಟಪದ ಎಡಬದಿಯ 2ನೇ ಸ್ತಂಭದ ಬ್ರಹ್ಮಕಾಂತ ರಚನೆಯ ಪಿಂಡಿಭಾಗದಲ್ಲಿ (ಬುಡಮುಖ) ವಿಜಯನಗರ ಕಾಲದ ಸಾಮಾನ್ಯ ಶೈಲಿಯ ಸುಂದರ ಚತುರ್ಭುಜ ಸ್ಥಾನಕ ದ್ವಿಭಂಗಿ ವೀರಭದ್ರ ವಿಗ್ರಹವಿದೆ. "ನಾಲ್ಕು ಕೈಗಳಿದ್ದು ಹಿಂಗೈಗಳಲ್ಲಿ ಬಾಣಬಿಲ್ಲು ಎತ್ತಿದ ಮುಂಗೈ ಬೆರಳಲ್ಲಿ ಹಿಡಿದ ಕಲಾತ್ಮಕ ಬಳುಕಿನ ಕಿರುಗತ್ತಿ, ಎಡಮುಂಗೈಯನ್ನು ಅಗಲಿಸಿ ಪೂರ್ಣವಾಗಿ ಮಧ್ಯ ತಗ್ಗಿನ ಬಿಲ್ಲಿನಂತಿರುವ ಎಡಮುಖ ಗುರಾಣಿಯ ಮೇಲೆ ಇಟ್ಟಿರುವ ಭಂಗಿ ಚೆಂದವೆನಿಸುತ್ತದೆ. ಗುರಾಣಿಯ ಕೆಳತುದಿ ಎಡಪಾದದ ಕಿರುಬೆರಳನ್ನು ತಾಗಿದೆ. ರುಂಡಮಾಲೆ ಎಡಭುಜದಿಂದ ಸಾಗಿಬಂದು ಬಲಮಂಡಿಯಲ್ಲಿ ಮುಕ್ತಾಯವಾಗುವಲ್ಲಿ, ಮಂಡಿಗಳ ನಡುವಣ ಮೂರು ರುಂಡ ಶಿಲ್ಪಗಳು ಮಾತ್ರ ಎದ್ದು ಕಾಣುತ್ತವೆ. ಜನಿವಾರದಂತಹ ರಚನೆಯೂ ಕಾಣುತ್ತದೆ. ಕಿರೀಟ ಮಕುಟವಿದ್ದು, ಮಕುಟದಲ್ಲಿ ಶಿವಲಿಂಗ ಲಾಂಛನವಿದೆ. ನೀಳಕರ್ಣಕುಂಡಲ ವೃತ್ತವು ಕತ್ತಿನವರೆಗೂ ಇಳಿಬಿದ್ದಿದೆ. ಹಾವುಗೆ ಪಾದಗಳಲಿಲ್ಲ ಎಡಹಿಂಗೈಯಲ್ಲಿ ಹಿಡಿದಿರುವ ಬಿಲ್ಲಿನ ಶೈಲಿ ವಿಜಯನಗರ ಕಾಲದಲ್ಲಿ ಒಂದು ಮಾದರಿಯಾಗಿದೆ"[2] ಕೃಷ್ಣ ದೇಗುಲದಲ್ಲಿ ಕಂಡರಿಸಲ್ಪಟ್ಟ ಈ ಶಿಲ್ಪವು ಧರ್ಮ ಸಮನ್ವಯದ ಪ್ರತೀಕವಾಗಿದೆ.

ಹಂಪಿ ಪರಿಸರದ ಶಿಲ್ಪಗಳಲ್ಲಿ ಅತೀ ಎತ್ತರದ ವೀರಭದ್ರನ ಮೂರ್ತಿಶಿಲ್ಪವೆಂದರೆ ಉದ್ದಾನ ವೀರಭದ್ರ ದೇವಾಲಯದ ವಿಗ್ರಹ. ಕಪ್ಪು ಕಲ್ಲಿನಿಂದ ನಿರ್ಮಿಸಿರುವ ಈ ಶಿಲ್ಪವು ಸು. 16 ಅಡ ಎತ್ತರವಿದೆ. ವಿಜಯನಗರ ಚಕ್ರವರ್ತಿ ಸದಾಶಿವರಾಯನ ಕಾಲದಲ್ಲಿ ದಳವಾಯಿ ಜಂಗಮಯ್ಯ ಈ ದೇವಾಲಯ ಕಟ್ಟಿಸಿ ವೀರಭದ್ರ ಶಿಲ್ಪವನ್ನು ಪ್ರತಿಷ್ಠಾಪಿಸಿದಂತೆ ಕ್ರಿ.ಶ. 1545ರ ಶಾಸನದಿಂದ ತಿಳಿದುಬರುತ್ತದೆ. ಶಾಸನದಲ್ಲಿ ಇದನ್ನು "ಹಿರಿಯ ಕಾಲುವೆಯ ಛತ್ರದ ಬಳಿಯಲ್ಲೂ ಕಟಿಸ್ತಂಥಾ ಮುದು

ವೀರಣನ ಪ್ರತಿಷ್ಠೆಯನ್ನೂ ಮಾಡಿ"[3] ಎಂದು ಉಲ್ಲೇಖಿಸಿದೆ. ಮುದವೀರಣ್ಣ ಉದ್ದವಿದ್ದ ಕಾರಣ ಜನವಾಡಿಕೆಯಲ್ಲಿ ಉದ್ದಾನ ವೀರಭದ್ರ ಆಗಿದ್ದಂತೆ ತೋರುತ್ತದೆ.

"ಏಕಶಿಲಾ ಉಬ್ಬುಶಿಲ್ಪವಾಗಿ ಕಡೆಯಲ್ಪಟ್ಟಿದ್ದಾನೆ. ಗುಂಗುರು ಕಿರೀಟ ಮಕುಟನಾದ ಇವನ ಹಿಂಬದಿ ದೀರ್ಘ ವೃತ್ತ ಜಟಾಮಂಡಲ (ಯಕ್ಷಗಾನದ ಮಾದರಿ) ದಂತಿದೆ ಪ್ರತಿಮಾ ಕೋಶದ ಚಿತ್ರಗಳಲ್ಲೂ ಶಿರದ ಲಕ್ಷಣ ಈ ಬಗೆಯದಿರುವ ಒಂದು ಶಿಲ್ಪ ಚಿತ್ರ ಕಾಣಬರುತ್ತದೆ. ಉದ್ದಾನ ವೀರಭದ್ರನ ಕಿರೀಟದಲ್ಲಿ ಶಿವಲಿಂಗ ಲಾಂಛನ, ಹಣೆಯಲ್ಲಿ ಮೂರನೇ ಕಣ್ಣು, ತುಟಿಯ ಮೇಲೆ ಗಿರಿಜಾ ಮೀಸೆಯಂತಹ ಸುರುಳಿ ಮೀಸೆ ಎದ್ದು ಕಾಣುತ್ತದೆ"[4] ನಾಲ್ಕು ಕೈಗಳನ್ನು ಹೊಂದಿದ್ದು ಬಲಗೈಗಳಲ್ಲಿ ಭುಜಕ್ಕೆ ಅನಿಸಿದ ನೀಳ ಓರೆಚಪ್ಪಗತ್ತಿ ಮತ್ತು ಇನ್ನೊಂದು ಕೈಯಲ್ಲಿ ಉದ್ದನೆಯ ಬಾಣ ಎಡಗೈಗಳಲ್ಲಿ ನೀಳ ಪಾರ್ಶ್ವಮುಖಿ ಗುರಾಣಿಯ ಮೇಲೆ ಊರಿರುವ ಪೂರ್ವಹಸ್ತ, ಇನ್ನೊಂದು ಕೈಯಲ್ಲಿ ಬಿಲ್ಲು ಹಿಡಿದಿದೆ. ಬಲ ಮೊಳಕಾಲ ಬಳಿ ಸು.2 ಅಡಿ ಎತ್ತರದ ಟಗರು ತಲೆಯ ದಕ್ಷನ ವಿನೀತ ಭಂಗಿ, ಸ್ವಲ್ಪ ಸೊಂಟ ಬಾಗಿದರೂ ಪಾದಗಳು ಸಮವಾಗಿವೆ ಇವೆಲ್ಲ ವೀರಭದ್ರ ವೀರಗಂಭೀರ ಭಾವವನ್ನು ಹೊಂದಿದ್ದಾನೆಂದು ಶಿಲ್ಪದಲ್ಲಿ ಕಂಡರಿಸಲಾಗಿದೆ ಎಂದು ಹೇಳಬಹುದಾಗಿದೆ.

ಪ್ರವೇಶದ್ವಾರ ದಾಟಿದ ತಕ್ಷಣ ಬಲಭಾಗದಲ್ಲಿ ಕಟ್ಟೆಯ ಮೇಲಿರುವ ಬನ್ನಿಮರದ ಪಕ್ಕ ಪವಳಿಗೋಡೆ ಇದೆ. ಇದಕ್ಕೆ ತಾಗಿಸಿ ಪೂರ್ವಾಭಿಮುಖವಾಗಿ 1½ ಅಡಿ ಕಪ್ಪು ಶಿಲೆಯ ವೀರಭದ್ರನ ಶಿಲ್ಪವನ್ನು ನಿಲ್ಲಿಸಲಾಗಿದೆ. ಈ ಶಿಲ್ಪವು ವೀರಭದ್ರನ ಸಾಮಾನ್ಯ ಲಕ್ಷಣ ಹೊಂದಿದೆ.

ಈ ಪರಿಸರದಲ್ಲಿ ದೊರೆತಿರುವ ವೀರಭದ್ರನ ಶಿಲ್ಪಗಳು ಒಂದಕ್ಕಿಂತ ಒಂದು ಭಿನ್ನವಾಗಿದೆ. ಗಾತ್ರ ಮತ್ತು ಸ್ವರೂಪದಲ್ಲಿ ಅವುಗಳು ತಮ್ಮದೇಯಾದ ವೈಶಿಷ್ಟ್ಯತೆಯಿಂದ ಕೂಡಿದೆ.

3. ಮತಂಗ ಪರ್ವತ ಪರಿಸರದ ವೀರಭದ್ರ ಶಿಲ್ಪಗಳು

ಕೋದಂಡರಾಮ ದೇವಾಲಯದಿಂದ ಮತಂಗ ಪರ್ವತದ ಹಿಂಬದಿಯ ಕಾಲುವೆಯವರೆಗೆ ಇದನ್ನು ಮತಂಗ ಪರ್ವತ ಪರಿಸರ ಎಂದು ಗುರುತಿಸಿಕೊಳ್ಳಲಾಗಿದೆ. ಈ ಪರಿಸರದಲ್ಲಿ 8 ವೀರಭದ್ರನ ಶಿಲ್ಪಗಳಿವೆ.

ಕೋದಂಡರಾಮ ದೇವಾಲಯದ ಎರಡು ಕಂಭಗಳಲ್ಲಿ ಎರಡು ವೀರಭದ್ರನ ಶಿಲ್ಪಗಳಿವೆ. ಈ ಎರಡೂ ಶಿಲ್ಪಗಳು ನಾಲ್ಕು ಕೈಗಳನ್ನು ಹೊಂದಿವೆ. ಬಲಗೈಗಳಲ್ಲಿ ಖಡ್ಗ, ಬಾಣ, ಎಡಗೈಗಳಲ್ಲಿ ಬಿಲ್ಲು, ಗುರಾಣಿ ಹಿಡಿದಿವೆ. ಎರಡೂ ಶಿಲ್ಪಗಳು ಪಾಣಿ ಪೀಠದ ಮೇಲೆ ನಿಂತಿದ್ದು ಒಂದು ದಕ್ಷಬ್ರಹ್ಮನನ್ನು ಹೊಂದಿದ್ದರೆ ಮತ್ತೊಂದು ದಕ್ಷಬ್ರಹ್ಮನನ್ನು ಹೊಂದಿರುವುದಿಲ್ಲ. ಬಹುಶಃ ಈ ದೇವಾಲಯ ಹಿಂದೆ ಶೈವ ಅಥವಾ ವೀರಭದ್ರ ದೇವಾಲಯವಾಗಿದ್ದಂತೆ ತೋರುತ್ತದೆ. ಅಥವಾ ಧರ್ಮ ಸಹಿಷ್ಣತೆಯ ಪ್ರತೀಕವಾಗಿ ಈ ದೇವಾಲಯದ ಕಂಭಗಳಲ್ಲಿ ವೀರಭದ್ರನ ಶಿಲ್ಪಗಳನ್ನು ಕಂಡರಿಸಿದಂತೆ ಕಂಡುಬರುತ್ತದೆ.

ಕೆಲವು ವಿದ್ವಾಂಸರ ಪ್ರಕಾರ ವಿಜಯನಗರ ಪೂರ್ವದ್ದೆಂದು ಹೇಳಲಾಗುವ ವೀರಭದ್ರನ ಶಿಲ್ಪ ಮತಂಗ ಪರ್ವತದ ದೇವಾಲಯದಲ್ಲಿದೆ. "ಈ ದೇವಾಲಯದ ಗರ್ಭಗೃಹದಲ್ಲಿ ಎರಡು ವೀರಭದ್ರನ ಶಿಲ್ಪಗಳಿವೆ, ಈ ಎರಡೂ ಶಿಲ್ಪಗಳು ಸು. 5 ಅಡ ಎತ್ತರವಿದ್ದು ಪುಷ್ಟವಾಗಿವೆ, ಮೂಲ ವೀರಭದ್ರನನ್ನು ಪಶ್ಚಿಮಾಭಿಮುಖವಾಗಿ ಈಗ ಪೂಜೆಗೊಳ್ಳುತ್ತಿರವ ವೀರಭದ್ರನ ಶಿಲ್ಪವನ್ನು ಉತ್ತರಾಭಿಮುಖವಾಗಿ ನಿಲ್ಲಿಸಲಾಗಿದೆ. ಮೂಲ ವೀರಭದ್ರ ತ್ರಿಭಂಗದಲ್ಲಿ ನಿಂತಿದ್ದು ನಾಲ್ಕು ಕೈಗಳನ್ನು ಹೊಂದಿದೆ ಬಲಗೈಗಳಲ್ಲಿ ಬಾಣ, ಖಡ್ಗ, ಎಡಗೈಗಳಲ್ಲಿ ಬಿಲ್ಲು, ಗುರಾಣಿ ಹಿಡಿದಿವೆ. ತಲೆಯ ಮೇಲಿನ ಕಿರೀಟದಲ್ಲಿ ಶಿವಲಿಂಗವಿದೆ."[5] ಕಂಠ ಕರ್ಣಾಭರಣಗಳ ಜೊತೆಗೆ ರುಂಡಮಾಲೆಯನ್ನು ಧರಿಸಿದೆ. ಮುಂಗಾಲು ಮುಂಗೈಗಳಲ್ಲಿ ಜೋಡಿ ಕಡಗಗಳಿವೆ. ರೌದ್ರಾಕಾರ ಮುಖ ಹೊಂದಿದ ವೀರಭದ್ರನ ಬಲಭಾಗದಲ್ಲಿ ದಕ್ಷಬ್ರಹ್ಮನ ಶಿಲ್ಪವಿದು, ಅಂಜಲಿ ಮುದ್ರೆಯಲ್ಲಿದೆ.

ಈಗ ಪೂಜೆಗೊಳ್ಳುತ್ತಿರುವ ವೀರಭದ್ರ ಷಪಾಶ್ರ ಪೀಠದ ಮೇಲೆ ತ್ರಿಭಂಗದಲ್ಲಿ ನಿಂತಿದೆ. ಶಿಲ್ಪದ ಮೇಲೆ ಪ್ರಭಾವಳಿ ಇದೆ. ಪ್ರಭಾವಳಿಯು ಎರಡು ಸ್ತಂಭಗಳ ಮೇಲೆ ಸ್ಥಾಪಿತವಾಗಿದೆ. ವೀರಭದ್ರನ ಬಲಭಾಗದಲ್ಲಿ ಕೈಮುಗಿದು ನಿಂತಿರುವ ದಕ್ಷನ ಶಿಲ್ಪವಿದೆ. ಈ ವೀರಭದ್ರನ ಕಿರೀಟದಲ್ಲಿಯೂ ಸಹ ಶಿವಲಿಂಗವಿದೆ. ಹಣೆಯಲ್ಲಿ ತ್ರಿನೇತ್ರವಿದ್ದು, ಕರ್ಣಾಭರಣ, ಕೊರಳಲ್ಲಿ ಹಾರ ಹಾಕಿಕೊಂಡಿದೆ. ಉಳಿದಂತೆ ಮೂಲ ವೀರಭದ್ರದ ಶಿಲ್ಪದ ಲಕ್ಷಣ ಹೊಂದಿದೆ.

ದಕ್ಷಿಣಾಭಿಮುಖವಾಗಿ ಮತಂಗ ಪರ್ವತವನ್ನು ಇಳಿಯುವಾಗ ಮಾರ್ಗಮಧ್ಯೆ ಬಲಗಡೆಯ ಮೆಟ್ಟಲುಗಳ ಪಕ್ಕದ ಪ್ರಾಕೃತಿ ಗುಹೆಯಲ್ಲಿ ವೀರಭದ್ರನನ್ನು ಹೋಲುವ ಶಿಲ್ಪವಿದೆ. ಇದನ್ನು ಟಿ.ಎಂ. ಮಂಜುನಾಥಯ್ಯನವರು ವೀರಭದ್ರನ ಶಿಲ್ಪವೆಂದು ಕರೆದಿದ್ದಾರೆ. ಆದರೆ ಇದು ವೀರಭದ್ರನ ಲಕ್ಷಣ ಹೊಂದಿಲ್ಲ ಬಹುಶಃ ಇದು ಭೈರವನ ಶಿಲ್ಪವಾಗಿರಬಹುದು.

ದಕ್ಷಿಣ ದಿಕ್ಕಿನಿಂದ ಪತಂಗ ಪರ್ವತ ಏರುವ ಪ್ರಾರಂಭದಲ್ಲೇ ಪ್ರಾಕೃತಿಕ ಹೆಬ್ಬಂಡೆಯ ಪಾರ್ಶ್ವದಲ್ಲಿ ವೀರಭದ್ರ, ದಕ್ಷಬ್ರಹ್ಮ, ಶಿವಲಿಂಗ, ನಂದಿ ಹಾಗೂ ವಿನಾಯಕನ ಶಿಲ್ಪ ಪಟ್ಟಿಕೆ ಇದೆ. ಇದರ ಕೆಳಗೆ ಶಾಸನೋಕ್ತ 'ವೀರಾಯಮ್ಮ'[6] ನೆಂಬ ಭಕ್ತೆಯ ಶಿಲ್ಪವಿದೆ. ಈಕೆಯೇ ಈ ಶಿಲ್ಪಗಳನ್ನು ನಿರ್ಮಿಸಿ ಇವಕ್ಕೆ ಮಂಟಪ ಕಟ್ಟಿರುವ ಸಾಧ್ಯತೆ ಇದೆ. ಇಲ್ಲಿರುವ ವೀರಭದ್ರನಿಗೆ ಎಡಭಾಗದಲ್ಲಿ ದಕ್ಷನಿರುವುದು ಇದರ ವೈಶಿಷ್ಟ್ಯವಾಗಿದೆ. 1½ ಅಡಿ ಎತ್ತರವಿರುವ ಇದು ಮತಂಗ ವೀರಭದ್ರನ ಎಲ್ಲಾ ಲಕ್ಷಣ ಹೊಂದಿದೆ.

ಕಮಲ ಮಹಲ್‌ನಿಂದ ಮತಂಗ ಪರ್ವತಕ್ಕೆ ಹೋಗುವ ದಾರಿಯಲ್ಲಿ ಕಾಲುವೆಯ ಬಂಡೆಯ ಮೇಲೆ 'ಶ್ರೀವಿರೂಪಾಕ್ಷ'[7] ಎಂಬ ಶಾಸನವಿದೆ. ಇಲ್ಲಿ ಶಿವಲಿಂಗ ವೀರಭದ್ರನ ಶಿಲ್ಪಗಳಿವೆ. "ವೀರಭದ್ರ ತ್ರಿಭಂಗದಲಿದ್ದು ದ್ವಿಭುಜಗಳಿವೆ. ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ತ್ರಿಶೂಲ ಹಿಡಿದಿದೆ, ಎಡಮುಂಗೈಯಲ್ಲಿ ನೇತಾಡುವ ಕಪಾಲವಿದೆ. ವಿಶಾಲವಾದ ಮುಖವಿದ್ದು, ತ್ರಿನೇತ್ರ ಹೊಂದಿದೆ. ಉದ್ದನೆಯ ಕಿವಿಗಳಿದ್ದು ಕರ್ಣಾಭರಣವನ್ನು ಧರಿಸಿವೆ. ಕೊರಳು ಭುಜ, ಕೈತೋಳು ಹಾಗೂ ಮುಂಗೈಗಳಲ್ಲಿ ರುದ್ರಾಕ್ಷಿ ಮಾಲೆಗಳನ್ನು ಧರಿಸಿದೆ. ಹೃದಯ ಬಂಧ ಕಟೀಹಾರಗಳಿವೆ, ಕಟೀಹಾರದಲ್ಲಿ ಕಠಾರಿಯೊಂದನ್ನು ಸಿಕ್ಕಿಸಲಾಗಿದೆ. ಪಂಚೆ ಉಟ್ಟಿದ್ದು, ವೀರಗಚ್ಚೆ ಹಾಕಲಾಗಿದೆ. ಮುಂಗಾಲುಗಳಲ್ಲಿ ಜೋಡಿ ಕಡಗಗಳಿವೆ."[8] ಇದು ಸುಮಾರು 1½ ಅಡಿ ಎತ್ತರವಿದೆ.

ಮಂಡಿಯೂರಿ ಕುಳಿತಿರುವ ವೀರಭದ್ರನ ಶಿಲ್ಪ ಮತಂಗ ಪರ್ವತದ ಪೂರ್ವಕ್ಕೆ ಪೂರ್ವಾಭಿಮುಖವಾದ ಒಂದು ಮಂಟಪದಲ್ಲಿ ಇರುವುದು. 'ಈ ಶಿಲ್ಪವು ವೀರಾಸನ ಭಂಗಿಯಲ್ಲಿದ್ದು, ಎಡಗಾಲು ಮೊಣಕಾಲೂರಿ, ಬಲಪಾದವನ್ನು ನೆಲದ ಮೇಲಿಟ್ಟು, ತನ್ನ ಎರಡು ಕೈಗಳಲ್ಲಿ ಬಿಲ್ಲು, ಬಾಣ ಹಿಡಿದು, ಬಾಣ ಬಿಡುವ ಮಾದರಿಯಲ್ಲಿ ಕೆತ್ತಲಾಗಿದೆ. ಸೊಂಟಕ್ಕೆ ಪಟ್ಟಿ ಕಂಠಿಹಾರ ಹಾಗೂ ಉಳಿದ ಆಭರಣಗಳನ್ನು ಸ್ಪಷ್ಟವಾಗಿ ಕಾಣುವ ಹಾಗೆ ಕೆತ್ತಲಾಗಿದೆ.'[9] ತಲೆಯಲ್ಲಿ ಕಿರೀಟವಿದ್ದು ಅದರಲ್ಲಿಯೂ ಸಹ ಶಿವಲಿಂಗವಿದೆ.

ಹೀಗೆ ಮತಂಗ ಪರ್ವತ ಪರಿಸರದ ವೀರಭದ್ರನ ಶಿಲ್ಪಗಳನ್ನು ಬಂಡೆಗಲ್ಲು ಗರ್ಭಗೃಹಗಳಲ್ಲಿ ಕಂಡುಬರುತ್ತಿದ್ದು, ವೈಶಿಷ್ಟತೆಯಿಂದ ಕೂಡಿವೆ.

4. ಕಮಲ ಮಹಲ್ ಪರಿಸರದ ವೀರಭದ್ರನ ಶಿಲ್ಪಗಳು

ಕಮಲ ಮಹಲ್ ಹಿಂಬದಿಯ ಬೆಟ್ಟದಿಂದ ಹಿಡಿದು ಪ್ರಸನ್ನ ವಿರೂಪಾಕ್ಷ ದೇವಾಲಯದ ವರೆಗೆ ಇರುವ ಪ್ರದೇಶವನ್ನು ಕಮಲ ಮಹಲ್ ಪರಿಸರವೆಂದು ಗುರುತಿಸಿಕೊಳ್ಳಲಾಗಿದೆ. ಈ ಪರಿಸರದಲ್ಲಿ 5 ವೀರಭದ್ರನ ಶಿಲ್ಪಗಳಿವೆ.

ಕಮಲ ಮಹಲ್ ಉತ್ತರಕ್ಕೆ ಇರುವ ಬೆಟ್ಟದ ಮೇಲೆ 2 ವೀರಭದ್ರನ ಶಿಲ್ಪಗಳಿವೆ. ಇವೆರಡೂ ವಿಭಿನ್ನವಾಗಿವೆ. ಸಣ್ಣ ಮಂಟಪದೊಳಗೆ ಇರುವ ವೀರಭದ್ರನ ಶಿಲ್ಪ ಸು. 5 ಅಡಿ ಎತ್ತರವಿದ್ದು, ಮಂಡಿಮಡಚಿ ವೀರಾಸನ ಭಂಗಿಯಲ್ಲಿದೆ. ಕಾಲಲ್ಲಿ ಹಾವುಗೆಗಳಿವೆ. ಮಂಡಿಯತನಕ ರುಂಡಮಾಲೆ ಜೋತುಬಿದ್ದಿದೆ. ನಾಲ್ಕು ಕೈಗಳಿದ್ದು, ಬಲಗೈಗಳಲ್ಲಿ ಖಡ್ಗ, ಬಾಣ ಹಿಡಿದಂತೆ ಎಡಗೈಗಳಲ್ಲಿ ಬಿಲ್ಲು ಗುರಾಣಿ ಹಿಡಿದಿವೆ. ಈ ಗುರಾಣಿಯನ್ನು ನೆಲಕ್ಕೆ ಊರಲಾಗಿದೆ. ಹಿಂಬದಿಯ ಕೈಗಳು ಮೇಲಕ್ಕೆತ್ತಿದ್ದು ಬಿಲ್ಲಿಗೆ ಬಾಣ ಹೂಡುವ ಸಿದ್ಧತಿಯಲ್ಲಿದಂತೆ ತೋರುತ್ತದೆ. ಕೋರೆ ಮೀಸೆ ಕೋರೆ ಹಲ್ಲುಗಳನ್ನು ಹೊಂದಿದೆ. ತ್ರಿನೇತ್ರ ಹೊಂದಿದ್ದು, ತಲೆಯ ಮೇಲೆ ಉದ್ದನೆಯ ಕಿರೀಟವಿದ್ದು ಅದರ ಮಧ್ಯದಲ್ಲಿ ಶಿವಲಿಂಗವಿದೆ. ಸೊಂಟ ಪಟ್ಟಿಯಿದ್ದು ಅದರಲ್ಲಿ ಬಲತೊಡೆಯ ಹತ್ತಿರ ಚಿಕ್ಕ ಬಾಕು ಹೊಂದಿದೆ. ಕೊರಳಲ್ಲಿ ರುದ್ರಾಕ್ಷಿಸರ ಶಿವಲಿಂಗ ಧರಿಸಿದೆ, ಅಲ್ಲದೆ ಜನಿವಾರದಂತಹ ಹಾರಹಾಕಿಕೊಂಡಂತೆ ಕಂಡು ಬರುತ್ತದೆ. ಬಲಗಡೆಗೆ ಕೈಮುಗಿದು ನಿಂತಿರುವ ದಕ್ಷ ಟಗರಿನ ತಲೆ ಹೊಂದಿದ್ದಾನೆ.

ಅಲ್ಲೇ ಸ್ವಲ್ಪ ಕೆಳಗೆ ಇರುವ ಬಂಡೆಯ ಪಾರ್ಶ್ವದಲ್ಲಿ ಇನ್ನೊಂದು ವೀರಭದ್ರ ಶಿಲ್ಪವಿದೆ. ಇದು ಸಹ 5 ಅಡಿ ಎತ್ತರವಿದೆ. ನಾಲ್ಕು ಕೈಗಳನ್ನು ಹೊಂದಿದ್ದು, ಖಡ್ಗ, ಬಾಣ, ಬಿಲ್ಲು, ಗುರಾಣಿ ಹಿಡಿದಿದೆ. ಕಾಲು ಮುಂಗೈ ಮತ್ತು

ತೋಳುಗಳಲ್ಲಿ ಬಳೆಹಾಕಿಕೊಂಡಿದೆ. ಭುಜಗಳಲ್ಲಿ ಆಭರಣ ಧರಿಸಿದೆ. ತ್ರಿನೇತ್ರ ಕೋರೆಮೀಸೆ, ಕೋರೆಹಲ್ಲುಗಳನ್ನು ಹೊಂದಿದೆ. ಕೊರಳಲ್ಲಿ ರುದ್ರಾಕ್ಷಿಸರ ಹಾಕಿಕೊಂಡಿದ್ದು, ತಲೆಯ ಮೇಲೆ ಕಳಸದಂತಹ ಕಿರೀಟವಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಈ ಕಿರೀಟಕ್ಕೆ ಹಿಂಬದಿಯಲ್ಲಿ ಚಕ್ರವಿದೆ. ಮೊಣಕಾಲಿನ ತನಕ ರುಂಡಮಾಲೆ ಇದೆ. ಬಾಗಿದ ಸೊಂಟದಲ್ಲಿ ಪಟ್ಟಿ ಇದ್ದು, ಅದರಲ್ಲಿ ಚಿಕ್ಕ ಬಾಕು ಇದೆ. ಬಲಪಾದದ ಬಳಿ ಸೊಂಟದ ತನಕ ಕೈಮುಗಿದು ನಿಂತಿರುವ ಆಡಿನ(ಹೋತದ) ತಲೆಯ ದಕ್ಷನಿದಾನೆ. ತಲೆಯ ಮೇಲೆ ಬೆಳೆದಿರುವ ಕೋಡುಗಳು ಚೂಪಾಗಿ ಮೇಲಕ್ಕೆ ಸೆಟೆದು ನಿಂತಿವೆ.

ಹಾಗೆಯೇ ರಾಜಮಾನ್ಯರು ವಸತಿ ಗೃಹಗಳ ಉತ್ತರಕ್ಕೆ ಒಂದು ಸಣ್ಣ ಬಂಡೆಯ ದಕ್ಷಿಣ ಪಾರ್ಶ್ವದಲ್ಲಿ ಸು. 4 ಅಡಿ ಎತ್ತರದ ವೀರಭದ್ರನ ಶಿಲ್ಪಕೆತ್ತಲಾಗಿದ್ದು, ಇದಕ್ಕೆ ಸು. 25 ಕಂಬಗಳ ಮಂಟಪ ನಿರ್ಮಿಸಲಾಗಿದೆ. ಈ ವೀರಭದ್ರ ನಾಲ್ಕು ಕೈಗಳನ್ನು ಹೊಂದಿದು, ಮೊಣಕಾಲನ್ನು ಮಡಚಿದ್ದಾನೆ. ಸೊಂಟಬಾಗಿದೆ. ಸೊಂಟ ಪಟ್ಟಿಯಲ್ಲಿ ಚಿಕ್ಕ ಬಾಕು ಇಟ್ಟು ಕೊಂಡಿದೆ. ಜನಿವಾರ ಧರಿಸಿದೆ. ಕೊರಳು ಕರ್ಣಾಭರಣ ಹೊಂದಿದೆ. ನಾಲ್ಕು ಕೈಗಳನ್ನು ಹೊಂದಿದು, ಬಲಗೈಗಳಲ್ಲಿ ಉದ್ದನೆಯ ಖಡ್ಗ, ಬಾಣ, ಎಡಗೈಗಳಲ್ಲಿ ಉದ್ದನೆಯ ಬಿಲ್ಲು, ಎತ್ತಿಹಿಡಿದ ಗುರಾಣಿ ಹಿಡಿದಿದೆ. ಕೊರಳಲ್ಲಿ ಉದ್ದನೆಯ ಕಂಠೀಹಾರವನ್ನು ಹಾಕಿಕೊಂಡಿದೆ. ಬಲಪಾದದ ಬಳಿ ಕೈಮುಗಿದು ನಿಂತಿರುವ ಟಗರು ತಲೆಯ ದಕ್ಷನನ್ನು ಕಂಡರಿಸಲಾಗಿದೆ. ಎಡಬಲಗಳಲ್ಲಿ ಮಂಟಪದ ಕಂಬ ಕೆತ್ತಲಾಗಿದೆ.

ಅಲ್ಲದೆ ಪ್ರಸನ್ನ ವಿರೂಪಾಕ್ಷ ದೇವಾಲಯದ ಬಲಪಕ್ಕದ ಮಂಟಪದ ಕೆಲ ಕಂಬಗಳಲ್ಲಿ ಸಾಮಾನ್ಯ ಲಕ್ಷಣಹೊಂದಿದ ವೀರಭದ್ರನ ಶಿಲ್ಪಗಳನ್ನು ಕಂಡರಿಸಿರುವುದು ಕಂಡುಬರುತ್ತದೆ. ಹೀಗೆ ಕಮಲ ಮಹಲ್ ಪರಿಸರದ ವೀರಭದ್ರನ ಶಿಲ್ಪಗಳು ವಿಶಿಷ್ಟವಾಗಿ ಕಂಡುಬರುತ್ತವೆ.

ಉಪಸಂಹಾರ

ಹಂಪಿಯಲ್ಲಿ ದೊರೆಯುವ ವಿಜಯನಗರ ಕಾಲದ ವೀರಭದ್ರ ಶಿಲ್ಪಗಳು ತ್ರಿಭಂಗಸ್ಥಾನಕ ಹಾವುಗೆಧಾರಿ, ಚತುರ್ಭುಜ ಮೂರ್ತಿಗಳಾಗಿರುತ್ತವೆ, ಖಡ್ಗ, ಬಾಣ, ಹಾಗೂ ಖೇಟಕ (ಡಾಲು – ಗುರಾಣಿ)ಗಳನ್ನು ಕೆಲವು ಶಿಲ್ಪಗಳಲ್ಲಿ ದಕ್ಷನ ಶಿಲ್ಪವಿಲ್ಲ. ಕೆಲವು ಶಿಲ್ಪಗಳಲ್ಲಿ ದಕ್ಷನ ಟಗರಿನ ತಲೆ, ಮೇಕೆಯ (ಹೋತ) ತಲೆ ಇರುತ್ತದೆ. ಒಂದು ಶಿಲ್ಪದಲ್ಲಿ ದಕ್ಷಬ್ರಹ್ಮ ವೀರಭದ್ರನ ಎಡಭಾಗದಲ್ಲಿ ನಿಂತಿದ್ದಾನೆ. ಕೆಲವು ಶಿಲ್ಪಗಳು ಕೋರೆ ಹಲ್ಲುಗಳನ್ನು ಹೊಂದಿವೆ. ಕೋರೆ ಹಲ್ಲಿಗಳು ಉದ್ವೇಗ ಅಥವಾ ಉಗ್ರತೆಯ ಪ್ರತಿಪಾದನೆ ಮಾಡಲು ಕಂಡರಿಸಿರಬಹುದು. ಹಂಪಿಯ ಕೆಲ ವೀರಭದ್ರ ಶಿಲ್ಪಗಳು ವಿಜಯನಗರ ಪೂರ್ವದಲ್ಲಿ ಧಾರ್ಮಿಕ ದೈವವಾಗಿ ವಿಜಯನಗರ ಕಾಲದಲ್ಲಿ ಧಾರ್ಮಿಕ ಮತ್ತು ಯುದ್ಧ ದೇವತೆಯಾಗಿ ಕಂಡು ಬರುತ್ತವೆ. ಇಲ್ಲಿ ನಯಗಾರಿಕೆ ಶಿಲ್ಪಗಳಿಗಿಂತ ಒರಟುಗಲ್ಲಿನ ಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತವೆ, ವಿಜಯನಗರ ಪೂರ್ವದ ವೀರಭದ್ರನ ಶಿಲ್ಪದ ಮೇಲೆ ವಚನಕಾರರ ವೀರಭದ್ರನ ಕುರಿತ ವಚನಗಳ ಪ್ರಭಾವವಿದ್ದಂತೆ ತೋರುತ್ತದೆ. ಹಿಂದೂ ಧರ್ಮ ರಕ್ಷಣೆಗಾಗಿಯೇ ಹುಟ್ಟಿದ ವಿಜಯನಗರ ಸಾಮ್ರಾಜ್ಯ ಜನರಲ್ಲಿ ಮತ್ತು ಸೈನಿಕರಲ್ಲಿ ವೀರ ವ್ಯಕ್ತಿತ್ವ ಶೌರ್ಯ ಸಾಹಸ ತುಂಬಲು ವೀರಭದ್ರನ ಆರಾಧನೆ ಆರಂಭಗೊಂಡಂತೆ ಕಂಡುಬರುತ್ತದೆ. ಶೈವ ವೈಷ್ಣವರ ನಡುವೆ ಧರ್ಮಸಮನ್ವಯದ ದೇವತೆಯಾಗಿ ರೂಪಿಸಲು ವೈಷ್ಣವ ದೇವಾಲಯಗಳ ಕಂಬಗಳಲ್ಲಿ ವೀರಭದ್ರನ ಶಿಲ್ಪ ಕೆತ್ತಲಾಗಿದೆ. ಅಲ್ಲದೆ ವೀರಭದ್ರನಿಗೆ ಜನಿವಾರ (?) ಶಿವಲಿಂಗ ಎರಡನ್ನೂ ಹಾಕಿರುವುದೊಂದು ವಿಶೇಷವಾಗಿ ಕಂಡು ಬರುತ್ತದೆ. ವೀರಭದ್ರನ ಬಲಭಾಗದಲ್ಲಿ ಕುರಿತಲೆಯ ದಕ್ಷನನ್ನು ನಿಲ್ಲಿಸಿರುವುದು ಅಹಂಕಾರಿ ವೈರಿಗಳನ್ನು ಕುರಿಯಂತೆ ಮುಗ್ಧವಾಗಿಸುವ ತಂತ್ರ ಅಡಗಿರುವ ಸಾಧ್ಯತೆ ಇದೆ. ಹಂಪಿಯ ವೀರಭದ್ರ ಕೇವಲ ಧಾರ್ಮಿಕ ಆಚರಣೆಗಾಗಿ ರೂಪಿತಗೊಂಡಿರದೆ ವೀರಪರಂಪರೆಯ ಪ್ರತಿಪಾದನೆಗಾಗಿ ರೂಪಿತಗೊಂಡಂತೆ ಕಂಡುಬರುತ್ತದೆ. ಈ ಶಿಲ್ಪಗಳನ್ನು ಶ್ರೀ ತತ್ತ್ವನಿಧಿ ಕಾರಣಕಾಗಮ, ಶಿಲ್ಪಸಮಗ್ರಹ, ಶಿಲ್ಪರತ್ನ ಗ್ರಂಥಗಳನ್ನು ಆಧರಿಸಿ ಕಂಡರಿಸಿದಂತೆ ಕಂಡು ಬರುತ್ತದೆ ಬಿಳಿ ಕಪ್ಪುಕಲ್ಲಿನಲ್ಲಿ ಕೆತ್ತಲಾಗಿದೆ.

ತುಂಗಭದ್ರ ನದಿ ದಂಡೆಯ ಸ್ನಾನಘಟ್ಟದ ಮುಂಭಾಗ ಹೆಬ್ಬಂಡೆಯಲ್ಲಿರುವ 15–16ನೇ ಶತಮಾನದ 2 ತೆಲುಗು ಶಾಸನಗಳು ಶ್ರೀ ವೀರಭದ್ರಡುಲಿಂಗಂ ವಿರೂಪಾಕ್ಷದೇವ, ಶ್ರೀವೀರಭದ್ರಲಿಂಗಂ ಎಂದು ಉಲ್ಲೇಖಿಸಿರುವುದನ್ನು ಗಮನಿಸಿದರೆ ಆರಂಭದಲ್ಲಿ ಹಂಪಿಯ ಪಂಪಾವಿರೂಪಾಕ್ಷ ಲಿಂಗವು ವೀರಭದ್ರಲಿಂಗವಾಗಿತ್ತೆ? ಅಥವಾ ವಿರೂಪಾಕ್ಷ ದೇವಾಲಯವೇ

ವೀರಭದ್ರದೇವಾಲಯವಾಗಿತ್ತೆ? ಹಂಪಿ ವಿರೂಪಾಕ್ಷ ತೀರ್ಥವಾಗಿದ್ದಂತೆ ವೀರಭದ್ರ ತೀರ್ಥವಾಗಿತ್ತೆ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ.

ಅಡಿಟಿಪ್ಪಣಿಗಳು

1. ಡಾ. ದೇವರ ಕೊಂಡಾರೆಡ್ಡಿ ಮತ್ತು ಇತರರು (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ – 3,* ಹಂಪಿ ಶಾಸನಗಳು ಶಾ. ಸಂಖ್ಯೆ – 17, 18 ಪುಟ–9.
2. ಎಂ.ಜಿ. ನಾಗರಾಜ, *ಸಾಂಸ್ಕೃತಿಕ ವೀರಭದ್ರಸ್ವಾಮಿ,* ಪುಟ–80.
3. ಪೂರ್ವೋಕ್ತ, *ಹಂಪಿಶಾಸನಗಳು,* ಶಾ. ಸಂಖ್ಯೆ 84, ಪುಟ 85.
4. ಪೂರ್ವೋಕ್ತ, *ಸಾಂಸ್ಕೃತಿಕ ವೀರಭದ್ರಸ್ವಾಮಿ,* ಪುಟ 76.
5. ಅದೇ, ಪುಟ 77.
6. ಪೂರ್ವೋಕ್ತ, *ಹಂಪಿಶಾಸನಗಳು,* ಶಾ. ಸಂಖ್ಯೆ 10, ಪುಟ 4.
7. ಪೂರ್ವೋಕ್ತ, *ಹಂಪಿಶಾಸನಗಳು,* ಶಾ. ಸಂಖ್ಯೆ 18, ಪುಟ 24.
8. ಕೆ.ಆರ್. ರಾಮಕೃಷ್ಣ ಮತ್ತು ಇತರರು (ಸಂ.), *ವಿಜಯನಗರ ಅಧ್ಯಯನ ಸಂಪುಟ,* 8, ಪುಟ 222.
9. ಡಾ. ಕೆ.ಎಂ. ಸುರೇಶ (ಸಂ), *ವೀರಶೈವ* (ಸ್ಮರಣ ಸಂಚಿಕೆ) ಪುಟ 17.

ಆಕರ ಗ್ರಂಥಗಳು

1. ದೇವರ ಕೊಂಡಾರೆಡ್ಡಿ ಮತ್ತು ಇತರರು (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 3,* ಹಂಪಿ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, 2000.
2. ನಾಗರಾಜ ಎಂ.ಜಿ., *ಸಾಂಸ್ಕೃತಿಕ ವೀರಭದ್ರಸ್ವಾಮಿ,* ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ, ಶ್ರೀವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೆಹೊನ್ನೂರು, 2005.
3. ರಾಮಕೃಷ್ಣ ಕೆ.ಆರ್. ಮತ್ತು ಇತರರು (ಸಂ), *ವಿಜಯನಗರ ಅಧ್ಯಯನ ಸಂಪುಟ 8,* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2000.
4. ಸುರೇಶ ಕೆ.ಎಂ. (ಸಂ), *ವೀರಶೈವ (ಸ್ಮರಣ ಸಂಚಿಕೆ),* ಹೊಸಪೇಟೆ ತಾಲೂಕು ವೀರಶೈವ ನೌಕರರ ಸಂಘ, ಹೊಸಪೇಟೆ, 2002.

18. ವಿಜಯನಗರ ಕಾಲಾವಧಿಯ ಚಿಂತಲ ವೆಂಕಟರಮಣಸ್ವಾಮಿ ದೇವಾಲಯದಲ್ಲಿನ ಕೆಲವು ವಿಶಿಷ್ಟ ಶಿಲ್ಪಗಳು

ಧನುಂಜಯ. ಸಿ

ದಕ್ಷಿಣ ಭಾರತದಲ್ಲಿ ಕ್ರಿ.ಶ 13ನೇ ಶತಮಾನದ ಅಂತ್ಯದ ವೇಳೆಗೆ ಸ್ಥಳೀಯ ಅರಸರ ಮೇಲೆ ಮುಸ್ಲಿಮರ ಆಕ್ರಮಣಗಳು ನಡೆದವು. ಅವರ ಆಕ್ರಮಣಗಳನ್ನು ಎದುರಿಸಲು ವಿಜಯನಗರ ಸಾಮ್ರಾಜ್ಯವನ್ನು ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಹಕ್ಕ ಮತ್ತು ಬುಕ್ಕರು ಕ್ರಿ.ಶ 1336 ರಲ್ಲಿ ಸ್ಥಾಪಿಸಿದರು. ಈ ಸಾಮ್ರಾಜ್ಯವು ಹಂಪೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಎರಡೂವರೆ ಶತಮಾನಗಳ ಕಾಲ ವೈಭವಯುತವಾಗಿ ಆಳ್ವಿಕೆ ನಡೆಸಿ, ಜನರ ಬದುಕಿನಲ್ಲಿ ಸುವರ್ಣಯುಗವನ್ನು ಸೃಷ್ಟಿಸಿತು. ಈ ಸಾಮ್ರಾಜ್ಯದ ಆದಿದೈವ ವಿರೂಪಾಕ್ಷನಿರುವ ಹಂಪಿಯು ಸಾಮ್ರಾಜ್ಯದ ಪ್ರಮುಖ ಕೇಂದ್ರವಾಗಿ ಅಭಿವೃದ್ಧಿಯತ್ತ ಸಾಗಿ ಬೆಳವಣಿಗೆಯಾಗಿರುವುದನ್ನು ಕಾಣಬಹುದು. ಈ ವಿರೂಪಾಕ್ಷ ದೇವಾಲಯವು ಪ್ರಾಚೀನ ಕಾಲದಿಂದಲೂ ಮಹತ್ವವನ್ನು ಹೊಂದಿದ್ದು, ಪೂಜ್ಯನೀಯ ದೇವಾಲಯವಾಗಿದೆ.

ವಿಜಯನಗರ ಸಾಮ್ರಾಜ್ಯವನ್ನು ಆಳಿದ ಅರಸು ಮನೆತನಗಳಲ್ಲಿ ಸಂಗಮವಂಶ ಮೊದಲನೆಯದು, ಎರಡನೆಯದು ಸಾಳುವವಂಶ, ಮೂರನೆಯದು ತುಳುವವಂಶ, ನಾಲ್ಕನೆಯದು ಅರವೀಡುವಂಶ. ಈ ವಂಶಗಳು ವಿಜಯನಗರವನ್ನು ಕ್ರಮವಾಗಿ ಒಂದರ ನಂತರ ಒಂದಾಗಿ ಆಳಿದವು. ವಿಜಯನಗರದ ದಕ್ಷ ಅರಸರುಗಳೊಂದಿಗೆ ಈ ಹಿಂದೂ ಸಾಮ್ರಾಜ್ಯವು ಬಲಶಾಲಿಯಾಗಿ ಬೆಳೆದು ಸಾಕಷ್ಟು ಬದಲಾವಣೆಯನ್ನು ಮಾಡಿತು. ವಿಜಯನಗರದ ಅರಸರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದರು ಎಂಬುದಕ್ಕೆ ಅವರು ನಿರ್ಮಿಸಿದ ಸ್ಮಾರಕಗಳು ಮತ್ತು ಶಿಲ್ಪಗಳು ಸಾಕ್ಷಿಯಾಗಿವೆ. ಈ ಅರಸರ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಹಿಂದೆ ಕಂಡರಿಯದಷ್ಟು ಪ್ರಮಾಣದಲ್ಲಿ ವಾಸ್ತುಶಿಲ್ಪ ನಿರ್ಮಾಣ ಚಟುವಟಿಕೆಗಳು ಇಲ್ಲಿ ನಡೆದವು. ಅದರಲ್ಲೂ ತುಳುವ ವಂಶದ ಶ್ರೇಷ್ಠ ದೊರೆ ಶ್ರೀಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಎಲ್ಲಾ ರೀತಿಯಲ್ಲೂ ಬೆಳವಣಿಗೆಯನ್ನು ಕಂಡು ಉತ್ತುಂಗ ಮಟ್ಟವನ್ನು ಕಂಡಿತು. ಕೃಷ್ಣದೇವರಾಯನು ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಚ್ಚು ಮಹತ್ವವನ್ನು ನೀಡಿದ್ದು, ಆತನ ಕಾಲಾವಧಿಯ ಹಲವು ದೇವಾಲಯಗಳು ಮತ್ತು ಶಿಲ್ಪಗಳು ವಿಜಯನಗರ ವಾಸ್ತುಶೈಲಿಯ ಅನನ್ಯತೆ ಮತ್ತು ವಿಶೇಷತೆಯಾಗಿವೆ.[1] ಅಂತಹ ದೇವಾಲಯಗಳಲ್ಲಿ ಮುಖ್ಯವಾಗಿ ವಿಜಯನಗರ ಕಾಲಾವಧಿಯ ಆಂಧ್ರದ ತಾಡಪತ್ರಿಯಲ್ಲಿನ ಚಿಂತಲ ವೆಂಕಟರಮಣಸ್ವಾಮಿ ದೇವಾಲಯವು ಪ್ರಮುಖವಾಗಿದೆ.

ಪ್ರಸ್ತುತ ಆಂಧ್ರದ ತಾಡಪತ್ರಿಯ ಚಿಂತಲ ವೆಂಕಟರಮಣಸ್ವಾಮಿ ದೇವಾಲಯದಲ್ಲಿನ ಕೆಲವು ವಿಶಿಷ್ಟ ಶಿಲ್ಪಗಳನ್ನು ವಿಶ್ಲೇಷಿಸುವುದು ಮತ್ತು ಹಂಪಿಯ ಶಿಲ್ಪಗಳ ಜೊತೆ ಅವುಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಈ ಪ್ರಬಂಧದ ಉದ್ದೇಶವಾಗಿದೆ.

ಚಾರಿತ್ರಿಕ ಹಿನ್ನೆಲೆ: ಈ ದೇವಾಲಯವು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ತಾಡಪತ್ರಿಯಲ್ಲಿದೆ. ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಅರಸನಾದ ಶ್ರೀಕೃಷ್ಣದೇವರಾಯನ ಸಾಮಂತ ಅರಸನಾದ ರಾಮಲಿಂಗನಾಯುಡು ಅವರ ಮಗ ಯರ್ರತಿಮ್ಮನಾಯುಡು ಅವರು ಸುಮಾರು ಕ್ರಿ.ಶ.1510ರಲ್ಲಿ ಈ ದೇವಾಲಯವನ್ನು ನಿರ್ಮಿಸಿರುವುದು ನಮಗೆ ತಿಳಿದುಬರುತ್ತದೆ.[2]

ಈ ವೆಂಕಟರಮಣಸ್ವಾಮಿಗೆ ಚಿಂತಲ ಎಂಬ ಹೆಸರು ಬಂದಿರುವುದಕ್ಕೆ ಅಲ್ಲಿನ ಸ್ಥಳೀಯರು ಹಲವು ಕಾರಣಗಳನ್ನು ಅಥವಾ ಐತಿಹ್ಯಗಳನ್ನು ಹೇಳುತ್ತಾರೆ. ಒಂದನೆಯದಾಗಿ ಚಿಂತಲ ಎಂಬುದು ತೆಲುಗು ಪದ. ಇದಕ್ಕೆ ಹುಣಸೆ ಎಂಬ ಅರ್ಥವಿದೆ. ಹಾಗಾಗಿ ಈ ಪ್ರದೇಶದಲ್ಲಿ ಸಾಕಷ್ಟು ಹುಣಸೆ ಮರಗಳಿದ್ದು, ಈ ಮರಗಳ ಮಧ್ಯಭಾಗದಲ್ಲಿ ಈ ದೇವರು ಉದ್ಭವನಾದ. ಆ ಕಾರಣಕ್ಕಾಗಿ ಈ ದೇವರಿಗೆ ಚಿಂತಲ ವೆಂಕಟರಮಣಸ್ವಾಮಿ ಎಂಬ ಹೆಸರು ಬಂತು ಎಂಬುದಾಗಿ ಹೇಳುತ್ತಾರೆ.

ಎರಡನೆಯದಾಗಿ ಚಿಂತ ಎಂಬುದು ತೆಲುಗು ಪದ. ಅದಕ್ಕೆ ಚಿಂತೆ ಎಂಬ ಅರ್ಥವಿದೆ. ಹಾಗಾಗಿ ಈ ದೇವರು ತನ್ನ ಭಕ್ತರ ಚಿಂತೆಗಳನ್ನು ಅಥವಾ ಸಂಕಷ್ಟಗಳನ್ನು ನಿವಾರಿಸುತ್ತಾನೆ. ಈ ಕಾರಣಕ್ಕಾಗಿ ಈ ದೇವರಿಗೆ ಚಿಂತಲ ವೆಂಕಟರಮಣಸ್ವಾಮಿ ಎಂಬ ಹೆಸರು ಬಂದಿತ್ತೆಂದು ಮತ್ತೆ ಕೆಲವರು ಹೇಳುತ್ತಾರೆ.[3]

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿ, ಅಂತರಾಳ, ನವರಂಗ, ಮುಖಮಂಟಪದಿಂದ ಕೂಡಿದ್ದು, ಪೂರ್ವಕ್ಕೆ ದೊಡ್ಡ ದ್ವಾರಗೋಪುರವಿದೆ. ಜೊತೆಗೆ ಈ ದೇವಾಲಯದ ಎಡಭಾಗದಲ್ಲಿ ಲಕ್ಷ್ಮೀ ದೇವಾಲಯ, ಬಲಭಾಗದಲ್ಲಿ ಕಲ್ಯಾಣ ಮಂಟಪವಿದೆ. ಈ ದೇವಾಲಯದ ಸುತ್ತಲೂ ಸುಮಾರು 15 ಅಡಿ ಎತ್ತರದ ಪ್ರಕಾರ ಗೋಡೆಯನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಈ ದೇವಾಲಯದ ಕಂಬಗಳಲ್ಲಿ ಮತ್ತು ಭಿತ್ತಿಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತದ ಹಲವು ಸನ್ನಿವೇಶಗಳನ್ನು ತಿಳಿಸುವ ಹಲವು ಶಿಲ್ಪಗಳನ್ನು ಕಾಣಬಹುದು.

ಈ ದೇವಾಲಯವು ಹಂಪಿಯ ದೇವಾಲಯಗಳನ್ನೇ ಹೋಲುವಂತಿದ್ದರೂ ವಾಸ್ತುಶಿಲ್ಪದ ದೃಷ್ಟಿಯಿಂದ ಇದು ವಿಭಿನ್ನವಾಗಿದೆ. ಜೊತೆಗೆ ಈ ದೇವಾಲಯದಲ್ಲಿ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಹಲವು ವಿಶಿಷ್ಟ ಶಿಲ್ಪಗಳು ಕಂಡುಬರುತ್ತವೆ. ಅಂತಹ ಕೆಲವು ವಿಶಿಷ್ಟ ಶಿಲ್ಪಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಮತ್ಸ್ಯಾವತಾರ ಶಿಲ್ಪ

ಈ ಶಿಲ್ಪವು ಚಿಂತಲ ವೆಂಕಟರಮಣಸ್ವಾಮಿ ದೇವಾಲಯದ ಮುಖಮಂಟಪದಲ್ಲಿ ಎಡಭಾಗದಿಂದ 10ನೇ ಕಂಬದ ಮಧ್ಯಪಟ್ಟಿಕೆಯಲ್ಲಿದ್ದು, ದಕ್ಷಿಣಾಭಿಮುಖವಾಗಿದೆ. ಈ ಶಿಲ್ಪದಲ್ಲಿ ಮತ್ಸ್ಯಾವತಾರ ತಾಳಿದ ವಿಷ್ಣುವು ಚತುರ್ಭುಜದಾರಿಯಾಗಿದ್ದು, ನಡುವಿನಿಂದ ಕೆಳಭಾಗ ಮೀನಿನ ರೂಪದಲ್ಲಿದ್ದು ಮೇಲ್ಭಾಗ ಮನುಷ್ಯನ ರೂಪದಿಂದ ಕೂಡಿರುವುದನ್ನು ಕಾಣಬಹುದು ಹಾಗಾಗಿ ಇದನ್ನು ನರಮೃಗರೂಪದ ಶಿಲ್ಪವೆಂದೇ ಹೇಳಬಹುದು.

ಈ ನರಮೃಗರೂಪದಲ್ಲಿನ ಮತ್ಸ್ಯಾವತಾರಿಯು ಮೇಲಿನ ಅರ್ಧಭಾಗದಲ್ಲಿ ನಾಲ್ಕು ಕೈಗಳನ್ನು ಹೊಂದಿದ್ದು. ಮೇಲಿನ ಎರಡೂ ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ತೋರಿಸಲಾಗಿದೆ. ಕೆಳಗಿನ ಎರಡು ಕೈಗಳಲ್ಲಿ ಒಂದಾದ ಎಡಗೈಯನ್ನು ಹಯಗ್ರೀವನೆಂಬ ದೈತ್ಯನ ಹೊಟ್ಟೆಯನ್ನು ಬಗೆಯುತ್ತಿದ್ದು, ಬಲಗೈಯಲ್ಲಿ ಹೊಟ್ಟೆಯಲ್ಲಿದ್ದ ವೇದಗಳನ್ನು ಹೊರತೆಗೆಯುತ್ತಿರುವ ಸನ್ನಿವೇಶವನ್ನು ಶಿಲ್ಪಿಯು ಅತಿ ಸೂಕ್ಷ್ಮವಾಗಿ ಬಿಡಿಸಿರುವುದನ್ನು ಕಾಣಬಹುದು.

ಈ ಶಿಲ್ಪದಲ್ಲಿ ಮತ್ಸ್ಯಾವತಾರಿಯಾದ ವಿಷ್ಣುವು ಹಲವು ಆಭರಣಗಳನ್ನು ಧರಿಸಿದ್ದಾನೆ. ಅವುಗಳಲ್ಲಿ ಮುಖ್ಯವಾಗಿ ತಲೆಯಲ್ಲಿ ಕಿರೀಟ ಮುಕುಟ, ಕಂಠಹಾರಗಳು, ತೋಳುಬಂಧಿಗಳು, ಕೈಕಡಗಗಳು, ಸೊಂಟಹಾರಗಳನ್ನು ಧರಿಸಿರುವನು. ಇಲ್ಲಿ ವಿಷ್ಣುವು ಮತ್ಸ್ಯಾವತಾರವನ್ನು ಏಕೆ ತಾಳಬೇಕಾಯಿತು ಎಂಬುದನ್ನು ತಿಳಿಯುವುದಾದರೆ ಬ್ರಹ್ಮನು ನಿದ್ರಾಪರವಶನಾದಂತಹ ಸಮಯದಲ್ಲಿ ಅವನ ಮುಖದಿಂದ ಹೊರಗೆ ಬಂದ ನಾಲ್ಕು ವೇದಗಳನ್ನು ಹಯಗ್ರೀವನೆಂಬ ದೈತ್ಯನು ಅಪಹರಿಸಿ ಸಮುದ್ರದಲ್ಲಿ ಅಡಗಿದ. ಲೋಕಕ್ಷೇಮಕಾರಕವಾದ ಮಾರ್ಗವನ್ನು ಬೋಧಿಸುವ ವೇದಗಳು ಲೋಕ ಕಂಟಕರಿಗೆ ಮಾರ್ಗ ಕಂಟಕವಾಗುತ್ತವೆ. ಹಾಗಾಗಿ ಈ ಚೋರಶಿಖಾಮಣಿಯನ್ನು ವಧಿಸುವುದು ಲೋಕರಕ್ಷಕನಾದ ಮಹಾವಿಷ್ಣುವಿಗೆ ಅನಿವಾರ್ಯವಾಗಿತ್ತು. ಸಮುದ್ರದಲ್ಲಿ ಅಡಗಿದ್ದ ರಾಕ್ಷಸನನ್ನು ಮರ್ಧಿಸಲು ಜಲಚರವಾಗುವುದು ಅತ್ಯಾವಶ್ಯಕವಾಗಿದ್ದರಿಂದ ವಿಷ್ಣು ಮತ್ಸ್ಯಾವತಾರವನ್ನು ತಾಳಬೇಕಾಯಿತು.[4]

ಹೀಗೆ ಮತ್ಸ್ಯಾವತಾರದ ಉದ್ದೇಶವನ್ನು ತಿಳಿಸುವಂತಹ ಶಿಲ್ಪವು ಈ ದೇವಾಲಯದಲ್ಲಿ ಕಂಡುಬರುತ್ತದೆ. ಈ ರೀತಿಯ ಶಿಲ್ಪಗಳು ಕಂಡುಬರುವುದು ಅತಿ ವಿರಳವೆಂದೇ ಹೇಳಬಹುದು. ಹಾಗಾಗಿ ಇದೊಂದು ಮಹತ್ವದ ಶಿಲ್ಪವಾಗಿದ್ದು, ವಿಶಿಷ್ಟವಾದುದೆಂದೇ ಹೇಳಬಹುದು.

ವರಾಹಾವತಾರದ ಶಿಲ್ಪ

ಈ ಶಿಲ್ಪವು ಸಹ ದೇವಾಲಯದ ಮುಖಮಂಟಪದಲ್ಲಿ ಎಡಭಾಗದಿಂದ 10ನೇ ಕಂಬದ ಮೇಲ್ಪಟ್ಟಿಕೆಯಲ್ಲಿದ್ದು, ದಕ್ಷಿಣಾಭಿಮುಖವಾಗಿದೆ. ಈ ಶಿಲ್ಪದಲ್ಲಿ ವರಾಹಾವತಾರಿಯಾದ ವಿಷ್ಣುವು ಕಂಠಹಾರ ಎದೆಹಾರ, ತೋಳುಬಂಧಿ, ಕೈಕಡಗ, ಸೊಂಟಹಾರಗಳನ್ನು ಧರಿಸಿದ್ದು ಕಚ್ಚೆಪಂಚೆಯಂತ ಉಡುಪನ್ನು ಧರಿಸಿರುವುದು ಕಂಡುಬರುತ್ತದೆ.

ಈ ಶಿಲ್ಪದಲ್ಲಿನ ಸನ್ನಿವೇಶದ ಹಿನ್ನೆಲೆಯನ್ನು ತಿಳಿಯುವುದಾದರೆ, ವರಾಹ ರೂಪಿಯಾದ ವಿಷ್ಣುವು ತನ್ನ ಕೋರೆದಾಡೆಯ ಮೇಲೆ ಮುಳುಗಿದ್ದ ಭೂಮಿಯನ್ನು ಎತ್ತಿ, ಮೇಲೆದ್ದು ಬರುತ್ತಿರುವಾಗ ಹಿರಣ್ಯಾಕ್ಷನೆಂಬ ರಾಕ್ಷಸನು ತಡೆದನು. ಆಗ ಅವರಿಬ್ಬರ ನಡುವೆ ನಡೆದ ಸಂಘರ್ಷದ ಸನ್ನಿವೇಶವನ್ನು ವ್ಯಕ್ತಪಡಿಸುತ್ತದೆ.[5] ಈ ಶಿಲ್ಪದಲ್ಲಿನ ವರಾಹಮೂರ್ತಿಯು ಎರಡು ಕೈಗಳನ್ನು ಮಾತ್ರ ಹೊಂದಿದ್ದು ತನ್ನ ಬಲಗೈಯಲ್ಲಿ ಹಿರಣ್ಯಾಕ್ಷನ ಕಾಲುಗಳನ್ನು, ಎಡಗೈಯಲ್ಲಿ ಅವನ ತಲೆಯ ಕೂದಲನ್ನು "ಹಿಡಿದು ಮೇಲಕ್ಕೆ ಎತ್ತಿದ್ದು, ತನ್ನ ಕೋರೆಯಿಂದ ಹಿರಣ್ಯಾಕ್ಷನ ಹೊಟ್ಟೆಗೆ ತಿವಿದು ಸಾಯಿಸುತ್ತಿರುವ ಸನ್ನಿವೇಶವನ್ನು ಕಾಣಬಹುದು.


ಹೀಗೆ ಹಿರಣ್ಯಾಕ್ಷನೆಂಬ ರಾಕ್ಷಸನನ್ನು ಕೊಲ್ಲುತ್ತಿರುವ ಈ ರೀತಿಯಾದ ಶಿಲ್ಪಗಳು ಕಂಡುಬರುವುದು ತುಂಬಾ ವಿರಳ. ಹಾಗಾಗಿ ಇದೊಂದು ವಿಶಿಷ್ಟವಾದ ಶಿಲ್ಪವೆಂದೇ ಹೇಳಬಹುದು. ಈ ಶಿಲ್ಪವೊಂದನ್ನು ಹೊರತುಪಡಿಸಿದರೆ ಮಿಕ್ಕ ಎಲ್ಲಾ ವರಾಹಾವತಾರದ ಶಿಲ್ಪಗಳು ಹಂಪಿಯಲ್ಲಿನ ವರಾಹಾವತಾರದ ಶಿಲ್ಪಗಳನ್ನು ಹೋಲುತ್ತವೆ.

ಜೊತೆಗೆ ಈ ದೇವಾಲಯದ ಮುಖಮಂಟಪದ ಕಂಬದಲ್ಲಿನ ಕಾಳಿಂಗಮರ್ಧನ ಶಿಲ್ಪ. ಈ ಶಿಲ್ಪದಲ್ಲಿ ಬಾಲಕೃಷ್ಣನು ಕಾಳಿಂಗ ಸರ್ಪದ ಬಾಯನ್ನು ಎರಡು ಹೋಳುಗಳಾಗಿ ಕಾಲುಗಳಿಂದ ಸಿಗಿಯುತ್ತಿರುವ ಸನ್ನಿವೇಶವನ್ನು ಕಾಣಬಹುದು. ನಂತರ ಈ ದೇವಾಲಯದ ಎಡಭಾಗದಲ್ಲಿನ ಲಕ್ಷ್ಮೀದೇವಾಲಯದ ಕಪೋತದ ಮೇಲೆ ಕೊತಿಗಳ ಉಬ್ಬುಶಿಲ್ಪಗಳನ್ನು ಯಥೇಚ್ಚವಾಗಿ ಬಿಡಿಸಿರುವುದು ಸಹ ಒಂದು ವಿಶಿಷ್ಟವೆಂದೇ ಹೇಳಬಹುದು.


ಒಟ್ಟಾರೆಯಾಗಿ ಈ ದೇವಾಲಯವು ವಾಸ್ತುಶಿಲ್ಪದ ಹಿನ್ನೆಲೆಯಿಂದ ಮಹತ್ವವನ್ನು ಪಡೆದಿದ್ದು, ಹಲವು ವಿಶಿಷ್ಟ ಶಿಲ್ಪಗಳು ಕಂಡುಬರುತ್ತವೆ. ಅವುಗಳಲ್ಲಿ ಅತೀ ಮುಖ್ಯವಾದ ಕೆಲವು ವಿಶಿಷ್ಟ ಶಿಲ್ಪಗಳನ್ನು ಈ ಪ್ರಬಂಧದಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೆ. ಜೊತೆಗೆ ಈ ಶಿಲ್ಪಗಳಲ್ಲಿನ ಸನ್ನಿವೇಶಗಳನ್ನು ಗಮನಿಸಿದರೆ ಇವುಗಳನ್ನು ಬಿಡಿಸಿದ ಶಿಲ್ಪಿಯು ವಿದ್ವಾಂಸನೂ, ಸೃಜನಶೀಲನೂ ಮತ್ತು ಹೆಚ್ಚು ಅನುಭವಿಯುಳ್ಳವನೆಂದೇ ಹೇಳಬಹುದು.

ಅಡಿಟಿಪ್ಪಣಿಗಳು

1. ದೇಸಾಯಿ ಪಿ.ಬಿ., *ಕರ್ನಾಟಕ ಇತಿಹಾಸ*, ಪು. 48–50.
2. www.chitala venkataramanatemple.info.
3. ಅರ್ಚಕರು, *ಚಿಂತಲ ವೆಂಕಟರಮಣಸ್ವಾಮಿ ದೇವಾಲಯ*, ತಾಡಪತ್ರಿ.
4. ಗೋಪಾಲಕೃಷ್ಣಶಾಸ್ತ್ರಿ ಸಿ., *ದಶಾವತಾರ ಉಪನ್ಯಾಸಗಳು*, ಪು. 15.
5. ಗೋಪಾಲಕೃಷ್ಣಶಾಸ್ತ್ರೀ ಸಿ., *ಪೂರ್ವೋಕ್ತ*, ಪು. 33–37.




ಚಿಂತಲ ವೆಂಕಟರಮಣಸ್ವಾಮಿ ದೇವಸ್ಥಾನ, ತಾಡಪತ್ರಿ




ವತ್ಸ್ಯಾವತಾರ ಶಿಲ್ಪ




ವರಾಹಾವತಾರ ಶಿಲ್ಪ



ಕಾಳಿಂಗಮರ್ಧನ ಶಿಲ್ಪ



ಕಪೋತದಲ್ಲಿನ ಮಂಗಗಳ ಉಬ್ಬುಶಿಲ್ಪ



ದೇವಾಲಯದ ಜಗತಿಯಲ್ಲಿನ ಶಿಲ್ಪಗಳು

19. ಹಂಪೆ ಹಜಾರರಾಮ ದೇವಾಲಯದಲ್ಲಿರುವ ವಿಷ್ಣುಚತುರ್ವಿಂಶತಿ ಶಿಲ್ಪಗಳು

ಡಾ. ಪದ್ಮಜಾ ದೇಸಾಯಿ

ವಿಜಯನಗರ ಸಾಮ್ರಾಜ್ಯವು ಸಾಂಸ್ಕೃತಿಕ ಇತಿಹಾಸದಲ್ಲಿ ಮಾಡಿದ ಸಾಧನೆ ಅಪೂರ್ವವಾದುದು. ಅವರು ನಿರ್ಮಿಸಿದ ಮಹತ್ವವಾದ ಸ್ಮಾರಕಗಳು ಇಂದಿಗೂ ಭಗ್ನಾವಸ್ಥೆಯಲ್ಲಿದ್ದರು ನೋಡುಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತವೆ. ಹಂಪೆಯ ಪ್ರಸಿದ್ಧ ದೇವಾಲಯಗಳಲ್ಲಿ ಹಜಾರರಾಮ ದೇವಾಲಯ ಅರಮನೆಯ ಆವರಣದಲ್ಲಿರುವ ಅಪ್ಪಟ ವೈಷ್ಣವ ದೇವಾಲಯವಾಗಿದೆ. ಈ ದೇವಾಲಯ ವಿಜಯನಗರದ ಕಾಲದ ದೇವಾಲಯಗಳಲ್ಲಿ ವಾಸ್ತು ಮತ್ತು ಶಿಲ್ಪಗಳಿಂದ ಕೂಡಿದ ಪ್ರಸಿದ್ಧ ದೇವಾಲಯವಾಗಿದೆ.[1]

ಕ್ರಿ.ಶ. 14–15 ಶತಮನದಲ್ಲಿ ಕಣಶಿಲೆಯಿಂದ ನಿರ್ಮಾಣವಾದ ಈ ದೇವಾಲಯವು ವಿವಿಧ ವೈಷ್ಣವ ಶಿಲ್ಪಗಳಿಂದ ತುಂಬಿದೆ, ಮಹಾಕಾವ್ಯಗಳಲ್ಲಿ ಒಂದಾದ ರಾಮಾಯಣಕ್ಕೆ ಸಂಬಂಧಿಸಿದ ಕಥಾನಕ ಶಿಲ್ಪಗಳು ಇವೆ. ದೇವಾಲಯದ ಕಂಬಗಳ ಮೇಲೆ ವಿವಿಧ ಶಿಲ್ಪಗಳನ್ನು ಕೆತ್ತಲಾಗಿದೆ. ವಿಷ್ಣುವಿನ ಅವತಾರಗಳಾದ ದಶಾವತಾರ ಮತ್ತು ವಿಷ್ಣುಚತುರ್ವಿಂಶತಿ ಶಿಲ್ಪಗಳ ಸರಣಿಯೇ ಇದೆ.[2]

ಹಜರರಾಮ ದೇವಾಲಯದ ನವರಂಗದಲ್ಲಿರುವ ನಾಲ್ಕು ಕಪ್ಪು ಶಿಲೆಯ ಕಂಬಗಳಲ್ಲಿ ಕೆತ್ತಿರುವ ವಿಷ್ಣುವಿನ ಅಂಶಾವಾತಾರಗಳಾದ ಇಪ್ಪತ್ತು ನಾಲ್ಕು ಅವತಾರಗಳು ಅಥವಾ ಚತುರ್ವಿಂಶತಿ ರೂಪಗಳಿರುವ ಶಿಲ್ಪಗಳು ಪುರಾಣಗಳು ಮತ್ತು ಆಗಮಗಳ ಹಿನ್ನೆಲೆಯಲ್ಲಿ ರಚನೆಯಗಿವೆಯೋ ಅಥವಾ ಆಗಮಗಳನ್ನು ಹೊರತುಪಡಿಸಿ ರಚನೆಯಾಗಿವೆಯೋ ಎಂಬುದನ್ನು ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.

ನಾಲ್ಕು ಕಂಬಗಳಲ್ಲಿರುವ ವಿಷ್ಣುಚತುರ್ವಿಂಶತಿ ಶಿಲ್ಪಗಳ ವಿವರ

ಮೊದಲನೆಯ ಕಂಬದಲ್ಲಿರುವ ಶಿಲ್ಪಗಳು

ಪೂರ್ವದಿಕ್ಕಿಗಿರುವ ಶಿಲ್ಪಗಳು – ವಿಷ್ಣುವಿನ ಚತುರ್ವಿಂಶತಿ ಶಿಲ್ಪ (ಕಂಬದ ಮೂರನೆಯ ಭಾಗದಲ್ಲಿ)
ದಕ್ಷಿಣ ದಿಕ್ಕಿಗಿರುವ ಶಿಲ್ಪಗಳು – ಎರಡು ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳು ಇವೆ.
ಪಶ್ಚಿಮ ದಿಕ್ಕಿಗಿರುವ ಶಿಲ್ಪಗಳು – ಎರಡು ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಿವೆ (ಕಂಬದ 2 ಮತ್ತು 3ನೇ ಭಾಗದಲ್ಲಿ)
ಉತ್ತರ ದಿಕ್ಕಿಗಿರುವ ಶಿಲ್ಪಗಳು – ಒಂದು ವಿಷ್ಣುವಿನ ಚತುರ್ವಿಂಶತಿ ಶಿಲ್ಪವಿದೆ.

ಎರಡನೆಯ ಕಂಬದಲ್ಲಿರುವ ಶಿಲ್ಪಗಳ ವಿವರ

ಪೂರ್ವದಿಕ್ಕಿಗಿರುವ ಶಿಲ್ಪಗಳು – ಎರಡು ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಿವೆ (ಕಂಬದ 2 ಮತ್ತು 3ನೇ)
ದಕ್ಷಿಣ ದಿಕ್ಕಿಗಿರುವ ಶಿಲ್ಪಗಳು – ಒಂದು ವಿಷ್ಣುವಿನ ಚತುರ್ವಿಂಶತಿ ಶಿಲ್ಪವಿದೆ (ಕಂಬದ 3ನೇ ಭಗದಲ್ಲಿದೆ)
ಪಶ್ಚಿಮ ದಿಕ್ಕಿಗಿರುವ ಶಿಲ್ಪಗಳು – ಒಂದು ವಿಷ್ಣುವಿನ ಚತುರ್ವಿಂಶತಿ ಶಿಲ್ಪವಿದೆ (ಕಂಬದ 3ನೇ ಭಾಗದಲ್ಲಿದೆ)
ಉತ್ತರ ದಿಕ್ಕಿಗಿರುವ ಶಿಲ್ಪಗಳು – ಎರಡು ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಿವೆ (ಕಂಬದ 2 ಮತ್ತು 3ನೇ ಭಾಗದಲ್ಲಿವೆ)

ಮೂರನೆಯ ಕಂಬದಲ್ಲಿರುವ ಶಿಲ್ಪಗಳ ವಿವರ

ಪೂರ್ವದಿಕ್ಕಿಗಿರುವ ಶಿಲ್ಪಗಳು – ಎರಡು ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಿವೆ (ಕಂಬದ 2 ಮತ್ತು 3ನೇ ಭಾಗದಲ್ಲಿದೆ)
ದಕ್ಷಿಣ ದಿಕ್ಕಿಗಿರುವ ಶಿಲ್ಪಗಳು – ಒಂದು ಚತುರ್ವಿಂಶತಿ ಶಿಲ್ಪಗಳಿವೆ (ಕಂಬದ 3ನೇ ಭಾಗದಲ್ಲಿದೆ)
ಪಶ್ಚಿಮ ದಿಕ್ಕಿಗಿರುವ ಶಿಲ್ಪಗಳು – ಎರಡು ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಿವೆ (ಕಂಬದ 2 ಮತ್ತು 3ನೇ ಭಾಗದಲ್ಲಿದೆ)

ಉತ್ತರ ದಿಕ್ಕಿಗಿರುವ ಶಿಲ್ಪಗಳು – ಎರಡು ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಿವೆ (ಕಂಬದ 2 ಮತ್ತು 3ನೇ ಭಾಗದಲ್ಲಿದೆ)

ನಾಲ್ಕನೆಯ ಕಂಬದಲ್ಲಿರುವ ಶಿಲ್ಪಗಳು

ಪೂರ್ವದಿಕ್ಕಿಗಿರುವ ಶಿಲ್ಪಗಳು – ಒಂದು ವಿಷ್ಣುವಿನ ಚತುರ್ವಿಂಶತಿ ಶಿಲ್ಪವಿದೆ (ಕಂಬದ 3ನೇ ಭಾಗದಲ್ಲಿದೆ)
ದಕ್ಷಿಣ ದಿಕ್ಕಿಗಿರುವ ಶಿಲ್ಪಗಳು – ಎರಡು ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಿವೆ (ಕಂಬದ 2 ಮತ್ತು 3ನೇ ಭಾಗದಲ್ಲಿದೆ)
ಪಶ್ಚಿಮ ದಿಕ್ಕಿಗಿರುವ ಶಿಲ್ಪಗಳು – ಎರಡು ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳಿವೆ (ಕಂಬದ 2 ಮತ್ತು 3ನೇ ಭಾಗದಲ್ಲಿದೆ)
ಉತ್ತರ ದಿಕ್ಕಿಗಿರುವ ಶಿಲ್ಪಗಳು – ಒಂದು ವಿಷ್ಣುವಿನ ಚತುರ್ವಿಂಶತಿ ಶಿಲ್ಪವಿದೆ (ಕಂಬದ 3ನೇ ಭಾಗದಲ್ಲಿದೆ)

ಈ ನಾಲ್ಕು ಕಂಬಗಳಲ್ಲಿರುವ ಶಿಲ್ಪಗಳು ವಿಷ್ಣುವಿನ ಯಾವ ಅಂಶಾವತಾರಕ್ಕೆ ಸೇರಿವೆ ಮತ್ತು ಯಾವ ಯಾವ ಆಗಮಗಳ ನಿಯಮಗಳನ್ನು ಬಳಸಿಕೊಂಡು ಈ ಶಿಲ್ಪಗಳನ್ನು ಕೆತ್ತಿದ್ದಾನೆ ಎಂಬುದನ್ನು ಈ ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಸೂಕ್ಷ್ಮವಾಗಿ ಗುರುತಿಸಿದಾಗ ಈ ಶಿಲ್ಪವು ಯಾವ ಅಂಶಾವತಾರಕ್ಕೆ ಸರಿಹೊಂದುತ್ತದೆ ಎಂಬುದನ್ನು ತಿಳಿಬಹುದಾಗಿದೆ. ವಿಷ್ಣುವಿನ ಇಪ್ಪನಾಲ್ಕು ರೂಪಗಳು ಈ ಕೆಗಿನಂತಿವೆ.[3]

ರೂಪಮಂಡನದ ಪ್ರಕಾರ ವಿಷ್ಣುಚತುರ್ವಿಂಶತಿ ಮೂರ್ತಿಗಳ ಆಯುಧ ವಿನ್ಯಾಸ

ಮೂರ್ತಿಗಳು	ಆಯುಧ ವಿನ್ಯಾಸ	ಮೂರ್ತಿಗಳು	ಆಯುಧ ವಿನ್ಯಾಸ
ಕೇಶವ	ಶಂಖ–ಚಕ್ರ–ಗದಾ–ಪದ್ಮ	ನಾರಾಯಣ	ಪದ್ಮ–ಗದಾ–ಚಕ್ರ–ಶಂಖ
ಮಾಧವ	ಚಕ್ರ–ಶಂಖ–ಪದ್ಮ–ಗದಾ	ಗೋವಿಂದ	ಗದಾ–ಪದ್ಮ–ಶಂಖ–ಚಕ್ರ
ವಿಷ್ಣು	ಪದ್ಮ–ಶಂಖ–ಚಕ್ರ–ಗದಾ	ಮಧುಸೂಧನ	ಶಂಕ–ಪದ್ಮ–ಗದಾ–ಚಕ್ರ
ತ್ರಿವಿಕ್ರಮ	ಗದಾ–ಚಕ್ರ–ಶಂಖ–ಪದ್ಮ	ವಾಮನ	ಚಕ್ರ–ಗದಾ–ಪದ್ಮ–ಶಂಖ
ಶ್ರೀಧರ	ಚಕ್ರ–ಗದಾ–ಶಂಖ–ಪದ್ಮ	ಹೃಷಿಕೇಶ	ಚಕ್ರ–ಪದ್ಮ–ಶಂಖ–ಗದಾ
ಪದ್ಮನಾಭ	ಪದ್ಮ–ಚಕ್ರ–ಗದಾ–ಶಂಖ	ದಾಮೋದರ	ಶಂಖ–ಗದಾ–ಚಕ್ರ–ಪದ್ಮ
ಸಂಕರ್ಷಣ	ಶಂಖ–ಪದ್ಮ–ಚಕ್ರ–ಗದಾ	ವಾಸುದೇವ	ಶಂಖ–ಚಕ್ರ–ಪದ್ಮ–ಗದಾ
ಪ್ರದ್ಯುಮ್ನ	ಶಂಖ–ಗದಾ–ಪದ್ಮ–ಚಕ್ರ	ಅನಿರುದ್ಧ	ಗದಾ–ಶಂಖ–ಪದ್ಮ–ಚಕ್ರ
ಪುರುಷೋತ್ತಮ	ಪದ್ಮ–ಶಂಖ–ಗದಾ–ಚಕ್ರ	ಅಧೋಕ್ಷಜ	ಗದಾ–ಶಂಖ–ಚಕ್ರ–ಪದ್ಮ
ನರಸಿಂಹ	ಪದ್ಮ–ಗದಾ–ಶಂಖ–ಚಕ್ರ	ಅಚ್ಯುತ	ಪದ್ಮ–ಚಕ್ರ–ಶಂಖ–ಗದಾ
ಜನಾರ್ದನ	ಚಕ್ರ–ಶಂಖ–ಗದಾ–ಪದ್ಮ	ಉಪೇಂದ್ರ	ಗದಾ–ಚಕ್ರ–ಪದ್ಮ–ಶಂಖ
ಹರಿ	ಚಕ್ರ–ಪದ್ಮ–ಗದಾ–ಶಂಖ	ಕೃಷ್ಣ	ಗದಾ–ಪದ್ಮ–ಚಕ್ರ–ಶಂಖ

ಈ ಇಪ್ಪತ್ತು ನಾಲ್ಕು ಅಂಶವತಾರಗಳಲ್ಲಿ ಹಜರರಾಮ ದೇವಾಲಯದಲ್ಲಿ ಯಾವ ಯಾವ ಅಂಶಾವತಾರಗಳು ಇವೆ ಎಂಬುದನ್ನು ಈ ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಸೂಕ್ಷವಾಗಿ ಗಮನಿಸಿದಾಗ ವಿಷ್ಣುವಿನ ಯಾವ ಅಂಶಾವತಾರವೆಂದು ಗುರುತಿಸಬಹುದು.

ಪ್ರತಿಮಾ ಶಾಸ್ತ್ರದ ವಿವರಗಳು

ಪಾಂಚರಾತ್ರಗಮದಲ್ಲಿ ಕೇಶವಾದಿ ವಿಷ್ಣುಚತುರ್ವಿಂಶತಿ ಮೂರ್ತಿಗಳ ಬಳಕೆ ಹೆಚ್ಚಾಗಿದೆ. ಮಹಾಭಾರತದ ಅನುಶಾಸನ ಪರ್ವದಲ್ಲಿ ಬರುವ 'ವಿಷ್ಣು ಸಹಸ್ರನಾಮ'ದಿಂದ ಇಪ್ಪತ್ತು ನಾಲ್ಕು ಹೆಸರುಗಳನ್ನು ಆಯ್ದುಕೊಂಡು ಅವಕ್ಕೆ ಮೂರ್ತಿಲಕ್ಷಣವನ್ನು ಪದ್ಮಪುರಾಣದ ಪಾತಾಳ ಖಂಡವು ರೂಪಮಂಡನವೆಂಬ ಪ್ರಕರಣ ಗ್ರಂಥವೂ ನಿರ್ದೇಶಿಸಿದವು. ಅಹಿರ್ಬುಧ್ನ್ಯಸಂಹಿತೆಯಲ್ಲಿ ಮತ್ತು ಬೃಹತ್‌ಸಂಹಿತೆಯಲ್ಲಿ ವ್ಯೂಹಗಳಿಂದ ಹನ್ನೆರಡು ಇತರ ಮೂರ್ತಿಗಳು ಬಂದಿರುವುದನ್ನು ಹೇಳಿದೆ.[4] ಪರವಾಸುದೇವನಿಂದ ಕೇಶವ, ನಾರಾಯಣ, ಮಾಧವ, ಸಂಕರ್ಷಣನಿಂದ ಗೋವಿಂದ, ವಿಷ್ಣು, ಮಧುಸೂದನ; ಪ್ರದ್ಯುಮ್ನನಿಂದ ತ್ರಿವಿಕ್ರಮ,

ವಾಮನ, ಶ್ರೀಧರ; ಅನಿರುದ್ಧನಿಂದ ಹೃಷಿಕೇಶ, ಪದ್ಮನಾಭ, ದಾಮೋದರ ಹೀಗೆ ಒಂದೊಂದು ವ್ಯೂಹದಿಂದಲೂ ಮೂರು ಮೂರು ಮೂರ್ತಿಗಳು ಅಲ್ಲಿ ಕಾಣಿಸಿದೆ. ವಾಸುದೇವ ವ್ಯೂಹವೊಂದರಲ್ಲಿ ಮಾತ್ರ ಆರೂ ಗುಣಗಳಿರುವುವು;[5] ಸಂಕರ್ಷಣವ್ಯೂಹದಲ್ಲಿ ಜ್ಞಾನ ಪ್ರಧಾನ; ಪ್ರದ್ಯುಮ್ನ ವ್ಯೂಹದಲ್ಲಿ ಶಕ್ತಿ ಪ್ರಧಾನ; ಅನಿರುದ್ಧನಲ್ಲಿ ಐಶ್ವರ್ಯ ಪ್ರಧಾನ. ಹನ್ನೆರಡು ಮೂರ್ತಿಗಳು ಭಗವಂತನ ಬೇರೆ ಬೇರೆ ಗುಣಗಳ ಅವಿರ್ಭಾವಕ್ಕಾಗಿ ನಾಲ್ಕು ವ್ಯೂಹಗಳಿಂದ ಅದೇ ನಾಲ್ಕು ಮೂರ್ತಿಗಳೂ, ಇವುಗಳಿಂದ ಮತ್ತೆ ನಾಲ್ಕೂ ಮೂರ್ತಿಗಳೂ, ಕಡೆಯ ನಾಲ್ಕರಲ್ಲಿ ಒಂದು ಮೂರ್ತಿಯಿಂದ ನಾಲ್ಕೂ ಮೂರ್ತಿಗಳೂ ಉಂಟಾದರೆಂದು ವಿವರಣೆಯಿದೆ ಹೀಗೆ ಒಟ್ಟು ಇಪ್ಪನಾಲ್ಕು ವಿಷ್ಣುಮೂರ್ತಿಗಳನ್ನು ಪೂಜಿಸುವ ಪದ್ಧತಿ ಬಂದಿತು.[6]

ಒಂದೊಂದು ಮೂರ್ತಿಯನ್ನು ಮನುಷ್ಯಾಕಾರದಲ್ಲಿ ರಚಿಸಿ ಶಂಖ–ಚಕ್ರ–ಗದಾ–ಪದ್ಮಗಳ ವಿವಿಧ ವಿನ್ಯಾಸಗಳನ್ನು ತೋರಿಸುವ ವಾಡಿಕೆಯಿದೆ. ಉಳಿದಂತೆ ಇಪ್ಪತ್ತು ನಾಲ್ಕು ಮೂರ್ತಿಗಳಲ್ಲಿ ಯಾವ ಭೇದವೂ ಇರದು. ಕೇಶವನಿಗೆ ಶಂಖ–ಚಕ್ರ–ಗದಾ–ಪದ್ಮ, ನಾರಾಯಣನಿಗೆ ಪದ್ಮ–ಗದಾ–ಚಕ್ರ–ಶಂಖ ಮಾಧವನಿಗೆ ಚಕ್ರ–ಶಂಖ–ಪದ್ಮ–ಗದಾ, ಗೋವಿಂದನಿಗೆ ಗದಾ–ಪದ್ಮ–ಶಂಖ–ಚಕ್ರ– ಹೀಗೆ ಕ್ರಮವಾಗಿ ಸಾಗುತ್ತದೆ. ಈ ಇಪ್ಪತ್ತುನಾಲ್ಕು ಮೂರ್ತಿಗಳಲ್ಲಿ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಇವರು ಪ್ರಮುಖರಾದವರೆಂದು ಪರಿಗಣನೆ ಮಾಡಲಾಗಿದೆ.[7]

ಹಜಾರರಾಮ ದೇವಾಲಯದಲ್ಲಿರುವ ನವರಂಗದ ಕಂಬಗಳಲ್ಲಿರುವ ವಿಷ್ಣುವಿನ ಚತುರ್ವಿಂಶತಿ ಶಿಲ್ಪಗಳ ಮೂರ್ತಿಲಕ್ಷಣಗಳನ್ನು ಗಮನಿಸಿದಾಗ ಪದ್ಮ ಪುರಾಣದ ಪಾತಾಲಖಂಡವು ರೂಪಂಡನವೆಂಬ ಪ್ರಕರಣ ಗ್ರಂಥದ ಪ್ರಕಾರ ಈ ಶಿಲ್ಪಗಳನ್ನು ಕೆತ್ತಲಾಗಿದೆ.[8] ಈ ಶಿಲ್ಪಗಳು ಚತುರ್ವಿಂಶತಿಯಲ್ಲಿ ಬರುವ ಇಪ್ಪತ್ತ ನಾಲ್ಕು ಮೂರ್ತಿಗಳಲ್ಲಿ ವಿಷ್ಣುವಿನ ಯಾವ ಅಂಶಾವತಾರಕ್ಕೆ ಸೇರುತ್ತದೆ ಎಂಬುದನ್ನು ಆ ಶಿಲ್ಪಗಳ ಪ್ರತಿಮಾ ಲಕ್ಷಣಗಳ ವಿವರಗಳು ಈ ಕೆಳಗಿನಂತಿವೆ. ಈ ಎಲ್ಲಾ ಶಿಲ್ಪಗಳನ್ನು ಕೀರ್ತಿಮುಖದ ಪ್ರಭಾವಳಿಯಲ್ಲಿ ಕೆತ್ತಿರುವುದು ವಿಶೇಷ. ಈ ಶಿಲ್ಪಗಳನ್ನು ಕಪ್ಪು ಬೆಣಚುಕಲ್ಲನ್ನು ನಯಗೊಳಿಸಿ ಆಕರ್ಷಕವಾಗಿ ಕೆತ್ತಲಾಗಿದೆ.[9]

ವಿಷ್ಣುಚತುರ್ವಿಂಶತಿ ಶಿಲ್ಪಗಳ ಪ್ರತಿಮಾ ಲಕ್ಷಣಗಳ ವಿವರ

ಮೊದಲನೆಯ ಕಂಬದಲ್ಲಿರುವ ಚತುರ್ವಿಂಶತಿ ಶಿಲ್ಪಗಳ ಪ್ರತಿಮಾ ಲಕ್ಷಣಗಳು ಪೂರ್ವ ದಿಕ್ಕಿಗಿರುವ ಈ ವಿಷ್ಣು ಶಿಲ್ಪವು ಕೀರ್ತಿಮುಖದ ರಚನೆಯಲ್ಲಿರುವ ಪ್ರಭಾವಳಿಯಲ್ಲಿ ಕೆತ್ತಲಾಗಿದೆ. ಲಲಿತಾಸನದಲ್ಲಿರುವ ಈ ಶಿಲ್ಪ ನಾಲ್ಕು ಕೈಗಳಲ್ಲಿ, ವಿವಿಧ ಆಯುಧಗಳನ್ನು ಹೊಂದಿದೆ. ವಿಷ್ಣು ಭದ್ರ ಪೀಠದ ಮೇಲೆ ಕುಳಿತಿದ್ದಾನೆ. ಅಕ್ಕಪಕ್ಕದಲ್ಲಿ ವಿಷ್ಣುವಿನ ಪತ್ನಿಯರಾದ ಶ್ರೀದೇವಿ ಭೂದೇವಿಯರು ಕುಳಿತಿದ್ದಾರೆ. ವಿಷ್ಣುವು ಧರಿಸಿರುವ ಆಭರಣಗಳಾದ ಕೊರಳಹಾರ, ಕಂಠಹಾರ, ಯಜ್ಞೋಪವೀತ, ಛನ್ನವೀರ, ವನಮಾಲಾ, ಭುಜಬಂದ, ಕೆಯೂರ, ಬಾಹುವಲ್ಯ ಕಿವಿಯಲ್ಲಿ ವೃತ್ತಕುಂಡಲಗಳಿವೆ. ಕೈಗಡಗ, ಕಾಲುಗಡಗ, ಉದ್ದನೆಯ ಧೋತಿಯನ್ನು ಧರಿಸಿದ್ದಾನೆ. ಅದೇ ರೀತಿಯಾಗಿ ಪತ್ನಿಯರಾದ ಶ್ರೀದೇವಿ ಭೂದೇವಿಯರು ನೆರಿಗೆಗಳುಳ್ಳ ಸೀರೆಯನ್ನು ಧರಿಸಿದ್ದಾರೆ, ಬಲ ಭಾಗಕ್ಕೆ ಶ್ರೀದೇವಿಯ ಬಲಗೈಯಲ್ಲಿ ಪದ್ಮ ಹಿಡಿದಿದ್ದಾಳೆ ಎಡಗೈಯು ವರದ ಹಸ್ತವಾಗಿದೆ, ಕಿವಿಗಳಲ್ಲಿ ವೃತ್ತಕುಂಡಲಗಳು, ಕೊರಳಹಾರ, ಕಂಠಹಾರ ಧರಿಸಿದ್ದಾಳೆ, ಭೂದೇವಿ ಶಿಲ್ಪವು ಎಡ ಕೈಯಲ್ಲಿ ನೋಲೋತ್ಪಲವನ್ನು ಹಿಡಿದಿದೆ. ನೆರಿಗೆವುಳ್ಳ ಸೀರೆಯನ್ನು ಧರಿಸಿದ್ದಾಳೆ. ಕೊರಳ ಹಾರ, ಕಂಠಹಾರ, ಕೈಬಳೆಗಳು, ಕಾಲುಗಡಗಳನ್ನು ಧರಿಸಿದ್ದಾಳೆ.

ಈ ಶಿಲ್ಪಗಳಲ್ಲಿ ಆಯುಧಗಳು ಕ್ರಮವಾಗಿ ಬಲ ಮೇಲಿನ ಕೈ, ಎಡ ಮೇಲಿನ ಕೈ, ಎಡ ಕೆಳಗಿನ ಕೈ, ಬಲ ಕೆಳಗಿನ ಕೈ, ಆ ವಿವರ ಈ ಕೆಳಗಿನಂತಿವೆ.

ಮೊದಲನೆಯ ಕಂಬದ ಪೂರ್ವ ದಿಕ್ಕಿಗಿರುವ ವಿಷ್ಣು ಶಿಲ್ಪ (ಕಂಬದ 3ನೇ ಭಾಗದಲ್ಲಿರುವ ಶಿಲ್ಪ)

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಆಯುಧ ವಿನ್ಯಾಸ

ಬಲ ಮೇಲಿನ ಕೈ – ಶಂಖ	ಎಡ ಮೇಲಿನ ಕೈ – ಗದಾ
ಎಡ ಕೆಳಗಿನ ಕೈ – ಪದ್ಮ	ಬಲ ಕೆಳಗಿನ ಕೈ – ಚಕ್ರ

ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿರುವ 15ನೇ ಅಂಶಾವತಾರವಾದ ಪ್ರದ್ಯುಮ್ನನಿಗಿರುವ ಆಯುಧ ವಿನ್ಯಾಸ.

ಈ ಕಂಬದ ದಕ್ಷಿಣ ದಿಕ್ಕಿಗಿರುವ ವಿಷ್ಣುವಿನ ಚತುರ್ವಿಂಶತಿ ಶಿಲ್ಪ

ಈ ಶಿಲ್ಪವನ್ನು ಕೀರ್ತಿಮುಖದ ಪ್ರಭಾವಳಿಯಲ್ಲಿ ರಚಿಸಲಾಗಿದೆ. ವಿಷ್ಣುವು ಲಲಿತಾಸನದಲ್ಲಿ ಕುಳಿತಿದೆ. ಶ್ರೀದೇವಿ ಭೂದೇವಿಯರು ಅಕ್ಕ ಪಕ್ಕದಲ್ಲಿ ಕುಳಿತಿದ್ದಾರೆ.

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಆಯುಧ ವಿನ್ಯಾಸ

ಬಲ ಮೇಲಿನ ಕೈ – ಪದ್ಮ	ಎಡ ಮೇಲಿನ ಕೈ – ಗದಾ
ಎಡ ಕೆಳಗಿನ ಕೈ – ಶಂಖ	ಬಲ ಕೆಳಗಿನ ಕೈ – ಚಕ್ರ

ಪದ್ಮ, ಗದಾ, ಶಂಖ, ಚಕ್ರ ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಐದನೆಯ ಅಂಶಾವತಾರವಾದ ವಿಷ್ಣುವಿಗೆ ಇರುವ ಆಯುಧ ವಿನ್ಯಾಸ.

ಇದೇ ಕಂಬದ ಪಶ್ಚಿಮ ದಿಕ್ಕಿಗಿರುವ ವಿಷ್ಣು ಶಿಲ್ಪ (ಕಂಬದ 2ನೇ ಭಾಗದಲ್ಲಿರುವ ಶಿಲ್ಪ)

ಬಲ ಮೇಲಿನ ಕೈ – ಗದೆ	ಎಡ ಮೇಲಿನ ಕೈ – ಚಕ್ರ
ಎಡ ಕೆಳಗಿನ ಕೈ – ಪದ್ಮ	ಬಲ ಕೆಳಗಿನ ಕೈ – ಶಂಖ

ಗದೆ, ಚಕ್ರ, ಪದ್ಮ, ಶಂಖ ಈ ಆಯುಧಗಳ ವಿನ್ಯಾಸ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ನಾಲ್ಕನೆಯ ಅಂಶಾವತಾರವಾದ ಗೋವಿಂದನಿಗೆ ಇರುವ ಆಯುಧ ವಿನ್ಯಾಸ.

ಇದೇ ಕಂಬದ ಪಶ್ಚಿಮ ದಿಕ್ಕಿಗಿರುವ ವಿಷ್ಣು ಶಿಲ್ಪ (ಕಂಬದ 3ನೇ ಭಾಗದಲ್ಲಿರುವ ವಿಷ್ಣು ಶಿಲ್ಪ)

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಆಯುಧ ವಿನ್ಯಾಸ

ಬಲ ಮೇಲಿನ ಕೈ – ಚಕ್ರ	ಎಡ ಮೇಲಿನ ಕೈ – ಶಂಖ
ಎಡ ಕೆಳಗಿನ ಕೈ – ಪದ್ಮ	ಬಲ ಕೆಳಗಿನ ಕೈ – ಗದೆ

ಚಕ್ರ, ಶಂಖ, ಪದ್ಮ, ಗದೆ, ಈ ಆಯುಧಗಳ ವಿನ್ಯಾಸ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಮೂರನೆಯ ಅಂಶಾವತಾರವಾದ ಮಾಧವನಿಗಿರುವ ಆಯುಧ ವಿನ್ಯಾಸ.

ಇದೇ ಕಂಬದ ಉತ್ತರ ದಿಕ್ಕಿಗಿರುವ ವಿಷ್ಣು ಶಿಲ್ಪ (ಕಂಬದ 3ನೇ ಭಾಗದಲ್ಲಿರುವ ಶಿಲ್ಪ)

ಬಲ ಮೇಲಿನ ಕೈ – ಚಕ್ರ	ಎಡ ಮೇಲಿನ ಕೈ – ಶಂಖ
ಎಡ ಕೆಳಗಿನ ಕೈ – ಗದಾ	ಬಲ ಕೆಳಗಿನ ಕೈ – ಪದ್ಮ

ಚಕ್ರ, ಶಂಖ, ಗದಾ, ಪದ್ಮ ಈ ಆಯುಧ ವಿನ್ಯಾಸಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಇಪ್ಪತ್ತೊಂದನೆಯ ಅಂಶಾವತಾರವಾದ ಜನಾರ್ದನನಿಗಿರುವ ಆಯುಧ ವಿನ್ಯಾಸ

ಎರಡನೆಯ ಕಂಬದಲ್ಲಿರುವ ಚತುರ್ವಿಂಶತಿ ಶಿಲ್ಪಗಳು

ಇದೇ ಕಂಬದ ಪೂರ್ವ ದಿಕ್ಕಿಗಿರುವ ಶಿಲ್ಪಗಳು (ಕಂಬದ 2ನೇ ಭಾಗದಲ್ಲಿರುವ ವಿಷ್ಣು ಶಿಲ್ಪ)

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಅಯುಧ ವಿನ್ಯಾಸ

ಬಲ ಮೇಲಿನ ಕೈ – ಚಕ್ರ	ಎಡ ಮೇಲಿನ ಕೈ – ಗದಾ
ಎಡ ಕೆಳಗಿನ ಕೈ – ಶಂಖ	ಬಲ ಕೆಳಗಿನ ಕೈ – ಪದ್ಮ

ಚಕ್ರ, ಗದಾ, ಶಂಖ, ಪದ್ಮ ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಒಂಬತ್ತನೆಯ ಅಂಶಾವತಾರವಾದ ಶ್ರೀಧರನಿಗಿರುವ ಆಯುಧ ವಿನ್ಯಾಸ.

ಇದೇ ಕಂಬದ ಮೂರನೆಯ ಭಾಗದಲ್ಲಿರುವ ವಿಷ್ಣುವಿನ ಶಿಲ್ಪ

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಆಯುಧ ವಿನ್ಯಾಸ

ಬಲ ಮೇಲಿನ ಕೈ – ಶಂಖ   ಎಡ ಮೇಲಿನ ಕೈ – ಚಕ್ರ
ಎಡ ಕೆಳಗಿನ ಕೈ – ಗದಾ   ಬಲ ಕೆಳಗಿನ ಕೈ – ಪದ್ಮ

ಶಂಖ, ಚಕ್ರ, ಗದಾ, ಪದ್ಮ ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಒಂದನೆಯ ಅಂಶಾವತಾರದ ಕೇಶವನಿಗಿರುವ ಆಯುಧ ವಿನ್ಯಾಸ.

ಮೂರನೆಯ ಕಂಬದ ಪೂರ್ವ ದಿಕ್ಕಿಗಿರುವ ಚತುರ್ವಿಂಶತಿ ಶಿಲ್ಪಗಳು

ಕಂಬದ 2ನೇ ಭಾಗದಲ್ಲಿರುವ ಶಿಲ್ಪಗಳು

ಬಲ ಮೇಲಿನ ಕೈ – ಗದಾ   ಎಡ ಮೇಲಿನ ಕೈ – ಚಕ್ರ
ಎಡ ಕೆಳಗಿನ ಕೈ – ಪದ್ಮ   ಬಲ ಕೆಳಗಿನ ಕೈ – ಶಂಖ

ಗದಾ, ಚಕ್ರ, ಪದ್ಮ, ಶಂಖ ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಇಪ್ಪತ್ತೆರಡನೆಯ ಅಂಶಾವತಾರವಾದ ಉಪೇಂದ್ರನಿಗಿರುವ ಆಯುಧ ವಿನ್ಯಾಸ.

ಇದೇ ಕಂಬದ ಮೂರನೆಯ ಭಾಗದಲ್ಲಿರುವ ವಿಷ್ಣು ಶಿಲ್ಪ

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಆಯುಧ ವಿನ್ಯಾಸ

ಬಲ ಮೇಲಿನ ಕೈ – ಗದಾ   ಎಡ ಮೇಲಿನ ಕೈ – ಪದ್ಮಾ
ಎಡ ಕೆಳಗಿನ ಕೈ – ಶಂಖ   ಬಲ ಕೆಳಗಿನ ಕೈ – ಚಕ್ರ

ಗದಾ, ಪದ್ಮ, ಶಂಖ, ಚಕ್ರ ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ನಾಲ್ಕನೆಯ ಅಂಶಾವತಾರವಾದ ಗೋವಿಂದನಿಗಿರುವ ಆಯುಧ ವಿನ್ಯಾಸ.

ಇದೇ ಕಂಬದ ದಕ್ಷಿಣ ದಿಕ್ಕಿಗಿರುವ ಶಿಲ್ಪಗಳು

ಈ ಕಂಬದ ಮೂರನೆಯ ಭಾಗದಲ್ಲಿರುವ ವಿಷ್ಣು ಶಿಲ್ಪ

ಬಲ ಮೇಲಿನ ಕೈ – ಪದ್ಮ   ಎಡ ಮೇಲಿನ ಕೈ – ಶಂಖ
ಎಡ ಕೆಳಗಿನ ಕೈ – ಚಕ್ರ   ಬಲ ಕೆಳಗಿನ ಕೈ – ಗದಾ

ಪದ್ಮ, ಶಂಖ, ಚಕ್ರ, ಗದಾ ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಐದನೆಯ ಅಂಶಾವತಾರವಾದ ವಿಷ್ಣುವಿಗೆ ಇರುವ ಆಯುಧ ವಿನ್ಯಾಸ.

ಮೂರನೆ ಕಂಬದ ಪಶ್ಚಿಮ ದಿಕ್ಕಿಗಿರುವ ವಿಷ್ಣು ಶಿಲ್ಪ

ಇದೇ ಕಂಬದ ಎರಡನೆಯ ಭಾಗದಲ್ಲಿರುವ ವಿಷ್ಣು ಶಿಲ್ಪ

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಆಯುಧ ವಿನ್ಯಾಸ.

ಬಲ ಮೇಲಿನ ಕೈ – ಚಕ್ರ   ಎಡ ಮೇಲಿನ ಕೈ – ಶಂಖ
ಎಡ ಕೆಳಗಿನ ಕೈ – ಮಂಡೆಯ ಮೇಲಿದೆ   ಬಲ ಕೆಳಗಿನ ಕೈ – ಕೆಳಗೆ ಇಳಿಬಿಟ್ಟಿದೆ

ಈ ಶಿಲ್ಪವು ವಿಶೇಷವಾಗಿದೆ ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಎರಡು ಕೈಗಳಲ್ಲಿ ಎಡ ಮತ್ತು ಬಲ ಕೈಗಳಲ್ಲಿ ಚಕ್ರ, ಶಂಖಗಳಿವೆ. ಕೆಳಗಿನ ಎಡ ಕೈ ಮಂಡೆಯ ಮೇಲೆ ಇರಿಸಿಕೊಂಡಿದೆ. ಬಲ ಕೆಳಗಿನ ಕೈ ಕೆಳಗೆ ಇಳಿಬಿಟ್ಟಿದೆ. ಪ್ರಭಾವಳಿಯಲ್ಲಿರುವ ಈ ಶಿಲ್ಪವು ರಾಜಲೀಲಾಸನದಲ್ಲಿದೆ. ಇಬ್ಬರು ಪತ್ನಿಯರು ಅಕ್ಕ ಪಕ್ಕದಲ್ಲಿ ಕುಳಿತಿದ್ದಾರೆ. ನವರಂಗದ ನಾಲ್ಕು ಕಂಬಗಳಲ್ಲಿ ಚತುರ್ವಿಂಶತಿ ಮೂರ್ತಿಗಳು ಇವೆ. ಅವುಗಳು ರೂಪಮಂಡನದ ಪ್ರಕಾರ ಈ ಶಿಲ್ಪಗಳನ್ನು ಆಯುಧಗಳ

ಬದಲಾವಣೆಯ ಮೂಲಕ ಗುರುತಿಸಬಹುದಾಗಿದೆ. ಆದರೆ ಈ ಶಿಲ್ಪದಲ್ಲಿರುವ ಆಯುಧ ವಿನ್ಯಾಸವು ಬಹುವಿಶೇಷವಾಗಿದೆ. ಈ ಶಿಲ್ಪವು ವಿಷ್ಣುವಿನ ಆದಿಮೂರ್ತಿ ಶಿಲ್ಪವಾಗಿದೆ. ಅಥವಾ ವೈಕುಂಠಮೂರ್ತಿ ಎಂದು ಕರೆಯುವ ಈ ಶಿಲ್ಪವು ವಿಶೇಷವಾಗಿದೆ.

ಇದೇ ಕಂಬದ ಮೂರನೆಯ ಭಾಗದಲ್ಲಿರುವ

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಆಯುಧ ವಿನ್ಯಾಸ

ಬಲ ಮೇಲಿನ ಕೈ – ಶಂಖ ಎಡ ಮೇಲಿನ ಕೈ – ಪದ್ಮ

ಎಡ ಕೆಳಗಿನ ಕೈ – ಗದಾ ಬಲ ಕೆಳಗಿನ ಕೈ – ಚಕ್ರ

ಶಂಖ, ಪದ್ಮ, ಗದಾ, ಚಕ್ರ, ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಹನ್ನೆರಡನೆಯ ಅಂಶಾವತಾರವಾದ ದಾಮೋದರನಿಗಿರುವ ಆಯುಧ ವಿನ್ಯಾಸ.

ಮೂರನೆಯ ಕಂಬದ ಉತ್ತರ ದಿಕ್ಕಿನಲ್ಲಿರುವ ವಿಷ್ಣು ಶಿಲ್ಪ

ಬಲ ಮೇಲಿನ ಕೈ – ಶಂಖ ಎಡ ಮೇಲಿನ ಕೈ – ಪದ್ಮ

ಎಡ ಕೆಳಗಿನ ಕೈ – ಚಕ್ರ ಬಲ ಕೆಳಗಿನ ಕೈ – ಗದಾ

ಶಂಖ, ಪದ್ಮ, ಚಕ್ರ, ಗದಾ ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಹದಿಮೂರನೆಯ ಅಂಶಾವತಾರವಾದ ಸಂಕಾರ್ಷಣನಿಗಿರುವ ಆಯುಧ ವಿನ್ಯಾಸ.

ನಾಲ್ಕನೇಯ ಕಂಬದಲ್ಲಿರುವ ವಿಷ್ಣುವಿನ ಶಿಲ್ಪಗಳು

ಇದೇ ಕಂಬದ ಪೂರ್ವದಿಕ್ಕಿಗಿರುವ ವಿಷ್ಣುವಿನ ಶಿಲ್ಪ

ಇದೇ ಕಂಬದ ಮೂರನೇಯ ಭಾಗದಲ್ಲಿರುವ ವಿಷ್ಣುವಿನ ಶಿಲ್ಪ

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಆಯುಧ ವಿನ್ಯಾಸ.

ಬಲ ಮೇಲಿನ ಕೈ – ಶಂಖ ಎಡ ಮೇಲಿನ ಕೈ – ಪದ್ಮ

ಎಡ ಕೆಳಗಿನ ಕೈ – ಮುರಿದಿದೆ (ಸ್ಪಷ್ಟವಿಲ್ಲ) ಬಲ ಕೆಳಗಿನ ಕೈ – ಮುರಿದಿದೆ (ಸ್ಪಷ್ಟವಿಲ್ಲ)

ಈ ಶಿಲ್ಪವನ್ನು ಗುರುತಿಸುವುದು ಕಷ್ಟ. ಆಯುಧಗಳು ಸ್ಪಷ್ಟವಾಗಿಲ್ಲ ಭಗ್ನವಾಗಿದೆ.

ಇದೇ ಕಂಬದ ದಕ್ಷಿಣ ದಿಕ್ಕಿಗಿರುವ ವಿಷ್ಣು ಶಿಲ್ಪ

ಈ ಕಂಬದ ಎರಡನೆಯ ಭಾಗದಲ್ಲಿರುವ ವಿಷ್ಣು ಶಿಲ್ಪ

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಆಯುಧ ವಿನ್ಯಾಸ.

ಬಲ ಮೇಲಿನ ಕೈ – ಶಂಖ ಎಡ ಮೇಲಿನ ಕೈ – ಗದಾ

ಎಡ ಕೆಳಗಿನ ಕೈ – ಪದ್ಮಾ ಬಲ ಕೆಳಗಿನ ಕೈ – ಚಕ್ರ

ಶಂಖ, ಗದಾ, ಪದ್ಮ, ಚಕ್ರ ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಹದಿನೈದನೆಯ ಅಂಶಾವತಾರವಾದ ಪ್ರದ್ಯುಮ್ನನಿಗಿರುವ ಆಯುಧ ವಿನ್ಯಾಸ.

ಇದೇ ಕಂಬದ ಪಶ್ಚಿಮ ದಿಕ್ಕಿಗಿರುವ ವಿಷ್ಣುವಿನ ಶಿಲ್ಪ

ಇದೇ ಕಂಬದ ಎರಡನೆಯ ಭಾಗದಲ್ಲಿರುವ ವಿಷ್ಣು ಶಿಲ್ಪ

ಬಲ ಮೇಲಿನ ಕೈ – ಚಕ್ರ ಎಡ ಮೇಲಿನ ಕೈ – ಪದ್ಮ

ಎಡ ಕೆಳಗಿನ ಕೈ – ಗದಾ ಬಲ ಕೆಳಗಿನ ಕೈ – ಶಂಖ

ಚಕ್ರ, ಪದ್ಮ, ಗದಾ, ಶಂಖ ಈ ಆಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಇಪ್ಪತ್ತಮೂರನೆಯ ಅಂಶಾವತಾರವಾದ ಹರಿಗೆ ಇರುವ ಆಯುಧ ವಿನ್ಯಾಸ.

ಇದೇ ಕಂಬದ ಮೂರನೆಯ ಭಾಗದಲ್ಲಿರುವ ವಿಷ್ಣು ಶಿಲ್ಪ

ವಿಷ್ಣುವಿನ ನಾಲ್ಕು ಕೈಗಳಲಿರುವ ಆಯುಧ ವಿನ್ಯಾಸ.

ಬಲ ಮೇಲಿನ ಕೈ – ಗದಾ	ಎಡ ಮೇಲಿನ ಕೈ – ಚಕ್ರ
ಎಡ ಕೆಳಗಿನ ಕೈ – ಶಂಖ	ಬಲ ಕೆಳಗಿನ ಕೈ – ಪದ್ಮ

ಗದಾ, ಚಕ್ರ, ಶಂಖ, ಪದ್ಮ ಈ ಅಯುಧಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಬರುವ ಏಳನೆಯ ಅವತಾರವಾದ ತ್ರಿವಿಕ್ರಮನಿಗಿರುವ ಆಯುಧ ವಿನ್ಯಾಸ.

ಇದೇ ಕಂಬದ ಉತ್ತರ ದಿಕ್ಕಿಗಿರುವ ವಿಷ್ಣುವಿನ ಶಿಲ್ಪ

ಇದೇ ಕಂಬದ ಮೂರನೆಯ ಭಾಗದಲ್ಲಿರುವ ವಿಷ್ಣು ಶಿಲ್ಪ

ವಿಷ್ಣುವಿನ ನಾಲ್ಕು ಕೈಗಳಲ್ಲಿರುವ ಆಯುಧ ವಿನ್ಯಾಸ.

ಬಲ ಮೇಲಿನ ಕೈ – ಚಕ್ರ	ಎಡ ಮೇಲಿನ ಕೈ – ಪದ್ಮ
ಎಡ ಕೆಳಗಿನ ಕೈ – ಗದಾ	ಬಲ ಕೆಳಗಿನ ಕೈ – ಶಂಖ

ಉಪಸಂಹಾರ

ಒಟ್ಟಾರೆಯಾಗಿ ಈ ದೇವಾಲಯದಲ್ಲಿರುವ ಚತುರ್ವಿಂಶತಿ ಶಿಲ್ಪಗಳು ರೂಪಮಂಡನದ ಪ್ರಕಾರ ಈ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಶಿಲ್ಪಗಳ ಆಯುಧ ವಿನ್ಯಾಸವು ವಿಶೇಷವಾಗಿವೆ. ಆಯುಧ ವಿನ್ಯಾಸವು ಕ್ರಮಬದ್ಧವಾದ ರೀತಿಯಲ್ಲಿ ಆಯೋಜಿಸಲಾಗಿದೆ. ಈ ಶಿಲ್ಪಗಳ ಕೆತ್ತನೆಯ ವಿಧಾನವು ಕಪ್ಪು ಬೆಣಚುಕಲ್ಲಿನಲ್ಲಿ ಸುಂದರವಾಗಿ ಕೆತ್ತಲ್ಪಟ್ಟಿದೆ. ಶಿಲ್ಪ ಗ್ರಂಥಗಳ ನಿಯಮದ ಪ್ರಕಾರ ಕೆತ್ತಲ್ಪಟ್ಟಿವೆ. ಈ ಎಲ್ಲಾ ಶಿಲ್ಪಗಳು ಪತ್ನಿ ಸಮೇತರಾಗಿ ಕುಳಿತಿರುವ ಭಂಗಿಯಲ್ಲಿರುವುದು ಗಮನಾರ್ಹ. ವಿಷ್ಣುವಿನ ಭೋಗ ಆಸೀನಮೂರ್ತಿಯ ಗುಂಪಿಗೆ ಸೇರಿರುವ ಶಿಲ್ಪಗಳಾಗಿರುವುದು ವಿಶೇಷವಾಗಿವೆ.

ಅಡಿಟಿಪ್ಪಣಿಗಳು

1. ದೇಸಾಯಿ ಪಿ.ಬಿ., *ಕರ್ನಾಟಕದ ಇತಿಹಾಸ*, ಪು. 30–32
2. ಅದೇ, ಪು. 35
3. ಅನ್ನಾಡೆಲ್ಲಾಪಿಕ್ಕೊಲ್ಲಾ, ಜಾನ್ ಎಮ್. ಫ್ರಿಡ್ಜ್, ಜಾರ್ಜ್‌ಮಿಶಲ್, *ದಿ ರಾಮಚಂದ್ರ ಟೆಂಪಲ್ ಆ್ಯಟ್ ವಿಜಯನಗರ*, ಪು. 40–43
4. ಅನಿಲಾ ವರ್ಗೀಸ್, *ರಿಲೀಜಿಯಸ್ ಟ್ರೇಡಿಷನ್ ಆ್ಯಟ್ ವಿಜಯನಗರ ಆ್ಯಜ್ ಥ್ರೋ ಇಟ್ಸ್ ಮಾನುಮೆಂಟ್ಸ್*, ಪು. 44–48
5. ರಾಮಚಂದ್ರರಾವ್ ಎಸ್.ಕೆ., *ಮೂರ್ತಿ ಶಿಲ್ಪದ ನೆಲೆ ಹಿನ್ನೆಲೆ*, ಪು. 144–145
6. ಶ್ರೀನಿವಾಸ ವಿ. ಪಾಡಿಗಾರ, *ವಿಷ್ಣು ಕಲ್ಟ ಇನ್ ಕರ್ನಾಟಕ*, ಪು. 102–105
7. ಅನ್ನಾಡೆಲ್ಲಾಪಿಕ್ಕೊಲ್ಲಾ, ಅನಿಲಾ ವರ್ಗೀಸ್, *ಸ್ಕಲ್ಪಚರ್ ಆ್ಯಟ್ ವಿಜಯನಗರ, ಐಕೋನೋಗ್ರಫಿ ಆ್ಯಂಡ್ ಸ್ಟೈಲ್*, ಪು. 44–45
8. ಸುರೇಶ ಕೆ.ಎ., *ಸ್ಕಲ್ಪಚರಲ್ ಆರ್ಟ್ ಆಫ್ ಹಂಪಿ*, ಪು. 122–125
9. ಗೋಪಿನಾಥರಾವ್ ಟಿ.ಎ., *ಎಲಿಮೆಂಟ್ಸ್ ಆಫ್ ಹಿಂದೂ ಐಕೋನೋಗ್ರಫಿ*, 1, ಭಾಗ–1, ಪು. 56–88.

20. ವಿಜಯನಗರ ಕಾಲದ ವೀರಭದ್ರ-ಶರಭ ಪರಂಪರೆ ಮತ್ತು ಶಿಲ್ಪಗಳು

(ಚಿತ್ರದುರ್ಗ-ದಾವಣಗೆರೆ ಜಿಲ್ಲೆಯನ್ನು ಅನುಲಕ್ಷಿಸಿ)

ಡಾ. ಶಕುಂತಲ ವೀರಭದ್ರಯ್ಯ

ದೇವತೆಗಳಿಗಾಗಿ ಪುರಾಣ ಕತೆಗಳು ಸೃಷ್ಟಿಯಾದವೋ, ಪುರಾಣ ಕತೆಗಳಿಗಾಗಿ ದೇವತೆಗಳ ಕಾಲ್ಪನಿಕ ಜಗತ್ತು ಸೃಷ್ಟಿಯಾಯಿತೋ ಎಂಬುದನ್ನು ಹೇಳಲಸಾಧ್ಯವಾದುದು. ಏಕೆಂದರೆ ಇವೆರಡೂ ಬೀಜ-ವೃಕ್ಷದಂತೆ ಒಂದನ್ನೊಂದು ಬೆಸೆದುಕೊಂಡಿವೆ. ಹಾಗಾಗಿ ಅನೇಕ ಹಿಂದೂ ದೇವತೆಗಳ, ಪುರಾಣ ಪುರುಷರ, ಋಷಿಮುನಿಗಳ, ಪವಾಡಪುರುಷರ ಜನ್ಮವೃತ್ತಾಂತವನ್ನು ಕುರಿತಾದ ಅಧ್ಯಯನ ನಿಜಕ್ಕೂ ಸ್ವಾರಸ್ಯಕರವಾದುದು. ಹಾಗೆಯೇ ಕಷ್ಟಕರವೂ ಹೌದು. ಅಂತಹ ಮಹಾನ್ ದೇವತೆಗಳಲ್ಲಿ ಶ್ರೀವೀರಭದ್ರನೂ ಒಬ್ಬನಾಗಿದ್ದಾನೆ. ವೀರಶೈವ ಧರ್ಮದಲ್ಲಿ ವೀರಭದ್ರನ ಉಲ್ಲೇಖ ಹಾಗೂ ಆರಾಧನೆ ಹೆಚ್ಚು ಕಂಡುಬರುವುದು. ವೀರಶೈವ ಧರ್ಮದ ಪಂಥಗಳಾದ ಜಂಗಮರು, ಪಂಚಾಚಾರ್ಯರು, ಆರಾಧ್ಯರು, ನೊಣಬರು, ಸಾದರು ಶಿವನ ಆರಾಧಕರಾಗಿದ್ದು, ಅದರಲ್ಲಿ ವೀರಭದ್ರಸ್ವಾಮಿಯ ಆರಾಧನೆಯೂ ಹೆಚ್ಚು ಜನಪ್ರಿಯಗೊಂಡಿದೆ. ಭಾರತದ ಪ್ರಾಚೀನ ಶಾಸನಗಳಲ್ಲಿ ಕಂಡುಬರುವ 'ಮಹೇಶ್ವರ' ಎಂಬ ಪದವನ್ನು ಶೈವ ಭಕ್ತ ಎಂಬ ಅರ್ಥದಲ್ಲಿ ಮಾತ್ರ ಸ್ವೀಕರಿಸಬೇಕಾಗುತ್ತದೆ ಎಂಬುದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ

"ವೀರಭದ್ರ" ಎಂಬ ಪದದಲ್ಲಿರುವ 'ವೀರ' ಎಂಬುದು ಶೌರ್ಯಕ್ಕೆ ಸಂಕೇತವಾದರೆ, ಶುಭಕ್ಕೆ ಸಂಕೇತ 'ಭದ್ರ'. ಹಾಗೆಯೇ 'ವೀರ' ಎಂಬ ಪದ ಕುರುಬ ಸಮುದಾಯವನ್ನು ಸೂಚಿಸುವ ಪದವಾಗಿದ್ದು ಈತನು ಕುರುಬನಿರಬಹುದೆಂದು ಭಾವಿಸಿದವರೂ ಇದ್ದಾರೆ. ಆದರೆ ವೀರಭದ್ರನ ಪರಿಕಲ್ಪನೆ ಶಿವಪುರಾಣದ ಕಾಲಕ್ಕಾಗಲೇ ಸ್ಪಷ್ಟವಾಗಿ ಮೂಡಿತ್ತೆಂಬುದು ಉಪಲಬ್ಧ ಸಾಹಿತ್ಯಿಕ ದಾಖಲೆಗಳಿಂದ ಗುರುತಿಸಲಾಗಿದೆ. ಒಟ್ಟಾರೆಯಾಗಿ ವೀರಭದ್ರ ನಮ್ಮ ಸಂಸ್ಕೃತಿಯ ವೀರಪ್ರತೀಕವಾಗಿದ್ದು, ಮಹಾವೀರನಾಗಿ, ಕ್ರಾಂತಿಕಾರನಾಗಿ ಪ್ರತಿಬಿಂಬಿಸುತ್ತಾನೆ. ಇಂತಹ ವೀರಭದ್ರನ ಹುಟ್ಟಿನ ಬಗ್ಗೆ ಪುರಾಣಗಳಲ್ಲಿ ಬೇರೆ ಬೇರೆ ಉಲ್ಲೇಖಗಳಿವೆ. ಪಾರ್ವತಿಯ ತಂದೆ ಧಕ್ಷಮಹಾರಾಜನು ಏರ್ಪಡಿಸಿದ್ದ ಯಜ್ಞ ಕುಂಡಕ್ಕೆ ತನ್ನ ಸತಿ ಪಾರ್ವತಿ ಹಾರಿದ ವಿಷಯ ತಿಳಿದ ಶಿವನು ಕೋಪಗೊಂಡು ತನ್ನ ಜಡೆಯನ್ನು ನೆಲಕ್ಕೆ ಬಡಿದಾಗ ವೀರಭದ್ರ ಮತ್ತು ಭದ್ರಕಾಳಿಯರು ಉದ್ಭವಿಸಿದರೆಂಬುದು ಒಂದು ಕಡೆಯಾದರೆ,[1] ವ್ಯಾಸ ಮಹಾಭಾರತದ 'ಶಾಂತಿಪರ್ವ' ವೀರಭದ್ರನು ಶಿವನ ಬಾಯಿಂದ ಹುಟ್ಟಿದವನೆಂದು ವ್ಯಾಖ್ಯಾನಿಸುತ್ತದೆ. ಹಾಗೆಯೇ ಕಿಟೆಲ್‌ರ ಕೋಶದಲ್ಲಿ "A Distingushed hero: an avatara or son of "Siva said to have been created from 'Sivas's mouth (or from a drop of his sweat) in order to spoil the sacrifice of Daksa Clothed in tiger's skin dripping with blood".[2] ಅಂದರೆ ಶಿವನ ಬೆವರಿನಿಂದ ಜನಿಸಿದವನೆಂದು ಉಲ್ಲೇಖಿತಗೊಂಡಿದೆ.

ವೀರಭದ್ರ ಪರಂಪರೆಯಲ್ಲಿ ಶರಭಾವತಾರ ಬಹುಮುಖ್ಯವಾದುದು. ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಒಂದಾದ ಪಂಚವಿಶಂತಿ ಲೀಲೆಗಳಲ್ಲಿ ವೀರಭದ್ರನ ಲೀಲೆಯೂ ಒಂದು. ಇವನಿಗಾಗಿಯೇ ಶರಭಲೀಲೆ, ದಕ್ಷಾಧ್ವರ ಲೀಲೆಗಳಿವೆ. ವೈಧಿಕ ಸಂಸ್ಕೃತಿಯ ಪ್ರತಿನಿಧಿಯಾದ ದಕ್ಷನು ಯಜ್ಞ ಸಂಸ್ಕೃತಿಯನ್ನು ಪ್ರಚೋಧಿಸಿದರೆ, ಶೈವ ಸಂಸ್ಕೃತಿಯ ಪ್ರತಿನಿಧಿಯಾದ ಶಿವ ವೀರಭದ್ರನ ಮೂಲಕ ಯಜ್ಞ ಸಂಸ್ಕೃತಿಯನ್ನು ದಮನಗೊಳಿಸುವುದು ಶರಭಲೀಲೆಯಿಂದ ತಿಳಿದುಬರುತ್ತದೆ. ನರಸಿಂಹ ಅವತಾರವೆತ್ತಿ ಲೋಕಪೀಡಕನಾದ ಹಿರಣ್ಯಕಶ್ಯಪನನ್ನು ಸಂಹರಿಸಿ ರಕ್ತಪಾನ ಮಾಡಿದ ಮಹಾವಿಷ್ಣು ಲೋಕಪೀಡಕನಾಗಿ ವರ್ತಿಸಿದಾಗ ಅವನ ರಕ್ತಗರ್ವವನ್ನು ಅಡಗಿಸಲು ವೀರಭದ್ರ ಶರಭಾವತಾರವೆತ್ತಿದನೆಂದು ಶರಭಲೀಲೆಯಿಂದ ವೇದ್ಯವಾಗುತ್ತದೆ. ಹದಿನಾರನೆಯ ಶತಮಾನದ ಕವಿ ಚಿಕ್ಕನಂಜೇಶ ತನ್ನ 'ರಾಘವಾಂಕ ಚರಿತ್ರೆ'ಯಲ್ಲಿ ಶರಾಭವತಾರಕ್ಕೆ ಸಂಬಂಧಿಸಿದಂತೆ ಈ ರೀತಿ ವಿವರಿಸಿದ್ದಾನೆ. "ರಾಕ್ಷಸನ ಬಿಸಿರಕ್ತವನ್ನು ಕುಡಿದ ನರಸಿಂಹ ಜಗತ್ತಿನಲ್ಲಿ ಪ್ರಜಾಪೀಡಕನಾಗಿದ್ದು, ಅವನನ್ನು ತನಗೆ ತಂದೊಪ್ಪಿಸು ಮಗನೇ ಎಂದು ಪರಶಿವನು ವೀರಭದ್ರನಿಗೆ ಆದೇಶ ನೀಡಿದಾಗ ವೀರಭದ್ರನೇ ಶರಭಾವತಾರ ತಾಳುತ್ತಾನೆ."[3]

ಕ್ರಿ.ಶ. 1450ರಲ್ಲಿ ಲಕ್ಕಣ್ಣದಂಡೇಶನು ತನ್ನ 'ಶಿವತತ್ವ ಚಿಂತಾಮಣಿ'ಯಲ್ಲಿ ಹತ್ತೊಂಬತ್ತನೆಯ ಸಂಧಿಯಲ್ಲಿ ಶರಭಲೀಲೆಯನ್ನು ಹೀಗೆ ವರ್ಣಿಸಿದ್ದಾನೆ. "ಮಹಾವಿಷ್ಣುವಿಗೆ ಆರೋಪಿಸುವ ನರಸಿಂಹರೂಪ ಕೇವಲ ಭೂಚರನಾದರೆ, ಪರಶಿವನಿಗೆ ಆರೋಪಿಸುವ 'ಶರಭ' ಭೂಚರ ಹಾಗೂ ಖೇಚರನೂ ಆಗಿದ್ದಾನೆ. ನರಸಿಂಹನಿಗೆ ದಾನವ ಶಕ್ತಿಯನ್ನು ದಮನ ಮಾಡುವ ಶಕ್ತಿಯಿದ್ದರೆ,

ಪುರಾಣ ಕಲ್ಪನೆಯ ಕ್ರೂರಾತಿಕ್ರೂರ ಪ್ರಾಣಿ-ಪಕ್ಷಿಯ ಸಂಯೋಜನೆಯಿಂದ ಸೃಷ್ಟಿಯಾದ ಶರಭನಿಗೆ ನರಸಿಂಹನನ್ನೇ ದಮನ ಮಾಡುವ ಶಕ್ತಿಯಿದೆ". ಅಂದರೆ ನರಸಿಂಹನಿಗಿಂತಲೂ ಅತ್ಯಂತ ಬಲಶಾಲಿ 'ಶರಭ' ಎಂಬುದು ಅವನ ಉಗ್ರರೂಪದ ವರ್ಣನೆಗಳಿಂದ ತಿಳಿದುಬರುತ್ತದೆ. ಅಲ್ಲದೇ ಶೈವರು ತಮ್ಮ ಹಿರಿಮೆಯನ್ನು ಈ ರೀತಿ ಮೆರೆದಿರುವ ಅಂಶ ಇದರಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆದರೆ ಪರ್ವತೇಶನೆಂಬ ಕವಿ 'ಚತುರಾಚಾರ್ಯ ಚರಿತೆ' ಎಂಬ ಕಾವ್ಯದಲ್ಲಿ ಶರಭಲೀಲೆಯನ್ನು ವಿಶೇಷವಾಗಿ ವ್ಯಾಖ್ಯಾನಿಸಿದ್ದಾನೆ. ಇಲ್ಲಿ ನರಸಿಂಹ ಮತ್ತು ವೀರಭದ್ರನಿಗೆ ನಡೆದ ವಾಕ್ಸಮರದಲ್ಲಿ ಶಿವಾಧಿಕ್ಯನೇ ವಿಜೃಂಭಿಸಿದ್ದಾನೆ. ಮೇಲ್ನೋಟಕ್ಕೆ ವೀರಭದ್ರನು ನರಸಿಂಹನಿಗೆ ಹಿತವಾಕ್ಯ ಹೇಳುವಂತೆ ಕಂಡರೂ ಹೂರಣದಲ್ಲಿ ಶಿವನ ಶಕ್ತಿಯ ಬಗ್ಗೆ ಎಚ್ಚರಿಕೆಯ ಆಶಯವಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಉಪನಿಷತ್ತಿನ ಷಟ್‌ಸ್ಥಲ ಕೌಮುದಿಯು ವೀರಭದ್ರ ಶರಭಾವತಾರದಲ್ಲಿ ನರಸಿಂಹನ ಮೇಲೆ ವಿಜಯ ಸಾಧಿಸಿ ಅವನ ಚರ್ಮವನ್ನು ಉಡುಗೆಯಾಗಿ ಮಾಡಿಕೊಂಡು 'ಮಹಾವೀರ', 'ಶರಭರುದ್ರ', 'ಶರಭಮಹಾಬಲ'ನೆನಿಸಿದ್ದಾನೆ ಎಂದು ಉಲ್ಲೇಖಿಸಿದೆ.

The 'Kamikagama' gives some of the iconographical details of Sarabha, as follow (54.18-7a) "The body of Sarabhes'a is that of a bird of golden hue. It should have two wings which should be uplifted. S'arabhes'a has two red eyes, four legs resembling those of lion resting upon the ground and four others with sharp claws lifted upwards, and an animal tail; the body above the lions should be that of a human being but having the face of lion, which should be wearing upon its head a 'Kirita-mukuta'. There should also be side-tusks and on the whole a terrific appearance. S'arabhe's is to be shown as carrying with two of his legs Narasimha. The figure of Narasihma should be the ordinary form of human being with the hands held in anjali pose".4 The uttara-karanagama (73.3-8) also provides the details of Sarabha. "The figure is said to have lion face, crystal coloured, with moon, sun and fire as three eyes, the tongue being the 'subterranean fire' (badavagni), with kali, durga as two wings, and Indra (thunderbolt) as nails, his belly being Kalagni, his thighs being Kala and Mrtyu, his power being that of Mahavayu, with the speed of storm and possessing four legs, and hands carrying drum (damru) battleaxe (parasu), trident (trisula), sword (khadga), shield (Khetaka), arrow(sara), bow (sarnga), iron club (bhindipala) and withupturned tail. Narasihma is to be shown under his feet. It is further stated that installation of Sarabhesh would assure the destruction of enemies and would bestow all benefits, accomplishments and remove all troubles (73.1-2 and 24c).[5]

ಶರಭಲೀಲೆಯಂತೆ ಶಿವನ ಹನ್ನೆರಡನೆಯ ಲೀಲೆಯಾದ 'ದಕ್ಷಾಧ್ವರ' ಲೀಲೆಯೂ ವೀರಭದ್ರನಿಗೆ ಸಂಬಂಧಿಸಿದ ಕೆಲವು ಆಚರಣೆಗಳ ಬಗ್ಗೆ ಮಾಹಿತಿ ನೀಡುತ್ತದೆ. ವರ್ಷಕ್ಕೊಮ್ಮೆ ಕೊಂಡಹಾಯುವ ಸಂಪ್ರದಾಯ ದಕ್ಷಾಧ್ವರದ ಪ್ರತೀಕವೆಂದು ಅರ್ಥೈಸುವುದೂ ಉಂಟು. ಹಾಗೆಯೇ ಶ್ರೀತತ್ವನಿಧಿಯಲ್ಲಿ ವೀರಭದ್ರನನ್ನು ಮೂವತ್ತೆರಡು ಹಸ್ತಗಳ ಮಹಾಬಾಹು, ಎಂಟು ಕಾಲುಗಳು ಮೂರು ಕಣ್ಣುಗಳನ್ನು ಹೊಂದಿರುವ 'ಅಘೋರ ವೀರಭದ್ರ' ಎಂದು ವರ್ಣಿಸಿದೆ.

ವೀರಭದ್ರನ ಪ್ರಾಚೀನತೆಯನ್ನು ಕ್ರಿ.ಪೂ. ಎರಡು ಸಾವಿರದ ವರ್ಷಗಳ ಹಿಂದೆ ಇದ್ದಂತಹ ಸಿಂಧೂ ನದಿಯ ದಡದಲ್ಲಿ ವಾಸಿಸುತ್ತಿದ್ದ ಆದಿಯ ಜನಾಂಗಕ್ಕೆ ವೀರಭದ್ರನಿಗೂ ಸಂಬಂಧವಿದ್ದುದು ಗಮನಿಸಿ ಗುರುತಿಸಲಾಗಿದೆ. ಡಾ. ಚ.ಜ.ನಿಯವರು ವೀರಭದ್ರನ ನೆಲೆಯನ್ನು ಸೈಂಧವ ಸಂಸ್ಕೃತಿಯಲ್ಲಿ ನಿರೂಪಿಸಿದ್ದಾರೆ. ಇವನ ಆರಾಧಕರನ್ನು 'ವೀರಭದ್ರನ ಒಕ್ಕಲು' ಎಂದು ಕರೆಯಲಾಗುತ್ತದೆ. ಪಂಚಗೋತ್ರ ಪುರುಷರಲ್ಲಿ ವೀರಭದ್ರ ಮೊದಲಿಗನಾಗಿದ್ದಾನೆ. ವೀರಭದ್ರೇಶ್ವರ ನಾಮಾವಳಿಯಲ್ಲಿ "ಗೋತ್ರಪುರುಷನಾಗಿ ಜಗದಿ ಮೆರೆವೆ ವೀರಭದ್ರ" ಎಂದಿರುವುದನ್ನು ಗಮನಿಸಬಹುದಾಗಿದೆ. ಕೆಲವೆಡೆ ಶಿವಲಿಂಗರೂಪದಲ್ಲಿಯೂ ಅರ್ಚಿಸುವುದುಂಟು. ಶಿಡ್ಲಘಟ್ಟದ ಯಡೂರಿನ ವೀರಭದ್ರ ಇಂದಿಗೂ ಲಿಂಗರೂಪದಲ್ಲಿ ಆರಾಧಿಸಲ್ಪಡುತ್ತಿದ್ದು, ವಿರೂಪಾಕ್ಷಲಿಂಗವೆಂದು ಕರೆಯಲ್ಪಟ್ಟಿದ್ದಾನೆ. ಹಂಪಿಯ ಪರಿಸರವೂ ವಿರೂಪಾಕ್ಷ ಹೆಸರಿನ ಲಿಂಗರೂಪದ ವೀರಭದ್ರ ಆರಾಧನೆಯ ಕ್ಷೇತ್ರವಾಗಿದ್ದೆಂಬುದು ತಿಳಿದುಬರುತ್ತದೆ. ಎಂ.ಎಂ.ಕಲ್ಬುರ್ಗಿಯವರು 'ವೀರಪಚ್ಚ' ಎಂಬ ಶಬ್ದ

'ವೀರಭದ್ರ' ಶಬ್ದದ ಅಪಭ್ರಂಶವಾದುದೆಂದು, ರೌದ್ರಭಾವದ ವೀರಭದ್ರನ ಇನ್ನೊಂದು ಶಬ್ದರೂಪ ವೀರಪಚ್ಚ=ವಿರೂಪಾಕ್ಷ ಅರ್ಥಾತ್ 'ವೀರಪಚ್ಚ'ದ ಸಂಸ್ಕೃತಾನುಕರಣ ರೂಪ 'ವಿರೂಪಾಕ್ಷ'ವಾಗಿರಬಹುದೆಂದೂ, ಹಂಪಿಯ ಲಿಂಗರೂಪಿ ವೀರಭದ್ರ ವಿರೂಪಾಕ್ಷನಾಗಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.[6]

ವೀರಭದ್ರ ಶಿವನ ನೆಚ್ಚಿನ ಶಿಷ್ಯ, ಶಿವತತ್ವ ನಿಷ್ಠಾವಂತ, ವೀರ್ಯವಂತ, ಸ್ತ್ರೀಕುಲೋದ್ಧಾರಕ, ದುಷ್ಟಶಿಕ್ಷಕ, ಶಿಷ್ಟ ಪರಿಪಾಲಕನೆಂದಲ್ಲಾ ವರ್ಣಿಸಲಾಗಿದೆ. ಹಾಗೆಯೇ ವೈವಿಧ್ಯತೆಗಳಿಂದ ಕೂಡಿರುವ ದೇವಾಂಶ ಸಂಭೂತ, ಯಾವುದೇ ಜಾತಿ, ಜನಾಂಗ, ಧರ್ಮ, ಪಂಥಗಳ ಬೇಧಭಾವವಿಲ್ಲದೆ ಶಿಷ್ಟತೆಯುಳ್ಳ ಸರ್ವರ ಆರಾಧನಾ ದೇವತೆಯಾಗಿ ಅರ್ಚನೆಗೊಳ್ಳುತ್ತಿರುವ ದೈವ. ಹಾಗಾಗಿ ಸಾಂಪ್ರದಾಯಿಕವಾಗಿಯೋ, ಪೌರಾಣಿಕವಾಗಿಯೋ ವೇದಗಳ ಕಾಲದಿಂದ ಇಂದಿನವರೆಗೂ ವೀರಭದ್ರ ಒಂದು ಪರಿವಾರ ದೇವತೆಯಾಗಿ ಅಥವಾ ಪಾರ್ಶ್ವ ದೇವತೆಯಾಗಿ ಜನಪ್ರಿಯವಾಗಿರುವಂತೆ, ಸಾಂಸ್ಕೃತಿಕ ವೀರನಾಗಿಯೂ ಅರ್ಚಿಸಲ್ಪಟ್ಟಿದ್ದಾನೆ. ವೇದಪುರಾಣ ಕಾಲದಲ್ಲಿದ್ದ ಆಚರಣೆಗಳ ವಿರುದ್ಧ ಬಂಡಾಯವೇಳುವ ಮನೋಭಾವ ಹೊಂದಿದ್ದ ವೀರಭದ್ರ ಇಂದಿಗೂ ಪ್ರಸ್ತುತ. ಉಗ್ರತೆಯಲ್ಲಿ ವೈಷ್ಣವ ಸಂಪ್ರದಾಯದ ನರಸಿಂಹನಿಗೆ ಹೋಲಿಸಿರುವ ವೀರಭದ್ರನನ್ನು ಶೈವಾಗಮಗಳಲ್ಲಿ ಗುರುತಿಸಿರುವುದಲ್ಲದೇ ಕೆಲವು ಶತಮಾನಗಳಿಂದ ವೀರಯೋಧ ದೇವತೆಯಾಗಿ, ವೀರತನದ ಪ್ರತಿನಿಧಿಯಾಗಿ ಅರ್ಚನೆಗೊಳ್ಳುತ್ತಿದ್ದಾನೆ. ಈ ವೀರತನ ಒಂದು ಮೌಲ್ಯವಾಗಿ, ಆ ಮೌಲ್ಯ ಬಂಡಾಯ ಮನೋಧರ್ಮವಾಗಿ ಬೆಳೆದಿರುವ ಪರಿಯನ್ನು ಇಲ್ಲಿ ಗಮನಿಸುವಂತಹದ್ದು.

ವೀರಭದ್ರನಿಗೆ ಜನಪದ ಹಾಗೂ ಶಿಷ್ಟ ಪರಂಪರೆಗಳೆರಡರಲ್ಲೂ ದೀರ್ಘ ಕಥಾನಕಗಳಿವೆ. ವೇದಗಳು (ಋಗ್ವೇದ, ಯಜುರ್ವೇದ), ಪುರಾಣ (ಶಿವಪುರಾಣ, ಸ್ಕಂದಪುರಾಣ, ಕೂರ್ಮಪುರಾಣ, ಮತ್ಸ್ಯಪುರಾಣ, ವಾಯುಪುರಾಣ) ಉಪನಿಷತ್ತು (ಶರಭೋಪನಿಷತ್ತು), ಆಗಮ (ಶಿವಾಗಮ, ಕಾಮಿಕಾಗಮ, ಕಾರಣಾಕಾಗಮ), ಕಾವ್ಯ, ಶಿಲ್ಪ, ಚಿತ್ರಕಲೆ, ಇತಿಹಾಸ, ಮಹಾಭಾರತ, ಶಿಲಾಶಾಸನಗಳು ಹಾಗೂ ಜನಪದ ಸಾಹಿತ್ಯ (ಪದ, ವಡಬು, ಬಯಲಾಟ)ಗಳಂತಹ ಮಾಧ್ಯಮಗಳಲ್ಲಿ ವೀರಭದ್ರನ ಕಥಾನಕ ವರ್ಣನೆಯಿದೆ. ಭಾರತ ಭಾಗವತಾದಿಗಳಲ್ಲಿ ವೀರಭದ್ರನಿಗೆ ಸಂಬಂಧಿಸಿದ ಕಥೆಗಳಿವೆ. ಮಹಾಭಾರತದಲ್ಲಿ ವೀರಭದ್ರ ರುದ್ರಾಂಶ ಸಂಭೂತನೆಂದು ಉಲ್ಲೇಖವಿದೆ.[7] ಕನ್ನಡದಲ್ಲೂ ವೀರಭದ್ರನಿಗೆ ಸಂಬಂಧಿಸಿದ ಅನೇಕ ಕೃತಿಗಳು ರಚನೆಗೊಂಡಿವೆ. ಕನ್ನಡದಲ್ಲಿ ಹರಿಹರನ 'ವೀರಭದ್ರ ದೇವರ ರಗಳೆ'ಯೇ ಆದ್ಯ ಕೃತಿಯಾಗಿದ್ದು, ಹರಿಹರನ ಕಾಲಕ್ಕಾಗಲೇ (ಕ್ರಿ.ಶ.1225) ವೀರಶೈವ ಕವಿಗಳು ವೀರಭದ್ರನನ್ನು ತಮ್ಮ ದೇವತೆಗಳ ಸಾಲಿಗೆ ಸೇರಿಸಿಕೊಂಡಿರುವುದು ಸ್ಪಷ್ಟವಾಗಿದೆ. ಹರಿಹರನ ನಂತರ ರಾಘವಾಂಕನ 'ವೀರೇಶಚರಿತೆ'ಯೂ (ಮೀಸಲುಗವಿತೆ) ವೀರಭದ್ರನ ಸ್ವರೂಪವನ್ನು ಕುರಿತು "ಅವನದು ಬೆಂಕಿಯ ಮೈಬಣ್ಣ, ಉದ್ದವಾದ ಜಡೆ, ನೆತ್ತಿಯಲ್ಲಿ ಲಿಂಗ, ಕಿರೀಟ, ಮಣಿಕುಂಡಲ, ಪಂಚಮುಖ, ಸಹಸ್ರಭುಜಗಳು, ಉರಿಗಣ್ಣುಗಳನ್ನು ಹೊಂದಿದ ಉಗ್ರಸ್ವರೂಪಿ"ಯೆಂದು ವರ್ಣಿಸಿದ್ದಾನೆ. ಹಾಗೆಯೇ ವೀರಭದ್ರ ನೃಪಾಲನ (ಕ್ರಿ.ಶ.1530) 'ವೀರಭದ್ರ ವಿಜಯ', ಚೆಲುವ ಕವಿಯ 'ವೀರಭದ್ರ ಚರಿತೆ', ಚಕ್ರಪಾಣಿ ರಂಗನಾಥನ 'ವೀರಭದ್ರ ವಿಜಯ' ಮತ್ತು 'ಶರಭಲೀಲೆ' ಶಾಂತವೀರಕವಿಯ 'ವೀರಭದ್ರ ಲೀಲಾರತ್ನ', ಸೋಮಕವಿಯ 'ವೀರಭದ್ರ ಸಾಂಗತ್ಯ' ಮುಂತಾದ ಕೃತಿಗಳಲ್ಲಿ ವೀರಭದ್ರನ ವರ್ಣನೆಯಿರುವುದು ಕಂಡುಬರುತ್ತದೆ. ವೀರಭದ್ರನ ವ್ಯಕ್ತಿತ್ವದಲ್ಲಿದ್ದ ಕಲಿತನ, ಕೆಚ್ಚು, ಹೋರಾಟದ ಮನೋಭಾವಗಳನ್ನು ಗಮನಿಸಿದ ವೀರಶೈವ ಕವಿಗಳು ಇವನನ್ನು ವೀರಶೈವ ಧರ್ಮದ ರಕ್ಷಕನಾಗಿ ರೂಪಿಸಿದ್ದಾರೆ. ಕ್ರಿ.ಶ. 1400ರ ಚಾಮರಸನ 'ಪ್ರಭುಲಿಂಗಲೀಲೆ' ವೀರಭದ್ರನ ಗಣಾಚಾರವನ್ನು ವರ್ಣಿಸಿರುವ ಒಂದು ಪ್ರಾಚೀನ ಕೃತಿಯಾಗಿದೆ. ವಚನಕಾರರಾದ ಅಲ್ಲಮ ಪ್ರಭು, ಮಡಿವಾಳ ಮಾಚಯ್ಯ, ಸತ್ಯಕ್ಕ, ಅಕ್ಕಮಹಾದೇವಿ ಮುಂತಾದವರು ತಮ್ಮ ವಚನ ಸಾಹಿತ್ಯದ ಮೂಲಕ ವೀರಭದ್ರನನ್ನು ವರ್ಣಿಸಿದ್ದಾರೆ.

ವೀರಭದ್ರ ಭರತಖಂಡದ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಮಹಾರಾಷ್ಟ್ರಗಳಲ್ಲಿ ಹೆಚ್ಚು ಜನಪ್ರಿಯ-ಶಕ್ತಿಶಾಲಿ ದೇವರೆನಿಸಿಕೊಂಡು ಅರ್ಚನೆಗೊಳ್ಳುತ್ತಿದ್ದಾನೆ. ಅದರಲ್ಲೂ ಮಧ್ಯಕಾಲೀನ ಮತ್ತು ನಂತರದ ದಿನಗಳಲ್ಲಿ ಹೆಚ್ಚು ಜನಪ್ರಿಯವಾಯಿತೆಂದೇ ಹೇಳಬಹುದಾಗಿದೆ. ಈ ಕಾಲದಲ್ಲಿ ನಾಡಿನ ಉದ್ದಗಲಕ್ಕೂ ವೀರಭದ್ರನ ದೇವಾಲಯಗಳು ನಿರ್ಮಾಣವಾಗಿರುವುದನ್ನು ನಾವು ಕಾಣಬಹುದಾಗಿದೆ. ಅವುಗಳಲ್ಲಿ ರಾಚೋಟಿ (ಆಂದ್ರಪ್ರದೇಶದ ಕಡಪಾ ಜಿಲ್ಲೆ) ಗೊಡಚಿ, ಲೇಪಾಕ್ಷಿ, ಹಿಮಾಚಲ ಪ್ರದೇಶ ಮುಂತಾದೆಡೆಗಳಲ್ಲಿರುವ ವೀರಭದ್ರ ದೇವಾಲಯಗಳು ಈ ಪರಂಪರೆಗೆ ಅತ್ಯುತ್ತಮ ನಿದರ್ಶನಗಳಾಗಿವೆ. ಕ್ರಿ.ಶ. ನಾಲ್ಕನೆಯ ಶತಮಾನದಿಂದಲೇ ವೀರಭದ್ರನ ಪ್ರಾಮುಖ್ಯತೆ ಕರ್ನಾಟಕದ ಶಾಸನಗಳಲ್ಲಿ ಕಂಡುಬರುತ್ತದೆ. ಕರ್ನಾಟಕದಲ್ಲಿ ವೀರಭದ್ರ ದೇವರ ಪ್ರತಿಷ್ಠಾಪನೆಯನ್ನು ಉಲ್ಲೇಖಿಸುವ ಪ್ರಥಮ ಶಾಸನವೆಂದರೆ ಚಿಕ್ಕಮಗಳೂರಿನ ಕ್ರಿ.ಶ.1257ರ ಶಾಸನ.[8] ಧಾರವಾಡ ಜಿಲ್ಲೆಯ ಕೋಳೂರಿನ ಕ್ರಿ.ಶ. 1045ರ ಶಾಸನದಲ್ಲಿ ಉಲ್ಲೇಖಗೊಂಡಿರುವ 'ವೀರಾವತಾರ' ಎಂಬ

ಪದವನ್ನು An incarnation of Vira (Virabhadra) ಎಂದು ಅರ್ಥೈಸಲಾಗಿದೆ.[9] ಪ್ರಪ್ರಥಮ ಬಾರಿಗೆ ವೀರಭದ್ರ ದೇವರ ಉಲ್ಲೇಖವಾಗಿರುವುದು ಇದರಲ್ಲಿ ಎಂಬ ಅಭಿಪ್ರಾಯವೂ ಇದೆ. ವೀರಭದ್ರನ ಉಲ್ಲೇಖ ಸ್ಪಷ್ಟವಾಗಿ ಗೋಚರಿಸುವ ಮತ್ತೊಂದು ಶಾಸನವೆಂದರೆ ಕ್ರಿ.ಶ. 1163 ಕುಕ್ಕನೂರಿನ ಶಾಸನ.[10] ಈ ಶಾಸನದಲ್ಲಿ ಬೊಪ್ಪದೇವನೆಂಬ ಅಧಿಕಾರಿಯನ್ನು "ಮಹೇಶ್ವರ ಸೇವಾರತಿಯಿಂದೆ ನೂತನ ಲಸತು ಶ್ರೀವೀರಭದ್ರಂ" ಎಂದು ವರ್ಣಿಸಿದೆ. ಹೀಗೆ ವೀರಭದ್ರನ ಹೆಸರು ವ್ಯಕ್ತಿನಾಮ, ಸ್ಥಳನಾಮ, ಸಂಸ್ಥೆ ಅಥವಾ ಮಠ, ಅಧಿಕಾರಸೂಚಿ ಹಾಗೂ ದೇವತೆಯಾಗಿ ಶಾಸನಗಳಲ್ಲಿ ಉಲ್ಲೇಖಗೊಂಡಿರುವುದನ್ನು ಕಾಣಬಹುದಾಗಿದೆ.[11] ಹಾಗೆಯೇ ವೀರಭದ್ರನ ಉಪಾಸಕರು ವೀರೇಶ, ವೀರಪ್ಪ, ವೀರಭದ್ರ, ವೀರಯ್ಯ, ಮುಂತಾದ ಹೆಸರುಗಳನ್ನು ಧರಿಸಿ ತಮ್ಮ ಆರಾಧ್ಯ ದೇವರಿಗೆ ಭಕ್ತಿಯನ್ನು ಅರ್ಪಿಸುತ್ತಾರೆ.

ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕದಂಬರು, ಚೋಳರು, ಬಾಣರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯನಗರ ಮುಂತಾದ ಅರಸರ ಆಳ್ವಿಕಾವಧಿಯಲ್ಲಿ ವೀರಭದ್ರನನ್ನು ಕುರಿತಾದ ಶಾಸನೋಕ್ತ ಸಾಲುಗಳನ್ನು ಇಂದಿಗೂ ಕಾಣಬಹುದಾಗಿದೆ. ಆದರೆ ಇತಿಹಾಸದ ಒಳಹೊಕ್ಕಾಗ ಹೊಯ್ಸಳರ ಆಳ್ವಿಕೆಯ ಕೊನೆಯ ಭಾಗದಲ್ಲಿ ವೀರಭದ್ರನ ಉಪಾಸನೆಗೆ ಹೆಚ್ಚು ಪ್ರೋತ್ಸಾಹ ನೀಡಲಾಯಿತೆಂಬುದು ಕಂಡುಬರುತ್ತದೆ. ನಂತರ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ವೀರಭದ್ರನ ಆರಾಧನೆ ಹೆಚ್ಚಾಗಿ ಬಹುಜನಪ್ರಿಯ ದೇವರೆನಿಸಿಕೊಂಡನು. ವಿಜಯನಗರ ಕಾಲಕ್ಕೂ ಮುನ್ನ ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ವೀರಭದ್ರನ ಆರಾಧನೆ ಹೆಚ್ಚು ಜನಪ್ರಿಯಗೊಂಡಿತ್ತು ಎಂಬುದನ್ನು ಮರೆಯಬಾರದು. ಹೀಗೆ ಜನಪ್ರಿಯತೆ, ವಿಪುಲತೆ ಹೆಚ್ಚಾದ ಪರಿಣಾಮವಾಗಿ ವಿಜಯನಗರ ಕಾಲದಲ್ಲಿ ವೈವಿಧ್ಯ ನಿರೂಪಣೆಗೆ ಅವಕಾಶ ದೊರೆತು ಶಿಲ್ಪಗಳ ಪ್ರಮಾಣ, ಲಕ್ಷಣ ವಿನ್ಯಾಸಗಳಲ್ಲಿ ವೈವಿಧ್ಯತೆಯನ್ನು ಮೇಳೈಸಿ ಅನೇಕ ಶಾಸನಗಳು, ಶಿಲ್ಪಗಳು, ಕಲೆ ಸಾಹಿತ್ಯ, ಮುಂತಾದ ಮಾಧ್ಯಮಗಳ ಮೂಲಕ ಸ್ವಾರಸ್ಯಕರವಾಗಿ ಚಿತ್ರಿತಗೊಂಡಿದ್ದಾನೆ. ಅದರಲ್ಲೂ ಹಿಂದೂ ಧರ್ಮದ ಸಂರಕ್ಷಣೆ ವಿಜಯನಗರ ಸಾಮ್ರಾಜ್ಯದ ಹೊಣೆಯಾಗಿದ್ದರ ಹಿನ್ನೆಲೆಯಲ್ಲಿ ವೀರವ್ಯಕ್ತಿತ್ವ-ವೀರಸಂಪ್ರದಾಯದ ಆರಾಧನೆ ಹೆಚ್ಚು ಜನಪ್ರಿಯಗೊಂಡಿತು ಹಾಗೂ ವೀರಭದ್ರ ನವೀನ ಸಾಂಸ್ಕೃತಿಕ ಪುರಾವೆಯನ್ನು ಈ ಕಾಲ ಹೆಚ್ಚು ಆದರಿಸಿತೆನ್ನಬಹುದು. ಜೊತೆಗೆ ವೀರಭದ್ರನ ಕುರಿತಾದ ವಚನಕಾರರ ವಚನಗಳ ಪ್ರಭಾವವೂ ಕಾರಣವಾಯಿತು.

ಜಾನಪದ ಸಾಹಿತ್ಯದಲ್ಲಿ ಉಕ್ತವಾಗಿರುವ ವೀರಭದ್ರ ವಿಜಯನಗರ ಕಾಲದಲ್ಲಿ ವೀರೋತ್ಸವ ಮೂರ್ತಿಯಾಗಿ ಜಾಗೃತಗೊಂಡನು. ಕೆಲವು ಕಡೆಗಳಲ್ಲಿ ಜಾಗೃತ ವೀರಭದ್ರನೆಂದೇ ಪ್ರಚಲಿತಗೊಂಡಿದ್ದಾನೆ. ವೀರಭದ್ರನ ಪ್ರತಿಷ್ಠೆ ಯಾವುದೇ ಕಾಲದ್ದಾಗಿರಲಿ ಅಂದರೆ ವಿಜಯನಗರ ಪೂರ್ವ, ವಿಜಯನಗರ ಕಾಲ ಹಾಗೂ ವಿಜಯನಗರೋತ್ತರ ಕಾಲದ್ದಾಗಿರಲಿ ಅವನಿಗೆ ಸಂಬಂಧಿಸಿದ ಪ್ರಮುಖ ಆಚರಣೆಗಳಾದ ಗಣಾಚಾರ, ವೀರಗಾಸೆ, (ಪುರವಂತಿಗೆ, ಲಿಂಗದಬೀರತನ), ವಡಬು ಉಗ್ಗಡಿಕೆ, ಕೆಂಡೋತ್ಸವ (ಸನಾತನ ಧರ್ಮವಾದ ವೈಧಿಕ ಧರ್ಮದ ಯಜ್ಞ ಆಚರಣೆಯನ್ನು ಧಿಕ್ಕರಿಸುವ, ವಿರೋಧಿಸುವ ಪದ್ಧತಿ), ವೀರಗುಣಿತ, ನವರಾತ್ರಿಯಲ್ಲಿ ವಿಶೇಷ ಪೂಜೆ, ಗುಗ್ಗಳಕಾರ್ಯ, ಹಂಪೆಹುಣ್ಣಿಮೆ, ಹರಸೇವೆ, ಖಂಡಪೂಜೆ, ಶಸ್ತ್ರಪವಾಡ, ಹಲಗೆಸೇವೆ, ಓಕುಳಿಸೇವೆ, ಎಲೆಪೂಜೆ, ಕುದುರೆಪೂಜೆ, ಜಂಪೋತ್ಸವ, ರಥೋತ್ಸವ, ವೀರಭದ್ರಕಾರ್ಣಿಕಾ, ದಕ್ಷಸಂಹಾರ ನಂದಿಧ್ವಜ ಕುಣಿತ (ನಂದಿ ರೈತರ ಆರಾಧ್ಯ ದೇವ. ಹಾಗಾಗಿ ರೈತರು ಪ್ರಥಮವಾಗಿ ನಂದಿಯನ್ನು ಪೂಜಿಸುವ ಹಾಗೂ ಗೌರವಿಸುವ ಸಲುವಾಗಿ ಪಾಶುಪತ ಪರಂಪರೆಯಲ್ಲಿ ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯ ಕೋಡಿಹಳ್ಳಿಯಲ್ಲಿ ಪ್ರಾರಂಭವಾಯಿತೆಂದು ತಿಳಿದುಬರುತ್ತದೆ. ನಂದಿ ವೀರಶೈವ ಧರ್ಮದ ಸ್ವಾಭಿಮಾನದ ಸಂಕೇತ. ಇಲ್ಲಿ ದೈವ ಮತ್ತು ಜಾನಪದ ಸಂಸ್ಕೃತಿಗಳೆರಡನ್ನು ಸಮ್ಮಿಳಿತಗೊಳಿಸಲಾಗಿದೆ. ಪ್ರಕೃತಿ ಮತ್ತು ಪರಿಸರಗಳೆರಡಕ್ಕೂ ಬಸವನು ಅನ್ನದಾತನ ರೂಪದಲ್ಲಿ ಕಾಣುವರು. ಪರಶಿವನೆ ಜಗದೊಡೆಯನಾಗಿ ನಂದಿಯನ್ನು ತನ್ನ ವಾಹನವನ್ನಾಗಿ ಸ್ವೀಕರಿಸಿರುವುದರಿಂದ ನಂದಿಗೆ ವಿಶೇಷಸ್ಥಾನವಿದೆ.) ಜೋಯಪಾಟ ಕುಣಿತ, ತೊಂಡಲದೇವ ಕುಣಿತಗಳಿಂದ ತಮ್ಮ ಭಕ್ತಿಯನ್ನು ಅರ್ಪಿಸುವುದನ್ನು ಕಾಣಬಹುದಾಗಿದೆ. ಅದರಲ್ಲೂ ವಿಜಯನಗರ ಕಾಲದಲ್ಲಿ ಈ ವೈವಿಧ್ಯತೆಯ ಆಚರಣೆಗಳು ಹೆಚ್ಚಾಗಿ ವಿಜಯನಗರೋತ್ತರ ಕಾಲದಲ್ಲೂ ಪ್ರಭಾವ ಬೀರಿರುವುದನ್ನು ಕಾಣಬಹುದಾಗಿದೆ.

'ಪುರವಂತಿಕೆ' ಎಂಬುದು ಶೈವಧರ್ಮದಲ್ಲಿ ಬೆಳೆದು ಬಂದಿರುವ ಒಂದು ವಿಶಿಷ್ಟವಾದ ಧಾರ್ಮಿಕ ಕಲೆಯಾಗಿದ್ದು, ದಕ್ಷಿಣ ಕರ್ನಾಟಕದಲ್ಲಿ 'ವೀರಗಾಸೆ' ಎಂದು ಉತ್ತರ ಕರ್ನಾಟಕದಲ್ಲಿ 'ಪುರವಂತಿಕೆ' ಎಂದು ಪ್ರಚಲಿತದಲ್ಲಿದೆ. ಇದಕ್ಕೆ 'ಲಿಂಗದವೀರ' 'ವೀರಭದ್ರನ ಕುಣಿತ' ಹಾಗೂ 'ಕಾಸೆಗುಣಿತ' ವೆಂತಲೂ ಕರೆಯುವುದು ರೂಢಿಯಲ್ಲಿದೆ.[12] ಸಾಮಾನ್ಯವಾಗಿ 'ಪುರವಂತರು' ವೀರಭದ್ರನ ಅವತಾರವನ್ನು, ಅವನ ಮಹಿಮೆಯನ್ನು ವರ್ಣಿಸುವ ವಡಬುಗಳು ಶರಭಾವತಾರ ಶಿವನ ವರ್ಣನೆಗಳನ್ನು ಕುರಿತಂತಹವುಗಳಾಗಿರುತ್ತವೆ. ಈ ಆಚರಣೆಯ ಕುಣಿತಗಳ ಬಗ್ಗೆ ಡಾ. ದೇವೇಂದ್ರಕುಮಾರ ಹಕಾರಿಯವರ

ಲೇಖನ ಉಪಯುಕ್ತ ಮಾಹಿತಿಗಳನ್ನು ತಿಳಿಸುತ್ತದೆ.[13] ಹತ್ತು ಜನ ಪುರವಂತರಿರುವ ಒಂದು ರಕ್ಷಣಾ ದಳಕ್ಕೆ ವೀರಭದ್ರರೆಂದು ಕರೆಯುತ್ತಿದ್ದರೆಂದು, ಈ ರೀತಿಯ ಒಂದು ರಕ್ಷಣಾ ದಳದ ಉಲ್ಲೇಖ ಹನ್ನೆರಡನೆಯ ಶತಮಾನದ ಶಾಸನವೊಂದರಲ್ಲಿದೆ ಎಂಬುದು ತಿಳಿದುಬರುತ್ತದೆ.[14]

ಕರ್ನಾಟಕದ ವಿವಿಧ ಭಾಗಗಳಲ್ಲಿ ದೊರೆತಿರುವ ವಿಜಯನಗರ ಕಾಲದ ವೀರಭದ್ರನ ಶಿಲ್ಪಗಳನ್ನು ಗಮನಿಸಿದರೆ ವೈವಿಧ್ಯತೆಗಳ ಹಾಗೂ ಆಚಾರಗಳ ಸಾಂಸ್ಕೃತಿಕ ಅಚ್ಚು ಹೊಂದಿದಂತೆ ಕಂಡುಬರುತ್ತವೆ. ಈ ಕಾಲದ ವೀರಭದ್ರನ ಶಿಲ್ಪಗಳು ಶಾಸ್ತ್ರೀಯ ಹಾಗೂ ಆಗಮಗಳ ಅನುಸಾರವಾಗಿ ರೂಪಿತವಾಗಿರುವುದರ ಜೊತೆಗೆ ಜನಪದ ಶೈಲಿಯ ಲಕ್ಷಣಗಳನ್ನು, ಸ್ಥಳೀಯ ವೈಲಕ್ಷಣಗಳನ್ನು ಪ್ರತಿಬಿಂಬಿಸುವ ಶಿಲ್ಪಗಳೂ ಆಗಿವೆ. ಶಾಸ್ತ್ರೀಯವಾಗಿ ರಚನೆಗೊಂಡಿರುವ ಶಿಲ್ಪಗಳು ಸುಂದರವಾಗಿದ್ದರೆ, ಜಾನಪದೀಯ ಶೈಲಿಯ ಶಿಲ್ಪಗಳು ಸ್ವಲ್ಪ ಒರಟಾಗಿರುವುದನ್ನು ಗುರುತಿಸಲಾಗಿದೆ. ಸಾಮಾನ್ಯವಾಗಿ ಏಕಮುಖದಿಂದ ಪಂಚಮುಖ, ಬಾಹುಗಳಲ್ಲಿ ದ್ವಿಬಾಹು, ಚತುರ್ಭುಜ, ಅಷ್ಟಬಾಹು, ದಶಬಾಹು, ಮೂವತ್ತೆರಡು ಬಾಹುಗಳುಳ್ಳ ಶಿಲ್ಪಗಳಿದ್ದು, ಬಾಹುಗಳಲ್ಲಿ ವಿವಿಧ ಆಯುಧಗಳು ಗೋಚರಿಸುತ್ತವೆ. ಪಾದಭಂಗಿ, ದೇಹಭಂಗಿ, ವಿವಿಧ ಆಭರಣಗಳು, ಸಹಗಾಮಿ ದಕ್ಷ, ಪ್ರಸೂತಿ ಅಥವಾ ಭದ್ರಕಾಳಿ ಶಿಲ್ಪಗಳು ಕಂಡುಬರುತ್ತವೆ. ಜೊತೆಗೆ ಕೆಲವು ಆಸೀನ (ಗೊಡಚಿ ಮುದ್ದುವೀರಣ್ಣ ಕಾಲುಚಾಚಿ ಕುಳಿತಿದ್ದರೆ, ಧಾರವಾಡದ ಹೊಂಡದವೀರಣ್ಣ ಮಂಡಿ ಭಾಗಿಸಿ ಕುಳಿತಿದ್ದಾನೆ) ಶಿಲ್ಪಗಳು ಕಂಡುಬರುತ್ತವೆ.[15]

ವಿಜಯನಗರದ ವೀರಭದ್ರನ ಶಿಲ್ಪಗಳು ಬಹುತೇಕ ಶಿಲ್ಪಸಂಗ್ರಹ ಮತ್ತು ಶಿಲ್ಪರತ್ನ ಗ್ರಂಥಗಳು ನಿರೂಪಿಸುವ ಸಾತ್ವಿಕ, ರಾಜಸಿಕ ಹಾಗೂ ತಾಮಸಿಕ ಅಂಶಗಳನ್ನು ಆಧರಿಸಿ ರಚನೆಯಾಗಿರುವುದು ಕಂಡುಬರುತ್ತದೆ. ಆದರೆ ಬಹುತೇಕ ವಿದ್ವಾಂಸರು ಬಹುಮಟ್ಟಿಗೆ ಕಾರಣಾಗಮವನ್ನು ಆಧರಿಸಿ ರಚಿಸಲ್ಪಟ್ಟಿವೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೂ ಆಯಾಯ ಶಿಲ್ಪಿಯ ತಾತ್ವಿಕ ನಂಬಿಕೆ ಹಾಗೂ ಕಲ್ಪನೆಗಳಿಗನುಗುಣವಾಗಿ ಕೆಲವು ಶಿಲ್ಪಗಳು ರಚನೆಯಾಗಿರುವುದನ್ನು ಗುರುತಿಸಬಹುದಾಗಿದೆ. ಕಾರಣಾಗಮದ ವೀರಭದ್ರನ ಶಿಲ್ಪಗಳ ಪ್ರಮುಖ ಲಕ್ಷಣಗಳೆಂದರೆ ಚತುರ್ಭುಜ ಅಥವಾ ಅಷ್ಟಭುಜ, ತ್ರಿನೇತ್ರ, ಹುರಿಮೀಸೆ, ರುಂಡಮಾಲಾಧಾರಿ, ಹಾವುಗೆಧಾರಿ, ಸ್ಥಾನಕಭಂಗಿ, ಅಗ್ನಿಜ್ವಾಲಾ ಜಟಾಮಕುಟಧಾರಿ, ಕಿರೀಟಮಕುಟಧಾರಿ, ನಡುವಿನಲ್ಲಿ ಸರ್ಪ ಯಜ್ಞೋಪವೀತ, ಧನುರ್ಬಾಣಧಾರಿ, ಹಸ್ತಗಳಲ್ಲಿ ಬಿಲ್ಲು, ಬಾಣ, ಖಡ್ಗ, ಗದೆ, ಖೇಟಕ, ಬಲಕ್ಕೆ ಪ್ರಣಾಮ ಭಂಗಿಯ ಟಗರುದೆಲೆಯ ಸ್ಥಾನಕ ದಕ್ಷನಿರುವುದು. ಪ್ರಾಯಶ: ಕಾರಣಾಗಮನದ ವರ್ಣನೆ ಮನಃ ಕುಂಡಲಿನಿಯೋಗ ಹಾಗೂ ಉಗ್ರರೂಪಾಂಶಗಳನ್ನು ಏಕೀಕರಿಸಿ ಹೇಳಿದಂತಿದೆ.

ಹಂಪೆಯಲ್ಲಿ ಕಂಡುಬರುವ ವೀರಭದ್ರನ ಶಿಲ್ಪಗಳ ಸಾಮಾನ್ಯ ಲಕ್ಷಣಗಳೆಂದರೆ ತ್ರಿಭಂಗಿ, ಸ್ಥಾನಕ, ಹಾವುಗೆಧಾರಿ, ಚತುರ್ಭುಜ, ಹಸ್ತಗಳಲ್ಲಿ ಬಿಲ್ಲು, ಬಾಣ, ಖಡ್ಗ, ಖೇಟಕಳು (ಡಾಲು-ಗುರಾಣಿ) ಯಜ್ಞೋಪವೀತ ಅಥವಾ ಛನ್ನವೀರ, ರುಂಡಮಾಲೆ, ಕಟಿಬಂಧ, ಉದರಬಂಧ, ಕೇಯೂರ, ಕಾಲ್ಕಡಗ, ಭುಜಕೀರ್ತಿ, ಇಳಿವಸ್ತ್ರ, ಹಾರ, ಕರಂಡಮಕುಟ, ಕಿರೀಟಮಕುಟ, ಕಿರೀಟದ ಪೂರಿತ ಭಾಗದಲ್ಲಿ ಕಿರುಶಿವಲಿಂಗ, ನಡುವಿನಲ್ಲಿ ಬಾಗಿದ ಭರ್ಜಿ, ಆಯತಾಕಾರದ ಢಾಲುವಿನ ಮೇಲೆ ಊರಿದ ಹಸ್ತಗಳ ಜೊತೆಗೆ ಕೀರ್ತಿಮುಖ (ನರಸಿಂಹನ ಮುಖ), ಕೇಂದ್ರನೇತ್ತಿಯ ಪ್ರಭಾವಳಿ, ಸೊಂಟದಲ್ಲಿಯೂ ಕೀರ್ತಿಮುಖ ಮಾದರಿ ಶಿಲ್ಪ, ಬಲಕ್ಕೆ ಪ್ರಣಾಮ ಭಂಗಿಯ ಟಗರುದೆಲೆಯ ಸ್ಥಾನಕ ದಕ್ಷನ ಶಿಲ್ಪವಿರುತ್ತದೆಂದು ವಿದ್ವಾಂಸರು ತಿಳಿಸಿದ್ದಾರೆ.[16] ಕೆಲವು ಶಿಲ್ಪಗಳಲ್ಲಿ ದಕ್ಷ ಹಾಗೂ ಪ್ರಸೂತಿಯಿದ್ದರೆ, ಕೆಲವೆಡೆ ಬಲಕ್ಕೆ ಭದ್ರಕಾಳಿ, ಎಡಕ್ಕೆ ದಕ್ಷ, ಕಿರುವೀರಭದ್ರನ ಆಸೀನ ಶಿಲ್ಪಗಳು ದೊಡ್ಡ ಶಿಲ್ಪದ ಜೊತೆ ಪ್ರಭಾವಳಿಯಲ್ಲಿರುವುದು, ಪ್ರತ್ಯೇಕ ಭದ್ರಕಾಳಿಯಿರುವುದು, ಢಾಲುವಿನ ಕೆಳಗೆ ಒಂದು ಅಥವಾ ಎರಡು ರುಂಡಗಳು, ದಕ್ಷನ ಮಣಿದ ಅಂಬೆಗಾಲಿನ ಶಿಲ್ಪವಿರುವುದು, ಎಡಮುಂದಿನ ಕೈಯಲ್ಲಿ ಕೆಲವೊಮ್ಮೆ ಢಾಲುವಿನ ಬದಲಿಗೆ ಕಪಾಲಬಟ್ಟಲು ದಂಡ ಅಥವಾ ತುದಿಯಲ್ಲಿ ಪ್ರಯೋಗ ಚಕ್ರ ದಂಡವಿರುವುದು (ಕಮಲದ ಮೊಗ್ಗಿನಂತಹ ರೂಪ)[17] ರುಂಡಮಾಲೆಗಳು ಭುಜದಿಂದ ಇಳಿಬಿದ್ದಿರುವುದು, ಕೆಲವೊಮ್ಮೆ ಜನಿವಾರದ ರೀತಿಯ ಕೆತ್ತನೆ, ಕೊರಳಹಾರದಂತೆ ವಿಶಾಲ ಛನ್ನವೀರಗಳಿರುವುದು (ಇದು ವಿಜಯನಗರ ಪೂರ್ವದ ವೀರಭದ್ರನ ಅಲಂಕಾರ) ಸಾಮಾನ್ಯವಾಗಿದೆ. ನೀಳ, ಆಯತಾಕಾರದ ಢಾಲು ವೀರಭದ್ರನಿಗೆ ಗುರಾಣಿಯಂತೆ ಯುದ್ಧದಲ್ಲಿ ರಕ್ಷಣಾ ಸಾಧನ ಹಾಗೂ ವೀರಭದ್ರ ಸಂಪ್ರದಾಯದಲ್ಲಿ ಎಡಮುಂಗೈಯಲ್ಲಿನ ಮುಖ್ಯ ಆಯುಧವೂ ಆಗಿದೆ. ಸಾಮಾನ್ಯವಾಗಿ ವಿಜಯನಗರ ಕಾಲದ ವೀರಭದ್ರನ ಶಿಲ್ಪಗಳು ಎತ್ತರವಾಗಿದ್ದು, ದಷ್ಟಪುಷ್ಟ ಶರೀರವನ್ನು ಹೊಂದಿದ್ದು ಕ್ರಿಯಾಭಂಗಿಯಲ್ಲಿರುತ್ತವೆ.

ಚಿತ್ರದುರ್ಗ ಜಿಲ್ಲೆಯ ಕೆಲವು ವೀರಭದ್ರ ಶಿಲ್ಪಗಳು

ವಿಜಯನಗರ ಅರಸರ ಆಳ್ವಿಕೆಗೆ ಒಳಪಟ್ಟ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಚಿತ್ರದುರ್ಗ ಜಿಲ್ಲೆಯು ಒಂದು. ಜಿಲ್ಲೆಯಲ್ಲಿ ವಿವಿಧ ಧರ್ಮಗಳು, ಸಂಸ್ಕೃತಿಗಳು ಬಾಳಿಬೆಳಗಿದ್ದುದಕ್ಕೆ ಇತಿಹಾಸದಲ್ಲಿ ವಿಫುಲ ಸಾಕ್ಷಿಗಳಿದ್ದು, ಶಿಲಾಯುಗದಿಂದ

ಆಧುನಿಕ ಯುಗದವರೆಗೂ ತನ್ನ ನಂಬಿಕೆ, ಕಲ್ಪನೆಗಳಿಗನುಸಾರವಾಗಿ ಧಾರ್ಮಿಕ ಜೀವನವನ್ನು ನಡೆಸುತ್ತಾ ಬಂದಿದ್ದಾನೆ. ಜಿಲ್ಲೆಯಲ್ಲಿ ಷಣ್ಮತಗಳು (ಶೈವ, ವೀರಶೈವ, ವೈಷ್ಣವ, ಸೌರ, ಶಾಕ್ತ, ಗಾಣಪತ್ಯ) ಪ್ರಚಲಿತದಲ್ಲಿದ್ದು, ಅವುಗಳಿಗೆ ಸಂಬಂಧಪಟ್ಟಂತೆ ವಿವಿಧ ಪೋಷಕರಿದ್ದುದೂ ತಿಳಿದುಬರುತ್ತದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಶೈವ, ವೀರಶೈವ ಹಾಗೂ ವೈಷ್ಣವ ಧರ್ಮಗಳು ಪ್ರಾಧಾನ್ಯತೆ ಪಡೆದುಕೊಂಡಿದ್ದನ್ನು ನಾವು ಕಾಣಬಹುದಾಗಿದೆ. ಹನ್ನೊಂದನೆಯ ಶತಮಾನದಲ್ಲಿ ವಚನ ಚಳುವಳಿಯ ಪರಿಣಾಮವಾಗಿ ಜಿಲ್ಲೆಯಲ್ಲಿ ವೀರಶೈವ ಧರ್ಮವು ಹರಡುತ್ತಾ ಹೋಯಿತು. ಈ ಧರ್ಮ ಚಿತ್ರದುರ್ಗ ಜಿಲ್ಲೆಯನ್ನು ಆಳ್ವಿಕೆ ಮಾಡಿದ ಎಲ್ಲಾ ಮನೆತನಗಳು ಪಾಲಿಸಿ ಪೋಷಿಸಿಕೊಂಡು ಬಂದಿವೆ. ಹಾಗೆಯೇ ವಿಜಯನಗರದ ಅರಸರೂ ಸಹ ಇದಕ್ಕೆ ಹೊರತಾಗಿಲ್ಲ. ಇವರು ಕರ್ನಾಟಕ ವಿವಿಧ ಭಾಗಗಳಲ್ಲಿ 'ವೀರಭದ್ರ'ನ ಆರಾಧನೆಯನ್ನು ಪ್ರಚುರಪಡಿಸಿದಂತೆ ಚಿತ್ರದುರ್ಗ ಜಿಲ್ಲೆಯಲ್ಲೂ ಕೆಲವು ವೀರಭದ್ರ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಕೆಲವೆಡೆ ವೀರಭದ್ರನ ಬಿಡಿಶಿಲ್ಪಗಳೂ ದೊರೆತಿವೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದ ಕೆಲವು ದೇವಾಲಯ ಹಾಗೂ ಬಿಡಿಶಿಲ್ಪಗಳನ್ನು ಇಲ್ಲಿ ಉದಾಹರಿಸಿದ್ದೇನೆ. ಬೆಟ್ಟದ ಮೇಲಿನ ಸಂಪಿಗೆಸಿದ್ದೇಶ್ವರ ದೇವಾಲಯ (ಪರಿವಾರ), ಹಿರಿಯೂರು ವೀರಭದ್ರ, ವಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಆವರಣದಲ್ಲಿ ನವಗ್ರಹ ಮಂಟಪದಲ್ಲಿರುವ ವೀರಭದ್ರನ ಬಿಡಿಶಿಲ್ಪ, ಹೊಸದುರ್ಗದ ವೀರಭದ್ರ ದೇವಾಲಯ, ಅದೇ ತಾಲ್ಲೂಕಿನ ಜಾನಕಲ್ಲು, ಬಾಗೂರು, ಚಿತ್ರದುರ್ಗದ ಸಿದ್ದಾಪುರ, ಹೊಳಲ್ಕೆರೆ, ಚಳ್ಳಕೆರೆ, ಚಳ್ಳಕೆರೆ ತಾಲ್ಲೂಕಿನ ಚೌಳೂರು, ಜಗಲೂರು ತಾಲ್ಲೂಕಿನ ಕೊಡದಗುಡ್ಡ, ಕಲ್ಲೇದೇವರಪುರ, ಅಸಗೋಡು, ಅಣಬೂರು, ಸುಳ್ಳೋಬನಹಳ್ಳಿ, ದಾವಣೆಗೆರೆ ತಾಲ್ಲೂಕಿನ ಆವರಗೊಳ್ಳ, ಕಂದಗಲ್, ದೊಡ್ಡಬಾತಿ, ನಾಗರಸನಹಳ್ಳಿ, ಹರಿಹರ ತಾಲ್ಲೂಕಿನ ಕಂಬಳೂರು, ಹೊನ್ನಾಳಿ ತಾಲ್ಲೂಕಿನ ಚಿಕ್ಕಹಾಲಿವಾಣ, ಕುಂಕೋವ ಮುಂತಾದವುಗಳು. ಇವುಗಳಲ್ಲಿ ನಾನು ಈ ಲೇಖನದಲ್ಲಿ ಕೆಲವು ದೇವಾಲಯಗಳಲ್ಲಿರುವ ವಿಶಿಷ್ಟ ಲಕ್ಷಣಗಳನ್ನು ಹೊಂದಿರುವ ವೀರಭದ್ರ ಶಿಲ್ಪಗಳನ್ನು ಮಾತ್ರ ವಿವರಿಸಲು ಪ್ರಯತ್ನಿಸಿದ್ದೇನೆ.

ಹಿರಿಯೂರು : ಇಲ್ಲಿನ ವೀರಭದ್ರಸ್ವಾಮಿ ದೇವಾಲಯ ಗರ್ಭಗುಡಿಯನ್ನು ಮಾತ್ರ ಹೊಂದಿದ್ದು, ಅದರಲ್ಲಿ ವೀರಭದ್ರ ಮತ್ತು ಭಧ್ರಕಾಳಿಯ ಶಿಲ್ಪಗಳು ಗಮನ ಸೆಳೆಯುತ್ತವೆ. ವೀರಭದ್ರ ಶಿಲ್ಪವು ಸುಮಾರು ಐದುವರೆ ಅಡಿ ಎತ್ತರವಾಗಿದ್ದು, ತ್ರಿಭಂಗಿಯಲ್ಲಿರುವ ಹಾವುಗೆಧಾರಿ ಸ್ಥಾನಕ ಶಿಲ್ಪವಾಗಿದೆ. ಚತುರ್ಭುಜಧಾರಿಯಾಗಿದ್ದು ಮುಂದಿನ ಬಲಗೈಯಲ್ಲಿ ಖಡ್ಗ, ಹಿಂದಿನ ಬಲಗೈಯಲ್ಲಿ ಬಾಣ ಮತ್ತು ಅದಕ್ಕೆ ಸೇರಿಕೊಂಡಂತೆ ಹಿಂದೆ ಡಮರು, ಮುಂದಿನ ಎಡಗೈ ದಕ್ಷನ ರುಂಡದ ಮೇಲೆ ಹೂರಿರುವ ಆಯತಾಕಾರದ ಢಾಲುವಿನ (ಗುರಾಣಿ) ಮೇಲಿದ್ದರೆ, ಹಿಂದಿನ ಎಡಗೈಯಲ್ಲಿ ಬಿಲ್ಲು ಮತ್ತು ಅದಕ್ಕೆ ಹೊಂದಿಕೊಂಡಂತೆ ತ್ರಿಶೂಲವಿದೆ. ಉಳಿದಂತೆ ತಲೆಯ ಮೇಲೆ ಕರಂಡಮುಕುಟ, ಕಿವಿಯೋಲೆ, ಭುಜಹಾರ, ಕೊರಳಲ್ಲಿ ಮಣಿಸರ, ತೋಳ್ಬಂದಿ, ಕೈಕಡಗ, ಕಾಲ್ಕಡಗ, ಸೊಂಟದಲ್ಲಿ ದೋತಿ, ಅದರ ಮೇಲೆ ಕೀರ್ತಿಮುಖದ ಡಾಬು, ಅದಕ್ಕೆ ಮಣಿಸರಗಳು ಇಳಿಬಿದ್ದಿರುವುದು, ಯಜ್ಞೋಪವಿತ, ತ್ರಿನೇತ್ರ, ಹುರಿಮೀಸೆ, ಉದರಬಂಧ, ಹಾರ, ಕಿರೀಟದ ಪೂರಿತ ಭಾಗದಲ್ಲಿ ಕಿರುಶಿವಲಿಂಗ, ರುಂಡಮಾಲೆ, ಇಡೀ ಶಿಲ್ಪಕ್ಕೆ ಅರ್ಧವೃತ್ತಾಕಾರದ ಕೀರ್ತಿಮುಖ ಕೇಂದ್ರನೆತ್ತಿಯ ಪ್ರಭಾವಳಿ, ಬಲಕ್ಕೆ ಪ್ರಣಾಮ ಭಂಗಿಯ ಟಗರುದೆಲೆಯ ದಕ್ಷನ ಸ್ಥಾನಕ ಶಿಲ್ಪವಿದ್ದು, ಶೈಲಿಯಲ್ಲಿ ಚಾಮರಾಜನಗರ ತಾಲ್ಲೂಕಿನ ಗಂಗವಾಡಿ ಗ್ರಾಮದ ವಿಜಯನಗರ ಕಾಲದ ವೀರಭದ್ರೇಶ್ವರ ದೇವಾಲಯದ ವೀರಭದ್ರನ ಶಿಲ್ಪವನ್ನು ಹೋಲುತ್ತದೆ.

ಸಂಪಿಗೆ ಸಿದ್ದೇಶ್ವರ : ಚಿತ್ರದುರ್ಗ ಬೆಟ್ಟದ ಮೇಲಿರುವ ಈ ದೇವಾಲಯದ ಒಂದು ಚಿಕ್ಕ ಗರ್ಭಗುಡಿಯಲ್ಲಿ ತುಂಬಾ ಶಿಷ್ಟ ಪ್ರಕಾರದಲ್ಲಿ ಖಂಡರಿಸಲ್ಪಟ್ಟಿರುವ ವೀರಭದ್ರನ ಶಿಲ್ಪ ಮನೋಹರವಾಗಿದೆ. ಇದೂ ಕೂಡ ಶೈಲಿಯಲ್ಲಿ ಗಂಗಾವಾಡಿ ಶಿಲ್ಪವನ್ನು ಹೋಲುತ್ತದೆ. ಈ ಶಿಲ್ಪವು ತ್ರಿಭಂಗಿಯಲ್ಲಿದ್ದು ಹಾವುಗೆಧಾರಿ ಸ್ಥಾನಕ ಶಿಲ್ಪವಾಗಿದೆ. ಚತುರ್ಭುಜಧಾರಿಯಾಗಿದ್ದು, ಮುಂದಿನ ಬಲಗೈಯಲ್ಲಿ ಖಡ್ಗ, ಹಿಂದಿನ ಬಲಗೈಯಲ್ಲಿ ಬಾಣ ಮತ್ತು ಅದಕ್ಕೆ ಸೇರಿಕೊಂಡಂತೆ ಹಿಂದೆ ಡಮರು, ಮುಂದಿನ ಎಡಗೈ ದಕ್ಷನ ರುಂಡದ ಮೇಲೆ ಊರಿರುವ ಆಯತಾಕಾರದ ಢಾಲುವಿನ (ಗುರಾಣಿ) ಮೇಲಿದ್ದರೆ, ಹಿಂದಿನ ಎಡಗೈಯಲ್ಲಿ ಬಿಲ್ಲು ಮತ್ತು ಅದಕ್ಕೆ ಹೊಂದಿಕೊಂಡಂತೆ ತ್ರಿಶೂಲವಿದೆ. ತಲೆಯ ಮೇಲೆ ಕರಂಡಮುಕುಟ, ಕಿವಿಯೋಲೆ, ಭುಜಹಾರ ಕೊರಳಲ್ಲಿ ಮಣಿಸರ, ತೋಳ್ಬಂದಿ, ಕೈಕಡಗ, ಕಾಲ್ಕಡಗ, ಸೊಂಟದಲ್ಲಿ ದೋತಿ, ಅದರ ಮೇಲೆ ಕೀರ್ತಿಮುಖದ ಡಾಬು, ಅದಕ್ಕೆ ಮಣಿಸರಗಳು ಇಳಿಬಿದ್ದಿರುವುದು, ಯಜ್ಞೋಪವಿತ, ಮೂರುಕಣ್ಣುಗಳು, ಹುರಿಮೀಸೆ, ಉದರಬಂಧ, ಹಾರ, ಕಿರೀಟ ಪೂರಿತ ಭಾಗದಲ್ಲಿ ಕಿರುಶಿವಲಿಂಗ, ರುಂಡಮಾಲೆ, ಕೀರ್ತಿಮುಖ ಕೇಂದ್ರನೆತ್ತಿಯ ಪ್ರಭಾವಳಿ, ಬಲಕ್ಕೆ ಪ್ರಣಾಮ ಭಂಗಿಯ ಟಗರುದೆಲೆಯ ದಕ್ಷನ ಸ್ಥಾನಕ ಶಿಲ್ಪವಿದೆ.

ತೇರುಮಲ್ಲೇಶ್ವರ ದೇವಾಲಯ: ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯದ ಆವರಣದಲ್ಲಿ ನವಗ್ರಹ ಮಂಟಪದಲ್ಲಿರುವ ವೀರಭದ್ರನ ಶಿಲ್ಪ ಸ್ವಲ್ಪ ಜಾನಪದೀಯ ಅಂಶಗಳನ್ನು ಹೊಂದಿದ್ದು, ಮುಖ ಹಾಗೂ ದೇಹದ ರಚನೆ ಪ್ರಮಾಣಬದ್ಧವಾಗಿಲ್ಲ. ಇಲ್ಲಿ ಯಾವುದೇ ಭಾವವು ಸ್ಪಷ್ಟವಾಗಿ ಮೂಡಿಲ್ಲ. ಇದು ಬಹುಶಃ ವಿಜಯನಗರೋತ್ತರ ಶಿಲ್ಪದಂತೆ ಕಂಡರೂ ವಿಜಯನಗರದ ಶಿಲ್ಪದ ಶೈಲಿಯ ಕೆಲವು ಲಕ್ಷಣಗಳನ್ನು ಪ್ರತಿಬಿಂಬಿಸುತ್ತದೆ. ಕೀರ್ತಿಮುಖದ ಪ್ರಭಾವಳಿಯೊಳಗೆ ತ್ರಿಭಂಗಿ, ಹಾವುಗೆಧಾರಿ ಸ್ಥಾನಕ ಶಿಲ್ಪವಾಗಿದೆ. ಚತುರ್ಭುಜಗಳನ್ನು ಹೊಂದಿದ್ದು, ಕ್ರಮವಾಗಿ ಬಲ ಮತ್ತು ಎಡಗೈಗಳಲ್ಲಿ ಖಡ್ಗ, ಬಾಣ, ಬಿಲ್ಲು ಹಾಗೂ ಖೇಟಕಗಳಿವೆ. ಕಿರೀಟಮುಕುಟ, ಕರ್ಣಕುಂಡಲ, ಕೊರಳಹಾರ, ಯಜ್ಞೋಪವೀತ, ರುಂಡಮಾಲೆ, ಕೈಕಡಗ, ಕಾಲ್ಕಡಗ, ಹುರಿಮೀಸೆ, ಕೋರೆದಾಡೆ ಮುಚ್ಚಿದ ಕಣ್ಣುಗಳನ್ನು (ತ್ರಿನೇತ್ರ) ಹೊಂದಿದ್ದು ಸೌಮ್ಯಮೂರ್ತಿಯಂತೆ ಕಾಣುತ್ತದೆ. ಬಲಕ್ಕೆ ದಕ್ಷನ ಪ್ರಣಾಮ ಭಂಗಿಯ ಟಗರುದೆಲೆಯ ಸ್ಥಾನಕ ಶಿಲ್ಪವಿದೆ. ಎಡಕ್ಕೆ ಹೂವಿನ ಚಿತ್ರಗಳಿವೆ.

ಹೊಸದುರ್ಗ: ಇಲ್ಲಿನ ವೀರಭದ್ರೇಶ್ವರ ದೇವಾಲಯದಲ್ಲಿರುವ ವೀರಭದ್ರನ ಶಿಲ್ಪ ಶಿಷ್ಟಾಚಾರ ಶೈಲಿಯಲ್ಲಿದ್ದು ಹಿರಿಯೂರಿನ ವೀರಭದ್ರ ದೇವಾಲಯದ ವೀರಭದ್ರನ ಶಿಲ್ಪದ ಲಕ್ಷಣಗಳನ್ನು ಪ್ರತಿಬಿಂಬಿಸುತ್ತದೆ. ಈ ಶಿಲ್ಪವು ಸುಮಾರು ಐದುವರೆ ಅಡಿ ಎತ್ತರವಾಗಿದ್ದು, ತ್ರಿಭಂಗಿಯಲ್ಲಿರುವ ಹಾವುಗೆಧಾರಿ ಸ್ಥಾನಕ ಶಿಲ್ಪವಾಗಿದೆ. ಚತುರ್ಭುಜಗಳನ್ನು ಹೊಂದಿದ್ದು ಮುಂದಿನ ಬಲಗೈಯಲ್ಲಿ ಖಡ್ಗ, ಹಿಂದಿನ ಬಲಗೈಯಲ್ಲಿ ಬಾಣ ಮತ್ತು ಅದಕ್ಕೆ ಸೇರಿಕೊಂಡಂತೆ ಹಿಂದೆ ಡಮರು, ಮುಂದಿನ ಎಡಗೈ ದಕ್ಷನ ರುಂಡದ ಮೇಲೆ ಊರಿರುವ ಆಯತಾಕಾರದ ಢಾಲುವಿನ (ಗುರಾಣಿ) ಮೇಲಿದ್ದರೆ, ಹಿಂದಿನ ಎಡಗೈಯಲ್ಲಿ ಬಿಲ್ಲು ಮತ್ತು ಅದಕ್ಕೆ ಹೊಂದಿಕೊಂಡತೆ ತ್ರಿಶೂಲವಿದೆ. ಉಳಿದಂತೆ ತಲೆಯ ಮೇಲೆ ಕರಂಡಮುಕುಟ, ಕಿವಿಯೋಲೆ, ಭುಜಹಾರ ಕೊರಳಲ್ಲಿ ಮಣಿಸರ, ತೋಳ್ಬಂದಿ, ಕೈಕಡಗ, ಕಾಲ್ಕಡಗ, ಸೊಂಟದಲ್ಲಿ ದೋತಿ, ಮೇಲೆ ಕೀರ್ತಿಮುಖದ ಡಾಬು, ಅದಕ್ಕೆ ಮಣಿಸರಗಳು ಇಳಿಬಿದ್ದಿರುವುದು, ಯಜ್ಞೋಪವಿತ, ಮೂರುಕಣ್ಣುಗಳು, ಹುರಿಮೀಸೆ, ಉದರಬಂಧ, ಹಾರ, ಕಿರೀಟದ ಪೂರಿತ ಭಾಗದಲ್ಲಿ ಕಿರುಶಿವಲಿಂಗ, ರುಂಡಮಾಲೆ, ಇಡೀ ಶಿಲ್ಪಕ್ಕೆ ಅರ್ಧವೃತ್ತಾಕಾರದ ಕೀರ್ತಿಮುಖ ಕೇಂದ್ರನೆತ್ತಿಯ ಪ್ರಭಾವಳಿ, ಬಲಕ್ಕೆ ಪ್ರಣಾಮ ಭಂಗಿಯ ಟಗರುದೆಲೆಯ ದಕ್ಷನ ಸ್ಥಾನಕ ಶಿಲ್ಪವಿದ್ದು, ಶೈಲಿಯಲ್ಲಿ ಗಂಗವಾಡಿಯ ಶಿಲ್ಪವನ್ನು ಹೋಲುತ್ತದೆ.

ದಾವಣಗೆರೆ ಜಿಲ್ಲೆಯ ವೀರಭದ್ರ-ಶರಭ ಶಿಲ್ಪಗಳು

ಕಲ್ಲೇದೇವರಪುರ: ಜಗಲೂರಿಗೆ ಹದಿನೈದು ಕಿ.ಮೀ.ದೂರದಲ್ಲಿರುವ ಈ ಗ್ರಾಮದ ಕಲ್ಲೇಶ್ವರ ದೇವಾಲಯದಲ್ಲಿ ಒಂದು ಚಿಕ್ಕಗುಡಿಯಲ್ಲಿ ಪರಿವಾರದೇತೆಯಾಗಿರುವ ವೀರಭದ್ರ ಶಿಲ್ಪವು ಸುಮಾರು ಆರುವರೆ ಅಡಿ ಎತ್ತರವಾಗಿದ್ದು, ಹಾವುಗೆಧಾರಿ ಸ್ಥಾನಕ ಶಿಲ್ಪವಾಗಿದೆ. ದ್ವಿಬಾಹುಗಳನ್ನು ಹೊಂದಿದ್ದು, ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಡಮರುವಿದ್ದು ಹುರಿಮೀಸೆ, ನೀಳನಾಸಿಕ, ರುಂಡಮಾಲೆ, ಗಂಭೀರ ನೇತ್ರಗಳು ಕಾಲ್ಕಡಗ, ಕೈಕಡಗ, ಯಜ್ಞೋಪವೀತ, ಮಣಿಸರ, ಬಲಕ್ಕೆ ಪ್ರಣಾಮಭಂಗಿಯ ಟಗರುದೆಲೆಯ ಸ್ಥಾನಕ ದಕ್ಷನ ಶಿಲ್ಪದಿಂದ ಅಲಂಕೃತಗೊಂಡಿದೆ. ಇದರ ಮತ್ತೊಂದು ವಿಶೇಷತೆಯೆಂದರೆ ವೀರಗಾಸೆ ಬಿಗಿದಿದ್ದು ಅಜಾನುಬಾಹುವಾಗಿರುವುದು.

ಕೊಡದಗುಡ್ಡ: ಜಗಲೂರು ತಾಲ್ಲೂಕಿನ ಈ ಗ್ರಾಮ ದೇವಿಕೆರೆಯಿಂದ ಮೂರು ಮೈಲು ದೂರದಲ್ಲಿದೆ. ಇಲ್ಲಿನ ಸುಮಾರು ಆರುವರೆ ಅಡಿ ಎತ್ತರದ ವೀರಭದ್ರ ಶಿಲ್ಪ ಒಂದು ಶಿಷ್ಟ ಪ್ರಕಾರದ ಶಿಲ್ಪಕ್ಕೆ ಇರಬೇಕಾದ ಎಲ್ಲಾ ಪ್ರತಿಮಾ ಲಕ್ಷಣಗಳನ್ನು ಹೊಂದಿದ್ದು, ಬಂಡೆಯ ಮೇಲಿನ ತಿಳಿ ಉಬ್ಬುಶಿಲ್ಪವಾಗಿ ಕೆತ್ತಲಾಗಿದೆ. ಚತುರ್ಭುಜಧಾರಿಯಾಗಿ ಬಿಲ್ಲು, ಬಾಣ, ಢಾಲುಧಾರಿಯಾಗಿ ಗ್ರಾಮೀಣ ಶೈಲಿಯಲ್ಲಿ ಕೆತ್ತನೆಗೊಂಡಿದೆ. ಕರಂಡಕೀಯ ಕಿರೀಟದ ಪೂರಿತ ಭಾಗದಲ್ಲಿ ಶಿವಲಿಂಗದ ಕೆತ್ತನೆಯಿದೆ. ತಲೆಯ ಹಿಂಭಾಗದಲ್ಲಿ ಶಿವನ ಜಟೆಗಳು ಹರಡಿರುವ ವೀರಜಡೆಯಿದ್ದು, ವೀರಭದ್ರನಿಗೆ ಆಗಾಗ ಜಾತ್ರೆಗಳು, ಆರಾಧನೆ, ವಿಶೇಷ ಪೂಜೆಗಳು ನಡೆಯುತ್ತಿರುತ್ತವೆ. ಜಿಲ್ಲೆಯಲ್ಲಿ ಕಂಡುಬಂದಿರುವ ಇತರೆ ಶಿಲ್ಪಗಳಿಗಿಂತ ಸ್ವಲ್ಪ ಭಿನ್ನವಾಗಿದೆ. ಉಳಿದಂತೆ ಎಲ್ಲಾ ಅಂಶಗಳೂ ಈ ಶಿಲ್ಪದಲ್ಲೂ ಕಾಣಬಹುದಾಗಿದೆ.

ಚಿಕ್ಕಹಾಲಿವಾಣ: ಹೊನ್ನಾಳಿ ತಾಲ್ಲೂಕಿನ ಚಿಕ್ಕಹಾಲಿವಾಣದಲ್ಲಿರುವ ವೀರಭದ್ರ ದೇಗುಲವು ಬೃಹತ್ ಶಿಲಾಯುಗದ ಕಾಲದ ನಿಲುಸುಗಲ್ಲುಗಳ ಪ್ರದೇಶವಿದ್ದ ಕಡೆ ನಿರ್ಮಿಸಲಾಗಿದೆ. ಇದು ಹಾಳು ವನದಲ್ಲಿದ್ದ ಕಾರಣ ಹಾಲಿವಾಣ ಎಂಬ ಹೆಸರು ಬಂದಿರಬಹುದು. ಈ ಶಿಲ್ಪದಲ್ಲಿ ನಾಗಹೆಡೆ ಸ್ಪಷ್ಟವಾಗಿ ತಲೆಯ ಹಿಂಭಾಗದಲ್ಲಿ ಮೂಡಿ ಬಂದಿದೆ. ಅಂಗೈಯಲ್ಲಿ

ಬಿಲ್ಲು-ಬಾಣ, ಮುಂಗೈಯಲ್ಲಿ ಖಡ್ಗ-ಢಾಲುವಿನ ತುದಿ ಹಿಡಿದಿರುವ ಭಂಗಿಯಲ್ಲಿ ವೀರಭದ್ರನನ್ನು ಕಾಣಬಹುದು. ಮೂರ್ತಿಯಲ್ಲಿರುವ ರುಂಡಮಾಲೆ ಎಡತೊಡೆಯಿಂದ ಬಲಮಂಡಿಯವರೆಗೆ ಚಾಚಿಕೊಂಡಿದೆ.

ಕುಂಕೋವ: ಹೊನ್ನಾಳಿ ತಾಲ್ಲೂಕಿನ ಈ ಗ್ರಾಮದಲ್ಲಿರುವ ವೀರಭದ್ರ ದೇವಾಲಯದ ಪ್ರವೇಶದ್ವಾರದ ಮೇಲ್ಭಾಗದಲ್ಲಿ ಎರಡು ತಲೆಯ ಶರಭ ಮೂರ್ತಿಯನ್ನು ಕಾಣುತ್ತೇವೆ. ಇದು ಅರ್ಧ ಮೃಗ, ಅರ್ಧ ಮನುಷ್ಯ ಅಂದರೆ ಮೇಲ್ಭಾಗದಲ್ಲಿ ಅರ್ಧ ಮಾನವ, ಕೆಳಭಾಗದಲ್ಲಿ ಅರ್ಧ ಸಿಂಹದ ದೇಹದ ಸುಂದರ ಮೂರ್ತಿಯನ್ನು ಕೆತ್ತಲಾಗಿದೆ. ಅದೇ ದೇವಾಲಯದಲ್ಲಿರುವ ಭದ್ರಕಾಳಿ ಮೂರ್ತಿಯೂ ಕೂಡ ವೀರಭದ್ರನಂತೆಯೇ ಪ್ರತಿಮಾ ಲಕ್ಷಣಗಳನ್ನು ಹೊಂದಿದೆ. ಈ ಮೂರ್ತಿಯು ದಕ್ಷನ ತಲೆಯನ್ನು ಆಯುಧದಿಂದ ತಿವಿಯುತ್ತಿರುವಂತೆ ಚಿತ್ರಿಸಲಾಗಿದೆ. ಕರ್ನಾಟಕದಲ್ಲಿ ಇದು ಬಹು ಅಪರೂಪದ ಮೂರ್ತಿಶಿಲ್ಪವಾಗಿದೆ.

ಹೀಗೆ ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ವೀರಭದ್ರ ಆರಾಧನೆ ಹರಡಿದ್ದುದನ್ನು ಹಾಗೂ ಅದು ವಿಜಯನಗರೋತ್ತರ ಕಾಲದಲ್ಲೂ ಅಂದರೆ ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಪ್ರಭಾವ ಬೀರಿರುವುದನ್ನು ಗುರುತಿಸಬಹುದಾಗಿದೆ. ಇಂದಿಗೂ ಈ ದೇವಾಲಯಗಳಲ್ಲಿ ವೀರಭದ್ರನ ಆರಾಧನೆ, ಪೂಜೆಗಳು ವಿಜೃಂಭಣೆಯಿಂದ ನಡೆದುಕೊಂಡು ಬರುತ್ತಿವೆ.

ಅಡಿಟಿಪ್ಪಣಿಗಳು

1. *ಕನ್ನಡ ಜಾನಪದ ವಿಶ್ವಕೋಶ,* 1985, ಸಂ-2, ಸಂಪಾದಕರು-ಚಂದ್ರಶೇಖರ ಕಂಬಾರ, ಕನ್ನಡ ಸಾಹಿತ್ಯ ಪರಿಷತ್ತು, ಪು. 1804-05.
2. ಕಿಟೆಲ್‌ರ *ಕನ್ನಡ-ಇಂಗ್ಲೀಷ್ ನಿಘಂಟು* (ಪರಿಷ್ಕೃತ ಮತ್ತು ವಿಸ್ತೃತ ಆವೃತ್ತಿ) 1971; ಪ್ರೊ.ಎಂ. ಮರಿಯಪ್ಪಭಟ್, ಸಂಪುಟ-4, ಪು. 1501.
3. ಡಾ.ಜಿ. ಸಿದ್ದಲಿಂಗಯ್ಯ ಕಂಬಾಳ, "ಶೈವ ಶರಭ-ವೈಷ್ಣವ ನರಸಿಂಹ ಪುರಾಣ ಕಲ್ಪನೆಗಳ ವಾಗ್ವಾದ-ಪ್ರತಿರೋಧ" ಪು. 1-16
4. ವನಮಾಲ ಪಾರ್ಥಸಾರಥಿ, "ನರಸಿಂಹ ಮತ್ತು ಶರಭ", ಭಾರತೀಯ ವಿದ್ಯಾ ಭವನ, 'ಎ ಕ್ವಾರ್ಟರ್ಲಿ ಸಂಶೋಧನಾ ಲೇಖನಗಳು' ಬಾಂಬೆ, ಸಂಪುಟ 53, ಪು. 63
5. *ಅದೇ,* ಪು.63
6. ಎಂಜಿ.ನಾಗರಾಜ್ 'ವಿಜಯನಗರ ಕಾಲದ ವೀರಭದ್ರ-ಪರಂಪರೆ', ವಿಜಯನಗರ ಅಧ್ಯಯನ, ಸಂ-6, 2000, ಪು. 1.
7. *ಮಹಾಭಾರತ,* 1981, ಸಂ-25, ಶಾಂತಿಪರ್ವ, ಭಾರತ ದರ್ಶನ ಪ್ರಕಾಶನ ಪು.2555-56.
8. *ಎಪಿಗ್ರಾಫಿಯಾ ಕರ್ನಾಟಿಕ,* ಸಂ-11, (ಪರಿಷ್ಕೃತ ಆವೃತ್ತಿ 1998), ಚಿಕ್ಕಮಗಳೂರು-1
9. *ಎಪಿಗ್ರಾಫಿಯಾ ಇಂಡಿಕಾ,* ಸಂ. 19, ಪು. 181-82.
10. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-2,* ಕೊಪ್ಪಳ ಜಿಲ್ಲೆ, ಯಲಬುರ್ಗ-40
11. *South Indian Inscriptions,* ಸಂ-10, ಪು. 395.
12. ಡಾ.ಬಸವರಾಜ ಸಬರದ, 'ಪುರವಂತಿಕೆ-ವೀರಭದ್ರ ಮತ್ತು ಸಾಂಸ್ಕೃತಿಕ ಸಂಘರ್ಷ', ವೀಭಶ್ರೀ ಸ್ಮರಣ ಸಂಚಿಕೆ, 2001, ಪು. 20
13. *ಜಾನಪದ ಸಾಹಿತ್ಯ ದರ್ಶನ,* ಸಂ-14, ಕರ್ನಾಟಕ ವಿಶ್ವವಿದ್ಯಾಲಯ,
14. ಡಾ. ವಿ.ಶಿವಾನಂದ, *ಶ್ರೀಅಣವೀರಭದ್ರೇಶ್ವರ ಪುರಾಣ*
15. ಎಂ.ಜಿ. ನಾಗರಾಜ್, *ಪೂರ್ವೋಕ್ತ,* ಪು. 7.
16. ಸುರೇಶ್ ಕೆ.ಎಂ., 1998, *ಸ್ಕಲ್ಪರಲ್ ಆರ್ಟ್ಸ್ ಆಫ್ ಹಂಪಿ,* ಪುರಾತತ್ವ ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. 55.
17. ಎಂ.ಜಿ. ನಾಗರಾಜ್, 1999, 'ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ, ಶ್ರೀಮದ್ರಂಭಾಪುರಿ ಪೀಠ, ಬಾಳೆಹೊನ್ನೂರು.

21. ಹಂಪೆ ಅಚ್ಯುತರಾಯ ದೇವಾಲಯದಲ್ಲಿರುವ ಅಪರೂಪದ ಊರ್ಧ್ವತಾಂಡವ ನಟರಾಜ ಶಿಲ್ಪ

ಶ್ರೀಶೈಲ ಮನಗುತ್ತಿ

ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ ಕರ್ನಾಟಕದಲ್ಲಿ ಅಸ್ಥಿತ್ವಕ್ಕೆ ಬಂದ "ಜಯನಗರ ಸಾಮ್ರಾಜ್ಯವು ಹಲವು ವೈಶಿಷ್ಟ್ಯಗಳಿಂದ ಕೂಡಿದೆ. ಮೊದಲನೆಯದಾಗಿ ಇದು ಯಾವುದೇ ಒಂದು ಭಾಷಾವಾರು ಪ್ರಾಂತ್ಯಕ್ಕೆ ಸೀ'ತಗೊಂಡಿರದೇ ಇಡೀ ದಕ್ಷಿಣ ಭಾರತದ ಮೇಲೆ ತನ್ನ ಪ್ರಭಾವವನ್ನು ಬೀರಿತು. ಎರಡನೆಯದಾಗಿ ಇದು ಇತರ ರಾಜ್ಯಗಳಂತೆ ಅಥವಾ ಸಾಮ್ರಾಜ್ಯದಂತೆ ಒಂದು ರಾಜವಂಶದಿಂದ ಆಳಲ್ಪಡದೆ ನಾಲ್ಕು ವಂಶಗಳಾದ ಸಂಗಮ, ಸಾಳ್ವ, ತುಳು ಮತ್ತು ಅರ"ಡು ವಂಶಗಳಿಂದ ಸುಮಾರು 250 ವರ್ಷಗಳ ಕಾಲ ಆಳಲ್ಪಟ್ಟಿತು. ಕೊನೆಯದಾಗಿ ಇದು ಹಲವಾರು ಕ್ಷೇತ್ರಗಳಲ್ಲಿ ಅದರಲ್ಲೂ ಆಡಳಿತ, ಆರ್ಥಿಕ, ವ್ಯಾಪಾರ, ನಗರೀಕರಣ, ಸಾ"ತ್ಯ "ಶೇಷವಾಗಿ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಇದುವರೆಗೂ ಯಾವ ರಾಜಮನೆತನದ ಅರಸರು ಸಾಧಿಸದ ಪ್ರಗತಿಯನ್ನು ಈ ಸಾಮ್ರಾಜ್ಯದ ಅರಸರು ಸಾಧಿಸಿದರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ಕಾರಣಗಳಿಂದಾಗಿ "ಜಯನಗರ ಸಾಮ್ರಾಜ್ಯದ ಸ್ಥಾಪನೆಯು ದಕ್ಷಿಣ ಭಾರತದಲ್ಲಷ್ಟೇ ಅಲ್ಲದೆ ಇಡೀ ಭಾರತದ ಇತಿಹಾಸದಲ್ಲಿ ಪ್ರಮುಖವಾದ ಘಟನೆಯಾಗಿದೆ. "ಜಯನಗರದ ಇತಿಹಾಸವನ್ನು ರಚಿಸುವಲ್ಲಿ ಅಂದಿನ ಅರಸರು ನಿ'ರ್ಸಿದ ಸ್ಮಾರಕಗಳು ಮತ್ತು ಶಿಲ್ಪಗಳು ಅವರ ಕಲಾ ಪ್ರೇಮದ ಕುರುಹುಗಳಾಗಿವೆ.1

ಪ್ರಸ್ತುತ ಪ್ರಬಂಧದ ಶೀರ್ಷಿಕೆಯು "ಹಂಪೆ ಅಚ್ಯುತರಾಯ ದೇವಾಲಯದಲ್ಲಿರುವ ಅಪರೂಪದ ಊರ್ಧ್ವತಾಂಡವ ನಟರಾಜ ಶಿಲ್ಪ", ಎಂಬುದಾಗಿದ್ದು, ಈ ನಟರಾಜ ಶಿಲ್ಪವು ಆಗಮಗಳ "ಹಿನ್ನೆಲೆಯಲ್ಲಿ ರಚನೆಯಾಗಿದೆಯೋ ಅಥವಾ ಆಗಮಗಳನ್ನು ಹೊರತುಪಡಿಸಿ ರಚನೆಯಾಗಿದೆಯೋ ಎಂಬುದನ್ನು ಚರ್ಚಿಸುವುದು ಈ ಲೇಖನದ ಉದ್ದೇಶವಾಗಿದೆ.

ಹಂಪೆ ಪ್ರಮುಖವಾಗಿ ಶೈವ ಕೇಂದ್ರವಾಗಿದೆ. ಇಲ್ಲಿ ಅನೇಕ ಶೈವ ಸಂಪ್ರದಾಯಕ್ಕೆ ಸೇರಿದ ಸಾಕಷ್ಟು ದೇವಾಲಯಗಳಿವೆ. ಆದರೆ ನಟರಾಜನಿಗಾಗಿ ಸ್ವತಂತ್ರವಾದ ದೇವಾಲಯಗಳು ಇದುವರೆಗೂ ಕಂಡುಬಂದಿಲ್ಲ. ಆದರೆ, ಇಡೀ ಹಂಪಿ ಪರಿಸರದಲ್ಲಿ ಒಟ್ಟು ಮೂರು ನಟರಾಜನ ಉಬ್ಬುಶಿಲ್ಪಗಳಿವೆ. ಎರಡು ಶೈವ ದೇವಾಲಯಗಳಲ್ಲಿ ಮತ್ತು ಒಂದು ವೈಷ್ಣವ ದೇವಾಲಯದಲ್ಲಿ ಅಪರೂಪವಾದ ನಟರಾಜನ ಶಿಲ್ಪಗಳನ್ನು ಕ್ಷೇತ್ರ ಕಾರ್ಯದ ಮೂಲಕ ಗುರುತಿಸಲಾಗಿದೆ. ಮೊದಲನೆಯದಾಗಿ "ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಟಪದಲ್ಲಿರುವ ಆನಂದ ತಾಂಡವ ನಟರಾಜ ಶಿಲ್ಪ, ಎರಡನೆಯದಾಗಿ ಅಚ್ಯುತ ದೇವಾಲಯದಲ್ಲಿರುವ ಕಲ್ಯಾಣಮಂಟಪದಲ್ಲಿರುವ ಊರ್ಧ್ವತಾಂಡವ ನಟರಾಜನ ಶಿಲ್ಪ, ಮೂರನೆಯದಾಗಿ ನಿಂಬಾಪುರದ ಸೌಮ್ಯಸೋಮೇಶ್ವರ ದೇವಾಲಯದ ನವರಂಗದ ಕಂಭದಲ್ಲಿರುವ ಆನಂದ ತಾಂಡವ ನಟರಾಜ ಶಿಲ್ಪ. ಈ ಶಿಲ್ಪಗಳು ಹಂಪಿ ಪರಿಸರದ ಅಪರೂಪದ ತಾಂಡವ ನೃತ್ಯದ ಶಿಲ್ಪಗಳಾಗಿವೆ ಎಂಬುದರಲ್ಲಿ ಸಂಶಯ"ಲ್ಲ.

ಈ ಊರ್ಧ್ವ ತಾಂಡವ ನೃತ್ಯಕ್ಕೆ ಇನ್ನೊಂದು ಹೆಸರು ಕಾಳಿಕಾತಾಂಡವ ನೃತ್ಯ ಎಂದು ಕರೆಯಲಾಗಿದೆ. ಈ ನೃತ್ಯಕ್ಕೆ ಸಂಬಂಧಿಸಿದಂತೆ ಒಂದು ದಂತ ಕಥೆ ಇದೆ. ಒಮ್ಮೆ ಶಿವನೊಂದಿಗೆ ಕಾಳಿಕಾ ದೇವಿ"ಯು ನಾಟ್ಯ ಸ್ಪರ್ಧೆಗೆ ನಿಂತಳು. ಶಿವನು ಮಾಡಿದ ಎಲ್ಲಾ ಭಂಗಿಗಳ ನಾಟ್ಯವನ್ನು ಅನುಕರಿಸಿದ ದೇವಿ"ಗೆ ಗರ್ವ ಮೂಡಿತು. ಇದನ್ನು ಅರಿತ ಶಿವನು ದೇವಿ"ಯನ್ನು ಸೋಲಿಸಬೇಕೆಂದು ಯೋಚಿಸಿ ಊರ್ಧ್ವತಾಂಡವ ನೃತ್ಯವನ್ನು ಅಭಿನಯಿಸಿದನು. (ಈ ಭಂಗಿಯಲ್ಲಿ ಶಿವನ ಒಂದು ಕಾಲು ಮಕುಟದವರೆಗೆ ಮೇಲಿತ್ತಿರುತ್ತದೆ.) ಆಗ ದೇವಿ"ಯು ಈ ನೃತ್ಯವನ್ನು ಅಭಿನುಸಲಾಗದೆ ಲಜ್ಜೆಂದ ಶಿವನಿಗೆ ತಲೆಬಾಗಿದಳು.

ಶಿವನನ್ನು ಅನುಕರೀಸಲಾಗದೇ ದೇ"ಯು ಅವನ ಶ್ರೇಷ್ಠತೆಯನ್ನು ಒಪ್ಪಿಕೊಂಡಳು. ಈ ನೃತ್ಯಕ್ಕೆ ಸಂಬಂಧಿಸಿದಂತೆ ತಕ್ಷಶಿಲೆಯಲ್ಲಿ ದೊರೆತ ಮೃತ್ಫಲಕವೊಂದರ ಮೇಲೆ ಈ ನೃತ್ಯದ ಭಂಗಿಯನ್ನು ಅನುಸರಿಸಿದ ಬಿಂಬವಿರುವುದನ್ನು ಸೀಬೀಸೀತಾರಾಮರವರು ತಿಳಿಸಿದ್ದಾರೆ.[2]

ಪ್ರತಿಮಾ ಶಾಸ್ತ್ರದ ವಿವರಗಳು:

ಕಾರಣಾಗಮದ ಪ್ರಕಾರ, ಊರ್ಧ್ವತಾಂಡವ ನೃತ್ಯಮೂರ್ತಿಯ ಲಕ್ಷಣಗಳು ಈ ಕೆಳಗಿನಂತಿವೆ.

ಶಿವನು ಅಷ್ಟಭುಜ ಮೂರ್ತಿಯಾಗಿದ್ದು, ಕ್ರಮವಾಗಿ ಬಲ ಕೈಗಳಲ್ಲಿ ತ್ರಿಶೂಲ, ಪಾಶ, ಡಮರು ಮತ್ತು ಅಭಯವು ಎಡ ಕೈಗಳಲ್ಲಿ ಕಪಾಲ, ಅಗ್ನಿಪಾತ್ರೆ, ಘಂಟೆ ಮತ್ತು ಗಜಹಸ್ತಗಳಿರಬೇಕೆಂದು ಈ ಆಗಮದ ನಿಯಮವಿದೆ.3 ಶಿವನಿಗೆ ಎರಡೇ ಕಣ್ಣುಗಳಿರುತ್ತವೆ. ಶಿವನು ಅಪಸ್ಮಾರ ಪುರುಷನ ಮೇಲೆ ನರ್ತಿಸುತ್ತಿರುತ್ತಾನೆ. ಶಿವನ ಎಡಗಾಲು ಕುಂಚಿತ ಪಾದವಾಗಿದ್ದು, ಬಲಗಾಲು ಮಕುಟದವರೆಗೆ ಎತ್ತಿರಬೇಕೆಂದು ತಿಳಿಸುತ್ತದೆ. ಈ ನೃತ್ಯವನ್ನು "ಊರ್ಧ್ವತಾಂಡವ ನೃತ್ಯ" ವೆಂದು ಕರೆಯಲಾಗಿದೆ. ಸಕಲಾಭರಣಗಳನ್ನು ಧರಿಸಿದ ಶಿವನು ಆನಂದತಾಂಡವ ನೃತ್ಯ ನಟರಾಜನ ಶಿಲ್ಪದಂತೆ ಪ್ರಸನ್ನವದನನಾಗಿರಬೇಕು ಎಂದು ಕಾರಣಾಗಮವು ತಿಳಿಸುತ್ತದೆ.[4]

ಅಚ್ಯುತರಾಯ ದೇವಾಲಯದಲ್ಲಿರುವ ಊರ್ಧ್ವತಾಂಡವ ನೃತ್ಯ ನಟರಾಜನ ಪ್ರತಿಮಾ ಲಕ್ಷಣಗಳು:

ಊರ್ಧ್ವತಾಂಡವ ನೃತ್ಯ ನಟರಾಜನ ಪ್ರತಿಮಾ ಲಕ್ಷಣಗಳು:



ಕಲ್ಯಾಣ ಮಂಟಪ, ಅಚ್ಯುತರಾಯ ದೇವಾಲಯ



ಊರ್ಧ್ವತಾಂಡವ ನೃತ್ಯ ನಟರಾಜನ ಶಿಲ್ಪ

ಮಾತಂಗ ಪರ್ವತದಿಂದ ಪೂರ್ವ ದಿಕ್ಕಿನಲ್ಲಿ ಉತ್ತರಾಭಿಮುಖವಾಗಿರುವ ಅಚ್ಯುತರಾಯ ಅಥವಾ ತಿರುವೆಂಗಳನಾಥ ದೇವಾಲಯದ ಎರಡನೆಯ ಪ್ರಾಕಾರದ ವಾಯುವ್ಯ ದಿಕ್ಕಿನ ಮೂಲೆಯಲ್ಲಿರುವ ಕಲ್ಯಾಣಮಂಟಪದಲ್ಲಿರುವ 92 ಕಂಬಗಳಲ್ಲಿ 78 ನೆಯ ಕಂಭದ ಮಧ್ಯಭಾಗದಲ್ಲಿ ಪೂರ್ವ ದಿಕ್ಕಿಗೆ ಈ ಊರ್ಧ್ವತಾಂಡವ ನೃತ್ಯ ಶಿಲ್ಪವನ್ನು ಕೆತ್ತಲಾಗಿದೆ. ಈ ನೃತ್ಯ ಶಿವನು ಆರು ಕೈಗಳನ್ನು ಹೊಂದಿದ್ದು, ಅವುಗಳು ಕ್ರಮವಾಗಿ ಕೆಳಗಿನಂತಿವೆ.

ಊರ್ಧ್ವತಾಂಡವ ಶಿವನ ಬಲ ಮತ್ತು ಎಡ ಕೈಗಳಲ್ಲಿರುವ ಪರಿಕರಗಳು:

ಬಲ ಭಾಗದ ಮೂರು ಕೈಗಳು ಕ್ರಮವಾಗಿ ಮೇಲಿನಿಂದ ಕೆಳಕ್ಕೆ

ಮೊದಲನೆಯ ಕೈಯಲ್ಲಿ	–	ಡಮರು
ಎರಡನೆಯ ಕೈಯಲ್ಲಿ	–	ಕಪಾಲ
ಮೂರನೆಯ ಕೈಯಿಂದ	–	ಕೋಲನ್ನು ಹಿಡಿದು ಡಮರನ್ನು ನುಡಿಸುವಂತಿದೆ.

ಎಡ ಭಾಗದ ಮೂರು ಕೈಗಳು ಕ್ರಮವಾಗಿ ಮೇಲಿನಿಂದ ಕೆಳಕ್ಕೆ

ಮೊದಲನೆಯ ಕೈ	–	ಮೇಲೆತ್ತಿದ ಬಲಗಾಲಿನ ಅಂಗುಷ್ಠವನ್ನು ಹಿಡಿದಿದೆ. (ಮಕುಟದವರೆಗೆ ಬಲಗಾಲನ್ನು ಎತ್ತಿದೆ.)
ಎರಡನೆಯ ಕೈಯಲ್ಲಿ	–	ತ್ರಿಶೂಲ
ಮೂರನೆಯ ಕೈಯಿಂದ	–	ಡಮರನ್ನು ನುಡಿಸುತ್ತಿದೆ.

ಈ ಭಂಗಿಯು ಕಷ್ಟ ಸಾಧ್ಯವಾಗಿದ್ದು, ವಿಶೇಷವಾಗಿ ಶಿವನು ಈ ನೃತ್ಯವನ್ನು ನರ್ತಿಸಿದನು.ಇದನ್ನು ಊರ್ಧ್ವತಾಂಡವ ನೃತ್ಯ ಅಥವಾ ಲಲಾಟತಿಲಕ ಕರಣವೆಂದು ಕರೆಯಲಾಗಿದೆ. ಅಭಿನವ ಗುಪ್ತಾಚಾರ್ಯರು ಈ ಭಂಗಿಯನ್ನು ವೃಚ್ಚಿಕ ಭಂಗಿ ಎಂದು ಕರೆದಿದ್ದಾರೆ. ಶಿವನು ನರ್ತಿಸಿದ ಏಳು ತಾಂಡವ ನೃತ್ಯಗಳಲ್ಲಿ ವಿಭಿನ್ನ ರೀತಿಯ ನೃತ್ಯ ಭಂಗಿಯಾಗಿದೆ. ಈ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಗಮನಿಸಿದಾಗ ಈ ಶಿಲ್ಪವು ಆಗಮಗಳ ನಿಯಮವನ್ನು ಅನುಸರಿಸದೆ ಶಿಲ್ಪಿಯು ಈ ಶಿಲ್ಪವನ್ನು ಕೆತ್ತಿದ್ದಾನೆ ಎಂಬುದು ಈ ಶಿಲ್ಪದ ಪ್ರತಿಮಾಲಕ್ಷಣಗಳಿಂದ ತಿಳಿದುಬರುತ್ತದೆ. ಶಿಲ್ಪಿಯು ಶಿಲ್ಪಶಾಸ್ತ್ರ ಗ್ರಂಥಗಳ ನಿಯಮವನ್ನು ಹೊರತುಪಡಿಸಿ ಶಿಲ್ಪಗಳನ್ನು ಸ್ವತಂತ್ರ ಶೈಲಿಯಲ್ಲಿ ನಿರ್ಮಾಣ ಮಾಡುವ ಕಲೆಯನ್ನು "ಜಯನಗರದ ಶಿಲ್ಪಿಯು ಕರಗತ ಮಾಡಿಕೊಂಡಿದ್ದಾನೆ ಎಂಬುದಕ್ಕೆ ಈ ಶಿಲ್ಪವೇ ಸಾಕ್ಷಿಯಾಗಿದೆ.

ನಟರಾಜನ ಶಿಲ್ಪವು ಪೀಠದ ಮೇಲೆ ಎಡಗಾಲನ್ನು ಕುಂಚಿತ ಪಾದದಲ್ಲಿಟ್ಟು, ಕಾಲಿನ ಹೆಬ್ಬೆರಳಿಂದ ನರ್ತಿಸುವಂತಿದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಗೋಚರಿಸುತ್ತದೆ. ಜೊತೆಗೆ ನಾಯಿಯು ಶಿವನ ಕೈಯಲ್ಲಿರುವ ಕಪಾಲವನ್ನು ತನ್ನ ಎರಡು ಕಾಲುಗಳನ್ನು ಎತ್ತಿ ನೋಡುತ್ತಿರುವಂತಿದೆ. ಶಿವನು ನೃತ್ಯದ ರಭಸದಲ್ಲಿ ಕಟಿಯಲ್ಲಿರುವ ವ್ಯಾಘ್ರಜಿನವು ಶಿವನ ಎಡಭಾಗದಲ್ಲಿ ಇಳಿಬಿದ್ದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಸಾಮಾನ್ಯವಾಗಿ ನಟರಾಜನ ಶಿಲ್ಪದ ಕಾಲಿನ ಅಡಿಯಲ್ಲಿ ಅಪಸ್ಮಾರ ಪುರುಷನಿರಬೇಕೆಂಬುದು ಆಗಮಗಳ ನಿಯಮ. ಆದರೆ ಈ ಶಿಲ್ಪದಲ್ಲಿ ಅಪಸ್ಮಾರ ಪುರುಷನಿಲ್ಲದಿರುವುದು ಗಮನಾರ್ಹ. ಈ ಶಿಲ್ಪವು ಆಗಮದ ನಿಯಮಗಳನ್ನು ಹೊಂದಿರದೇ ಇರುವುದರಿಂದ ಇದು ಆಗಮರತ ಶಿಲ್ಪವಾಗಿದೆ.

ಆಭರಣಗಳು ಮತ್ತು ವಸ್ತ್ರ "ನ್ಯಾಸ:

ನೃತ್ಯ ಶಿವನು ಧರಿಸಿರುವ ಆಭರಣಗಳಾದ ಜಟಾಮಕುಟ, ಹಣೆಯ ಮೇಲೆ ರತ್ನಪಟ್ಟವಿದೆ. ಬಲಗಿ"ಯಲ್ಲಿ ನಾಗ ಕುಂಡಲವಿದೆ, ಎಡಗಿವಿಯಲ್ಲಿ ವೃತ್ತ ಕುಂಡಲ (ಸ್ಪಷ್ಟ"ಲ್ಲ,) ಕೊರಳಲ್ಲಿ ಕಂಠಹಾರವಿದೆ, ಇದು ಸ್ಪಷ್ಟವಿಲ್ಲ, ಕೈಯಗಳಲ್ಲಿ ಕೆಯೂರವಿದೆ, ಯಜ್ಞೋಪವೀತವಿದೆ. ಕಟಿಯಲ್ಲಿರುವ ವಾಘ್ರಜಿನವು ಮೊಣಕಾಲಿನ ಮೇಲ್ಭಾಗದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಗ್ರಾನೈಟ ಶಿಲೆಯಲ್ಲಿ ಈ ಶಿಲ್ಪವಿರುವುದರಿಂದ ಆಭರಣಗಳು ಸ್ಪಷ್ಟವಿಲ್ಲ.

ಹಂಪಿ ಪರಿಸರದಲ್ಲಿರುವ ವೈಷ್ಣವ ದೇವಾಲಯಗಳಲ್ಲಿ ಶೈವ ಸಂಪ್ರದಾಯಕ್ಕೆ ಸೇರಿದ ಶಿಲ್ಪಗಳಿರುವುದು "ರಳ ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಗುರುತಿಸಲಾಗಿದೆ. ಸಾಮಾನ್ಯವಾಗಿ ಶೈವ ದೇವಾಲಯಗಳಲ್ಲಿ ಈಶಾನ್ಯ ದಿಕ್ಕಿಗೆ ನಟರಾಜ ಶಿಲ್ಪವಿರಬೇಕೆಂಬ ನಿಯಮವಿದೆ. ಆದರೆ ವೈಷ್ಣವ ಪಂಥದ ಅಚ್ಯುತರಾಯ ದೇವಾಲಯದ ಕಲ್ಯಾಣಮಂಟಪದಲ್ಲಿ ಶೈವ ಸಂಪ್ರದಾಯಕ್ಕೆ ಸೇರಿದ ಊರ್ಧ್ವತಾಂಡವ ನಟರಾಜನ ಶಿಲ್ಪವಿರುವುದು ವಿಶೇಷವಾಗಿದೆ.

ಅದೇ ರೀತಿಯಾಗಿ ಶೈವ ದೇವಾಲಯಗಳಲ್ಲಿ ವಿಶೇಷವಾಗಿ ಶಿವನ ವಿವಿಧ ರೂಪದ ಶಿಲ್ಪಗಳಾದ ಭೈರವ, "ೀರಭದ್ರ, ಭಿಕ್ಷಾಟನಾ, ಶಿಲ್ಪಗಳಿರುತ್ತವೆ. ದೇವಾಲಯದ ಕಂಭಗಳ ಮೇಲೆ ಭೈರವ, ವೀರಭದ್ರ, ಬೇಡರ ಕಣ್ಣಪ್ಪ, ನಾಗಲಿಂಗ, ಶಿವಯತಿಗಳ ಶಿಲ್ಪಗಳಿರುತ್ತವೆ. ಆದರೆ ಸಾಕಷ್ಟು ಸಂಖ್ಯೆಯಲ್ಲಿ ವೈಷ್ಣವ ಶಿಲ್ಪಗಳನ್ನು ಕೆತ್ತಿರುವುದು ಗಮನಾರ್ಹ.

ಈ ನೃತ್ಯ ನಟರಾಜನ ಶಿಲ್ಪ ರಚನೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಭುಜಗಳು ಮತ್ತು ಆ ಭುಜಗಳಲ್ಲಿರುವ ಆಯುಧಗಳ ಬಳಕೆಯಲ್ಲಿ ಕಾಣುತ್ತೇವೆ. ಶಿಲ್ಪಿಯು ತಾನು ನಿರ್ಮಿಸುವ ಶಿಲ್ಪದ ವೈಶಿಷ್ಟ್ಯವನ್ನು ಗಮನಿಸದೇ ನಿರ್ಮಿಸುವುದಿಲ್ಲ. ಈ ನಟರಾಜನ ಶಿಲ್ಪದ ಪ್ರತಿಮಾ ಲಕ್ಷಣ ಮತ್ತು ನೃತ್ಯ ಪ್ರಭೇದಗಳ ಹಿನ್ನೆಲೆಯಲ್ಲಿ, ಪ್ರಸಂಗಗಳ ಪ್ರಾಮುಖ್ಯತೆಯಂತೆ ನಾಟ್ಯದ ವಿಶೇಷತೆಯನ್ನು ಅರಿಯಬಹುದಾಗಿದೆ. ಈ ದಿಸೆಯಲ್ಲಿ ಈ ನೃತ್ಯ ಭಂಗಿಯ ಶಿಲ್ಪವು ಭರತನ ನಾಟ್ಯಶಾಸ್ತ್ರದ ಪ್ರಕಾರ ಲಲಾಟತಿಲಕ ಕರಣ ಎಂಬ ಈ ಕರಣವನ್ನು ಈ ನೃತ್ಯ ಭಂಗಿಯಲ್ಲಿ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಕೆ.ಎ. ಸುರೇಶ ಅವರು "ಸ್ಕಲ್ಪಚರಲ್ ಆರ್ಟ್ ಆಫ್ ಹಂಪಿ" ಎಂಬ ಕೃತಿಯಲ್ಲಿ ಶೈವ ಶಿಲ್ಪಗಳ ಕುರಿತು ವಿವರಣೆಯನ್ನು ನೀಡಿದ್ದಾರೆ. ಆದರೆ ಈ ಶಿಲ್ಪದ ಸೂಕ್ಷವಾದ ಅಂಶಗಳನ್ನು ಅವರು ಗಮನಿಸಿಲ್ಲ. ಆದ್ದರಿಂದ ಈ ಶಿಲ್ಪದ ಸವಿವರಣೆಯನ್ನು ಪ್ರಸ್ತುತ ಪ್ರಬಂಧದಲ್ಲಿ ನೀಡಿದ್ದೇನೆ.[5]

ಉಪಸಂಹಾರ

ಒಟ್ಟಾರೆಯಾಗಿ ಈ ನಟರಾಜ ಶಿಲ್ಪವು ಆಗಮಗಳನ್ನು ಹೊರತುಪಡಿಸಿ ರಚನೆಯಾಗಿದ್ದು ಅಂದಿನ ಧಾರ್ಮಿಕ ಸ್ಥಿತಿಯ ಚಿರಸ್ಥಾಥ್ವವನ್ನು ಪ್ರತಿಬಿಂಬಿಸುತ್ತದೆ. ನಟರಾಜನ ಆರಾಧನೆಯು ಇಲ್ಲಿತ್ತೆಂಬುದಕ್ಕೆ ಈ ಶಿಲ್ಪಗಳೇ ಸಾಕ್ಷಿ. ಈ ರೀತಿಯ ಶಿಲ್ಪಗಳ ರಚನೆಯಾಗಿ ವಿಜಯನಗರದ (ಹಂಪೆ), ಶಿಲ್ಪಕಲಾ ಭಂಡಾರವು ಶ್ರೀಮಂತವಾಗಿದೆ. ವಿಜಯನಗರದ ಅರಸರು ಸರ್ವಧರ್ಮ ಸಮನ್ವಯಕರಾಗಿದ್ದರು ಎಂಬುದು ಇಲ್ಲಿರುವ ಸ್ಮಾರಕ ಮತ್ತು ಶಿಲ್ಪಗಳಿಂದ ಧೃಡಪಡುತ್ತದೆ.

ಅಡಿಟಿಪ್ಪಣಿಗಳು

1. ಪಿ.ಬಿ.ದೇಸಾಯಿ, 'ಕರ್ನಾಟಕದ ಇತಿಹಾಸ', ಪು. 52–55.
2. ಟಿ.ಎ.ಗೋಪಿನಾಥರಾವ, 'ಎಲಿಮೆಂಟ್ಸ ಆಫ್ ಹಿಂದೂ ಐಕೋನೊಗ್ರಫಿ', ಸಂಪುಟ–2. ಭಾಗ–1, ಪು. 254.
3. ಕೆ.ವಸಂತಲಕ್ಷ್ಮಿ, 'ಕರ್ನಾಟಕದ ಶೈವ ಶಿಲ್ಪಗಳು', ಪು. 137.
4. ಟಿ.ಎ.ಗೋಪಿನಾಥರಾವ್, 'ಎಲಿಮೆಂಟ್ಸ ಆಫ್ ಹಿಂದೂ ಐಕೋನೊಗ್ರಫಿ', ಸಂಪುಟ–2. ಭಾಗ–1. ಪು.258–260.
5. ಕೆ.ಎ. ಸುರೇಶ, 'ಸ್ಕಲ್ಪಚರಲ್ ಆರ್ಟ್ ಆಫ್ ಹಂಪಿ' ಪು: 59–60.

22. ಶ್ರೀಕೃಷ್ಣದೇವರಾಯನ ಕಾಲದ ಸೇನಾಬಲ : ಅವಲೋಕನ

ಪ್ರೊ. ಲಕ್ಷ್ಮಣ್ ತೆಲಗಾವಿ

ದಕ್ಷಿಣ ಭಾರತದ ವಿಸ್ತಾರವಾದ ಭೂಪ್ರದೇಶದ ಮೇಲೆ ವಿಜಯನಗರದ ಆದಿಪತ್ಯ ಇದ್ದುದು ವಾಸ್ತವ. ಹೊಸ ಗಡಿಗಳನ್ನು ಸಾಧಿಸಲು, ಅಲ್ಲಿ ತಮ್ಮದೇ ಆಡಳಿತ ಕ್ರಮವನ್ನು ಜಾರಿಗೊಳಿಸಲು ವಿಜಯನಗರ ಸಾಮ್ರಾಟರಿಗೆ ಸ್ಥಳೀಯ ಆಡಳಿತಗಾರರ ಸಹಕಾರದೊಡನೆ ಭಾರಿ ಸೇನಾಬಲದ ಬೆಂಬಲವೂ ಅವಶ್ಯಕವಾಗಿದ್ದಿತು. ಶ್ರೀಕೃಷ್ಣದೇವರಾಯನಂಥಾ ಮಹತ್ವಾಕಾಂಕ್ಷಿ ಮತ್ತು ಬಲಿಷ್ಠ ಚಕ್ರವರ್ತಿಯು ತನ್ನ ಆಡಳಿತಾವಧಿಯಲ್ಲಿ ಇದನ್ನು ಹೇಗೆ ಸಾಧಿಸಿದನೆಂಬುದೊಂದು ಕುತೂಹಲದ ಸಂಗತಿ. ಈ ಕುರಿತು ಅರಿಯಲು ಸಹಕಾರಿಯೆನಿಸುವ ಪ್ರಮುಖ ಆಕರಗಳೆಂದರೆ ರಾಯವಾಚಕ ಮತ್ತು ಶ್ರೀಕೃಷ್ಣದೇವರಾಯನ ದಿನಚರಿ. ಹಾಗೆಯೇ ರಾಬರ್ಟ್ ಸಿವೆಲ್, ನೇಲಟೂರು ವೆಂಕಟರಮಣಯ್ಯ, ಬರ್ಟನ್ ಸ್ಟೀನ್, ಮೊದಲಾದವರ ಅಧ್ಯಯನ ಕೃತಿಗಳೂ ಇತರೆ ಆನುಷಂಗಿಕ ಬರಹಗಳೂ ಈ ಸಂಬಂಧದಲ್ಲಿ ಅತ್ಯುಪಯುಕ್ತವಾದುವೆನಿಸಿವೆ. ಶ್ರೀಕೃಷ್ಣದೇವರಾಯನನ್ನು ಕುರಿತು ಪ್ರತ್ಯೇಕವಾಗಿ ಪ್ರಕಟಗೊಂಡಿರುವ ಸಂಗ್ರಹ ಕೃತಿಗಳೂ ಗಮನಿಸಲರ್ಹವಾದುವು.

ವಿಜಯನಗರ ಸಾಮ್ರಾಟ ಶ್ರೀಕೃಷ್ಣದೇವರಾಯನು (ಕ್ರಿ.ಶ. 1509–1529) ಧರಿಸಿದ್ದ ಅಸಂಖ್ಯೆ ಬಿರುದುಗಳಲ್ಲಿ 'ಅತಿ ಬಹಳ ಚತುರಂಗಬಲ ಸಮೋಪೇತ' ಎಂಬುದೂ ಒಂದು. ಚತುರಂಗವೆಂದರೆ ನಾಲ್ಕು ಅಂಗಗಳುಳ್ಳದ್ದು; ಚತುರಂಗ ಬಲವೆಂದರೆ ಆನೆ, ಕುದುರೆ, ರಥ ಮತ್ತು ಪದಾತಿ (ಕಾಲಾಳು)ಗಳಿಂದ ಕೂಡಿದ ಸೈನ್ಯ. ರಾಯನು ಅಪಾರ ಸೈನ್ಯವನ್ನು ಹೊಂದಿದ್ದರೆಂಬುದನ್ನು ಸೂಚಿಸುತ್ತದೆ ಈ ಬಿರುದು. ಇದೊಂದು ಸಾಂಪ್ರದಾಯಿಕ ಬಿರುದೆಂಬುದೇನೊ ನಿಜ. ಆದರೆ ಚಾರಿತ್ರಿಕವಾಗಿ ಇದನ್ನು ಸಮರ್ಥಿಸಲು ಸಮಕಾಲೀನ ಆಕರಗಳು ನೆರವಾಗುತ್ತವೆ. ಈ ರಾಯನು ತನ್ನ ಆಳ್ವಿಕೆಯಲ್ಲಿ ಗೆದ್ದುಕೊಂಡಿದ್ದ ಪ್ರದೇಶಗಳ ಬಗೆಗೆ ಕ್ರಿ.ಶ. 1514ರ ಕೊಪ್ಪ ತಾಲ್ಲೂಕು ಕಿಡಿದಾಳು ಶಾಸನ ಹೇಳುವುದು ಗಮನಾರ್ಹ. (ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ–2, ಶಾಸನ ಸಂಖ್ಯೆ 138) ಶ್ರೀಕೃಷ್ಣದೇವರಾಯನನ್ನು ವಿಶೇಷವಾಗಿ ಹೊಗಳುವ ಈ ಶಾಸನ ಹೇಳುವುದೇನೆಂದರೆ, "ಅಂಗ, ವಂಗ, ಕಳಿಂಗ, ಗುರ್ಜ್ಜರ, ಮಗಧ, ವಾಧಿಕ, ಲಾಟ, ಕರ್ನಾಟ, ಗವುಳ, ಮಾಳವ, ವಾಶುವರುಷರತೊಂಡಿ, ರೇವಣ, ಕೊಂಕಣ, ಬಡಗಣ, ಮೂಡಣ, ಪಂಚಾಳ, ಕೇರಳ, ಹಮ್ಮೀರ, ಶಿಂಹಲಾಳ, ಧೂರಪರ ರಾಜಣ್ಯನಿ ನಿರಂತರ ಶಾಖತ ಜಯ ಸಂರಳಿತ ಭುಜಾಸ್ತಾಯಭ್ಯರ ವಗ್ಯೆವ ಅಚ್ಚಂಡೀವ ಪ್ರತಾಪ ಭಂಗಾರ ಪ್ರಭು" ಎಂದು. ಈ ರಾಯನು ದಕ್ಷಿಣ ಭಾರತದ ಬಹುಪಾಲು ಭೂಪ್ರದೇಶದ ಪ್ರಭುವಾಗಿದ್ದರೂ ಅಂಗ, ವಂಗ, ಗೂರ್ಜರ ದೇಶಗಳು ಅವನ ಅಧೀನದಲ್ಲಿರಲಿಲ್ಲವೆಂಬುದು ವಾಸ್ತವ. ಈ ಬಿರುದು ಹೊಂದಿರುವ ಉತ್ಪ್ರೇಕ್ಷಿತ ಅಂಶವನ್ನು ನಿರ್ಲಕ್ಷಿಸಿದರೂ ರಾಯನು ಸಹಜವಾಗಿಯೇ ರಾಜಕೀಯ ವಿಸ್ತರಣೆಯಂಥಾ ಕಾರ್ಯದಲ್ಲಿ ಬಹು ಸಮರ್ಥನಾಗಿದ್ದನೆಂಬುದನ್ನು ನಿರಾಕರಿಸಲಾಗದು.

ವಿಜಯನಗರವು ದಕ್ಷಿಣಭಾರತದ ಹಲವಾರು ಪ್ರದೇಶಗಳ ಮೇಲೆ ತನ್ನ ಒಡೆತನ ಸ್ಥಾಪಿಸಿದುದಿರಲಿ, ಅದಕ್ಕೆ ತನ್ನದೇ ಸ್ವಂತ ಹಾಗೂ ಸಮೃದ್ಧ ಭೂಪ್ರದೇಶವಿದ್ದಿತು; ಸಂಪನ್ಮೂಲಕ್ಕೇನೂ ಕೊರತೆಯಿರಲಿಲ್ಲ. ಇತಿಹಾಸಕಾರರು ಬರೆಯುವಂತೆ, ಶ್ರೀಕೃಷ್ಣದೇವರಾಯನದು ಅತ್ಯಂತ ವೈಭವದ ಕಾಲ. ವಿಜಯನಗರದ ಉಚ್ಛ್ರಾಯ ದಿನಗಳಲ್ಲಿ ರಾಯನ ರಾಜ್ಯಭಾರದಲ್ಲಿ, ರಾಜ ಬಳಸಬಹುದಾದ ಸಂಪನ್ಮೂಲಗಳನ್ನು ರಾಜ್ಯದ ಒಳಾಂಗಣವಾಗಿದ್ದ ಹಾಗೂ ಅತಿ ಮಹತ್ವದ ಪ್ರದೇಶವಾಗಿದ್ದ (Heartland) ತುಂಬಭದ್ರೆಯ ಬಯಲು ಒದಗಿಸುತ್ತಿದ್ದಿತೆನ್ನುವುದು ನಿಶ್ಚಿತ. ಸಾಮ್ರಾಜ್ಯದ ಈ ಸತ್ವಯುತ ಭೂಪ್ರದೇಶವು ಸಣ್ಣ ಪ್ರದೇಶವಾಗಿರಲಿಲ್ಲ.; ಹಾಗೂ ಇಲ್ಲಿಯ ಹುಟ್ಟುವಳಿಯೂ ಕಡಿಮೆಯದೇನಾಗಿರಲಿಲ್ಲ. ಈ ಪ್ರದೇಶವು ಬಳ್ಳಾರಿ, ಕರ್ನೂಲು, ಅನಂತಪುರ, ಕಡಪಾ – ಹೀಗೆ ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಭಾಗಗಳನ್ನು ಒಳಗೊಂಡಂತೆ 30,000 ಚದರ ಕಿಲೋಮೀಟರ್‌ನಷ್ಟು ವಿಸ್ತಾರವಾಗಿದ್ದಿತು. ಇದು ಮದರಾಸು ಆಧಿಪತ್ಯಕ್ಕೆ (Madras Presidency) ಸೇರಿದ ದತ್ತಮಂಡಲದ (Ceded Districts) ವ್ಯಾಪ್ತಿಯಷ್ಟಿದ್ದು, ಇದರಲ್ಲಿನ ಜನಸಂಖ್ಯೆ ಸುಮಾರು ಎರಡು ಮಿಲಿಯನ್.[1]

ಶ್ರೀಕೃಷ್ಣದೇವರಾಯನ ಶಕ್ತಿ–ಯುಕ್ತಿ–ಪ್ರಭಾವಗಳದು ವಿಜಯನಗರ ಇತಿಹಾಸದಲ್ಲಿ ಒಂದು ವಿಶಿಷ್ಟವೆನಿಸುವ ಕತೆ. ರಾಯವಾಚಕ ಹೇಳುವಂತೆ, ರಾಯನು ಪಟ್ಟಾಭಿಷಿಕ್ತನಾದ ತರುವಾಯ, ವಿಜಯನಗರದ ಸೇನಾಬಲದ ಬಗೆಗೆ ತನ್ನ

ಮಂತ್ರಿ ತಿಮ್ಮರಸನಿಂದ ವಿವರ ಕೇಳುತ್ತಾನೆ. ಸಾಮ್ರಾಜ್ಯದ ಸೈನ್ಯವು ಹಲವಾರು ಅಮರನಾಯಕರು, ದುರ್ಗಾಧಿಪತಿಗಳು, ಕುದುರೆ ಸಂಭವಕಾರರ ಅಧೀನದಲ್ಲಿದ್ದು, ಅವರೆಗೆ ನಿರ್ದಿಷ್ಟ ಲೆಕ್ಕ ಸಿಕ್ಕದಂತಾಗಿತ್ತು. ಆಗ ಸಂಗ್ರಹಿಸಲಾದ ಅಂಕಿ–ಅಂಶಗಳ ಪ್ರಕಾರ, ಸಾಮ್ರಾಜ್ಯದ ಬಳಿ 2 ಲಕ್ಷ ಕಾಲ್ಬಲ, 24,000 ಕುದುರೆ ಹಾಗೂ 700 ಆನೆಗಳು ಇದ್ದುವು.[2] ರಾಯವಾಚಕದಲ್ಲೆ ಇನ್ನೊಂದೆಡೆ ಕಂಡುಬರುವಂತೆ, ರಾಯನ ಸೈನ್ಯವು 24,000 ಕುದುರೆ, 15,000 ಆನೆ, 2 ಲಕ್ಷ ಬಂಟರು (ಕಾಲಾಳುಗಳು) ಹೊಂದಿದ್ದು, ಅಮರನಾಯಕರ ಕುದುರೆಗಳು – ಆನೆಗಳು 12000, ಕಾಲ್ಬಲ 7 ಲಕ್ಷ ಇದ್ದಿತು.[3]

ಈ ಸಂದರ್ಭವನ್ನು ಕೃಷ್ಣದೇವರಾಯನ ದಿನಚರಿಯು ಇನ್ನೂ ಸ್ಪಷ್ಟವಾಗಿ ನಿರೂಪಿಸಲೆತ್ನಿಸುತ್ತದೆ. ಮುಖ್ಯವಾಗಿ, ವಿಜಯನಗರದ ಸೈನ್ಯವನ್ನು ಪಾಲಿಸುತ್ತಿದ್ದ ಅಮರನಾಯಕರ ಬಲವನ್ನು ಕುರಿತ ವಿವರಣೆ ದೊರೆಯುತ್ತದೆ. ಅದನ್ನು ದಿನಚರಿಯು ನಿರೂಪಿಸುವುದು ಹೀಗೆ: "ದೊರೆಯನ್ನೆಯರು, ಅಮರನಾಯಕರು, ರಾವುತರು, ಕಾಣುವೆ ಯೆಪ್ಪತ್ತೆರಡು ವಿನಿಯೋಗದವರು ವೋಲಗಕ್ಕೆ ಬನ್ನಿಯೆಂದು ಕಂದಾಚಾರದ ಕರಣಿಕರ ಕರೆಸಿ ಅವರ ಕೂಡೆ ಸಿಂಹಾಸನಕ್ಕೆ ಅಮರನಾಯಕರ ಆನೆಗಳೆಷ್ಟು ಕುದುರೆಗಳೆಷ್ಟು ಕಾಲಾಳೆಷ್ಟು ಯೆನ್ನಲಾಗಿ ಕರಣಿಕರು ಹೇಳಿದ್ದು ಆನೆಘಟಿಗಳು ನೂರು, ಕುದುರೆ ಯೆಪ್ಪತ್ತನಾಲ್ಕು ಸಾವಿರ, ಕಾಲ್ಬಲ ಲಕ್ಷ ಅರುವತ್ತು ಸಾವಿರದ ಸ್ಥಿತಿ ಯೆಪ್ಪತ್ತಾರು ಲಕ್ಷಕ್ಕೆ ಅಮರವನ್ನಾಳುತ್ತ ಯಿದ್ದಾರೆಯೆಂದು ಬಿನ್ನಹಂ ಮಾಡಿದರು."[4] ಆದರೆ ಇತಿಹಾಸಕಾರರು ಇದನ್ನು ಒಪ್ಪದಿರುವುದು ಗಮನಿಸಬೇಕಾದ ಸಂಗತಿ.

ಹಾಗೆಯೇ, ವಿಜಾಪುರ ಸುಲ್ತಾನನನ್ನು ಸೋಲಿಸಿ, ರಾಯಚೂರು ಮೊದಲಾದ ದುರ್ಗಗಳೊಂದಿಗೆ ಕೃಷ್ಣಾ–ತುಂಗಭದ್ರಾ ನಡುವಿನ ಪ್ರದೇಶವನ್ನು ಗೆಲ್ಲುವುದಕ್ಕಾಗಿ ಸಿದ್ಧಗೊಂಡ ವಿಜಯನಗರದ ಸೇನಾಬಲವೆಷ್ಟಿದ್ದಿತೆಂದರೆ, 551 ಆನೆಗಳು, 32,600 ಕುದುರೆಗಳು, 7,30,00 ಕಾಲ್ಬಲ. ಈ ಅಂಶವನ್ನು ಹೇಳಿರುವುದು ಪೋರ್ಚುಗೀಸರ ಅಶ್ವವ್ಯಾಪಾರಿ ಫರ್ನಾವೋ ನ್ಯೂನಿಜ್. ಆದರೆ ನ್ಯೂನಿಜ್ ಒದಗಿಸುವ ಈ ಸೇನಾಸಂಖ್ಯೆ ನಿಜವಾಗಿರುವ ಯಾವುದೇ ಸಾಧ್ಯತೆ ಉಂಟೇ ಎಂಬ ಸಂದೇಹ ಸಹಜವಾಗಿ ಮೂಡುತ್ತದೆನ್ನುತ್ತಾರೆ ರಾಬರ್ಟ್ ಸಿವೆಲ್. ಈ ಸಂಖ್ಯೆ ಸೇನಾಚರರು, ವರ್ತಕರು ಮೊದಲಾದವರನ್ನು ಒಳಗೊಂಡಿದ್ದಿತು. ಇದು ನಿಜಕ್ಕೂ ನಮ್ಮ ನಂಬಿಕೆಗೆ ಹೊರೆಯಾಗುತ್ತದೆನ್ನುತ್ತಾರೆ ಅವರು.[5] ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ನ್ಯೂನಿಜ್ ಒದಗಿಸುವ ಅಂಕಿ–ಅಂಶಗಳು ರಾಯವಾಚಕದ ಅಂಕಿ–ಅಂಶಗಳೊಡನೆ ಹೊಂದುತ್ತವೆನ್ನುವುದು. ಈ ದೃಷ್ಟಿಯಿಂದ, ಶ್ರೀಕೃಷ್ಣದೇವರಾಯನು ಒಂದು ಮಹಾಸೇನೆಯನ್ನು ಜಮಾವಣೆ ಮಾಡಿದ್ದುದು ಅಸಂಭವವೇನಲ್ಲವೆಂಬ ಅಭಿಪ್ರಾಯವೂ ಇದೆ.[6]

ಫರ್ನಾವೊ ನ್ಯೂನಿಜ್ ನೀಡುವ ವಿವರಗಳೊಡನೆ ಇತರರು ಕೊಡುವ ಮಾಹಿತಿಯನ್ನೂ ಇಲ್ಲಿ ಗಮನಿಸಬಹುದು. 'ಹಿಸ್ಟರಿ ಆಫ್ ದಿ ಡೆಕ್ಕನ್' ಕೃತಿಯ ಕರ್ತೃ ಕರ್ನಲ್ ಬ್ರಿಗ್ಸ್ ತನ್ನ ಎರಡನೇ ಸಂಪುಟದಲ್ಲಿ, ಔರಂಗಜೇಬನ ಆಳ್ವಿಕೆಯಲ್ಲಿ ಕ್ರಿ.ಶ. 1690ರಲ್ಲಿ ದಲಪತರಾಯನ ಕೆಳಗೆ ಸೇವೆ ಸಲ್ಲಿಸಿದ ಬುಂದೇಲ ಅಧಿಕಾರಿಯೊಬ್ಬನು ಬರೆದಿಟ್ಟಿದ್ದ ದಿನಚರಿಯ ಭಾಷಾಂತರವನ್ನು ಕೊಡುತ್ತಾನೆ. ತನ್ನ ವೈಭವ ಮತ್ತು ಮಹತ್ವದ ಶಿಖರದಲ್ಲಿದ್ದಾಗಿನ ವಿಜಯನಗರದ ಗತಕಾಲದ ತನ್ನ ವೈಭವ ಮತ್ತು ಮಹತ್ವದ ಶಿಖರದಲ್ಲಿದ್ದಾಗಿನ ವಿಜಯನಗರದ ಗತಕಾಲದ ಬಗೆಗೆ ಬರೆಯುತ್ತಾ, "ಅವರು 30,000 ಅಶ್ವಾಳು, ಒಂದು ದಶಲಕ್ಷ ಕಾಲಾಳುಗಳ ಸೈನ್ಯವನ್ನು ಇಟ್ಟಿರುತ್ತಿದ್ದರು ಮತ್ತು ಅದರ ಸಂಪತ್ತು ಎಣಿಕೆಗೆ ಮೀರಿದ್ದು" ಎನ್ನುತ್ತಾನೆ ಆತ.[7] ಮತ್ತೋರ್ವ ವಿದೇಶಿ ಪ್ರವಾಸಿ ನಿಕೊಲೊ ಕಾಂಟಿಯು, ವಿಜಯನಗರದ ಸೈನ್ಯವು ಒಂದು ಲಕ್ಷಕ್ಕಿಂತಲೂ ಅಧಿಕವಾಗಿದ್ದಿತೆನ್ನುತ್ತಾನೆ.[8]

ಅಬ್ದುಲ್ ರಜಾಕ್ (ಕ್ರಿ.ಶ. 1442) ಸಹ ಶ್ರೀಕೃಷ್ಣದೇವರಾಯನ ಸೇನೆಯು 100 ಆನೆ ಸಹಿತ 1,100,000ದಷ್ಟಿತ್ತೆನ್ನುತ್ತಾನೆ.[9] ಆತನೇ ನೀಡಿರುವ ವಿವರಣೆಯಂತೆ, ಶ್ರೀಕೃಷ್ಣದೇವರಾಯನ ಸೈನ್ಯದಲ್ಲಿ 2000 ಮುಸಲ್ಮಾನರು, 60,000 ಹಿಂದೂ ಬಿಲ್ಲುಗಾರರು, 80,000 ಅಶ್ವಾಳುಗಳು, 9 ಲಕ್ಷ ಕಾಲಾಳುಗಳಿದ್ದರು. ಒಂದು ಕುದುರೆಗೆ 100 ಘಟ್ಟಿಗ ಮತ್ತು ಒಂದು ಆನೆಗೆ 1000 ವರಹ ಬೆಲೆ ಇದ್ದಿತು. ರಾಯನು 12,000 ಆನೆಗಳನ್ನು ಕೊಂಡುಕೊಂಡನೆಂದು ಹೇಳುತ್ತಾನೆ.[10] ಆನೆಗಳಂತೆಯೇ ಕುದುರೆಗಳ ವಿಚಾರದಲ್ಲೂ ರಾಯನು ತೀರಾ ಜಾಗ್ರತೆ ವಹಿಸುತ್ತಿದ್ದನೆಂಬುದು ಸ್ಪಷ್ಟಪಡುತ್ತದೆ. ಇತಿಹಾಸಕಾರರು ಗುರುತಿಸುವಂತೆ, ಮಧ್ಯಕಾಲೀನ ಭಾರತದ ಮಿಲಿಟರಿಶಕ್ತಿಯು ಹೆಚ್ಚಾಗಿ ಅಶ್ವಪಡೆಯನ್ನು ಅವಲಂಬಿಸಿದ್ದಿತು. ಶ್ರೀಕೃಷ್ಣದೇವರಾಯನು ಪೋರ್ಚುಗೀಸರ ಸ್ನೇಹವನ್ನು ಸಂಪಾದಿಸಿಕೊಂಡು, ವಿದೇಶದಿಂದ ಅವರು ಆಮದು ಮಾಡಿಕೊಳ್ಳುತ್ತಿದ್ದ ಎಲ್ಲ ಅರೇಬಿಯಾ ಮತ್ತು ಪರ್ಶಿಯಾ ಕುದುರೆಗಳನ್ನು ತನಗೇ ಮಾರಾಟಮಾಡುವಂತೆ ಅವರನ್ನು ಒಪ್ಪಿಸಿದ್ದನೆಂಬುದೊಂದು ಉದಾಹರಣೆ.[11] ರಾಯನ ಆಳ್ವಿಕೆಯ ಕೊನೆಯಲ್ಲಿ ಭಾರತಕ್ಕೆ ಬಂದಿದ್ದ ಕ್ಯಾಪ್ಟನ್ ಹೆಡಾ ಎಂಬವನು ವಿಜಯನಗರದ ಸೇನಾಬಲ ಕುರಿತು ಇತರ ಲೇಖಕರ

ಅಭಿಪ್ರಾಯವನ್ನೆ ಅನುಮೋದಿಸಿರುವನಲ್ಲದೆ, ದೇಶವು ಬಲು ವಿಸ್ತಾರವಾದುದು ಹಾಗೂ ಜನನಿಬಿಡವಾದುದು; ರಾಜನು ಬೇಕೆಂದಾಗ ಒಂದು ದಶಲಕ್ಷ, ಅದೇಕೆ ಎರಡು ದಶಲಕ್ಷ ಯೋಧರನ್ನು ಕೂಡಿಸಬಹುದು; ವಿಜಯನಗರದ ಪದಾತಿ ಸೈನ್ಯ ಅಗಣಿತವಾಗಿದೆ; ರಾಜನು ತನ್ನ ಖರ್ಚಿನಿಂದಲೆ 100,000 ಅಶ್ವಾಳು ಮತ್ತು 4000 ಗಜಗಳ ಸೈನ್ಯವಲ್ಲಿ ಸಲಹಿದ್ದನೆಂದು ಹೇಳುತ್ತಾನೆ.[12]

ಎಲ್ಲಕ್ಕೂ ಮುಖ್ಯವಾಗಿ, ಡೊಮಿಂಗೊ ಪೇಸ್ ಕೊಡುವ ವಿವರಣೆ ರೋಚಕವೂ ಕುತೂಹಲಕರವೂ ಆದುದು. ಅವನು ತನ್ನ ಕಥನದಲ್ಲಿ ವಿಜಯನಗರದ ಸೇನಾಬಲ ಕುರಿತು ಈ ಮುಂದಿನಂತೆ ನಿರೂಪಿಸಿದ್ದಾನೆ: "ಈ ರಾಜ ಯುದ್ಧಕವಚವುಳ್ಳ 35,000 ಅಶ್ವಾಳುಗಳು ಸೇರಿದಂತೆ ಒಂದು ದಶಲಕ್ಷ ಕಾದುವ ಸೈನಿಕರನ್ನು ಯಾವಾಗಲೂ ಹೊಂದಿರುತ್ತಾನೆಂಬುದನ್ನು ನೀವು ಅರಿಯಬೇಕೆಂದು ಬಯಸುವೆ. ಇವರೆಲ್ಲ ಅವನ ವೇತನದಲ್ಲಿರುವವರು. ಅವನು ಇವೆಲ್ಲ ಸೈನಿಕರನ್ನು ಒಟ್ಟಿಗೆ ಇಟ್ಟಿದ್ದು, ಆವಶ್ಯಕತೆ ಬಿದ್ದಾಗ ಯಾವ ದಿಕ್ಕಿಗಾದರೂ ಕಳಿಸಲು ಸನ್ನದ್ಧವಾಗಿ ಇರಿಸುತ್ತಾನೆ. ಈ ಬಿನ್ನಹ ನಗರದಲ್ಲಿದ್ದುದರಿಂದ ನಾನೊಮ್ಮೆ ರಾಜನು ಸಮುದ್ರ ಕರಾವಳಿಯಲ್ಲಿರುವ ತನ್ನ ಸ್ಥಳಗಳಲ್ಲೊಂದರ ವಿರುದ್ಧ ಸೇನಾಬಲ ಕಳಿಸಿದುದನ್ನು ನೋಡಿದೆ. ಅವನು ಅನೇಕ ಅಶ್ವಾಳುಗಳಿದ್ದ 150,000 ಸೈನಿಕರೊಂದಿಗೆ ಐವತ್ತು ದಳಪತಿಗಳನ್ನು ಕಳಿಸಿದ. ಅವನಲ್ಲಿ ಅನೇಕ ಆನೆಗಳಿವೆ. ರಾಜನು ತನ್ನ ರಾಜ್ಯದ ನೆರೆಯಲ್ಲಿರುವ ಮೂವರು ರಾಜನಲ್ಲಿ ಯಾವನೊಬ್ಬನಿಗೆ ತನ್ನ ಬಲ ಪ್ರದರ್ಶಿಸಬಯಸಿದಾಗ ರಣರಂಗದಲ್ಲಿ ಎರಡು ದಶಲಕ್ಷ ಸೈನಿಕರನ್ನು ನಿಲ್ಲಿಸುತ್ತಾನೆ. ತತ್ಪರಿಣಾಮವಾಗಿ ಈ ಭಾಗಗಳಲ್ಲಿ ಅವನು ಅತ್ಯಂತ ಭಯ ಹುಟ್ಟಿಸುವ ರಾಜನಾಗಿರುವನು...

ರಾಜನ ಆದಾಯವೆಷ್ಟು ಮತ್ತು ಇಷ್ಟು ಸೈನಿಕರಿಗೆ ಸಂಬಳ ಕೊಡಲು ಶಕ್ತನಾಗಿರಲು ಅವನ ಭಂಡಾರ ಎಂಥದು ಎಂದು ಯಾರಾದರೂ ಕೇಳಿದರೆ, ಅವನು ತನ್ನ ರಾಜ್ಯದಲ್ಲಿ ಇಷ್ಟೊಂದು ಮತ್ತು ಎಂಥ ದೊಡ್ಡ ಪ್ರಭುಗಳನ್ನು ಹೊಂದಿರುವುದರಿಂದ ಮತ್ತು ಅವರಲ್ಲಿ ಬಹುಮಂದಿ ತಮ್ಮದೇ ಆದಾಯಗಳನ್ನು ಹೊಂದಿರುವುದರಿಂದ ನಾನು ಹೀಗೆ ಉತ್ತರಿಸುವೆ: ತನ್ನ ಸೈನಿಕರ ಮೇಲೆ ನಿಯಮಿಸಿದ ಈ ದಳಪತಿಗಳು ಅವನ ಮನ್ನೆಯರು; ಅವರು ಪ್ರಭುಗಳು. ಅವರು ನಗರಗಳು, ಪಟ್ಟಣಗಳು ಮತ್ತು ಗ್ರಾಮಗಳ ಸಾಮ್ಯ ಪಡೆದಿರುತ್ತಾರೆ. ದಳಪತಿಗಳಲ್ಲಿ ಕೆಲವರು ಒಂದು ಒಂದೂವರೆ ದಶಲಕ್ಷ ಪರ್ದಾಒಗಳ (ಪರ್ದಾಒ = ದುಂಡಗಿನ ಸುವರ್ಣ ನಾಣ್ಯ) ಆದಾಯವುಳ್ಳವರಿದ್ದಾರೆ. ಇನ್ನು ಕೆಲವರು ಒಂದು ನೂರು ಮತ್ತು ಇನ್ನೂ ಕೆಲವರು ಇನ್ನೂರು, ಮುನ್ನೂರು, ಅಥವಾ ಐನೂರು ಸಾವಿರ ಪರ್ದಾಒಗಳ ಆದಾಯವುಳ್ಳವರು. ಪ್ರತಿಯೊಬ್ಬನಿಗೂ ಆದಾಯವಿರುವುದರಿಂದ ಅವನು ಸಲಹಬೇಕಿದ್ದ ಕಾಲಾಳು, ಕುದುರೆ ಮತ್ತು ಆನೆಗಳು ಸೈನ್ಯವನ್ನು ರಾಜ ನಿಗದಿಗೊಳಿಸುತ್ತಾನೆ. ಯಾವಾಗಲೇ ಕರೆಯಲಿ ಎಲ್ಲಿಗೇ ಹೋಗಬೇಕಿರಲಿ ಈ ಸೈನಿಕರು ಕರ್ತವ್ಯಕ್ಕಾಗಿ ಸದಾ ಸನ್ನದ್ಧರಾಗಿರುತ್ತಾರೆ. ಈ ರೀತಿ ಅವನು ಈ ದಶಲಕ್ಷ ಹೋರಾಳುಗಳನ್ನು ಯಾವಾಗಲೂ ಸಿದ್ಧವಾಗಿಟ್ಟಿರುತ್ತಾನೆ. ತಾನು ಅವರಿಗೆ ಸಂಬಳ ಕೊಡುತ್ತಿರುವುದರಿಂದ ಪ್ರತಿ ದಳಪತಿಯೂ ತನಗೆ ಲಭ್ಯವಿರುವ ಅತ್ಯುತ್ತಮ ಸೈನಿಕರನ್ನು ತಯಾರಿಸಲು ಶ್ರಮಿಸುತ್ತಾನೆ. ಮತ್ತು ಈ ಪ್ರದರ್ಶನದಲ್ಲಿ ಎಂದಿಗೂ ಕಾಣಲು ಸಾಧ್ಯವಾದ ಅತ್ಯುತ್ಕೃಷ್ಟ ಯುವಕರನ್ನು ನಾನು ಕಂಡೆ. ಏಕೆಂದರೆ ಇಡಿ ವ್ಯೂಹದಲ್ಲಿ ಹೇಡಿಯಂತೆ ನಡೆದುಕೊಳ್ಳುವ ಒಬ್ಬನನ್ನೂ ನಾನು ಕಾಣಲಿಲ್ಲ. ಈ ಸೈನಿಕರನ್ನು ಸಲಹುವುದಲ್ಲದೆ ಪ್ರತಿ ದಳಪತಿ ರಾಜನಿಗೆ ವಾರ್ಷಿಕ ಕಪ್ಪ ಕೊಡಬೇಕು ಮತ್ತು ರಾಜ ತಾನು ಪಗಾರ ಕೊಡುವ ತನ್ನದೇ ಸಂಬಳದಾರ ಸೈನಿಕರನ್ನು ಪಡೆದಿರುತ್ತಾನೆ. ತನ್ನ ಸ್ವಂತ ನಿಯಂತ್ರಣದಲ್ಲಿ ಎಂಟುನೂರು ಆನೆಗಳನ್ನು ಮತ್ತು ತನ್ನ ಲಾಯಗಳಲ್ಲಿ ಯಾವಾಗಲೂ ಐನೂರು ಕುದುರೆಗಳನ್ನು ಇಟ್ಟಿರುತ್ತಾನೆ"[13]

ಇಲ್ಲಿ ಎರಡು ಅಂಶಗಳನ್ನು ಮುಖ್ಯವಾಗಿ ಗಮನಿಸಬೇಕು. ಒಂದು, ರಾಜನಿಂದ ವೇತನ ಪಡೆಯುತ್ತಿದ್ದವರು ಅಥವಾ ಸಂಬಳದ ಸೈನಿಕರದು; ಇನ್ನೊಂದು, ಸಾಮ್ರಾಜ್ಯದ ಸೈನ್ಯವನ್ನು ನಿರ್ವಹಿಸುತ್ತಿದ್ದ ದಳಪತಿಗಳು, ಮನ್ನೆಯರು ಮತ್ತು ಅಮರನಾಯಕರದು. ಮೊದಲಿಗೆ, ರಾಜನಿಂದ ವೇತನ ಪಡೆಯುತ್ತಿದ್ದ ಸೈನಿಕರನ್ನು ಗಮನಿಸುವುದಾದರೆ, ಇದನ್ನು ಈಗಾಗಲೇ ಡೊಮಿಂಗೊ ಪೇಸನ ಕಥನದಿಂದಲೂ ತಿಳಿದುಕೊಂಡಿದ್ದೇವೆ. ಈ ವೇತನದ ಸೈನಿಕರನ್ನು ಕೈ ಸಂಬಳದ ಸೈನಿಕರೆಂತಲೂ ಬೇರೆಡೆ ಪ್ರಸ್ತಾಪಿಸಲಾಗಿದೆ. ಕೈಸಂಬಳದ ಬಲ ಕಟ್ಟುವ ಬಗೆಗೆ ರಾಯನು ಸಾಳುವ ತಿಮ್ಮರಸಯ್ಯನಂಥಾ ನಿಯೋಗಿಗೆ ಸೂಚಿಸುತ್ತಾನೆ. ಇಲ್ಲಿ ಕೈಸಂಬಳದ ಬಲವೆಂದರೆ ಖಾಯಂ ಸೇನಾಬಲಕ್ಕೆ ವಿರುದ್ಧವಾಗಿರುವಂಥದ್ದು. ಕೈಮೇಲೆ ಕೊಡುವ ಕೂಲಿ ಹಣ, ಹಾಗೆ ಕೂಲಿಕೊಟ್ಟು ನೇಮಿಸಿಕೊಂಡ ಸೈನ್ಯ ಅಥವಾ ಕೂಲಿಸೈನ್ಯವೆಂದು; ಕೈಸಂಬಳದವರೆಂದರೆ

ಕೂಲಿಗೆಲಸದವರೆಂದು ತಿಳಿಯುತ್ತದೆ. ಹಾಗೆಯೇ, ಕೈಜಿತ (ಕೈಜೀತ)ವಾಗಿ ಆನೆ, ಕುದುರೆ, ಕಾಲಾಳು, ಸಾಲಾಳು ಪಡೆಯನ್ನು ಕಟ್ಟುವ ಪ್ರಸ್ತಾಪವೂ ಬಂದಿದೆ.[14] ಕೈಜೀತವೆಂದರೆ, ಒಬ್ಬರ ಕೈಕೆಳಗಿನ ಸೇವೆ, ಕೈಗೆಲಸಕ್ಕಾಗಿ ಕೊಡುವ ಸಂಬಳವೆಂತಲೇ ಅರ್ಥ. 'ಮಹಿಶೂರ ಮಹಾಸೈನ್ಯಗಳ ಕೈಜೀತಗಾರರ' ಪ್ರಸ್ತಾಪ ದೊರೆಯುತ್ತದೆ ಕಾವ್ಯಗಳಲ್ಲಿ.

ಎರಡನೆಯದೆಂದರೆ, ಮೇಲೆ ಹೇಳಿದ ದಳಪತಿಗಳು, ಮನ್ನೆಯರು ಮತ್ತು ಅಮರನಾಯಕರ ವಿಚಾರ. ನಾವು ತಿಳಿದಿರುವಂತೆ, ವಿಜಯನಗರ ಸಾಮ್ರಾಜ್ಯವು ಪ್ರಾಂತ್ಯ ಮತ್ತು ನೆಲೆಗಳಲ್ಲಿ ವಿಂಗಡಿಸಲ್ಪಟ್ಟಿದ್ದಿತು. ಅವುಗಳನ್ನು ಪಾಲಿಸುತ್ತಿದ್ದ ಪ್ರಾಂತ್ಯಾಧಿಕಾರಿಗಳು ಮತ್ತು ಪಾಳೆಯಗಾರರು ತಕ್ಷಣದ ಸೇವೆಗೆ ಸನ್ನದ್ಧರಾಗಿರುವಂತೆ ಸೈನಿಕ ಸಮೂಹವನ್ನು ಸಿದ್ಧಪಡಿಸಿಕೊಂಡಿರುತ್ತಿದ್ದರು. ನ್ಯೂನಿಜ್ ಹೇಳುವ ಪ್ರಕಾರ, ವಿಜಯನಗರ ಸಾಮ್ರಾಜ್ಯವು ಒಟ್ಟು 200 ಸಾಮಂತರಲ್ಲಿ ವಿಂಗಡಣೆಗೊಂಡಿದ್ದಿತು; ಹಾಗೂ ಇವರಲ್ಲಿ 11 ಜನರು ಸೇನೆಯನ್ನು ಕಡ್ಡಾಯವಾಗಿ ಕಾಯ್ದಿಟ್ಟುಕೊಳ್ಳುವ ಹೊಣೆಯನ್ನು ಹೊತ್ತಿದ್ದರು. ಈ 11 ಜನರ ಒಟ್ಟು ಸೇನಾಬಲವು 19,000 ಅಶ್ವಾಳು, 1,32,300 ಕಾಲಾಳು ಮತ್ತು 633 ಗಜಗಳಿಂದ ಕೂಡಿದ್ದಿತು.[15] ರಾಯಚೂರು ದಂಡಯಾತ್ರೆಯಲ್ಲಿ ಶ್ರೀಕೃಷ್ಣದೇವರಾಯನೊಂದಿಗೆ ಭಾಗವಹಿಸಿದ್ದ ಮುಖ್ಯ ದಳನಾಯಕರು ಹೊಂದಿದ್ದ ಗಜ ತುರಗ ಪದಾತಿ ಪಡೆಗಳ ಅಂಕಿ-ಸಂಖ್ಯೆಯನ್ನು ಈ ಕೆಳಗಿನಂತೆ ಕೊಟ್ಟಿದ್ದಾನೆ ನ್ಯೂನಿಜ್:

1. ಕಾಮಾನಾಯಕ : ಕಾಲ್ದಳ 30,000; ಅಶ್ವದಳ 1,000; ಆನೆ 6. ವಿಶೇಷವೆಂದರೆ, ಈತನು ಶ್ರೀಕೃಷ್ಣದೇವರಾಯನ ಸೈನ್ಯದಲ್ಲಿದ್ದ ಮುಸ್ಲಿಂ ಸೈನಿಕರ ಅಧಿಪತಿ; ಈತನ ದಳದಲ್ಲಿದ್ದವರು ಭೇಟಕಧಾರಿಗಳು, ಬಿಲ್ಲುಗಾರರು. ಗದಾಯುದ್ಧ ವಿಶಾರದರು ಮತ್ತು ತುಪಾಕಿದಳದವರು.
2. ತ್ರಿಯಂಬಕರಾವ್ : ಕಾಲ್ದಳ 30,000; ಅಶ್ವದಳ 2,000; ಆನೆ 90,000.
3. ತಿಮ್ಮಪ್ಪನಾಯಕ : ಕಾಲ್ದಳ 60,000; ಅಶ್ವದಳ 3,000; ಆನೆ 30
4. ಆದೆಪ್ಪನಾಯಕ : ಕಾಲ್ದಳ 1,00,000; ಅಶ್ವದಳ 5,000; ಆನೆ 50.
5. ಕೊಂಡಮರಸಯ್ಯ : ಕಾಲ್ದಳ 1,20,000; ಅಶ್ವದಳ 6,000; ಆನೆ 60.
6. ಕೊಂತಮರ : ಕಾಲ್ದಳ 80,000; ಅಶ್ವದಳ 2,500; ಆನೆ 40.
7. ಸಾಳುವ ಗೋವಿಂದರಾಜು : ಕಾಲ್ದಳ 30,000; ಅಶ್ವದಳ 1,000; ಆನೆ 15. ಈತನನ್ನು ವಿಜಯನಗರ ಪಾಲಕನೆನ್ನಲಾಗಿದೆ.
8. ಕಂಚುಕಿಯರು (ಮೂವರು) : ಕಾಲ್ದಳ 40,000; ಅಶ್ವದಳ 1,000; ಆನೆ 15. ಕಂಚುಕ=ಉದ್ದವಾದ ನಿಲುವಂಗಿ; ಕಂಚುಕಿ=ಕಂಚುಕ ತೊಟ್ಟುಕೊಂಡ ಅಂತಃಪುರದ ಅಧಿಕಾರಿ ಅಥವಾ ರಾಣಿವಾಸದ ಪಾರುಪತ್ಯಗಾರ. ಈ ಮೂವರೂ ರಾಯನ ಸೇವೆಯಲ್ಲಿದ್ದ ಕಂಚುಕಿಯರೆನ್ನಲಾಗಿದೆ. ಇವರ ಹೆಸರುಗಳನ್ನು ಪ್ರಸ್ತಾಪಿಸಿಲ್ಲ.
9. ಅಡಪದವನು : ಕಾಲ್ದಳ 1,000; ಅಶ್ವದಳ 200; ಈತನಿಗೆ ಆನೆಗಳಿಲ್ಲ. ಇಲ್ಲಿಯ ಅಡಪದವನೆಂದರೆ, ಇತಿಹಾಸಕಾರರ ಪ್ರಕಾರ, ಈ ವೇಳೆಗೆ ಬಳ್ಳಾರಿಜಿಲ್ಲೆಯ ಪಾಲಕಲ್ಲುಗ್ರಾಮದ ಅಮರನಾಯಕನಾಗಿದ್ದ ಹಾಗೂ ಶ್ರೀಕೃಷ್ಣದೇವರಾಯನ ಆಡಳಿತದ ಕೊನೆಯ ವರ್ಷದಲ್ಲಿ ಮದುರೆ ನಾಯಕವಂಶದ ಸ್ಥಾಪಕನೆನಿಸಿದ ವಿಶ್ವನಾಥನಾಯಕನಿರಬಹುದು. ಈತ ಅಡಪದ ಚಿನ್ನ ನಾಗಿನಾಯಕನ ಮಗ.
10. ಕೋಮಾರ ವೀರಯ್ಯ : ಕಾಲ್ದಳ 8,000; ಅಶ್ವದಳ 400; ಆನೆ 20.
11. ಬಂಕಾಪುರಾಧಿಪತಿ : ಈತನ ಹೆಸರು ಹಾಗೂ ಈತ ನಿರ್ವಹಿಸುತ್ತಿದ್ದ ಸೇನಾದಳದ ವಿವರ ಪ್ರಸ್ತಾಪಗೊಂಡಿಲ್ಲ. ಈತನ ದಳವು ಕೇವಲ ಬಹುಸಂಖ್ಯಾತರಾದ ದೊಮರು ಸಮೂಹವನ್ನು ಒಳಗೊಂಡಿದ್ದಿತೆಂದು ಸೂಚಿಸಲಾಗಿದೆ.

ಈ ಹನ್ನೊಂದು ಪ್ರಮುಖರೇ ಅಲ್ಲದೆ, ರಾಯಚೂರು ಯುದ್ಧದಲ್ಲಿ ಪಾಲ್ಗೊಳ್ಳಲು ಶ್ರೀಕೃಷ್ಣದೇವರಾಯನೊಡನೆ ಸಾಗಿದವರಲ್ಲಿ ಮಾಧವವರ್ಮ ವಂಶಜನಾದ ಕಂತಮರಾಜು ಸಿಂಗರಾಜು ಹಾಗೂ 'ಆಪತ್ಸಹಾಯಾಭಿಧಾನ ಚೋಳಮಂಡಲ ಬ್ರಾಹ್ಮಣ' ಮೊದಲಾದವರಿದ್ದರು. ರಾಯಚೂರು ದಂಡಯಾತ್ರೆಯಲ್ಲಿ ನಿತ್ಯವಸರ ವಸ್ತುಗಳನ್ನು ಸರಬರಾಜು ಮಾಡುತ್ತಿದ್ದ ವರ್ತಕರು, ಅಗಸರು, ಕ್ಷೌರಿಕರು ಮುಂತಾದ ಸೇನಾವರ್ಗದವರು; ವಿಲಾಸೀತಂಡಗಳವರು ಮೊದಲಾದವರು ಸೇರಿಕೊಂಡಿದ್ದರು.

ಒಟ್ಟಿನಲ್ಲಿ, ಒಂದು ಪ್ರಚಂಡ ಸೈನ್ಯದೊಂದಿಗೆ ರಾಯನು ರಾಯಚೂರು ಕೋಟೆಯ ಸುತ್ತಮುತ್ತಿಗೆ ಹಾಕಿದನೆಂಬುದು ಇಲ್ಲಿ ವ್ಯಕ್ತಪಡುವ ಸಂಗತಿ.[16] ಈ ಯುದ್ಧದಲ್ಲಿ ಸಹಕರಿಸಿದ ಪೆಮ್ಮಸಾನಿ ಲಿಂಗನಾಯಕ ಮತ್ತು ರಾಮಲಿಂಗ ನಾಯಕರೆಂಬ ಅಮರನಾಯಕರನ್ನು ಪ್ರಸ್ತಾಪಿಸುತ್ತದೆ ಶ್ರೀ ಕೃಷ್ಣದೇವರಾಯನ ದಿನಚರಿ (ಪು. 39).

ರಾಯಚೂರು ಯುದ್ಧದ ವಿವರಣೆ ನೀಡುವ ಫೆರಿಷ್ತಾ (ಕ್ರಿ.ಶ. 1520ರಲ್ಲಿ) ಇಸ್ಮಾಯಿಲ್ ಆದಿಲ್‌ಶಾಹನನ್ನು ಎದುರಿಸಲು ಕೃಷ್ಣಾತೀರಕ್ಕೆ ಬಂದ ಶ್ರೀಕೃಷ್ಣದೇವರಾಯನೊಡನೆ ಅಪಾರ ಸೈನ್ಯವಿದ್ದಿತು; ಅವನ ಅನೇಕ ಸಾಮಂತರು ಸಹಾ ಬಂದು ಅವನ ಜತೆಗೂಡಿದ್ದರಿಂದ ಅಪಾರ ಕಾಲ್ದಳದೊಡನೆ ಅವನ ಅಶ್ವಾಳುಗಳು ಸಂಖ್ಯೆಯೇ 50,000ದಷ್ಟಿದ್ದಿತೆನ್ನುತ್ತಾನೆ.[17] ಅಲ್ಲದೆ, ರಾಯಚೂರನ್ನು ಗೆಲ್ಲುವಲ್ಲಿ ರಾಯನೊಡನೆ ಸಹಕರಿಸಿದವರಲ್ಲಿ ಪೋರ್ಚುಗೀಸರೂ ಇದ್ದರು. ಇವರಲ್ಲಿ ಕ್ರಿಸ್ತವಾನ್–ಡಿ–ಫಿಗರೆಡೋ ಎಂಬ ಅಶ್ವ ವ್ಯಾಪಾರಿ ಪ್ರಮುಖನಾದವನು. ಇವನು ತನ್ನ 20 ಮಂದಿ ತುಪಾಕಿಯೋಧರೊಡನೆ ಈ ಯುದ್ಧದಲ್ಲಿ ಭಾಗವಹಿಸಿದನಲ್ಲದೆ ರಾಯನಿಗೆ ಅಪಾರ ಸಹಾಯ ನೀಡಿದ. ಇವರೆಲ್ಲರೂ ಸೇರಿ, ನ್ಯೂನಿಜ್ ಹೇಳುವಂತೆ, ರಾಯನ ಒಟ್ಟು ಸೇನಾಬಲವು 7,30,000 ಕಾಲ್ಬಲ, 32,600 ಅಶ್ವದಳ ಹಾಗೂ 551 ಆನೆಗಳಿಂದ ಕೂಡಿದ್ದಿತು.[18]

ರಾಯಚೂರು ದಂಡಯಾತ್ರೆಯ ಸಂದರ್ಭದಲ್ಲಿ ಶ್ರೀಕೃಷ್ಣದೇವರಾಯು ತನ್ನ ಸಂಗಡ ಒಯ್ದ ಸೇನಾಬಲದ ಬಗೆಗೆ ನ್ಯೂನಿಜ್ ಮತ್ತು ಫೆರಿಷ್ತಾ ಅವರ ವೃತ್ತಾಂತಗಳಲ್ಲಿ ವ್ಯತ್ಯಾಸವಿರುವುದನ್ನು ಇತಿಹಾಸಕಾರರು ಗುರುತಿಸುತ್ತಾರೆ. ರಾಯನು 7,30,000 ಕಾಲ್ದಳ, 32,600 ಅಶ್ವದಳ ಮತ್ತು 750 ಆನೆಗಳ ಮಹಾಸೈನ್ಯದೊಂದಿಗೆ ರಾಯಚೂರಿನ ಮುತ್ತಿಗೆಗೆ ತೆರಳಿದನೆಂದು ನ್ಯೂನಿಜ್ ಹೇಳಿದರೆ, 50,000 ಅಶ್ವಗಳು, 6 ಸಂಖ್ಯೆ ಕಾಲ್ದಳ, ಫಿರಂಗಿತುಪಾಕಿ–ಬಾಣಸಂಚಿ ಮೊದಲಾದ ಆಗ್ನೇಯಾಸ್ತ್ರಗಳೊಡನೆ ರಾಯನು ರಾಯಚೂರಿನತ್ತ ಸಾಗಿದನೆನ್ನುತ್ತಾನೆ ಫೆರಿಷ್ತಾ.[19] ಈ ವ್ಯತ್ಯಾಸಗಳನ್ನು ಸರಿದೂಗಿಸುವ ಮಟ್ಟಿಗೆ, ರಾಯವಾಚಕ ನೆರವಾಗುತ್ತದೆಂಬ ಅಭಿಪ್ರಾಯವೂ ಇದೆ.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ, ಇತಿಹಾಸಕಾರರು ನಿರೂಪಿಸುವಂತೆ ಶ್ರೀಕೃಷ್ಣದೇವರಾಯನ ಸೈನ್ಯದಲ್ಲಿ ಸಂಬಳದ ಸೈನಿಕರೆಂದೂ ಅಮರನಾಯಕರ ಬಲವೆಂದೂ ಎರಡು ರೀತಿಯ ಸೈನ್ಯಗಳಿದ್ದವು. ಸಂಬಳದ ಸೈನ್ಯದಲ್ಲಿ ಒಂದು ಲಕ್ಷ ಕಾಲ್ದಳ, 12,000 ಅಶ್ವಗಳು ಮತ್ತು 500 ಆನೆಗಳಿದ್ದರೆ, ಅಮರನಾಯಕರ ಸೈನ್ಯದಲ್ಲಿ ಎರಡು ಲಕ್ಷ ಕಾಲ್ದಳ, 24,000 ಅಶ್ವದಳ, 1,200 ಆನೆಗಳಿದ್ದವು. ಸಂಬಳದ ಮತ್ತು ಅಮರನಾಯಕರ ಸೈನ್ಯಗಳು ಸೇರಿ ರಾಯನ ಸೈನ್ಯದಲ್ಲಿ ಒಟ್ಟು ಮೂರು ಲಕ್ಷ ಕಾಲ್ದಳ, 36,000 ಅಶ್ವದಳ, 1,700 ಆನೆಗಳಿದ್ದವು. ಇದರೊಡನೆ ಹೋಲಿಸಿದರೆ ನ್ಯೂನಿಜ್ ಲೆಕ್ಕದಲ್ಲಿ ನಾಲ್ಕು ಲಕ್ಷ ಕಾಲ್ದಳ, 36,000 ಕುದುರೆ, 1,700 ಆನೆಗಳಿದ್ದವು. ನಗರದ ಲೆಕ್ಕ ಅಂದರೆ ಸರ್ಕಾರದ್ದನ್ನು ಇದರೊಂದಿಗೆ ಹೋಲಿಸಿದರೆ ನ್ಯೂನಿಜ್ ಲೆಕ್ಕದಲ್ಲಿ ನಾಲ್ಕು ಲಕ್ಷ ಕಾಲ್ದಳ ಹೆಚ್ಚು. 1,150 ಆನೆಗಳೂ 1,400 ಕುದುರೆಗಳೂ ಕಡಿಮೆಯಾಗುತ್ತವೆ. ವಾಸ್ತವ ಸಂಖ್ಯೆಯನ್ನು ನಿರ್ಧರಿಸಲು ಅಸಾಧ್ಯವಾದರೂ ರಾಯನು ಕೆಲ ಲಕ್ಷದ ಸೈನ್ಯದೊಂದಿಗೆ ರಾಯಚೂರು ದಂಡಯಾತ್ರೆಯನ್ನು ಕೈಗೊಂಡನೆಂದು ಹೇಳಬಹುದು.[20]

ಗಜಪತಿರಾಯನ ಉದಯಗಿರಿ ವಿರುದ್ಧ ಶ್ರೀಕೃಷ್ಣದೇವರಾಯನು ಕೈಗೊಂಡ ದಂಡಯಾತ್ರೆಯನ್ನು (ಕ್ರಿ.ಶ. 1513) ಇಲ್ಲಿ ಇನ್ನೊಂದು ಉದಾಹರಣೆಯಾಗಿ ನೋಡಬಹುದು. ರಾಯನು 60,000 ಶಿಂಗಾಣಿ (ಶಿಂಗ್ಗಾಣಿ) ರಾವುತರೊಂದಿಗೆ ಉದಯಗಿರಿಯತ್ತ ಸಾಗಿದುದನ್ನು ಮತ್ತು ಅಲ್ಲಿಯ ಕಣಿವೆಯಲ್ಲಿ 30,000 ಕಾಲಾಳುಗಳನ್ನು ಠಿಕಾಣಿ ಹಾಕಿಸಿದುದನ್ನು ಅರಹುತ್ತದೆ ರಾಯವಾಚಕ.[21] ಗಜಪತಿಯೊಡನೆ ಶ್ರೀಕೃಷ್ಣದೇವರಾಯನು ನಡೆಸಿದ ಯುದ್ಧಗಳು, ಭಾರತದ 16ನೇ ಶತಮಾನದ ಯುದ್ಧ ಚರಿತ್ರೆಯ ಒಂದು ಅದ್ಭುತ ಪ್ರಸಂಗವೆಂದೇ ಇತಿಹಾಸಕಾರರು ಪರಿಗಣಿಸುತ್ತಾರೆ.[22]

ಒಟ್ಟಿನಲ್ಲಿ, ಪ್ರಚಂಡ ಸೇನಾಬಲದೊಡನೆ ಪ್ರಬಲ ಸಾಮ್ರಾಜ್ಯವನ್ನು ಪಾಲಿಸಲು ಪ್ರಯತ್ನಿಸಿದವನು ಶ್ರೀಕೃಷ್ಣದೇವರಾಯ. ಸಮಕಾಲೀನ ಸಾಹಿತ್ಯಕೃತಿಗಳಾಗಲಿ, ದಾಖಲೆಗಳಾಗಲಿ, ಪ್ರವಾಸಿಗರ ಬರೆಹ ಇತ್ಯಾದಿಗಳಾಗಲಿ ರಾಯನ ಅಥವಾ ವಿಜಯನಗರದ ನಿರ್ದಿಷ್ಟ ಸೇನಾಬಲದ ಬಗೆಗೆ ಒದಗಿಸುವ ಅಂಕಿ–ಸಂಖ್ಯೆಗಳಲ್ಲಿ ಸ್ವಲ್ಪಮಟ್ಟಿನ ಏರುಪೇರಾಟ ಕಂಡು ಬರುವುದು ಸ್ಪಷ್ಟ. ಗೋಜಲೆನಿಸುವ ಈ ಸಂಖ್ಯಾವಿವರ ಕುರಿತು ಈವರೆಗೆ ಯಾವ ಇತಿಹಾಸಕಾರರಿಂದಲೂ ಸರಿಯಾಗಿ ನಿರ್ಧರಿಸಲಾಗಿಲ್ಲ; ಅಂದರೆ ಪ್ರತ್ಯೇಕ ಚರ್ಚೆ ನಡೆದಿಲ್ಲ. ಉತ್ಪ್ರೇಕ್ಷಿತ ಅಂಕಿ–ಸಂಖ್ಯೆಗಳ ಬಗೆಗೆ ಅಲ್ಪಸ್ವಲ್ಪ ಅಪಸ್ವರವಿದ್ದರೂ ವಿಜಯನಗರದ ಮಟ್ಟಿಗೆ ಅದು ಅಸಂಭವವಾದುದಾಗಿರಲಿಲ್ಲವೆಂಬ ಸಮಾಧಾನದ ವಿವರಣೆಯೂ ದೊರೆಯುತ್ತದೆ.

ಅಲ್ಲದೆ, ಶ್ರೀಕೃಷ್ಣದೇವರಾಯನು ತನ್ನ ಸೇನಾಪಡೆಯನ್ನು ಬಲಪಡಿಸುವ ನಿಟ್ಟಿನಲ್ಲಿ ನಿರಂತರವಾಗಿ ಪ್ರಯತ್ನಶೀಲನಾಗಿದ್ದನೆಂಬುದನ್ನು ಗ್ರಹಿಸಬೇಕು. ತನ್ನ ಅಪಾರ ಸೇನಾಬಲದಿಂದ ರಾಯನು ವಿಜಯನಗರದ ನೆರೆಹೊರೆಯ ರಾಜ್ಯಗಳೊಡನೆ ಸಮರ್ಥವಾಗಿ ಕಾದಿ ಯಶಗಳಿಸಿದುದನ್ನು ಚರಿತ್ರೆ ಹೇಳುತ್ತದೆ. ಶ್ರೀಕೃಷ್ಣದೇವರಾಯನಂಥಾ ಪ್ರತಿಷ್ಠಿತ ಚಕ್ರವರ್ತಿಯು ತನ್ನ ಆಡಳಿತಾವಧಿಯಲ್ಲಿ ತನ್ನ ವಿರೋಧಿಗಳ ವಿರುದ್ಧ ಕೈಗೊಂಡ ಸೈನಿಕ ಕಾರ್ಯಾಚರಣೆಯನ್ನು ಕುರಿತು ಇನ್ನಷ್ಟು ಸ್ಪಷ್ಟವಾಗಿ ನಿರೂಪಿಸುವ ಅಗತ್ಯವಿದೆಯೆನ್ನಬೇಕು.

ಟಿಪ್ಪಣಿಗಳು

1. Burton Stein, 2003, *The New Cambridge History of India - Vijayanagara,* Cambridge University Press, Cambridge, p. 58.
2. ಸಿ.ವಿ. ರಾಮಚಂದ್ರರಾವ್ (ಸಂ.), 2008, *ರಾಯವಾಚಕ* (ಕಾಶಿ ವಿಶ್ವನಾಥ ನಾಯನಯ್ಯನವರ ಸ್ಥಾನಾಪತಿಯ ಬಿನ್ನಹ) (ಕನ್ನಡಾನುವಾದ: ಗುರುಮೂರ್ತಿ ಪೆಂಡಕೂರು), ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಪು. 60.
3. ನೇಲಟೂರು ವೆಂಕಟರಮಣಯ್ಯ, 2007, *ಶ್ರೀಕೃಷ್ಣದೇವರಾಯ* (ಕನ್ನಡ ಅನುವಾದ: ಗುರುಮೂರ್ತಿ ಪೆಂಡಕೂರು), ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಪು. 86.
4. ವಿ.ಎಸ್.ಎಸ್. ಆಚಾರ್ಯ (ಸಂ.), 1983, *ಶ್ರೀಕೃಷ್ಣದೇವರಾಯನ ದಿನಚರಿ* (ಕೃಷ್ಣರಾಯರ ದಿನಚರಿಯ ಕೃತ್ಯಗಳ ವಿಸ್ತಾರ), ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ಪು. 16.
5. ರಾಬರ್ಟ್ ಸೆವೆಲ್, 2006, *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ* (ಅನುವಾದ: ಸದಾನಂದ ಕನವಳ್ಳಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 151–152.
6. *ಶ್ರೀಕೃಷ್ಣದೇವರಾಯ*, 2007, ಪು. 86, ಅಡಿಟಿಪ್ಪಣಿ 3.
7. *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ*, 2006, ಪು. 152.
8. *ಅದೇ*, ಪು. 152.
9. *ಅದೇ*, ಪು. 156.
10. *ಶ್ರೀಕೃಷ್ಣದೇವರಾಯನ ದಿನಚರಿ*, 1983, ಪು. viii, ಸಂಪಾದಕರ ನುಡಿ.
11. ಅಡಪ ರಾಮಕೃಷ್ಣರಾವ್ರ, 2003, *ಕೃಷ್ಣದೇವರಾಯ* (ಅನುವಾದ: ಪೂರ್ಣಿಮಾ ಕುಂತೂರ್), ಸಾಹಿತ್ಯ ಅಕಾಡೆಮಿ, ನವದೆಹಲಿ.
12. *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ*, 2006, ಪು. 154.
13. *ಅದೇ*, ಪು. 280–281.
14. *ಶ್ರೀಕೃಷ್ಣದೇವರಾಯನ ದಿನಚರಿ*, 1983, ಪು. 16, 17, 59.
15. *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ*, 2006, ಪು. 154.
16. *ಶ್ರೀಕೃಷ್ಣದೇವರಾಯ*, 2006, ಪು. 152–153; *ಶ್ರೀಕೃಷ್ಣದೇವರಾಯನ ದಿನಚರಿ*, 1983, ಪು. 39–40.
17. *ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ*, 2006, ಪು. 155.
18. *ಶ್ರೀಕೃಷ್ಣದೇವರಾಯ*, 2007, ಪು. 153.
19. *ಅದೇ*, ಪು. 164.
20. *ರಾಯವಾಚಕ*, 2008, ಪು. 61; *ಶ್ರೀಕೃಷ್ಣದೇವರಾಯ*, 2007, ಪು. 164–165.
21. *ರಾಯವಾಚಕ*, 2008, ಪು. 82–83.
22. *ಕೃಷ್ಣದೇವರಾಯ*, 2003, ಪು. 5.

23. ಶ್ರೀಕೃಷ್ಣದೇವರಾಯನ ಆಮುಕ್ತ ಮಾಲ್ಯದ ಕೃತಿಯಲ್ಲಿ ಜಲ ವಿಜ್ಞಾನದ ಅಂಶಗಳು

ಡಾ.ಹರಿಹರ ಶ್ರೀನಿವಾಸರಾವ್

ಶ್ರೀಕೃಷ್ಣದೇವರಾಯನ "ಆಮುಕ್ತ ಮಾಲ್ಯದ" ತೆಲುಗು ಭಾಷೆಯಲ್ಲಿ ರಚಿತವಾಗಿರುವ ಒಂದು ಆಧ್ಯಾತ್ಮ ಕೃತಿಯಾಗಿದ್ದರೂ, ಅಂದಿನ ಸಮಾಜದ ಅನೇಕ ವಿಷಯಗಳನ್ನು ವಿವರವಾಗಿ ಪ್ರಸ್ಥಾಪಿಸುತ್ತದೆ. ಹಾಗೆಯೇ ಇಂದಿಗೂ ಪ್ರಸ್ತುತವೆನಿಸಿರುವ ಜಲಾಕರಗಳ ಸ್ಥಳೀಯ ಜ್ಞಾನ, ಜಲವಿಜ್ಞಾನಗಳಿಗೆ ಸಂಬಂಧಿಸಿದಂತೆ ಬಹಳಷ್ಟು ಮಾಹಿತಿಗಳು ಈ ಕೃತಿಯಲ್ಲಿ ಕಂಡು ಬರುತ್ತವೆ. ಇದರ ಒಂದು ಸ್ಥೂಲ ನೋಟವೇ ಈ ಪ್ರಬಂಧದ ಮುಖ್ಯ ವಿಷಯವಾಗಿದೆ.


ನೀರಿನ ಬಹುವಿಧ ರೂಪಗಳು (Allotropic Forms of Water)


ಭೂಮಿಯಲ್ಲಿ ದೊರೆಯುವ ನೀರಿನ ವಿವಿಧ ರೂಪಗಳನ್ನು ಇಂದಿನ ಜಲ ವಿಜ್ಞಾನಿಗಳು ಹೀಗೆ ವಿವರಿಸಿದ್ದಾರೆ. 1) ಆಕಾಶದಲ್ಲಿಯ ಮೋಡಗಳು, ಮಿಂಚು, ಸಿಡಿಲು, ಗುಡುಗು, ಕಾಮನಬಿಲ್ಲು ಇತ್ಯಾದಿಗಳ ಆವಿಯ ವಿಭಾಗ (Evaporation). 2) ಭೂಮಿ ಮೇಲೆ ಹಿಮ, ಮಂಜುಗಡ್ಡೆ ಇತ್ಯಾದಿಗಳ ಘನ ರೂಪ (Solid Form). 3) ನದಿ, ಬಾವಿ, ಕೆರೆ, ಸರೋವರ ಇವುಗಳಲ್ಲಿ ದೊರೆಯುವ "ದ್ರವ ರೂಪ" (Liquid) 4) ಚಿಲುಮೆ ನೀರು (ಊಟೆ), ಒರತೆ ನೀರು, ತಲಪರಿಗೆ ಇತ್ಯಾದಿ, ಅಂತರ್ಜಲ (Ground Water). ಈ ಎಲ್ಲ ಅಂಶಗಳನ್ನೂ ಪ್ರಕೃತಿ ಸಹಜ ದೃಶ್ಯಗಳೊಂದಿಗೆ ಕವಿ ಸಮಯವನ್ನೂ ಬಳಸಿ ಮನೋಜ್ಞವಾಗಿ ಕೃಷ್ಣದೇವರಾಯನು ಹೇಗೆ ಚಿತ್ರಿಸಿದ್ದಾನೆ? ಎನ್ನುವುದನ್ನು ಈಗ ನೋಡೋಣ

ಜಲ ಚಕ್ರ (Hydrological Cycle)

ಸಮುದ್ರದ ನೀರು ಸೂರ್ಯನ ಕಿರಣಗಳಿಂದ ಕಾಯಿಸಲ್ಪಟ್ಟು ಆವಿಯಾಗಿ, ಆಕಾಶವನ್ನು ಸೇರಿ, ಅಲ್ಲಿರುವ ಧೂಳಿನ ಕಣಗಳ ಮೇಲೆ ಕುಳಿತಾಗ ತಕ್ಷಣ ಉಂಟಾಗುವ ಉಷ್ಣತೆಯಲ್ಲಿಯ ಬದಲಾವಣೆಯ ಪರಿಣಾಮವಾಗಿ ಮೋಡಗಳು ಉಂಟಾಗುತ್ತವೆ. ಈ ಪ್ರಕ್ರಿಯೆಯನ್ನು ಜಲ ಚಕ್ರ (Hydrological Cycle) ಎನ್ನುತ್ತಾರೆ.

ತನ್ನ ನೀರನ್ನು ಸೂರ್ಯನು ಕದ್ದುಕೊಂಡು ಹೋಗಿರುವನೆಂದು ಸಮುದ್ರನು ಧೂಳಿನ ಕಣಗಳಿಂದ ದೇವೇಂದ್ರನಿಗೆ ವಾರ್ತೆ ಕಳಿಸಿದನು. ಆ ಕಳ್ಳನನ್ನು ಶಿಕ್ಷಿಸಲು ಇಂದ್ರನು ಆಗಸದಲ್ಲಿ ಬಿಲ್ಲು ಬಾಣಗಳನ್ನು ಧರಿಸಿ ಹೊರಟಿದ್ದಾನೆ. ಸೂರ್ಯನು ತನ್ನ ಸಹಸ್ರ ಕಿರಣಗಳಿಂದ ತಾನು ಕದ್ದ ನೀರನ್ನು ಬೇಗ ಬೇಗನೆ ಸುರಿದುಬಿಟ್ಟು ಕಳವು ಮಾಡದ ನಿರ್ದೋಷಿಯಂತಾಗಬೇಕೆಂದು ಅವಸರದಿಂದ ಹೊರಟಿದ್ದಾನೆ. (ಪು.115, ಶ್ರೀಕೃಷ್ಣದೇವರಾಯನ ಆಮುಕ್ತ ಮಾಲ್ಯದ – ಅನುವಾದ : ನಿರುಪಮಾ, ಬೆಂಗಳೂರು, 1979) ಸೂರ್ಯನು ನೀರಿನೊಂದಿಗೆ ಕುಡಿದ ಮುತ್ತುಗಳನ್ನು ಪುನಃ ಉಗುಳಿ ಪದ್ಮಗಳ ಮೇಲೆ, ತಾವರೆ





ಎಲೆಗಳ ಮೇಲೆ ಹೊಸ ಮುತ್ತಿನ ಜೊತೆಗೆ ಅದನ್ನು ಸೇರಿಸಿ ಸೌಂದರ್ಯವನ್ನು ಹೆಚ್ಚಿಸಿದ್ದಾನೆ. ಕಮಲಗಳಿಗೂ ಮತ್ತು ಅವುಗಳ ಎಲೆಗಳಿಗೂ ನಡುವೆ ಇದ್ದ ಖಾಲಿ ಪ್ರದೇಶದಲ್ಲಿ ಆಗಸವು ಪ್ರತಿ ಬಿಂಬಿಸುತ್ತಿದೆ. ಆದರೆ ಈ ನೀರೇ ಆಗಸದಲ್ಲಿ ಪ್ರತಿ ಬಿಂಬದಂತೆ ತೋರುತ್ತಿದೆ. ಈ ಎರಡಕ್ಕೂ ವ್ಯತ್ಯಾಸವೇ ಕಾಣುತ್ತಿಲ್ಲ. (ಪು. 127, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಸೂರ್ಯನ ಬೇಗೆಗೆ, ಹಬೆಯ ರೂಪದಲ್ಲಿ ಆಕಾಶವೆಂಬ ಅತ್ತೆಯ ಮನೆಗೆ ಸೇರಿದ ನೀರಿನ ಹನಿಗಳು ಗರ್ಭವತಿಯರಾದ ಹೆಣ್ಣುಮಕ್ಕಳಂತೆ ಪುನಃ ಭೂಮಿಯ ತವರು ಮನೆಗೆ ಹಿಂತಿರುಗುತ್ತಿವೆ. ಗರ್ಭಿಣಿಯರಾದ ಹೆಣ್ಣು ಮಕ್ಕಳು ತವರು ಮನೆಗೆ ಬರುವುದು ಸಹಜವಲ್ಲವೆ? (ಪು.114, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979)

ನೀರ್ಗುದುರೆ (ನೀರಾವಿ)

ಪಾಟಲ ವಸುಂದಾರಾಹುರಾ, ಭಾಗಧೇಯ ಮತಮರೀಚಿಕಾಂಬು, ವರ್ಷಾಗಮಂಬು, ಧರಣಿಂಬೋಡಸೂಪೆ.... (ಪದ್ಯ 45, ಮೊದಲ ಸಾಲು, ಶ್ರೀಕೃಷ್ಣದೇವರಾಯಲ ಆಮುಕ್ತ ಮಾಲ್ಯದ– ತೆಲುಗು ಪರಿಷ್ಕರಣಮು ರಾವೂರಿ ದೊರಸ್ವಾಮಿಶರ್ಮ, ಪ್ರಕಟಣೆ: ಎಮೆಸ್ಕೋ ಬುಕ್ಸ್, ವಿಜಯವಾಡ–2009)

ಅನುವಾದ: ನದಿಯು ತಳಹತ್ತಿದ್ದರೂ ಅದರ ಮೇಲಿನ ಬಿಸಿಲಕುದುರೆ (ಮರೀಚಿಕಾಂಬು/ಆವಿ)ಯಿಂದಾಗಿ ಮಳೆಗಾಲದಲ್ಲಿ ಸುರಿವ ಮಳೆಯಂತೆ ಭಾಸವಾಗುತ್ತಿದೆ. ಹೀಗಾಗಿ ನದಿಗಳು ಸೂರ್ಯನ ಶಾಖದಿಂದಾಗಿ ನೀರು ಆವಿಯಾಗಿ ಅನೇಕ ಕವಲುಗಳಾಗಿ ಒಡೆಯತ್ತಿವೆ.

ವಿಶ್ಲೇಷಣೆ: ಒಂದೇ ಸಾಲಿನಲ್ಲಿ ಎರಡು ಋತುಗಳ ವೈರುಧ್ಯವನ್ನೂ ಬೆರೆಸಿ, ಕವಿ ಚಮತ್ಕೃತಿಯನ್ನು ಬಳಸಿ ನೀರಿನ ಗುಣಗಳನ್ನು ಮನ ಮುಟ್ಟುವಂತೆ ಹೇಳಿದ್ದಾನೆ.

ಸುಳಿ/ಸುಂಟರಗಾಳಿ (Whirl Wind)

ಸುರಗಾಲಿ ದವದಗ್ಧತರುಪರ್ಣತತಿ ರೆಂಪಂಬಾವು ರಾಲನಿ ದೆಗಪದುಪುದೂರೆ ನಿದ್ರಿತ ದುಖ್ಛಾಯನಿಲುವಕ ಜರಗವೆಂಬಡಿ ನಯಧ್ವಗಪಂಕ್ತಿ ಪಾರಲುವೆಟ್ಟೆ (ಪು. 69, ಪದ್ಯ 46, 5ನೇ ಸಾಲು, ಶ್ರೀಕೃದೇರಾ. ಆಮು.ಮಾ– ತೆ:ಪರಿ. ರಾ.ದೊ.ಸ್ವಾ.ಶ., ಪ್ರ: ಎಮೆ.ಬುಕ್ಸ್, ವಿ.ವಾ., 2009)

ಬೇಸಿಗೆಯಲ್ಲಿ ಎದ್ದ ಸುಂಟರ(ಸುಳಿ)ಗಾಳಿಗೆ ಉರಿಯುತ್ತಿರುವ ತರಗೆಲೆಗಳನ್ನು ಆಕಾಶಕ್ಕೆ ಹಾರುವಂತೆ ಮಾಡಿದೆ. ಇದನ್ನು ಕಂಡ ಹದ್ದುಗಳು ಅವು ಪಾರಿವಾಳಗಳನ್ನು ಸುಟ್ಟ ಮಾಂಸವೆಂದು ಭ್ರಮಿಸಿ ಆ ತರಗೆಲೆಗಳಸುತ್ತ ಠಳಾಯಿಸಿವೆ (ಹಾರಾಡುತ್ತಿವೆ) (ಗ್ರೀಷ್ಮ ಋತು ಬೇಸಿಗೆ, ಬಿರುಗಾಳಿ, (ಪು.72, ಶ್ರೀ ಕೃದೇರಾ. ಆಮು.ಮಾ– ತೆ:ಪರಿ. ರಾ.ದೊ.ಸ್ವಾ.ಶ., ಪ್ರ: ಎಮೆ.ಬುಕ್ಸ್, ವಿ.ವಾ., 2009) ದವಧೂಮಂ ಪುಂದಮಂಬುಲೋ ದಮರಸ ದ್ರವ್ಯಂಬುಂ ಬಂಕೆ ... (ಪು.70, ಪ. 48, ಮೊದಲನೇ ಸಾಲು, ಶ್ರೀ ಕೃದೇರಾ. ಆಮು.ಮಾ– ತೆ:ಪರಿ. ರಾ.ದೊ.ಸ್ವಾ.ಶ., ಪ್ರ: ಎಮೆ.ಬುಕ್ಸ್, ವಿ.ವಾ., 2009)

ಅನುವಾದ: ಧೂಳು ತುಂಬಿದ ಸುಂಟರಗಾಳಿ ಭೂಮಿಯಿಂದ ಪ್ರಾರಂಭವಾಗಿ ಸುರುಳಿ ಸುರುಳಿಯಾಗಿ ತನ್ನ ಎತ್ತರವನ್ನು ಆಕಾಶದ ಉದ್ದಕ್ಕೂ ಚಾಚಿದೆ.

ಪಡಮರವೆಟ್ಟು ನಯ್ಯುಡುಕು ಪ್ರಾಶನ ಮೆಲ್ಲಕ ಕೂಟೆ... ಅನು. ಪಶ್ಚಿಮದಿಂದ ಬೀಸುವಗಾಳಿ ಬಹಳ ಬಿಸಿಯಾಗಿದೆ. (ಪು.70 ಪದ್ಯ 49 ಮೊದಲಸಾಲು, ಶ್ರೀಕೃದೇರಾ. ಆಮು.ಮಾ– ತೆ:ಪರಿ. ರಾ.ದೊ.ಸ್ವಾ.ಶ., ಪ್ರ: ಎಮೆ.ಬುಕ್ಸ್, ವಿ.ವಾ., 2009).

ಹಟಾತ್ತಾಗಿ ಎದ್ದ ಸುಂಟರಗಾಳಿ ಮನೆಗಳ ಮೇಲಿನ ಸೂರು ಎದ್ದು ಹೋಗಿತ್ತು. "ಜಿಯ್ಯೋ" ಎಂದು ಸುರಿದ ಜಡಿಮಳೆಗೆ ಪಡಸಾಲೆಗಳು ಸಹಾ ನೆನೆದು ಹೋದವು (ಪು.116, ವರ್ಷಋತು ವರ್ಣನ. ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979). ಬಿರುಗಾಳಿಯೊಂದಿಗೆ ಮಳೆಯು ಧಾರಾಕಾರವಾಗಿ ಸುರಿಯತ್ತಿದ್ದಾಗ ದಾರಿಹೋಕರು ಚಲಿಸಲಾಗದ ಕಾರಣದಿಂದ ನಿರ್ವಾಹವಲ್ಲದೇ ಯಾವ ಊರಿನಲ್ಲಿದ್ದರೆ ಅದೇ ಊರಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದರು. ಅವರು

ಅತಿಥಿಗೃಹವನ್ನಾಗಲೀ, ಖಾನಾವಳಿಗಳನ್ನಾಗಲೀ, ಹುಡುಕಿಕೊಳ್ಳಲು ಅವಕಾಶವೇ ಇಲ್ಲದಾಗುತ್ತಿದೆ (ಪು.117, ಶ್ರೀಕೃದೇರಾ.ಆಮು.ಮಾ. ಕ.ಅನು: ನಿ.ಮಾ. ಬೆಂ.1979).

ವಿವರಣೆ: ಅಂದರೆ ಅಷ್ಟೂ ಬಿಡುವಿಲ್ಲದೇ ಮಳೆ ಸುರಿಯುತ್ತಿದೆ.

ಮೇಘ/ಮೋಡ

ಮೇಘಗಳು ಛಟ್ ಛಟಿಲ್ ಎಂದು ಶಬ್ದಗೈಯುತ್ತಿರಲು ಹೆದರಿದ ಭೂದೇವಿ ತನ್ನ ಪತಿಯನ್ನು ಆಲಂಗಿಸಿ ಧೈರ್ಯ ತಂದುಕೊಳ್ಳಲು ಯತ್ನಿಸಿ ಬಾಗಿದ ಕೈಗಳಂತೆ, ನದಿಗಳು ತುಂಬಿ ಉಕ್ಕುಕ್ಕಿ ಹರಿಯುತ್ತ ಅತಿ ವೇಗದಿಂದ ಸಮುದ್ರವನ್ನು ಸೇರುತ್ತಿವೆ. ಸೂರ್ಯನನ್ನು ರಾಹು ನುಂಗತೊಡಗಿದಾಗ ಅವನಿಗೆ ಭಯ ಉಂಟಾಯಿತು. ಅವನು ಆ ಭಯದಿಂದ ಕಂಪಿಸುತ್ತಾ ಮೋಡಗಳಲ್ಲಿ ಬಚ್ಚಿಟ್ಟುಕೊಂಡಂತೆ ಮಸುಕು ಮಸುಕಾಗಿ ಕಾಣುತ್ತಿದ್ದಾನೆ (Sun behind the clouds) (ಪು.118, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979). ವಿಶ್ವಕ್ಕೇ ಮುತ್ತೈದೆಯರೆನಿಸಿದ ಮೋಡಗಳು ಗರ್ಭಿಣಿಯರು ದಪ್ಪಗಿರುವುದರಿಂದ ನವಿಲುಗಳು ಕೂಗತೊಡಗಿದುವು. ಆ ಕೂಗಿನ ಹಿಂದೆ, ಗರ್ಭಿಣಿಯರೆನಿಸಿರುವ ಮೋಡಗಳಿಗೆ ಸುಖ ಪ್ರಸವವಾಗಲೆಂಬ ಹಾರೈಕೆ/ಆಶೀರ್ವಾದವಿದ್ದಂತೆ ತೋರುತ್ತದೆ.

ಸೂರ್ಯನೆಂಬ ಕುಲುಮೆಯಲ್ಲಿ ಆಕಾಶವೆಂಬ ಕೊಪ್ಪರಿಗೆಯನ್ನು ಅಳವಡಿಸಿದ ದೇವೇಂದ್ರನು ಮೇಘಗಳ ನಡುವೆ ಸಿಡಿಲುಗಳೆಂಬ ಉಕ್ಕಿನ ಜಾತಿಯ ಅಯಸ್ಕಾಂತಗಳನ್ನು, ಮಿಂಚುಗಳೆಂಬ ಕಿರಣಗಳ ಮೂಲಕ ಬಿಟ್ಟಿದ್ದರಿಂದ, ಭೂಮಿಯ ಮೇಲಿದ್ದ ಲೋಹಾಣುಗಳೆಲ್ಲವೂ ಆ ಅಯಸ್ಕಾಂತಕ್ಕೆ ಆರ್ಕಷಿಸಲ್ಪಟ್ಟು ಗುಂಪು ಗುಂಪಾಗಿ ಸೇರಿ, ಹಕ್ಕಿಗಳ ಗಾತ್ರವಾಗಿ, ಕ್ರಮೇಣ ಹದ್ದುಗಳ ಗಾತ್ರಕ್ಕೆ ತಿರುಗಿ ಮೋಡದಂತೆ ಓಡುತ್ತಿದೆ. ಮೊದಲು ಸಣ್ಣದಾಗಿದ್ದ ಮೋಡಗಳು ಈಗ ಬರುಬರುತ್ತಾದೊಡ್ಡದಾಗಿ ಮೋಡಗಳ ಆರ್ಭಟ ಕ್ಷಣ ಕ್ಷಣಕ್ಕೂ ಹೆಚ್ಚಾಗಿದೆ (ಪು.114, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979


ವಿವರಣೆ: ಈ ಮೇಲಿನ ಪದ್ಯವು ಜಲಶಾಸ್ತ್ರ ರೀತ್ಯಾ ಎರಡು ವಿಧಗಳಲ್ಲಿ ಮುಖ್ಯವೆನಿಸುತ್ತದೆ. 1) ಮೋಡಗಳಲ್ಲಿಯ ನೀರ ಹನಿಗಳಲ್ಲಿಯ ಹೆಚ್ ಮತ್ತು ಓಹೆಚ್ (ಕಣಗಳು) ಅಯಾನುಗಳು ಒಂದಕ್ಕೊಂದು ಅಯಸ್ಕಾಂತೀಯ ಪರಿಣಾಮದಿಂದಾಗಿ ಆರ್ಕಷಿಸಲ್ಪಡುತ್ತವೆ. 2) ಹೀಗೆ ಆಕರ್ಷಣೆಗೆ ಒಳಗಾದ ತೇವ ಬಿಂದುಗಳು ಒಂದಕ್ಕೊಂದು ಕೂಡಿಕೊಳ್ಳುತ್ತಾ ಹೋಗಿ ಹಕ್ಕಿ, ಹದ್ದುಗಳ ಚಿತ್ರದಂತಹ ಮೋಡದ ಆಕಾರಗಳನ್ನು ಪಡೆದು ವೃದ್ಧಿಹೊಂದಿ, ಹಕ್ಕಿಗಳಂತೆ ಒಟ್ಟಾಗಿ, ಅವುಗಳು ಹಾರಿದಂತೆ ವೇಗವಾಗಿ ಚಲಿಸುತ್ತಿವೆ.

ಕಾರ್ಮೋಡಗಳಿಂದ ಕತ್ತಲೆಯನ್ನು ಸೃಷ್ಟಿಸಿ ಹಗಲನ್ನು ರಾತ್ರಿಯನ್ನಾಗಿಯೂ, ಆ ಮೋಡಗಳ ಕತ್ತಲೆ ಭೇದಿಸುತ್ತ ಮಿಂಚನ್ನು ಸೃಷ್ಟಿಸಿ ಅದರ ಬೆಳಕಿನಿಂದ ರಾತ್ರಿಯಲ್ಲಿ ಹಗಲನ್ನೇ ಉಂಟುಮಾಡಿದ ಆ ಸೃಷ್ಟಿಕರ್ತನು ಎಂತಹ ಐಂದ್ರಜಾಲಿಕ! (ಪು.119, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979)

ಮಾನಸ ಸರೋವರದ ದಡಗಳ ಮೇಲೆ ನೇರಳೆ ಹಣ್ಣುಗಳ ನೀಲಿಯ ಬಣ್ಣವನ್ನು ಗಾಳಿಯಲ್ಲಿ ಹೊತ್ತು ತಂದ ಗಾಳಿಗೆ ಮೋಡಗಳು ತಾಗಿದೊಡನೆ ಬೆಟ್ಟಗಳ ಮೇಲೆ ಇದ್ದ ನೇರಳೆ ಹಣ್ಣುಗಳು ಕಪ್ಪು ಬಣ್ಣಕ್ಕೆ ತಿರುಗಿವೆ. ಜಾಂಬೂನದಿ(?)ಗೆ ಹೆಸರು ಬಂದಿರುವುದು ಈ ಬಣ್ಣದಿಂದಾಗಿಯೇ (ಪು.119, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979)

ಸಿಡಿಲು/ ಗುಡುಗು

ವರ್ಷಧಾರೆಗೆ ಸಿಂಹಗಳಂತಹ ಮೃಗಗಳು ಬೆಟ್ಟಗಳನ್ನು ಹತ್ತಿ ಗುಹೆಗಳಲ್ಲಿಯೇ ಇದ್ದು ಹೊರಕ್ಕೆ ಬರುತ್ತಿಲ್ಲ. ಅವು ಅಷ್ಟು ಎತ್ತರದಲ್ಲಿದ್ದು ಹಸಿವೆಯ ಕೋಪದಿಂದ ಮಾಡಿದ ಘರ್ಜನೆಯೇ ನಮಗೆ ಮೇಘಗಳ ಮೂಲದ ಕೇಳಿಸುತ್ತಿವೆಯೇನೋ? ಇಂದ್ರನು ಅವುಗಳ ಮೊರೆತವನ್ನೇ ತನ್ನ ಆಟವಾಗಿ ವಿನೋದವೆಂಬಂತೆ ಭಾವಿಸುತ್ತಿರಬಹುದೇನೋ? (ಪು.120, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979). ಒಂದು ದೊಡ್ಡ ಮಳೆ ಬಂದು ನಿಂತಿತಲ್ಲಾ ಎಂದು ಹೊರಕ್ಕೆ ಹೊರಟರೆ ಮತ್ತೆ ಇನ್ನೊಂದು ದೊಡ್ಡ ಮಳೆ ಬರುತ್ತದೆ. ಯಾವುದಾದರೂ ಮರದ ಕೆಳಗೆ ರಾಜ ಹಂಸಗಳು ಠೀವಿಯಿಂದ ನಡೆದಾಡುತ್ತಿರುವಾಗ ಗುಡುಗಿನ ಆರ್ಭಟ ಕೇಳಿ, ಹೆದರಿ ನಡುಗುತ್ತಾ ರೆಕ್ಕೆಗಳನ್ನು ಮುದುಡಿಕೊಳ್ಳುತ್ತಿವೆ. ಆ ರೆಕ್ಕೆಗಳಿಂದ




ಉದುರಿದ ನೀರಿನ ಹನಿಗಳೇ ಆಲಿ ಕಲ್ಲುಗಳಾಗಿ ನೆಲದ ಮೇಲೆ ಕಾಣಿಸುತ್ತಿವೆ (ಪು.122, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಆಲಿ ಕಲ್ಲುಗಳು (Hail Stones)

ಆಗಸವೆಂಬ ರಂಗಸ್ಥಳದಲ್ಲಿ, ತಾಳಕ್ಕೆ ನೀಲಿ ಸೀರೆಯನ್ನುಟ್ಟು ನೃತ್ಯ ಮಾಡುತ್ತಿರುವಂತೆ ಕಾಣುತ್ತಿದೆ. ಆಕೆ ಭಯಂಕರವಾದ ಗಹ್ವರ(ಧ್ವನಿ?)ದಿಂದ ಉದುರುತ್ತಿದ್ದ "ಕೆಂಡಗಳ ಉಂಡೆಯಂತೆ ಕೆಂಪಾದ ಆಲಿಕಲ್ಲುಗಳು" ನೆಲದ ಮೇಲೆ ಉದುರುತ್ತಿವೆ. (ಪು.118, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವಿವರಣೆ: ಕವಿಯು ಇಲ್ಲಿ ತಣ್ಣಗಿರುವ (ಆಲಿಕಲ್ಲು) ಮಂಜಿನ ಉಂಡೆಗಳನ್ನು ಉರಿವ ಕೆಂಡವೆಂದು ವಿರುದ್ಧವಾದ ಸಾಮಗ್ರಿಗೆ ಹೋಲಿಸಿದ್ದರೂ, ಆಕಾಶದಿಂದ ಭೂಮಿಗೆ ಬರುವಾಗ, ತಾಪಮಾನದ ತತ್‌ಕ್ಷಣದ ಕುಸಿತದಿಂದ ನೀರಹನಿಗಳು ಒಟ್ಟಾಗಿ ಘನೀಭೂತವಾಗುತ್ತವೆ. ಕೆಂಗಾಳಿಯಿಂದ ಉಂಟಾದ ಧೂಳಿನಿಂದಾಗಿ ಅವುಗಳ ಬಣ್ಣ ಕೆಂಪಾಗುವ ಸೂಕ್ಷ್ಮ ಬದಲಾವಣೆಯನ್ನು ತನ್ನದೇ ಆದ ರೀತಿಯಲ್ಲಿ ಶಬ್ದಗಳ ವರ್ಣನೆಯ ಮೂಲಕ ಕವಿ ಹೀಗೆ ದಾಖಲಿಸಿದ್ದಾನೆ.





ಕ್ಷೀರ ಸಮುದ್ರದಿಂದ ತನ್ನ ದಾಹ ತೀರಿಸಿಕೊಂಡುಬಂದ ಕಿರು ಮೋಡಗಳಿಂದ ಹಾಲು ಹಲ್ಲುಗಳಂತಹ ಆಲಿಕಲ್ಲುಗಳು ಉದುರುತ್ತಿವೆ. ಬೇಸಿಗೆಯ ಬೇಗೆಗೆ ಬಾಯಾರಿದವರು ಆ ಆಲಿಕಲ್ಲುಗಳನ್ನು ಬಾಯಲ್ಲಿ ಹಾಕಿಕೊಂಡು ಅದರ ಶೀತಲ ಸ್ಪರ್ಶದಿಂದ ಕುಣಿಯತೊಡಗಿದರು (ಪು.115, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಇಂದ್ರನು ಕಾಡು ನವಿಲುಗಳನ್ನು ಆಡಿಸಲೆಂದು ಮೇಘಗಳೆಂಬ ಮದ್ದಳೆಯನ್ನು ಎರಡೂ ಕಡೆಗೆ ಹೊಡೆಯುತ್ತಾ ಬಾರಿಸುತ್ತಿದ್ದಾನೆ. ಆತನ ಬೆರಳುಗಳ ಮಿಡಿತಕ್ಕೆ ಆ ಮೃದಂಗದ ಧರ್ಮ ಒಳಕ್ಕೂ ಹೊರಕ್ಕೂ ಚಲಿಸುತ್ತಿದೆ. ಆ ಮೃದಂಗದ ಧ್ವನಿಗೆ ತಕ್ಕಂತೆ ಮಳೆಯ ಧಾರೆಗಳು ನಾಟ್ಯವಾಡುತ್ತಿವೆ. ಅವುಗಳ ಗೆಜ್ಜೆಗಳ ನಿನಾದದಂತೆ ಆಲಿಕಲ್ಲುಗಳು ಉದುರುತ್ತಿವೆ. (ಪು.117, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).


ಮಂಜು (Mist)

ಕ್ರಮೇಣ ಬೆಳಗಿನ ಝಾವದಲ್ಲಿ ಮಂಜು ಸುರಿಯ ತೊಡಗಿತ್ತು. ಹಚ್ಚೆ ಗಿಡಗಳ ಮೇಲೆ ಮಂಜಿನ ಹನಿಗಳು ನಿಂತು ಚಂದ್ರನು ಉದುರಿಸಿ ಹೋದ ಮುತ್ತಿನ ಹನಿಗಳಂತೆ ಕಾಣುತ್ತಿವೆ. (ಪು.126, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಕಾಮನಬಿಲ್ಲು (ಇಂದ್ರ ಧನುಸ್ಸು)

ಉದಯ ಸೂರ್ಯನ ಕಿರಣಗಳು ಪ್ರತಿಯೊಂದು ಮಂಜಿನ ಹನಿಯಮೇಲೂ ಇಂದ್ರ ಧನುಸ್ಸನ್ನು ಹರಡಿ ಶೋಭಾಯಮಾನಗೊಳಿಸುತ್ತಿವೆ. (ನಕ್ಷತ್ರಗಳನ್ನು ಮಲಯಾದ್ರಿ ಎಂಬುವನು ಉಜ್ಜಿ ಉಜ್ಜಿ ಹೊಳೆಯುವಂತೆ ಮಾಡಿದ್ದಾನೆ.) ಆ ತಾರೆಗಳು ರಾತ್ರಿಯ ಹೊತ್ತಿನಲ್ಲಿ ನೀರಿನ ಮೇಲೆ ಪ್ರತಿಫಲಿಸುತ್ತಿದ್ದಾಗ ಅವು ಕೆಸರಿನ ನೀರನ್ನು ಸ್ವಚ್ಛಗೊಳಿಸುವಂತೆ ಕಾಣಿಸುತ್ತದೆ. (ಪು.126, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979)

ಅಡವಿಗಳಲ್ಲಿ, ಮಹಾಭವನಗಳಲ್ಲಿ, ಮಯೂರಗಳು ಗರಿಗೆದರಿ ನಾಟ್ಯ ಮಾಡುತ್ತಿದ್ದರೆ, ಆಗಸದಲ್ಲಿ ಕಾಮನ ಬಿಲ್ಲನ್ನು ನೋಡುತ್ತಿದ್ದರೆ ಭೂ ದೇವಿಯು ಶೀಘ್ರದಲ್ಲಿಯೇ ಹೊಸ ಸೌಂದರ್ಯವನ್ನು ಪ್ರಸವಿಸುವುದಕ್ಕೆ ಇವು ಶುಭ ಶಕುನಗಳೇ ಎಂಬಂತೆ ಅನ್ನಿಸುತ್ತದೆ (ಪು.119, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).



ಆನೆಗಳು ಮಿತಿ ಮೀರಿದ ಉತ್ಸಾಹದಿಂದ ಜಲಕ್ರೀಡೆಯಾಡುತ್ತಿವೆ. ನದಿಗಳಲ್ಲಿ, ಕೊಳಗಳಲ್ಲಿ ಇಳಿದು ಸೊಂಡಿಲಿನಿಂದ ನೀರನ್ನು ಚಿಮ್ಮುತ್ತ, ಇಂದ್ರ ಧನುಸ್ಸನ್ನೇ (ಕಾಮನ ಬಿಲ್ಲು) ಸೃಷ್ಟಿಸುತ್ತಿವೆ. (ಪು. 128, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವಿವರಣೆ: ಆನೆಗಳು ಸೊಂಡಿಲಿನಿಂದ ಮೈಮೇಲೆ ನೀರನ್ನು ರಭಸದಿಂದ ಎರಚಿಕೊಳ್ಳುತ್ತ ಇರುವಾಗ, ನೀರು ತುಂತುರು ಹನಿಗಳಾಗಿ ಅವುಗಳ ಮೂಲಕ ಹಾಯ್ದು ಹೋಗುವ ಸೂರ್ಯನ ಕಿರಣಗಳು ವಿಭಜನೆ ಹೊಂದಿ ಕಾಮನ ಬಿಲ್ಲಿನ ಬಣ್ಣಗಳು ಮೂಡುತ್ತವೆ ಎನ್ನುವ ವೈಜ್ಞಾನಿಕ ಸತ್ಯ ಕವಿಗೆ ತಿಳಿದಿತ್ತು ಎನ್ನುವುದು ಇಲ್ಲಿ ಮುಖ್ಯ ಸಂಗತಿಯಾಗಿದೆ.

ಮೋಡಗಳ ಒಡ್ಡು (ರಿಂಗಣ) (Cloud Ring Formation and its Effect on rain)

ಬ್ರಹ್ಮನು----"ಇವನು ಸೂರ್ಯನು ಸುಮದ್ರಗಳೆಲ್ಲವನ್ನೂ ಕುಡಿದು ಬಿಟ್ಟಿದ್ದಾನೆ. ಆ ನೀರೆಲ್ಲವೂ ಒಂದೇ ಸಲಕ್ಕೆ ಹೊರಕ್ಕೆ ಬಂದರೆ ಭೂಲೋಕದಲ್ಲಿ ಮಹಾಪೂರವೇ ಉಂಟಾಗುತ್ತದೆ. ಆದ್ದರಿಂದ ಕೆಲಕಾಲ ಅವನನ್ನು ಕಟ್ಟಿಹಾಕಬೇಕು" ಎಂದು ಸೂರ್ಯನ ಸುತ್ತಲೂ ವಲಯಾಕಾರವಾಗಿ ಕೋಟೆಯನ್ನು ಕಟ್ಟಿದನು. ಆ ವಲಯದ ಮೇರೆಯವರೆಗೆ ಮಳೆಗರೆಯಲು ಸಾಧ್ಯವಿಲ್ಲದಂತೆ ಮಾಡಿದನು. (ಪು.118, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವಿವರಣೆ: ಇಲ್ಲಿ ಮೋಡ, ಮಳೆ, ಹಾಗೂ ಮಹಾಪೂರದ ಬಗ್ಗೆ ಜಲಶಾಸ್ತ್ರದ ಪ್ರಾಕೃತಿಕ ವೀಕ್ಷಣೆಯ ಮಾಹಿತಿ ಇದೆ. ನಮ್ಮ ರೈತರಲ್ಲಿ ಹೀಗೆ ಸೂರ್ಯನ ಸುತ್ತ ದಟ್ಟವಾಗಿರುವ ಮೋಡದ ರಿಂಗಣವಿರುವಾಗ ಮಳೆ ಬರುವುದಿಲ್ಲ ಎನ್ನುವ ಅನುಭವದ ಹಿನ್ನೆಲೆಯಲ್ಲಿ ಇದನ್ನು ಪರಿಶೀಲಿಸಿದಾಗ ಮಳೆ ನಿಂತು ಹೋಗುತ್ತದೆ ಎಂದು ತಿಳಿಯಬಹುದಾಗಿದೆ. ಇದಕ್ಕೆ ಇರುವ ವೈಜ್ಞಾನಿಕ ಕಾರಣವೆಂದರೆ ಆ ಭಾಗದ ಮೋಡಗಳಲ್ಲಿ ನೀರಿನ ತೇವಾಂಶ ಸೂರ್ಯನ ಕಿರಣಗಳ ಉಷ್ಣತೆಯಿಂದ ತಕ್ಕಮಟ್ಟಿಗೆ ಕಡಿಮೆಯಾಗುವುದೇ ಆಗಿದೆ. ಈ ದೃಶ್ಯಗಳು ನೋಡುಗರಿಗೆ ಸಾಮಾನ್ಯವೆನಿಸಿ, ವಿಜ್ಞಾನಿಗಳು, ಕಡಿಮೆ ಸಮಯದಲ್ಲಿ ಆಗಿಹೋಗುವ ಒಂದು ಸಾಮಾನ್ಯ ಲಕ್ಷಣವೆಂದು ತಳ್ಳಿಹಾಕಬಹುದಾದರೂ, ಇಂತಹ ಪ್ರಸಂಗಗಳ ಸಹಾಯದಿಂದ ಶೇಕಡಾವಾರು ಪ್ರತಿವರುಷ ಮಳೆಯಲ್ಲಿ ಉಂಟಾಗುವ ಆಗುಹೋಗುಗಳ ಬದಲಾವಣೆ ತಿಳಿಯಲು ಉಪಯುಕ್ತವಾಗುತ್ತದೆ. ಈ ಪ್ರಕ್ರಿಯೆಯನ್ನು ನಮ್ಮ ಜಾಣ ಜನಪದರು "ಮೋಡ ಕರೆಕಟ್ಟುವುದು" ಎನ್ನುತ್ತಾರೆ.



ಋತು ಚಕ್ರ ವರ್ಣನೆ

ಋತುಗಳಲ್ಲಿ ಬದಲಾವಣೆಯಾದಾಗ ಆಯಾ ಋತುಗಳಿಗೆ ತಕ್ಕಂತೆ ಜನರ ಜೀವನ ಕ್ರಮ, ಪ್ರಾಣಿವಲಯ ಮತ್ತು ಪ್ರಾಕೃತಿಕ ಲಕ್ಷಣಗಳನ್ನು ಅನೇಕ ಕಡೆ ಚಿತ್ರಕಾವ್ಯವನ್ನಾಗಿಸಿದ್ದಾನೆ ಕೃಷ್ಣದೇವರಾಯ. ಅವುಗಳಲ್ಲಿಯ ಕೆಲವು ಶಬ್ದ ಚಮತ್ಕಾರ ಚಿತ್ರಗಳನ್ನು ಈಗ ನೋಡೋಣ.

ಗ್ರೀಷ್ಮ ಋತು (ಬೇಸಿಗೆ ಕಾಲ) (Evaporation Losses During Summer Season)

ಸೂರ್ಯನು ಒಂದೇ ಕಡೆಗೆ ನಿಲ್ಲದೇ ಆಕಾಶದ ಅಂಗಳದಲ್ಲಿ ಓಡುತ್ತಿರುವುದರಿಂದ ಮರದ ಕೆಳಗಿನ ನೆರಳು ಬದಲಾಗುತ್ತಾ ಹೋಗುತ್ತಿದೆ. ಮರಗಳ ಕೆಳಗೆ ಮಲಗಿರುವ ಹಸುಗಳು, ಅವುಗಳ ನೆರಳು ಒಂದು ಕಡೆಯಿಂದ ಇನ್ನೊಂದು ಕಡೆ ಬದಲಾವಣೆ ಹೊಂದಿದಾಗ ಪಕ್ಕಕ್ಕೆ ಸರಿದು ಮಲಗುತ್ತಿವೆ. ಅಗಸರ ಘಾಟಿನಲ್ಲಿ (ಧೋಬೀಘಾಟ್) ಒಣಗಲು ಹಾಕಿರುವ ಬಣ್ಣ ಬಣ್ಣದ ಸೀರೆಗಳಂತೆ ಆಕಾಶದಲ್ಲಿ ಬಣ್ಣಗಳು ಬದಲಾಗುತ್ತಿದೆ. ಕೆರೆಗಳಲ್ಲಿ ಪಶುಗಳು ತಾಪವನ್ನು ಕಡಿಮೆಗೊಳಿಸಿಕೊಳ್ಳುವ ಉದ್ದೇಶದಿಂದ ಹೊರಳಾಡುತ್ತಿದ್ದರೆ ಅವು ಏಳುವಷ್ಟು ಅಲ್ಪಕಾಲದಲ್ಲಿಯೇ ಆ ಕೆರೆ ಕುಂಟೆಗಳು ಬತ್ತಿಯೇ ಹೋಗುತ್ತಿವೆ. (ಪು.72, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವಿವರಣೆ: ಸೂರ್ಯನ ಕಿರಣಗಳು ಹೊರಳುವ ರೀತಿ, ಅವುಗಳ ತೀಕ್ಷ್ಣತೆ (ಬೆಳಗಿನಿಂದ ಸಂಜೆಯವರೆಗೆ) ಎಷ್ಟು ವೇಗವಾಗಿ ನೀರನ್ನು ಬಾಷ್ಪೀಕರಿಸಿ (Instantanious Evaporation Losses due to sun heat) ಕೆರೆ ಕುಂಟೆಗಳನ್ನು ಒಣಗಿಸಬಲ್ಲದೆನ್ನುದನ್ನು ಕವಿ ಇಲ್ಲಿ ಮನೋಜ್ಞವಾಗಿ ವಾಸ್ತವದ ನೆಲೆಗಟ್ಟಿನಲ್ಲಿ, ಶಬ್ದ ಕುಂಚದಿಂದ ಚಿತ್ರಿಸಿದ್ದಾನೆ. ಸಿಹಿನೀರಿನ ಕೊಳಗಳಲ್ಲಿ ನೀರು ಮೊಣಕಾಲಿನವರೆಗೆ ಇಂಗಿಹೋಗಿತ್ತು. ಹೊಳೆಯ ಸೀಮೆಯ ಜಾನಪದರು ಬೇಸಿಗೆಯಲ್ಲಿ ಹೊಳೆ(ನದಿಯಲ್ಲಿ) ದಿನ ದಿನಕ್ಕೆ ನೀರು ಬಾಷ್ಪೀಭವನಗೊಂಡು ಆಳ ಕಡಿಮೆಯಾಗುವುದನ್ನು "ಕಾಲು ಹೊಳೆ" ಎನ್ನುತ್ತಾರೆ.

ಕೊಕ್ಕರೆಗಳು ಹೊರಗಿನ ಬಿಸಿಲಿನ ತಾಪ ತಡೆಯಲಾರದೇ ಕೊಳಗಳಲ್ಲಿ ನಿಂತು ಜಪ ಮಾಡುತ್ತವೆ. ಪಾಚಿಯನ್ನು ತಿಂದು ಬಾಯಾರಿಕೆ ನೀಗಿಸಿಕೊಳ್ಳುತ್ತಿವೆ. ಏಡಿಗಳು ಒಂದು ಕಡೆಯಿಂದ ಇನ್ನೊಂದು ಕಡೆ ಚಲಿಸುತ್ತಾ ಮೀನಿನ ಮರಿಗಳನ್ನು ಹುಡುಕುತ್ತಿವೆ. ಮೀನುಗಳಾದರೋ ಕೊಳದ ಕಲ್ಲುಗಳ ಸಂದಿನಲ್ಲಿ ಅಡಗಿ ಕುಳಿತಿವೆ. ನಾಯಿಗಳು ಹಗಲು ಹೊತ್ತು ನಿದ್ರಿಸುತ್ತಾ ರಾತ್ರಿಯಲ್ಲಿ ಬೀದಿಗಳನ್ನು ಸುತ್ತುತ್ತಿರುತ್ತವೆ. . . .




ಬೇಸಿಗೆಯ ವೇಗ ತೀವ್ರವಾಗಿರುವುದರಿಂದ ಬೇಗನೇ ಬಾಡಿರುವ ದುಂಡು ಮಲ್ಲಿಗೆ ಮೊಗ್ಗುಗಳು ಸುಟ್ಟ ಗೊಂಬೆಗಳಂತೆ ನೇತಾಡುತ್ತಿವೆ. (ಪು.73, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವಿವರಣೆ: ಮೇಲ್ನೋಟಕ್ಕೆ ಕವಿ ಸಮಯದಂತೆ ಕಾಣುವ ಈ ಕೆಳಗಿನ ಚಿತ್ರಣವು ಮೊಸಳೆಗಳು ಆಹಾರಕ್ಕಾಗಿ ಪಡುವ ದಾರುಣ ರೀತಿಯನ್ನು ವಿವರಿಸುತ್ತದೆ. ಇದಕ್ಕೇನಾದರೂ ವಿಜ್ಞಾನದಲ್ಲಿ ಉಲ್ಲೇಖಗಳಿವೆಯೇ? ಎಂದು ಪರಿಶೀಲಿಸಬೇಕಾಗಿದೆ.

At night crocodoiles from ponds enter cow sheds, try to eat insects that are available in cow dung. By seeing them, thinking that they are big lizard dogs start barking loudly. After hearing the sound crocodiles , simply escape to near by wells which are dry. (Page No.203, Srikrishna Devaraaya Amukta Malyada by Srinivas Sistla, Jan.2010.Publisher Drusyakala Deepika, Vishakapatnam).

ರಾತ್ರಿಯಲ್ಲಿ ಬತ್ತಿದ ಸರೋವರಗಳಿಂದ ಎದ್ದು ಬರುವ ಮೊಸಳೆಗಳು ಪಕ್ಕದಲ್ಲಿಯೇ ಇರುವ ದನದ ಕೊಟ್ಟಿಗೆಗಳಿಗೆ ನುಗ್ಗಿ ಅಲ್ಲಿರುವ ಸಗಣಿಯ ಕುಪ್ಪೆಯಲ್ಲಿರುವ ಹುಳುಗಳನ್ನು ತಿನ್ನಲು ಪ್ರಯತ್ನಿಸುತ್ತಿವೆ. ಇದನ್ನು ಕಂಡ ನಾಯಿಗಳು ಮೊಸಳೆಗಳನ್ನು ದೊಡ್ಡ ಹಲ್ಲಿಗಳೆಂದು ಭಾವಿಸಿ ಗಟ್ಟಿಯಾಗಿ ಕೂಗಲು ಪ್ರಾರಂಭಿಸಿದಾಗ ಅವು ಕೊಟ್ಟಿಗೆಯ ಪಕ್ಕದಲ್ಲೇ ಇರುವ ಒಣಗಿದ ಬಾವಿಗಳಿಗೆ ಜಾರುತ್ತಿವೆ.

ಇಂಥಹ ದಾರುಣ ಬೇಸಿಗೆಯಲ್ಲೂ ಬೆಳಗಿನ ಜಾವ ಮಾತ್ರ ತುಂಬಾ ಚೆನ್ನಾಗಿದ್ದು ಮನಸ್ಸಿಗೆ ಸಂತೋಷವನ್ನೂ ಆಹ್ಲಾದತೆಯನ್ನೂ ಉಂಟು ಮಾಡುತ್ತಿದೆ (Refreshness in the morning, though the temperature that created havoc at night. It makes farmers to sing songs). ಇದನ್ನು ಸವಿಯುತ್ತಾ ಹೂದೋಟಗಳಲ್ಲಿ ರೈತರು ಹಾಡುಗಳನ್ನು ಹಾಡುತ್ತಾರೆ. ಒಂದೇ ಕಾಲಮಾನದ ಎರಡು ಪ್ರಕೃತಿ ವೈರುಧ್ಯಗಳ ನೇರ ಅನುಭವದ ಚಿತ್ರಣಗಳನ್ನು ಕವಿ ಸಮಯದ ಚೌಕಟ್ಟನ್ನು ಬಳಸಿ, ಸಾಮಾನ್ಯ ನೈಸರ್ಗಿಕ ಪ್ರಕ್ರಿಯೆಯನ್ನು, ಅಸಾಮಾನ್ಯ ದಾರುಣ ಹಾಗೂ ಆಹ್ಲಾದಕರ ಶಬ್ದಚಿತ್ರಗಳನ್ನು ಏಕಕಾಲಕ್ಕೆ ಓದುಗರಿಗೆ ನೀಡಿದ್ದಾನೆ ಇಲ್ಲಿ. ಹೀಗೆ ಕಾವ್ಯಾನುಭವದ ಜೊತೆ ಜೊತೆಗೆ, ಕೆಲವು ಗಂಟೆಗಳಲ್ಲಿಯೇ ಪ್ರಕೃತಿಯಲ್ಲುಂಟಾಗುವ ತೀಕ್ಷ್ಣ ಬದಲಾವಣೆಯ ಲಕ್ಷಣದ ವಿಜ್ಞಾನ ವೀಕ್ಷಣೆಯ (Sensitive Scientific Observation) ಉತ್ತಮ ದಾಖಲೆಯೂ ಇದಾಗಿದೆ ಎಂದರೆ ತಪ್ಪಾಗಲಾರದಷ್ಟೆ?

ವರ್ಷಋತು (ಮಳೆಗಾಲ)

ಮಳೆ ಹೆಚ್ಚಾದುದರಿಂದ ಹಾವುಗಳು ಹೊಸದಾಗಿ ಮಾಡಿಕೊಂಡ ಹುತ್ತಗಳಲ್ಲಿ ತೂರಿ ಬಚ್ಚಿಟ್ಟುಕೊಂಡವು. ಅವುಗಳ ಹೆಡೆಗಳು ನೆನೆಯದಂತೆ ಕೊಡೆಗಳು ಸೃಸ್ಟಿಸಲ್ಪಟ್ಟಂತೆ ಆ ಹುತ್ತಗಳ ಮೇಲೆ ನಾಯಿಕೊಡೆಗಳು ಹುಟ್ಟಿಕೊಂಡವು. ಗರುಡನ ಆಹಾರವಾದ ನಾಗರ ಹಾವುಗಳನ್ನು ಹುತ್ತಗಳ ಕೆಳಭಾಗಕ್ಕೆ ಕಳಿಸಿಬಿಟ್ಟಿದ್ದಕ್ಕಾಗಿ ಮಳೆ ದೇವತೆಯನ್ನು ಹೊಗಳುತ್ತಿರುವಂತೆ ಕಪ್ಪೆಗಳು ಇತರ ಕೀಟಗಳು ವಿಧವಿಧ ಧ್ವನಿಗಳಲ್ಲಿ ಜಯ ಜಯ ನಿನಾದ ಗೈಯುತ್ತಿವೆ (ಪು.118, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಮಳೆಗೆ ಮುನ್ನ ಕಪ್ಪೆಗಳು ಕೂಗುವ ವಿಶೇಷ ರೀತಿ ಮಳೆಯಾಗುವ ಮುನ್ಸೂಚನೆ ಎನ್ನುವ ಜಾನಪದರ ನಂಬಿಕೆಗೆ ವಿಜ್ಞಾನ ಏನು ಹೇಳುತ್ತದೆ? ಎನ್ನುವುದನ್ನು ಪರಿಶೀಲಿಸಬಹುದಾಗಿದೆ. ಅಂದರೆ ಮನುಷ್ಯನ ಮಳೆ ಹಾಡುಗಳು, ಪ್ರಾಣಿಗಳ ಧ್ವನಿ, ಇತ್ಯಾದಿ ಧ್ವನಿ ತರಂಗಗಳನ್ನು ಸೃಷ್ಟಿಸಿ ಮೋಡಗಳನ್ನು ಆಕರ್ಷಿಸಬಹುದೇ? ಎನ್ನುವುದನ್ನು ಪರಿಶೀಲಿಸಬಹುದಾಗಿದೆ. ಜಪಾನಿನಲ್ಲಿ ಅನೇಕ ಬೌದ್ಧ ಭಿಕ್ಷುಗಳು ಸೇರಿ ಸಮುದ್ರದ ದಂಡೆಯಲ್ಲಿ ಮಂತ್ರಗಳ ಮೂಲಕ ಧ್ವನಿ ತರಂಗಗಳನ್ನು ಉತ್ಪತ್ತಿಮಾಡಿ ಮಳೆ ತರಿಸಿರುವ ಉದಾಹರಣೆ ಒಂದು "ಹ್ಯಾಡೋ" ಎನ್ನುವ ಅಂತರ್‌ಜಾಲ ತಾಣದಲ್ಲಿ (HADO website) ಲಭ್ಯವಿದೆ. "ಹುಯ್ಯೋ ಹುಯ್ಯೋ ಮಳೆರಾಯ ಹೂವಿನ ತೋಟಕೆ ನೀರಿಲ್ಲ" ಮುಂತಾದ ಜನಪದ ಗೀತೆಗಳಲ್ಲಿ ಬರುವ "ಮಳೆಗಾಗಿ ಕರೆ", ದಟ್ಟ ಮೋಡಗಳಿಂದ ಆಕಾಶವು ಆವೃತವಾಗಿದ್ದರೂ ಮಳೆ ಬಾರದಿದ್ದಾಗ ಪ್ರಕೃತಿಪೂಜೆಗೂ ಇಂದಿನ ಸರ್ಕಾರಗಳೇ ಪ್ರೋತ್ಸಾಹಿಸುವ ಕ್ರಿಯೆಗಳನ್ನು ಕೇವಲ ಮೂಢನಂಬಿಕೆ ಎಂದು ಕರೆಯಬಹುದೆ? ಎಂಬ ಜಿಜ್ಞಾಸೆ ಓದುಗರಲ್ಲಿ ಮೂಡಿದರೆ ಆಶ್ಚರ್ಯವೇನಲ್ಲ.

ಒಮ್ಮೊಮ್ಮೆ ಮಳೆಗಾಲದ ಮಧ್ಯದಲ್ಲಿ ಇದ್ದಕ್ಕಿದ್ದಂತೆಯೇ ಬಿಡುವು ದೊರೆತು ಮೋಡಗಳಿಲ್ಲದ ಶುಭ್ರಆಕಾಶ ಉಂಟಾಗುವ ರೀತಿ ಹೀಗಿದೆ: ಮಳೆಗಾಲದ ಬುರುಡೆ ಮಣ್ಣಿನಿಂದ ತೊಳೆದ ಒಡವೆಗಳಂತೆ ಚಂದ್ರನು ಮಳೆಗಾಳಿಗಳಿಲ್ಲದ ರಾತ್ರಿಗಳಲ್ಲಿ ಇನ್ನಷ್ಟು ಸುಂದರನಾಗಿ ಪ್ರಕಾಶಿಸುತ್ತಿದ್ದಾನೆ (ಪು.119, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979). ಹಕ್ಕಿಗಳು ತಮ್ಮ ಗೂಡುಗಳನ್ನು ಬಿಟ್ಟು ಈಚೆಗೆ ಬರುತ್ತಿಲ್ಲ. ತಲೆಹೊರಕ್ಕೆ ಇಟ್ಟರೆ ನೆನೆಯುತ್ತದೆ. ಮೂಗು ಚಾಚಿದರೆ ನೆಗಡಿ ಬಂದಂತೆ ನೀರು ಸುರಿಯುತ್ತದೆ. ಚಳಿಗೆ ಅವುಗಳ ರೆಕ್ಕೆಗಳು ಮುದುರಿಕೊಂಡು ಹೋಗುತ್ತಿರುವುದರಿಂದ ಅವುಗಳಿಗೆ ಹಾರುವ ಶಕ್ತಿಯೂ ಕಡಿಮೆಯಾಗಿದೆ (ಪು.120, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಅಡಿಗೆ ಬೇಯಿಸಲು ಉಪಯೋಗಿಸುತ್ತಿರುವ ಕಟ್ಟಿಗೆಗಳೆಲ್ಲಾ ಮಳೆಗೆ ನೆನೆದು ಹೋಗಿರುವುದರಿಂದ ಒಲೆಗಳಲ್ಲಿನ ಬೆಕ್ಕುಗಳು ಏಳುವುದು ನಿಧಾನವಾಗಿದೆ. ಸುಕಾಲಿಗರ (ಸನ್ಯಾಸಿ?) ಹಾಗೆ ಸಂಸಾರಿಗಳಿಗೂ ಸಹ ಹೊತ್ತು ಹೊತ್ತಿಗೆ ಊಟವಿಲ್ಲ. ಗೃಹಿಣಿಯರಿಗೆ ಊರೆಲ್ಲ ಸುತ್ತಿದರೂ ಸ್ವಲ್ಪವೂ ಕೆಂಡವು ಸಿಕ್ಕುವುದಿಲ್ಲ. ಸಿಕ್ಕಷ್ಟು ಕೆಂಡ ತಂದು ಹೊತ್ತಿಸಿ ಬೆಂಕಿ ಮಾಡಬೇಕೆಂದರೆ ಒಣಗಿದ ಹುಲ್ಲೋ ಅಥವಾ ಪೊರಕೆ ಕಡ್ಡಿಗಳೋಬೇಕಾಗಿದೆ. ಅದು ಸ್ವಲ್ಪ ಹೊತ್ತಿಕೊಂಡರೂ ಸೌದೆ ಉರಿಯದೇ ಎದೆ ನೋಯುವಂತೆ ಕಣ್ಣು ಕೆಂಪಗಾಗುತಿದ್ದಂತೆಯೇ ಮೂಗಿನಲ್ಲಿ ಹೊಗೆ ತೂರುತ್ತಿದ್ದರೂ ಊದುತ್ತಲೇ ಇರಬೇಕು. ಮನೆಯ ಭಾವಣಿಗೆ ಹಾಕಿರುವ ದೂಲದ(ತೊಲೆ/ಜಂತಿ) ತುಂಡುಗಳನ್ನು ಮುರಿದು ಹಾಕದಿದ್ದರೆ ಒಲೆ ಹೊತ್ತುವುದೇ ಇಲ್ಲ. (ಪು.122, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979). ತೊಲೆಗಳು ಹಳೆಯ ಒಣಕಟ್ಟಿಗೆಯ ಭಾಗಗಳೆಂದು ಇಲ್ಲಿ ನಾವು ಅರ್ಥೈಸಿಕೊಳ್ಳಬೇಕು.

ರಾತ್ರಿಯ ಹೊತ್ತಿನಲ್ಲಿ ಹೆಂಡತಿಯರು ಗಂಡಂದಿರ ಪಕ್ಕಕ್ಕೆ ಸೇರುವ ಹೊತ್ತಿಗೆ ಬಹಳ ಹೊತ್ತಾಗುತ್ತದೆ. ಅಷ್ಟು ಹೊತ್ತಿಗಾಗಲೇ ಗಂಡಸರು ವಿರಹಾವೇಶದಿಂದ ವೀರಭದ್ರರಾಗುತ್ತಾರೆ. ಎತ್ತ ಕಡೆಗೆ ನೋಡಿದರೂ ನೀರು ಹಳ್ಳ, ಕೊಳ್ಳ, ಕುಂಟೆ, ಪಾಚಿ, ಹೊಲಕ್ಕೆ ಹೋದ ರೈತರು ಮನೆಗೆ ಬರಲಿಲ್ಲ. ಆ ಬಿರುಗಾಳಿಯ ದೇವನು ಕೊಡೆಗಳನ್ನು ಸಹಾ ಎತ್ತಿಕೊಂಡು ಹೋಗಿದ್ದಾನೆ. ಯಾವುದಾದರೂ ಗುಡಿಸಿಲಿನಲ್ಲಿ ತಲೆ ಮರೆಸಿಕೊಂಡು ಹೆಂಡತಿಯನ್ನು ನೆನಸಿಕೊಳ್ಳುತ್ತಿರುವಂತೆಯೇ ನೆನೆದುಹೋದ ದೇಹವೂ ಬೆಚ್ಚಗಾಗುತ್ತದೆ. ಆ ಬ್ರಹ್ಮನ ಕೈವಾಡ ಕಷ್ಟ ಸುಖಗಳ ಆಗರ! (ಪು.122, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ರೈತರ ಹಸಿ–ಬಿಸಿ; ಕಷ್ಟ–ಸುಖಗಳ ಅನುಭದಂತೆ ಈ ಚಿತ್ರಣವಿದ್ದರೂ ಕೇವಲ ಭಾವನಾತ್ಮಕ ಅನಿಸಿಕೆಗಳಿಂದಲೇ ದೈಹಿಕ ಪ್ರಕೃತಿಯಲ್ಲುಂಟಾಗುವ "ಜೈವಿಕ ಬದಲಾವಣೆಯ" (Bio Rythemic changes) ತೀವ್ರತೆ ಇದಲ್ಲದೇ ಮತ್ತೇನು?

ಮಳೆಯ ಭರಾಟೆ

ಒಂದು ದೊಡ್ಡ ಮಳೆ ಬಂದು ನಿಂತಿತಲ್ಲಾ ಎಂದು ಹೊರಕ್ಕೆ ಹೊರಟರೆ ಮತ್ತೆ ಇನ್ನೊಂದು ದೊಡ್ಡ ಮಳೆ ಬರುತ್ತದೆ. ಯಾವುದಾದರೂ ಮರದ ಕೆಳಗೆ ನಿಂತುಕೊಳ್ಳೋಣವೆಂದರೆ ದೊಡ್ಡ ಮಳೆಗಿಂತಾ ಆ ಮರ ತನ್ನ ಕೊಂಬೆಗಳಿಂದ ಜಡಿ ಮಳೆಯನ್ನೇ ಹೆಚ್ಚಾಗಿ ಸುರಿಸುತ್ತಿದೆ. (ಪು.122, 123. ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಹಾವುಗಳೆಲ್ಲವೂ ಹುತ್ತಗಳ ಅಡಿ ಭಾಗಗಳಲ್ಲಿ ಅಡಗಿ ಕುಳಿತಿರುವುದರಿಂದ ನವಿಲುಗಳಿಗೆ ಆಹಾರ ಇಲ್ಲವಾಯಿತು. ಆದರೂ ಅವು ಮೇಘ ಗರ್ಜನೆಗೆ ಸಂತೋಷಗೊಂಡು ನೃತ್ಯ ಮಾಡುತ್ತಿರುವುದನ್ನು ನೋಡಿದರೆ ಉತ್ಸಾಹಕರವಾದ ಕಲಾಸೃಷ್ಟಿಗೆ, ಹಸಿವೆ ನೀರಡಿಕೆಗಳು ಆತಂಕವಾಗುವುದಿಲ್ಲ ಎನ್ನುವ ಮಾತುಗಳು ನೆನಪಿಗೆ ಬರುತ್ತಿದೆ. ಮಾನವರಲ್ಲಿ ಕೆಲವರಿಗೆ ಸೂರ್ಯನನ್ನು ನೋಡದ ಹೊರತು ಊಟ ಮಾಡಬಾರದೆಂಬ ನಿಯಮ ಇದೆ. ಇನ್ನು ಕೆಲವರಿಗೆ ಸೂರ್ಯಾಸ್ತ ಮತ್ತು ರಾತ್ರಿ ಹೊತ್ತಿಗೆ ನಡುವೆ ಇರುವ ಸಂಧ್ಯಾ ಸಮಯದಲ್ಲಿ ಮಾತ್ರಾ ಊಟ ಮಾಡಬೇಕೆಂಬ ನಿಯಮ ಇದೆ (ಪ್ರಾಯಶಃ ಜೈನ ಧರ್ಮೀಯರಲ್ಲಿರುವ ಪದ್ಧತಿಯನ್ನು ನೆನಪಿಗೆ ತರುತ್ತದೆ). ಅಂತಹವರಿಗೆ ಎಷ್ಟು ದಿನ ಕಳೆದರೂ ಸೂರ್ಯನು ಕಾಣಿಸದಂತೆ ಮಳೆ ಬೀಳುತ್ತಿರುವುದರಿಂದ ಅವರಿಗೆ ಊಟವೇ ಇಲ್ಲವಾಗಿದೆ (ಪು.121, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಮೇಯುತ್ತಿದ್ದ ದನಗಳಿಗೆ ತಮ್ಮ ಕರುಗಳ ನೆನಪಾಗಿ ಮೊಲೆಗಳು ತುಂಬಿ ಹಾಲು ಉಕ್ಕುತ್ತಿದೆ. ಆದರೆ ಉಣಿಸಲು ಹತ್ತಿರ ಕರುಗಳು ಇಲ್ಲ. ಹಾಗೆಯೇ ದಡದ ಉದ್ದಕ್ಕೂ ಉಕ್ಕಿ ಹರಿಯುತ್ತಿದ್ದ ಸಿಹಿಯಾದ ನೀರನ್ನು ಕುಡಿಯುವವರು ಯಾರೂ ಇಲ್ಲವಲ್ಲಾ ! ಎಂದು ನದಿಗಳು ಯೋಚಿಸುತ್ತಿವೆ. (ಪು.130, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979). ಕೆಸರೆಲ್ಲ ಮಾಯವಾದ ತಿಳಿನೀರಿನ ಮೇಲೆ ಕಮಲದ ಕೇಸರಗಳು ಉದುರಿ ತೇಲುತ್ತಿವೆ. ಥಳಥಳ ಹೊಳೆಯುತ್ತ ನರ್ತಿಸುವ ಮೀನುಗಳು ತಿಳಿ ನೀರಿನಲ್ಲಿ ಜೊಂಡು ಸಹ ಸುಂದರವಾಗಿ ಕಾಣುವಂತೆ ಮಾಡುತ್ತಿವೆ. (ಪು.130, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಸಂಧ್ಯಾವಂದನೆ ಮಾಡುವ ಬ್ರಾಹಣರಿಗೆ, ಮನೆಗಳಿಗೆ ಹಿಂತಿರುಗಿ ಬರುವ ದನಗಳಿಗೆ, ಎಷ್ಟು (ಮೋಡ ಕವಿದಿರುವುದರಿಂದ) ಹೊತ್ತಾಗಿದೆ ಎನ್ನುವ ಅರಿವೇ ಇಲ್ಲದಾಗಿದೆ. ನೇಗಿಲು ಹಿಡಿಯುವ ರೈತರಿಗೆ ನೇಗಿಲಿ ನಂತೆ, ದನಗಳಿಗೂ ರಜೆ ಬಂದಿದೆ. ಪ್ರತಿ ವಾರವೂ ಒಂದೊಂದು ಕಡೆ ನಡೆಯುವ ಸಂತೆಗಳು, ದನಗಳ ಗುಂಪಿಗೆ ಬೇಕಾದ ಮೇವು ಇಲ್ಲವಾಗಿದೆ. ಮಣ್ಣಿನ ಛಾವಣಿಯುಳ್ಳ ಮನೆಗಳಲ್ಲಿ ನೀರು ಇಂಗಿ ತೊಟ್ಟಿಕ್ಕುತ್ತಿರುವುದರಿಂದ ನವ ದಂಪತಿಗಳಿಗೆ ಸಹ ಸಂಸಾರಸುಖ ನಿದ್ರೆ ಇಲ್ಲವಾಗಿದೆ. (ಪು.121, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಸೊಂಪಾಗಿ ಬೆಳೆದ ಭತ್ತದ ಗದ್ದೆಗಳನ್ನೂ, ಇತರ ಸಸ್ಯಗಳನ್ನೂ ನೋಡಿದ ರೈತರು ಹೊಟ್ಟೆ ತುಂಬಿದಂತೆ ಸಂತೋಷಪಡುತ್ತ ಕಳೆ ಕೀಳುತ್ತಿದ್ದಾರೆ. ಅವರ ಕಾಲುಗಳು ಕೆಸರಿನಲ್ಲಿ ನಡೆದಾಡಿದ್ದರಿಂದ ಕಾಲಿನ ಸುತ್ತಲೂ ಗುಳ್ಳೆಗಳು ಏಳುತ್ತವೆ. ಅವುಗಳನ್ನು ನೋಡಿದಾಗ "ನಾವು ಮಣ್ಣಿನಿಂದ ಮಾಣಿಕ್ಯ ಬೇಳೆಯಬಲ್ಲೆವು" ಎನಿಸುತ್ತದೆ. (ಪು.121, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979). ಬಹಳ ಜನರು ಊರು ಮುಂದಿನ ಕಟ್ಟೆಗಳ ಮೇಲೆ ಹುಲಿ ಮೇಕೆ ಆಟಗಳನ್ನೂ, ಆನೆ ಕುದುರೆ ಆಟಗಳನ್ನು ಆಡುತ್ತಾ ಕಾಲ ಕಳೆಯುವುದು ವಾಡಿಕೆ. ಆದರೆ ಮಳೆಗಾಲ ಬಂದ ಕೂಡಲೇ ತಲೆಗೊಂದು ಕೆಲಸದ ನೆಪಹೇಳಿ ಆ ರಾಜ, ಮಂತ್ರಿ, ಆನೆ, ಕುದುರೆ, ಹುಲಿ, ಮೇಕೆಗಳನ್ನು ಒಂದೊಂದು ಕಡೆಗೆ ಎಸೆದು ಹೊರಟು ಹೋಗುತ್ತಾರೆ. ಈ ಕಾಲದಲ್ಲಿ ಹೊಲಗಳ, ಗದ್ದೆ ಬದುಗಳಲ್ಲಿ, ಕೆರೆ ಕಟ್ಟೆಗಳ ಸಂದಿನಲ್ಲಿ ಬೆಳೆಯುವ ಎಲೆ ಸೊಪ್ಪುಗಳ ಜೊತೆಗೆ ಹುಣಿಸೆ ಚಿಗುರನ್ನೂ ಬೆರೆಸಿ ಹುರಿದು ಅಡಿಗೆ ಮಾಡುತ್ತಾರೆ (ಪು.123, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವಿವರಣೆ: ಬೇಸಗೆಯಲ್ಲಿ ಚಿಗುರವ ಹುಣಸೆ ಮರದ ಸೊಪ್ಪು ಹಂಪಿ ಹೊಸಪೇಟೆಯ ಭಾಗದಲ್ಲಿ ಮಾಡುವ ಮುದ್ದಿಪಲ್ಯೆಯ ಅಡಿಗೆಯ ವಿಶೇಷ. ಅದನ್ನು ಬಿಸಿಲಿನಲ್ಲಿ ಒಣಗಿಸಿ ಕೆಡದಂತೆ ರಕ್ಷಿಸಿ ಮಳೆಗಾಲದಲ್ಲಿ ಬಳಸುವ ರುಚಿ ಇನ್ನೊಂದು ವಿಶೇಷ. ಇದು ಇಂದಿಗೂ ಉಪಯೋಗದಲ್ಲಿರುವ, ಸೌರ ಶಕ್ತಿಯ (Solar Energy) ಸೂಕ್ಷ್ಮ, ದುಡ್ಡಿನ ಖರ್ಚೇ (Zero Economy) ಇಲ್ಲದ, ಅತ್ಯಂತ ಉತ್ಕೃಷ್ಟ (Optimum utility) ಆಹಾರ ಪದ್ಧತಿಗೊಂದು ವಿಶಿಷ್ಟ ಉತ್ತಮ ಉದಾಹರಣೆ.

ಶರದೃತು (ಚಳಿಗಾಲ)


ಕ್ರಮೇಣವಾಗಿ ಮಳೆಗಾಲದ ಆರ್ಭಟ ಕಡಿಮೆಯಾಯಿತು. ಮಳೆ ನಿಂತು ಹೋಯಿತು. ಶರದೃತು ಪ್ರಾರಂಭವಾಯಿತು. ಹವಾಮಾನ ಮತ್ತು ಆಕಾಶದಲ್ಲಿ ಅನೇಕ ಬದಲಾವಣೆಗಳಿವು. ಆಗಸದಲ್ಲಿ ಕಪ್ಪು ಮೋಡಗಳು ತೊಲಗಿ ಬಿಳಿಯ ಮೋಡಗಳು ರಾಜ ಹಂಸಗಳ ಜೊತೆ ಮೆಲ್ಲನೆ ನಡೆದಾಡತೊಡಗಿದವು. ಭೂಮಿಯ ಮೇಲೆ ಹುಲ್ಲು ಪೈರುಗಳಲ್ಲಿಯ ಹಸಿರು ಹೆಚ್ಚಾಗಿ ಪಾಚಿಯ ಬಣ್ಣಕ್ಕೆ ತಿರುಗಿ, ಪ್ರಕೃತಿ ಮಾತೆಯು ಪ್ರಸವ ವೇದನೆಯನ್ನು ಮುಗಿಸಿ ಪ್ರವರ್ಧಮಾನಕ್ಕೆ ಬರುವ ಮಕ್ಕಳಂತೆ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿವೆ. (ಪು.125, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವಿವರಣೆ: ಮಳೆಗಾಲದಲ್ಲಿ ನೀರುಂಡು ಹುಟ್ಟಿ ಬೆಳೆದ ಸಸ್ಯಗಳ ಎಲೆಗಳು ಬೆಳೆ ಹಸಿರು/ತಿಳಿ ಹಳದಿ ಬಣ್ಣ ಹೊಂದಿದ್ದು ನಂತರ ಶರದೃತುವಿನಲ್ಲಿ ಹೆಚ್ಚಾಗಿ ದೊರೆಯುವ ಬಿಸಿಲನ್ನು ಬಳಸಿಕೊಂಡು ಆಹಾರ ಉತ್ಪಾದನೆ ಮಾಡುವ "ಫೋಟೋಸಿಂಥಿಸಿಸ್ ಕ್ರಿಯೆಯಿಂದಾಗಿ" ಕಡುಹಸಿರು ಬಣ್ಣಕ್ಕೆ ತಿರುಗಿದ್ದನ್ನು ಇಲ್ಲಿ ಗುರುತಿಸಬಹುದಾಗಿದೆ.

ಸೂರ್ಯ, ಚಂದ್ರ ಇಬ್ಬರೂ "ಶರತ್" ಎಂಬ ಯುವತಿಗೆ ಬಣ್ಣ ಮತು ಕಾಂತಿಗಳನ್ನು ಕೊಟ್ಟಂತೆ ಇದೆ. ಇಬ್ಬರೂ ಸ್ವಯಂ ಪ್ರಕಾಶಿತರಾಗಿದ್ದರೂ ಸೂರ್ಯನ ಕಾಂತಿಯಲ್ಲಿ ತಾಪವಿಲ್ಲ. ಚಂದ್ರನ ಕಾಂತಿಗೆ ಸಮಾನವಾಗಿದೆ. ಈ ಇಬ್ಬರೂ ಒಂದೇ ಕೆಲಸದಲ್ಲಿ (ಪ್ರಕಾಶಿಸುವುದು) ನಿರತರಾಗಿ ಅವರ ಮೂಲ ಗುಣಗಳೇ ಆದ ಸ್ವಧರ್ಮಪಾಲನೆ ಹಾಗೂ ಇಬ್ಬರ ನಡುವೆ ನಿರಂತರವಾಗಿ ನಡೆಯಬೇಕಾಗಿರುವ ಸ್ಪರ್ಧೆಯನ್ನೇ ಮರೆತಂತೆ ಕಾಣುತ್ತಿದೆ. ಹೀಗಾಗಿ ಅವರಿಬ್ಬರಿಂದ ಹೊರ ಹೊಮ್ಮುತ್ತಿರುವ ಕಾಂತಿಯು ಬಿಳಿ ಬೂದಿಯಂತಿದೆ. (ಪು.126, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಸೂರ್ಯನ ಉಷ್ಣತೆ ಈ ಕಾಲದಲ್ಲಿ ಕಡಿಮೆಯಾಗುವುದಕ್ಕೆ ಕಾರಣ ಆತನು ಭೂಮಿಯ ಕಕ್ಷೆಯಿಂದ ದೂರ ಚಲಿಸುತ್ತಾ ಹೋಗುವುದು. ಆದರೆ ಶುದ್ಧನೀಲಾಕಾಶದಲ್ಲಿ ಭೂ ಚಲನೆಗೆ ಹತ್ತಿರವಿರುವುದರಿಂದ ಚಂದ್ರನಿಂದ ಪ್ರತಿಫಲಿತವಾಗುವ ಉಷ್ಣವು ಮೋಡಗಳ ಅಡೆ ತಡೆಗಳಿಲ್ಲದೆ ಇರುವುರಿಂದ ಮನುಷ್ಯನಿಗೆ ಹಿತಕರ ಅನುಭವ ನೀಡುತ್ತದೆ. ಹೀಗಾಗಿ ಭೂಮಿಗೆ ಬರುವ ಉಷ್ಣತೆಯಲ್ಲಿ ಹೆಚ್ಚಾದ ವ್ಯತ್ಯಾಸ ಕಂಡು ಬರುವುದಿಲ್ಲ. ಇದರಿಂದಾಗಿ ಅವರಿಬ್ಬರಲ್ಲಿ ಸಹಜವಾಗಿ ಕಂಡುಬರುತ್ತಿದ್ದ ಸ್ಪರ್ಧೆಯೇ ಇಲ್ಲವಾಗಿದೆ. ಉಷ್ಣತೆಯಷ್ಟೇ ಅಲ್ಲ; ಬೆಳಕು ಕೂಡಾ ಒಂದೇ ತೆರನಾಗಿರುವುದರಿಂದ ಕವಿ ಕಲ್ಪನೆಯಲ್ಲಿ ಅದು ಅವರಿಬ್ಬರ ಮಧ್ಯೆ ನಡೆದ ಹೋರಾಟದ ಪರಿಣಾಮವಾಗಿ ಸುಟ್ಟ ಬಿಳಿ ಬೂದಿಯಂತೆ ಆಗಿಹೋಗಿದೆ. ಆಶ್ವೀಜಮಾಸವು ಹೊರಟು ಹೋಯಿತು. ಸೂರ್ಯ ಚಂದ್ರರು ಆಗಸದಲ್ಲಿ ಸ್ವಚ್ಛಂದವಾಗಿ ಪ್ರಕಾಶಿಸುತ್ತಿದ್ದರು. (ಪು.125, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವಿವರಣೆ: ಇದನ್ನು "ಮಾಗಿಕಾಲ"ವೆಂತಲೂ ಕರೆಯುವುದು ರೂಢಿಯಲ್ಲಿದೆ. ಇಂತಹ ವಾತಾವರಣದಲ್ಲಿಯೇ ತಾಳೆ, ಸೀತಾಫಲದ ಹಣ್ಣುಗಳು ಸೃಷ್ಟಿಯಾಗುವುದರಿಂದ ಅವುಗಳ ಸ್ವಾದವು ಹೆಚ್ಚು ರುಚಿಕರವಾಗಿರುತ್ತವೆ. ದೇವತೆಗಳು ನಿತ್ಯಾಗ್ನಿಹೋತ್ರಕ್ಕಾಗಿ, ಸೂರ್ಯನ ಕಿರಣಗಳೆಂಬ ದರ್ಬೆಯನ್ನು ಉಪಯೋಗಿಸುತ್ತಿದ್ದಾರೆ. ಆದುದರಿಂದಲೇ ಸೂರ್ಯನ ಪ್ರಖರತೆ ಕಡಿಮೆಯಾಗಿ ಕೇದಿಗೆ ಎಸಳಿನಂತಹ ಬಿಸಿಲಿನೆಳೆಗಳು ಮಾತ್ರ ವಿಶ್ವದೆಲ್ಲೆಡೆಯಲ್ಲಿ ವ್ಯಾಪಿಸಿದೆ. (ಪು.129, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).



ವಿವರಣೆ: ಮಳೆಗಾಲದಲ್ಲಿ ನೀರುಂಡು ಸೊಂಪಾಗಿ ಬೆಳೆದ ಭತ್ತವು ತನ್ನ ಜೀವನ ಕ್ರಮದ ಕೊನೆಯ ಘಟ್ಟವಾದ ತೆನೆಯಾಗಿ ರೂಪುಗೊಂಡು, ಹಾಲು ತುಂಬಿ ಹಸಿರಾಗಿದ್ದ ತೆನೆಗಳು ಉತ್ಕೃಷ್ಟ ಬೊಂಬಣ್ಣದ ತೆನೆಗಳಾಗಿ ಬಾಗಿ ಬಳುಕುತ್ತಿವೆ. ಇದು ಭತ್ತದ ಗದ್ದೆಗಳು ಕೊಯ್ಯುವ ಕಾಲವನ್ನು ಸೂಚಿಸುತ್ತದೆ. ಧಾನ್ಯದ ರಾಶಿಗಳು ಸ್ವಚ್ಛ ನೀಲಿ ಆಕಾಶದ ಕೆಳಗೆ ಬೆಟ್ಟಗಳಂತೆ ಕಾಣಿಸುತ್ತಿವೆ. ವಿಶ್ವಾಮಿತ್ರನ ಯಾಗದಂತಹ ಬೇಸಿಗೆ, ಮುಂಗಾರು ಬಿತ್ತನೆ ನಡೆದಿತ್ತು. ಮಳೆ, ಗಾಳಿ, ರಾಮ ಲಕ್ಷಣರಂತೆ ಬಂದವು. ಶರತ್ಕಾಲದಲ್ಲಿ ರಾಮನು ಶಿವಧನುಸ್ಸನ್ನು ಎತ್ತಿಹಿಡಿದನು.

ಇನ್ನು ಸೀತೆಯೆಂಬ ಭೂದೇವಿ ಮನಃಪೂರ್ವಕವಾಗಿ ಉಕ್ಕದೇ ಏನು ಮಾಡುತ್ತಾಳೆ?: ಎಳೆ ಮಕ್ಕಳು, ಮುದುಕರು, ಬೆಳಗಿನ ಹೊತ್ತಿನಲ್ಲಿ ಬೆಂಕಿ ಕಾಯಿಸಿಕೊಳ್ಳುತ್ತಿರುತ್ತಾರೆ. (ಪು.129, 130, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979)


ಜಲಕ್ರೀಡೆ

ಸಮುದ್ರದಿಂದ ತಂಗಾಳಿ, ಸಿಹಿಯಾದ ನೀರನ್ನು ಸಾಲವಾಗಿ ತೆಗೆದುಕೊಂಡಂತೆ ಸೂರ್ಯ, ಚಂದ್ರರು ಈ ಸಾಲವನ್ನೆಲ್ಲಾ ತೀರಿಸಿ ಬಿಟ್ಟರು. ಆ ಸಾಲದ ಜೊತೆಗೆ ಬಡ್ಡಿಯಂತೆ ಸುಂದರ ವಾತಾವರಣ ಎಂಬ ಒಡವೆಗಳನ್ನೂ ಕೊಟ್ಟರು. ಸಾಲ ತೀರಿತೆಂಬ ತೃಪ್ತಿಯಿಂದ ಅವರು ನಿಶ್ಚಿಂತೆಯಾಗಿ ತಣ್ಣಗೆ ಜೀವನ ಯಾತ್ರೆ ಸಾಗಿಸತೊಡಗಿದ್ದಾರೆ. ವಿಷ್ಣುವು ಹಾಲಿನ ಸಮುದ್ರದ ಮಧ್ಯದಿಂದ ಆಗಸವನ್ನು ನೋಡಿ ಅದರ ಈಚೆಗೆ ಇದ್ದ ಕೊಳದ ನೀರಿನ ಪರಿಶುಭ್ರತೆಯನ್ನು ಗಮನಿಸಿ ಲಕ್ಷ್ಮಿಯೊಂದಿಗೆ ಕೈಗೆ ಕೈ ಹಿಡಿದು, ಜಲಕ್ರೀಡೆಯಾಡತೊಡಗಿದ್ದಾನೆ. (ಪು.128, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ನದಿ ಕಾಲುವೆಗಳಲ್ಲಿ ಹರಿವ ನೀರಿನ ಬಣ್ಣ ಮತ್ತು ಅದರ ಭೌತ ಗುಣ. (Sediment Water and its qualities in Non Monsoon Period)

ಆಗಸದಲ್ಲಿಯ ಮೋಡಗಳ ಬಣ್ಣಗಳೆಲ್ಲವೂ ಅವುಗಳು ಇದ್ದಹಾಗೆಯೇ ಪ್ರತಿಫಲನ ಹೊಂದುವಂತೆ ಮಾಡುತ್ತಿರುವ ಕನ್ನಡಿಗಳಂತೆ ನದಿ ಕಾಲುವೆಗಳಲ್ಲಿರುವ ನೀರು ತುಂಬಿ ಹರಿಯುತ್ತಲಿವೆ. ಆ ಪ್ರವಾಹದ ಹರಿವು ಹೇಗಿದೆ ಎಂದರೆ ರಾಜ ಹಂಸಗಳಿಗೆ ನಡಿಗೆಯನ್ನು ಹೇಳಿ ಕೊಡುತ್ತಿರುವಷ್ಟು ಮಂದವಾಗಿದೆ. ಇಷ್ಟಾಗಿಯೂ ಆ ಪ್ರವಾಹದ ನೀರಿನಲ್ಲಿರುವ ಮಳೆಗಾಲದ ಕೆಸರಿನ ಬಣ್ಣವಿನ್ನೂ ಮಾಸಿಲ್ಲ. (ಪು.125, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವಿವರಣೆ: ಈ ವರ್ಣನೆಯಲ್ಲಿ ಮಳೆಗಾಲದ ನಂತರದ ನೀರಿನ ಹರಿವು, ಅದರಲ್ಲಿಯೇ ಇರುವ ಕೆಸರಿನ (Sediment Particles) ಅಂಶಗಳು ಸ್ಪಷ್ಟವಾಗಿ ದಾಖಲಾಗಿರುವುದನ್ನು ಗಮನಿಸಬಹುದು. ಮಳೆಗಾಲದಲ್ಲಿ ಅತ್ಯಂತ ರಭಸದಿಂದ (with high velocity and discharge) ಹರಿಯುತ್ತಿದ್ದ ನೀರು ಈಗ ಕಡಿಮೆ ವೇಗದಿಂದ ಹರಿಯುತ್ತಿದೆ ಎನ್ನುವ ಸೂಚನೆಯೂ ಇಲ್ಲಿದೆ. ಆ ಕೆಸರು ಬಣ್ಣದ ನೀರನ್ನು ಪ್ರಜೆಗಳು ತಂದುಕೊಂಡು, ತಿಳಿಯಾಗಲು ಬಿಟ್ಟು ನಂತರ ಶೋಧಿಸಿ ಕೊಂಡು ಉಪಯೋಗಿಸುತ್ತಿದ್ದಾರೆ. (ಪು.134, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).





ವಿವರಣೆ: ರಾಡಿನೀರು ಆರೋಗ್ಯಕ್ಕೆ ಹಾನಿಕರ. ಅದನ್ನು ತಿಳಿಯಾಗಲು ಬಿಟ್ಟರೆ, ನೀರಿಗಿಂತ ಹೆಚ್ಚು ಸಾಂದ್ರತೆಯಿರುವುದರಿಂದ ಮಣ್ಣಿನ ಕಣಗಳು ಕೆಳಗೆಬಂದು ಸಂಗ್ರಹವಾಗುವುದರಿಂದ ತಿಳಿಯಾಗಿ ನಿಂತ ಮೇಲ್ಮೈಪದರದ ನೀರನ್ನು ಸುಲಭವಾಗಿ ಶೋಧಿಸಿ ತೆಗೆಯಬಹುದು. ಇಂದು ನಾವು ಭೌತ ಜಲವಿಜ್ಞಾನದ ಮೂಲ ನಿಯಮವೆಂದು ಪರಿಗಣಿಸಿರುವ ರಾಡಿ ತಿಳಿಗೊಳಿಸುವ (Sedimentation Process) ಸೂತ್ರಗಳನ್ನು ಹಿಂದಿನವರು ಈ ಕಾವ್ಯದ ಪ್ರಕಾರ ಸುಮಾರು 500 ವರ್ಷಗಳಷ್ಟು ಹಿಂದೆಯೇ ಬಳಸಿರುವುದರ ದಾಖಲೆ ಎಂದು ಸಾಮಾನ್ಯ ಓದುಗರೂ ಗಮನಿಸಬೇಕಾದ ಅಂಶವಾಗಿದೆ. ವೈಜ್ಞಾನಿಕವಾಗಿ ಮುನಿಪಾಲಿಟಿಯವರು ನಮಗೆ ದಿನವೂ ಕುಡಿಯಲು ಒದಗಿಸುತ್ತಿರುವ ನೀರಿನ ಶುದ್ಧೀಕರಣದ ಮೊಟ್ಟಮೊದಲ ತಂತ್ರಜ್ಞಾನವೇ ಇದಾಗಿದೆ. ರಾಡಿನೀರು ಕುಡಿಯುವುದರಿಂದಾಗಿಯೇ ಡಯೇರಿಯಾ ಅಥವಾ ವಾಂತಿ ಭೇದಿ ಮುಂತಾದ ಸಾಂಕ್ರಾಮಿಕ ರೋಗಗಳು ಸುಲಭವಾಗಿ ಹಬ್ಬುತ್ತವೆ ಎನ್ನುವುದು ಈಗ ಜನಸಾಮಾನ್ಯರಿಗೂ ತಿಳಿದ ವಿಷಯವೇ ಆಗಿದೆ.

ಸಂಘುಯಂತ್ರ (ಘಟೀ = ಕಪಿಲೆ ಯಂತ್ರ)

ತೊರೆಗಳು ಬತ್ತಿ, ಅದರ ಅಡಿಯಲ್ಲಿದ್ದ ಪಾಚಿ ಮತ್ತು ಮರಳು ಹಾಗೂ ಕೆಸರು ಸೀಳಿಕೊಂಡು ಗಟ್ಟಿಯಾಗಿವೆ. ಬಾವಿಗಳಲ್ಲಿಯ ನೀರು ಕಡಿಮೆಯಾದುದರಿಂದ ಸೊಪ್ಪಿನ ಪಾತಿಗಳಿಗೆ, ಹೂ ಗಿಡಗಳಿಗೆ "ಕಪಿಲೆಯ" ಮೂಲಕ ನೀರು ಸೇದಬೇಕಾಗಿ ಬಂದಿದೆ (ಪು.72, ಶ್ರೀಕೃ.ದೇರಾ. ಆಮು.ಮಾ ಕ.ಅನು: ನಿಮಾ. ಬೆಂ.1979).

ತೆಲುಗು ಪದ್ಯ


ಪ್ರಾತರ್‌ವೇಳಲನಟ್ಟವೆಟ್ಟ ಸೊಗಸೈವಾಟಿಲ್ಲೆ, ಗುಂಭೋಂಭವೋದ್ಭೂತಾ(ಅ)ಂಬುಧ್ವನಿವಾದ್ಯಮ್ಮೈ, ಮರದದಃ, ಪುಂಜೀಭವತ್ಪಾಟಲ, ವ್ರಾತಾಮ್ರೇಡಿತಸಿಕ್ತ, ಭೂಸುರ ಭಿಳಾರೀ, ಕಾಮಾಂಬು ಕಾಲ್ಯಾ, ಬಹಾಂಪ್ರೋತಸ್ಸಂಘುಲ"ಸಂಘುಯಂತ್ರ" (ಅ)ನತಿಕೃತ್ಪೋದ್ಗೀತ, ಗೇಯೌ (ಔ) ಘಮುಲು (ಪು.71. ಪದ್ಯ, 55 ಶ್ರೀಕೃಷ್ಣ ದೇವರಾಯಲ ಆಮುಕ್ತ ಮಾಲ್ಯದ-ತೆಲುಗು ಪರಿಷ್ಕರಣಮು ರಾವೂರಿ ದೊರಸ್ವಾಮಿಶರ್ಮ, ಪ್ರಕಟಣೆ: ಎಮೆಸ್ಕೋ ಬುಕ್ಸ್, ವಿಜಯವಾಡ)


ಭಾವಾನುವಾದ: ಬೆಳಗಿನಲ್ಲಿ ಸೊಗಸಾಗಿ ನುಡಿಸಲಾಗುವ ಧ್ವನಿವಾದ್ಯದಂತೆ ಕೇಳಿಬರುತ್ತಿರುವ (ಸರಣಿ) ಗಡಿಗೆಗಳಿಂದ ಸುರಿಯಲ್ಪಡುವ ನೀರಿನ ನಿನಾದ, ಗೀತ ಗೇಯದಂತಿದೆ.

ವಿವರಣೆ: ಸಂಘು ಯಂತ್ರ ಅಥವಾ ಘಟೀ ಯಂತ್ರದ ಉಲ್ಲೇಖಗಳು ಕೃಷ್ಣದೇವರಾಯನು ಆಮುಕ್ತ ಮಾಲ್ಯದ ಗ್ರಂಥವನ್ನು ರಚಿಸುವುದಕ್ಕೆ ಅನೇಕ ಶತಮಾನಗಳಷ್ಟು ಹಿಂದೆಯೇ ಅನೇಕ ಶಾಸನ ಮತ್ತು ಕಾವ್ಯಗಳಲ್ಲಿ ಕಂಡುಬರುತ್ತದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಾಸಂಗಿಕವಾಗಿ ಉದಾಹರಿಸಲಾಗಿದೆ.

ತೋಟಗಳಲ್ಲಿ ಬಾವಿಗಳಿರುತ್ತಿದ್ದವು. ಬೆಳ್ಕೆಯರ ಎರಗ ಎಂಬಾತನು ಸಿರಿಗುಪ್ಪೆಯಲ್ಲಿ (ಇಂದಿನ ಬಳ್ಳಾರಿ ಜಿಲ್ಲೆಯ ಸಿರಿಗುಪ್ಪಾ ಒಂದು ತಾಲ್ಲೂಕು ಆಗಿದ್ದು ಅಂದಿನ ವಿಜಯನಗರ ಅಥವಾ ಹಂಪಿಯಿಂದ ನೂರು ಕಿಲೋ ಮೀಟರ್ ಪರಿಸರದಲ್ಲಿಯೇ ಇದೆ) "ಮರಕಟ್ಟಿನ ಪಿರಿಯ ಬಾವಿ"ಯನ್ನು ಕಟ್ಟಿಸಿದಂತೆ ಒಂದು ಶಾಸನವು ಹೇಳುತ್ತದೆ. (ಬಿಕೆಐ.ಐ.134, ಕ್ರಿ.ಶ.1087). ಏತಗಳಿಂದ ಮತ್ತು "ಘಟೀ ಯಂತ್ರ" ಗಳಿಂದ ತೋಟಕ್ಕೆ ನೀರು ಹಾಯಿಸುತ್ತಿದ್ದರು. ಈ ಯಂತ್ರದ ವರ್ಣನೆಯು ಒಂದು ಶಾಸನದಲ್ಲಿ ಬಂದಿದೆ. (ಎಪಿಗ್ರಾಫಿಯಾ ಕರ್ನಾಟಿಕಾ, 5 ಪು.130, ಕ್ರಿ.ಶ.1147). ಈ ಶಾಸನದ ಪ್ರಕಾರ ಮೇಲುಗಡೆ ಚಕ್ರವು ತಿರುತ್ತಿರುತ್ತದೆ. ಯಂತ್ರಕ್ಕೆ ಎತ್ತುಗಳನ್ನು ಹೂಡಿರುತ್ತಾರೆ. ನೀರನ್ನು ಹೊತ್ತು ಮೇಲಕ್ಕೆ ಒಂದು ಸಾಲು ಕುಂಭಗಳು (ಗಡಿಗೆ) ಬರುತ್ತಿದ್ದರೆ, ನೀರನ್ನು ಸುರಿದು ಬರಿದಾದ ಕುಂಭಗಳ ಒಂದು ಸಾಲು ಕೆಳಕ್ಕೆ ಇಳಿಯುತ್ತಿರುತ್ತದೆ. (ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.367)

"ಅರಿಸೇನಾಚಕ್ರಚಕ್ರಂ ಪರಳೆ ರಿಪುಕುಭೃತ್ ಪುಂಗವ ಭ್ರಾಂತಿ ತಳ್ತೊಪ್ಪಿರೆ ತನ್ನುಗ್ರಾಸಿಯಿಂದುಚ್ಚಳಿಸಿ ಧರೆಗುರುಳ್ದಪ್ಪ ವಿದ್ವಿಟ್ಶಿರಂಗಳ್ ತರದಿಂ ಕುಂಭಂಗಳಂ ಪೋಲ್ತೆ । ಸೆಯೆ ನವಘಟೀಯಂತ್ರದಿಂ ವಿಷ್ಣು ಯುದ್ಧಾಜಿರವಾವೀ ವೈರಿ ರಕ್ತಾಂಬುವನೆ ನಿಜಯಶೋವಲ್ಲಿಗೆತ್ತುತ್ತವಿಪ್ಪಂ ।" (ರನ್ನನ ಅಜಿತ ಪುರಾಣ.4.55). ಇದನ್ನು "ಅರಘಟ್ಟ ಘಟೀಯಂತ್ರ"ವೆಂದೂ ಕರೆಯುತ್ತಿದ್ದರು.





ಈ ಯಂತ್ರದಲ್ಲಿ ಮಟ್ಟವಾದ ಒಂದು ಅಕ್ಷಕ್ಕೆ (Axis) ಕಟ್ಟಿದ ಚಕ್ರದ ಮೇಲೆ ನಾಲ್ಕು, ಎಂಟು ಅಥವಾ ಹನ್ನೆರಡು ಇತ್ಯಾದಿ.

ಸಂಖ್ಯೆಯ ಗಡಿಗೆಗಳನ್ನು ಕಟ್ಟುತ್ತಿದ್ದು ಅವು ಒಂದಾದ ನಂತರ ಇನ್ನೊಂದರಂತೆ ಮೇಲಿನಿಂದ ಕೆಳಕ್ಕೆ ಸುತ್ತುತ್ತಿದ್ದವು. ಒಂದೊಂದು ಗಡಿಗೆ ಕೆಳಕ್ಕೆಇಳಿದಾಗ, ಇನ್ನೊಂದು ಗಡಿಗೆಯು ಬಾಯಿಂದ ನೀರು ತುಂಬಿಕೊಂಡು ಚಕ್ರವು ತಿರುಗಿ ಮೇಲಕ್ಕೆ ಬಂದಾಗ ನೀರನ್ನು ಕಲ್ಲಿನ ತೊಟ್ಟಿಯೊಳಕ್ಕೆ ಖಾಲಿ ಮಾಡಲಾಗುತ್ತಿತ್ತು. ಚಕ್ರವನ್ನು ಒಂದು ಜೊತೆ ಎತ್ತಿನ ಬಲದಿಂದ ತಿರುಗಿಸುತ್ತಿದ್ದರು. ಎತ್ತುಗಳು ಬಾಯಿಯ ಸುತ್ತ ಚಕ್ರಾಕಾರದ ಜಗಲಿಯಮೇಲೆ ಸುತ್ತುತ್ತಿದ್ದವು. ಕಬ್ಬಿಣದ ಬಕೆಟ್ಟುಗಳನ್ನು ಉಪಯೋಗಿಸಿ ತಯಾರಿಸಲಾದ ಇದರ ಇನ್ನೊಂದು ರೂಪವನ್ನು ಪರ್ಶಿಯಾ ದೇಶದವರು "ಪರ್ಷಿಯನ್ ವ್ಹೀಲ್" ಎಂದು ಕರೆಯುತ್ತಿದ್ದರು.

ಒರತೆ ನೀರಿನ ಸಾಲುಗಳು:

ಈ ಸಲದ ಕಡು ಬೇಸಗೆಯಲ್ಲಿ ಹೇಗಿದೆ ಎಂದರೆ, ನೀರಿಗಾಗಿ ಒಣಗಿದ ನದಿಗಳ ಬದಿಯಲ್ಲಿ ತೆಗೆದಿರುವ ಕೆಲವು ಮಣ್ಣಿನ ಒರತೆಗಳಲ್ಲಿ, ಉಳಿದಿರುವ ನೀರಿನ ಸಹಾಯದಿಂದ ಹುಟ್ಟಿರುವ ತಾವರೆಗಳು ತಮ್ಮ ದಳಗಳನ್ನು ಮತ್ತು ಎಲೆಗಳನ್ನೂ ಕಳೆದು ಕೊಳ್ಳುವ ಸ್ಥಿತಿಯಲ್ಲಿವೆ. ಹೀಗಾಗಿ ಅವುಗಳ ಶಲಾಕಾಗ್ರವು ನೀರಿನ ಪಾತಳಿಗಿಂತ ಮೇಲೆ ಎದ್ದು ನಿಂತಿವೆ. ಈ ದೃಶ್ಯವು ಕಣ್ಣಿಗೆ ಕಾಣುವ ರೀತಿ ಹೇಗಿದೆ ಎಂದರೆ ಈ ಶಲಾಕಾಗ್ರದ ಬಂಗಾರದ ಬಿಲ್ಲೆಗಳನ್ನು ಮೇಘರಾಜನಿಗೆ ನದಿಗಳು ಲಂಚ ನೀಡುವುದರ ಮೂಲಕ ತಮಗೆ ಬೇಕಾದಷ್ಟು ನೀರನ್ನು ಒದಗಿಸಿ ಸಮುದ್ರರಾಜನೊಂದಿಗೆ ಸೇರುವಂತೆ ಮಾಡು ಎಂದು ಪ್ರಾರ್ಥಿಸುತ್ತಿವೆ.

ದಾರಿಹೋಕರು ನದಿಗಳಲ್ಲಿ ಕುಡಿಯಲು ನೀರು ದೊರಕದೇ ಇರುವುದರಿಂದ ನದಿಗಳಲ್ಲಿ ಅಲ್ಲಲ್ಲಿ ಒರತೆಗಳನ್ನು ಮಾಡಿದ್ದಾರೆ. ಅದರಲ್ಲಿ ಬಿದ್ದ ಸೂರ್ಯನ ಕಿರಣಗಳ ಪ್ರತಿಫಲನದಿಂದಾಗಿ ಹೊಳೆಯುತ್ತಿರುವ ಕತ್ತಿನ ಮುತ್ತಿನ ಆಭರಣಗಳಾಗಿ ಮಾರ್ಪಟ್ಟು ಇನಿಯರು ತಮ್ಮ ಹೆಂಡತಿಯರನ್ನು ಸಮಾಧಾನ ಪಡಿಸಿ ಸುರತಕ್ಕೆಳಸುವಂತೆ ಮಾಡುವ ಉದ್ದೇಶದಿಂದ ಸಮುದ್ರ ರಾಜನು ನದಿಗಳಿಗೆ ಉಡುಗೊರೆಯಾಗಿ ಅವುಗಳನ್ನು (ಒರತೆ) ನೀಡಿದ್ದಾನೆ. (ಪು.72–73, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ರಾಜ ನೀತಿ

ಆಮುಕ್ತಮಾಲ್ಯದದಲ್ಲಿ ರಾಜನು ಅನುಸರಿಸಬೇಕಾದ ಕರ್ತವ್ಯಗಳ ಬಗೆಗೆ 84 ಪದ್ಯಗಳಷ್ಟು ವಿಸ್ತಾರವಾದ ಉಲ್ಲೇಖವಿದೆ. ಇಲ್ಲಿಯ ನೀತಿ ನಿಯಮಗಳು ಭಾರತೀಯ ಪರಂಪರೆಯಲ್ಲಿ ಸುಪ್ರಸಿದ್ಧವೆನಿಸಿರುವ ಶುಕ್ರ ನೀತಿಸಾರ, ರುಕ್ಮಾಂಗದ ಚರಿತೆ,



ಪಂಚತತ್ರ, ಮಹಾಭಾರತ, ಭಾಗವತಗಳಿಂದ ಸ್ವಲ್ಪಮಟ್ಟಿಗೆ ಪ್ರಭಾವಿತವಾದಂತೆ ಕಂಡುಬರುತ್ತದೆ. (ಪು.41, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವ್ಯಾಪಾರ, ಮಳೆ, ಬೆಳೆಗಳಿಗೆ ಸಂಬಂಧಿಸಿದ ಕೆಲವು ಪದ್ಯಗಳ ಅನುವಾದ ಹೀಗಿದೆ:

ಬಂದರುಗಳಲ್ಲಿ ಆನೆಗಳು, ನವರತ್ನಗಳು, ಮುತ್ತುಗಳು ಆಮದು ಆದರೆ ವ್ಯಾಪಾರ ಹೆಚ್ಚುತ್ತದೆ. ಮಳೆ, ಬೆಳೆ ಇಲ್ಲದೆ ವ್ಯಾಧಿಗಳಿಂದ ಛತ್ರಗಳಲ್ಲಿ ಇಳಿದು ಕೊಂಡಿರುವ ಅನ್ಯ ದೇಶದ ಪ್ರಜೆಗಳನ್ನು ತಕ್ಕ ಮರ್ಯಾದೆ ಇತ್ತು ಅವರ ಅಗತ್ಯಗಳನ್ನು ಒದಗಿಸಿ ಕಾಪಾಡಬೇಕು. ತೋಟ, ದಿಡ್ಡಿಬಾಗಿಲು, ಗಣಿಗಳನ್ನು ರಕ್ಷಿಸಲು ಆಪ್ತರಾದವನ್ನೇ ಕಳುಹಿಸಬೇಕು. (ಪು.142, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ವಿವರಣೆ: ಮೇಲಿನ ಪದ್ಯ ರಾಯನ ವ್ಯವಹಾರ ಚತುರತೆ, ವಿಜಯ ನಗರದ ವೈಭವಕ್ಕೆ ಕಾರಣವಾಗಿದ್ದ ಹಣಕಾಸಿನ ನೀತಿಯ (Economic Policy) ಒಂದು ಉತ್ತಮ ನಿದರ್ಶನವಾಗಿದೆ. ಎರಡನೆಯದಾಗಿ ಆತನ ವಿದೇಶಿ ವ್ಯಾಮೋಹವನ್ನು ತಿಳಿಸುತ್ತದೆ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ, ವಿದೇಂಶಾಂಗ ವ್ಯವಹಾರಗಳನ್ನು ಹೆಚ್ಚಿಸಿಕೊಳ್ಳಲು, ಇಂದಿನ ಸರ್ಕಾರಗಳು ತುದಿಗಾಲ ಮೇಲೆ ನಿಂತಿರುವಂತೆ (Foreign Direct Investment like (FDI) etc.,), ಅಂದಿನ ರಾಜರೂ ಯೋಚಿಸುತ್ತಿದ್ದರೆಂಬ ಸೂಚನೆ ಇಲ್ಲಿದೆ. ತೋಟ ಒಂದನ್ನು ಬಿಟ್ಟು ದಿಡ್ಡಿ ಬಾಗಿಲು, ಗಣಿ ರಕ್ಷಣೆಗಳಿಗೆ ಆಪ್ತರಾದವರನ್ನೇ ನೇಮಿಸಬೇಕೆಂದಿರುವ ಈ ವಾಕ್ಯವಂತೂ ಇಂದಿನ ಗುಪ್ತದಳ (ರಕ್ಷಣಾವ್ಯವಸ್ಥೆ), ಗಣಿಉದ್ಯಮ ರಾಜಕೀಯಕ್ಕೆ ಸುಮಾರು 500 ವರ್ಷಗಳಷ್ಟು ಹಿಂದೆಯೇ, ಭವಿಷ್ಯದಲ್ಲಿ ಆತನೇ ನಿರ್ಮಿಸಿದ ಹೊಸಪೇಟೆ ಪರಿಸರದಲ್ಲಿ ಉಂಟಾಗಬಹುದಾದ ಬದಲಾವಣೆಗಳಿಗೆ ಬರೆದ ಮುನ್ನುಡಿಯಂತಿದೆ.

ಭೂಮಿ–ವ್ಯವಸಾಯ– ನೀರಾವರಿಯ ಪ್ರಾಮುಖ್ಯತೆ

ವಿಸ್ತೀರ್ಣ ಹೆಚ್ಚಾದಷ್ಟೂ ಆದಾಯ ಕಡಿಮೆಯಾಗುತ್ತದೆ. ಎಷ್ಟೇ ಚಿಕ್ಕ ಭೂಮಿಯಾದರೂ ಜಲಾಶಯಗಳನ್ನು ನಿರ್ಮಿಸಿ ಕೆರೆ, ಕಾಲುವೆಗಳನ್ನು ಕಟ್ಟಿಸಬೇಕು. ಇಷ್ಟು ಅನುಕೂಲ ಮಾಡಿಕೊಟ್ಟರೂ ಕಡಿಮೆ ಕಂದಾಯವನ್ನೇ ವಿಧಿಸಬೇಕು. ಹೀಗೆ ಮಾಡಿದುದರ ಫಲವಾಗಿ ಬರುವ ಪುಣ್ಯವೂ ರಾಜನಿಗೇ ದಕ್ಕುತ್ತದೆ. ನಷ್ಟವಾಗುತ್ತದೆಂದು ವ್ಯವಸಾಯವನ್ನು, ಧಾನ್ಯ ಬೆಳೆಯುವುದನ್ನು ಬಿಟ್ಟುಬಿಡುವ ಜನರ ಅಧಿಕಾರವನ್ನು ರಾಜನು ಉಪೇಕ್ಷಿಸಬಾರದು. ಅವರನ್ನು ಕರೆಸಿಕೊಂಡು ಸಹಾಯ ಮಾಡಿ ವ್ಯವಸಾಯಕ್ಕೆ ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಟ್ಟು ಅವರನ್ನು ಮೆಚ್ಚಿಸಬೇಕೇ ಹೊರತು ಅವರಿಗೆ ನಿರಾಶೆ ಉಂಟಾಗುವಂತೆ ಮಾಡಬಾರದು (ಪು.42, ಶ್ರೀಕೃದೇರಾ.ಆಮು.ಮಾ. ಕ.ಅನು:ನಿ.ಮಾ. ಬೆಂ.1979).

ಈ ಪದ್ಯವಂತೂ, ಡಾಲರ್ ರೂಪಾಯಿಗಳ ಮೇಲಾಟದ ಮಧ್ಯದಲ್ಲಿ ತೊಳಲಾಡುತ್ತಿರುವ ನಮ್ಮದೇಶದ ಇಂದಿನ ಉಸಿರು ಕಟ್ಟಿಸುವ ಹಣಕಾಸಿನ ಕುಸಿತ ವ್ಯವಸ್ಥೆಗೆ ದಿವ್ಯ ಔಷಧದ ರಾಮಬಾಣದ ಎಚ್ಚರಿಕೆಯ ಗಂಟೆಯೇ ಆಗಿದೆ. ಒಂದು ಕಡೆ ಜನಸಂಖ್ಯೆ ಹೆಚ್ಚಳ, ಇನ್ನೊಂದು ಕಡೆ ನಗರೀಕರಣ, ತಾಂತ್ರಿಕ ಪ್ರಗತಿಯ ಹೆಸರಿನಲ್ಲಿ ಮಾಡುತ್ತಿರುವ ಪ್ರಾಕೃತಿಕ

ಸಂಪತ್ತಿನ ಲೂಟಿ, ಇವುಗಳ ಪೈಪೋಟಿಯ ಮಧ್ಯೆ "ಬೇಸಾಯ ನೀಸಾಯ" ಎಂಬ ಬಹಳ ಹಿಂದಿನ ಗಾದೆ ಮಾತು ರೈತರ ಪಾಡಾಗಿದೆ. ಇನ್ನು ಪಟ್ಟಣದವರ ಪರಿಸ್ಥಿತಿಯಂತೂ ರಾಗಿ, ಜೋಳ, ಅಕ್ಕಿ, ಬೇಳೆ, ತರಕಾರಿ ಇತ್ಯಾದಿಗಳ ಬೆಲೆ ದಿನ ದಿನಕ್ಕೂ ಹೆಚ್ಚಿ, ತಿನ್ನಲಾಗದ, ನಾಶಮಾಡಲಾಗದ ಸಾಫ್ಟ್ವೇರ್ ಪದಾರ್ಥಗಳನ್ನು ಉತ್ಪತ್ತಿ ಮಾಡುತ್ತಿರುವ ಕಾರ್ಖಾನೆಗಳಿಗೆ ಪೈಪೋಟಿ ನೀಡುತ್ತಿರುವುದಷ್ಟೇ ಅಲ್ಲ, ಮಾರು ಕಟ್ಟೆಯಿಂದಲೇ ಮಾಯವಾಗಿ ಕೃತಕ ಅಭಾವನ್ನು ಸೃಷ್ಟಿಸಲಾಗುತ್ತಿದೆ. ಇನ್ನೊಂದೆಡೆ ಬಯೋ ಟೆಕ್ನಾಲಜಿ ಹೆಸರಿನಲ್ಲಿ ವಿದೇಶಗಳಲ್ಲಿ ಬೇಡವೆಂದು ತ್ಯಾಜ್ಯವಾದ ವಸ್ತುಗಳು, ವಿಷಯುಕ್ತ ಕೀಟನಾಶಕ ಇತ್ಯಾದಿಗಳಿಗೆ ಮುಕ್ತ ಮಾರುಕಟ್ಟೆಯನ್ನು ವ್ಯವಸ್ಥಿತವಾಗಿಯೇ ಕಲ್ಪಿಸಲಾಗುತ್ತಿದೆ. ಈ ಎಲ್ಲ ವಿದ್ಯಮಾನಗಳಿಂದ ಹೊರ ಬಂದು ಈ ದೇಶ ಮತ್ತು ಪರಿಸರಕ್ಕೆ ಹೊಂದಿಕೊಳ್ಳುವಂತಹ ಕೃಷಿ ನೀತಿಗಳನ್ನು ರೂಪಿಸಿ ಜಾರಿಗೆತಂದು, ನಮ್ಮ ರೈತರಲ್ಲಿ ಅದರಲ್ಲೂ ಹೆಚ್ಚಾಗಿ ಹಳ್ಳಿಯ ಯುವಕರಲ್ಲಿ ಪಟ್ಟಣಕ್ಕೆ ವಲಸೆ ಬರದ ರೀತಿಯಲ್ಲಿ ಬೇಸಾಯಕ್ಕೆ ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಟ್ಟು, ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವಲ್ಲಿ ರಾಜನೀತಿಜ್ಞರು ಕ್ರಮ ಕೈಕೊಳ್ಳಬೇಕೆನ್ನುವುದನ್ನು ಈ ಪದ್ಯವು ಒತ್ತಿ ಹೇಳುತ್ತಿದೆ.

ಸಾರಾಂಶ

ಶ್ರೀಕೃಷ್ಣದೇವರಾಯನ ಆಮುಕ್ತ ಮಾಲ್ಯದ ಕೃತಿ ಅಧ್ಯಾತ್ಮದ ವಸ್ತುವನ್ನು ಒಳಗೊಂಡಿದ್ದರೂ, ಅಲ್ಲಿ ಬರುವ ವರ್ಣನೆಗಳು ಅಂದಿನ ಕಾಲದ ಜಲಶಾಸ್ತ್ರೀಯ ದಾಖಲೆಯಾಗಿದೆ.

ಮೋಡ, ಮಿಂಚು, ಮಳೆಗಾಲ, ಮುಂತಾದ ಪ್ರಕೃತಿ ಬದಲಾವಣೆಯಂತಹ, ಸಹಜ ಸೂಕ್ಷ್ಮ ವಿಚಾರಗಳ ಅಧಿಕೃತ ಅಧ್ಯಯನಕ್ಕೆ ದಾರಿ ಮಾಡಿಕೊಡುತ್ತದೆ.

ಮನುಷ್ಯ ಭೂಮಿಯ ಮೇಲೆ ಬಾಳಬೇಕಾದರೆ ನೈಸರ್ಗಿಕ ಸಂಪತ್ತನ್ನು ಜತನದಿಂದ ಕಾಪಾಡಿಕೊಳ್ಳಬೇಕಾಗಿ ಬರುತ್ತದೆ. ವ್ಯವಸಾಯವೇ ಈ ದೇಶದ ಬೆನ್ನೆಲುಬು. ಅಷ್ಟೇ ಅಲ್ಲ ಅದರ ನಿರ್ಲಕ್ಷ ಎಂದೆಂದಿಗೂ ಸಲ್ಲ ಎನ್ನುವ ಎಚ್ಚರಿಕೆಯ ಗಂಟೆಯನ್ನೇ ಬಾರಿಸುತ್ತಿದೆ.

ಆಕರಗಳು

1. ಆಮುಕ್ತ ಮಾಲ್ಯದ, ತೆಲುಗು ಪರಿಷ್ಕರಣಮು ರಾವೂರಿ ದೊರಸ್ವಾಮಿಶರ್ಮ, ಪ್ರಕಟಣೆ: ಎಮೆಸ್ಕೋ ಬುಕ್ಸ್, ವಿಜಯವಾಡ– 2009.
2. ಶ್ರೀಕೃಷ್ಣದೇವರಾಯನ ಆಮುಕ್ತ ಮಾಲ್ಯದ, ಅನುವಾದ : ಶ್ರೀಮತಿ ನಿರುಪಮಾ, ಬೆಂಗಳೂರು. (ಶ್ರೀಕೃ.ದೇರಾ.ಆಮು.ಮಾ.ಕ.ಅನು:ನಿಮಾ. ಬೆಂ.1979).
3. *Sri Kirishna Deva Raya Amutamalyda*, Srinivasa Sistla, Drusyaki Deepika, Vishakapatnam,
4. ಚಿತ್ರ ಸಹಾಯ: ಶ್ರೀಮತಿ ಎಸ್.ಮಾಲತಿರಾವ್

24. Issues related to fixing of Birth and Coronation Dates of Vijayanagara King Achyutaraya

Dr. M. Kotresh

Regarding the reign period of Achyutaraya, the emperor of Vijayanagara, several historical opined that Achyutaraya who ruled between 1529 A.D. to 1542 A.D or 1530 A.D. to 1542 A.D but as to the birth coronation, reign period and death of Achyutaraya still shrouded in Mystery.

According to the majority of literary and inscriptional evidences Eshwaranayaka the father of Narasanayaka is the founder or first king of Tuluva dynasty. But recent research show that Thimma is the first king of Tuluva Dynasty. The following sources are helpful; i.e., Sri Krishnadevaraya's Inscriptions life and achievements of Sri Krishnadevaraya Epigraphic Carnitic Volume, South Indian inscriptions Inscriptional Volumes of Kannada University Hampi. The Forgotten Empire, Achyutaraya bhudayam Rayavachakamu selected articles on Sri Krishnadevaraya Books on Indian History and Culture A Study of Third Dynasty of Vijayanagara (Shri Venkataramana) and so on more than One eighty inscriptions of Achhhutaraya have been found in Karnataka, Andhra Pradesh, Tamil Nadu on the basis of these sources this study has been done here.

Regarding the birth and coronation ceremony we could find some curious aspects. The genealogy of Tuluva Dynasty has been mentioned in the text "Mareechi Parinayam's by Mahanaangi, the daughter of Sri Krishnadevaraya, But in this work there is no reference about oabambe and Achyutaraya, more than that Krishnadevaraya and Achyutaraya's inscriptions also is no reference about oabambe. Here some questions arise that when Maarichea Parinaya composes whether the Narasanayaka has not been married oabambe or oabambe was a youngest queen of Achhutarya ? or Achuuta was a minor? as Dr. K G Gopala Krishna Rao express his view that " the matter of the edits was might here already been prepared and that might have been continued".

It seems that there is much age different between Veeranarashima and Krishnadevaryaa and Krishnadevaraya considered Veeranarashimha as his father more over when discussing about birth of Narasanayaka, after Krishnadevaraya his step brothers Achhuta and Ranga might have been born at 5, 10 years gap that at the time of Krishnadevaraya's coronation ceremony the age of Achhuta and Ranga was 35 and 40 years respectively and as they were about they were sent to Chandragiri and they were in home confinement till the end of the Krishnadevaraya's rule.

The text Achyutaraya bhudayam give information that Narasanayaka had there wives viz., Thippambika, Nagalambika and Oabaommabe and Oabaammambe the third wife of Narasanayaka was most beloved queen of the king Veerashimaray born to Thippambike, Krishnadevaraya born to Naagambike and this text also explains that Oabaammabe, conceived for the welfare of the world. Achhutaabhudayam states that when Achhuta came to power, he was a gigantic and by seeing this, the ministers of his court decided that he is capable to hold earth. Which is beholded by Aadishestha (Aadishesha is the bed of the Mahavishnu), According to Maareeche Parinayam of Mahanaangi, Krishnadevaraya was born on 17th January 1471, and Achhuta was one of his brothers, who born after five to ten years age gap and Achyutarayabhudayam describes, when he came to power in 1530 A.D. he attained the age of fifty five, if so, how it is possible he is still young ?

On the basis of the what 150 inscriptions have been found so far and as recorded in EC-4 of Mysore district 12 inscriptions belonged to Achyutaraya. The present Chamarajanagara district of then Mysore district Hosahalli 179th inscriptions states Achyutaraya was in power in 1503 A.D. The transliteration of four lined inscription is as follows.

1. Shubha mastu (Swa) sti Jayabhudaya shalivaahana.
2. Shakavarsha 1425 SAnda Vartamana vaada Vilambhi Samvatsara.
3. Shree manmha ____________
4. __________ shree prataapa shree Achhutadevaraya.

Here, therefore many questions arose that where there was a competition for the throne between Veeranarasimha and Achyutaraya ? if so what was the age of Achhuta at the time i.e., in 1503 A.D. ? if it is true, whether he was appearing like a person of 27 years as per the first chapter of the Achyutaraya bhudayam ? or how do we believe that Achhuta was born at the time of the Narasanayaka's death ? What are the sources for this ? that is the problem. If we observe the above aspects carefully one can came to the following conclusion.

1. The four lines edict of 1503 A.D. state the year shakavarusha 1475 corresponds to Vilambhi samvastara, therefore, Vilambhi samvatsara shakavarusha is not match to 1475 A.D. hence, the nearest year (date) is shakavarusha 1460 and it corresponds to vilambhi samvatsara (year) Thus this edict has been read wrongly. The correct date of this edict is 1538 A.D.

2. According to the Achyutarayabhudam it is impossible for Achyutaraya having been young when he ascended the throne, because his age should not exceed Ten years, when Krishnadevarya came to throne, thus there is a much age different between them.

3. According to the oral opion of Dr. K G Gopal Rao, in the mahanaangi's maareechee Parinaya, or inscriptions to leave / omit the name of Achhuta is as per the established inscriptional tradition, if the previous name had been continued and it had to be applicable in the matter of all kings next to Veeranarashimha, more comely personage than Krishnadevaraya and Narasanayaka's beloved third wife Oabambe's son he was the rivalry was not only there between these three step brothers, but there was a competition for throne among there three step brothers. As a result intentionally the names of Oabambe and Achyutaraya have been left. In the only one inscription of Andhra Pradesh and some Sanskrit copper plates mention that Veeranarasimha and Krishnadevaraya were so cardial like Ramalaxmana, and Nagalambike and Thippambe were too close. The notable aspect here is that this information available only in the inscription which were erected after 1531 A.D. In this background in 1503 A.D. Narasanayaka was a man of seventy years age, and whether his marriage was held at the age between fifty to Sixty years with his last and beloved wife ?

According to my opinion, when Achyutaraya came to power in 1530 A.D. if Aliyaramaraya was contemporer of Achyutaraya. Hence is a twenty years age gap between Krishnadevarya and Aliyaramaraya. Again there is a twenty years age gap between Krishanadevaraya and Achyutaraya, Achyutaraya, therefore, might have born between 1485 A.D to 1490 A.D.

Confusions about the coronation of Achhutarya :

An inscription mentions that Tirumala the son of Krishnadevaraya was administered the state in 1525 A.D. likewise, othersome edicts also mention that from 1525 A.D. to 1530 A.D. Aliyaramaraya and Achyutaraya were the emperor of the Vijayanagara, whether there was a clash for the throne between Aliyaramaraya and step uncle Tirumalaraya? Or whether they have been died ultimately in this clash ? Hulikunte Murthy opined that in the mean time, by observing the opinion of the people Aliyaramaya whether he had made a treaty with Achyutaraya ?

The reign period and lifespan of Krishnadevaraya :

The Kammarapoada edict of 1526 A.D. says that Achyutaraya was ruling Vijayanagara. Another inscription of 1528 A.D. mentions title like a emperor one who assume titles. Dr. G S Dixit, therefore expresses his view that Achyutaraya was ruling from 1526 A.D. even when Krishnadevaraya was alive and his coronation ceremony was held after the death of Krishnadevarya in 1530 A.D.

It is not true that Krishnadevaraya was very much suffered due to the death of his sone and consequently Krishnadevaraya died in 1525 A.D., because Krishnadevaraya was ruling

till 1529 A.D. Moreover, there is no any evidence available regarding the coronation of Achyutaraya.

The inscription NO. 12 page No. 354-355 of EC Vol -7 of Malavalli Taluk of Mandya District and Kaaregala inscription mention that Achyutaraya was ruling in 1528 A.D. But the authenticity of this inscription should be testified (Enclosed the content of this edict).

Of all these confusions Kannad inscription of Andhre Pradesh in the book, an inscription dated 14th March 1530 A.D. of Pottipaadu village of Andhra Pradesh states that

"Shivamastu Swasti Vijayabhudaya (sha)
Livaatana shaka varshangalu
1452 naeya vikruti samvatsara chaitra"

The details of the date viz., saka 1452, vikruta samatsara chaitra correspond to 1531 A.D. the saka year was current.

In fact, 1428 + 78 = 1530, But in 1452 Shaka era, the vikrutasamvatsaram (year) comes and it is 1531, therefore the period of this inscription matches to 1531 .A.D. not as 1530 A.D.

The Belaguru inscription of Kadur taluk in Chikamgalur District (EC - 12) of July, 13 1530, mension that Achyutaraya was ruling the state. But the fact is that if we carefully analyse the Belaguru inscription, it is not possible to rule because it is mentioned Saka era 1452 Vikrutha era. But this Vikruta era equals with 1531 A.D. This inscription therefore should be read as 1531.A.D As a result of this time Achyutaraya was not ascended the thrown. Likewise the Gollavahasahalli inscription of Channarayapatna of Hassan District (EC-10-45) should also be read as above. Because, here also the year wrongly mentioned as 1530 A.D. Thirteen inscriptions belonged to Achyutaraya's period in Tamilnadu are mentioned in Volume-4 published by Karnataka University. Under the caption of Tamil Nadu Inscription, Page No. 45 and 83 also wrongly prints that Achyutaraya was ruling on 19th January 1529 A.D. These are not matched with "Indian Chronological tables".

In this inscription 1533 A.D. (Saka 1454), Achhuthadeva after performing pooja to the god Kaalahasteshwara of Kaalahasti in the Viroodhi Samvatsara Kaartika Bahula he accomplished his caronation (pattabisheka). In the text Kannada inscription of Andhra Pradesh, it is opined that Thursday the 21st October 1529 caronation ceremony was held. But the Taebi (Thirddaya) of the Viroadhi Samatsara (year) is corresponds to 1530 A.D.

Accoring to Dr. D.V. Parashivamurthy if we believed that Krishnadevarya dies on 28th December 1529. Whether the coronation of Achyutaraya was held before the death of Krishnadevaraya ? But it is not so, and Acchutaraya was not stayed in the capital at the time of Krishnadevaraya's death. Raajanatha Dindita in his text Achhutabhudayam says that the

Coronation ceremony of Achyutaraya was held at Venkateshwara temple at Tirupati and after this once again the coronation ceremony was held at capital with all splendour. But the inscriptions to not speak about coronation ceremony at Tirupati. It is true that Achyutaraya, there fore by hearing the news of the death of Krishnadevaraya, who visited Kalahasthi between January to June 1530 A.D. and performed his coronation ceremony. Furtther, as mentioned in the inscriptions after 1531 Achyutaraya started his rule here. I do not discuss about the last days of Achyutaraya. But Mugur inscriptions of T Narashipura Taluk of Mysore District of 1575 A.D. (Shakavarasha 1517) mentions that Veera Achyutaraya was ruling at Vijayanagara.

References

1. *EC* Volumes 3, 4, 5, 7, 8, 9, 10, 11 and 12.
2. *SII* (*South Indian Inscriptions,* Volume)
3. *Epigraphical* Volumes, Kannada Vishwavidyala, Hampi Volume - 1,2,3,4,5,6
4. Robert Sowell, Sadananda Kanavalli (Translated), 2008, *Maretuhoda Mahaasamrajya Vijayanagara,* Kannada Vishwavidyalaya, Hampi (in Kannada)
5. Suryanarayana Rao (Translated) Baalasubramanyam, 2000 *Marayalarada Mahaasamrajya Vijayanagara,* Hampi (in Kannada). Kannada Vishwavidyalaya, Hampi.
6. Rajanaatha Dindima (Translated) Dr. Sucheta Navaratna, 2010, *Achhutabhudayam,* Kannada Vishwavidyala, Hampi.
7. Ramachandra Rao C.V. (Translated), Gurumurthy Pendekura, 2008, *Rayavaachakaa,* Dravida Vishwavidyanilaya, Kuppam.
8. Parashivamurthy D.V. and et.al. (ES) 2008, Krishnadevarya Ayda Lekhana Samputa, Kannada Vishwavidyalaya, Hampi.
9. Paramashivamurthy (Ed.) 2010, *Krishnadevaraya Shashanagalu,* Kannada Vishwavidyalaya, Hampi.
10. Dixit G.S. and et..al. 1997, *Krishnadevarayana Jeevana Saadhanegala,* Prachya Vastu Sangrahaala Nirdeshanaalya, Bangalore.
11. Majumdar R.C. and et.al., *Bharatiya Janateya Ithihaasa Mattu Sanskruthi,* Bharatiya Vidyamandiara, Race Cource Road, Bangalore.
12. GopalaKrishna K.G, 2006, 'Vijayanagara Veeranarasimhana Antyakaala Maruparasheelane', *Ithihaasa Darshana,* Vol-21, Karnataka Ithihasa Academy, Bangalore.

25. ವಿಜಯನಗರ ಕಾಲದ ರಾಮನ ಬಿಲ್ಲು ಮತ್ತು ಶಸ್ತ್ರಗಳು

ಜಯದೇವಪ್ಪ ಜೈನಕೇರಿ

ಚಿಕ್ಕಮಗಳೂರು ಜಿಲ್ಲೆ ಹೊಗೆರೆಹಳ್ಳಿಯಲ್ಲಿ ವಿಜಯನಗರ ಉತ್ತರ ಕಾಲದ ರಂಗನಾಥ ಸ್ವಾಮಿ ದೇವಾಲಯವಿದೆ. ಎರಡು ಗರ್ಭ ಗೃಹಗಳಿರುವ ಈ ದೇವಾಲಯದಲ್ಲಿ ದಕ್ಷಿಣಾಭಿಮುಖವಾಗಿ ಮುಖ್ಯ ಗರ್ಭಗೃಹ ಅಂತರಾಳ ದೊಡ್ಡದಾದ ನೃತ್ಯಮಂಟಪವಿದೆ. ಗರ್ಭಗುಡಿಯಲ್ಲಿ ಸ್ಥಳೀಯರು ಹೇಳುವ ರಂಗನಾಥಮೂರ್ತಿ ಇದೆ. ಮೂರ್ತಿಯು ಪ್ರಮಾಣ ಬದ್ಧವಾಗಿ ಸುಮಾರು 75 ಸೆ.ಮೀ. ಎತ್ತರವಿದೆ. ವಿಷ್ಣುವಿನ 24 ಪ್ರಬೇಧಗಳಲ್ಲಿ ಒಂದಾದ ಜನಾರ್ಧನ ಮೂರ್ತಿಯೆಂದು ಗುರುತಿಸಬಹುದು. ಸಮಭಂಗದಲ್ಲಿರುವ ಕಲಾತ್ಮಕವಾದ ಸುಂದರ ಜನಾರ್ದಾನ ಮೂರ್ತಿ ವಿಶಿಷ್ಟವಾಗಿದೆ. ವಿಜಯನಗರ ಉತ್ತರ ಭಾಗದಲ್ಲಿ ನಿರ್ಮಾಣವಾಗಿರುವ ಜನಾರ್ಧನ ಮೂರ್ತಿಯ ತಲೆಯ ಹಿಂಭಾಗದಲ್ಲಿ ಜಡೆ ಇರುವುದು ವಿಶೇಷ ಎಂದು ಪುರಾತತ್ವ ವಿಜ್ಞಾನಿಗಳಾದ ಡಾ.ಸುಂದರ ಅವರು ಗುರುತಿಸಿದ್ದಾರೆ.

ವಿಜಯನಗರ ಮಧ್ಯ ಅಂತ್ಯಕಾಲಕ್ಕೆ ಸೇರಿದ ಈ ದೇವಾಲಯದಲ್ಲಿ ಪ್ರಾಚೀನ ಕಾಲದ ಬೃಹತ್ ಗಾತ್ರದ ಕಬ್ಬಿಣದ ಕೆಲವು ಶಸ್ತ್ರಗಳಿರುವುದು ಕುತೂಹಲಕಾರಿ ಅಂಶವಾಗಿದೆ. ಇವುಗಳಲ್ಲಿ ಸುಮಾರು 155 ಸೆ.ಮಿ. ಎತ್ತರದ ಖಡ್ಗವಿದೆ. ಸುಮಾರು 170 ಸೆ.ಮಿ. ಎತ್ತರದ ಎರಡು ಈಟಿಗಳು ಇರುವುದು ವಿಶೇಷ. ಕೈಯಲ್ಲಿ ಹಿಡಿಯುವಂತಿದೆ. ಸುಮಾರು 180 ಸೆ.ಮಿ. ಎತ್ತರದ ಎರಡು ಈಟಿಗಳ ಎರಡು ಕೊನೆಗಳೂ ಚೂಪಾಗಿವೆ. ಸುಮಾರು 290 ಸೆ.ಮಿ. ಎತ್ತರದ ದಪ್ಪನಾದ ಒರಟು ಕಬ್ಬಿಣದ ಒಂದು ಆಯುಧ ಚಪ್ಪಟೆಯಾಗಿದೆ. ಮೇಲ್ಭಾಗ ಹೊಂದಿದೆ. ಮತ್ತೊಂದು ಇಂತಹುದೇ ಆಯುಧದ ಎರಡು ಕೊನೆಗಳೂ ಚೂಪಾಗಿವೆ. ಸುಮಾರು 280 ಸೆ.ಮಿ. ಎತ್ತರದ ಬುಡ ಮೊನಚಾದ ತ್ರಿಶೂಲ ಮತ್ತು ಸುಮಾರು 360 ಸೆ.ಮಿ. ಎತ್ತರವಾದ ದಪ್ಪನಾದ ಭಾರವಾದ ಬೃಹತ್ ಗಾತ್ರದ ಒರಟು ಕಬ್ಬಿಣದ ಆಯುಧವಿದೆ. ಆಯುಧಗಳು ಯುದ್ಧ ಅಥವಾ ಗ್ರಾಮ ರಕ್ಷಣೆಗೋಸ್ಕರ ಉಪಯುಕ್ತವಾಗಿರಬಹುದಾದರೂ ಕೆಲವು ಶಸ್ತ್ರಗಳನ್ನು ಎತ್ತಿ ಬಳಸಲು ವಿಶೇಷ ತರಬೇತಿ ಪಡೆದ ಶಕ್ತಿ ಶಾಲಿಗಳಿಂದ ಮಾತ್ರ ಸಾಧ್ಯ. ಬೃಹತ್ ಗಾತ್ರದ ಖಡ್ಗವು ತುಂಬ ಭಾರವಾಗಿದ್ದು ಸಾಮಾನ್ಯರು ಎತ್ತಲು ಸಾಧ್ಯವಿಲ್ಲ. 360 ಸೆ.ಮಿ. ಉದ್ದ ಮತ್ತು ಸುಮಾರು 25 ಸೆ.ಮಿ. ದಪ್ಪವಿರುವ ಈಟಿಯನ್ನು ಎತ್ತಲು ಶಕ್ತಿ ಶಾಲಿಗಳಾದ 3–4 ಜನರಾದರೂ ಬೇಕು. ದೇವಾಲಯ ಪಕ್ಕದಲ್ಲಿರುವ ಆಂಜನೇಯ ಗುಡಿಯಲ್ಲಿ ಬೃಹತ್ ಗಾತ್ರದ ಕಬ್ಬಿಣದ ಬಿಲ್ಲು ಇದೆ. ಇದಕ್ಕೆ ಸ್ಥಳಿಯರು ರಾಮನಬಿಲ್ಲು ಎಂದು ಕರೆಯುತ್ತಾರೆ. ಹೀಗೆ ಈ ಶಸ್ತ್ರಗಳ ಅಳತೆಗಳನ್ನು ಮತ್ತು ಇವುಗಳು (ಕೋದಂಡಪಾಣಿ ಶ್ರೀರಾಮನ ಅವತಾರಿಯಾದ) ಶ್ರೀ ರಂಗನಾಥ ದೇವಾಲಯದಲ್ಲಿ ಇರುವುದನ್ನು ಗಮನಿಸಿದಲ್ಲಿ. ಇವುಗಳನ್ನು ನವರಾತ್ರಿ ಮತ್ತು ವಿಶೇಷ ಉತ್ಸವಗಳಲ್ಲಿ ನಡೆಯುವ ಆಯುಧ ಪೂಜೆಗೆಂದೆ ವಿಶಿಷ್ಟವಾಗಿ ಬೃಹತ್ ಗಾತ್ರದಲ್ಲಿ ಮಾಡಿಸಿದ್ದಾಗಿರಬೇಕು. ಯುದ್ಧದಲ್ಲಿ ಯೋಧರು ಇವುಗಳನ್ನು ಬಳಸುವುದು ಆಸಾಧ್ಯ ಎಂದು ತೋರುತ್ತದೆ.

ಪ್ರಾಚೀನ ಹೊಗರೆಹಳ್ಳಿಯ ಅವಶೇಷಗಳು ಸಮೀಪದ ಬೆಟ್ಟದ ಬುಡದಲ್ಲಿನ ಬಯಲಲ್ಲಿ ಕಂಡು ಬರುತ್ತವೆ. ಸುಟ್ಟ ಮಣ್ಣಿನ ಇಟ್ಟಿಗೆಗಳು, ಮಡಿಕೆಗಳು, ಮಣ್ಣಿನ ಪಾತ್ರೆಗಳ ಅವಶೇಷಗಳು ದೊರಕಿವೆ. ಮಡಿಕೆ ಚೂರುಗಳು ಹೆಚ್ಚಾಗಿ ಕೆಂಪುವರ್ಣದಿಂದ ಕೂಡಿವೆ. ಸುಮಾರು 2ನೇಯ ಶತಮಾನದ ಕೈ ಮುಗಿದು ಮಂಡಿಯೂರಿ ಕುಳಿತಿರುವ ಭಂಗಿಯಲ್ಲಿರುವ ಒಂದು ಚಿಕ್ಕ ಶಿಲಾಮೂರ್ತಿ ಸುಮಾರು 20 ಸೆ.ಮಿ. ಎತ್ತರವಿದೆ ಮತ್ತು ಒಂದು ತಾಮ್ರದ ಸರ ಗಮನಾರ್ಹ. ಸ್ಥಳೀಯವಾಗಿ ಕೆಲವರಿಗೆ ಪೂರ್ಣ ಪ್ರಮಾಣ ಮಡಿಕೆಗಳು, ವಿಜಯನಗರ, ಕೆಳದಿ ಕಾಲದ ನಾಣ್ಯಗಳು ದೊರೆಕಿವೆ.

ಆನಂತರದ ಕಾಲದಲ್ಲಿ ಪ್ರಸ್ತುತ ಹೊಗರೆಹಳ್ಳಿ ಬೆಟ್ಟದ ಬುಡದಿಂದ ಮೈದಾನಕ್ಕೆ ಸ್ಥಳಾಂತರಗೊಂಡಂತ್ತಿದೆ. ಗ್ರಾಮದಲ್ಲಿ ಕೆಲವು ಪ್ರಾಚೀನ ಕುರುಹುಗಳಿವೆ. ಅವುಗಳಲ್ಲಿ ಸಿದ್ದೇಶ್ವರ ದೇವಾಲಯದಲ್ಲಿರುವ ಶಿವಲಿಂಗ ಮತ್ತು ವೀರಗಲ್ಲು ಮತ್ತು ದಾನಶಾಸನ ಶಿಲ್ಪಗಳು ವಿಜಯನಗರ ಕಾಲಕ್ಕೆ ಸೇರಿವೆ. ಪ್ರಾಚೀನವಾಗಿ ಹೊಗರೆಹಳ್ಳಿ ಪ್ರದೇಶದಲ್ಲಿ ದೇಶೀ ಪದ್ಧತಿಯಿಂದ ಕಬ್ಬಿಣದ ಆಯುಧಗಳನ್ನು ತಯಾರಿಸಲಾಗುತ್ತಿದ್ದು ಇದರ ಕುರುಹುಗಳು ಬೃಹತ್ ಕಿಟ್ಟ ಮತ್ತು ಬೂದಿಗುಡ್ಡೆಗಳಿವೆ. ಆಯುಧಗಳನ್ನು ತಯಾರಿಸುತ್ತಿದ ಮನೆತನಗಳು ಈಗಲೂ ಹೊಗರೆಹಳ್ಳಿಯಲ್ಲಿವೆ. ಇವರನ್ನು ಸರ್ಪಕುಲದವರೆಂದು ಕರೆಯುತ್ತಾರೆ. ಈ ಮನೆತನಗಳು ಈಗಲೂ ಕಬ್ಬಿಣ ಕುಲುಮೆ ಕೆಲಸ ಮುಂದುವರಿಸಿದ್ದಾರೆ.

ಇದೇ ಮಾದರಿಯ ಅಪೂರ್ವವಾದ ಪ್ರಾಚೀನವಾದ ಅಂಜನೇಯ ದೇವಾಲಯ ಮತ್ತು ರಾಮನಬಿಲ್ಲು ಬಾಣ ಈಟಿಗಳು, ಅರಳಿಕಟ್ಟೆ, ಕಮ್ಮಾರಗಟ್ಟೆ, ಬೀರನಕೆರೆ, ಕಿಟ್ಟದಾಳ ಮುಂತಾದ ಕಡೆಗಳಲ್ಲಿ ಕಂಡುಬರುತ್ತವೆ. ಸ್ಥಳೀಯ ದೇಶೀ ತಾಂತ್ರಿಕತೆಯನ್ನು ಬಳಸಿ ತಯಾರಿಸಿದ ಬೃಹತ್ ಗಾತ್ರದ ಬಿಲ್ಲು, ಬಾಣ, ಈಟಿ ಮುಂತಾದ ಆಯುಧಗಳನ್ನು ಡಾ. ಅ.ಸುಂದರ ಅವರೊಂದಿಗೆ ಈ ಲೇಖಕನೂ ನೋಡಿ ದಾಖಲಿಸಿದ್ದಾನೆ. ಸ್ಥಳೀಯರು ಇವುಗಳನ್ನು ರಾಮ ಬಾಣ, ರಾಮನಬಿಲ್ಲುಗಳೆಂದು ಕರೆಯುತ್ತಾರೆ ರಾಮದೇವರ ಬಿಲ್ಲು ಎಂದು ಪೂಜಿಸುತ್ತಾರೆ.

ಈ ಗ್ರಾಮದಿಂದ 7 ಕಿ.ಮೀ. ದೂರದಲ್ಲಿರುವ ಸಿದ್ದರಬೆಟ್ಟದಲ್ಲಿ ಆದಿಇತಿಹಾಸ ಕಾಲದ ನೆಲೆಗಳಿವೆ. ಒಂದು ಪ್ರಾಕೃತಿಕ ಶಿಲಾಗವಿಯೂ ಇದೆ. ವಿಶಾಲವಾದ ಗವಿ ಶಿಲಾಮಯವಾಗಿದೆ. ಬೆಟ್ಟದ ಮೇಲೆ ನೀರಿನ ಚಿಲುಮೆ, ಭಗ್ನವಾದ ಸ್ಥಿತಿಯಲ್ಲಿರುವ ಮೂಲ ರಂಗನಾಥ ಮತ್ತು ಸಿದ್ದೇಶ್ವರ ದೇವಾಲಯಗಳ ಕುರುಹುಗಳಿವೆ. ಸ್ಥಳೀಯರು ಈ ಬೆಟ್ಟವನ್ನು ಹೊಗರೆಖಾನ್‌ಗಿರಿ ಎನ್ನುತ್ತಾರೆ. ಕಲ್ಲತ್ತಗಿರಿ – ಕೆಮ್ಮಣ್ಣುಗುಂಡಿ ಬೆಟ್ಟ ಸಾಲಿನಲ್ಲಿರುವ ಹೊಗರೆಖಾನ್‌ಗಿರಿಯಲ್ಲಿ ಸಹ ಉತ್ತಮ ಗುಣಮಟ್ಟದ ಕಬ್ಬಿಣದ ಅದಿರು ಈಗಲೂ ದೊರೆಯತ್ತದೆ, ಗಣಿಗಾರಿಕೆಯೂ ನಡೆಯುತ್ತಿದೆ. ಈ ಬೆಟ್ಟದ ಸಾಲಿನಿಂದಲೇ ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗೆ ಅದಿರು ಪೂರೈಕೆಯಾಗುತ್ತಿದೆ.

ಪ್ರಬಂಧ ಮಂಡನೆಗೆ ಮಾರ್ಗದರ್ಶನ ನೀಡಿದ ಡಾ. ಅ.ಸುಂದರ ಅವರಿಗೆ ಮತ್ತು ಕ್ಷೇತ್ರ ಕಾರ್ಯದಲ್ಲಿ ನೆರವಾದ ಡಾ. ಜಗದೀಶ್ ಅವರಿಗೆ ಕೃತಜ್ಞತೆಗಳು.

26. ಚಿತ್ರದುರ್ಗದ ಭೂಕಂದಾಯ ವ್ಯವಸ್ಥೆಯ ಮೇಲೆ ವಿಜಯನಗರ ಕಾಲದ ಪ್ರಭಾವ

ಡಾ. ಎಚ್.ಈ. ಬಸವರಾಜಪ್ಪ.

ವಿಜಯನಗರ ಅರಸರ ಅಧೀನದಲ್ಲಿ ಅಮರನಾಯಕರಾಗಿ ಚಿತ್ರದುರ್ಗ ಪ್ರದೇಶದಲ್ಲಿ ಚಿತ್ರದುರ್ಗದ ಅರಸರು ಪ್ರಮುಖರಾಗಿದ್ದರು. ವಿಜಯನಗರ ಅರಸರು ಚಿತ್ರದುರ್ಗ ಪ್ರದೇಶದ ಪಾಳೆಯಗಾರರ ಅಸ್ತಿತ್ವಕ್ಕೆ ಕಾರಣರಾಗಿದ್ದರು. ಬರ್ಟನ್‌ಸ್ಟೈನ್ ತನ್ನ "ಸೆಗ್ಮೆಂಟರಿ ಸಿದ್ಧಾಂತದಲ್ಲಿ" ವಿಜಯನಗರ ಸಾಮ್ರಾಜ್ಯವು ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಹೊಂದಿರಲಲ್ಲ. ಅದು ಸ್ಥಳೀಯವಾಗಿ ಉತ್ಪಾದಿಸಲ್ಪಟ್ಟ ಸಂಪತ್ತು ಸ್ಥಳೀಯವಾಗಿಯೇ ಹಂಚಲ್ಪಡುತ್ತಿತ್ತು ಎಂದಿದ್ದಾನೆ.. ವಿಜಯನಗರವು "ತುಂಡುರಾಜ್ಯಗಳ ಒಕ್ಕೂಟ" ಎಂಬ ಅವನ ಅಭಿಪ್ರಾಯವೂ ಇದೆ. ಕ್ರಿ.ಶ. 1565ರಲ್ಲಿ ವಿಜಯನಗರ ಪತನಾನಂತರ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯದಂತೆ ರಾಜಕೀಯ ನಿಯಂತ್ರಣ ವ್ಯವಸ್ಥೆ ಮತ್ತೆ ಕಾಣಿಸಿಕೊಳ್ಳಲಿಲ್ಲ.

ವಿಜಯನಗರೋತ್ತರ ಕರ್ನಾಟಕದ ಪ್ರಬಲ ಸಂಸ್ಥಾನಿಕರಲ್ಲಿ ಚಿತ್ರದುರ್ಗ ಪ್ರದೇಶವು ಒಂದು ಭಾಗವಾಗಿತ್ತು. ಚಿತ್ರದುರ್ಗದ ನಾಯಕತ್ವಕ್ಕೆ ಬಲವಾದ ತಳಹದಿಯನ್ನು ಹಾಕಿದವನು ತಿಮ್ಮಣ್ಣನಾಯಕ. ಅವನ ರಾಜಕೀಯ ಜೀವನವು ಅಮರನಾಯಕನಾಗಿ ಪ್ರಾರಂಭವಾಗಿ ಹೊಳಲ್ಕೆರೆಯನ್ನು ಅಮರ ಮಾಗಣಿಯನ್ನಾಗಿಯೂ, ನಂತರದಲ್ಲಿ ಚಿತ್ರದುರ್ಗ ಮತ್ತು ಹಿರಿಯೂರು ಪ್ರಾಂತ್ಯವನ್ನು ಸೇರಿಸಿಕೋಳ್ಳುತ್ತಾನೆ. ಇವನು ವಿಜಯನಗರ ಅರಸರ ಆದೇಶವನ್ನು ಪಾಲಿಸುವುದರ ಜೊತೆಗೆ ಅವರು ನಡೆಸಿದ ಯುದ್ಧಗಳಲ್ಲಿ ಭಾಗವಹಿಸಿದ್ದನು. ಇವರ ವಂಶಜರನ್ನು ಮದಕರಿನಾಯಕರೆಂದು ಕರೆಯುತ್ತಾರೆ. ಚಿತ್ರದುರ್ಗವನ್ನು ಕೇಂದ್ರವಾಗಿರಿಸಿಕೊಂಡು ಸುಮಾರು ಹನ್ನೊಂದು ಮಂದಿ ಅರಸರು ಕ್ರಿ.ಶ. 1568 ರಿಂದ 1779ರವರೆಗೆ ಒಟ್ಟು ಎರಡುನೂರ ಹನ್ನೊಂದು ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಚಿತ್ರದುರ್ಗ ಪ್ರದೇಶವು ಗಾತ್ರದಲ್ಲಿ ಚಿಕ್ಕದು, ಅದರ ಸಂಪನ್ಮೂಲಗಳೂ ಕಡಿಮೆ, ಇದರ ಪರಿಣಾಮವಾಗಿ ಕೆಳದಿಯ ನಾಯಕರಷ್ಟು ಸ್ವಯಮಾಧಿಕಾರವನ್ನು ಪಡೆದಿರಲ್ಲ ಆದರೆ, ಇವರ ಭೌಗೋಳಿಕ ಸ್ಥಾನ ಮಹತ್ವ ಪಡೆದಿತ್ತು.

ಚಿತ್ರದುರ್ಗದ ನಾಯಕರ ಆಡಳಿತಾವಧಿಯಲ್ಲಿ ವ್ಯಕ್ತಿಯೊಬ್ಬನು ಭೂಹಿಡುವಳಿಗಳನ್ನು ಆಸ್ತಿಯ ರೂಪದಲ್ಲಿ ಹೊಂದಿರಬಹುದೆಂಬ ತತ್ವಕ್ಕೆ ರಾಜನ ಮತ್ತು ಸಮಾಜದ ಮನ್ನಣೆ ಇತ್ತು. ಆ ಕಾಲದಲ್ಲಿ ಭೂಮಾಲಿಕರು ರೈತರಾಗಿರುತ್ತಿದ್ದರು. ರಾಜರು ಭೂಕಂದಾಯದ ವ್ಯವಹಾರಗಳನ್ನು ಗ್ರಾಮ ಮಟ್ಟದ ಅಧಿಕಾರಿಗಳಾದ ಗೌಡ, ಶಾನುಭೋಗ, ತಳವಾರ ಮುಂತಾದವರ ಮೂಲಕ ವಸೂಲಿ ಮಾಡುತ್ತಿದ್ದರು. ಜೊತೆಗೆ ವಾರಸುದಾರರಿಲ್ಲದ ಭೂಮಿಯನ್ನು ತಮಗಿಷ್ಟ ಬಂದವರಿಗೆ ಹಂಚುವ, ದಾನ ನೀಡುವ ಅಧಿಕಾರವನ್ನು ಈ ನಾಯಕ ಅರಸರು ಇಟ್ಟುಕೊಂಡಿದ್ದರು. ಗ್ರಾಮದ ಹುದ್ದೆಗಳಲ್ಲಿ ಶಾನುಭೋಗರು ಮುಖ್ಯವಾಗಿದ್ದರು, ಗ್ರಾಮಕ್ಕೆ ಸೇರಿದ ಎಲ್ಲಾ ಭೂಕಂದಾಯದ ವಿವರವಾದ ದಾಖಲೆ ಪತ್ರಗಳು ಬೇಸಾಯವಾಗುವ ಹಾಗೂ ಬೇಸಾಯಕ್ಕೆ ಇನ್ನೂ ಒಳಪಟ್ಟಿರದ ಜಮೀನುಗಳ ಲೆಕ್ಕಾಚಾರ, ಬೆಳೆ ಫಸಲಿನ ಅಂದಾಜು ಮತ್ತು ಗ್ರಾಮದ ಆಡಳಿತ ವಿವರಗಳು ಇವೆಲ್ಲ ಶಾನುಭೋಗರ ವಶದಲ್ಲಿದ್ದವು. ಗೌಡಿಕೆ ಅಥವಾ ಗ್ರಾಮ ಮುಖ್ಯಸ್ಥನ ಅಧಿಕಾರವು ಅನುವಂಶಿಕವಾಗಿತ್ತು. ಗೌಡನು ಜನತೆಯ ಪ್ರತಿನಿಧಿಯಾಗಿಯೂ, ಸರಕಾರದ ಮಧ್ಯವರ್ತಿಯಾಗಿಯು ಕಾರ್ಯನಿರ್ವಹಿಸುತ್ತಿದ್ದನು. ಅವನ ಮುಖ್ಯವಾದ ಕೆಲಸವೇ ಭೂಕಂದಾಯನ್ನು ಇತರ ತೆರಿಗೆಗಳನ್ನೂ ವಸೂಲು ಮಾಡುವುದಾಗಿತ್ತು. ಈ ಸೇವೆಗಾಗಿ ಅವನಿಗೆ ತೆರಿಗೆರಹಿತ ಭೂಮಿ ದೊರಕುತ್ತಿತ್ತು. ನಿರ್ದಿಷ್ಟ ಗ್ರಾಮಗಳ ಭೂಕಂದಾಯವನ್ನು ವಸೂಲಿ ಮಾಡಿಕೊಳ್ಳುವ ಅಧಿಕಾರ ನೀಡಿದಾಗ ಬೇರೆ ಗ್ರಾಮಗಳ 'ಭೂಕಂದಾಯವು ಅದರೊಂದಿಗೆ ಬೆರತುಹೋಗದಂತೆ ಎಚ್ಚರ ವಹಿಸಲಾಗಿತ್ತು. ಭೂಕಂದಾಯದ ಮೊತ್ತವನ್ನು ಪಾವತಿ ಮಾಡಬೇಕಾಗಿರುವ ರೈತರ ಹೆಸರುಗಳನ್ನು ಸ್ಪಷ್ಟವಾಗಿ ನಮೂದಾಗುತ್ತಿದ್ದುವು. ಕಂದಾಯದ ಆಡಳಿತ ನಿರ್ವಹಣೆಯು ವಿಜಯನಗರ ಸಾಮ್ರಾಜ್ಯದ ಮಾದರಿಯಲ್ಲಿ ಚಿತ್ರದುರ್ಗದ ನಾಯಕ ಅರಸರು ಮುಂದುವರೆಸಿಕೊಂಡು ಬಂದಿದ್ದಾರೆ.

ಚಿತ್ರದುರ್ಗದ ನಾಯಕ ಅರಸರ ಕಾಲದಲ್ಲಿಯೇ ಪ್ರತಿ ಎಂಟು ಅಥವಾ 16 ಹಳ್ಳಿಗಳಿಗೆ ಒಂದರಂತೆ ಸ್ಥಾಪನೆಯಾದ ಹೋಬಳಿಗಳು ಕೇವಲ ಆಡಳಿತಾತ್ಮಕ ವಿಭಾಗೀಕರಣವಲ್ಲದೆ ಭೂ ಕಂದಾಯ ಸಂಗ್ರಹಣೆಯ ಘಟಕಗಳೂ ಆಗಿದ್ದವು.

ಇಂತಹ 16 ಗ್ರಾಮಗಳ ಒಂದು ಆಡಳಿತ ಘಟಕವನ್ನು ನಾಯಕ ಅರಸರು ನಿರ್ಮಿಸಿದ್ದರು. ಮಾಗಣೆ ಎನ್ನುವುದು ಒಂದು ಆಡಳಿತ ವಿಭಾಗ ಎಂದು ಶಾಸನದಿಂದ ತಿಳಿಯುತ್ತದೆ. ಪ್ರತಿಯೊಂದು ಸೀಮೆ ಅಥವಾ ಗ್ರಾಮಗಳ ಆಡಳಿತವನ್ನು ಪಾರುಪತ್ತೆಗಾರ, ನಾಡಗೌಡ, ನಾಯಕ, ದಳವಾಯಿ, ಗೌಡ ಮತ್ತು ಶಾನುಭೋಗರು ನೋಡಿಕೊಳ್ಳುತ್ತಿದ್ದರು. ಉದಾಹರಣೆಗೆ ಕ್ರಿ.ಶ. 1581ರ ಶಾಸನದಲ್ಲಿ ಚಿತ್ರದುರ್ಗದ ಎರಡನೇ ದೊರೆ ಓಬಣ್ಣನಾಯಕನ ಮಗ ಮದಕರಿನಾಯಕನು ಹಿರೇಗುಂಟನೂರು ಹೋಬಳಿ ರೊಟ್ಟಿಹಳ್ಳಿ ಗೌಡಿಕೆಯನ್ನು ಕೆರೆಯ ದೇವಪ್ಪಗೌಡನ ಮಗ ಸಿದ್ಧಾಪುರದ ಸಿದ್ಧಣ್ಣಗೌಡನು 200 ವರಹಗಳನ್ನು ಪಡೆಯುವುದರ ಮೂಲಕ ನೋಡಿಕೊಳ್ಳುತ್ತಿದ್ದ ಬಗ್ಗೆ ಉಲ್ಲೇಖವಿದೆ. ಬಿ.ಎಲ್.ರೈಸ್. ಅವರು "ಚಿತ್ರದುರ್ಗ ನಾಯಕರು ಪ್ರತಿ ನೇಗಿಲು ಒಂದಕ್ಕೆ ಒಂದೂವರೆ ದುರ್ಗಿ ಪಗೋಡ ಕಂದಾಯ ವಿಧಿಸುತ್ತಿದ್ದರು" ಎಂದಿದ್ದಾರೆ. ಭೂಮಿಯ ಸ್ವರೂಪ ಮತ್ತು ಬೆಳೆಯನ್ನು ಅನುಸರಿಸಿ ಭೂಕಂದಾಯವನ್ನು ನಿಗದಿಪಡಿಸುತ್ತಿದ್ದರು. ಹಾಗೇಯೆ ಕೆರೆ, ಬಾವಿ, ನದಿ ನೀರಿನಿಂದ ಕೈಗೊಳಪಟ್ಟ ಭೂಹಿಡುವಳಿಗಳ ಮೇಲೆ ಕೆಲವು ಸಲ ಪ್ರತಿಯೊಂದು ನೇಗಿಲಿಗೆ ಎರಡರಿಂದ ಮೂರು ಗದ್ಯಾಣದವರೆಗೆ ತೆರಿಗೆ ವಿಧಿಸಲಾಗಿತ್ತು. ಅಲ್ಲದೇ ಭೂ ಕಂದಾಯವು ಭೂಮಿಯ ಒಟ್ಟು ಆದಾಯದ 1/3 ಭಾಗವನ್ನು ವಸೂಲಿ ಮಾಡುತ್ತಿದ್ದರು. ಪ್ರತಿ ನೇಗಿಲಿಗೂ ಒಂದುವರೆ ದುರ್ಗಿ ವರಹವನ್ನು ನಗದು ಕಂದಾಯ ರೂಪದಲ್ಲಿ 'ಗ್ರಾಮ ಚಾವಡಿ'ಗಳ ಮೂಲಕ ಸಂಗ್ರಹಿಸುತ್ತಿದ್ದರು.

ಚಿತ್ರದುರ್ಗ ಪ್ರದೇಶದಲ್ಲಿ ನಾಯಕ ಅರಸರ ಕಾಲದಲ್ಲಿ ಭೂಕಂದಾಯ ವಸೂಲಿ ಮಾಡಲು ಬೇರೆ ಬೇರೆ ಅಧಿಕಾರಿಗಳಿದ್ದರು. ಅವರನ್ನು ಗೌಡ, ಶಾನಭೋಗ, ನಾಡಿಗ ಎಂದು ಗುರುತಿಸಲಾಗಿತ್ತು. ಶ್ಯಾನುಭೋಗರು ಕ್ರಮವಾಗಿ ಭೂಹಿಡುವಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ನೊಂದಾಯಿಸುವ ಜವಾಬ್ದಾರಿಯನ್ನು ಹೊಂದಿದ್ದರು. ನಾಯಕ ಅರಸರ ಕಾಲದಲ್ಲಿ ವ್ಯಾಪಾರ ವಾಣಿಜ್ಯದ ಮೇಲೆ ತೆರಿಗೆ ವಸೂಲಿ ಮಾಡಲಾಗುತ್ತಿತ್ತು. ಸ್ಥಳೀಯ ಸುಂಕ, ಹುಲ್ಲುಬನ್ನಿ, ಇಟ್ಟಿಗೆ ಗೋಡುಗಳ ಮೇಲಿನ ಸುಂಕ, ಅಬಕಾರಿ, ತಂಬಾಕು ಸುಂಕ ರಾಜ್ಯದ ಪ್ರಮುಖ ಆದಾಯ ಮೂಲಗಳಲ್ಲಿ ಮುಖ್ಯವಾಗಿದ್ದವು.

ಹಿರೇಮದಕರಿನಾಯಕನ ಆಳ್ವಿಕೆಯಲ್ಲಿ ಒಟ್ಟು 18 ಸೀಮೆಗಳಿದ್ದವು. ಇವನ ಆಡಳಿತದಲ್ಲಿದ್ದ ಒಟ್ಟು ಅದಾಯವು ಮಾರ್ಗಸುಂಕ, ಹುಲ್ಲುಬನ್ನಿ, ಭೂಕಂದಾಯ, ಇಟ್ಟಿಗೆ ಗುತ್ತಿಗೆ, ಎಲೆಮನೆ, ತಂಬಾಕು ಸುಂಕ, ಅಚಾರಗಾಣಿಕೆ, ಗಾಂಜ, ಷರಾಬು, ಉಪ್ಪಿನ ಸುಂಕ ವ್ಯಾಪಾರ ವಾಣಿಜ್ಯ ಇನ್ನಿತರ ತೆರಿಗೆ ಸೇರಿದಂತೆ 3,00.000. ವರಹದಷ್ಟು ಆದಾಯವಿತ್ತು.

ಚಿತ್ರದುರ್ಗದ ಮೊದಲನೇ ತಿಮ್ಮಣ್ಣ ನಾಯಕನೂ ತನಗೆ ಸೇವೆ ಸಲ್ಲಿಸಿದ ವಿರೂಪಾಕ್ಷ ಜೋಯಿಸರ ಮಗ ಪರುಶುರಾಮಪ್ಪನಿಗೆ ಹಾಗೂ ಅವರ ಮಕ್ಕಳಾದ ಯಲ್ಲಪ್ಪ, ಬೋನಪ್ಪ ಇವರಿಗೆ ನಿರೂಪ ಕೊಡಿಸಿದ. ಈ ವಿವರದಿಂದ ತನ್ನ ಅರಸನಿಗೆ ಅಂದಿನ ಜನರು ಸಲ್ಲಿಸಬೇಕಾದ ಕಂದಾಯದ ಬಗ್ಗೆ ಸ್ಪಷ್ಟವಾಗಿ ತಿಳಿಯುತ್ತದೆ. ಒಬ್ಬ ಶಾನುಭೋಗ ಸರಕಾರದ ಪರವಾಗಿ ಗ್ರಾಮದಿಂದ ವೈಯಕ್ತಿಕವಾಗಿ ಪಡೆಯಬಹುದಾದ ತೆರಿಗೆಯ ವಿವರ ಹೀಗಿದೆ.

೧. ೧ ಹೊಲ (ಪ್ರತಿಯೊಂದು ಗ್ರಾಮದಲ್ಲಿ ಸಾಗುವಳಿಯಾದ ಒಂದು ಹೊಲ)

೨. ೧ ಕೆರೆ ಹಿಂದೆ ಗದ್ದೆ (ಪ್ರತಿಯೊಂದು ಗ್ರಾಮದಲ್ಲಿ ಸಾಗುವಳಿಯಾದ ಕೆರೆ ಹಿಂದೆ ಒಂದು ಗದ್ದೆ)

೩. ೧ ತೋಟ (ಪ್ರತಿಯೊಂದು ಗ್ರಾಮದಲ್ಲಿ ಸಾಗುವಳಿಯಾದ ಕೆರೆ ಹಿಂದೆ ಒಂದು ತೋಟ)

೪. ೧ ಮಳಲು ಗ್ರಾಮದಲ್ಲಿ ಎರಡು ಎತ್ತಿನ ಗಳೇ ೧ಕ್ಕೆ ಅಳೆಯುವ ಭತ್ತ ಐದು ಕೊಳಗ

೫. ೧ ಎರೇಗ್ರಾಮದಲ್ಲಿ ಎಂಟೆತ್ತಿನ ಗಳೆ ೧ಕ್ಕೆ ಅಳೇವತ್ತ ಹತ್ತು ಕೊಳಗ ಹೊರಹುಲ್ಲು.
ಮೊರಬತ್ತ, ಬೊಗೆವತ್ತ (ಬೊಗಸೆ ಬತ್ತ) ಸೂಲಿಗೆ ೨೩)

೬. ರೈತ ತರುವ ಕಂದಾಯಕ್ಕೆ ದುರ್ಗಿ ೧೯ ವರಹ ೧ಕ್ಕೆ ರುಸುಮುಗ ೧ ಹಾಗದ ಕಾಸು

೭ ೧ ಜಾಡರ ಮಗ್ಗಕ್ಕೆ ಹಾಗದ ಕಾಸು.

೮. ಅಂಗಡಿ ೧ಕ್ಕೆ ದಿನ ೧ಕ್ಕೆ ದುಗ್ಗಾಣಿ ತೂಕ ಅಡಿಕೆ ೧೯ ವೀಳಯದಲೆ

೯. ಗೊಲ್ಲರ ಹಟ್ಟಿ ೧ಕ್ಕೆ ವರ್ಷಕ್ಕೆ ೧ಕುರಿ ಮತ್ತು ಹಡದಿ ಸೀರೆ ಮುಂತಾಗಿ ನಡೆಸಿಕೊಡಬೇಕೆಂದು ದೊರೆಯು ತಾನೇ ಅಪ್ಪಣೆ ಮಾಡಿದನು.

ಇದೇ ರೀತಿ ನಾಯಕ ಅರಸರ ಕಾಲದಲ್ಲಿ ಗ್ರಾಮಗಳ ಆಡಳಿತ ನೋಡಿಕೊಳ್ಳಲು "ಬರಬಲೋತಿ ವ್ಯವಸ್ಥೆ" ಜಾರಿಯಲ್ಲಿತ್ತು. ಇವರು ಗ್ರಾಮದ ಅಭಿವೃದ್ಧಿಗಾಗಿ ಅಥವಾ ಅರಮನೆಯಲ್ಲಿ ನಿರ್ಧಿಷ್ಟ ದಿನದಂದು ಬಿಟ್ಟಿ ದುಡಿಯಬೇಕಾಗಿತ್ತು. ಉಳಿದ ದಿನಗಳಲ್ಲಿ ಸಲ್ಲಿಸುವ ಸೇವೆಗೆ ರೈತರಿಂದ ಅಯಾ ಪಡೆಯುತ್ತಿದ್ದ ಇವರನ್ನು ಹನ್ನೆರಡು ಜನ ಕೈವಾಡದವರು ಎಂದು ಕರೆಯುತ್ತಿದ್ದರು.

ಅಂದರೆ ಗ್ರಾಮದಲ್ಲಿ ವಾಸಿಸುವ ಜೋಯಿಸ, ಬಡಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ, ತೋಟಿ, ತಳವಾರ, ಓಲೇಕಾರ, ಪೂಜಾರಿ, ಕ್ಷೌರಿಕ, ನೇಕಾರ, ಇವರೇ ಮೊದಲಾದ ಆಯಾಗಾರರು ಇಡೀ ವರ್ಷ ತಮ್ಮ ವೃತ್ತಿಯಿಂದ ರೈತರಿಗೆ ಸಹಾಯ ಮಾಡಿ ಪ್ರತಿ ಕುಳದಿಂದ ಎಂದರೆ ಎರಡೆತ್ತಿನ ಬೇಸಾಯ ಒಂದಕ್ಕೆ ಮೊರಬತ್ತದ ಹುಲ್ಲು ತೆನೆ ಸಮೇತವಾಗಿ ಭತ್ತದ ಹುಲ್ಲು ಅಥವಾ ಜೋಳದ ಸಪ್ಪೆ ಮುಂತಾದವುಗಳು ಆಗಿದ್ದವು. ರಾಜಕುಮಾರರು, ರಾಜಕುಮಾರಿಯರು ಸಹ ಬೇವಿನ ಉಡಿಗೆ ಉಟ್ಟು, ಬಳಗ ಸಮೇತ ಹೊರಟು ಉತ್ಸಾವಾಂಬೆಗೂ, ಕಾಟಮ್ಮ ದೇವರಿಗೂ ಸೇವೆ ಸಲ್ಲಿಸುತ್ತಿದ್ದರು. ಹೀಗೆ ಸಲ್ಲಿಸುವಾಗ ಚಿತ್ರದರ್ಗದ ಪ್ರದೇಶಕ್ಕೆ ಸೇರಿದ ಎಲ್ಲ ಗ್ರಾಮದ ಜನರು ಕಾಣಿಕೆ ಸಲ್ಲಿಸಬೇಕಾಗಿತ್ತು. ಅದರ ವಿವರ ಹೀಗಿದೆ.

೧. ಗ್ರಾಮದ ತಳವಾರರು ಗ್ರಾಮ ೧ಕ್ಕೆ ೧ಟಗರು, ಒಂದು ತುಪ್ಪದ ಕುಂಭ ಸಹಾ ತರಬೇಕು.

೨. ದೊರೆಯು ಜೋಗಿಗೆ ಹೊರಟಾಗ ಪ್ರತಿಗ್ರಾಮದ ಗೌಡನೂ ಗ್ರಾಮ ೨ಕ್ಕೆ ೧೯೦ ವರಹ ಜೋಗಿ ಕಾಣಿಕೆಯನ್ನು ಹಾಕಬೇಕು.

೩. ಭಾದ್ರಪದ ಮಾಸದ ವಿನಾಯಕನ ಚೌತಿಯಲ್ಲಿ ವಿಶಿಷ್ಟ ಮಠದ ಐಯ್ಯನವರೂ ಕರ್ಜಿಕಾಯಿ ಮಾಡಿಕೊಂಡು ಬಂದು ಅದನ್ನು ಅರಮನೆಯ ಬೊಕ್ಕಸದ ಮನೆಗೆ ಒಪ್ಪಿಸಬೇಕು.

೪. ಜಾಡರ ಮಗ್ಗ ೧ಕ್ಕೆ ನೂಲ ಹಗ್ಗದ ಪ್ರಕಾರ ಪ್ರತಿ ವರುಷವೂ ಜಾಡರು ತಂದು ಅರಮನೆಗೆ ಒಪ್ಪಿಸಬೇಕು.

೫. ಗ್ರಾಮಾಂತರಗಳಿಂದ ಬಂದ ಹಜಾಮರು ತಿಂಗಳಿಗೆ ಒಂದು ಬಾರಿ ಸರದಿ ಮೇರೆಗೆ ದುರ್ಗಕ್ಕೆ ಬಂದು ಖಾಸಾಪಾಗದ ಕುದುರೆಗಳ ಮೈಕೂದಲನ್ನು ಅಯಾಲನ್ನು ಕತ್ತರಿಸಬೇಕು.

೬. ಗ್ರಾಮದ ಬೇಗಾರರು (ಮಾದಿಗರು) ಖಾಸಪಾಗದ ಕುದುರೆಗಳಿಗೆ ದಿನ ೧ಕ್ಕೆ ಹಸಿ ಹುಲ್ಲು ೧೦ ಹೊರೆ ಪ್ರಕಾರ ಸರದಿ ಮೇರೆಗೆ ತರಬೇಕು.

೭. ಗ್ರಾಮ ೧ಕ್ಕೆ ೨ ಆಳುಗಳು ಗ್ರಾಮಾಂತರಗಳಿಂದ ತಿಂಗಳಿಗೆ ೧ಸಾರಿ ದುರ್ಗಕ್ಕೆ ಬಂದು ಹುಲ್ಲನ್ನು ಕೊಯ್ದು ಬಣವೆ ಹಾಕಬೇಕು. ಈ ಪ್ರಕಾರ ಏರ್ಪಾಡು ಮಾಡಿಸಿದರು.

ಈ ಮೇಲಿನ ವಿವರಗಳಿಂದ ಚಿತ್ರದುರ್ಗದ ನಾಯಕ ಅರಸರ ಕಾಲದ ಭೂಕಂದಾಯ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗ್ರಹಿಸುವಾಗ ನಗದು ರೂಪದ ಹಣದ ಜೊತೆಗೆ ವ್ಯಕ್ತಿಗಳಿಂದ ಮತ್ತು ಸಮಾಜದಿಂದ ವಸ್ತುಗಳನ್ನು ಪಡೆಯುವುದು. ಇಲ್ಲವೆ ಕಂದಾಯವಿಲ್ಲದೆ ಬಿಟ್ಟಿ ದುಡಿಸಿಕೊಳ್ಳುವ ಕ್ರಮ ರೂಢಿಯಲ್ಲಿತ್ತು.

ಅಡಿಟಿಪ್ಪಣಿ

1, ಟಿ.ವಿ. ಮಹಾಲಿಂಗಮ್, ಅಡ್ಮಿನಿಸ್ಟ್ರೇಷನ್ ಆಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ, ಯೂನಿವರ್ಸಿಟಿ ಆಫ್ ಮದ್ರಾಸ್, ಮದ್ರಾಸ್, 1937, ಪು. 47–48.

2. ಹೆಚ್.ಟಿ. ದೇಶಪಾಂಡೆ, ಕೆ.ವೆಂಕಣ್ಣಾಚಾರ್ (ಅನು), *ಚಿತ್ರದುರ್ಗ ಪಾಳೆಯಗಾರರ ಕಾಲದಲ್ಲಿ ಭೂವ್ಯವಸ್ಥೆ;* ಎಂ.ವಿ. ಶ್ರೀನಿವಾಸ, ಲಕ್ಷ್ಮಣ್ಣ ತೆಲಗಾವಿ (ಸಂ), *ಚಂದ್ರವಳ್ಳಿ ಜಿಲ್ಲಾ ಇತಿಹಾಸ ಸಂಶೋಧನಾ ಮಂಡಲಿ*, ಚಿತ್ರದುರ್ಗ, 1976, ಪು. 31–33.

3. ಎಂ.ಎಸ್. ಪುಟ್ಟಣ್ಣ, *ಚಿತ್ರದುರ್ಗ ಪಾಳೆಯಗಾರರು*, ಪು. 70.

4. ಬಿ.ಷೇಕ್ ಅಲಿ (ಸಂ), *ಕರ್ನಾಟಕ ಚರಿತ್ರೆ ಸಂಪುಟ–3*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997.

5. ಬಿ.ಎಲ್. ರೈಸ್, ಎ.ಕ. ಸಂಪುಟ 11,

6. ಬಿ.ಎಲ್. ರೈಸ್. *ಮೈಸೂರು ಗೆಜೆಟಿಯರ್*, ಸಂಪುಟ 1 ಪು. 612.

27. ಕುರುವಗಡ್ಡೆ ಪರಿಸರದ ವಿಜಯನಗರ ಕಾಲದ ಅವಶೇಷಗಳು

ಡಾ. ಬಿ.ಸಿ. ರಾಕೇಶ್

ಪ್ರಸ್ತುತ ನನ್ನ ಸಂಶೋಧನ ಲೇಖನವು ಕುರವಗಡ್ಡೆ ಪರಿಸರದಲ್ಲಿ ಕಂಡುಬರುವ ವಿಜಯನಗರ ಕಾಲದ ಅವಶೇಷಗಳನ್ನು ಕುರಿತು ವಿವರಣೆಯನ್ನು ಒಳಗೊಂಡಿದೆ. ಗಡ್ಡೆರಾಮೇಶ್ವರ ಅಥವಾ ಕುರುವಗಡ್ಡೆ ಎಂದು ಕರೆಯಲ್ಪಡುವ ಸ್ಥಳವು ಹೊನ್ನಾಳಿ ತಾಲುಕು ದಾವಣಗೆರೆ ಜಿಲ್ಲೆಯಲ್ಲಿ ಬರುತ್ತದೆ. ಹೊನ್ನಾಳಿಯಿಂದ ಶಿವಮೊಗ್ಗ ರಸ್ತೆಯಲ್ಲಿ 10 ಕಿ.ಮಿ. ಸಾಗಿದರೆ ಬಲಗಡೆಗೆ ಹೊಸಕುರುವ ಇದೆ. ಎಡಕ್ಕೆ 1 ಕಿ.ಮಿ. ಸಾಗಿದರೆ ಕುರುವ ಬಡಾವಣೆ ಇದೆ. ಮೂಲ ಊರು ಕುರುವ ಗಡ್ಡೆಯಲ್ಲಿದ್ದು ನಂತರದಲ್ಲಿ ಅಲ್ಲಿಂದ ಸ್ಥಳಾಂತರಗೊಂಡಿರುವ ಸಾಧ್ಯತೆ ಇದೆ. ಕುರವಗಡ್ಡೆಯಲ್ಲಿರುವ ರಾಮೇಶ್ವರ ದೇವಾಲಯದ ಪರಿಸರದಲ್ಲಿ ಏಳು ಶಾಸನಗಳಿವೆ. ಅದರಲ್ಲಿ ಎರಡು ವಿಜಯನಗರ ಕಾಲದ ಶಾಸನಗಳಾಗಿವೆ. ಹಾಗು ವಿಜಯನಗರ ಕಾಲಕ್ಕೆ ಸಂಬಂಧ ಪಟ್ಟ ದೇವಾಲಯದ ಅವಶೇಷಗಳನ್ನು ದೇವಾಲಯದ ಪಕ್ಕದಲ್ಲಿ ಕಾಣಬಹುದು. ಈ ಪರಿಸರದಲ್ಲಿ ಕಾಣಸಿಗುವ ಅವಶೇಷಗಳನ್ನು ಅಧ್ಯಯನ ಮಾಡಲಾಗಿದೆ.

ಗಡ್ಡೆರಾಮೇಶ್ವರ ಎಂದು ಕರೆಯಲ್ಪಡುವ ಪ್ರದೇಶವು ಸು. 250 ಎಕರೆಯಷ್ಟು ವಿಶಾಲ ಭೂ ಭಾಗವಾಗಿದೆ. ಸುತ್ತಲು ತುಂಗಭದ್ರಾ ನದಿಯೂ ಎರಡು ಭಾಗಗಳಾಗಿ ವಿಭಾಗಿಸಿಕೊಂಡಿದ್ದರಿಂದ ಮಧ್ಯದಲ್ಲಿ ಗಡ್ಡೆ ರಚನೆಯಾಗಿದೆ. ಗಡ್ಡೆ ಭಾಗವು ಭದ್ರತಾ ದೃಷ್ಟಿಯಿಂದ ಸುರಕ್ಷತಾ ಸ್ಥಳವಾಗಿದೆ. ಆದರೆ ಮಳೆಗಾಲದಲ್ಲಿ ನೀರಿನ ಹರಿವು ಹೆಚ್ಚಾಗಿರುವುದರಿಂದ ಅಲ್ಲಿಗೆ ಹೋಗಲು ಕಷ್ಟಸಾಧ್ಯ. ಪ್ರಾಚೀನ ಕಾಲದಿಂದ ಅಂದರೆ ಜನಪದರ ಬಾಯಲ್ಲಿ ರಾಮಾಯಣದ ಕಾಲದಿಂದ ಸ್ಥಳ ಇದ್ದ ಉದಾಹರಣೆಯನ್ನು ನೀಡುತ್ತಾರೆ. ಆದರೆ ಗಡ್ಡೆರಾಮೇಶ್ವರದಲ್ಲಿ ಸಿಕ್ಕಿರುವ ಶಾಸನವನ್ನು ನಾವು ಗಮನಿಸಿದಾಗ ಕಲ್ಯಾಣ ಚಾಲುಕ್ಯರ ಶಾಸನಗಳು ಇರುವುದರಿಂದ ಆ ವೇಳೆಗಾಗಲೆ ಇದು ಪ್ರಸಿದ್ಧ ಸ್ಥಳವಾಗಿರುವುದು ತಿಳಿಯುತ್ತದೆ. ಉತ್ತರ ಭಾರತದ ಮಹಮ್ಮದಿಯರ ದಾಳಿಯಿಂದ ಸೊತ ರಾಜರು ದಕ್ಷಿಣ ಭಾರತದ ಇತಿಹಾಸದಿಂದ ಕಣ್ಮರೆಯಾಗುವ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ವಿಜಯನಗರ ಕಾಲದಲ್ಲಿ ಗಡ್ಡೆರಾಮೇಶ್ವರ ಪ್ರಾಮುಖ್ಯತೆಯನ್ನು ಪಡೆದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆದರೆ ಹಂಪೆಯ ಬದಲು ರಾಜಧಾನಿಯಾಗುವ ಸಾಧ್ಯತೆ ಇದ್ದುದರಿಂದ ಅದು ಕೂಡ ಕಾರಣಾಂತರದಿಂದ ಹಂಪೆಗೆ ರಾಜಧಾನಿಯನ್ನು ಸ್ಥಳಾಂತರಿಸಲಾಯಿತು. ಕುರುವಗಡ್ಡೆಯನ್ನು ಆಯ್ಕೆ ಮಾಡಿಕೊಂಡಿರುವ ಉದ್ದೇಶ ಹೋಯ್ಸಳರ ಕಾಲದಲ್ಲಿ ಪ್ರಸಿದ್ಧ ಪುಣ್ಯಸ್ಥಳ ಹಾಗು ನಗರವಾಗುವ ಸಾಧ್ಯತೆ ಇರುವುದರಿಂದ ಮೊದಲು ರಾಮೇಶ್ವರವನ್ನು ಆಯ್ಕೆ ಮಾಡಿಕೊಂಡಿರುವ ಸಾಧ್ಯತೆ ಇದೆ. ನಂತರದಲ್ಲಿ ಹಂಪಿಗೆ ಬದಲಾವಣೆ ಮಾಡಿರುವ ಸಾಧ್ಯತೆ ಇದೆ. ಪೂರ್ವದಲ್ಲಿ ಕಲ್ಯಾಣ ಚಾಲುಕ್ಯರು, ಹೊಯ್ಸಳರು ರಾಮೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕಾಗಿ ದಾನ ಕೊಟ್ಟಿರುವ ಉದಾಹರಣೆಗಳನ್ನು ನಾವು ನೋಡಬಹುದು. ಇಲ್ಲಿನ ಗುಡಿಯೊಂದರಲ್ಲಿ ರಾಂಪುರದ ಮೂಲ ಗುರುಗಳಾದ ಹಾಲಸಿದ್ದೇಶ್ವರರು ತಪಾನುಷ್ಠಾನ ಗೈದಿದ್ದುದಾಗಿ ತಿಳಿದುಬರುತ್ತದೆ. ಆ ಮಹಾತ್ಮರು ತೋರಿದ ಕುರುಹುಗಳಿಂದಾಗಿ 'ಕುರುವ' ಎಂದು ಹೆಸರಿರುವುದಾಗಿ ಜನಪದರ ಇನ್ನೊಂದು ಹೇಳಿಕೆಯಾಗಿದೆ.

ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ರಾಮೇಶ್ವರ ಸ್ಥಳವು ಹೋಯ್ಸಳರ, ಚಾಲುಕ್ಯರ ಕಾಲದಲ್ಲಿ ಅಲ್ಲದೆ ವಿಜಯನಗರದ ಅರಸರ ಕಾಲದಲ್ಲಿ ಹೆಚ್ಚು ಪ್ರಖ್ಯಾತಿಗೆ ಬಂದ ವಿಷಯ ತಿಳಿದು ಬರುತ್ತದೆ. ವಿಜಯನಗರದ ಅರಸರಾದ 2ನೇ ಹರಿಹರನಿಂದ ಸದಾಶಿವರಾಯನವರೆಗೆ ರಾಮೇಶ್ವರ ದೇವಾಲಯಕ್ಕೆ ದಾನ ಕೊಟ್ಟ ಉದಾಹರಣೆ

ನಮಗೆ ಸಿಗುತ್ತದೆ. 2ನೇ ಹರಿಹರನ ಕಾಲದ ಶಾಸನವು ಶ್ರೀ ಶಕೆ 1312 ಅಂದರೆ ಕ್ರಿ.ಶ. 1390 ಪ್ರಮೋದುಕ ಸಂವತ್ಸರ ಕಾರ್ತಿಕ ಶುದ್ಧ ಮೊದಲನೆ ಸೋಮವಾರದಂದು ಶಾಸನವನ್ನು ಸ್ಥಾಪಿಸಲಾಗಿದೆ. ಶಾಸನದಲ್ಲಿ ಸುತ್ತಲ ಗ್ರಾಮಗಳ ಗೌಡರ ಸಮ್ಮುಖದಲ್ಲಿ ಅಂದಿನ ಆನವೇರಿ ನಾಡೊಳಗಿನ ಆ ಉರಕನಗೊಂಟೆಯನ್ನು ಗಡ್ಡೆರಾಮೇಶ್ವರ ದೇವಾಲಯದ ಮುಂದೆ ಸ್ಥಾಪಿಸಲಾದ ದೀಪಸ್ಥಂಭ, ನಂದಾದೀವಿಗೆ ಹಾಗು ನೈವೇದ್ಯಕೆಂದು ಆಲೂರು ಸೀಮೆಯೊಳಗೆ ರಾಮೇಶ್ವರ ದೇವರ ಪೂರ್ವಕ್ಕೆ ತುಂಗಭದ್ರ ನದಿಯ ಸಮೀಪದಲ್ಲಿ ಉರಕನಗೊಂಟೆ ಗುಡಿಯ ಕಂಭವನ್ನು ನೆಟ್ಟು ಸುತ್ತಲು ನಾಲ್ಕು ದಿಕ್ಕಿಗೂ ಲಿಂಗ ಮುದ್ರೆ ಕಲ್ಲುನೆಟ್ಟು ರಾಮೇಶ್ವರ ದೇವರಿಗೆ ಪುರವರ್ಗವಾಗಿಬಿಟ್ಟು ರಾಮಾಪುರವೆಂದು ಹೆಸರಿಟ್ಟು ಯಾರು ಸುಂಕ ವಸೂಲಿ ಮಾಡಬಾರದೆಂದು ವಿಜಯನಗರದ ಅರಸ 2ನೇ ಹರಿಹರನ ಆಳ್ವಿಕೆಯಲ್ಲಿ ಹಾಕಿಸಿದ ಶಾಸನದಲ್ಲಿ ನೋಡಬಹುದಾಗಿದೆ. ಅದರಲ್ಲಿ ಕುರುವಗಡ್ಡೆಯ ಗಡಿಯನ್ನು ಕೂಡ ನಿರ್ಧರಿಸಲಾಗಿದೆ. ರಾಂಪುರ ನದಿ ದಂಡೆಯಿಂದ ಗೋವಿನಕೋವಿ ನದಿ ದಂಡೆಯವರೆಗೆ ಗಡ್ಡೆಯ ಮೇಲ್ಭಾಗದಲ್ಲಿನ ತುದಿಯವರೆಗೆ ನದಿಯ ದಂಡೆಯ ಎರಡ ಭಾಗವು 'ಕುರುವಗಡ್ಡೆ'ಗೆ ಸೇರಿದ ಭಾಗವಾಗಿದೆ. ನಾಲ್ಕು ಕಡೆಗಳಲ್ಲಿ ಲಿಂಗ ಮುದ್ರೆಕಲ್ಲುಗಳನ್ನು ನೆಟ್ಟು ಗಡ್ಡೆರಾಮೇಶ್ವರದ ಗಡಿಯನ್ನು ನಿರ್ಧರಿಸಿ ಹಾಕಿಸಲಾಗಿದೆ.

ವಿಜಯನಗರದ ಇನ್ನೊಬ್ಬ ಅರಸ ಸದಾಶಿವರಾಯನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ ಇನ್ನೊಂದು ಶಾಸನದಲ್ಲಿ ಶ್ರೀ ಶಕೆ 1479 ಅಂದರೆ ಕ್ರಿ.ಶ. 1557 ನಳ ಸಂವತ್ಸರ ಮಾಘ ಶುದ್ಧ 14ನೇ ಗುರುವಾರ ಸ್ಥಾಪಿಸಲ್ಪಟ್ಟ ಶಾಸನವಾಗಿದೆ. ಶಾಸನದಲ್ಲಿ ಒಳನಾಡೊಳಗಣ ಹೊನ್ನಾಳಿ ಸೀಮೆಯ ತುಂಗಭದ್ರ ನದಿ ಮಧ್ಯಸ್ಥಳವಾದ ಕುರುವಗಡ್ಡೆ ರಾಮೇಶ್ವರ ದೇವರಿಗೆ ದೇವತಾ ಕಾರ್ಯಗಳಿಗಾಗಿ ಅಮೃತಪಡಿ, ನಂದಾದೀವಿಗೆ ಆಪಸ್ಥಂಭ ಮುಂತಾದವುಗಳಿಗಾಗಿ ಕೆಳದಿಯ ಸದಾಶಿವನಾಯಕರಿಗೆ ಅಮರ ಮಾಗಣಿಯಾಗಿ ಕುರುವಾ, ಮರಸಗೊಂಡನಹಳ್ಳಿ ಹಾಗು ಹಾರನಹಳ್ಳಿಗೆ ಸೇರಿದ ಏಡೆಕೊಪ್ಪ ಮತ್ತಿ ಸಿರಿಗಿರಿಪುರಗಳ ತಳವಾರಕೆಯನ್ನು ಮುಕ್ತಗೊಳಿಸಿ ನೀಡಿದ ವಿವರಣೆಯನ್ನು ಶಾಸನ ಒಳಗೊಂಡಿದೆ. ಶಾಸನದಲ್ಲಿ ಇರುವ ನಿಯಮಗಳನ್ನು ಮೀರಿದವರು ಕಾಶಿಯಲ್ಲಿ ಗೋ ಬ್ರಾಹ್ಮಣರನ್ನು ಹತ್ಯ ಮಾಡಿದ್ದಕ್ಕೆ ಸಮ ಹಾಗು ತುಂಬಭದ್ರ ನದಿತೀರದಲ್ಲಿ ತಂದೆ-ತಾಯಿ ಹತ್ಯ ಮಾಡಿದ್ದಕ್ಕೆ ಸಮ ಎನ್ನುವಂತಹ ವಿವರಣೆಯನ್ನು ಶಾಸನದಲ್ಲಿ ತಿಳಿಸಲಾಗಿದೆ.

ವಿಜಯನಗರ ಕಾಲದಲ್ಲಿ ಗಡ್ಡೆರಾಮೇಶ್ವರ ದೇವಾಲಯ ಆವರಣದಲ್ಲಿ 2ನೇ ಹರಿಹರ ಹಾಗು ಸದಾಶಿವರಾಯನ ಶಾಸನಗಳ ಜೊತೆಗೆ ದೇವಾಲಯದ ಮುಂದೆ ಇರುವ ದೀಪಸ್ತಂಭವನ್ನು ಬೆಣಚು ಕಲ್ಲಿನಿಂದ ನಿರ್ಮಾಣ ಮಾಡಿ ಸ್ಥಾಪಿಸಲಾಗಿದೆ. ದೀಪಸ್ತಂಭವು ಸುಮಾರು 30 ಅಡಿ ಎತ್ತರವಾಗಿದೆ. ಮೂಲೆಮೂಲೆಗಳಲ್ಲಿ ದೀಪಗಳನ್ನು ಇಡಲು ಸ್ಥಳವನ್ನು ಮಾಡಲಾಗಿದೆ. ನಾಲ್ಕು ಕಡೆಗಳಲ್ಲಿ ದೀಪಗಳ ಸಾಲುಗಳನ್ನು ನಾವು ಕಾಣಬಹುದಾಗಿದೆ. ವಿಶಾಲವಾದ ಕಟ್ಟೆಯ ಮೇಲೆ ನಿಲ್ಲಿಸಲಾಗಿದೆ ಕಟ್ಟೆಯ ಮೇಲ್ಭಾಗದಲ್ಲಿ ವಿವಿಧ ಶಿಲ್ಪಗಳನ್ನು ನಾಲ್ಕು ಕಡೆಗಳಲ್ಲಿ ಕೆತ್ತಲಾಗಿದೆ. ದೇವಾಲಯದ ದಕ್ಷಿಣದ್ವಾರದ ಮುಂದುಗಡೆ ದೀಪಸ್ತಂಭವನ್ನು ನಿಲ್ಲಿಸಲಾಗಿದೆ. ದೇವಾಲಯದ ಬಲಪಕ್ಕದ ಸ್ವಲ್ಪ ದೂರದಲ್ಲಿ ಸುಮಾರು 5 ಅಡಿ ಎತ್ತರದ ಸುಮಾರು 4 ಅಡಿ ದಪ್ಪನಾದ ಕಲ್ಲಿನ ಮೇಲೆ ಒಂದು ಅಡಿ ಎತ್ತರದ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಈ ಉಬ್ಬುಶಿಲ್ಪವನ್ನು ಗಮನಿಸಿದರೆ ಇದು ದೇವಾಲಯಕ್ಕೆ ದಾನ ಕೊಟ್ಟ ಅಥವಾ ಶಾಸನವನ್ನು ಹಾಕಿಸಿದವರ ಶಿಲ್ಪದಂತೆ ಕಂಡು ಬರುತ್ತದೆ. ಉಬ್ಬುಶಿಲ್ಪ ನೋಡಲು ಸುಂದರವಾಗಿದ್ದು ಎರಡು ಕೈಗಳನ್ನು ಮುಗಿದುಕೊಂಡು ನಿಂತಿರುವ ಭಂಗಿಯಲ್ಲಿ ನಿಂತುಕೊಂಡಿರುವ ಶಿಲ್ಪವಾಗಿದೆ. ದೇವಾಲಯದ ಹಿಂಭಾಗದಲ್ಲಿ ನೆಲದಲ್ಲಿ ನಟ್ಟಂತೆ ಇರುವ ಒಂದು ಕಲ್ಲಿನ ಕಂಬವನ್ನು ನಾವು ಗಮನಿಸಬಹುದು. ಇದು ನೆಲದಿಂದ ಸುಮಾರು ಮೂರು ಅಡಿ ಎತ್ತರದಲ್ಲಿದೆ. ಕಂಬದ ಸುತ್ತಲು ಕೋನಾಕಾರವನ್ನು ಕೆತ್ತಲಾಗಿದೆ. ಜೊತೆಗೆ ದೇವಾಲಯದ ಸ್ವಲ್ಪದೂರದಲ್ಲಿ ಹಳೆಯ ದೇವಾಲಯದ ಅವಶೇಷಗಳನ್ನು ನಾವು ಕಾಣಬಹುದು. ಅದರಲ್ಲಿ ಭುವನೇಶ್ವರಿಗೆ ಹಾಕುವ ಕಲ್ಲಿನ ಮೇಲೆ ಹೂವಿನ ಚಿತ್ರವನ್ನು ಗಮನಿಸಬಹುದು. ಇವುಗಳನ್ನು ಗಮನಿಸಿದಾಗ ದೇವಾಲಯದ ಕೆಲವು ಭಾಗಗಳು ಅಥವಾ ದೇವಾಲಯವು ವಿಜಯನಗರ ಕಾಲದಲ್ಲಿ ನಿರ್ಮಿಸಿರಬಹುದು.

ಗಡ್ಡೆರಾಮೇಶ್ವರ ದೇವಾಲಯದ ಪರಿಸರದಲ್ಲಿ ಸಿಗುವ ಅವಶೇಷಗಳು ಹಾಗು ದೇವಾಲಯದ ಒಳಗಡೆ ರಾಮೇಶ್ವರಲಿಂಗ, ನಂದಿಯ ವಿಗ್ರಹಗಳು, ದುರ್ಗಾ ದೇವಿ, ಗಣೇಶ, ಸೂರ್ಯನಾರಾಯಣ, ಹಲವು ಯತಿಗಳ ಮೂರ್ತಿಗಳು, ದುಂಡಗಿನ ಆಕಾರದ ಕಲ್ಲುಗಳು, ನಾಗರಶಿಲ್ಪಗಳು, ಉದ್ಭವಲಿಂಗಗಳು, ಸಣ್ಣಲಿಂಗಗಳು ಹಾಗು ಇತರ ದೇವತೆಗಳನ್ನು ನಾವು ಕಾಣಬಹುದಾಗಿದೆ. ದೇವಾಲಯದ ಒಳಗಡೆ ಇರುವ ಶಿಲ್ಪಗಳನ್ನು ಗಮನಿಸಿದಾಗ ವಿಜಯನಗರ ಪೂರ್ವ ಕಾಲದಲ್ಲಿ ನಿರ್ಮಿಸಲಾದ ಶಿಲ್ಪಗಳಾಗಿ ಕಂಡುಬರುತ್ತವೆ. ಆದರೆ ನಂತರದಲ್ಲಿ ವಿಜಯನಗರ ಕಾಲದಲ್ಲಿ ಜೀರ್ಣೋದ್ಧಾರಗೊಂಡ ದೇವಾಲಯವನ್ನು ನಿರ್ಮಿಸಿದ ಅವಶೇಷಗಳು ನಮಗೆ ಸಿಗುತ್ತವೆ. ಕ್ರಿ.ಶ. 1998ರಲ್ಲಿ ಹಳೆಯ ದೇವಾಲಯವನ್ನು ಸಂಪೂರ್ಣವಾಗಿ ಕೆಡವಿ ಹಾಕಿ ಸರ್ಕಾರದ ಅನುದಾನದಲ್ಲಿ ಹೊಸ ದೇವಾಲಯವನ್ನು ನಿರ್ಮಿಸಲಾಗಿದೆ. ಒಟ್ಟಾರೆಯಾಗಿ ರಾಮೇಶ್ವರ ದೇವಾಲಯದ ಬಳಿಯಲ್ಲಿ ಸಿಗುವ ಎರಡನೆ ಹರಿಹರ ಹಾಗು ಸದಾಶಿವರಾಯರ ಕಾಲದ ಶಾಸನಗಳಿಂದ ಹಾಗು ದೀಪಸ್ತಂಭ. ಕಲ್ಲಿನ ಕಂಭದಲ್ಲಿನ ಉಬ್ಬು ಶಿಲ್ಪ. ಕಲ್ಲಿನ ಸಣ್ಣ ಕಂಬ ಹಾಗು ಇತರ ಅವಶೇಷಗಳನ್ನು ನಾವು ಗಮನಿಸಬಹುದಾಗಿದೆ. ವಿಜಯನಗರ ಕಾಲದಲ್ಲಿ ಪ್ರಸಿದ್ಧ ಸ್ಥಳವಾಗಿದ್ದ ರಾಮೇಶ್ವರ ದೇವಾಲಯದ ಸ್ಥಳವನ್ನು ಅಭಿವೃದ್ಧಿಪಡಿಸಿದರೆ ಪ್ರಸಿದ್ಧ ಪ್ರವಾಸಿ ತಾಣವಾಗುವುದರಲ್ಲಿ ಸಂಶಯವಿಲ್ಲ. ವಿಜಯನಗರ ಕಾಲದಲ್ಲಿ ಒಂದು ಪ್ರಸಿದ್ಧ ಸ್ಥಳವಾದ ಗಡ್ಡೆರಾಮೇಶ್ವರ ದೇವಾಲಯವನ್ನು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗುವ ಜವಬ್ದಾರಿ ನಮ್ಮ ಮೇಲೆ ಇದೆ.

ಆಕರಗಳು

1. ಕ್ಷೇತ್ರಕಾರ್ಯ – ಸ್ಥಳ ಪರಿಶೀಲನೆ.
2. *ಎಪಿಗ್ರಾಫಿಯ ಕರ್ನಾಟಕ*, 7, ಶಿವಮೊಗ್ಗ ಜಿಲ್ಲೆಯ ಶಾಸನಗಳು (ಹೊನ್ನಾಳಿ 6 & 9)ಭಾಗ 1 ಲೂಯಿಸ್ ರೈಸ್ ಮೈಸೂರು ಗೌರ್ನಮೆಂಟ್ ಪ್ರೆಸ್, ಬೆಂಗಳೂರು, 1902. ಪು.357, 358, 365 & 336.
3. *ಹೊನ್ನೆಲೆಗಳು*, ಕೊಟ್ರೇಶ್ ಉತ್ತಂಗಿ, ಸಹನಾದ್ರಿ ಪ್ರಕಾಶನ, ಹೊನ್ನಾಳಿ, 2004. ಪು. 79 & 80
4. *ವಿಜಯನಗರ ಕಾಲದ ಇತಿಹಾಸ ಲೇಖನ ಕಲೆ–ತುಳುವ ವಂಶ*, ಡಾ. ಬಿ.ಸಿ.ರಾಕೇಶ್ ಕರ್ನಾಟಕ ಅಪ್ರಕಟಿತ ಸಂಶೋಧನ ಹೊನ್ನಾಳಿ, ಮಹಾಪ್ರಬಂಧ, ವಿ.ವಿ. ಧಾರವಾಡ, 2008. ಪು. 25–30.

28. ಶ್ರೀಕೃಷ್ಣದೇವರಾಯನನ್ನು ಹುಡುಕುವಲ್ಲಿ ... ನೂರಾರು ಹೆಜ್ಜೆಗಳು

ಡಾ. ಎಸ್.ಕೆ. ಜೋಶಿ

ಇತಿಹಾಸ ಮೂಕವಾಗಿದೆ ಇಲ್ಲಿ ಹಂಪಿಯಲ್ಲಿ. ಆಳಿದುಳಿದ ಈ ವಿಜಯನಗರದ ಸಾಮ್ರಾಜ್ಯ ಸಿರಿಯ ನೆಲದಲ್ಲಿ ನಡೆವಾಗ, ಸಾವಿರಾರು ಭಗ್ನಾವಶೇಷಗಳನ್ನು ನೋಡುತ್ತಿರುವಾಗ, ಸದ್ದಿಲ್ಲದೆ ಕಣ್ಣುಗಳು ಹನಿಗಳನ್ನುದುರಿಸುತ್ತವೆ; ಕನಸಿಗೆರಡು ಕಣ್ಣುಗಳು ಬಂದಂತೆ, ಮಂಜಾಗುತ್ತವೆ.

ಒಂದೇ ಎರಡೇ, ಎಲ್ಲೆಮೀರಿ ದೃಷ್ಟಿ ಹರಿವವರೆಗೂ ಹರಡಿಕೊಂಡ ಸ್ಮಾರಕಗಳೊಂದಿಗೆ ಸುಂದರ ಹಾಗೂ ಭವ್ಯ ಇತಿಹಾಸ ಬೆಸೆದುಕೊಂಡ ಗಟ್ಟಿ ಅಪ್ಪುಗೆಯನ್ನು ಅನುಭವಿಸಿದ್ದಾರೆ ಹಲವು ಇತಿಹಾಸಗಾರರು. ಅಂತರಂಗದ ಭಾವನೆಗಳೊಂದಿಗೆ ಬಹಿರಂಗವಾಗಿ ಬರೆಯುವುದು ಹಾಗೂ ಮಾತನಾಡುವುದು ಕಷ್ಟವಾಗುತ್ತದೆ. ಅಂಥ ನೀರವ ನಿಶ್ಚಲತೆಯೊಂದಿಗೆ, ಬಹಿರಂಗವಾಗಿ ನುಡಿದಿದ್ದಾರೆ. ವಿಜಯನಗರದ ಇತಿಹಾಸ ಕಂಡು, ಅವರಲ್ಲಿ ಕೆಲವು ಮಹಿಮರನ್ನಿಲ್ಲಿ ಹೆಸರಿಸದೇ ಬಿಡಲಾಗದು.

ರಾಬರ್ಟ್ ಸಿವೆಲ್, ಆಲೂರು ವೆಂಕಟರಾಯರು, ರಂಗನಾಥ ದಿವಾಕರ, ಡಾ. ಜಿ.ಎಸ್. ದೀಕ್ಷಿತ, ಡಾ. ಎಂ. ಚಿದಾನಂದ ಮೂರ್ತಿ, ಡಾ. ಸೂರ್ಯನಾಥ ಕಾಮತ್, ಡಾ. ಅ. ಸುಂದರ, ಡಾ. ಎ.ವ್ಹಿ. ನರಸಿಂಹಮೂರ್ತಿ, ಡಾ. ಲಕ್ಷ್ಮಣ ತಲಗಾರಿ, ಡಾ. ಎಸ್.ವ್ಹಿ. ವೇಂಕಟೇಶಯ್ಯ, ಡಾ. ಕೆ.ಜಿ. ವಸಂತಮಾಧವ, ಡಾ. ಆರ್. ಗೋಪಾಲ್, ಗುರುಮೂರ್ತಿ ಪೆಂಡಕೂರ, ಡಾ. ಬಿ. ರಾಜಶೇಖರಪ್ಪ, ಮುಂತಾದ ಇನ್ನೂ ಹತ್ತು ಹಲವಾರು ವಿದ್ವಾಂಸರುಗಳು, ನನ್ನ ಸ್ಮೃತಿಯಲ್ಲಿ.

ಇವರೆಲ್ಲರು ವಿಜಯನಗರ ಕಾಲದ ಇತಿಹಾಸ ಸಂಶೋಧನೆಯ ತಹತಹದಲ್ಲಿ, ಕಟ್ಟುನಿಟ್ಟಾದ ಚೌಕಟ್ಟನ್ನು ಹುಡುಕುತ್ತ, ಅದಕ್ಕೆ ಬೆಲೆ ನೀಡಿ ನೆಲೆನೀಡಿ ಶಿಸ್ತನ್ನು ನೀಡಿ ಬೆಳಕು ಚೆಲ್ಲಿದವರು. ಇವರೆಲ್ಲ ಅದರ ಸಾಂಸ್ಕೃತಿಕ ಸಂಬಂಧಗಳ ಇತಿಹಾಸ ಪದರುಗಳ ದೊಡ್ಡ ಧ್ವನಿಗಳು ಆಗಿದ್ದಾರೆ.

ಶ್ರೀಕೃಷ್ಣದೇವರಾಯ : ನೂರೊಂದು ನೆನಪುಗಳು

ಜಗತ್ತಿನ ಕೆಲವೇ ಅದ್ಭುತ ಚರಿತ್ರೆಗಳಲ್ಲಿ, ಕರ್ನಾಟದ ಶ್ರಿ ಕೃಷ್ಣದೇವರಾಯ ರಾಜರುಗಳ ಆಗಣಿತ ತಾರಾಗಣಗಳ ನಡುವೆ, ಅತ್ಯಂತ ಪ್ರಕಾಶಮಾನವಾಗಿ ಹೊಳೆವ ನಕ್ಷತ್ರ. ಆತ ಮಧ್ಯಯುಗೀನ ದಕ್ಷಿಣ ಭಾರತದ ಅದ್ಭುತ ಚರಿತ. ಆತನ ನೂರೊಂದು ನೆನಹುಗಳು ಭಾವನಾತ್ಮಕವಾಗಿ ತಲ್ಲಣಗೊಳಿಸುತ್ತದೆ. ಆತನು ಕಟ್ಟು ನಿಟ್ಟಾದ ರಾಜಸ್ವದ ಚೌಕಟ್ಟನ್ನು ಹಾಕಿಕೊಂಡು, ಅದಕ್ಕೆ ಬೆಲೆ ಕೊಟ್ಟು, ಬಹು ವಿಧ ಶಿಸ್ತಿನಿಂದ ಬೆಳೆದಂಥ ಅಪರೂಪದ ಚಕ್ರವರ್ತಿ. ಜೊತೆಗೆ ಸಾಂಸ್ಕೃತಿಕ ಹಾಗೂ ಕಲಾತ್ಮಕ ಸಂಬಂಧಗಳ ದೊಡ್ಡ ಧ್ವನಿ.

ವಿಜಯನಗರವನ್ನಾಳಿದ ನಾಲ್ಕು ರಾಜ ವಂಶಗಳು:

ಸಂಗಮ ವಂಶ	: (1336 – 1485)
ಸಾಳುವ ವಂಶ	: (1485 – 1491) ಹಾಗೂ (1486 – 1505)
ತುಳುವ ವಂಶ	: (1491 – 1529) ಹಾಗೂ (1506 – 1572)
ಅರವೀಡು ವಂಶ	: (1571 – 1546) & (1570 – 1726)

ಈ ವಂಶಗಳಲ್ಲಿ ಮೊದಲ ಮೂರು ವಂಶಗಳು ವಿಜಯನಗರ ಅಂದರೆ ಹಂಪಿಯಿಂದ ಆಡಳಿತ ನಡೆಸಿದರೆ, ನಾಲ್ಕನೆಯ ವಂಶವು ಪೆನುಗೊಂಡ ಹಾಗೂ ಚಂದ್ರಗಿರಿಗಳಿಂದ ಆಡಳಿತ ನಡೆಸೀತು. ಸಧ್ಯಕ್ಕೆ ಲಭ್ಯವಾಗಿರುವ ಶಾಸನಗಳು ಹಾಗೂ ದಾಖಲೆಗಳನ್ನು ಆಧರಿಸಿ ವಿಜಯನಗರದ ಅರಸು ಮನೆತನಗಳ ಆಡಳಿತದ ದಿನಾಂಕಗಳನ್ನು ಗುರುತಿಸಲಾಗಿದೆ. (ಶಿವ ಪ್ರಸಾದ ಟಿ.ಆರ್.; ಶ್ರೀ ಕೃಷ್ಣದೇವರಾಯ. ಪುಟ 66–67)

ತುಳುವ ವಂಶದ ಅವಧಿಯಲ್ಲಿ; ವಿಯನಗರವು [1491–1572] ತನ್ನ ವೈಭವದ ಉತ್ತುಂಗವನ್ನು ಮುಟ್ಟಿತು; ಹಾಗೂ ಯಾರೂ ಊಹಿಸಲಾರದಂಥ, ದಕ್ಷಿಣದ ಐದು ಮುಸ್ಲಿಂ ಶಾಹಿಗಳಿಂದ ಕ್ರೂರ ದಾಳಿ ನಡೆದು, ವಿಜಯನಗರವು ನಾಶವಾದುದು ಅಷ್ಟೇ ವಿಪರ್ಯಾಸದ ಸಂಗತಿ.

ಮೂರನೆಯ ರಾಜವಂಶ ತುಳುವ ವಂಶ; ಮರೆಯಲಾಗದ ವಂಶ, ಶ್ರೀಕೃಷ್ಣದೇವರಾಯನದು

ಈ ವಂಶದಲ್ಲಿ ಬಲಾಢ್ಯನಾದ ಶ್ರೀಕೃಷ್ಣದೇವರಾಯನು ಬರುವುದರಿಂದ ಇದಕ್ಕೆ ಮಹತ್ವ

ನರಸನಾಯಕ (1486 – 1503),
ವೀರನರಸಿಂಹ (1505 – 1509),
ಶ್ರೀಕೃಷ್ಣದೇವರಾಯ (1510 – 1529–30)
ಅಚ್ಯುತರಾಯ (1530 – 1542)
ಸದಾಶಿವರಾಯ (1542 – 1576)

ಸದಾಶಿವರಾಯನು ಜೀವಮಾನವಿಡೀ ಬಂಧಿತನಾಗಿಯೇ ಇದ್ದ. ಅಳಿಯ ರಾಮರಾಯನು ತನ್ನ ಹೆಸರಿನಲ್ಲಿ 1542–1565 ರವರೆಗೆ ಆಡಳಿತ ನಡೆಸಿ ಸಾರ್ವಭೋಮನಾಗಿ ಮೆರೆದ; 1565 ರಲ್ಲಿ ರಕ್ಕಸ ತಂಗಡಿ ಯುದ್ಧದಲ್ಲಿ ಹತನಾದ.

ಎರಡನೆಯ ರಾಜ ವಂಶದ ನರಸಿಂಹ (1490–91), ಒಬ್ಬನೇ ರಾಜನಾಗಿ ಕೇವಲ, ಒಂದು ವರುಷ ಆಳಿದ. ಆತ ಬಹಳ ಸರಳ ಹಾಗೂ ಸಾದಾ ರಾಜನಾಗಿದ್ದರಿಂದ, ಆಡಳಿತವನ್ನು ನರಸನಾಯಕ ಎಂಬ ಮಂತ್ರಿಗೆ ಒಪ್ಪಿಸಿ, ದುರ್ದೈವದಿಂದ ತೀರಿಕೊಂಡ. ಆತನ ಇಬ್ಬರು ರಾಜಕುಮಾರರ ಕೊಲೆಯಾಯಿತು. ಈ ಸಂದರ್ಭ ಬಳಸಿಕೊಂಡು ನರಸನಾಯಕನು ತಾನೇ ಆಡಳಿತದ ಚುಕ್ಕಾಣಿ ಹಿಡಿದನು. ತದ ನಂತರ ತುಳುವ ವಂಶದ ಮನೆತನ ಇವನಿಂದ ಪ್ರಾರಂಭವಾಯಿತು.

ಶ್ರೀಕೃಷ್ಣದೇವರಾಯನ ಜನನ

ನರಸನಾಯಕನಿಗೆ ತಿಪ್ಪಾಂಬಿಕೆ, ನಾಗಲಾಂಬಿಕೆ, ಮತ್ತು ಓಬಲಾಂಬಿಕೆ ಎಂಬ ಪತ್ನಿಯರಿದ್ದರು. ತಿಪ್ಪಾಂಬಿಕೆಗೆ ವೀರನರಸಿಂಹ, ನಾಗಲಾಂಬಿಕೆಗೆ ಕೃಷ್ಣರಾಯ, ಓಬಲಾಂಬಿಕೆಗೆ ಅಚ್ಯುತರಾಯ ಹಾಗೂ ರಂಗರಾಯ ಎಂಬ ಮಕ್ಕಳು ಜನಿಸಿದರು. ನರಸನಾಯಕನಿಗೆ 25–35 ವರ್ಷವಾಗಿದ್ದಾಗ, ಅಂದರೆ, 1460–65ರ ಅವಧಿಯಲ್ಲಿ ವೀರ ನರಸಿಂಹನ ಜನನವಾಗಿತ್ತು. ನಂತರ ಜನಿಸಿದ್ದೇ ಭಾರತ ಕಂಡ ಅತ್ಯದ್ಭುತ ರಾಜನಾದ ಶ್ರೀಕೃಷ್ಣದೇವರಾಯ.

ಶ್ರೀಕೃಷ್ಣದೇವರಾಯನ ಜನ್ಮ ತಾರೀಖಿನ ಬಗ್ಗೆ ಸ್ವಲ್ಪ ನಿರ್ದಿಷ್ಟತೆ ಇಲ್ಲ. ಆದರೂ, ಶ್ರೀಕೃಷ್ಣದೇವರಾಯನ ಮಗಳಾದ ಮೋಹನಾಂಗಿಯು ಬರೆದಿರುವ ಕೃತಿ 'ಮಾರೀಚಿ ಪರಿಣಯಮ್' ಎಂಬ ಕಾವ್ಯದಲ್ಲಿ ತನ್ನ ತಂದೆ ಹುಟ್ಟಿದ್ದು ಶಕ ಸಂವತ್ಸರ 1393 ವಿಕೃತಿ ಆಮ ಸಂವತ್ಸರ, ಪುಷ್ಯ, ಬಹುಳ ದ್ವಾದಸಿ ಎಂದು ಉಲ್ಲೇಖಿಸಿದ್ದಾಳೆ, (ಶುಕ್ರವಾರ), ಇದರ ಆಧಾರದ ಮೇಲೆ (1393 + 78) ಕ್ರಿ.ಶ. 1471 ಜನೇವಾರಿ, 17 ತಾರೀಖಿನಂದು ಶ್ರೀಕೃಷ್ಣದೇವರಾಯನ ಜನ್ಮ ದಿನ ಎಂದು ಗೃಹಿತವಾಗುತ್ತದೆ. ಆದಾಗಿ, ಶ್ರೀಕೃಷ್ಣದೇವರಾಯನು 1509ರಲ್ಲಿ (1509–1471) ಅಂದರೆ ತನ್ನ ವಯಸ್ಸಿನ 38 ವರುಷಕ್ಕೆ ಪಟ್ಟಕ್ಕೆ ಬಂದನು.

ಶ್ರೀಕೃಷ್ಣದೇವರಾಯನ ವ್ಯಕ್ತಿತ್ವ

ಶ್ರೀಕೃಷ್ಣದೇವರಾಯ ದೃಢವಾದ ಮೈಕಟ್ಟು ಹಾಗೂ ಅವನ ಮನೋದಾರ್ಯಗಳ ಬಗ್ಗೆ ಸಾಕಷ್ಟು ಪ್ರಶಂಶೆಗಳಿವೆ. ಆತನಿಗೆ ಬಾಲ್ಯದಿಂದಲೇ ಒಳ್ಳೆಯ ಶಾರೀರಿಕ ಹಾಗೂ ಶೈಕ್ಷಣಿಕ ತರಬೇತಿ ದೊರೆತಿತ್ತು.

ಬಿಲ್ಲುಗಾರಿಕೆ, ಕತ್ತಿವರಸೆ, ಕುದುರೆ ಸವಾರಿ, ಲಿಂಗಸಾಧನೆ, ವ್ಯವಹಾರ, ರಾಜನೀತಿ, ಕಲೆ, ಸಾಹಿತ್ಯ ಇತ್ಯಾದಿಗಳ ಶಿಕ್ಷಣ ದೊರೆತಿದ್ದವು ಎಂದು, ಅಲ್ಲಸಾನಿ ಪೆದ್ದಣ, ನಂದಿ ತಿಮ್ಮಣ ಇವರ ಕೃತಿಗಳಲ್ಲಿ ವಿವರಗಳಿವೆ. ಚಾಣಕ್ಯ ನೀತಿ, ಸಂಜಯ ನೀತಿ, ವಿದುರ ನೀತಿಗಳನ್ನು ಅರಿಯುವ ಅಭ್ಯಾಸಿಗನಾಗಿದ್ದನು. ಅವುಗಳ ಅನುಷ್ಠಾನ ಮಾಡುತ್ತಿದನು. ರಾಜನೀತಿಜ್ಞ ಹಾಗೂ ವಿದ್ವಾಂಸನು ಮತ್ತು ಮಂತ್ರಿಯೂ ಆಗಿದ್ದ ತಿಮ್ಮರಸನಿಂದ ಸಾಕಷ್ಟು ವಿಚಾರಗಳನ್ನು ಅವಗತ ಮಾಡಿಕೊಳ್ಳುತ್ತಿದ್ದನು.

1520ರಲ್ಲಿ ಶ್ರೀಕೃಷ್ಣದೇವರಾಯನ ಆಸ್ಥಾನಕ್ಕೆ ಭೇಟಿಯಿತ್ತ ಪಾಯೆಸ್‌ನು ರಾಜನ ವ್ಯಕ್ತಿತ್ವದ ಬಗ್ಗೆ ದಾಖಲಿಸಿದ್ದಾನೆ. ಆತನ ವರ್ಣನೆಯಂತೆ "ನಿಜವಾದ ರಾಜ ಹೇಗಿರಬೇಕು ಎಂಬುದಕ್ಕೆ ಶ್ರೀಕೃಷ್ಣದೇವರಾಯನು ಸಾಕ್ಷಿಯಾಗಿದ್ದ. ಸಾಕಷ್ಟು ಬೆಳಗ್ಗೆ ಎದ್ದು ಗದೆ, ಕತ್ತಿ ತಿರುಗಿಸುವುದು, ಕುದುರೆ ಸವಾರಿ ಮಾಡುವುದು, ಮತ್ತು ಕುಸ್ತಿ ಇತ್ಯಾದಿಗಳನ್ನು ಮಾಡುವ ಅಭ್ಯಾಸವಾಗಿತ್ತು, ಒಳ್ಳೆಯ ಆಕರ್ಷಕ ವ್ಯಕ್ತಿತ್ವ, ಆತನ ವ್ಯಕ್ತಿತ್ವಕ್ಕೆ ಯಾರಾದರೂ ಮರುಳಾಗುತ್ತಿದ್ದರು. ಶತೃಗಳಿಗೆ ಅತನನ್ನು ನೋಡಿದರೆ ಸಾಕು ಗೌರವ ಉಕ್ಕುತ್ತಿತ್ತು. ಆತನ ಎದಿರು ಎಂಥಹರೂ ಮಾತನಾಡಲು ಪರದಾಡುವಂತಾಗುತ್ತಿತ್ತು.

ಉತ್ತಮ ರಾಜ ತಾಂತ್ರಿಕ, ಆಡಳಿತಗಾರ, ತಂತ್ರಗಾರ, ಯುದ್ಧಕೌಶಲ, ಮೃದು ಮನಸ್ಸು, ಕಠಿಣ ವ್ಯಕ್ತಿತ್ವ, "ಮ್ರುದಪಿ ಕಠೋದಾನಿ ಮೃದೂನಿ ಕುಸುಮಾದಪಿ" ಕರುಣೆ, ದಯೆ, ದಾನ, ಗುರು ಹಿರುಯರಿಗೆ ಗೌರವ, ಕಲಾಕಾರರಿಗೆ ಪ್ರೋತ್ಸಾಹ, ಹಬ್ಬ ಹರಿದಿನಗಳಲ್ಲಿ ಇಡೀ ರಾಜಧಾನಿಯೇ ವೈಭವೋಪೇತವಾಗಿ ಕಾಣುವಂತೆ ಯೋಚಿಸುವುದು, ಸಮಯೋಚಿತ ನಿರ್ಧಾರ, ದೂರದೃಷ್ಟಿ, ಆತ್ಮವಿಶ್ವಾಸ, ಸುಗುಣ ಚಿಂತನೆ, ಉಲ್ಲಾಸೀತನಾಗಿರುವ ಗುಣ.

ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಮೇಲಾಗಿ ಧಾರ್ಮಿಕವಾಗಿ ಇತ್ತ ಈ ನೆಲದ ಕರೆಗೆ ಓಗೊಟ್ಟು, ಕರುನಾಡಿನ ಉತ್ತುಂಗ, ಸರ್ವಗುಣ, ಸಂಪನ್ನ ದೊರೆಯಾದನು ಶ್ರೀಕೃಷ್ಣದೇವರಾಯ. ಮೇಲಿನವೆಲ್ಲವು ಆತನ ಅನನ್ಯ ಗುಣವಿಶೇಷಗಳು.

ಶ್ರೀಕೃಷ್ಣದೇವರಾಯನ ಪಟ್ಟಾಭಿಷೇಕ: (ಜನೇವಾರಿ 24, 1510)

ಪಟ್ಟಾಭಿಷೇಕದ ಸಂದರ್ಭದಲ್ಲಿ ಕೊಟ್ಟ ದತ್ತಿಗಳನ್ನು ತಿಳಿಸುವ ಹಂಪಿಯ ಶಿಲಾಶಾಸನದ ಪ್ರಕಾರ, ಆತನ ಪಟ್ಟಾಭಿಷೇಕ ನಡೆದದ್ದು, 1510, ಜನೇವಾರಿ 23–24 ಶುಭದಿನದಂದು, ಹಾಗೂ,

ಕೆಲದಿನಗಳ ಹಿಂದೆ ಬೆಳಕಿಗೆ ಬಂದ ಸಿಂಗನಾಯಕನ ಹಳ್ಳಿಯ ಶಿಲಾಶಾಸನ 1430 ಶಾಲಿವಾಹನ ಶಕೆ, ಶುಕ್ಲ ಸಂವತ್ಸರದ, ಮಾಘ ಶುದ್ಧ 14ರಲ್ಲಿ ಚತುರ್ದಶಿಯ ದಿನ ಪಟ್ಟಾಭಿಷೇಕ ನಡೆಯಿತೆಂದು ತಿಳಿಸುತ್ತಾರೆ. ಈ ದಿನವನ್ನು ನಮ್ಮ ಕ್ರಿ.ಶ. ಶಕೆಗೆ ಬದಲಿಸಿದರೆ, 1510 ಜನೇವಾರಿ 24ನೆಯ ತಾರೀಖು ಎಂದು ಸ್ಪಷ್ಟವಾಗುತ್ತಿದೆ.

ಶ್ರೀಕೃಷ್ಣದೇವರಾಯನ ಪಟ್ಟಾಭಿಷೇಕ ಮಹೋತ್ಸವವು ಬಹಳ ಸಡಗರ ಸಂಭ್ರಮಗಳಿಂದ ನಡೆಯಿತು. ಪಟ್ಟಾಭಿಷೇಕದ ಸಂದರ್ಭದಲ್ಲಿ ರಾಯನು ಹಂಪಿಯ ಶ್ರೀ ವಿರುಪಾಕ್ಷ ದೇವಾಲಯದ ರಂಗಮಂಟಪವನ್ನು ಕಟ್ಟಿಸಿ, ಉತ್ತರ ದ್ವಾರದಲ್ಲಿ ಗೋಪುರಗಳನ್ನು ಕಟ್ಟಿಸಿದನೆಂದು ಹೇಳುವ ಶಾಸನವಿದೆ: [ಶಿವಪ್ರಸಾದ ಟಿ.ಆರ್.; ಶ್ರೀಕೃಷ್ಣದೇವರಾಯ, ಪುಟ 89].

> 'ಶಾಲಿವಾಹನ ಶಕ ವರುಷ 1430 ಸಂದು,
> ಮೇಲೆ ನಡೆದ ಶುಕ್ಲ ಸಂವತ್ಸರದ ಮಾಘ ಶು. 14 ಲು
> ಶ್ರೀಮನ್ಮಹಾರಾಜಾಧಿರಾಜ ಪರಮೇಶ್ವರ ವೀರ ಪ್ರತಾಪ
> ಶ್ರೀವೀರ ಕೃಷ್ಣರಾಯ ಮಹಾರಾಯರು ಪಟ್ಟಾಭಿಷೇಕೋತ್ಸವ ಪುಣ್ಯ ಕಾಲದಲು
> ಶ್ರೀ ವಿರುಪಾಕ್ಷ ದೇವರ ಅಮೃತ ಪಡಿ ನೈವೇದ್ಯಕ್ಕೆ
> ಸಿಂಗನಾಯಕನ ಹಳ್ಳಿಯನೂ ಸಮರ್ಪಿಸಿ ದೇವ ಸಂಮುಖದ
> ಮಹಾ ರಂಗಮಂಟಪವನೂ ಆ ಮುಂದಣ ಗೋಪುರವನೂ
> ಕಟ್ಟಿಸಿ ... ಸಮರ್ಪಿಸಿದರು ....
> ಮಂಗಳ ಮಹಾಶ್ರೀ ಶ್ರೀ ಶ್ರೀ'

ಇದರ ಅರ್ಥ ಶ್ರೀಕೃಷ್ಣದೇವರಾಯನು ಪಟ್ಟಕ್ಕೆ ಬಂದ ಸಂದರ್ಭದಲ್ಲಿ ವಿರುಪಾಕ್ಷ ಸ್ವಾಮಿಯ ದೇವಸ್ಥಾನದ ಮುಂದಿನ ಮಹಾರಂಗ ಮಂಟಪ ಹಾಗೂ ಗೋಪುರವನ್ನು ನಿರ್ಮಿಸಿದ ಎಂದಾಗುತ್ತದೆ.

ಆಧ್ಯಾತ್ಮ ಸಾಹಿತ್ಯ ಸೇಗಂಧ ತಂದ ಹರಿದಾಸರು, ಯತಿಗಳು

ಸತ್ಯವಾದ ಸಂಸಾರವೇ ಸಾಧನದ ಕರ್ಮಭೂಮಿ, ಅದು ಅನುಭಾವದ ಭೋಗ ಭೂಮಿ. ದೇವರಿತ್ತುದ್ದನ್ನು ಅವನದೆಂದು ಅನುಭವಿಸುವದು ವೈರಾಗ್ಯವಿಹೀತ ಉಚಿತ ಜೀವನ ಧರ್ಮ. ಇದೇ ಬದುಕುವ ಕ್ರಮ. ಭೌತಿಕ ಸಂಪತ್ತು ಹಾಗೂ ಆಧ್ಯಾತ್ಮಿಕ ಸಂಪದಗಳನ್ನು ಪಡೆದು, ಯಾರನ್ನೂ ನೋಯಿಸದೇ ದೇವರತ್ತ ಸಾಗುವುದು, ವಿಜಯನಗರ ಕಾಲಾವಧಿಯಲ್ಲಿ ಬದುಕಿದ ವೈಷ್ಣವ ಯತಿಗಳ ಜೀವನ ಸಂದೇಶ.

ತುಂಗಭದ್ರಾ ನದಿಯ ದ್ವೀಪದಲ್ಲಿ, ಆನೆಗೊಂದಿಯ ಪೂರ್ವ ದಿಕ್ಕಿನಲ್ಲಿ ಅನತಿ ದೂರದಲ್ಲಿ, ಶ್ರೀ ಕೃಷ್ಣದೇವರಾಯನಿಗೆ ಗುರುವಾದ ಶ್ರೀ ವ್ಯಾಸರಾಯರ ಸಮಾಧಿ ಇದೆ. ಇಲ್ಲಿ ಒಟ್ಟು ಒಂಬತ್ತು ಬೃಂದಾವನಗಳಿವೆ. ಅವರೆಲ್ಲ ವೈಷ್ಣವ ಯತಿಗಳು, ಕೃಷ್ಣದೇವರಾಯನಿಗೆ ಒಂದಿಲ್ಲೊಂದು ತರಹದ ಆಧ್ಯಾತ್ಮ ಶಕ್ತಿ ಅದರಿಂದ ದೊರೆತಿದೆ:

1. ಪದ್ಮನಾಭ ತೀರ್ಥರು
2. ರವೀಂದ್ರ ತೀರ್ಥರು
3. ವಾಗೀಶ ತೀರ್ಥರು
4. ರಾಮವರ್ಯ ತೀರ್ಥರು (ವ್ಯಾಸರಾಜ ಮಠದ ಯತಿಗಳು)
5. ಶ್ರೀ ವ್ಯಾಸರಾಯರು, ಶ್ರೀ ಕೃಷ್ಣದೇವರಾಯನ ಗುರುಗಳು (ಉದಾ: ಕುಹುಯೋಗ)
6. ಶ್ರೀನಿವಾಸ ತೀಥರು
7. ರಾಮತೀರ್ಥರು (ರಾಘವೇಂದ್ರ ಸ್ವಾಮಿ ಮಠ)
8. ಸುಧೀಂದ್ರ ತೀರ್ಥರು
9. ಗೋವಿಂದ ತೀರ್ಥರು (ಇವರು ಯಾವ ಮಠಕ್ಕೂ ಸೇರದ ಬಿಡಿ ಸನ್ಯಾಸಿಗಳು)

ಈ ಯತಿಗಳೆಲ್ಲ ವ್ಯಕ್ತಿ ವಿಕಾಸವು ಸಮಾಜದ ವಿಕಾಸದಷ್ಟೇ ಮುಖ್ಯವೆಂದು, ಸಮಷ್ಟಿಗಳ ಇಡಿಯಾದ ಒಳಿತಿಗಾಗಿ, ಭಗವಂತನನ್ನು ಆರಾಧಿಸಿದರು. ಹಾಗೂ ಸರ್ವರಿಗೂ ಭಗವಂತನನ್ನು ಆರಾಧಿಸಲು ಸೂಚಿಸಿದರು, ಸನಾತನ ಭಾರತದ ಮುಖ್ಯ ಧಾರೆಗೆ ಸೇರುವಂತೆ ಮಾಡಿದರು. ಅದೇ ಸದ್ಧರ್ಮದ ಮಹಾ ದಾರಿಯಾಯಿತು. ಈ ಯತಿಗಳ ಜೊತೆಗೆ, ಹರಿದಾಸ ಶ್ರೇಷ್ಠರಾದ ಶ್ರೀ ಪುರಂದರ ಹಾಗೂ ಶ್ರೀ ಕನಕರನ್ನು ಮರೆಯುವಂತಿಲ್ಲ. ಅವರೀರ್ವರು ಕನ್ನಡ ಸಾಹಿತ್ಯಕ್ಕೆ ಆಧ್ಯಾತ್ಮಿಕ ಸೇಗಂಧ ತಂದವರು.

ಶ್ರೀಕೃಷ್ಣದೇವರಾಯ ಮತ್ತು ಕುಹುಯೋಗ

ಮೈಸೂರು ಜಿಲ್ಲೆಯ ಬನ್ನೂರಿನಲ್ಲಿ ಜನಿಸಿದ ವ್ಯಾಸರಾಯರು. ಅವರ ತಂದೆ ಚಲ್ಲಣ್ಣ, ತಾಯಿ ಸುಮತಿ. ಕಂಚಿಯಲ್ಲಿ ಷಡ್‌ದರ್ಶನಗಳ ಅಧ್ಯಯನ ಮಾಡಿದರು. ಮುಳಬಾಗಿಲಿಗೆ ಬಂದು ಶ್ರಿಪಾದರಾಯರ ಮಾರ್ಗದರ್ಶನದಲ್ಲಿ ದ್ವೈತವೇದಾಂತ ಅಧ್ಯಯನ ಮಾಡಿದರು. ಶ್ರೀ ಮದ್ವಾಚಾರ್ಯರಿಂದ ಮಹತಿ ಪಡೆಯ ದ್ವೈತ ಮಹಾಧೀಶರಾದರು.

ಶ್ರೀಪಾದರಾಯರು ವ್ಯಾಸರಾಯರನ್ನು, ಚಂದ್ರಗಿರಿ ಆಳುತ್ತಿದ್ದ ಸಾಳ್ವ ನರಸಿಂಹ ರಾಯನ ಬಳಿ ಕಳಿಸಿದರು. ನಂತರ ಇವರು 1493ರ ಸಮಯಕ್ಕೆ ಬಂದು ಅಲ್ಲಿಯೇ ನೆಲೆಸಿದರು. 6 ಅರಸರಿಗೆ ಗುರುಗಳಾಗಿದ್ದರು. ಶ್ರೀಕೃಷ್ಣದೇವರಾಯನಿಗೂ, ಶ್ರೀ ವ್ಯಾಸರಾಯರೆಂದರೆ ಅತ್ಯಂತ ಭಕ್ತಿ.

ಶ್ರೀಕೃಷ್ಣದೇವರಾಯ ಹಾಗೂ ಶ್ರೀ ವ್ಯಾಸರಾಯರಿಗೆ ಸಂಬಂಧಿತ ಅತ್ಯಂತ ಕುತೂಹಲದ ಘಟನೆಯೊಂದು ಇತಿಹಾಸದ ಸ್ಮರಣೆಯಲ್ಲಿದೆ; ಅದು ಕುಹು ಯೋಗ ವಿಹುತ್ತಿನ ಗಳಿಗೆ. ಕುಹುಗಳಿಗೆ ಎಂದರೆ ಅಮವಾಸ್ಯ ಕಳೆದು, ಶುಕ್ಲ ಪಕ್ಷದ ಪಾಡ್ಯ ಆರಂಭವಾಗುವ ಸಂಧಿಕಾಲದಲ್ಲಿ ಚಂದ್ರನ ಕಲೆಗಳು ನಷ್ಟವಾಗುತ್ತವೆ. ಅದು ವಿಷಗಳಿಗೆ.

ಈ ರೀತಿ ಸೇರುವ ಗ್ರಹಗಳು ಶನಿ, ಸೂರ್ಯ, ಅಂಗಾರಕ, ಮತ್ತು ರಾಹು. ಈ ರೀತಿಯಾಗಿ ಒಟ್ಟಿಗೆ ಸೇರುವ ಗ್ರಹಗಳು ಚಾಂಡಾಲತ್ವ ಪಡೆದು ಕೆಟ್ಟ ಫಲಗಳನ್ನು ಕೊಡುತ್ತವೆಯಂತೆ. ಇದಕ್ಕೆ ಕುಹು ಯೋಗ ಅಥವಾ ವಿಪತ್ತುಯೋಗ ಎನ್ನುತ್ತಾರೆ.

ಕುಹುಯೋಗ ಬಂದಾಗ, ದೇಶದ ಅಧಿಪತಿ ತಕ್ಷಣ ಮರಣ ಹೊಂದುತ್ತಾನೆ ಎಂಬ ನಂಬಿಕೆ. ಜಾತಕದ ಪ್ರಕಾರ ಶ್ರೀಕೃಷ್ಣದೇವರಾಯನದ್ದು ಕುಂಭಲಗ್ನ ಹೀಗಾಗಿ 4.2.1524ರಂದು ನಾಲ್ಕು ಗ್ರಹಗಳು ಒಂದೆಡೆ ಸೇರಿ, ರಾಜನಿಗೆ 'ಕುಹು

ಯೋಗ' ವಿಪತ್ತಿನ ಕಾಲ, ಬಂದು ಆತನ ಪ್ರಾಣಕ್ಕೆ ಅಪಾಯ ತಂದೊಡ್ಡಲಿದ್ದವು. ಈ ವಿಪತ್ತಿನ ಕಾಲದಲ್ಲಿ ಶ್ರೀ ವ್ಯಾಸರಾಯರು ಸಿಂಹಾಸನವನ್ನು ಏರಿ, ಅಲ್ಲಿ ರಾಜನಾಗಿ ಆಸೀನರಾಗಿ, ತದ ನಂತರ ಕುಹುಯೋಗದ ಸಮಯ ಗತಿಸಿದ ನಂತರ ಕೆಳಗಿಳಿದರು. ಹಾಗೂ ಶ್ರೀಕೃಷ್ಣದೇವರಾಯನಿಗೆ ಪ್ರಾಣಾಪಾಯ ತಪ್ಪಿಸಿದರು. ಇದಕ್ಕೆ ಸಂತುಷ್ಟರಾದ ಇಡೀ ಜನತೆ ಹಾಗೂ ಶ್ರೀಕೃಷ್ಣದೇವರಾಯನು ಆನಂದಪಟ್ಟರು. ವ್ಯಾಸರಯರಿಗೆ ನವರತ್ನಗಳಿಂದ ಅಭಿಷೇಕ ಮಾಡಿದನಂತೆ. ಹೀಗೆ, ವ್ಯಾಸರಾಯರು ಕೆಲ ಸಮಯ ರಾಜನಾದುದಕ್ಕೆ 'ವ್ಯಾಸರಾಜ' ಎಂದು ಕರೆಯಲಾರಂಭಿಸಿದರು.

ಶ್ರೀ ವ್ಯಾಸರಾಯರು 1539 ಮಾರ್ಚ್ 4ರಂದು ನಿಧನರಾದಾಗ ಅವರನ್ನು ತುಂಗಭದ್ರಾ ನದಿಯ ನವವೃಂದಾವನ ನಡುಗಡ್ಡೆಯಲ್ಲಿ ಸಮಾಧಿ ಮಾಡಲಾಯಿತು.

ಶ್ರೀಕೃಷ್ಣದೇವರಾಯನ ದಿನಚರಿ

ರಾಯನ ದೈನಂದಿನ ಕೆಲಸಗಳು ಸಮಯಕ್ಕೆ ಅನುಗುಣವಾಗಿ ನಡೆಯುತ್ತಿದ್ದವು.

* ರಾಜಕಾರ್ಯ
* ಜೋತಿಷಿಗಳು
* ವೈದ್ಯರ ಜೊತೆ ಚರ್ಚೆ
* ದೇವತಾರ್ಚನೆ
* ಗುರುಹಿರಿಯರು, ಮಂತ್ರಿಗಳು ಮತ್ತು ಯತಿಗಳ ಜೊತೆ ಸಮಾಲೋಚನೆ
* ವಿದೂಷಕರು, ಕವಿಗಳ ಜೊತೆ ಸಮಯ ಕಳೆಯುವುದು
* ಸಂಗೀತ, ನೃತ್ಯ ಆಸ್ವಾದನೆ ಹೀಗೆ ಪ್ರತಿಯೊಂದಕ್ಕೂ ಸಮಯ ನಿರ್ದಿಷ್ಟ ಮಾಡಲಾಗುತ್ತಿತ್ತು.

ರಾಯನ ಇಂಥ ಚಟುವಟಿಕೆಯ ವಿವರಗಳು, ರಾಯವಾಚಕ ಶ್ರೀಕೃಷ್ಣದೇವರಾಯನ ದಿನಚರಿ, ಹಾಗೂ ಪಾಯೇಪನ ವರದಿಗಳಲ್ಲಿ ದೊರಕುತ್ತಿವೆ.

ಪಾಯೋಗನು ಹೇಳುವಂತೆ, ರಾಯನು ನಿತ್ಯ ತನ್ನ ಅಧಿಕಾರಿಗಳೊಂದಿಗೆ ರಾಜಕೀಯ ವಿಷಯಗಳನ್ನು ಚರ್ಚಿಸುತ್ತಿದ್ದ, ಮಂತ್ರಿಗಳೊಡನೆ ಸಮಾಲೋಚಿಸಿ ಸೂಕ್ತ ಆದೇಶ ನೀಡುತ್ತಿದ್ದ. (ಈ ಗೋಪ್ಯ ಚರ್ಚೆಗೆ 'ಮಂತ್ರಾಲಯ'ವೆಂಬ ನೆಲ ಮನೆಯು ಇತ್ತೀನ ಉತ್‌ಖನದಲ್ಲಿ ದೊರೆತಿದೆ. (Under ground hall).

ನಂತರ, ಬೇಟ್ಟಿಗಾಗಿ ಕಾಯುತ್ತಿದ್ದ (ಪ್ರಮುಖರನ್ನು ಒಳಗೆ ಬರಲು ಹೇಳಿ ಕಳಿಸುತ್ತಿದ್ದ. ಬಂದವರು ರಾಜನಿಗೆ ಗೇರವ ಸಲ್ಲಿಸಿ, ಪಕ್ಕದ ಗೋಡೆಗಳ ಬಳಿ ಸಾಲಿನಲ್ಲಿ ಕೈಕಟ್ಟಿ ನಿಲ್ಲುತ್ತಿದ್ದರು.

ರಾಜನ ಎದುರು ಪರಸ್ಪರ ಮಾತನಾಡುವುದು ತಂಬೂಲ ತಿನ್ನುವುದು ಮಾಡುತ್ತಿರಲಿಲ್ಲ. ಅವರು ಹೇಳುವುದನ್ನು ಕೇಳಿ ತಾನು ಹೇಳಬೇಕಾದುದನ್ನು ಹೇಳಿದ ನಂತರ, ಅವರು ರಾಜನಿಗೆ ನಮಸ್ಕರಿಸಿ, ಹೊರಡುತ್ತಿದ್ದರು, ಅದು ಆತನ ದಿನಚರಿ. ಇಂದು, ರಾಜಸ್ವದ ಜನ ಕೂಡ ನಡೆಸಬಹುದು.

ಶ್ರೀಕೃಷ್ಣದೇವರಾಯನ ನ್ಯಾಯ ಪದ್ಧತಿ

ಶ್ರೀಕೃಷ್ಣದೇವರಾಯ ತನ್ನ 'ಅಮುಕ್ತ ಮಾಲ್ಯದ' ಕೃತಿಯಲ್ಲಿ ಮೊದಲನೆಯ ಶ್ಲೋಕದಲ್ಲಿ "ರಾಜನು ಪ್ರಜೆಗಳ ಪರಿಪಾಲನೆಗೆ ಅವಿರತ ಶ್ರಮಿಸಬೇಕು, ಅವರು ತಮ್ಮ ಕಷ್ಟಗಳನ್ನು ಹೇಳಿಕೊಂಡಾಗ ಅವುಗಳನ್ನು ಪರಿಹರಿಸಬೇಕು" ಎಂದು ಉಲ್ಲೇಖಿಸಿದ್ದಾನೆ. ಇದಕ್ಕೆ ಪೂರಕವಾಗಿ ವಿದೇಶ ಪ್ರವಾಸಿಗ 'ನ್ಯೂನಿಜ್' ವಿಜಯನಗರದ ನ್ಯಾಯ ಪರಿಪಾಲನೆ ವಿವರ ನೀಡಿದ್ದಾನೆ. ನ್ಯಾಯಕ್ಕಾಗಿ ಯಾರಾದರೂ ನೇರವಾಗಿ ರಾಜನ ಬಳಿ ಬರಬಹುದಾಗಿತ್ತು. ಕ್ಷಣದಲ್ಲಿ ಸಮಸ್ಯೆಯನ್ನು ಆಲಿಸಿ, ರಾಯನು ಪರಿಹಾರ ಸೂಚಿಸಿ ತೀರ್ಪು ನೀಡುತ್ತಿದ್ದ, ರಾಜನೇ ಸರ್ವಾಧಿಕಾರಿ – ಸರ್ವೋಚ್ಚ ನ್ಯಾಯದಾತ.

ನ್ಯಾಯ ವದಗಿಸಲು, ನ್ಯಾಯಾಧಿಕಾರಿಗಳ, ರಾಜ್ಯಪಾಲರು ಹಾಗೂ ಅಮಾತ್ಯರು ಸಹ ವಿಚಾರಣೆ ನಡೆಸುತ್ತಿದ್ದರು, ಅಪರಾಧ ಪ್ರಕರಣದಲ್ಲಿ ಅದೇ ಕ್ಷಣವೇ ತೀರ್ಪು ಕೊಡಲಾಗುತ್ತಿತ್ತು.

ಶ್ರೀಕೃಷ್ಣದೇವರಾಯನ ಯುದ್ಧಗಳು

ಶ್ರೀಕೃಷ್ಣದೇವರಾಯನು ಪಟ್ಟಕ್ಕೆ ಬರುತ್ತಲೇ, ಇಡೀ ಸಾಮ್ರಾಜ್ಯದ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡನು. ನಂತರ ಮುಸ್ಲಿಂ ಆಕ್ರಮಣಕಾರರ ಹುಟ್ಟಡಗಿಸಲು, ಸಾಮ್ರಜ್ಯ ವಿಸ್ತರಿಸಲು, ಹಿರಿಯರ ಆಶಯಗಳನ್ನು ನೆರವೇರಿಸಲು, ಹಾಗೂ ಧರ್ಮ ಸಂರಕ್ಷಣೆಗೆ ಅನೇಕ ಯುದ್ಧಗಳನ್ನು ನಡೆಸಿದ. ಅನೇಕ ಸಲ ಎರಡೆರಡು ಯುದ್ಧಗಳು ಒಟ್ಟೊಟ್ಟಿಗೆ ಜರುಗಿವೆ. ನಡೆದ ಎಲ್ಲಾ ಯುದ್ಧಗಳಲ್ಲೂ ಈತ ಜಯಗಳಿಸಿದ. ಆತ ಸೋತಿದ್ದೇ ಇಲ್ಲ.

ಶ್ರೀಕೃಷ್ಣದೇವರಾಯ ನಡೆಸಿದ ಯುದ್ಧಗಳು ಹಾಗೂ ಅಂದಾಜು ಕಾಲ ವಿವರ. [ಶಿವಪ್ರಸಾದ ಟಿ.ಆರ್.; ಶ್ರೀಕೃಷ್ಣದೇವರಾಯ : ಪುಟ 101)

ಯುದ್ಧ		ಕಾಲ
* ಉಮ್ಮತ್ತೂರು ದಂಡಯಾತ್ರೆ	:	ಕ್ರಿ.ಶ. 1510 ಮಾರ್ಚ್ 11 ಕ್ಕೆ ಮುಕ್ತಾಯ
* ರಾಯಚೂರು, ಮುದಗಲ್ಲ ವಶ	:	ಕ್ರಿ.ಶ. 1510 ಅಕ್ಟೋಬರ್
* ಮುಸ್ಲಿಂ ರಾಜಯ ಜೇಹಾದ	:	ಕ್ರಿ.ಶ. 1510, ಅಕ್ಟೋಬರ್ 15
* ಗಜಪತಿ (ಒರಿಸಾ) ಯೊಡನೆ ಯುದ್ಧ	:	ಕ್ರಿ.ಶ. 1510 ಅಕ್ಟೋಬರ್ 13
* ಎರಡನೆಯ ಉಮ್ಮತ್ತೂರು ದಂಡಯಾತ್ರೆ	:	ಕ್ರಿ.ಶ. 1512 ಸೆಪ್ಟೆಂಬರ್ 22
* ಉದಯಗಿರಿ ದಂಡಯಾತ್ರೆ	:	ಕ್ರಿ.ಶ. 1514 ಜ್ಯೂನ್ 9
* ಯವನ ರಾಜ್ಯ ಸ್ಥಾಪನೆ	:	ಕ್ರಿ.ಶ. 1514 ಸೆಪ್ಟೆಂಬರ್ 1
* ಕೋಡವೀಡು ದಂಡಯಾತ್ರೆ	:	ಕ್ರಿ.ಶ. 1515 ಜ್ಯೂನ್ 23
* ಕೊಂಡಪಲ್ಲಿ – ಪೊಟ್ನೂರು ಕಟಕ ದಂಡಯಾತ್ರೆ	:	ಕ್ರಿ.ಶ. 1516
* ಕೊನೆಯ ಬೇಹಾದ	:	ಕ್ರಿ.ಶ. 1517 ಸೆಪ್ಟೆಂಬರ್
* ಕೇತವಾರ್ ದಂಡಯಾತ್ರೆ	:	ಕ್ರಿ.ಶ. 1518 ಅಕ್ಟೋಬರ್ ಸೆಪ್ಟೆ
* ರಾಯಚೂರ ದಂಡಯಾತ್ರೆ	:	ಕ್ರಿ.ಶ. 1520 ಮೇ 11
* ಬಿಜಾಪುರ, ಗುಲ್ಬರ್ಗಾ ಮೇಲೆ ದಾಳಿ	:	ಕ್ರಿ.ಶ. 1521, ಮಾರ್ಚ್, ಏಪ್ರಿಲ್

ವಿಜಯನಗರ ಸೈನ್ಯದಲ್ಲಿ ಎಲ್ಲರಿಗೂ ಅವಕಾಶ

11 ಲಕ್ಷ ಪದಾತಿ, 500 ಆನೆಗಳು, 12000 ಕುದುರೆ ಸವಾರರು, 6 ಸೇನಾಪತಿಗಳು ಹೀಗೆ ರಾಯ ಸೈನ್ಯದ ಸಂಖ್ಯೆ ಹೇಳಲಾಗಿದೆ.

ವಿಜಯನಗರದ ಅರಸರು ಬೇರೆ ಬೇರೆ ಜಾತಿಯ, ಪ್ರದೇಶದ ಸೈನಿಕರನ್ನು, ಆಯ್ಕೆ ಮಾಡಲಾಗುತ್ತಿತ್ತು. ಕನ್ನಡಿಗರು, ತುರುಕರು, ಒಡ್ಡಿಯರು (ಒಡಿಸಾ), ಲಾಳ, ಅರಿಯ (ಮಹಾರಾಷ್ಟ್ರದವರು), ಗೇಳ, ಗುರ್ಜರ, ತೆಲುಗ, ತಿಗುಳ, ಹೊಲೆಯರ ಹುಳ್ಳ, ಮಾದಿಗರ, ಹಂಪ, ಮುಂತಾದ ವಿವಿಧ ಜಾತಿ ಹಾಗೂ ಪ್ರದೇಶದವರು ಇದ್ದರು.

ಅಂತತಃ, "ಸಾಹಿತ್ಯ ಸಂಗೀತ ಭಕ್ತಿಮಾರ್ಗ ನೀತಿ ಬೋಧೆಗಳಿಗೆ ಕೊಟ್ಟು ಪ್ರೋತ್ಸಹವಲ್ಲದೆ, ಇನ್ನೂ ಅನೇಕ ಕ್ಷೇತ್ರಗಳಲ್ಲಿ ಶ್ರೀಕೃಷ್ಣದೇವರಾಯನು ಯಶಸಿದ ಕೆಲಸವನ್ನು ನಾವು ಮರೆಯುವಂತಿಲ್ಲ. ದೇವಸ್ಥಾನಗಳನ್ನು ತೆಗೆದುಕೊಂಡರೆ, ಹಂಪಿಯಲ್ಲಿರುವ ಎಲ್ಲ ಪ್ರಮುಖ ದೇವಸ್ಥಾನಗಳನ್ನು ಕಟ್ಟಿಸಿದನು, ಇಲ್ಲದೇ ಪುನರುದ್ದಾರ ಮಾಡಿದನು, ರಾಜ್ಯಗಳಲ್ಲಿ ದೇವಾಲಯಗಳ ಜೀರ್ಣೋದ್ಧಾರ ಮಾಡಿ, ಅವುಗಳಿಗೆ ದಾಯಗೋಪುರಗಳನ್ನು ಕಟ್ಟಿಸಿದನು. ಅಂತೆಯೇ ಅವೆಲ್ಲ ಈ ಹೊತ್ತಿನವರೆಗೂ ಪ್ರಾಂಗಣಗಳಿಂದ ಸುರಕ್ಷಿತವಾಗಿವೆ. ಭದ್ರ ಕೋಟೆಗಳು, ಅರಮನೆಗಳು, ಬಾಜಾರುಗಳು ಅನನ್ಯ."

"ಅವನು ಕಟ್ಟಿಸಿದ ಎಷ್ಟೋ ಕೆರೆಗಳು, ಕಾಲುವೆಗಳು ಇನ್ನೂ ಹಂಪಿಯ ಪರಿಸರದಲ್ಲಿ ಕೆಲಸ ಮಾಡುತ್ತಿವೆ. ರೈತರಿಗೆ ಅನುಕೂಲವಾಗುವಂತೆ ಭೂಕಂದಾಯವನ್ನು ನಿಗದಿ ಮಾಡಿದನು. ಇದು ರೈತರಿಗೆ ವರದಾನವಾಯಿತು. ಇವನ್ನು ಶರ್ತಗಳು

ತಮ್ಮ ತಮ್ಮ ರಾಜ್ಯಗಳಲ್ಲಿಯೂ ಕೂಡ ಅನುಸರಿಸಿದರು. ಈ ಪದ್ಧತಿಗೆ 'ರಾಯರೇಖಾ' ಎಂದು ಹೆಸರು. ಇದರಿಂದ ರೈತರು ರಾಜರಿಗೂ ನಾಯಕರು ಸಿರಿವಂತರಾದರು." (ಡಾ॥ ಜಿ.ಎಸ್. ದೀಕ್ಷಿತ್).

"ಹೀಗೆ ಕನ್ನಡದಲ್ಲಿ ಭಾಗವತ ಸಾಹಿತ್ಯ, ದಾನ ಸಾಹಿತ್ಯ ವಿಜಯನಗರ ಸಾಮ್ರಾಜ್ಯದಲ್ಲಿ 'ರಾಯರೇಖಾ', ರಾಯಗೋಪುರ (ವಾಸ್ತು) ಮತ್ತು ರಾಯ ಕಾಲುವೆ (ನೀರಾವರಿ), ಶಿಲೆಗಳು ಇತ್ಯಾದಿಗಳನ್ನು ಒದಗಿಸಿ ಕೊಟ್ಟು ತೆಲಗು ಪ್ರದೇಶ, ತಮಿಳು ಪ್ರದೇಶಗಳಿಗೆ ಈತನು ಅತ್ಯಂತ ಪ್ರಿಯ ರಾಜನಾದನು, ಕನ್ನಡಿಗರಿಗೆ ಪ್ರಿಯನಾದನಲ್ಲದೆ, ಕೇರಳೀಯರಿಗೂ ಬೇಕಾದವನಾದನು. ಇಡೀ ದಕ್ಷಿಣ ಭಾರತವೇ ಈ ಮಹಾನ್ ಚಕ್ರವರ್ತಿಯನ್ನು ಆದರದಿಂದ ಕಂಡಿತು."

ಸೋಲನ್ನು ಎಂದು ಅರಿಯದ ಸಾಮ್ರಾಟನೀತ ಶ್ರೀಕೃಷ್ಣದೇವರಾಯ. 1526ರಲ್ಲಿ ದಿಲ್ಲಿಯನ್ನು ಗೆದ್ದು ಮೊಘಲ್ ರಾಜ್ಯ ಸಂಸ್ಥಾಪಿಸಿದ ಬಾಬರ್ "ದಕ್ಷಿಣ ಭಾರತದಲ್ಲಿ ಬಹು ದೊಡ್ಡ ಪರಾಕ್ರಮಿ ಸಾಮ್ರಾಟನಿದ್ದಾನೆಂದು ನಾನು ಕೇಳಿರುವೆ" ಎಂದು ಬಾಬರನಾಮದಲ್ಲಿ ಕೃಷ್ಣದೇವರಾಯನನ್ನು ದಾಖಲಿಸುತ್ತಾನೆ.

ಜಗತ್ತಿನ ಇತಿಹಾಸದಲ್ಲಿ ಸಾಮ್ರಾಟರು ಹಲವಾರು ಆಗಿ ಹೋದರು. ಆವರಲ್ಲಿ 'ದಿ ಗ್ರೇಟ್ (The Great) ಎನಿಸಿಕೊಂಡವರು ಕೆಲವರು ಮಾತ್ರ. ಜ್ಯೂಲಿಯಸ್ ಸೀಝರ್ (ರೋಮ್), ಅಲೆಕ್ಝಾಂಡರ (ಗ್ರೀಸ್), ಫ್ಯಾರಹೋ (ಇಜಿಪ್ತ), ಅಶೋಕ (ಇಂಡಿಯಾ), ಮಿಂಗ ಘೂ (ಚಾಯನಾ), ಪುಲಿಕೇಶಿ (ಇಂಡಿಯಾ, ಕರ್ನಾಟಕ), ಕೃಷ್ಣದೇವರಾಯ (ಕರ್ನಾಟಕ–ಇಂಡಿಯಾ), ಅಕಬರ್ (ಇಂಡಿಯಾ), ಇಂಕಾ (ಮಕ್ಸಿಕೋ).

ಶ್ರೀಕೃಷ್ಣದೇವರಾಯನಂಥ ಬಲಾಢ್ಯ ಚಕ್ರವರ್ತಿಯನ್ನು ಕಂಡ ಕರ್ನಾಟಕ – ಭಾರತ ಧನ್ಯ. ಅವನನ್ನು ಹುಡುಕಲು ಇಟ್ಟ ವಿದ್ವಾಂಸರ ನೂರಾರು ಹೆಜ್ಜೆಗಳನ್ನು ಇಲ್ಲಿ ಹುಡುಕುವ ಸಣ್ಣ ಪ್ರಯತ್ನ ಇದು.

ಆಧಾರಗಳು ಗ್ರಂಥಗಳು

1. ಡಾ॥ ಜಿ.ಎಸ್. ದೀಕ್ಷಿತ, ಕೃಷ್ಣದೇವರಾಯ ಮತ್ತು ಕನ್ನಡ ಸಂಸ್ಕೃತಿ
2. ಡಾ॥ ಎಂ. ಚಿದಾನಂದ ಮೂರ್ತಿ, ದಕ್ಷಿಣ ಭಾರತದ ಪರಿಪೂರ್ಣ ಹಿಂದೂ ಚಕ್ರವರ್ತಿ ಶ್ರೀ ಕೃಷ್ಣದೇವರಾಯ
3. ಡಾ॥ ಸೂರ್ಯನಾಥ ಕಾಮತ, ಕೃಷ್ಣದೇವರಾಯನ ಆಳ್ವಿಕೆ ಒಂದು ಜಿಜ್ಞಾಸೆ
4. ಡಾ॥ ಎಚ್.ಎಸ್. ಗೋಪಾಲರಾವ್, ಕೃಷ್ಣದೇವರಾಯನ ಬಗ್ಗೆ ಕೆಲವು ವಿಚಾರಗಳು
5. ಡಾ॥ ನಿರುಪಮಾ, ಕಾವ್ಯ ಪ್ರಕಾರದ ಸುಂದರ ಸ್ಮಾರಕ ಅಮುಕ್ತ ಮಾಲ್ಯದ
6. ಆರ್.ಎಸ್. ಹುಲಿಕುಂಟೆ ಮೂರ್ತಿ, ಶ್ರೀ ಕೃಷ್ಣದೇವರಾಯನ ಜೀವನದ ಕೆಲವು ಘಟನೆಗಳ ವಿಶ್ಲೇಷಣೆ
7. ನಾ. ಗೀತಾಚಾರ್ಯ, ಶ್ರೀಕೃಷ್ಣದೇವರಾಯನ ದಿನಚರಿ, ಅಪರೂಪದ ದಾಖಲೆ
8. ಡಾ॥ ಜೋತ್ಸ್ನಾ ಕಾಮತ್, ವಿಜಯನಗರದ ಭೋಜನ ವೈಭವ
9. ಮನು, ರಾಯಚೂರ ವಿಜಯ
10. ಡಾ॥ ಆರ್. ಗೋಪಾಲ ಮತ್ತು ಡಾ॥ ಟಿ.ಎಸ್. ಗಂಗಾಧರ (ಸಂ), *ವಿಜಯನಗರ ಅಧ್ಯಯನ ಸಂಪುಟ 16*
11. ರಾಬರ್ಟ್ ಸಿವೆಲ್ (ಅನು: ಸದಾನಂದ ಕನವಳ್ಳಿ), *ಮರೆತು ಹೋದ ಸಾಮ್ರಾಜ್ಯ*
14. ಡಾ॥ ಎ.ವ್ಹಿ. ನರಸಿಂಹಮೂರ್ತಿ, *Coins and Currency System in Karnataka*
15. ಡಾ॥ ವಸುಂಧರಾ ಫಿಲಿಯೋಜ, *Vijyanagar Empire (ವಿಜಯನಗರ ಸಾಮ್ರಾಜ್ಯ)*
16. ಡಾ॥ ಸೂರ್ಯನಾಥ ಕಾಮತ್, *ಕರ್ನಾಟಕ ಕೈಗನ್ನಡಿ*
17. ಡಾ॥ ಎಸ್.ವ್ಹಿ. ವೆಂಕಟೇಶಯ್ಯ, ಇತ್ತೀಚಿನ ಹಂಪಿ ಉತ್ಖನನ
17. ಡಾ॥ ಎಂ. ಕೊಟ್ರೇಶ್, ವಿಜಯನಗರ ಕಾಲದ ತಾಮ್ರ ಶಾಸನ
19. ಪದ್ಮಜಾ ದೇಸಾಯಿ, ಕೃಷ್ಣದೇವರಾಯನ ಕಾಲದ ಶಾಸನಗಳಲ್ಲಿ ಪ್ರತಿನಾಮ ಗ್ರಾಮಗಳು
20. ಎಸ್. ನಾಗರಾಜಪ್ಪ, ಕೃಷ್ಣದೇವರಯನ ಕಾಲದಲ್ಲಿಯ ಶಾಸನಗಳಲ್ಲಿ ಮುಡಿದ ಅರವಟ್ಟಿಗೆಗಳು

21. ಡಾ॥ ಡಿ.ಎನ್. ಯೋಗೀಶ್ವರಪ್ಪ, ಕೃಷ್ಣದೇವರಾಯನ ಆಳ್ವಿಕೆಯಲ್ಲಿ ನಾಯಕತನಗಳು (ಕ್ರಿ.ಶ. 1509–1529)
22. ಡಾ॥ ಎಚ್. ಚಂದ್ರಶೇಖರ, 'ಕುಹು' ಯೋಗದಲ್ಲಿ ವ್ಯಾಸರಾಯರ ಸಿಂಹಾಸನಾರೋಹಣ ಒಂದು ಕಟ್ಟುಕತೆ
23. ಡಾ॥ ಶರಣಬಸಪ್ಪ ಕೋಲ್ಕಾರ, ವಿಜಯನಗರ ಪಟ್ಟಣದ ವಿಸ್ತಾರ – ಒಂದು ವಿಶ್ಲೇಷಣೆ
24. ಡಾ॥ ಎಸ್.ಕೆ. ಜೋಶಿ, ಕರ್ನಾಟಕದಲ್ಲಿ ಹನುಮನ ಪರಿಕಲ್ಪನೆ – ಹಂಪಿಯ ಮಂತ್ರೋದ್ಧಾರ ಹನುಮನ ವಿಶೇಷ ಚಿಂತನೆ
25. ಡಾ॥ ಟಿ.ವ್ಹಿ. ನಾಗರಾಜ, ವಿಜಯನಗರ ಕಾಲದಲ್ಲಿ ರಾಯಲು ಸೀಮೆಯ ನೀರಾವರಿ
26. ಕುಂ.ಬಾ. ಸದಾಶಿವಪ್ಪ, ರಾಯ ಸಂಸ್ಕೃತಿ
27. ಡಾ॥ ಎಚ್.ಈ. ಬಸವರಾಜಪ್ಪ, ವಿಜಯನಗರ ಕಾಲದಲ್ಲಿ ಮಹಿಳೆಯರು
28. ವಿನೋದಾ ಪಾಟೀಲ, ವಿಜಯನಗರ ಅರಮನೆಗಳ ಅವಶೇಷಗಳು
29. ಡಾ॥ ಎಸ್.ಸಿ. ಪಾಟೀಲ್, ವಿಜಯನಗರ ಚಿತ್ರಕಲೆಯ ಪರಂಪರೆ ಮತ್ತು ಲಕ್ಷಣಗಳು
30. ಗುರುಮೂರ್ತಿ ಪೆಂಡಕೂರ, 'ರಾಯವಾಚಕಮಲ' (ಮೂಲ: ತೆಲುಗು, ಕನ್ನಡಕ್ಕೆ ಭಾಷಾಂತರ)
31. ಶಿವಪ್ರಸಾದ ಟಿ.ಆರ್., ಶ್ರೀಕೃಷ್ಣದೇವರಾಯ

29. ವಿಜಯನಗರ ಕಾಲದ ಪುಲಿಗೆರೆಯ ಕನ್ನಡ ಸಾಹಿತ್ಯ ಪರಂಪರೆ

ಪ್ರೊ. ಶಕುಂತಲಾ ಸಿಂಧೂರ

ತಿರುಳ್ಗನ್ನಡ ನಾಡಿನ ಸಂಸ್ಕೃತಿಯ ಬೆಳವಣಿಗೆಯಲ್ಲಿ ಪುರೋಗಾಮಿ ಪಾತ್ರವನ್ನಾಡುತ್ತ ಬಂದಿರುವ ಮಹತ್ವದ ನಗರಗಳಲ್ಲಿ ಗದಗ ನಗರದ ಐತಿಹಾಸಿಕ ಪರಂಪರೆ ಅಪೂರ್ವವಾದುದಾಗಿದೆ. ವಿಜಯನಗರದ ಅರಸರ ಕಾಲದಲ್ಲಿ ತಿರುಳ್ಗನ್ನಡ ನಾಡು ಕಲೆಯಬೀಡಾಗಿ ಕವಿಗಳ ನೆಲೆವೀಡಾಗಿ ಶೈಕ್ಷಣಿಕ ಕೇಂದ್ರವಾಗಿ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿರುತ್ತದೆ. ನೃಪತುಂಗನು ಕವಿರಾಜಮಾರ್ಗದಲ್ಲಿ ತಿರುಳ್ಗನ್ನಡ ನಾಡನ್ನು ಹೀಗೆ ಉಲ್ಲೇಖಿಸಿದ್ದಾನೆ.

> **ಅದರೊಳಗಂ ಕಿಸುವೊಳಲಾ**
> **ವಿದಿತ ಮಹಾ ಕೊಪಣನಗರದಾ ಪುಲಿಗೆರೆಯಾ**
> **ಸದಭಿಸ್ತುತಮಪ್ಪೊಂಕುಂ**
> **ದದ ನಡುವಣ ನಾಡ ಕನ್ನಡದ ತಿರುಳ್ ।**[1]

ಕರ್ನಾಟಕದ ವಿಸ್ತಾರವಾದ ಈ ನಾಡೊಳಗೆ ಪುಲಿಗೆರೆಯ ತಿರುಳ್ಗನ್ನಡ ನಾಡನ್ನು ಪ್ರಸ್ತಾಪಿಸಿದ್ದಾನೆ. ವಿಜಯನಗರದ ಅರಸರೂ ಹೈದರ ಟೀಪುಸುಲ್ತನರೂ ಮರಾಠರೂ ಈ ನಾಡನ್ನು ಆಳಿದ್ದಾರೆ.

ವಿಜಯನಗರದ ಪ್ರೌಢರಾಯನ ಕಾಲದಲ್ಲಿಯ ನೂರೊಂದು ವಿರಕ್ತರಲ್ಲಿ ಕುಮಾರ ಬಂಕನಾಥನೂ ಒಬ್ಬನಾಗಿದ್ದಾನೆ. ಈ ಕುಮಾರ ಬಂಕನಾಥನು ಸುಪ್ರಸಿದ್ಧ ವಚನಕಾರನಾಗಿದ್ದು, ಕವಿ ಮಹಾಲಿಂಗದೇವ ವಿರಕ್ತನ ಪರಮ ಶಿಷ್ಯನೂ ಹೌದು. ಮಹಲಿಂಗದೇವನು ಪುಲಿಗೆರೆಯಲ್ಲಿ ಕ್ರಾಂತಿಕಾರ ವಿರಕ್ತನೂ ಆಗಿದ್ದನು. ಈ ಪುಲಿಗೆರೆಗೆ 'ದಕ್ಷಿಣ ವಾರಣಾಸಿ ಪುಲಿಕನಗರಂ' ಎಂದು ಶಾಸನಗಳಲ್ಲಿ ಕರೆದಿರುವುದು ಕಂಡು ಬರುತ್ತದೆ. ಐಹೊಳೆಯ ಲಾಡಖಾನ ದೇಗುಲದಿಂದ ವಿಜಯನಗರದ ಕೃಷ್ಣದೇವರಾಯ (ಕ್ರಿ.ಶ. 1513)ನ ಹಜರಾ ರಾಮನ ದೇಗುಲದವರೆಗೆ ಮೂರ್ತಿಶಿಲ್ಪದ ನಾನಾ ವಿಧದ ಭಾವಭಂಗಿಗಳನ್ನು ಅಭ್ಯಸಿಸಿದಾಗ 'ಡಮರುಗ' ಹಿಡಿದು 'ಮೃದಂಗ' ದವರೆಗೆ ತೊಗಲಿನ ವಾದ್ಯಗಳು 'ಕಂಕರಿ' ಯಿಂದ 'ತಾಳಚೆಳ್ಳಂಕ' ಗಳವರೆಗೆ ಲೋಹವಾದ್ಯಗಳೂ 'ಏಕತಾರಿ' ಹಿಡಿದು 'ವೀಣಾ' ವಾದ್ಯದವರೆಗೆ ತಂತಿವಾದ್ಯಗಳು 'ಶಂಖು' ಹಿಡಿದು 'ಕೊಂಬು-ಕಹಳೆ' ಯವರೆಗೆ ಊದುವ ವಾದ್ಯಗಳು ನೃತ್ಯಭಂಗಿಗೆ ಸಂಗಜೋಡಣೆಯಾಗಿ ಶಿಲಾಶಿಲ್ಪದಲ್ಲಿ ಕೆತ್ತಲ್ಪಟ್ಟಿವೆ. ಇವುಗಳ ವೈಖರಿಯ ಉನ್ನತಿಯನ್ನು ಡಂಬಳ ದೊಡ್ಡ ಬಸಪ್ಪನ ದೇಗುಲದಲ್ಲಿಯೂ ಗದಗನ ತ್ರಿಕೂಟೇಶ್ವರ ದೇಗುಲದಲ್ಲಿಯೂ ಕಾಣಬಹುದಾಗಿದೆ. ಭರತನಾಟ್ಯದ ನಾನಾ ವಿಧದ ಭಾವಭಂಗಿಗಳನ್ನು ವಾದ್ಯಸಮೇತವಾಗಿ ಕೆತ್ತಿದ್ದಾನೆ-ಶಿಲ್ಪಿಯು ಡಂಬಳದ ದೊಡ್ಡಬಸಪ್ಪನ ದೇಗುಲದಲ್ಲಿ! ಗದಗಿನ ತ್ರಿಕೂಟೇಶ್ವರ ದೇಗುಲದಲ್ಲಿ ರಾವಣನು 'ತದ್ಧಿತ್ತೋನಮ್' ಅಭಿನಯಗೂಡಿ ರೌದ್ರ ಭಂಗಿಯಲ್ಲಿ ನಿಂತಿದ್ದಾನೆ. ಜಡದೇಹಿಯಾದ ಗಣಪತಿಯು ವೇಷಭೂಷಣದಲ್ಲಿ ತಕ್ಕಿಟತಕದದ್ದಿಗಿಣ್ಣತೋಮ್ ಎಂಬ ಅಭಿನಯಗೂಡಿ ಭಾವಭಂಗಿಯಲ್ಲಿ ಮಗ್ನನಾಗಿದ್ದಾನೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ನಂತರ ಪುಲಿಗೆರೆ ಆ ಸಾಮ್ರಾಜ್ಯದ ಒಂದು ಭಾಗವಾಗಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ಇಲ್ಲಿ ವಿಜಯನಗರದ ಅರಸರ 4 ಶಾಸನಗಳಿವೆ. ಇವುಗಳಲ್ಲಿ ಶಂಖಬಸ್ತಿಯ ಕಂಭದ ಮೇಲಿರುವುದೊಂದು ಶಾಸನ. ಇದು ಮೊದಲನೆಯ ದೇವರಾಯನದು. ಶಾಸನದ ಕಾಲ ಕ್ರಿ.ಶ. 1412, ಆಗ ಲಕ್ಷ್ಮೇಶ್ವರದ ಸೋಮನಾಥಾಲಯದ ಆಚಾರ್ಯರು ಶಿವರಾಮ ಒಡೆಯರು. ಇವರಿಗೂ ಶಂಖಬಸದಿಯ ಹೇಮ ದೇವಾಚಾರ್ಯರಿಗೂ ತಮ್ಮ ತಮ್ಮ ದೇವಸ್ಥಾನಗಳಿಗೆ ಸೇರಿದ ಭೂಮಿಯ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾಗಿ ಈ ವ್ಯವಹಾರವನ್ನು ಮಹಾಪ್ರಧಾನ ನಾಗಣ್ಣ ದಣ್ಣಾಯಕನ ಅಪೇಕ್ಷೆಯಂತೆ ಅರಮನೆಯ ಪುರೋಹಿತರಾದ ಸಂಗಮದೇವಗಳು ಶಾಸನಗಳನ್ನು ಪರೀಕ್ಷಿಸಿ ಸಾಕ್ಷಿಗಳನ್ನು ವಿಚಾರಿಸಿ ಕೊನೆಗೆ ಹೇಮದೇವಾಚಾರ್ಯರ ಪರವಾಗಿ ನಿರ್ಣಯ ಕೊಟ್ಟರು. ಸುಮಾರು 1418ರಲ್ಲಿ ಇದೇ ಇಬ್ಬರು ಆಚಾರ್ಯರ ನಡುವೆ ದೇವಸ್ಥಾನದಲ್ಲಿ ಸಲ್ಲುವ ಕೆಲವು ಮರ್ಯಾದೆಗಳ ಸಂಬಂಧವಾಗಿ ಮತ್ತೊಮ್ಮೆ ಭಿನ್ನಾಭಿಪ್ರಾಯವುಂಟಾಯಿತು. ಕೊನೆಗೆ ಜೈನರು ತಾವು ಮಾಡಿದುದು ತಪ್ಪೆಂದು ಒಪ್ಪಿ ಶಿವರಾಮ ಒಡೆಯನಿಗೆ ಜಯಪತ್ರಿಕೆಯನ್ನು ಕೊಟ್ಟರು. ಸೋಮೇಶ್ವರ

ದೇವಾಲಯದ ದಕ್ಷಿಣ ದ್ವಾರದಬಳಿ ಈಗಲೂ ನಾವು ಶಿವರಾಮ ಒಡೆಯರ ಮೂರ್ತಿಯನ್ನು ಕಾಣಬಹುದು. ಈ ಎರಡೂ ಘಟನೆಗಳನ್ನು ಒಂದೊಂದು ಶಾಸನವು ತಿಳಿಸುತ್ತದೆ.

ಈಗಿನ ಸೋಮೇಶ್ವರ ದೇವಾಲಯದಲ್ಲಿ ಹಲವಾರು ಪರಿವರ್ತನೆಗಳಾಗಿರುವುದು ಕಂಡುಬರುತ್ತದೆ. ಪ್ರಾಕಾರದಲ್ಲಿದ್ದ ಚಿಕ್ಕದೇವ ಮಂಟಪಗಳು ಹಾಳಾಗಿವೆ. ಸುತ್ತಲೂ ಇರುವ ಕಲ್ಲಿನಕೋಟೆ ಮತ್ತು ದಕ್ಷಿಣದ್ವಾರ ಮಂಟಪಗಳು ವಿಜಯನಗರ ಕಾಲದಲ್ಲಿ ನಿರ್ಮಿತ ಇಲ್ಲವೆ ಪುನರ್ ನಿರ್ಮಿತವಾಗಿವೆ. ಕೋಟೆಯ ಗೋಡೆ ಸುಮಾರು 20 ಅಡಿ ಎತ್ತರವಿದೆ. ಕಗ್ಗಲ್ಲಿನಲ್ಲಿ ಕಟ್ಟಲ್ಪಟ್ಟಿದೆ. ದಕ್ಷಿಣದ್ವಾರ ಮಂಟಪದಲ್ಲಿ ವಿಜಯನಗರ ಕಾಲದ ಶಾಲಾಭಂಜಿಕೆಯರೂ (ಈಗ ಭಿನ್ನವಾಗಿದೆ), ಸ್ತಂಭಗಳು, ವಾಸ್ತುಶಿಲ್ಪ ಲಕ್ಷಣಗಳು ಇವೆ. ಇವುಗಳನ್ನು ದ್ವಾರದ ಒಳಭಾಗದಲ್ಲಿ ಗುರುತಿಸಬಹುದು. ದ್ವಾರದ ಬಾಹ್ಯಗೋಡೆಯಲ್ಲಿ ಚಾಲುಕ್ಯ ಕದಂಬರ ವಾಸ್ತುಶಿಲ್ಪ ಗುಣಗಳು ಪ್ರಧಾನವಾಗಿವೆ. ಆದರೆ ಅಡಿಪಾಯದಲ್ಲಿರುವ ಉಬ್ಬುಶಿಲ್ಪದ ಸಾಲು ವಾಸ್ತು ಸಂಕೇತಗಳು ವಿಜಯನಗರ ಕಾಲದವುಗಳಾಗಿವೆ. ಈ ಮಂಟಪ ವಿಜಯನಗರದ ಕಾಲದ ಪುನರ್ ನಿರ್ಮಾಣವಾಗಿದೆ. ಆಗ ಮೂಲ ಕಟ್ಟಡದ ಬಹುಭಾಗವನ್ನು ಬಳಸಿಕೊಂಡದ್ದಲ್ಲದೆ ವಿಜಯನಗರ ಶಿಲ್ಪಗಳು ಚಾಲುಕ್ಯ ಶಿಲ್ಪಶೈಲಿಯನ್ನು ಅನುಕರಿಸಲು ಪ್ರಯತ್ನಪಟ್ಟಿರುವುದು ಇಲ್ಲಿ ಗೋಚರವಾಗುವುದು. ಆದರೆ ದ್ವಾರದ ಒಳಭಾಗದಲ್ಲಿ ದುಂಡು ಬಳಪದ ಕಲ್ಲಿನ ಸ್ತಂಭಗಳ ಬದಲು ವಿಜಯನಗರ ಕಾಲದ ಸ್ತಂಭಗಳನ್ನು ಬಳಸಲಾಗಿದೆ. ಈ ದ್ವಾರಭಾಗದ ಮೂಲ ರೂಪ ಕಾಣಬಯಸುವವರು ಉತ್ತರ ಮತ್ತು ಪೂರ್ವಕ್ಕೆ ಇರುವ ದ್ವಾರಮಂಟಪವನ್ನು ನೋಡಬೇಕು.

ಈಗ ಸುಧಾಮೂರ್ತಿಯವರ ಉದಾರ ದೇಣಿಗೆಯಿಂದ ಈ ಮಂದಿರದ ಜೀರ್ಣೋದ್ಧಾರ ಕಾರ್ಯ ಆರಂಭವಾಗಿದ್ದು ಮುಗಿಯುವ ಹಂತದಲ್ಲಿದೆ.

ಕನ್ನಡ ನಾಡಿಗೂ ಕನ್ನಡ ಸಾಹಿತ್ಯಕ್ಕೂ ಪುಲಿಗೆರೆಗೂ ಇರುವ ಪ್ರಾಚ್ಯಸಂಬಂಧ ತಿರುಳ್ಗನ್ನಡ ನಾಡಿನವರಿಗೆ ಅಭಿಮಾನವುಕ್ಕಿ ಹರಿಸುವಂತಹದು. ತಿರುಳ್ಗನ್ನಡದ ಖ್ಯಾತಿಯು ಆ ಕಾಲಕ್ಕೆ ಹೆಚ್ಚಿದ್ದು ಪುಲಿಗೆರೆಯಿಂದಲೇ. ಅಂತೆಯೇ ಕನ್ನಡದ ಆದಿಕವಿ ಪಂಪನೂ ಕೂಡ ತನ್ನ ಕಾವ್ಯವನ್ನು ಪುಲಿಗೆರೆಯ ತಿರುಳ್ಗನ್ನಡದಲ್ಲಿಯೇ ಬರೆದಿರುವುದಾಗಿ ಹೇಳಿಕೊಂಡಿದ್ದಾನೆ.

15ನೇ ಶತಮಾನದ ಆದಿಭಾಗದಲ್ಲಿ ಅಂದರೆ ವಿಜಯನಗರ ಪ್ರೌಢರಾಯನ ಆಳ್ವಿಕೆಯ ಕಾಲದಲ್ಲಿ (1424–1446) ಬಸವಾದಿ ಪ್ರಮಥರು ತೋರಿದ ಚಿಂತನೆಗಳಾದ ವಚನಗಳೆಂಬ ಮುತ್ತುಗಳನ್ನಾಯ್ದು ಅವಕ್ಕೊಂದು ತಾತ್ವಿಕ ರೂಪಕೊಟ್ಟು ಸ್ಥಲಕಟ್ಟಿನ ಮಣಿಮಾಲೆಯಲ್ಲಿ ತೋರಿಸಿದ ಮಹೋಜ್ವಲ ಮುತ್ತುಗಾರರಲ್ಲಿ ಮಹಾಲಿಂಗದೇವ ಒಬ್ಬ. ಮಹಾಲಿಂಗದೇವಯ್ಯ, ವಿರತ ಮಹಾಲಿಂಗದೇವ, ಮಹಾಲಿಂಗೇಶ್ವರ ಎಂಬ ಹೆಸರಿನ ಅನೇಕರಿದ್ದರೂ 1. ಏಕೋತ್ತರ ಶತಸ್ಥಲ 2. ಷಟ್‌ಸ್ಥಲ ಜ್ಞಾನಚಾರಿತ್ರ ಅಥವಾ ಷಟ್‌ಸ್ಥಲ ವಿವೇಕ ಹಾಗೂ ಆಭವ ಕಂದಾದಿ 700 ಕಂದ ಪದ್ಯಗಳನ್ನು ರಚಿಸಿದ ಮಹಾಲಿಂಗದೇವ ಪುಲಿಗೆರೆಯವನು. ಈತನು ತನ್ನ ಏಕೋತ್ತರ ಶತಸ್ಥಲದ ಆರಂಭದಲ್ಲಿ 'ಸ್ವಸ್ತಿ ಸಮಸ್ತ ಭುವನ ಜನತಿಮಿರ ಹರಣ ಕಾರಣ ಸ್ವರೂಪರುಂ ಭಕ್ತದೇಹಿಕ ದೇವರುಂ ಭಕ್ತಿವತ್ಸಲರುಂ ಸವಾಂಗ ಪ್ರಾಣಲಿಂಗಿಮೂರ್ತಿ ವಿಲಾಸರುಂ ಪುಲಿಗೆರೆಯ ಪುರವರಾಧೀಶ್ವರರುಂ ಅಪೂರ್ವ ಸ್ವಯಂಭು ಪ್ರಸನ್ನ ಚೆನ್ನ ದಕ್ಷಿಣ ಶ್ರೀ ಸೋಮನಾಥದೇವರ ದಿವ್ಯ ಶ್ರೀಪಾದಪದ್ಮಾರಾಧಕರುಂ' ಎಂದಿರುವದರಿಂದ ಮಹಾಲಿಂಗದೇವ ಪುಲಿಗೆರೆ ಕ್ಷೇತ್ರದವನೆಂಬುದು ನಿರ್ವಿವಾದದ ಸಂಗತಿ.

ಮಹಾಲಿಂಗದೇವ ಹೇಳಿಕೊಂಡಿರುವ ಗುರು ಕುಲಾನ್ವಯದಲ್ಲಿ ಇನ್ನೂ ಕೆಲವು ಪುಲಗೆರೆಯ ಮಹಿಮೋನ್ನತರು ನಮಗೆ ಕಾಣದೊರೆಯುತ್ತಾರೆ. ಅವನು ಉಲ್ಲೇಖಿಸುವ 'ಅನಾದಿ ಸಂಸದ್ಧನಾದ 21 ಗುರುಕುಲದನ್ವಯದಲ್ಲಿ' ಅರ್ಥಾತ್ ಘನ ವೀರಶೈವಕ್ಕೆ ಮುಖ್ಯ ಇಪ್ಪತ್ತುವೊಂದನೆಯ ಗುರು ಸಂಪ್ರದಾಯದಲ್ಲಿ ಅನೇಕ ವೇದ ಶಾಸ್ತ್ರಾಗಮ ಕೋವಿದರೂ ವೀರಶೈವಾಗಮಾಚಾರ್ಯರೂ ಸ್ವಯಂಭು ಸೋಮನಾಥ ಭಕ್ತಿಯುಕ್ತರೂ, ನಿರಂಜನ ಪರಂಜ್ಯೋತಿ ಸ್ವರೂಪರೂ ಇದ್ದಾರೆ. ಶಿವಾಗಮಗಳನ್ನು ಸಂಗ್ರಹಿಸಿದ ಸೋಮಶಂಭುದೇಸಿಕ ಸಂಹಿತೆಯ ಕಾಳಿದಾಸ ಭಟ್ಟ, ಪುರಾಣದ ಮಾಯದೇವಪಂಡಿತ, ಕಾಮಿಕಾದಿ ಆಗಮುಗಳಿಗೆ ವೃತ್ತಿದೀಪಿಕೆ ಬರೆದ ಸಕಲಾಗಮಾಚಾರ್ಯ, ವಚನಕಾರ ಉರುಲಿಂಗ ಪೆದ್ದಣ್ಣ ಈ ಸದ್ಗುರು ಪರಂಪರೆಯಲ್ಲಿ 20ನೆಯ ತಲೆ ಮಹಾಲಿಂಗದೇವನದಾದರೆ ಅವನ ಕರ ಸಂಜಾತಕುಮಾರ ಬಂಕನಾಥ ಪ್ರಭುದೇವರ ಷಟಸ್ಥಲ ವಚನಗಳಿಗೆ ಟೀಕೆ ಬರೆದ ಮಹಾನುಭಾವ. ಇವನ ಶಿಷ್ಯ ವಿಜಯನಗರದ ದೊರೆ ಪ್ರೌಢದೇವರಾಯನ ಮಂತ್ರಿ ಭಕ್ತಿ ಭಂಡಾರಿ ಜಕ್ಕಣಾರ್ಯ. ಈತ ನುರೊಂದು ಸ್ಥಲದ ಕರ್ತೃ. ಮಹಾಲಿಂಗದೇವನ ವಂಶಸ್ಥರಲ್ಲಿಯೇ ಒಬ್ಬ ನೀಲಕಂಠಾಚಾರ್ಯ

ಕ್ರಿಯಾ ಸರದ ರಚಕ. ಇವನ ಶಿಷ್ಯ ಬೊಮ್ಮರಸ. ಹೀಗೆ ಮುಂದುವರೆದು ಬಂದ ಈ ಶಿಷ್ಯ ಪರಂಪರೆ ಪ್ರಶಿಷ್ಯ ಪರಂಪರೆಯು ಕನ್ನಡದ ಅನುಭವಿಗಳ ಬಹುದೊಡ್ಡ ಇತಿಹಾಸಕ್ಕೆ ನೆಲೆಯಾಗಿದೆ. ಅಪಾರವಾದ ಪಾಂಡಿತ್ಯ ಪ್ರತಿಭೆಗಳ ಸಂಸ್ಕಾರ ಬೀಜವನ್ನು ಕಾಲಕಾಲಕ್ಕೆ ಬಿತ್ತಿ ಪರತತ್ವವನ್ನು ಬೆಳೆದುಣ್ಣುವ ಒಕ್ಕಲು ಮಕ್ಕಳಂತೆ ಮಹಾಲಿಂಗದೇವನ ವಂಶ ಪರಂಪರೆಯಿದೆ.

ಮಹಾಲಿಂಗದೇವನ ಸದ್ಗುರು ವಂಶ ಪ್ರಸೂತರಲ್ಲಿ 18ನೆಯವನಾದ ಪುಲಿಗೆರೆಯ ಪುರಾಣದ ಮಾಯಿದೇವ ಪಂಡಿತನ ಹೆಸರು ಬೇಲೂರು ಶಾಸನದಲ್ಲಿ ಬಂದಿದೆ. ಇವನ ಕೃತಿ ಯಾವುದೆಂದು ತಿಳಿದು ಬರದಿದ್ದರು ತಾತ್ಕಾಲೀನ ಶಿವಕವಿಗಳಲ್ಲಿ ಒಬ್ಬನಾಗಿದ್ದನೆಂಬುದಕ್ಕೆ ಸ್ವರಚಿತರಾದ ಒಂದು ಪದ್ಯ ಕವಿ ಚರಿತೆಯಲ್ಲಿ ಉಲ್ಲೆಖವಾಗಿದೆ. ಅದು ಹೀಗಿದೆ – ಉದಾ –

ತನು ವೆಂಟುಂ ಶಿವನವುತ
ತ್ತನುವಿನೊಳಮರ್ದಿರ್ದು ಬೇರೆ ದೈವಂ ಸಮಯಂ
ತನಗೆಂಬ ತಲೆಗಳನೆ ತರೆ
ದೆನಗಂಚಂಡಾಡಲಾಯ್ತು ಮನಮಶ್ರಾಂತಂ"[2]

ಹೊಯ್ಸಳ ದೊರೆ ನರಸಿಂಹ ಬಲ್ಲಾಳನಲ್ಲಿ ಮಂತ್ರಿಯಾಗಿದ್ದ ಕೆರೆಯ ಪದ್ಮರಸನ ಆಜ್ಞಾನುಸಾರಿಯಾಗಿ ಕುಮಾರ ಪದ್ಮರಸ, ಸಾನಂದ ಚರಿತ್ರೆಯನ್ನು ಬರೆದಿರುವನು. ಅದರಲ್ಲಿ ಕೆರೆಯ ಪದ್ಮರಸನು ತ್ರಿಭುಜನ ತಾತನನ್ನು ವಾದದಲ್ಲಿ ಸೋಲಿಸಿದ ಪ್ರಸ್ತಾಪವಿದೆ. ಆ ಸಂದರ್ಭದಲ್ಲಿ ಹಂಪೆಯ ರಾಘವಾಂಕ ದೋರಾಂಬುಧಿಯ ರಾಮಣ್ಣರೊಡನೆ ಪುರಾಣದ ಮಾಯಿದೇವ ಪಂಡಿತರೂ ಇದ್ದಾರೆ. ಇದರಿಂದ ಇವರೆಲ್ಲರೂ ಸಮಕಾಲೀನರೆಂಬ ಮಹತ್ವದ ಅಂಶ ಬೆಳಕಿಗೆ ಬರುತ್ತದೆ. ಇದೇ ವಿಷಯ ಪದ್ಮರಾಜ ಪುರಾಣದಲ್ಲಿಯೂ ಇದೆ. ಇಲ್ಲಿ ಉಲ್ಲೇಖವಾದ ಕೆರೆಯ ಪದ್ಮರಸರು ಸಕಲೇಶ ಮಾಚರಸರ ಮಗನ ಮಕ್ಕಳು. ಸಕಲೇಶ ಮಾಚರಸರಂತೂ ಶಿವಶರಣ ಪ್ರಸಿದ್ಧರು, ವಚನಕಾರರು. ಈ ವಿಷಯಗಳನ್ನು ಅವಲೋಕಿಸಿದರೆ ಕನ್ನಡದಲ್ಲಿ ಮಾತ್ರವಲ್ಲ ಭಾರತೀಯ ಸಾಹಿತ್ಯದಲ್ಲಿಯೂ ಇಂಥ ಪ್ರತಿಭಾವಂತರ ವಂಶವೃಕ್ಷ ಕಾಣದೊರೆಯುವುದು ಅಪೂರ್ವವೆನ್ನಬೇಕು. ಇವರಲ್ಲಿ ಪುರಾಣದ ಮಾಯಿದೇವ ಮಹಾಲಿಂಗದೇವ ಕುಮಾರ ಬಂಕನಾಥರಷ್ಟೇ ಏಕೆ ಇವರೆಲ್ಲರೂ ಮಹಾಘನರಾಗಿ ಬಾಳಿರುವುದು ಸಾಧ್ಯ. ಹಾಗಿಲ್ಲದಿದ್ದರೆ ಪ್ರೌಢದೇವರಾಯ ಪ್ರಧಾನ ಮಂತ್ರಿ ದಕ್ಷಿಣ ಸಮುದ್ರಾಧಿಪತಿ ಲಕ್ಕಣ್ಣ ದಂಡೇಶ ತನ್ನ ಶಿವತತ್ವ ಚಿಂತಾಮಣಿಯಲ್ಲಿ ಇಷ್ಟೊಂದು ಭಕ್ತಿ ಪರಸ್ಪರ ಭಾವದಿಂದ ಪುಲಿಗೆರೆಯ ವೀರ ಮಾಹೇಶ್ವರರಿಗೇಕೆ ಕೈಮುಗಿಯುತ್ತಿದ್ದ?

ಕಲಿಕಾಲ ಕಲ್ಮಷಕ್ಕೆಡೆಗೊಡದ ಸದ್ಭಕ್ತಿ
ನೆಲೆಗೊಂಡು ಪುತ್ರ ಮಿತ್ರ ಕಳತ್ರವೆಂದೆಂಬ
ಬಲೆಯೊಳಗೆ ಸಿಲುಕದಾಚಾರ ಲಿಂಗದನಿಷ್ಟನೆಲೆಗೊಂಡು ದಾಸೋಹದ
ಸುಲಲಿತ ಸುಮಾರ್ಗದೊಳಗಾಚರಿಸುತಾನಂದ
ಜಲಧಿಯೊಳಗೋಲಾಡುತಿರ್ಪ ಲೀಲೆಯೊಳೆಸೆವ ॥[3]

ಪುಲಗೆರೆಯೆನಿಪ ಪುರದ ವೀರ ಮಾಹೇಶ್ವರರ ಚರಣಾಂಬುಜಕ್ಕೆ ಶರಣು. ಶಿವತತ್ವ ಚಿಂತಮಣಿಯಲ್ಲಿ ಸ್ತುತಿಗೊಳಗಾಗ ವೀರಮಾಹೇಶ್ವರರೆಲ್ಲರೂ ಮೇಲಿನವರೇ ಆಗಿರಬೇಕಲ್ಲವೇ? ಅದೇನೆ ಇದ್ದರೂ ಇವರಿಗೆಲ್ಲ ಪುಲಗೆರೆಯ ಸಂಬಂಧ ಸಂಪರ್ಕಗಳಿರುವದಂತೂ ಸತ್ಯ.

ವಿಜಯನಗರ ಸಾಮ್ರಾಜ್ಯದ ಅರಸು ಪ್ರೌಢದೇವರಾಯನ ಆಳ್ವಿಕೆಯ ಕಾಲವೆಂದೆ (ಕ್ರಿ.ಶ. 1424–1446) ವೀರಶೈವ ಸಾಹಿತ್ಯದ ವಸಂತಕಾಲ. ಆ ಅವಧಿಯಲ್ಲಿ ಬಾಳಿದ 101 ವಿರಕ್ತರ ಸಮಕಾಲೀನನಾಗಿ ಕ್ರಿ.ಶ. 1500ರ ಸುರಂಗ ಕವಿ ಬದುಕಿರುಬಹುದೇ? ಅನೇಕ ಕನ್ನಡ ಕನ್ನಡೇತರ ಕವಿಗಳಿಗೆ ಪ್ರೌಢದೇವರಾಯ ಆಶ್ರಯವಿತ್ತಂತೆ ವೀರಶೈವ ಕವಿಗಳಲ್ಲಿ ಅಗ್ರಗಣ್ಯನೆನಸಿದ ಸುರಂಗ ಕವಿಗೂ ಅವನು ಆಶ್ರಯದಾತನಾಗಿರಬಹುದಲ್ಲವೆ? ಹಾಗಿಲ್ಲದಿದ್ದರೆ ತನ್ನನ್ನು 'ಕವಿ ಚಕ್ರವರ್ತಿ' ಎಂದು ವಿಶೇಷಿಸಿಕೊಂಡು 'ಧರಣೀಶರ್ ಮೆಚ್ಚೆ ನಾನಾಚತುರ ಕಳೆಗಂತೋವಿಭ್ರಾಜಿಪಂ' ಎಂದೇಕೆ ಈತ ಸ್ವಪ್ರಶಂಸೆ

ಮಾಡಿಕೊಳ್ಳುತ್ತಿದ್ದ? ಆದರೆ ಎಲ್ಲಿಯೂ ಈ ಬಗೆಗೆ ನೇರವಾದ ಆಧಾರಗಳು ದೊರೆತಿರುವುದಿಲ್ಲ. ನಂತರದ ಕವಿಗಳು ಚಾಮರಸಾದಿ ಕವಿಗಳ ಪ್ರಸ್ತಾಪ ಮಾಡಿದಂತೆ ಸುರಂಗನ ಮಾತೆತ್ತದಿರುವುದು ಖಚಿತ ಸತ್ಯವನ್ನೇ ಇನ್ನೂ ಮರೆಮಾಡಿವೆ. ಸುರಂಗನು ವೀರಶೈವಾಚಾರತತ್ವ, ಷಟಸ್ಥಲ ಮಾರ್ಗ, ಲಿಂಗಾಂಗ ಸಾಮರಸ್ಯಾದಿ ಸೂಕ್ಷ್ಮಗಳನ್ನು ತಿಳಿದ ಕವಿ ಎಂಬುದಕ್ಕೆ ಅವನ ಕೃತಿ 'ತ್ರಿಷಷ್ಟಿ ಪುರಾತನ ಚಾರಿತ್ರ್ಯ' ಕೃತಿಯಲ್ಲಿಯೇ ಪ್ರಮಾಣಗಳು ಲಭಿಸುತ್ತವೆ. ಬಹುಶಃ 101 ವಿರಕ್ತು ಹೇಗೆ ವೀರಶೈವಕ್ಕೆ ಮಾನ್ಯರೋ ಹಾಗೆಯೇ ವೀರಶೈವ ಭಕ್ತಿ ಪರಂಪರೆಯ ಇತಿಹಾಸದಲ್ಲಿ 63 ಪುರಾತನರಿಗೂ ಆ ಪೂಜ್ಯಸ್ಥಾನ ಸಂದಿದೆ. ಎಂಬುದನ್ನು ಮಗದೊಮ್ಮೆ ಬಿತ್ತರಿಸಲು 101 ವಿರಕ್ತರ ಕಾಲ ಮುಗಿಯುತ್ತಿದ್ದಂತೆ ತ್ರಿಷಷ್ಠಿ ಪುರಾತನರ ಮಹಿಮೆಗಳನ್ನು ಈ ಕವಿಸಾರ ಹೇಳಹೊರಟಂತಿದೆ. ತನ್ನ ಕೃತಿಯ ಆರಂಭದಲ್ಲಿ ಬಸಣ್ಣನಲ್ಲಿ ಭಕ್ತಿಯನ್ನು ಚನ್ನಬಸಣ್ಣನಲ್ಲಿ ಜ್ಞಾನವನ್ನೂ, ಪ್ರಭುವಿನಲ್ಲಿ ವೈರಾಗ್ಯವನ್ನೂ ಬೇಡುವನು. ಇದೇ ಕ್ರಮದಲ್ಲಿಯೇ ಭಕ್ತಿ-ಜ್ಞಾನ-ವೈರಾಗ್ಯದ ಶತಕಗಳನ್ನು ರಚಿಸಿದವನು 101 ವಿರಕ್ತರ ಕಾಲದಲ್ಲಿ ಮಗ್ಗೆಯ ಮಾಯಿದೇವ ಹರಿಹರ ರಾಘವಾಂಕಾದಿ ವೀರಶೈವ ಕವಿಗಳ ಪ್ರಭಾವವೂ ಇವನ ಮೇಲಾದಂತೆ ಮಗ್ಗೆಯ ಮಾಯಿದೇವರೇ ಮೊದಲಾದ ಈ ಅನುಭಾವಿ ಕವಿಗಳ ಪ್ರಭಾವವೂ ಇವನ ಮೇಲಾದಂತಿದೆ. ಅಂತೂ 101 ವಿರಕ್ತರ ಕಾಲ ಮುಗಿದ ಕೆಲಕಾಲದಲ್ಲಿಯೇ ಸುರಂಗಕವಿ ಬಾಳಿ ಬದುಕಿದನೆಂದು ತರ್ಕಿಸಲಾಗಿದೆ.

ಸುರಂಗ ಕವಿಯು ತನ್ನ ಕೃತಿಯನ್ನು 'ಪುಲಿಗೆರೆಯ ಸೋಮೇಶ್ವರ'ನಿಗೆ ಅಂಕಿತ ಮಾಡಿರುವನು. ತ್ರಿಷಷ್ಟಾಂಶಗಳುಳ್ಳ ತನ್ನ ಬೃಹತ್ ಚಂಪೂಕೃತಿಯ ಪ್ರತಿ ಆಶ್ವಾಸದ ಅಂತ್ಯದಲ್ಲಿ 'ಶ್ರೀ ಮತ್ಪುಲಿಗೆರೆಯ ಪರಾಧಿಪ ಶ್ರೀ ಸೋಮನಾಥ ಭಕ್ತಿಯುಕ್ತ ಕರ್ಣಾಟಕ ಕವಿಚಕ್ರವರ್ತಿ' ಎಂಬುದಾಗಿ ಹೇಳಿಕೊಂಡಿದ್ದಾನೆ. ಅಲ್ಲದೆ ಪ್ರತಿ ಆಶ್ವಾಸದ ಆರಂಭದಲ್ಲಿಯೂ ಈ ಕವಿ ಸೋಮೇಶನನ್ನು ಸ್ತುತಿಸಿ ಕಾವ್ಯ ಆರಂಭಿಸುತ್ತಾನೆ, ಈ ಬಗೆಗೆ ಇಷ್ಟದಯವ ಸ್ತುತಿ ವೈಶಿಷ್ಟ್ಯವನ್ನೆ ಮಹಾಕವಿ ಷಡಕ್ಷರದೇವ ಅನುಕರಿಸಿದಂತೆ ತೋರುತ್ತದೆ. ಸುರಂಗ ಕವಿ 'ನಾಲಗೆಯಂ ಗಿರೀಶಂಗೆ ಮಾರಿದಂ' ಎಂಬುದರಿಂದ ಇವನಲ್ಲಿ ಮಿಗಿಲಾದ ಸ್ವಧರ್ಮನಿಷ್ಠೆ ವ್ಯಕ್ತವಾಗಿದೆ. ಇವನ ಚಂಪೂಶೈಲಿ ಕನ್ನಡದಲ್ಲಿ ಹಾಡುಗಬ್ಬ ಸಾಹಿತ್ಯ ಹೆಚ್ಚಿದ್ದ ಕಾಲದಲ್ಲಿಯೇ ಹದಗೊಂಡ ದೇಸಿನಿಷ್ಠ ಶೈಲಿಯಾಗಿದೆ. ಕನ್ನಡದ ವೀರಶೈವ ಕವಿಗಳು ಚಂಪೂಸಾಹಿತ್ಯಕ್ಕೆ ನೀಡಿದ ಕಾಣಿಕೆ ಅತ್ಯಲ್ಪ ಎನ್ನುವವರು ಸುರಂಗ ಕವಿಯ ಕೃತಿಯನ್ನೊಮ್ಮೆ ಓದಲೇಬೇಕು. ಅವನ ಭಕ್ತಿ ಭರಪೂರವಾದ ಪುಲಿಗೆರೆಯ ಸೋಮನ ಸ್ತುತಿಪದ್ಯ ಉತ್ತಮ ನಿದರ್ಶನದಂತಿದೆ.

ವರಕೈಲಾಸ ವಿರಾಜಮಾನನನಿಶಂ ಸಂಗೀತ ಸಾರ ಪ್ರಿಯಂ
ಗಿರಿಜಾತಾಕುಚ ಕುಂಕುಮಾಂಕಿತ ವಿಶಾಲೋರಸ್ಥಳಂ ಸದ್ಗುಣಾ
ಭರಣಂ ಚಂದ್ರಧರಂ ಸುರಂಗ ವರದ ಶ್ರೀ ಸೋಮನಾಥ ಸುರಾ
ಸುರ ಪೂಜ್ಯಂ ನಮಗೀಗೆ ಸತ್ಕರುಣದಿಂ ಸದ್ಭಕ್ತಿಯಂ ಮುಕ್ತಿಯಂ ॥[4]

ಸುರಂಗ ಕವಿಯ ಕೃತಿಯಲ್ಲಿನ ಭಾಷೆಯ ಆಧಾರದಿಂದ ಈ ಕಾವ್ಯವನ್ನು ಕವಿಯು 15-16ನೇಯ ಶತಮಾನಗಳಲ್ಲಿ ರಚಿಸಿರಬಹುದೆಂದು ಊಹಿಸಬಹುದಾಗಿದೆಂದು ಡಾ॥ ಆರ್. ಸಿ. ಹಿರೇಮಠ ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇವರ ಕಾಲದ ಬಗ್ಗೆ ಇನ್ನಷ್ಟು ಸತ್ಯ ಸಂಗತಿಗಳು ಹೊರಬರಬೇಕು.

ಹೀಗೆ ವಿಜಯನಗರದ ಕಾಲದ ಪುಲಿಗೆರೆಯ ಕನ್ನಡಸಾಹಿತ್ಯ ಪರಂಪರೆ ಅಪೂರ್ವವಾದುದಾಗಿದೆ. ತಿರುಳ್ಗನ್ನಡ ನಾಡೆಂದು ಪ್ರಖ್ಯಾತವಾದ ಪುಲಿಗೆರೆಯು ಅನೇಕ ಕವಿಗಳನ್ನು ಅನುಭಾವಿಗಳನ್ನು ವಿಜಯನಗರ ಕಾಲದಲ್ಲಿಯೂ ಕನ್ನಡಕ್ಕೆ ಧಾರೆಯೆರೆದಿದೆ. ಪುಲಿಗೆರೆಯ ವರಕವಿಗಳಾದ ಮಹಾಲಿಂಗದೇವ, ಸುರಂಗಸೋಮ, ಸಿಂಹರಾಜ ಮೊದಲಾದವರ ಕೊಡುಗೆ ವಿಜಯನಗರ ಕಾಲಾವಧಿಯಲ್ಲಿಯೂ ಅನನ್ಯವಾಗಿದೆ. ಏಕೋತ್ತರ ಶತಸ್ಥಲದ ಕರ್ತೃ ಮಹಾಲಿಂಗದೇವರು ತಾವು ಪುಲಿಗೆರೆಯವರೇ ಆದುದರಿಂದ ಪುಲಿಗೆರೆ ಸೋಮಣ್ಣನ ಹಲವಾರು ವಚನಗಳನ್ನು ತಮ್ಮ ಸಂಕಲನದಲ್ಲಿ ಸ್ಥಲಕಟ್ಟಿಗನುಗುಣವಾಗಿ ಆಯ್ದುಕೊಂಡು 'ಸ್ವರವಚನ'ಕ್ಕೆ ತಿರುಗಿಸಿದ್ದಾರೆ. ಪುಲಿಗೆರೆ ಸೋಮಣ್ಣನ ವಚನವೇ ಇಲ್ಲಿ ಹೇಗೆ ರಾಗತಾಳ-ನಿರ್ದೇಶನದೊಂದಿಗೆ 101 ಸ್ಥಲಗಳಲ್ಲಿ 82ನೆಯವನಾದ ಶಿಕ್ಷಾಪಾದೋದಕ ಸ್ಥಲಕ್ಕೆ ಮಾದರಿಯಾಗಿದೆ ಎಂಬುದಕ್ಕೆ ನಿರ್ದೇಶನ ಹೀಗಿದೆ.

ಏಕೊತ್ತರ ಶತಸ್ಥಲ ರಾಗ–ಮಧುಮಾಧವಿ
82 ಶಿಕಪಾದೋದಕ

ಲಿಂಗೋದಕ ಪಾದೋದಕವಲ್ಲದೆ
ಅಂಗವಿಸಿದಡನ್ಯೋದಕ ಪಾತಕಃ ॥ಪ॥
ಮಾಯಾಸಂಗ್ರಹ ಮಲವ ತೊಳೆದುನಿ
ಮಾ್ಯಯಾ ಸ್ವರೂಪವನೆಯ್ದಿಸಿ
ಕಾಯ್ದುದು ಹುಲಿಗೆರೆಯ ವರದ ಸೋಮೇಶನ
ಅಕ್ಷಯಾನಂದ ಪಾದೋದಕ ॥[5]

ಅಂತೂ ಪುಲಿಗೆರೆಯ ಅದಯ್ಯ ಸೋಮಯ್ಯರ ವಚನಗಳು ಮುಂದೆ ಬಂದ 'ಪುಲಿಗೆರೆ ಪುರವರಾಧೀಶ್ವರ' ರಾದ ಮಹಾಲಿಂಗದೇವರ ವಚನ ಸಂಕಲನಕ್ಕೆ ಆಕರವಾಗಿರುವದೆಂದು ಮಹಾಲಿಂಗದೇವರ ಪೂರ್ವಭಾವಿಯಾಗಿ ನಡೆದ ಈ ಸಾಹಿತ್ಯ ಕೃಷಿಯಿಂದಾಗಿ ಪುಲಿಗೆರೆ ವೀರಶೈವ ಸಾಹಿತ್ಯದ ಪೃಷ್ಠಭೂಮಿಯಾಯಿತೆಂದು ಸ್ಪಷ್ಟಪಡಿಸಬಹುದಾಗಿದೆ. ಹೀಗೆ ಶಾಸನ ಸಾಹಿತ್ಯ ಸ್ವತಂತ್ರ ವಚನ ಸಾಹಿತ್ಯ ವಚನ ಸಂಕಲನ ಸಾಹಿತ್ಯ ಚಂಪೂ, ಶತಕ, ಕಂದ ಇತ್ಯಾದಿ ಪ್ರಕಾರಗಳಲ್ಲಿ ವಿಜಯನಗರ ಅರಸರ ಕಾಲದಲ್ಲಿ ಹೇರಳವಾಗಿ ಸಾಹಿತ್ಯ ಸೃಷ್ಟಿ ಕಾರ್ಯ ನಡೆದಿದ್ದು ಈ ದಿಶೆಯಲ್ಲಿ ಸಂಶೋಧಕರು ಇನ್ನೂ ಹೆಚ್ಚಿನ ಸಂಶೋಧನೆಯನ್ನು ಆಳವಾಗಿ ಕೈಗೊಳ್ಳಬೇಕಾದ ಅಗತ್ಯತೆ ಇದೆ. ಪುಲಿಗೆರೆ ಕನ್ನಡ ನಾಡಿನಲ್ಲಿ ದೊರಕುವ ಸಾಹಿತ್ಯ ಪರಂಪರೆಗೆ ಹೆಸರಾಗಿದೆಯಲ್ಲದೆ ಕನ್ನಡದಲ್ಲಿ ಪುಲಿಗೆರೆಯ ಸಾಹಿತ್ಯಕ್ಕೆ ವಿಶೇಷ ಮನ್ನಣೆಯೂ ಸಂದಿದೆ.

ಅಡಿಟಿಪ್ಪಣಿ

1. ಪ್ರೊ. ಸದಾನಂದ ಕನವಳ್ಳಿ, ಪ್ರೊ. ಸಿ.ವಿ. ಕೆರಿಮನಿ, *ತಿರುಳ್ಗನ್ನಡ ನಾಡು ಪುಲಿಗೆರೆ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ಕನ್ನಡ ಸಾಹಿತ್ಯಕ್ಕೆ ಪುಲಿಗೆರೆಯ ಕಾಣಿಕೆ, ಡಾ॥ ವಿ. ಶಿವಾನಂದ ಪು. ಸಂ –34.
2. *ಕ.ಚ.ಭಾ.* 1. ಪು. 299.
3. *ತ್ರಿಷಷ್ಠಿ ಪುರಾತನ ಚರಿತ್ರೆ.* ಅ. 1, ಪ. 36.
4. *ಸೋಮೇಶ್ವರ ಶತಕ*, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟನೆ 1961
5. *ಏಕೋತ್ತರ ಶತಸ್ಥಲ* (ಹಸ್ತಪ್ರತಿ ನಂ. 265), ವಚನ ಭಂಡಾರ, ಕ.ವಿ.ವಿ. ಧಾರವಾಡ, *ಶಿವತತ್ವ ಚಿಂತಾಮಣಿ*, ಪು. 400.

ಆಧಾರ ಗ್ರಂಥಗಳು

1. ಪ್ರೊ. ಸದಾನಂದ ಕನವಳ್ಳಿ, ಪ್ರೊ. ಸಿ.ವಿ. ಕೆರಿಮನಿ, *ತಿರುಳ್ಗನ್ನಡ ನಾಡು ಪುಲಿಗೆರೆ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. *ಬೆಳ್ವೊಲ ಬೆಳಕು* – ಸ್ಮರಣ ಸಂಚಿಕೆ, ಅ.ಭಾ. 76ನೇ ಕ.ಸಾ.ಪ.ಸ. ಗದಗ 2010.
3. *ಏಕೋತ್ತರ ಶತಸ್ಥಲ* (ಹಸ್ತಪ್ರತಿ ನಂ. 265), ವಚನ ಭಂಡಾರ, ಕ.ವಿ.ವಿ. ಧಾರವಾಡ.

30. ವಿಜಯನಗರ ಪರಿಸರದ ಕೆಲವು ಕವಿಗಳ ಮೂಲ ಮತ್ತು ಸಂಬಂಧ

ಡಾ. ಕೆ. ರವೀಂದ್ರನಾಥ

'ವಿಜಯನಗರ' ಇತಿಹಾಸ ತಜ್ಞರ ಮತ್ತು ಸಂಶೋಧಕರ ಆಲೋಚನೆಗಳಿಗೆ ಆಕರವಾದ ಸ್ಥಳ. ಅದರಲ್ಲೂ ರಾಜಕೀಯ ಚರಿತ್ರೆಯನ್ನು ಹೊರತುಪಡಿಸಿದರೆ; ಕವಿಗಳ ಕುರಿತಾದ ಸಾಹಿತ್ಯ ಚರಿತ್ರೆ; ಮತ ಪಂಥಗಳ ಕುರಿತಾದ ಧಾರ್ಮಿಕ ಚರಿತ್ರೆ ಬಗೆದಷ್ಟು ಜಲದ ರೀತಿಯಲ್ಲಿ ಹರಿದುಬರುತ್ತದೆ; ಅಧ್ಯಯನಕಾರರ ಚರ್ಚೆಗೆ ಗ್ರಾಸವಾಗುತ್ತದೆ. ಪ್ರಸ್ತುತ ನನ್ನ ಈ ಪ್ರಬಂಧ ವಿಜಯನಗರದ ಪರಿಸರದಲ್ಲಿ ಬಾಳಿದರೆನ್ನಲಾದ ಕೆಲ ಕವಿಗಳ ಮೂಲ ಮತ್ತು ಪರಸ್ಪರ ಸಂಬಂಧವನ್ನು ನಿರೂಪಿಸುವ ಪ್ರಯತ್ನವಾಗಿದೆ.

ಪ್ರೌಢರಾಯನ ಕಾಲದಲ್ಲಿ ರಾಜಪರಿವಾರದವರಾದ ಲಕ್ಕಣ್ಣ ದಂಡೇಶ, ಕಲ್ಲೇಹದ ಕೇತಿಶೆಟ್ಟಿಯರಂಥ ದಂಡನಾಯಕರು, ಅಧಿಕಾರಿಗಳು ವೀರಶೈವ ಸಾಹಿತ್ಯ-ಸಂಸ್ಕೃತಿಯ ರಚನೆ ಹಾಗೂ ಪರಿಚಲನೆಗೆ ಅಧಿಕ ಹಣವನ್ನು ವಿನಿಯೋಗ ಮಾಡಿರುವುದಕ್ಕಿಂತ ಮಿಗಿಲಾಗಿ ಧಾರ್ಮಿಕ ವಲಯದ ವ್ಯಕ್ತಿಗಳ ಸಂಬಂಧದ ಹಾಗೂ ಪರಿಶ್ರಮದ ಭಾಗ್ಯಕ್ಕೆ ಎಡೆಯಿಲ್ಲದ್ದು ಮತ್ತು ಹಿರಿದಾದುದೆಂದು ಗುಬ್ಬಿಯ ಮಲ್ಲಣಾರ್ಯ ವೀರಶೈವಾಮೃತ ಪುರಾಣ ಕಾಂಡ 8, ಸಂಧಿ 22, ಪದ್ಯ 52ರಲ್ಲಿ ಹೀಗೆ ಹೇಳುತ್ತಾನೆ.

> **ಲಕ್ಕಣ್ಣದಣ್ಣಾಯಕರು ಮುನ್ನಭಂಡಾರಿ**
> **ಜಕ್ಕಪ್ಪ ಕಲೇಹದ ಕೇತಿಶೆಟ್ಟಿಯರಿವರು**
> **ಲಕ್ಕಸಂಖ್ಯೆಯ ವಿತ್ತಮಂ ವೆಚ್ಚಿಸುತ್ತ ಮಾಡಿದರೆಂಬುದೇನು ಮಿಗಿಲು**
> **ಅಕ್ಕರಿಂ ಸರ್ವಮಾಹೇಶ್ವರ ಕೃಪಾನಿದಾ**
> **ನಕ್ಕೆ ನಿಸ್ಪೃಹನೆ ಹಲಗೆಯ ದೇಶಿಕಾ ಕೂರ್ತು**
> **ಪಕ್ಕಾದ ಮಲ್ಲಣಾರ್ಯನ ಭಾಗ್ಯಕ್ಕೆಣೆಯೆಂದರು ಸಕಲಶರಣರ್ಕಳು**

ಪ್ರೌಢರಾಯನ ಕಾವ್ಯ ಬರೆದ ಅದ್ರೀಶ, ಮಳೆಯರಾಜ ಚಾರಿತ್ಯ ಬರೆದ ಸಜ್ಜೆಯ ಸಿದ್ಧಲಿಂಗ, ರಾಘವಾಂಕ ಚರಿತ್ರೆ ಬರೆದ ಸಿದ್ಧನಂಜೇಶ, ಚನ್ನಬಸವ ಪುರಾಣಬರೆದ ವಿರೂಪಾಕ್ಷಪಂಡಿತ, ಗುಬ್ಬಿ ಮಲ್ಲಣಾರ್ಯನ ಆಶ್ರಿತಳಾದ ಜ್ಯೋತಿ ವೀರಮ್ಮರಂಥ ಕವಿಗಳ, ಯತಿಗಳ ಹಾಗೂ ಸಂಸಾರಿಗಳ ಸಂಬಂಧ ಮತ್ತು ಮೂಲದ ಚರಿತ್ರೆ ಕುತೂಹಲವನ್ನುಂಟುಮಾಡುತ್ತದೆ.

ಅದ್ರೀಶ ಕವಿ ಬಿಜಾಪುರ ಜಿಲ್ಲೆ ಬಾಗೇವಾಡಿ ತಾಲೂಕಿನ ಕೊಲ್ಹಾರದವನು. ಚಿಕ್ಕಗರಸಂಗಿ, ಹಿರೇಗರಸಂಗಿ, ರೋಣಿಹಾಳ, ಹಳ್ಳದ ಗೆಣ್ಣೂರು, ಮುತ್ತಲದಿನ್ನಿ, ಹಂಗರಗಿ-ಈ ಏಳು ಹಳ್ಳಿಗಳನ್ನೊಳಗೊಂಡ ಕೊಲ್ಹಾರ ಪ್ರಾಂತದ ದೇಸಾಯಿ ಮನೆತನಕ್ಕೆ ಸೇರಿದವನು. ಈ ದೇಸಗತಿ ಮನೆತನಕ್ಕೂ, ವಿಜಯನಗರದ ಪ್ರೌಢದೇವರಾಯನಿಗೂ ಇರುವ ಸಂಬಂಧ ಕುರಿತಾಗಿ ಪ್ರೌಢರಾಯನ ಕಾವ್ಯ ಸಂಪಾದಿಸಿದ ಸಂ.ಶಿ. ಭೂಸನೂರ ಮಠರು ಜನಪದ ವದಂತಿಯ ಕಥೆಯೊಂದನ್ನು ಹೀಗೆ ತಿಳಿಸುತ್ತಾರೆ. "ಕೊಲ್ಹಾರದಿಂದ 45 ಕಿ.ಮೀ. ದೂರದಲ್ಲಿರುವ ನಾಲತ್ವಾಡದ ಗ್ರಾಮದಲ್ಲಿ ಗಾಣಿಗರ ಮನೆತನವಿತ್ತು ಊರಗೌಡ ಒಮ್ಮೆ ಗಾಣಿಗನಿಗೆ ಕುಸುಬೆಕೊಟ್ಟು ಆ ದಿನವೇ ಎಣ್ಣೆ ತೆಗೆದುಕೊಡಬೇಕೆಂದು ಹೇಳಿದನಂತೆ. ಇದಕ್ಕೆ ನಿರಾಕರಿಸಿದ ಕಾರಣವಾಗಿ ಗಾಣ ಮತ್ತು ಎತ್ತುಗಳನ್ನು ವಶಪಡಿಸಿಕೊಂಡು ಊರಿಂದ ಹೊರಹಾಕಿದನಂತೆ. ಅಲ್ಲಿಂದ ವಲಸೆಬಂದ ಗಾಣಿಗನು ಭೋಜನಾಯಕನ ಒಡೆತನದಲ್ಲಿ ಕೊಲ್ಹಾರಕ್ಕೆ ಬಂದು ನೆಲಸಿದನಂತೆ. ಒಮ್ಮೆ ಭೋಜನಾಯಕನಿಗೂ, ಪ್ರೌಢರಾಯನಿಗೂ ಯುದ್ಧವಾಗಿ ತಲೆತಪ್ಪಿಸಿಕೊಂಡ ಭೋಜನಾಯಕನನ್ನು ಸೆರೆಹಿಡಿಯಲು ಕೊಲ್ಹಪುರಕ್ಕೆ ಪ್ರೌಢರಾಯನ ಸೈನ್ಯ ಮುತ್ತಿಗೆ ಹಾಕಿತು. ಊರ ಹೊರಗಿದ್ದ ಗಾಣಿಗನೇ ಭೋಜನಾಯಕನೆಂದು ಭಾವಿಸಿದ ಸೈನ್ಯ ಅ ವ್ಯಕ್ತಿಯನ್ನು ಕೊಂದರಂತೆ. ಗಂಡನ ಮರಣದಿಂದ ರೋಧಿಸುತ್ತಿದ್ದ ಆತನ ಹೆಂಡತಿಗೆ ಪ್ರೌಢರಾಯ ಸಾಂತ್ವಾನ ಹೇಳಿ ಗರ್ಭಿಣಿಯಾಗಿದ್ದ ನಿನ್ನ ಉದರದಲ್ಲಿ ಗಂಡು ಮಗು ಜನಿಸಿದರೆ ಕೊಲ್ಹಾರದ ದೇಸಗತಿಯನ್ನು ಆತನಿಗೆ ವಹಿಸಿಕೊಡುವುದಾಗಿ 'ಸನದು' ಬರೆದುಕೊಟ್ಟಂತೆ. ಮುಂದೆ ಆ ತಾಯಿ ಆದ್ರಿಶ್ಯನಿಗೆ ಜನ್ಮ ನೀಡಿದಳಂತೆ, ರಾಜನು ಆತನಿಗೆ ದೇಸಗತಿಯನ್ನು ದಯಪಾಲಿಸಿದನೆಂದು ತಿಳಿದುಬರುತ್ತದೆ. ಈ ಕಥೆಗೆ ಪುಷ್ಠಿ ನೀಡುವಂತೆ ಕೊಲ್ಹಾರ ಗ್ರಾಮದ ಗೌಡಕೀ ಪಾಳೆಯ ರಿಜಿಸ್ಟರ್‌ದಲ್ಲಿಯ ವಂಶಾವಳಿ

ಅದೃಶ್ಯಪ್ಪ ಜಹಗೀರದಿಂದಲೇ ಆರಂಭವಾಗುತ್ತದೆ. ಆದರೆ ದೇಸಗತಿ ಮನೆತನದ ಮೂಲ ಪುರುಷ ಶಂಕರಪ್ಪ ಎಂಬುದು ಆದ್ರೀಶಕವಿ ಕೃತಿ 1ನೇ ಸಂಧಿ 25ನೇ ಪದ್ಯದಿಂದ ತಿಳಿದುಬರುತ್ತದೆ.

ವರಮಳೆಯ ಮಲ್ಲೇಶನೂರ ಶಿಷ್ಯ ತೊರೆಸಾಲ
ಪರಗಣಿಯ ಕೋಲಾರಪುರಕ್ಕೆ ದೇಸಾಯಿ ನಾ
ಡೆರೆಯನಹ ಕರಿಯ ಕುಲ ಅಗ್ರ ಗೃಹವೆಂದೆನಿಪ ಹರಭಕ್ತ ಶಂಕರನ ಸದ್
ವರ ಪುತ್ರನಣ್ಣೇಂದ್ರನಾತ್ಮಜನು ಅದೃಶ್ಯ
ವಿರಚಿಸಿದ ಗುರುಬಲದಿ ಪ್ರೌಢರಾಯನ ಕಾವ್ಯ
ವಿರೆ ತಪ್ಪು ತಿದ್ದುವುದು ನಿಮ್ಮ ಕಿಂಕರನೆಂದು ಶಿವಭಕ್ತರೊಲಿದು ಬೇಗ

ಮಳೆಯಮಲ್ಲೇಶನ ಶಿಷ್ಯ, ಹೊಳೆಸಾಲಿನ ಪರಗಣಿ ಕೊಲ್ಹಾರದ ದೇಸಾಯಿ ಗಾಣಿಗೇರ ಕುಲದ ಕಟ್ಟಿಮನೆತನದ ಹರಭಕ್ತ ಶಂಕರಪ್ಪನ ಮೊಮ್ಮಗ ಅಣ್ಣೇಂದ್ರನ ಮಗ ಅದ್ರೀಶ ಕವಿ. ಇದರಿಂದ ಅದ್ರೀಶ ಕವಿಗಿಂತಲೂ ಮೊದಲು ದೇಸಗತಿ ಮನೆತನ ಇತ್ತು. ಈ ಮನೆತನದ ಮೂಲ ಪುರುಷ ಶಂಕರಪ್ಪ ಹರಭಕ್ತ, ಮಳೆಮಲ್ಲೇಶ್ವರ ಸಂಪ್ರದಾಯದ ಶಿಷ್ಯನೆಂಬುದು ಗಮನಿಸಬೇಕಾದ ಸಂಗತಿ. ಈ ಸಂಪ್ರದಾಯದ ಮೂಲವನ್ನು ಶೋಧಿಸಲು ಜನವದಂತಿಗಳಿಗಿಂತ ಸಾಹಿತ್ಯಾಕರಗಳನ್ನು ಆಶ್ರಯಿಸುವುದು ಹೆಚ್ಚು ವಿಶ್ವಾಸರ್ಹವಾಗಿದೆ. ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದ ಸಂಧಿ–1, ಪದ್ಯ 21ರಲ್ಲಿ,

ಪರಮ ಶಾಂತಿಯೆ ಮನೆ ಸದಯವೇ ಪರಿಕರಮಾಗ
ಲಿರದೆ ಶಿವಲಿಂಗ ಚಿಂತನೆಯೇ ಮನೆವಾರ್ತೆ ಮ
ತ್ತಿರದೆ ಸತಿಯೇ ಮೋಕ್ಷಲಕ್ಷ್ಮೀ ಮಕ್ಕಳೇ ಶಿಷ್ಯರಾಗಿ ಸಂಸಾರಿಯಂತೆ
ಧರಣೆಯೊಳಗೆಸೆವ ವಿದ್ಯಾನಗರಿಯೋಳ್ ಮೆರೆವ
ಹಿರಿಯ ಮಠದೊಳ್ ಮಹಾಚರಲಿಂಗ ಸಹಿತ ಸ
ದ್ಗುರುವರಂ ಸಿದ್ಧವೀರೇಶನೊಪ್ಪಿರ್ದನಾ ಯತಿಯದೇಂ ಸಾಮಾನ್ಯನೇ ॥

ಶಾಂತಿಯೇ ಮನೆ, ಸದಯವೇ ಮನೆಯ ಪರಿಕರಗಳು, ಶಿವಲಿಂಗ ಚಿಂತನೆಯೇ ಮನೆವಾರ್ತೆ, ಮೋಕ್ಷಲಕ್ಷ್ಮಿಯೇ ಸತಿ, ಮಕ್ಕಳೇ ಶಿಷ್ಯರೆಂಬ ಸಂಸಾರವೆಂದು ಭಾವಿಸಿದ ವಿಜಯನಗರದ ಹಿರೇಮಠದ ಮಹಾಚರಲಿಂಗ ಸದ್ಗುರು ಸಿದ್ಧವೀರೇಶ ಯತಿ ಸಾಮಾನ್ಯನಲ್ಲ! ಎನ್ನುವಲ್ಲಿ ವಿರೂಪಾಕ್ಷಪಂಡಿತನ ಮೂಲ ಸಿದ್ಧವೀರೇಶನಿಂದ ಪ್ರಾರಂಭವಾಗುತ್ತದೆ. ಅದೇ ರೀತಿ ಮಳೆಯರಾಜ ಚಾರಿತ್ರ್ಯ ಬರೆದ ಸಜ್ಜೆಯ ಸಿದ್ಧಲಿಂಗನು ಸಿದ್ಧವೀರೇಶನ ವರಶಿಷ್ಯನೆಂಬುದನ್ನು ಆಶ್ವಾಸ 1, ಪದ್ಯ 30ರಲ್ಲಿ ಹೀಗಿದೆ.

ಸಿದ್ಧಲಿಂಗ ಕೊಲಿಪಾಕೆಯ ಸೋಮನೊಡಲಿಂದೆ
ಚರಲಿಂಗವಾಗಿ ಪೊರವಂಟ ರೇವಣಸಿದ್ಧ
ಗುರುಕುಲಾನ್ವಯರಾದ ಮಳೆಯ ಮಲ್ಲೇಶ್ವರನ ಕರಜಾತ ಸಂತತಿಯೊಳು।
ಕರಮೆಸೆವ ಕರ್ನಾಟದೇಶಸ್ಥ ವಿದ್ಯಾನ
ಗರ ಹಿರಿಯಮಠದಲಿ ಸಿದ್ಧವೀರೇಶ್ವರನ
ವರಶಿಷ್ಯ ಸಿದ್ಧನಂಜೇಶನೆನ್ನಯ ಹಸ್ತಸರಸಿಜದೆ ಪೆತ್ತನೊಲವಿಂ ॥

ಈ ಮೇಲಿನ ಮೂರು ಪದ್ಯಗಳ ಉಲ್ಲೇಖದಿಂದ ಹಂಪಿಯ ಹಿರೆಮಠದ ಪರಂಪರೆಯಲ್ಲಿ ಬರುವ ಅದೃಶ ಕವಿಗೂ ವಿರೂಪಾಕ್ಷ ಪಂಡಿತನಿಗೂ, ಸಜ್ಜೆಯಸಿದ್ಧಲಿಂಗನಿಗೂ ಮಳೆಯ ಮಲ್ಲೇಶ ಸಂಪ್ರದಾಯದ ಸಿದ್ಧವೀರೇಶ್ವರನೇ ಗುರು. ಅಂದರೆ 1520ರಲ್ಲಿ ಅದ್ರೀಶ, 1565ರಲ್ಲಿ ಸಜ್ಜೆಯ ಸಿದ್ಧಲಿಂಗ 1584ರಲ್ಲಿ ವಿರೂಪಾಕ್ಷ ಪಂಡಿತರು ಬದುಕಿದ್ದರು. ಹೀಗಾಗಿ ಸಿದ್ಧವೀರೇಶ, ಸಿದ್ಧನಂಜೇಶ, ಅದ್ರೀಶ, ಸಜ್ಜೆಯ ಸಿದ್ಧಲಿಂಗ ಇವರು "ಸಿದ್ಧವಟ" ಮೂಲವಾದ ಮಲೆಯ ಸಂಪ್ರದಾಯದವರು. ಅಂದರೆ ಶ್ರೀಶೈಲ ಮೂಲದವರು.

ವೀರಶೈವಾಮೃತ ಪುರಾಣ ಬರೆದ ಗುಬ್ಬಿಮಲ್ಲಣಾರ್ಯ ತನ್ನ ಕೃತಿ ರಚನೆಗೆ ಕಾರಣರಾದ ವ್ಯಕ್ತಿಗಳನ್ನು ಸ್ಮರಿಸುತ್ತಾ ಜ್ಯೋತಿ ವೀರಮ್ಮನನ್ನು ಮೂರು ಪದ್ಯಗಳಲ್ಲಿ ಸ್ತುತಿಸಿದ್ದಾನೆ.

ವೀರಪಾರ್ಯಂ ತದಂಗ ಜನಾದಿನಾಥಾರ್ಯ
ನಾರಮಾಕರನಣುಗ ಮರಿರಾಜಾಖ್ಯನ ಕು
ಮಾರನಾ ನಾಗ ಮಲ್ಲೇಶನಾತನ ಪುತ್ರ ನಾಗಿದೇವಾಚಾರ್ಯನು
ಆ ರಮ್ಯನಣುಗಿಯಾತ್ಮೋದ್ಭೂತಯಾಗಿರ್ದ
ವೀರಮ್ಮನಾ ಜ್ಯೋತಿ ದೇವರಂಗನೆಯಾಗಿ
ರಾರಾಜಿಪಲ್ಲಿ ಮಾರೇಶ್ವರರು ಬಂದೊಂದು ರಾತ್ರಿಯೊಳು ಗೃಹದೊಳಿರಲು ।

(ಕಾ.8, ಸಂ–22. ಪದ್ಯ 48)

ಅಂದರೆ ನಾರಮಕನ ತಮ್ಮ ಮಾದಿರಾಜನು ಆತನ ಕುಮಾರ ನಾಗಮಲ್ಲೇಶ ಆತನ ಪುತ್ರ ನಾಗೀದೇವಾಚಾರ್ಯನ (ಪ್ರಯಶಃ ಕರಸ್ಥಲ ನಾಗಿದೇವನಿರಬಹುದು?) ತಂಗಿಯಾದ ವೀರಮ್ಮನ ಜ್ಯೋತಿ ದೇವರಂಗನೆಯಾಗಿ ರಾರಾಜಿಸುತ್ತಿತ್ತು. ಒಂದು ದಿನ ಇಲ್ಲಿಗೆ ಬಂದ ಮಹೇಶ್ವರರು.

ಕೆಡುತಿರ್ದ ದೀಪಮಂ ಕಂಕೋರ್ನಭಕ್ತನು ರೆ
ನುಡಿದನಾ ಕಟಕಿಯಿಂ ತೀರ್ಥಮಂ ನೀಡೆಂದೂ
ದೊಡೆಯರಂಘ್ರಿಯ ತೀರ್ಥವೇಕೆಂದು ನಿಜಹಸ್ತದಿಂದುದಕೆ ಯೆರೆಯಲಾಗಿ
ಮಡವಿದಿದು ಬೆಳಗನ್ನಕಂ ದೀಪವುರಿಯುವ
ರೆಡಿಗೆರಗಿ ಸೋವಳೆಯ ಸೋಮಮ್ಮನಂತಾಯ್ತು
ಮೃಡನ ಕೃಪೆಯಂ ಜ್ಯೋತಿವಿಗಮ್ಮಗೀ ಮಹತ್ವದ ನಾಮವಿರವೆಂದರು ।

(ಕಾ.8, ಸಂ–22. ಪದ್ಯ 49)

ಜ್ಯೋತಿಯಮ್ಮೊಭಿಧಾನದೊಳಿರ್ದು ವೀರೇಶ
ನೇ ತನಗೆ ಮೋಹದಿಂ ಪ್ರೇರಿಸಲ್ಕಾಗಿ ವಿ
ಖ್ಯಾತಿ ಹಲಗೆಯ ಗುರೋತ್ತಮ ಶಿಷ್ಯ ಸದ್ವ್ರತಮನಾಣ್ಮ ನಾಜ್ಞೆಯೊಳು ಪಡೆದು ।

(ಕಾ.8, ಸಂ–22. ಪದ್ಯ 50)

ಎಂಬ ಪದ್ಯಗಳಿಂದ ಗಾಣಿಗ ಕುಲದವಳಾದ ವೀರಮ್ಮ ಗುಬ್ಬಿಮಲ್ಲಣಾರ್ಯನ ಪುರಾಣಕ್ಕೆ ಪ್ರೇರಣೆಯಾದ ಮಹಿಳೆಯೆಂಬುದು ತಿಳಿದುಬರುತ್ತದೆ. ಹೀಗಾಗಿ ಸಿದ್ಧವೀರೇಶ, ಸಿದ್ಧನಂಜೇಶ, ಅದ್ರೀಶ ಮತ್ತು ವೀರಮ್ಮ ಗಾಣಿಗ ಕುಲದ ಮಲೆಯ ಸಂಪ್ರದಾಯದವರೆಂದು ಹೇಳಬೇಕೆನಿಸುತ್ತದೆ. ಮುಂದುವರಿದು ವಿದ್ಯಾನಗರಿಯಲ್ಲಿರುವ ಈ ಮಲೆ ಸಂಪ್ರದಾಯದ ಮೂಲದವರಾದ ಅದ್ರೀಶ, ಸಿದ್ಧನಂಜೇಶ, ಸಿದ್ಧವೀರೇಶ, ವಿರೂಪಾಕ್ಷಪಂಡಿತ ಹಾಗೂ ಜ್ಯೋತಿವೀರಮ್ಮರಿಗೆ ಆಶ್ರಯದಾತನಾದ ಪ್ರೌಢದೇವರಾಯನದು. ವೀರಶೈವ ಮತದ 'ಗಾಣಿಗ' ಒಳಪಂಗಡವಾಗಿರಬಹುದು. ಎಂಬ ಸಂದೇಹಕ್ಕೆ ಎಡೆ ಮಾಡಿಕೊಡುತ್ತದೆ. ಇಂಥ ಮಠಸಂಬಂಧಿ ಒಳಪಂಗಡದ ಸಂಬಂಧವೇ ಆ ಕಾಲಘಟ್ಟದ ಮಲೆ ಸಂಪ್ರದಾಯದ ವಿಸ್ತಾರಕ್ಕೂ ಕಾರಣವಾಗಿರಬಹುದು. ಈ ನಿಟ್ಟಿನಲ್ಲಿ ಇನ್ನೂ ಪರಿಶೋಧಿಸುವ ಅಗತ್ಯವಿದೆ ಎಂಬುದನ್ನು ವಿದ್ವಾಂಸರ ಗಮನಕ್ಕೆ ತರಬಯಸುತ್ತೇನೆ.

31. ಹಂಪೆಯೊಂದಿಗೆ ಕೆರೆಯ ಪದ್ಮರಸನ ಸಂಬಂಧ : ಕೆಲವು ಸಂಗತಿಗಳು

ಡಾ. ಎಫ್.ಟಿ.ಹಳ್ಳಿಕೇರಿ

1. ಪ್ರವೇಶ

ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿಯನ್ನು ಹೊಂದಿದ ಹಂಪೆಗೆ ಅಂದಾಜು ಒಂದು ಸಾವಿರ ವರ್ಷಗಳ ಇತಿಹಾಸವಿದೆ. ಈ ಅವಧಿಯಲ್ಲಿ ಧರ್ಮ ಸಮಾಜ ಸಾಹಿತ್ಯ ಸಂಸ್ಕೃತಿ ಕಲೆ ಆಡಳಿತ ಅರಸೊತ್ತಿಗೆ –ಹೀಗೆ ನಾನಾ ಕ್ಷೇತ್ರಗಳಿಗೆ ಇಂದಿಗೂ ಆಡುಂಬೊಲವಾಗಿದೆ. ಇಂದಿಗೂ ತನ್ನದೇ ಆದ ಛಾಪನ್ನು ಉಳಿಸಿಕೊಂಡಿರುವ ಹಂಪೆಯು ತನ್ನ ಒಡಲಲ್ಲಿರುವ ಅನೇಕ ಸಂಗತಿಗಳನ್ನು ಹೆಕ್ಕಿ ತೆಗೆಯಲು ಸಂಶೋಧಕರನ್ನು ಕೈಬೀಸಿ ಕರೆಯುತ್ತಿದೆ. ವಿರೂಪಾಕ್ಷ–ಪಂಪಾಂಬಿಕೆ ಈ ನೆಲದ ಆರಾಧ್ಯ ದೈವಗಳು. ಹರಿಹರ–ರಾಘವಾಂಕ–ಚಾಮರಸರಂಥ ಅನೇಕ ಕವಿಗಳ ಆಶ್ರಯತಾಣ, ಸಂಗಮವಂಶದ ಮೊದಲ ದೊರೆಗಳಾದ ಹಕ್ಕ–ಬುಕ್ಕರು ಸ್ಥಾಪಿಸಿದ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಕೇಂದ್ರವಿದು. ಪ್ರೌಢದೇವರಾಯ ಕೃಷ್ಣದೇವರಾಯರಂಥ ಅರಸರು ಆಳಿದ ಈ ಹಂಪೆಯು ಅನೇಕ ಕವಿ ಗಮಕಿ ನೃತ್ಯ ಕಲಾವಿದರಿಗೆ ನೀರೆರೆದು ಪೋಸಿದ ತಾಣವಿದು.

ಇಂಥ ಪ್ರಸಿದ್ಧವಾದ ನೆಲದಲ್ಲಿ ಅನೇಕ ಕವಿಗಳು ಆಗಿಹೋಗಿದ್ದಾರೆ. ಅಂಥವರಲ್ಲಿ ಹರಿಹರ ರಾಘವಾಂಕರು ಪ್ರಮುಖರು. ಹರಿಹರನಿಗೆ ವಿರೂಪಾಕ್ಷನನ್ನು ಸ್ತುತಿಸುವುದೆಂದರೆ ಎಲ್ಲಿಲ್ಲದ ಸಂತೋಷ. ಗಿರಿಜಾ ಕಲ್ಯಾಣ, ಪಂಪಾಶತಕ–ರಕ್ಷಾಶತಕ, ಪುಷ್ಪರಗಳೆ ಇತ್ಯಾದಿ ಕೃತಿಗಳ ಮೂಲಕ ಹಂಪೆಯ ಪರಿಸರ, ವಿರೂಪಾಕ್ಷನ ಗುಣಗಾನ, ಭಕ್ತಿಯ ಪರಾಕಾಷ್ಠೆಯನ್ನು ವ್ಯಕ್ತಪಡಿಸಿದ್ದಾನೆ. ಹನ್ನೆರಡನೆಯ ಶತಮಾನದ ಶಿವಶರಣರ ಜೀವನ ಮತ್ತು ಕಾರ್ಯಸಾಧನೆಗಳನ್ನು ರಗಳೆ ಪ್ರಕಾರದಲ್ಲಿ ರಚಿಸಿದ್ದಾನೆ. ಆ ಮೂಲಕ ಬಸವಾದಿ ಶಿವಶರಣರ ವಾರಸುದಾರನಾಗಿ ಬಂದ ಹರಿಹರನು ಕನ್ನಡದ ಸಾಹಿತ್ಯ ಚರಿತ್ರೆಯಲ್ಲಿ ತನ್ನದೇ ಆದ ಮಾರ್ಗವನ್ನು ಸ್ಥಾಪಿಸಿದ್ದಾನೆ.

ಇಂಥ ವಿಶಿಷ್ಟ ಕವಿಯಾದ ಹರಿಹರನು ಹಂಪೆಗೆ ಬರುವ ಮುನ್ನ ಹೊಯ್ಸಳ ನರಸಿಂಹ ಬಲ್ಲಾಳನಲ್ಲಿ ಕರಣಿಕ ವೃತ್ತಿಯಲ್ಲಿದ್ದನು. ಅಲ್ಲಿ ಮಂತ್ರಿಯಾಗಿದ್ದ ಕೆರೆಯ ಪದ್ಮರಸನನ್ನು ತೀರ ಹತ್ತಿರದಿಂದ ನೋಡುವ ಸಂದರ್ಭ ಹರಿಹರನಿಗೆ ಸಹಜವಾಗಿ ಬಂದಿತ್ತು. ಇದರಿಂದಾಗಿ ಕೆರೆಯ ಪದ್ಮರಸ ಮತ್ತು ಹರಿಹರನ ಸಂಬಂಧ ಗಾಢವಾದ ಸ್ನೇಹಕ್ಕೆ ತಿರುಗಿತ್ತು. ಕರಣಿಕ ವೃತ್ತಿ ಬಿಟ್ಟು ಹಂಪೆಗೆ ಬಂದ ನಂತರವೂ ಕೆರೆಯ ಪದ್ಮರಸ ಹಂಪೆಗೆ ಬಂದು ಹೋಗಿದ್ದಾನೆ. ಹೀಗಾಗಿ ಕೆರೆಯ ಪದ್ಮರಸನು ಹಂಪೆಯೊಂದಿಗೆ ಹೊಂದಿದ್ದ ಭಾವನಾತ್ಮಕ ಸಂಬಂಧಗಳನ್ನು ಅವಲೋಕಿಸುವುದು ಪ್ರಸ್ತುತ ಸಂಪ್ರಬಂಧದ ಆಶಯವಾಗಿದೆ.

2. ಕೆರೆಯ ಪದ್ಮರಸ ಮತ್ತು ಹರಿಹರರ ಸಂಬಂಧ

ಕೆರೆಯ ಪದ್ಮರಸನ ಜೀವನ ಚರಿತ್ರೆಯನ್ನು ನಿರೂಪಿಸುವ ಕೃತಿ, ಪದ್ಮಣಾಂಕನ ಪದ್ಮರಾಜ ಪುರಾಣ. ಪದ್ಮಣಾಂಕನು ಕೆರೆಯ ಪದ್ಮರನ ನೇರ ವಂಶಜನು. ಹೀಗಾಗಿ ಪದ್ಮರಸನ ಬಗೆಗೆ ಅನೇಕ ವಿಷಯಗಳು ನಮಗೆ ಅಧಿಕೃತವೆಂಬಂತೆ ತಿಳಿದುಬರುತ್ತವೆ. ಶರಣತತ್ವಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡ ಪದ್ಮರಸನು ದೀಕ್ಷಾಬೋಧೆ ಎಂಬ ತಾತ್ವಿಕ ಕೃತಿಯೊಂದನ್ನು ರಗಳೆಯಲ್ಲಿ ರಚನೆ ಮಾಡಿದ್ದಾನೆ. ಇದು ಲಿಂಗಾಯತನಿಗೆ ದೀಕ್ಷೆ ಕೊಡುವಾಗ ಅನುಸರಿಸಬೇಕಾದ ನಿಯಮಗಳನ್ನು ನಿರೂಪಿಸುತ್ತದೆ. ಪದ್ಮಣಾಂಕನು ಈತನನ್ನು ಶ್ರೀ ಶಿವಾದ್ವೈತ ಸಾಕಾರ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ, ಶೈವಸಮಯಾಬ್ಧಿಕ ಶಶಿ, ಅಖಿಲಾಗಮಜ್ಞ, ಶರಣನಿಧಿ ಸಚ್ಚರಿತನ್, ಆಚಾರ್ಯಕುಲಶೇಖರಂ ಎಂದು ನಾನಾ ವಿಧವಾಗಿ ಕೊಂಡಾಡಿದ್ದಾನೆ. ಇದನ್ನು ಗಮನಿಸಿದರೆ ಪದ್ಮಣಾಂಕನು ವೇದ–ಆಗಮ–ತರ್ಕಶಾಸ್ತ್ರ ಇತ್ಯಾದಿ ವಿಷಯಗಳಲ್ಲಿ ಪ್ರಭುತ್ವವನ್ನು ಪಡೆದವನಾಗಿದ್ದನು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಈಗಾಗಲೇ ಹೇಳಿದಂತೆ ಪದ್ಮರಸ ಮತ್ತು ಹರಿಹರರು ಕ್ರಮವಾಗಿ ಹೊಯ್ಸಳ ನರಸಿಂಹ ಬಲ್ಲಾಳನಲ್ಲಿ ಮಂತ್ರಿ ಮತ್ತು ಕರಣಿಕರಾಗಿದ್ದರು. ಮೇಲಾಗಿ "ದೇಹವೆರಡು ಭಾವವೊಂದು" ಎಂಬಂತೆ ಜೀವಿಸಿದವರು. ಒಂದು ದಿನ ಹರಿಹರನು

ಆಸ್ಥಾನದಲ್ಲಿ ಕಡತಗಳನ್ನು ತಿರುವಿ ಹಾಕುತ್ತಿರುವಾಗ ತನ್ನ ಕೈಗಳೆರಡನ್ನು ಮೇಲಕ್ಕೆತ್ತಿ ಉಜ್ಜಿಕೊಂಡನು. ಇದರಿಂದ ಆತನ ಸಹಪಾಠಿಗಳು ವಾದಿಗಳು ಗಹಗಹಿಸಿ ನಗುತ್ತ "ಹರಿಹರನಿಗೆ ಹುಚ್ಚು ಹಿಡಿದಿದೆ" ಎಂದು ಹಾಸ್ಯ ಮಾಡಿದರು. ಇದನ್ನು ಗಮನಿಸುತ್ತಿದ್ದ ಅರಸನೂ ನಗಲಾರಂಭಿಸಿದನು. ಹಂಪೆಯಲ್ಲಿದ್ದ ವಿರೂಪಾಕ್ಷನ ತೆರೆಗೆ ಹತ್ತಿದ್ದ ಉರಿಯನ್ನು ಹರಿಹರನು ತನ್ನ ಕೈಗಳಿಂದ ತಿಕ್ಕಿ ಆರಿಸಿದನೆಂಬುದನ್ನು ಮಂತ್ರಿ ಪದ್ಮರಸನು ಪ್ರತ್ಯಕ್ಷ ಮಾಡಿ ತೋರಿಸಿದನು.

ಈ ಘಟನೆಯಿಂದ ನೊಂದುಕೊಂಡ ಹರಿಹರನು "ಎಲೆ, ಮನುಜೇಶ ಕೇಳು, ಇಂದು ಮೊದಲಾಗಿ ಸಕಲದೇವದೇವನ ಸೇವೆಯಲ್ಲದೆ ಮನುಜಸೇವೆ ಎನಗೆ ಅಗ್ರಾಹ್ಯವು" (ಪ.ಪು. 5–20) ಎಂದು ಅರಸ ಬಲ್ಲಾಳನಿಗೆ ಹೇಳಿ ಕರಣಿಕ ವೃತ್ತಿಗೆ ವಿದಾಯ ಹೇಳಿ, ಹಂಪೆಗೆ ಬಂದು ವಿರೂಪಾಕ್ಷನ ಸೇವೆಯಲ್ಲಿ ನಿರತನಾದನು. ಈ ಘಟನೆ ಪದ್ಮರಸ ಮತ್ತು ಹರಿಹರನ ಗಾಢವಾದ ಸ್ನೇಹವನ್ನು ಎತ್ತಿ ತೋರಿಸುತ್ತದೆ. ಇಬ್ಬರೂ ಶಿವಭಕ್ತರು, ಈಶ್ವರನ ಸೇವಾಸಕ್ತರು. ಹರಿಹರನಲ್ಲಿದ್ದ ಶೈವಭಕ್ತಿ, ಮಹಿಮೆಯನ್ನು ತೆರೆಯ ಪವಾಡದ ಮುಖಾಂತರ ಪದ್ಮರಸನು ತಿಳಿಸಿದ್ದಾನೆ. ಪದ್ಮರಸನು ತ್ರಿಭುವನತಾತನೊಡನೆ ವಾದ ಮಾಡಲು ಹೋಗುವ ಸಂದರ್ಭದಲ್ಲಿ ಆತನೊಂದಿಗೆ ಹರಿಹರನಿದ್ದಂತೆ ಯಾವ ಕಾವ್ಯಗಳಲ್ಲಿಯೂ ಹೇಳಿಲ್ಲ. ಬಹುಶಃ ಅರಸನ ಜೊತೆಗಾದ ಈ ಮನಸ್ತಾಪದಿಂದಾಗಿ ಹರಿಹರನು ಆ ಸಮಯಕ್ಕಾಗಲೇ ಹಂಪೆಗೆ ಬಂದಿರಬೇಕು.

ಆತನ ಪೂಜಾವಿಧಾನ ಹಾಗೂ ಶಿವಾನುಭವ ಹೇಗಿತ್ತೆಂಬುದನ್ನು ಪದ್ಮಣಾಂಕನ ಒಂದು ಪದ್ಯವು ಹೀಗೆ ಹೇಳುತ್ತದೆ. "ತುಂಗಭದ್ರಾಂಬುವಂ ಮುಗಮುಗಿಪ ನವ್ಯಕುಸುಮಂಗಳಂ ದಿವ್ಯ ಗಂಧಮನಕ್ಷತಮನುರು ದಶಾಂಗಧೂಪಮನಖಿಳದೀಪಮಂ ಲಲಿತನೈವೇದ್ಯಮಂ ತಾಂಬೂಲಮಂ ಪೊಂಗಿ ಪೊರೆಯೇರುತುಂ ತಂದಾ ವಿರೂಪಾಕ್ಷಲಿಂಗಮಂ ಪೂಜಿಸಿ ದಿನಕ್ಕಭವನಿತ್ತ ಪಡಿಯಿಂ ಗಣಕುಲಾರ್ಚನಂಗೆಯ್ಯುತೆ ಶಿವಾನುಭವದಿಂ" (ಪ.ಪು.5–26) ಹರಿಹರನು ಹಂಪೆಯಲ್ಲಿದ್ದನು.

ಪದ್ಮರಸನು ತನ್ನ ಪುತ್ರನಾದ ಕುಮಾರಪದ್ಮರಸನಿಗೆ ಆಚಾರ್ಯಪಟ್ಟ ಕಟ್ಟಿ ಕಾಶೀಕ್ಷೇತ್ರದತ್ತ ಪ್ರಯಾಣ ಬೆಳೆಸಿದಾಗ ದಾರಿಯಲ್ಲಿ ಹಂಪೆಗೆ ಬರುತ್ತಾನೆ. ಆ ವಾರ್ತೆಯನ್ನು ಕೇಳಿ ಹರಿಹರನು ಸಕಲ ಸಂಭ್ರಮಗಳೊಂದಿಗೆ ಪದ್ಮರಸನನ್ನು ಬರಮಾಡಿಕೊಂಡು ವಿರುಪಾಕ್ಷನಾಲಯಕ್ಕೆ ಕರೆದುಕೊಂಡು ಹೋಗಿ "ದೇವಕುಲಸಾರ್ವಭೌಮನನೆಯ್ದೆ ಕಂಡು ನಾನಾ ವಿಧದೆ ನುತಿಸಿ ತತ್ಕರುಣಮಂ ಪಡೆದು ಸದ್ಭಾವಿ ಹರಿಹರದೇವನೊಡನೆ ನಾಲ್ಕೆರಡು ಪಗಲೀಶ್ವರಾನುಭವಸುಖದಿಂ" (ಪ.ಪು.13–27) ಇದ್ದು ಹೊರಡುವ ಸಮಯದಲ್ಲಿ ಪದ್ಮರಸನು ಹರಿಹರನನ್ನು ಹತ್ತಿರಕ್ಕೆ ಕರೆದು "ಉಮಾವರಂ ನಿಮ್ಮನಿಂದಿಂಗೆಟನೆಯ ದಿನಕೆ ತನ್ನೊಳ ನೆರಪಲಿರ್ದಪಂ" (ಪ.ಪು13–27). ಆದ್ದರಿಂದ "ನೀವೀಗಳೊರೆವೀ ಮಹಾಕಾವ್ಯಮಂ ತಡೆಯದನಿತರೊಳ್ ಪಾರಮ್ಡೆಪುದು" (ಪ.ಪು.13–28) ಎಂದು ಹೇಳಿ ಪದ್ಮರಸನು ಕಾಶೀಪುರದತ್ತ ಪ್ರಯಾಣ ಬೆಳೆಸುತ್ತಾನೆ. ಇಲ್ಲಿ ಹೇಳುವ ಮಹಾಕಾವ್ಯವು ಯಾವುದು ಎಂಬ ಪ್ರಶ್ನೆ ಏಳುತ್ತದೆ. ಆ ಪ್ರಶ್ನೆಗೆ ಉತ್ತರವೆಂದರೆ, ಬಹುಶಃ ಹರಿಹರನ ಗಿರಿಜಾ ಕಲ್ಯಾಣವೇ ಆ ಮಹಾಕಾವ್ಯವಾಗಿರಬಹುದು. ಮುಂದೆ ಎಂಟನೆಯ ದಿನಕ್ಕೆ ಪಂಪಾಪುರಾಧೀಶ್ವರನಾದ ವಿರೂಪಾಕ್ಷನು ಹರಿಹರನನ್ನು ಮೆಚ್ಚಿ ಕರುಣದಿಂದ ತನ್ನ ಉದರದಲ್ಲಿ ಅಡಗಿಸಿಕೊಳ್ಳುತ್ತಾನೆ.

3. ಕೆರೆಯ ಪದ್ಮರಸ ಮತ್ತು ರಾಘವಾಂಕರ ಸಂಬಂಧ

ರಾಘವಾಂಕನೊಂದಿಗೂ ಪದ್ಮರಸನ ಸಂಬಂಧ ಅನ್ಯೋನ್ಯವಾಗಿತ್ತು ಎಂಬುದು ಸಿದ್ಧನಂಜೇಶನ ರಾಘವಾಂಕ ಚರಿತೆಯಿಂದ ನಮಗೆ ತಿಳಿದುಬರುತ್ತದೆ. ಇವರಿಬ್ಬರ ಮೊದಲ ಭೇಟಿಯನ್ನು ಸಿದ್ಧನಂಜೇಶ ತನ್ನ ರಾಘವಾಂಕ ಚರಿತೆಯಲ್ಲಿ ಹೀಗೆ ಚಿತ್ರಿಸಿದ್ದಾನೆ : ಪಂಪಾ ಪುರ(ಹಂಪೆ)ದಿಂದ ಒಬ್ಬ ಜಂಗಮನ ಮುಖಾಂತರ ಸಿದ್ಧರಾಮ ಚಾರಿತ್ರದ ಪದ್ಯಗಳನ್ನು ಆಲಿಸಿ, ಅದರ ಕರ್ತೃವನ್ನು ಕಾಣಬೇಕೆಂಬ ಸದುದ್ದೇಶದಿಂದ ಪದ್ಮರಸನು ದೋರಸಮುದ್ರಕ್ಕೆ ರಾಘವಾಂಕನನ್ನು ಕರೆಯಿಸಿ ಗೌರವಿಸುತ್ತಾನೆ. ಬಹುಶಃ ಕವಿಯಾಗಿ ಪ್ರಸಿದ್ಧನಾದ ನಂತರ ರಾಘವಾಂಕ ಪದ್ಮರಸರ ಸ್ನೇಹ ಬೆಳೆಯಿತೆಂದು ಹೇಳಬಹುದು.

ಹರಿಹರನ ಆದೇಶದ ಮೇರೆಗೆ ಹಂಪೆಯಲ್ಲಿದ್ದ ರಾಘವಾಂಕನು ಭಕ್ತರೊಡಗೂಡಿ ಬೇಲೂರಿಗೆ ಬರುತ್ತಾನೆ. ಅಲ್ಲಿ ಪದ್ಮರಸನನ್ನು ಕಂಡು "ನಾನು ಸುಸಮಾಧಿಯೊಳಡಗಬೇಕು" ಎಂಬ ನಿರ್ಧಾರವನ್ನು ತಿಳಿಸುತ್ತಾನೆ. ಆಗ ಪದ್ಮರಸನು

ಚರಮೂರ್ತಿಗಳು ಯೋಗೀಶ್ವರರು ಹಾಗೂ ಭಕ್ತಸಂತತಿಯವರನ್ನೆಲ್ಲ ಆಹ್ವಾನಿಸಿ ಸಮಾರಾಧನೆಯನ್ನು ಮಾಡಿ ರಾಘವಾಂಕನ ಐಕ್ಯೋತ್ಸವವನ್ನು ನೆರವೇರಿಸುತ್ತಾನೆ. ಆಗ ರಾಘವಾಂಕನು ಕೃತಜ್ಞತಾಭಾವದಿಂದ

........ನಿಮ್ಮ ಪಾದಾಂಬು ಪ್ರಸಾದಮುಮನು
ನೆರೆ ನೀಡಿ ಮೊರೆದಿರೆನ್ನನಿದುವರೆಗಂ ಶಿವನ
ಬೆರಸಿ ಬೇರಿಲ್ಲದಿರುವ ಸುಖದೊಳಾಳಿಪುದಿನ್ನು
ಕರುಣಾಬ್ಧ ಶಿತಾಯಗಳಿರ ನಿಮ್ಮಯ ಬೃತ್ಯನು (ರಾ.ಚ. 19-34)

ಎಂದು ಶಿವಭಕ್ತರಿಗೆ ವಂದಿಸುತ್ತ ಪಾಲೊಳು ಪಾಲು ಬೆರೆತಂತೆ ಲಿಂಗದೊಳು ಬೆರೆತು ಒಂದಾಗುವನು. ಆಗ ಆಗಸದಿಂದ ಅಮರರು ಹೂಮಳೆಗರೆಯುವರು. ಶಿವಭಕ್ತರೆಲ್ಲ ಉಘೇಉಘೇ ಎಂದು ರಾಘವಾಂಕನನ್ನು ಸ್ತುತಿಸುವರು. ಪದ್ಮರಸನು ರಾಘವಾಂಕನ ಶರೀರವನ್ನು ಸಮಾಧಿಗೊಳಿಸುವಾಗ ಬ್ರಾಹ್ಮಣರು ಬಂದು "ರಾಘವಂ ವಿಪ್ರನಾತಗೆ ದಹನಕರ್ಮ ಸಲ್ಲುಗುಮಲ್ಲದೆ ಸಮಾಧಿಯ ಮಾಡಿಸಲೆಮ್ಮ ಮತಕೆ ಹೊಲ್ಲ......ಅಪರಕರ್ಮವ ಮಾಳ್ಪೆವು" (ರಾ.ಚ. 19-51) ಎಂದು ತಡೆಯುತ್ತಾರೆ. ಆಗ ಪದ್ಮರಸನು ವೀರಶೈವ ಮತ್ತು ವೈದಿಕ ಧರ್ಮದ ನಡುವಿನ ಸಂಘರ್ಷವನ್ನು ಎಳೆಎಳೆಯಾಗಿ ಹೇಳುವುದರ ಮೂಲಕ ರಾಘವಾಂಕನ ವೀರಶೈವತ್ವವನ್ನು ತೋರಿಸಿಕೊಡುವನು. ನಂತರ

ವರಯತಿಗೆ ಲಿಂಗಧಾರಿಗೆ ದಹನ ಸಲ್ಲದೀ
ಪುರುಷರಿಗೆ ಸಮಾಧಿಯಂ ಮಾಡುವೆಂ ಬಳಿಕ ಕೊಂ
ಬಿರಿ ನೀವೆ ದಹನಕ್ಕಪ್ಪಣೆಯನಿತ್ತೆನು (ರಾ.ಚ. 19-54)

ಎಂದು ಹೇಳಿ ರಾಘವಾಂಕನನ್ನು ಸಮಾಧಿಗೊಳಿಸಿ ಅದರ ಮೇಲೆ ವೇದಿಕೆಯನ್ನು ರಚಿಸುತ್ತಾನೆ. ಆತನ ಹಿಂದೆಯೇ ಬಂದ ಬ್ರಾಹ್ಮಣರು "ಎಲೆಯಯ್ಯಗಳಿರಾ ನಿಮ್ಮವರ ಪ್ರಾಯಶ್ಚಿತಗಳಲಿ ಶುದ್ಧನ ಮಾಡಿ ದಹಿಸುವೆವು ನೋಡಿ" ಎಂದು ಮೂದಲಿಸುತ್ತ ರಾಘವಾಂಕನ ಸಮಾಧಿಯನ್ನು ಹುಡುಕಿ ತೆಗೆಯಲು ಅಲ್ಲಿ ಮೃತಶರೀರದ ಬದಲಾಗಿ ವೃಷಭೇಶ್ವರನು ಪ್ರತ್ಯಕ್ಷನಾಗುತ್ತಾನೆ. ಆಗ ಅವರೆಲ್ಲ ಅವಮಾನದಿಂದ ತಲೆತಗ್ಗಿಸಿ ಪದ್ಮರಸನಲ್ಲಿಗೆ ಬಂದು ರಾಘವಾಂಕನು ಸಮಾಧಿಯೊಳಗಾದ ಬಗೆಯನ್ನು ಸವಿಸ್ತಾರವಾಗಿ ಕೇಳಿ ನಂದೀಶ್ವರನನ್ನು ಸಮಾಧಿಯ ಮೇಲೆ ಸ್ಥಾಪಿಸಿ, ಅದಕ್ಕೊಂದು ಸುಂದರವಾದ ಮಂಟಪವನ್ನು ನಿರ್ಮಿಸುತ್ತಾರೆ. ಇದರಿಂದ ಪದ್ಮರಸನು ಬದುಕಿರುವಾಗಲೇ ರಾಘವಾಂಕನು ಐಕ್ಯನಾದನೆಂಬ ಸಂಗತಿ ವ್ಯಕ್ತವಾಗುತ್ತದೆ. ಅಂದರೆ ರಾಘವಾಂಕ ಕಿರಿಯ ವಯಸ್ಸಿನಲ್ಲಿ ಲಿಂಗೈಕ್ಯನಾಗಿರಬಹುದೆಂದು ಹೇಳಬಹುದು.

ಆದರೆ ರಾಘವಾಂಕನು ಲಿಂಗೈಕ್ಯನಾದ ಸ್ಥಳ(ಸಮಾಧಿ)ದ ಬಗೆಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಹಂಪೆಯಲ್ಲಿ ಲಿಂಗ್ಯಕ್ಯನಾದನೆಂದು ಕೆಲವರು, ಮತ್ತೆ ಕೆಲವರು ಬೇಲೂರಿನಲ್ಲಿ ಎಂದು ಅಭಿಪ್ರಾಯಪಟ್ಟಿದ್ದಾರೆ. ಇವುಗಳಲ್ಲಿ ಬೇಲೂರಿನಲ್ಲಿ ಸಮಾಧಿ ಹೊಂದಿದನೆಂಬುದಕ್ಕೆ ಬಲವಾದ ಆಧಾರಗಳಿವೆ. *Mysore Archaelogical Report* ನಲ್ಲಿ (1911, pg-14) ರಾಘವಾಂಕ ಸಮಾಧಿಯ ಬಗ್ಗೆ ಹೀಗೆ ಹೇಳಲಾಗಿದೆ : The ಪಾತಾಳೇಶ್ವರ Temple is so called because it is situated below the level of the ground. ವೀರಶೈವ Tradition is that on the death of ರಾಘವಾಂಕ a great ವೀರಶೈವ teacher, and poet of the twelth century his body which was claimed by both he brahmins and virshavasa was transformed into the ಲಿಂಗ which is now worshipped in the temple. ಬಿ.ಶಿವಮೂರ್ತಿಶಾಸ್ತ್ರಿಯವರು "ಬೇಲೂರಿನ ಪಾತಾಳೇಶ್ವರ ದೇವಾಲಯವೇ ರಾಘವಾಂಕನ ಸಮಾಧಿ"ಯೆಂದು ಹೇಳಿದ್ದಾರೆ (ವೀರೇಶ ಚರಿತೆ, ಪುಟ-18). ಇನ್ನು ಎಂ. ಚಿದಾನಂದಮೂರ್ತಿಯವರು ರಾಘವಾಂಕ ಚಾರಿತ್ರದಲ್ಲಿನ ಉಲ್ಲೇಖಗಳನ್ನು ಗಮನಿಸಿ, "ಬೇಲೂರಿನ ಪಾತಾಳೇಶ್ವರ ದೇವಾಲಯವೇ ರಾಘವಾಂಕನ ಸಮಾಧಿ" ಎಂದು ಸಮರ್ಥಿಸಿದ್ದಾರೆ (ಸಾಧನೆ 19-3, 4 ಪುಟ-1). ಈ ಅಭಿಪ್ರಾಯಗಳನ್ನು ಗಮನಿಸಿದಾಗ ಕೆರೆಯ ಪದ್ಮರಸನ ವಂಶಜರು ಆಚಾರ್ಯಪಟ್ಟವನ್ನೇರಿದವರಾಗಿದ್ದರು. ಈ ಪದವಿ ವೀರಶೈವರಲ್ಲಿ ಅತ್ಯಂತ ಪೂಜ್ಯವಾದ ಗುರುಸ್ಥಾನವೆನಿಸಿದೆ. ಆದ್ದರಿಂದ ರಾಘವಾಂಕನು ಪದ್ಮರಸನಿಂದ ಶಿವಸಮಾಧಿ-ಸಂಸ್ಕಾರ ಪಡೆಯಲಿಕ್ಕಾಗಿ ದೋರಸಮುದ್ರಕ್ಕೆ ಹೋಗಿರಬಹುದು.

ಈವರೆಗಿನ ಅವಲೋಕನದಿಂದ ಕಂಡುಬರುವ ಸಂಗತಿಗಳನ್ನು ಕೆಳಗಿಂತೆ ಕ್ರೋಢೀಕರಿಸಿ ಹೀಗೆ ಹೇಳಬಹುದು.

1. ಕೆರೆಯ ಪದ್ಮರಸ ಮತ್ತು ಹರಿಹರರು ಹೊಯ್ಸಳ ದೊರೆ ನರಸಿಂಹ ಬಲ್ಲಾಳನ ಆಸ್ಥಾನದಲ್ಲಿ ಕ್ರಮವಾಗಿ ಮಂತ್ರಿ ಮತ್ತು ಕರಣಿಕ ವೃತ್ತಿಯಲ್ಲಿದ್ದಾಗ ಆಪ್ತಸ್ನೇಹಿತರಾಗಿದ್ದರು.
2. ಪಂಪಾ ವಿರೂಪಾಕ್ಷನ ತೆರೆಗೆ ಬೆಂಕಿ ಕಾಣಿಸಿಕೊಂಡಾಗ ದೋರಸಮುದ್ರದಲ್ಲಿದ್ದ ಹರಿಹರನು ಅಲ್ಲಿಂದಲೇ ಕೈಗಳನ್ನು ಮೇಲಕ್ಕೆತ್ತಿ ಒರೆಸಿದ್ದನು. ಇದು ವಿರೂಪಾಕ್ಷನ ಮೇಲಿದ್ದ ಹರಿಹರನ ಅಪಾರ ಭಕ್ತಿಗೆ ನಿದರ್ಶನವಾಗಿದೆ.
3. ಕಾಶಿಗೆ ಹೋಗುವಾಗ ಪದ್ಮರಸನು ಹಂಪೆಯಲ್ಲಿ ಕೆಲವು ಕಾಲ ಹರಿಹರನೊಂದಿಗೆ ಇದ್ದನು.
4. ಗಿರಿಜಾ ಕಲ್ಯಾಣ ಮಹಾಕಾವ್ಯವನ್ನು ಬಹುಬೇಗನೇ ಪೂರ್ಣಗೊಳಿಸುವಂತೆ ಪದ್ಮರಸ ಹರಿಹರನಿಗೆ ಸೂಚಿಸಿದ್ದನು.
5. ಪದ್ಮರಸನು ರಾಘವಾಂಕನ ಕವಿತ್ವವನ್ನು ಮೆಚ್ಚಿಕೊಂಡು ಬೇಲೂರಿಗೆ ಬರಮಾಡಿಕೊಂಡನು.
6. ಹರಿಹರನ ಸೂಚನೆಯ ಮೇರೆಗೆ ರಾಘವಾಂಕನು ಹಂಪೆಯಿಂದ ಬೇಲೂರಿಗೆ ಬಂದು ಪದ್ಮರಸನ ಸಮ್ಮುಖದಲ್ಲಿ ಸಮಾಧಿ ಹೊಂದಿದನು.
7. ಮೇಲಿನ ವಿವರಗಳಿಂದ ಪದ್ಮರಸನು ಹಂಪೆಯೊಂದಿಗೆ ಅತಂತ ಗಾಢವಾದ ಸಂಬಂಧವಿತ್ತು ಎಂಬುದು ಮನದಟ್ಟಾಗುತ್ತದೆ.

ಸಹಾಯಕ ಗ್ರಂಥಗಳು

1. ಆರ್.ಸಿ. ಹಿರೇಮಠ(ಸಂ), *ಪದ್ಮರಾಜ ಪುರಾಣ*, ಮುರುಘಾಮಠ ಧಾರವಾಡ, 1958
2. ಸ.ಸ. ಮಾಳವಾಡ(ಸಂ), *ರಾಘವಾಂಕ ಚರಿತೆ*, ಮುರುಘಾಮಠ ಧಾರವಾಡ, 1954
3. ಎಫ್.ಟಿ.ಹಳ್ಳಿಕೇರಿ, *ಕೆರೆಯ ಪದ್ಮರಸ ಮತ್ತು ಆತನ ವಂಶಜರು*, ವಿಕಾಸ ಪ್ರಕಾಶನ ಹೊಸಪೇಟೆ, 1996
4. ಬಿ.ಶಿವಮೂರ್ತಿಶಾಸ್ತ್ರಿ(ಸಂ), *ವಿರೇಶ ಚರಿತೆ*, ಶಾರದಾ ಮಂದಿರ ಮೈಸೂರು, 1966.

32. ಪಂಪಾ ಮಹಾತ್ಮೆ ಮತ್ತು ಕಾಳಾಮುಖ ಮತ

ಡಾ. ವಾಸುದೇವ ಬಡಿಗೇರ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕೆ ಮುಂಚೆ ಹಂಪಿ ಪಂಪಾ–ವಿರೂಪಾಕ್ಷರಿಂದ ಧಾರ್ಮಿಕ ಕ್ಷೇತ್ರವಾಗಿ ಹಾಗೂ ರಾಮಾಯಣ ಮಹಾಕಾವ್ಯದಲ್ಲಿ ಉಲ್ಲೇಖವಾದ ಕಿಷ್ಕಿಂಧ ಪುರವಾಗಿ ಪ್ರಸಿದ್ಧಿ ಪಡೆದಿತ್ತು. ಈ ಕ್ಷೇತ್ರ ಕುರಿತಂತೆ 7ನೇ ಶತಮಾನದಿಂದ ಉಲ್ಲೇಖಗಳು ಸಿಗುತ್ತವೆ. ಬಾದಾಮಿ ಚಾಲುಕ್ಯ ಅರಸ ವಿಜಯಾದಿತ್ಯನ ಕ್ರಿ.ಶ. 686ರ ತಾಮ್ರಪಟದಲ್ಲಿ ಪಂಪಾತಟವೆಂದು ಹೆಸರಿಸಿದ್ದು, ಕಲ್ಯಾಣ ಚಾಲುಕ್ಯ ಅರಸ ವಿಕ್ರಮಾದಿತ್ಯನ 1018ರ ಪುರ ಮತ್ತು ಬಾಗಳಿ ಶಾಸನಗಳಲ್ಲಿ ವಿರೂಪಾಕ್ಷನ ಉಲ್ಲೇಖ ಬರುತ್ತದೆ. ಅನಂತರದ ಶಾಸನಗಳು ಬೇರೆ ಬೇರೆ ಸ್ಥಳಗಳಲ್ಲಿಯ ದೇವಾಲಯಗಳಿಗೆ, ವ್ಯಕ್ತಿಗಳಿಗೆ ಬಿಟ್ಟ ದಾನ–ದತ್ತಿಗಳನ್ನು ವಿರೂಪಾಕ್ಷನ ಸನ್ನಿಧಿಯಲ್ಲಿ ನೀಡಿದಂತೆ ತಿಳಿಸುತ್ತವೆ. ವಿಜಯನಗರ ಪೂರ್ವದ ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಹಂಪಿಯ ಮುಖ್ಯ ದೇವತೆ ವಿರೂಪಾಕ್ಷನೆಂದೇ ಕರೆಯಲಾಗಿದೆ. ಈ ಕ್ಷೇತ್ರವನ್ನು ರಕ್ಷಣೆ ಮಾಡುವುದು ಆಯಾ ಕಾಲದ ಅರಸುಮನೆತನಗಳ ಕರ್ತವ್ಯವಾಗಿತ್ತು. ಈ ವಿಷಯವನ್ನು ಕುರುಗೋಡು ಸಿಂದರ ಸಾಮಂತನಾಗಿದ್ದ ಮಾದೆಯನಾಯಕನು ಪಂಪಾ ತೀರ್ಥದ ರಕ್ಷಣಾರ್ಥವಾಗಿ ಮತಂಗ ಪರ್ವತವನ್ನು ಪ್ರತಿಪಾಳಿಸುತ್ತಿದ್ದುದಾಗಿ ಹೇಳಿಕೊಂಡಿದ್ದಾನೆ.

ಬಹಳ ಮುಖ್ಯವಾಗಿ ಹಂಪಿ ಒಂದು ಪ್ರಮುಖ ಧಾರ್ಮಿಕ ಕ್ಷೇತ್ರವಾಗಿದ್ದರಿಂದ ಅನೇಕ ಐತಿಹ್ಯ ಮತ್ತು ಪುರಾಣಗಳು ಬೆಳೆದುಬಂದವು. ಇಲ್ಲಿಯ ಸ್ಥಳಪುರಾಣದಲ್ಲಿ ನದಿ, ಬೆಟ್ಟ ಋಷಿಗಳ ಉಲ್ಲೇಖಗಳಿವೆ. ಅಲ್ಲದೇ ಸೌದತ್ತಿ ತಾಲೂಕಿನ ಶಿರಸಂಗಿ ಶಾಸನ ಹಂಪಿ ಪರಿಸರವನ್ನು ಕಿಷ್ಕಿಂಧಾದ್ರಿ ಎಂದು ಕರೆದು, ಇಲ್ಲಿ ವಾಲಿ, ಮರುತ್ಸ, ಅಂಗದ, ದಿನೇಶ, ಹಂಸ, ಕಪಿಲ, ಮತಂಗ, ಶಾರ್ಗ, ಅಗಸ್ತ್ಯ, ವಿಭಾಂಡಕನ ಪುತ್ರ ಋಷ್ಯಶೃಂಗ ಮೊದಲಾದವರು ವಾಸವಾಗಿದ್ದ ಮಾಹಿತಿಯನ್ನು ನೀಡುತ್ತದೆ. ಪಂಪಾ ಮಹಾತ್ಮೆಯಲ್ಲಿ ಮಾಲ್ಯವಂತಗಿರಿ, ಋಷ್ಯಮುಖ, ಕಿಷ್ಕಿಂಧಾದ್ರಿ, ಹೇಮಕೂಟ, ವಿಪ್ರಕೂಟ, ಗಂಧರ್ವಗಿರಿ, ಜಂಬುನಾಥಗಿರಿ, ಸೋಮಪರ್ವತ, ಮಣಿಭದ್ರೇಶ್ವರ, ಮುಂತಾದವು ವಾಲ್ಮೀಕಿ ರಾಮಾಯಣದಲ್ಲಿ ಬರುವ ಹೆಸರುಗಳಿಗೆ ಪೂರಕವಾಗಿಯೇ ಇವೆ. ಇದರಲ್ಲಿ ಉಲ್ಲೇಖಿಸಿದಂತೆ, ಬ್ರಹ್ಮನ ಮಗಳಾದ ಪಂಪಾದೇವಿ, ಶಿವನನ್ನು ಮದುವೆಯಾಗಲು ಹೇಮಕೂಟದ ಉತ್ತರಕ್ಕಿರುವ ಅರ್ಧಕೋಶ ದೂರದಲ್ಲಿರುವ ವಿಪ್ರಕೂಟವೆಂಬ ಪರ್ವತದ ಬಳಿಯ ಸರೋವರದ (ಪಂಪಾ ಸರೋವರ) ದಡದಲ್ಲಿ ಉಗ್ರವಾದ ತಪಸ್ಸನ್ನು ಆಚರಿಸುತ್ತಾಳೆ. ಅವಳ ತಪಸ್ಸಿಗೆ ಮೆಚ್ಚಿದ ಶಿವ ಅವಳ ಇಚ್ಛೆಯಂತೆ ಮದುವೆಯಾಗಿ ಪಂಪಾಪತಿ ಎನ್ನಿಸಿಕೊಳ್ಳುತ್ತಾನೆ. ಅವಳು ತಪಸ್ಸು ಮಾಡಿದ ಸ್ಥಳವನ್ನು ಪಂಪಾಸರೋವರವೆಂದು ಖ್ಯಾತಿ ಪಡೆಯಲೆಂದು ವರ ಕೊಡುತ್ತಾನೆ. ನಂತರ ಇದು ಪಂಪಾದೇವಿ, ಪಂಪಾಪತಿ, ಪಂಪಾಕ್ಷೇತ್ರ, ಪಂಪಾಸರೋವರ, ಪಂಪಾಪುರವೆಂದು ಹೆಸರುವಾಸಿಯಾಗುತ್ತದೆ.

ಪಂಪಾಂಬಿಕೆ ಮತ್ತು ಪಂಪಾಪತಿಯ ನಿಶ್ಚಿತಾರ್ಥ ಮತ್ತು ವಿವಾಹದ ಸಂದರ್ಭವನ್ನು 13ನೇ ಶತಮಾನದ ಆನೆಗುಂದಿಯ ತಾಮ್ರಪಟದಲ್ಲಿ ಸವಿಸ್ತಾರವಾಗಿ ಚಿತ್ರಿಸಲಾಗಿದೆ. ಇದರಿಂದ ಪಂಪಾ–ವಿರೂಪಾಕ್ಷರ ನೆಲೆಯಾಗಿರುವ ಈ ಕ್ಷೇತ್ರ ಬಹು ಪ್ರಾಚೀನ ಕಾಲದಿಂದಲೇ ಧಾರ್ಮಿಕ ಆಚರಣೆಗೆ ಒಳಗಾಗಿದೆ. ಅಲ್ಲದೇ ಇಂದಿಗೂ ಪ್ರತಿ ವರ್ಷ ಪಂಪಾ–ವಿರೂಪಾಕ್ಷರ ವಿವಾಹವನ್ನು ಮಾಡುವುದರ ಮೂಲಕ ಈ ಆಚರಣೆಯನ್ನು ಜೀವಂತವಾಗಿ ಉಳಿಸಿಕೊಂಡು ಬರಲಾಗಿದೆ.

ಶ್ರೀ ಪಂಪಾಮಹಾತ್ಮೆಯಲ್ಲಿ ಹಂಪಿಯ ಪರಿಸರ ಮತ್ತು ಕ್ಷೇತ್ರ ಮಹಿಮೆಯ ವರ್ಣನೆಯ ಜೊತೆಗೆ ಪಾಶುಪತ ವ್ರತ, ಕಾಳಾಮುಖ ಮತ ಪ್ರಶಂಸೆ ಮತ್ತು ಕಾಳಾಮುಖ ಮತ ನಿರೂಪಣವನ್ನು ಹೇಳಲಾಗಿದೆ. ಈ ಪಂಪಾಮಹಾತ್ಮೆಯ ಕಾಲ ತಿಳಿದುಬಂದಿಲ್ಲ. ಇದು ಸ್ಕಂಧಪುರಾಣದ ಒಂದು ಭಾಗವಾಗಿ ಸ್ಕಂಧ ಪುರಾಣೇ ಭರದ್ವಾಜ ಸಂಹಿತಾಯಾಂ ಹೇಮಕೂಟ ಖಂಡೇ ಉತ್ತರಭಾಗೇ ಎಂದಿದೆ. ಇದರ ಪತ್ಯದ ಒಂದು ಪ್ರತಿ ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ, ಇನ್ನೊಂದು ಮದ್ರಾಸಿನ ಗವರ್ಮೆಂಟ ಓರಿಯಂಟಲ್ ಮ್ಯಾನುಸ್ಕ್ರಿಪ್ಟ ಲೈಬ್ರರಿಯಲ್ಲಿವೆ ಎಂದೂ, ಈ ಪತ್ಯವು 1933ರಲ್ಲಿ ಸಂಸ್ಕೃತ ಭಾಷೆ, ತೆಲುಗು ಲಿಪಿಯಲ್ಲಿ ಅನಂತಪುರ ಜಿಲ್ಲೆಯ ಆಲೂರು ತಾಲೂಕಿನ ಹರವಿಯಲ್ಲಿ

ಪ್ರಕಟವಾಗಿದೆ ಎಂದೂ ವಸುಂಧರಾ ಫಿಲಿಯೋಜಾ ಅವರು ಹೇಳುತ್ತಾರೆ. ಈ ಪಂಪಾ ಮಹಾತ್ಮೆಯನ್ನು 1983ರಲ್ಲಿ ಹೊಳಗುಂದಿಯ ಸಿದ್ಧಲಿಂಗೇಶ್ವರ ಸ್ವಾಮಿಗಳು ಕನ್ನಡದಲ್ಲಿ ಪ್ರಕಟಿಸಿದ್ದಾರೆ.

ಕಾಳಾಮುಖ ಪರಂಪರೆ : ಕರ್ನಾಟಕದಲ್ಲಿ ಕಾಳಾಮುಖ ಪರಂಪರೆ 6ನೇ ಶತಮಾನದಲ್ಲಿ ಕಾಣಿಸಿಕೊಂಡಿತೆಂದು ಸಾಮಾನ್ಯವಾಗಿ ನಂಬಲಾಗಿದೆ. ಪಾಶುಪತದಂತೆ ಕಾಳಾಮುಖ ಮತದ ಉದಯಕ್ಕೂ ಲಕುಲೀಶನೇ ಮೂಲವಾಗಿ ಕಾಣಿಸುತ್ತಾನೆ. ಮಹೇಶ್ವರನು ಸ್ಮಶಾನದಲ್ಲಿದ್ದ ದೇಹವನ್ನು ಹೊಕ್ಕು ಲಕುಲೀಶನ್ ಎಂಬ ಬ್ರಹ್ಮಚಾರಿಯಾಗಿ ಅವತರಿಸಿ ಕಾಯಾವರೋಹಣ ಎಂದು ಹೆಸರಾದುದು. ಕುಶಿಕ, ಗರ್ಗ, ಮಿತ್ರ ಮತ್ತು ಕೌರುಷ್ಯರೆಂಬ ನಾಲ್ವರು ಶಿಷ್ಯರು ಅವನ ಅನುಯಾಯಿಗಳಾದರು. ಪಾಶುಪತರು ಭಸ್ಮ ಧಾರಣೆ ಮಾಡಿಕೊಂಡು ಮಹೇಶ್ವರಯೋಗವನ್ನು ಅನುಸರಿಸಿ, ಕೊನೆಯಲ್ಲಿ ರುದ್ರಲೋಕಕ್ಕೆ ಹೋಗುವವರೆಂದು ವಾಯುಪುರಾಣ, ಲಿಂಗಪುರಾಣದಲ್ಲಿದೆ. ಈ ಕಾಯಾವರೋಹಣವು ಬರೋಡ ಸಂಸ್ಥಾನದ (ಈಗಿನ ಗುಜರಾತ್) ಕಾರ್ವಾನ್ ಎಂಬ ಹಳ್ಳಿಯೆಂದು ಗುರುತಿಸಲಾಗಿದೆ. ಕಾರ್ವಾನ್ ಮಹಾತ್ಮೆಯಲ್ಲಿ ಶಿವನು ಲಕುಲೀಶನಾದ ಕಥೆಯಿದೆ. ಈ ಊರಿನಲ್ಲಿ ನಕ್ಲೇಶ್ವರ ಎಂಬ ದೇವಾಲಯವನ್ನೂ ಕಟ್ಟಲಾಗಿದೆ.

ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಗುಹಾ ದೇಗುಲದಲ್ಲಿ ಲಕುಲೀಶ ಅವನ ನಾಲ್ವರು ಶಿಷ್ಯರ ಶಿಲ್ಪಗಳು ಮತ್ತು ಮಹಾಕೂಟದ ಮುಕುಟೇಶ್ವರ, ಪಟ್ಟದಕಲ್ಲಿನ ವಿರೂಪಾಕ್ಷ, ಮಲ್ಲಿಕಾರ್ಜುನ ದೇವಾಲಯಗಳ ಗೋಡೆಯಲ್ಲೂ ಲಕುಲೀಶನ ಶಿಲ್ಪಗಳನ್ನು ಕೆತ್ತಲಾಗಿದೆ. ಶೃಂಗೇರಿ ಹತ್ತಿರದ ಕಿಗ್ಗ ಗ್ರಾಮದ ಋಷ್ಯಶೃಂಗೇಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ ಪಾಶುಪಥ ಮತದ ಮೊದಲ ಉಲ್ಲೇಖ ಬರುತ್ತದೆ. ಇದರಲ್ಲಿ ಪೂರ್ವ ಮರಿಯಾದೆಯಾ ಕಮ್ಮರರ ಪಾಶುಪತ ಮರುಯಾದೆಯಾ ಉಳ್ಳದಲ್ಲ ಎತ್ತಿಕೊಳ್ವೋನ್ವಙ್ಚಮಹಾಪಾತನಕ್ಕಂ ಎಂದು ಹೇಳಲಾದೆ. ಅಂದಾಗ ಕರ್ನಾಟಕದಲ್ಲಿ ಮೊದಲು ಕಾಣಿಸಿಕೊಳ್ಳುವುದು ಪಾಶುಪಥ ಮತವೆಂದಾಯಿತು.

ಶೈವಪಂಥದಲ್ಲಿ ರುದ್ರಭೈರವರದೊಂದು ಪಂಗಡ. ಇದೊಂದು ತಾಂತ್ರಿಕ ಆಚರಣೆಯಾಗಿದ್ದು, ಈ ತತ್ವ ಪುರುಷ-ಪ್ರಕೃತಿ ಕ್ರಿಯಾಶೀಲತೆಗೆ ಕಾರಣವಾಗುತ್ತದೆ. ಇದು ಶಿವೆ ಶಿವನೊಂದಿಗೆ ಬಂದು ಸೇರಿರುವ ಸಂದರ್ಭ. ಗುಡಿಮಲ್ಲಂ, ಬೀಟಾ ಲಿಂಗಗಳಲ್ಲಿ ಭೈರವನ ವಿಗ್ರಹ ಮತ್ತು ಅಲ್ಲಲ್ಲಿ ಕಾಣಸಿಗುವ ಶಿವನ ಪಂಚಮುಖವು, ಪಂಚಲಿಂಗಗಳು ಇವು ತಂತ್ರ ಪಂಥಕ್ಕೆ ಸೇರಿದವು. ತಂತ್ರಗಳಲ್ಲಿ ಶಿವನೇ ಭೈರವ, ಭೈರವನೇ ಶಿವ.

ಶಿವನನ್ನು ಲಿಂಗ ರೂಪದಲ್ಲಿ ಆರಾಧಿಸುವ ಪದ್ಧತಿ ಪ್ರಾಚೀನದ್ದು. ಲಿಂಗದ ಜೊತೆಗೆ ಪೀಠದ ಸಂಬಂಧ ನಂತರದ್ದು. ಋಗ್ವೇದದಲ್ಲಿ ಪ್ರಸ್ತಾಪವಾಗುವ ಅನಾರ್ಯ ಶಿಸ್ನ ದೇವರೇ ಈ ಲಿಂಗ ದೇವರು. ಸಿಂಧೂನಾಗರೀಕತೆಯಲ್ಲಿ ಶಿವನ ಜನನೇಂದ್ರಿ ಉದಕವಾಗಿದೆ. ಇವನನ್ನು ಪಶುಪತಿಯೆಂದು ಕರೆಯಲಾಗಿದೆ. ಒಂದು ಕಡೆ ಶಿಸ್ನವನ್ನು ಇನ್ನೊಂದು ಕಡೆ ಯೋನಿಯನ್ನು ಪೂಜಿಸಲಾಗುತ್ತಿತ್ತು. ಯೋನಿಯೇ ಪ್ರಧಾನವಾಗಿ ಕಾಣುವ ಲಜ್ಜಾಗೌರಿ ಶಿಲ್ಪಗಳು ಮತ್ತು ಶಿಸ್ನವೇ ಪ್ರಧಾನವಾಗಿ ಕಾಣುವ ಲಕುಲೀಶನ ಶಿಲ್ಪಗಳು ಬಾದಾಮಿ ಪರಿಸರದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಇವೆರಡನ್ನು ಒಂದುಗೂಡಿಸಿ ಪೂಜಿಸುವ ಪದ್ಧತಿ ಮುಂದುವರೆದಿದ್ದರೂ, ಪ್ರತ್ಯೇಕವಾಗಿರುವ ಶಿಲ್ಪಗಳೂ ಅಲ್ಲಲ್ಲಿ ಕಾಣಸಿಗುತ್ತವೆ. ಶಿವಶಕ್ತಿಯನ್ನು ಒಂದುಗೂಡಿಸಿ ಆರಾಧಿಸುತ್ತ ಬಂದಿರುವುದು ಕಾಳಾಮುಖ ಮತದಲ್ಲಿ ಕಾಣುತ್ತದೆ. ಲಾಕುಳ ದರ್ಶನದಲ್ಲಿ ಲಕುಲೀಶನೇ ಪ್ರಧಾನನಾಗಿದ್ದಾನೆ. ಅಲ್ಲದೇ ಪಾಶುಪತ, ಕಾಳಾಮುಖ, ಕೌಳ. ಕಾಪಾಲಿಕ ಮೊದಲಾದ ಮತಗಳಿಗೆ ಲಕುಲೀಶನೇ ಮೂಲವಾಗುತ್ತಾನೆ. ಲಾಕುಳಗಮ (ಸಿದ್ಧಾಂತ) ಎಲ್ಲ ಮತಗಳಿಗೆ ದರ್ಶನವಾಗಿದೆ.

ಪಾಶುಪತರು ಶಿವನನ್ನು, ಕಾಳಾಮುಖರು ಶಿವೆ-ಶಿವಾ ಇಬ್ಬರನ್ನೂ ಪ್ರಮುಖವಾಗಿ ಕಂಡಿದ್ದಾರೆ. ಶಿವೆ ಮತ್ತು ಶಿವ ಒಂದುಗೂಡುವ ಸ್ಥಳವಾದ ಹಂಪಿ ಪರಿಸರ ಕಾಳಾಮುಖ ಮತದ ಕೇಂದ್ರವಾಗಿದ್ದಂತೆ ಕಾಣುತ್ತದೆ. ಇಲ್ಲಿ ಶಿವನನ್ನು ಪಂಚಮುಖಗಳಲ್ಲಿ ಗುರುತಿಸಲಾಗಿತ್ತದೆ. ಕಾಳಾಮುಖರು ಆರಾಧಿಸುವ ಪಂಚಮುಖ ಶಿವ ಇವನೇ ಆಗಿದ್ದಾನೆ. ಇದು ಆರಂಭದಲ್ಲಿ ಶಕ್ತಿ ಕೇಂದ್ರ ನಂತರ ಶಿವನು ಅವಳನ್ನು ಮದುವೆಯಾಗುವ ಮೂಲಕ ಪ್ರಧಾನನಾಗುತ್ತಾನೆ. ಹಂಪಿ ಸುತ್ತಮುತ್ತಲಿನ ಪರಿಸರದಲ್ಲಿ ಕಾಳಾಮುಖರು ಮಾತ್ರವಲ್ಲ ಪಾಶುಪತರ ಸಂಖ್ಯೆಯೂ ಹೆಚ್ಚಾಗಿ ಕಂಡುಬರುತ್ತದೆ. ಆದರೆ ಪ್ರಸಿದ್ಧ ದೇವತೆಯಾದ ವಿರೂಪಾಕ್ಷನ ವ್ಯವಸ್ಥೆಯನ್ನು ನೋಡಿಕೊಳ್ಳಲು ಯಾವುದೇ ಸ್ಥಾನಾಚಾರ್ಯರು ನೇಮಕಗೊಂಡಿಲ್ಲ. ಹರಿಹರನು ವಿರೂಪಾಕ್ಷನು ಹಂಪಿಯಾಳ್ದ, ಹಂಪಿಯರಸನೆಂದು ಹೇಳಿದ್ದಾನೆ. ಅಲ್ಲದೇ ಕುರುಗೋಡು ಸಿಂದರ ಕಾಲದಲ್ಲಿ ಸಾಮಂತ ಮಾದೆಯನಾಯಕನು ಮತಂಗ ಪರ್ವತದಿಂದ ಪವಿತ್ರ ಕ್ಷೇತ್ರವಾದ ವಿರೂಪಾಕ್ಷ ತೀರ್ಥವನ್ನು ರಕ್ಷಣೆ

ಮಾಡುತ್ತಿರುವುದಾಗಿ ಹೇಳಿಕೊಂಡಿದ್ದಾನೆ. ವಿರೂಪಾಕ್ಷನೇ ಒಡೆಯನಾಗಿದ್ದ ಈ ಸ್ಥಳದಲ್ಲಿ ಸ್ಥಾನಾಚಾರ್ಯರ ಆಡಳಿತ ಅಪ್ರಸ್ತುತವೆನಿಸುತ್ತದೆ.

ಪಂಪಾ ಮಹಾತ್ಮೆ-ಕಾಳಾಮುಖ ಮತ

ಪಂಪಾ ಮಹಾತ್ಮೆ ಹಂಪಿ ಪರಿಸರದ ಮಾಹಿತಿಯನ್ನು ನೀಡುವ ಪ್ರಮುಖ ಪೌರಾಣಿಕ ಗ್ರಂಥ. ಇದರಲ್ಲಿ ಪಾಶುಪಥ ಮತ್ತು ಕಾಳಾಮುಖ ವ್ರತದ ಬಗ್ಗೆ ಮಾಹಿತಿಗಳಿವೆ. ಕಾಳಾಮುಖ ಮತದ ಹುಟ್ಟು ಮತ್ತು ಆಚರಣೆಗಳನ್ನು ಇದುವರೆಗೆ ಶಾಸನ, ಸಾಹಿತ್ಯಗಳಲ್ಲಿ ದೊರೆಯದಿರುವ ಮಾಹಿತಿಗಳು ಪಂಪಾ ಮಹಾತ್ಮೆಯಲ್ಲಿ ಕಂಡುಬರುತ್ತವೆ.

ಕಾಳಾಮುಖವೆಂಬುವುದು ಕಲೆಗೆ ಸಂಬಂಧಿಸಿದ್ದು, ಇಲ್ಲಿ ಶಿವನೇ ಶ್ರೇಷ್ಠ. ಅವನಿಂದಲೇ ಪಂಚ ಕಲೆಗಳು ಉಗಮವಾದವು. ಇದೇ ಕಾಲಾಮುಖವೆಂದು ಪ್ರಸ್ತಾಪವಾಗಿದೆ. ಭರದ್ವಾಜನು ವಿಷ್ಣುವೃದ್ಧನಿಗೆ ಈ ರೀತಿಯಾಗಿ ಹೇಳುತ್ತಾನೆ. ಕಾಳಾಮುಖ ಮತವು ಮಂತ್ರಾರ್ಥ ಸಿದ್ಧಿಯನ್ನು ಕೊಡುತ್ತದೆ. ಇದು ಶಿವೋಪಾಸನೆಯಿಂದ ಮಹಾ ಫಲವನ್ನು ಕಂಡಿರುವುದು. ಶೈವದಿಂದ ಹುಟ್ಟಿದ ಪಾಶುಪತವು ಮಹಾವ್ರತವೆಂದು ಹೇಳಲ್ಪಟ್ಟಿತು. ಕಾಳಾಮುಖವು ಮಹೇಶ್ವರನ ಎಲ್ಲಾ ವ್ರತಗಳನ್ನು ಒಳಗೊಂಡಿರುತ್ತದೆ. ಯಾವುದರಲ್ಲಿ ಕಲೆಗಳು ಪ್ರತಿಷ್ಠಿತವಾಗಿರುವವೋ ಅದನ್ನೆ ಕಾಳಾಮುಖವೆಂದು ಕರೆಯುತ್ತಾರೆ. ಕಲೆಗೆ ಮುಖ್ಯವಾದ ಸಂಬಂಧವುಳ್ಳದ್ದು ಯಾವುದೋ ಅದೇ ಕಾಳಾಮುಖವು. ಅದನ್ನು ಯಾರು ಅನುಷ್ಠಾನ ಮಾಡುವರೋ ಅವರನ್ನು ಕಾಳಾಮುಖರೆಂದು ಕರೆಯುತ್ತಾರೆ. ಯಾರು ನಿವೃತ್ತಿ-ಶಾಂತಿ-ಶಾಂತ್ಯಾತೀತ-ಶಾಂತ್ಯಾತೀತೋತ್ತರ ಕಲೆಗಳಲ್ಲಿ ಆತ್ಮವನ್ನು ಬೆರೆಸಿ, ಕಲೆಗಳನ್ನೇ ತನ್ನ ಆತ್ಮದಂತೆ ತಿಳಿಯುತ್ತಾನೋ ಆ ಯೋಗಿಯು ಚಂದ್ರನಂತೆ ಬೆಳಗುತ್ತಾನೆ-ಬೆಳೆಯುತ್ತಾನೆ. ಯಾವನ ಚಿತ್ತದಲ್ಲಿ ಸಮಸ್ತ ಕಲೆಗಳು ಇರುತ್ತವೆಯೋ ಅವನು ಕಲಾತ್ಮಕನೆಂದು ತಿಳಿಯಲ್ಪಡುತ್ತಾನೆ. ಇಲ್ಲಿ ಗುರುವೇ ಶ್ರೇಷ್ಠ ದೇವನು. ಗುರುವೇ ಪಂಚಮುಖ ಸದಾಶಿವನು. ಗುರುವೇ ಕಾಳಾಮುಖನು, ಕಲಾರೂಪನು. ಗುರುವಿನ ಅನುಗ್ರಹದಿಂದ ಕಾಳಾಮುಖ ಮತವು ಲಭ್ಯವಾಗುವುದು.

ಕಾಳಾಮುಖವು ಸರ್ವತಂತ್ರಗಳಲ್ಲಿ ರಹಸ್ಯವಾದುದೆಂದೂ ಸರ್ವವೇದೈಕ ಸಮ್ಮತವೂ ಚಿತ್ತವನ್ನು ಅರಳಿಸಿ ಬೆಳೆಸುವಂಥ ತಂತ್ರವೆಂದರೆ ಕಾಳಾಮುಖ ತಂತ್ರವೆಂದೂ ಶಿವನು ಷಣ್ಮುಖನಿಗೆ ಹೇಳುತ್ತಾನೆ. ಗಜಾನನ ಈ ಮತದ ಬಗ್ಗೆ ಹೇಳುತ್ತ, ಅಖಿಲ ಬ್ರಹ್ಮಾಂಡವು ಕಲೆಗಳಿಂದ ನಿರ್ಮಾಣವಾಗಿದೆ. ಸರ್ವಕಲಾ ರೂಪಿಣಿಯೇ ಈ ದೇವಿಯು (ಪಾರ್ವತಿ). ಸಮಸ್ತ ಬ್ರಹ್ಮಾಂಡವು ಕಲಾಸ್ವರೂಪಿಣಿಯಾದ ಈ ದೇವಿಯಲ್ಲಿಯೇ ಅಡಗಿದೆ. ಆದುದರಿಂದ ಬ್ರಹ್ಮಾಂಡವು ಶಕ್ತಿಮಯವಾದುದು. ಶಕ್ತಿಯು ಶಿವಮಯವಾಗಿರುವಳು. ಶಕ್ತಿ ಮತ್ತು ಶಿವನ ಮಹತ್ವ ಈ ಮಹಾವ್ರತದಲ್ಲಿ ಅಡಗಿರುವ ಬಗ್ಗೆ ಪಂಪಾಮಹಾತ್ಮೆಯಲ್ಲಿ ವಿವರಿಸಲಾಗಿದೆ.

ಕಾಳಾಮುಖ ಮತ ನಿರುಪಣದಲ್ಲಿ ಬ್ರಹ್ಮಚರ್ಯ-ದಯಾ-ಸತ್ಯ-ಅಕ್ರೋಧ-ಶಾಂತಿ-ಆರ್ಜವ-ಶಿವಭಕ್ತಿ-ತಪಸ್ಸು-ಗುರುಶುಶ್ರೂಷಣೆ-ಜಪ ಎಂಬ ದಶಾಂಗಗಳು. ಇವುಗಳ ಆಚರಣೆಯನ್ನು ಸವಿವರವಾಗಿ ನೀಡಲಾಗಿದೆ. ಶಿವಕಲಾಂಗಗಳ ಸಮ್ಯಕ್ ಆಚರಣೆಯಿಂದ ಪವಿತ್ರಾತ್ಮನಾಗಿ ಮುಕ್ತನಾಗುತ್ತಾನೆ. ಅಂಥವನು ಕಾಲಾಮುಖರಲ್ಲಿ ಆಗಮಸಂಯುಕ್ತನೆನಿಸಿ ಪೂರ್ಣಮೂರ್ತಿಯೆನಿಸಿ ನಿಸ್ಸಂಸಾರಿಯೆನಿಸಿ ಆ ಕ್ಷಣವೇ ಸದ್ಗತಿಯನ್ನು ಪಡೆಯುತ್ತಾನೆ. ಈ ಸಾಧಕರಲ್ಲಿ ನಾಲ್ಕು ಬಗೆಗಳುಂಟು ಮಹಾಕಾಲರು-ಕಾಲರು-ಕಾಲವಕ್ತ್ರರು-ಕೇವಲರು. ಇವರಲ್ಲಿ ಮಹಾಕಾಲರ ಆಚರಣೆ ಕಷ್ಟಕರವಾಗಿ ಕಾಣುತ್ತದೆ.

1. ಜಪದ ಎಂಟು ಕಟ್ಟಳೆಗಳನ್ನು ಜಪಿಸುತ್ತ ಅಘೋರ ಮೂರ್ತಿಯ ಉಪಾಸಿಸುವುದು, ದಶಾಂಗಗಳನ್ನು ಅನುಸರಿಸುವುದು, ಐದು ಮನೆಗಳಲ್ಲಿ ಭಿಕ್ಷೆಯನ್ನು ಸ್ವೀಕರಿಸುವುದು, ಹುಲಿ ಚರ್ಮವನ್ನು ಧರಿಸುವುದು, ವಿಶೇಷವಾಗಿ ಶಿವಕ್ಷೇತ್ರದಲ್ಲಿ ವಾಸಿಸುವುದು, ಶೈವಶಾಸ್ತ್ರಗಳನ್ನು ಓದುವುದು, ಭಸ್ಮದಿಂದ ಸರ್ವಾಂಗದಲ್ಲಿ ಉದ್ಧೂಳನ ಮಾಡಿಕೊಳ್ಳುವುದು, ಕಾಲಕಾಲದಲ್ಲಿ ಗುರುವಿನ ಆರಾಧನೆಯನ್ನು ಮಾಡುವುದು ಮೋದಲಾದ ಕಠಿಣ ಆಚರಣೆಗೆ ಒಳಗಾದವರು. ಇದರೊಂದಿಗೆ ಜ್ಞಾನತೀರ್ಥ-ಕ್ಷಮಾತೀರ್ಥ-ಇಂದ್ರಿಯ ನಿಗ್ರಹತೀರ್ಥ-ಸರ್ವಭೂತ ದಯಾತೀರ್ಥ-ಆಸ್ತಿಕ್ಯತೀರ್ಥ-ಮೌನತೀರ್ಥ-ವಿವೇಕತೀರ್ಥ-ಅನಸೂಯಾತೀರ್ಥ-ಅಹಿಂಸಾತೀರ್ಥ-ಧಾರಣತೀರ್ಥ-ಯಮತೀರ್ಥ-ಶ್ರದ್ಧಾತೀರ್ಥ- ದೃತಿತೀರ್ಥ-ತಪಸ್ತಿತೀರ್ಥ-ಯೋಗತೀರ್ಥ ಈ ಬಗೆಯ ಹದಿನಾರು ತೀರ್ಥಗಳಲ್ಲಿ ಸರ್ವಕಾಲದಲ್ಲಿ

ಮುಳುಗಿರುವುದು. ಸಿದ್ಧಕ್ಷೇತ್ರ–ಶಿವಕ್ಷೇತ್ರ–ತೀರ್ಥಗಳನ್ನು ಪರ್ಯಟನ ಮಾಡುವುದು. ಸ್ತ್ರೀ–ಶೂದ್ರ–ಪತಿತ–ಅಪೂಜ್ಯ–ಪಾಷಾಂಡದಿಂದ ದೂರವಿರುವುದು. ಇವರನ್ನು ಮಹಾಕಾಲರೆಂದು ತಿಳಿಯಲ್ಪಡುವುದು.

2. ಯಮ–ನಿಯಮ–ಆಸನ–ಪ್ರಾಣಯಾಮ–ಪ್ರತ್ಯಾಹಾರ–ಧ್ಯಾನ–ಧಾರಣ–ಸಮಾಧಿಗಳೆಂಬ ಅಷ್ಟಾಂಗಯೋಗದಲ್ಲಿ ಆಸಕ್ತರಾದವರು, ಆರುಕಾಲ ಶಿವಪೂಜೆಯನ್ನು ಮಾಡುವುದು, ಕಪ್ಪು ಭಸ್ಮವನ್ನು ಗುರು ಹೇಳಿದ ಸ್ಥಾನದಲ್ಲಿ ಧರಿಸಿಕೊಳ್ಳುವುದು. ಇವರನ್ನು ಕಾಲರೆಂದು ಕರೆಯಲಾಗುವುದು.

3. ಅಂಗಗಳಲ್ಲಿ ಬಹುವಾಗಿ ಭಸ್ಮವನ್ನು ಬಡಿದುಕೊಂಡು ಕಪ್ಪು ಭಸ್ಮದಿಂದ ಹಗಲಿರುಳು ಮುಖವನ್ನು ಅಲಂಕರಿಸಿಕೊಳ್ಳುವುದು, ಐದು ಕಾಲಗಳಲ್ಲಿ ಮಹೇಶ್ವರನ ಪೂಜೆಯನ್ನು ಮಾಡುವುದು. ಇವರನ್ನು ಕಾಲವಕ್ತ್ರರೆಂದು ಕರೆಯುತ್ತಾರೆ.

4. ಪಾಶವನ್ನು ಗೆದ್ದವರೂ, ರೋಗರಹಿತರೂ, ಭಸ್ಮವನ್ನು ಸರ್ವಾಂಗಗಳಲ್ಲಿ ಧರಿಸಿಕೊಳ್ಳುವವರೂ, ನಾಲ್ಕು ಕಾಲಗಳಲ್ಲಿ ಪರಮೇಶ್ವರನ ಪೂಜೆಯನ್ನು ಮಾಡುವ ಕಾಲಾಮುಖ ಮತಸ್ಥರನ್ನು ಕೇವಲರೆಂದು ಕರೆಯುತ್ತಾರೆ.

ಮೇಲಿನ ನಾಲ್ಕು ಬಗೆ ಆಚರಣೆಗಳನ್ನು ಗಮನಿಸಿದಾಗ, ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಹೆಚ್ಚು ಸಂಖ್ಯೆಯಲ್ಲಿ ವ್ಯಾಪಿಸಿದ್ದ ಕಾಳಾಮುಖರಲ್ಲಿ ಸರಳ ಆಚರಣೆಯನ್ನು ಅನುಕರಿಸುತ್ತಿದ್ದ ಕಾಲರು, ಕಾಲವಕ್ತ್ರರು ಮತ್ತು ಕೇವಲರೆಂದು ಗುರುತಿಸಬಹುದಾಗಿದೆ. ಶಾಸನಗಳಲ್ಲಿ ಯಮ–ನಿಯಮ–ಆಸನ–ಪ್ರಾಣಯಾಮ–ಪ್ರತ್ಯಾಹಾರ–ಧ್ಯಾನ–ಧಾರಣ – ಸಮಾಧಿಗಳೆಂಬ ಆಚರಣೆ, ಪೂಜೆ ಪುನಸ್ಕಾರಕ್ಕಾಗಿ ದಾನ ನೀಡಿದ ವಿಷಯಗಳು ಬರುತ್ತವೆ.

ಕಾಳಾಮುಖ ಸ್ಥಾನಾಚಾರ್ಯರ ಕೆಲವು ವಿಧಿವಿಧಾನಗಳನ್ನು ಗಮನಿಸಿದರೆ, ಅವರು ಸಿದ್ಧಿಯನ್ನು ಪಡೆಯುವ ಕಲೆಗಳನ್ನು ಮಾತ್ರವಲ್ಲ ತಂತ್ರಗಳನ್ನೊಳಗೊಂಡಂತೆ ಸಮಾಜದಲ್ಲಿ ಪ್ರಚಲಿತವಿದ್ದ ಅನೇಕ ಕಲೆಗಳಲ್ಲೂ ಪ್ರಾವೀಣ್ಯತೆಯನ್ನು ಪಡೆದಿದ್ದರು. ಕಾಳಾಮುಖರು ಪಂಚಮುಖ ಶಿವನ ಆರಾಧನೆ ಮಾಡುವ ಮೂಲಕ ಪಂಚಕಲೆಗಳನ್ನು ಕರಗತ ಮಾಡಿಕೊಂಡಿರಬೇಕೆಂದು ಪದೆ ಪದೆ ಭರದ್ವಾಜನು ಹೇಳುವುದನ್ನು ಗಮನಿಸಿದರೆ, ಕಲೆ ಎಂಬುವುದು ಪಾಶವನ್ನು ಬಿಡಿಸುವ ಸಾಧನ ಮಾತ್ರವಾಗಿರಲಿಲ್ಲವೆಂದು ಕಾಣುತ್ತದೆ. ಅವನು ವಿರೂಪಾಕ್ಷನಿಗೆ ವಂದಿಸುವ ಮೂಲಕ ಕಾಳಾಮುಖ ವ್ರತದ ಪ್ರಶಂಸೆ ಮತ್ತು ನಿರೂಪಣ ಮಾಡುತ್ತಾನೆ. ಪ್ರಾಚೀನ ವಿರೂಪಾಕ್ಷ ಪಂಚಮುಖ ಲಿಂಗದಲ್ಲಿದ್ದನೆಂದು ಕೆಲವರು ಹೇಳುತ್ತಾರೆ. ಅಲ್ಲದೆ ಈ ಪರಿಸರವನ್ನು ಶಿವನ ಪಂಚಮುಖಗಳಿಂದ ಗುರುತಿಸಲಾಗುತ್ತಿದೆ. ಹರಿಹರ ಕವಿ ಹೇಳುವಂತೆ, ಪಂಪಾಪುರದ ಮೂಡಣ ಬಾಗಿಲಲ್ಲಿ ಕಿನ್ನರೇಶ್ವರ, ತೆಂಕಣ ಬಾಗಿಲಲ್ಲಿ ಜಂಬುಕೇಶ್ವರ, ಪಶ್ಚಿಮ ಬಾಗಿಲಲ್ಲಿ ಸೋಮೇಶ್ವರ, ಉತ್ತರ ಬಾಗಿಲಲ್ಲಿ ವಾಣಿಭದ್ರೇಶ್ವರ ನೇಲೆಸಿದ್ದಾರೆ. ಈ ನಾಲ್ಕೂ ಕ್ಷೇತ್ರಗಳಿಗೆ ಭೇಟಿ ನೀಡಿ ಮಧ್ಯದಲ್ಲಿರುವ ವಿರೂಪಾಕ್ಷನ ದರ್ಶನ ಪಡೆದರೆ ಪುಣ್ಯ ಲಭಿಸುತ್ತದೆ ಎಂಬುವುದು ಜನರ ನಂಬಿಕೆ ಇದೆ. ಕಾಳಾಮುಖ ಯತಿ ಪಂಚಮುಖ ಶಿವಲಿಂಗವನ್ನು ಆರಾಧಿಸುವ ಚಿತ್ರಣ ಗದಗಿನ ತ್ರಿಕೂಟೇಶ್ವರ ದೇವಾಲಯದಲ್ಲಿರುವುದು ಇದಕ್ಕೆ ಇನ್ನಷ್ಟು ಪುಷ್ಟಿನೀಡುತ್ತದೆ.

ಕಾಳಾಮುಖ ಪಂಡಿತರು ಸಾಮಾನ್ಯವಾಗಿ ಶೈವ ದೇವಾಲಯಗಳಿಗೆ ಸ್ಥಾನಾಚಾರ್ಯರಾಗಿ ನೇಮಕಗೊಳ್ಳುತ್ತಿದ್ದರು. ಆದರೆ ಕ್ರಿ.ಶ. 1178ರಲ್ಲಿ ಮಂತ್ರ–ತಂತ್ರ ಅನೇಕ ಸಿದ್ಧಾಂತಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದುಕೊಂಡಿದ್ದ ಕಳೇಶ್ವರ ಯತಿ ಕುಕನೂರಿನ (ಕೊಪ್ಪಳ ಜಿಲ್ಲೆ) ಕಾಳಿಕಾ ಜೇಷ್ಠಾದೇವಿಯ ಸ್ಥಾನಾಚಾರ್ಯನಾಗಿದ್ದನು. ಮುಂದೆ ಕ್ರಿ.ಶ. 1379ರಲ್ಲಿ ಕ್ರಿಯಾಶಕ್ತಿ ಪಂಡಿತ ಇದೇ ದೇವಾಲಯದ ಸ್ಥಾನಾಚಾರ್ಯನಾಗಿದ್ದನು. ಕಲಾ ದೇವತೆಯ ಹಿನ್ನೆಲೆಯಲ್ಲಿ ಈ ಕಾಳಿಯನ್ನು ಗುರುತಿಸಲಾಗುತ್ತದೆ. ಈಗಲೂ ಪಂಚ ಕಲೆಗಳನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿರುವ ವಿಶ್ವಕರ್ಮರು ಕಾಳಿಯ ಆರಾಧಕರಾಗಿದ್ದಾರೆ. ಅವಳು ವಿಶ್ವಕರ್ಮರ ಕುಲದೇವತೆಯೂ ಹೌದು. ಅಲ್ಲದೇ ಪಾಂಚಾಳ ಕುಶಲಕರ್ಮಿಗಳು ಪಾಶುಪತ ಮತ್ತು ಕಾಳಾಮುಖ ಪರಂಪರೆಯಲ್ಲಿ ತಮ್ಮನ್ನು ಗುರುತಿಸಿಕೊಂಡಿರುವುದು ವಿಶೇಷ. ಕ್ರಿ.ಶ. 7ನೇ ಶತಮಾನದ ಕಿಗ್ಗ ಶಾಸನದಲ್ಲಿ ಕಮ್ಮಾರರು ಪಾಶುಪತ ಧರ್ಮದವರೆಂದು ಹೇಳಿಕೊಂಡಿದ್ದಾರೆ. ಇನ್ನೂ ಕೆಲವು ಶಾಸನಗಳಲ್ಲಿ ಶ್ರೀ ಸಿದ್ಧೇಶ್ವರ ದೇವರಾಚಾರ್ಯ ಶ್ರೀ ತೇಜೋರಾಸಿ ಪಂಡಿತರು ಜೀರ್ಣೋದ್ಧಾರವಂ ಪುನಃ ಪ್ರತಿಷ್ಠೆಯಂ ಮಾಡಿದ್ದು, ಧರ್ಮರಾಶಿ ಪಂಡಿತ ಮತ್ತು ಬ್ರಹ್ಮರಾಶಿ ಎಂಬುವರು ದೇವಾಲಯಗಳನ್ನು ಮಾಡಿದ ಬಗ್ಗೆ ವ್ಯಕ್ತಪಡಿಸಿದ್ದಾರೆ. ಅರಸಿಕೆರೆಯ ಶಾಸನದಲ್ಲಿ ರುದ್ರಶಕ್ತಿಯು ಕಲಿ ದೇವಾಲಯವನ್ನು ಮಾಡುವಲ್ಲಿ ಹೊಳಲಗಾವುಂಡನು ಮಾಡಿಸಿದನೆಂದಿದೆ. ಮಾಚಯನು ದೇವಾಲಯವನ್ನು ಮಾಡಿಸುವಲ್ಲಿ ದೇವರಾಸಿ ಪಂಡಿತನು ಬಳಿ ಕೆಲಸವನ್ನು ಮಾಡಿದ್ದಾನೆ. ಗದುಗಿನ ಒಂದು ಶಾಸನದಲ್ಲಿ ಕ್ರಿಯಾಶಕ್ತಿ ಪಂಡಿತನನ್ನು ಚಿತ್ರಶಾಸ್ತ್ರಾದಿ ಉಪನ್ಯಾಸಕನೆಂದು ಕರೆಯಲಾಗಿದೆ. ಚಂದ್ರಭೂಷಣ ಪಂಡಿತ, ಶಿವಶಕ್ತಿ ಮತ್ತು

ಮಹಾದೇವಜೀಯರನ್ನು ಪ್ರತಿಮಾಲಕ್ಷಣಯುಕ್ತರೆಂದೂ, ವಿದಿತಪ್ರಸಾದಸಲ್ಲಕ್ಷಣಾನ್ವಿತರೆಂದೂ ಕರೆಯಲಾಗಿದೆ. ವಾಮಶಕ್ತಿ ಮುನಿ ಪ್ರತಿಮಾದೂಷಪೋಷಣ, ಕುಂಡಲವಿಧಾನ, ಲಿಂಗಪ್ರತಿಷ್ಠಾಕ್ರಮಗಳನ್ನು ತಿಳಿದುಕೊಂಡಿದ್ದು, ಭುವನಕೋಶ ಎಂಬ ಶಿಲ್ಪಶಾಸ್ತ್ರವನ್ನು ಮತ್ತು ಭೂಭೇದ ಪರೀಕ್ಷೆ, ದೇವನಿವಹ, ಪ್ರಾಸಾದ ಆಗಮ ವಿಚಾರಗಳನ್ನು ಓದಿಕೊಂಡಿದ್ದನು. ಕ್ರಿ.ಶ. 1138ರ ಒಂದು ಶಾಸನದಲ್ಲಿ ಕಾಳತ್ರೆಯ ದೇವರಾಸಿ ಆಚಾರ್ಯ ಕೆಸರುಗಲ್ಲನ್ನು ಇಟ್ಟು ಲಿಂಗಪ್ರತಿಷ್ಠೆ ಮಾಡಿದ ಬಗ್ಗೆ ಉಲ್ಲೆಖವಾಗಿದೆ. ಅಲ್ಲದೇ ಶ್ರೀ ಪುಲಿಗೆರೆಯ ವೀರಬಲ್ಲಾಳೇಶ್ವರದ ಆಚಾರ್ಯ ಬ್ರಹ್ಮಪಂಡಿತನನ್ನು ಲಕ್ಕೋಜನ ಮಗನೆಂದು ಕರೆಯಲಾಗಿದೆ. ಇಂಥ ಅನೇಕ ಉದಾಹರಣೆಗಳನ್ನು ಗಮನಿಸಿಯೇ ಬಳ್ಳಿಗಾಮೆಯ ದಾಸೋಜನ ಮಗ ಚಾವಣ ಮತ್ತು ಗದುಗಿನ ನಾಗೋಜ ಕಾಳಾಮುಖ ಪಂಥಕ್ಕೆ ಸೇರಿದವರೆಂದು ಕೆಲ್ಸೆಯನ್ ಕೋಲಿಯರ್ ಹೇಳಿದಂತಿದೆ. ಪಂಚ ಕಲೆಗಳೆ ಪ್ರಧಾನವಾಗಿದ್ದ ಕಾಳಾಮುಖ ಪರಂಪರೆಯಲ್ಲಿ ಇವು ಕೇವಲ ಆಧ್ಯಾತ್ಮ ಶುದ್ಧಿಗಾಗಿ ಇಲ್ಲವೇ ಪಾಶದಿಂದ ಮುಕ್ತಿಯನ್ನು ಪಡೆಯುವದಕ್ಕೆ ಮಾತ್ರ ಸೀಮಿತವಾಗಿದ್ದವೆಂದು ಹೇಳುವುದು ಕಷ್ಟ.

ಶಕ್ತಿ ಪರ್ಷೆಯೇ ಪ್ರಧಾನ ಶಾಖೆಯಾಗಿದ್ದ ಕಾಳಾಮುಖರಲ್ಲಿ ಪರ್ವತಾವಳಿ ಮತ್ತು ಭುಜಂಗಾವಳಿ ಪ್ರಮುಖ ಭಾಗಗಳಿವೆ. ಪರ್ವತಾವಳಿಯಲ್ಲಿ ಮೂವರು ಕೋಣೆಯ ಸಂತತಿ, ಕಿಟ್ಟಗಾವೆ ಸಂತತಿ, ಬೆಳ್ಳೆಯ ಸಂತಾನ ಮತ್ತು ಭುಜಂಗಾವಳಿಯಲ್ಲಿ ಇಟ್ಟಿಗೆ ಸಂತತಿಗಳನ್ನು ಕಾಣಬಹುದು. ಇನ್ನೊಂದು ಅಂತರವಳ್ಳಿ ಮೂಲದ ಮೂರುಜಾವಿ ಪರಂಪರೆ ವಿಶ್ವಕರ್ಮ ಸಮುದಾಯದಲ್ಲಿಯೇ ಮುಂದುವರೆದುಕೊಂಡು ಬಂದಿದೆ. ಪ್ರಸ್ತುತ ಈ ಪೀಠಕ್ಕೆ ಸೇರಿದ 18 ಮಠಗಳಿವೆ. ಅಂತರವಳ್ಳಿಯಲ್ಲಿ ಕಾಳಾಮುಖ ಪಂಡಿತ ಮೂರುಜಾವದೀಶ್ವರರ ಶಿಲ್ಪವಿದೆ.

ಮೇಲಿನ ಉಲ್ಲೇಖಗಳನ್ನು ಗಮನಿಸಿದರೆ, ಸಂತಾನ, ಪೀಠಪರಂಪರೆಯ ಹೆಸರಿನಲ್ಲಿ ವೃತ್ತಿಸೂಚಕ ಪದಗಳು ಅಡಕಗೊಂಡಿವೆ. ಕಲೆಯ ಸೂಚಕ ಪದಗಳಾದ ಇವುಗಳ "ಹಿನ್ನೆಲೆ ಮತ್ತು ಕಾಳಾಮುಖ ಪರಂಪರೆಯ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ಅಡಿಟಿಪ್ಪಣಿ ಮತ್ತು ಗ್ರಂಥಋಣ

1. *ಎಪಿಗ್ರಾಫಿಯಾ ಕರ್ನಾಟಿಕ*, ಸಂಪುಟ–5, 9, 10, 15.
2. ಕುಮಾರಸ್ವಾಮಿ ಕೆ.ಎಸ್., *ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು ಒಂದು ಅಧ್ಯಯನ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1996.
3. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ), *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು–ಬಳ್ಳಾರಿ ಜಿಲ್ಲೆ ಮತ್ತು ಕೊಪ್ಪಳ ಜಿಲ್ಲೆ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998, 99.
4. ಡೆವಿಡ್ ಎನ್. ಲಾರೆಂಜ್, *ಕಾಪಾಲಿಕರು ಮತ್ತು ಕಾಳಾಮುಖರು : ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು*, ವಿರೂಪಾಕ್ಷ ಕುಲಕರ್ಣಿ (ಅನು), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2005.
5. ರಾಮಚಂದ್ರರಾವ್ ಎಸ್.ಕೆ., *ಮೂರ್ತಿಶಿಲ್ಪ ನೆಲೆ–ಹಿನ್ನೆಲೆ*, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1975.
6. ವಸುಂಧರಾ ಫಿಲಿಯೋಜ, *ಧಾರವಾಡ ಜಿಲ್ಲೆಯ ಕಾಳಾಮುಖ ಮತ್ತು ಪಾಶುಪತ ದೇವಾಲಯಗಳು*, ಹನುಮಾಕ್ಷಿ ಗೋಗಿ (ಅನು), ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2007.
7. ವಾಸುದೇವ ಬಡಿಗೇರ, ಹಂಪಿ ಪರಿಸರದ ಪಂಪಾಪತಿ (ವಿರೂಪಾಕ್ಷ) ದೇವಾಲಯಗಳು, ವಿಜಯನಗರ ಅಧ್ಯಯನ, ಸಂಪುಟ–12, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2007.
8. *ಪೂರ್ವೋಕ್ತ*, ವಿಜಯನಗರ ಕಾಲದಲ್ಲಿ ಶಾಕ್ತ ದೇವಾಲಯಗಳ ಮೇಲೆ ನಡೆದ ದಾಳಿ, ವಿಜಯನಗರ ಅಧ್ಯಯನ *ಸಂಪುಟ–18*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2014.
9. *ಪೂರ್ವೋಕ್ತ*, ಪಂಪಾ ತೀರ್ಥದ ಹಂಪಾದೇವಿ, *ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010.
10. *ಪೂರ್ವೋಕ್ತ*, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2012.
11. ಸಿದ್ಧಲಿಂಗೇಶ್ವರ ಸ್ವಾಮಿಗಳು, *ಪಂಪಾಮಹಾತ್ಮೆ*, ಶ್ರೀ ಗುರು ವೃಷಭಾಶ್ರಮ, ಹೊಳಗುಂದಿ, 1983.
12. *ಸೌಥ್ ಇಂಟಿಯನ್ ಇನ್‌ಸ್ಕ್ರಿಪ್ಷನ್ಸ್*, ಸಂಪುಟ–15, 19.
13. ಹಿರೇಮಠ ಎಸ್.ಎಸ್., *ಕಾಳಾಮುಖ ದರ್ಶನ*, ಸಮತಾ ಪ್ರಕಾಶನ, ಹರಪನಹಳ್ಳಿ, 2004.

33. ಸಗರ ಸಂಕ್ರಮಣ ಧುರೀಣ: ಟಿಪ್ಪಣಿ

ಡಾ. ರಮೇಶ ನಾಯಕ

ಸಗರ ಸಂಕ್ರಮಣ ಧುರೀಣ ಅಥವಾ ಸಗರ ಸಂಕ್ರಮಣ ರಾಯ ಎಂಬ ಬಿರುದು ಅಳಿಯ ರಾಮರಾಯನಿಗೆ ಸಂಬಂಧಿಸಿದ್ದು. ವಿಜಯನಗರ ಇತಿಹಾಸದಲ್ಲಿ ಈತನದ್ದು ತುಂಬಾ ವಿಶಿಷ್ಟವಾದ ಸ್ಥಾನಮಾನ. ಶಾಸನಬದ್ಧ ದೊರೆಯಾಗದಿದ್ದರೂ ಸಮಸ್ತ ಅಧಿಕಾರ ಅವನ ಕೈಯಲ್ಲಿ ಕೇಂದ್ರೀಕೃತವಾಗಿತ್ತು. ತಾನೆಂದೂ ಸಂಪೂರ್ಣ ರಾಜನೆಂದು ತನ್ನನ್ನು ತಾನು ಸಮರ್ಥಿಸಿಕೊಳ್ಳಲಾಗಲಿಲ್ಲ. ಆದರೂ ಹಿನ್ನೆಲೆಯಲ್ಲಿದ್ದುಕೊಂಡೇ ಅಧಿಕಾರ ವ್ಯವಹಾರಗಳನ್ನು ನಿರ್ವಹಿಸಿದ ನಿಯಂತ್ರಕನಾಗಿದ್ದ. ಮುಖ್ಯ ಅಥವಾ ಪ್ರಧಾನ ರಾಜನು ಹೊಂದಿದ್ದ ಬಿರುದು ಬಾವಲಿಗಳನ್ನೇ ತಾನು ಸಹ ಧರಿಸಿದ್ದ. ವಿಜಯನಗರ ಅರಸನಿಗೆ ತಾನೊಬ್ಬ ರಾಜಪ್ರತಿನಿಧಿ ಮಾತ್ರ ಎಂದು ವಿಧೇಯನಾಗಿ ಕರೆದುಕೊಂಡಿದ್ದನು.

ಸುಮಾರು ಇಪ್ಪತ್ತೈದು ವರುಷಗಳ ಕಾಲ ವಿಜಯನಗರ ಆಡಳಿತ ಮುನ್ನೆಡೆಸಿದ. ಬಹಮನಿ ಅರಸರುಗಳಲ್ಲಿ ಹುಟ್ಟಿಕೊಂಡಿದ್ದ ವಿಘಟನೆ ಹಾಗೂ ಅಸಾಧಾರಣ ಸ್ಥಿತಿಯನ್ನು ಚೆನ್ನಾಗಿ ಬಳಸಿಕೊಂಡು ವಿಜಯನಗರ ರಾಜ್ಯವನ್ನು ತುಂಬಾ ಸುಸ್ಥಿರಗೊಳಿಸಿದನು. (ಈ ನಡೆಗಳು ಪ್ರಾರಂಭ ದಿನಗಳಲ್ಲಿ ಮಾತ್ರ ಜಾರಿಯಾದವು). ಪಂಚಮಶಾಹಿಗಳ ಮಧ್ಯೆ ಜರುಗುತ್ತಿದ್ದ ರಾಜಕೀಯ ಚದುರಂಗದಾಟದಲ್ಲಿ ನಡೆಯುವ ಕಾಯಿಗಳ ನಿಜವಾದ ನಿಯಂತ್ರಕ ಅಂದರೆ ಆತನೇ ಆಗಿದ್ದ. ಆದರೆ ತಾನಾಡುವ ಆಟದಲ್ಲಿ ಅವನಿಗೆ ನಿಯಮಗಳು ಮುಖ್ಯವಾಗಿರಲಿಲ್ಲ. ಗೆಲುವೊಂದೇ ಅವನ ಮುಖ್ಯ ಉದ್ದೇಶವಾಗಿತ್ತು. ಅಂಥದ್ದನ್ನು ಸಾಧಿಸುವಲ್ಲಿ ಸಫಲನಾದ. ಸುಲ್ತಾನರಲ್ಲಿ ಹುಟ್ಟಿಕೊಂಡ ಗೊಂದಲಗಳ ಸಂಪೂರ್ಣ ಲಾಭಪಡೆದು ವಿಜಯನಗರ ಕೀರ್ತಿಯನ್ನು ದಶದಿಕ್ಕುಗಳಲ್ಲಿಯೂ ಹರಡಿಸಿದ ಶ್ರೇಯಸ್ಸು ರಾಮರಾಯನಿಗೆ ಸಲ್ಲುತ್ತದೆ. "ಒಂದು ವಿಚಾರದಲ್ಲಿ ರಾಮರಾಯನ ಈ ವಿಜಯ ವೈಭವವು ಕೃಷ್ಣದೇವರಾಯನ ವೈಭವಕ್ಕಿಂತ ಮಿಗಿಲಾಗಿದೆ ಎನ್ನಬಹುದು. ಹಾಗೂ ಉತ್ತರದ ಮಹಮ್ಮದೀಯ ಹಗೆಗಳ ಶಾಸನ ಕಾರ್ಯದಲ್ಲಿ ಕೃಷ್ಣದೇವರಾಯನು ಎಷ್ಟು ಹೋರಾಡಿದರೂ ಅವರಲ್ಲಿಯ ಸಾಮರ್ಥ್ಯವು ಆಗ ಇನ್ನೂ ಹುರಿಯಾಗಿದ್ದುದರಿಂದ ಅದು ಆತನಿಗೆ ಸಾಕಷ್ಟು ಸಾಧ್ಯವಾಗಲಿಲ್ಲ. ರಾಮರಾಯನ ಈ ಆಳಿಕೆಯಲ್ಲಿಯೇ ಅದು ಬಲು ಹಗುರಾಗಿ ಅವರ ರಾಜ್ಯ ತಂತ್ರದಲ್ಲಿಯೂ ರಾಮರಾಯನೇ ಸೂತ್ರ ಚಾಲಕನಾದನು ಎಂದು ಖ್ಯಾತ ಇತಿಹಾಸಕಾರರಾದ ಡಾ.ಪಿ.ಬಿ.ದೇಸಾಯಿ ಅವರು ಅಭಿಪ್ರಾಯಪಡುತ್ತಾರೆ. ಇಂಥ ಹೇಳಿಕೆಗಳು ಅವನ ಚತುರತೆಗೆ ಹಿಡಿದ ಕೈಗನ್ನಡಿಯಂತಿವೆ.

ಬಲಿಷ್ಠನೂ ಹಾಗೂ ತುಂಬಾ ಚತುರ ಆಡಳಿತಗಾರನಾಗಿದ್ದ ಅಳಿಯ ರಾಯರಾಯನು ವಿಜಯನಗರ ಸಾಮ್ರಾಜ್ಯದ ನಾಮಮಾತ್ರ ರಾಜರನ್ನು ಮುಂದಿಟ್ಟುಕೊಂಡು ಹಲವಾರು ಯುದ್ಧಗಳನ್ನು ಗೆದ್ದುಕೊಂಡನು. ಇಂಥ ವಿಜಯಗಳ ದ್ಯೋತಕವಾಗಿ ಅವನಿಗೆ ಹಲವು ಬಿರುದು ಬಾವಲಿಗಳು ಪ್ರಾಪ್ತವಾಗಿದ್ದವು. ಮುಖ್ಯವಾಗಿ ಆತನಿಗೆ 'ಪ್ರಾಜ್ಯಕರ್ನಾಟಕ' 'ರಾಜ್ಯಸ್ಥಾಪನಾಚಾರ್ಯ', 'ಕನ್ಯಾಕುಮಾರೀ ವಿಜಯಸ್ತಂಭಸ್ಥಾಪನಾಚಾರ್ಯ', 'ಕಲ್ಯಾಣನಗರ ಸ್ಥಾಪಕ', 'ಕಲ್ಯಾಣ ಪುರವರಾಧೀಶ್ವರ', 'ವಿಜಯಪುರ ಭಯನಾಯಕ', 'ರಾಯಚೂರುರಾಜ್ಯ ಹರಣಧುರ್ಯ', 'ಮುದುಗಂಟಿ (ಮುದಗಲ್) ದುರ್ಗಾಧಿನಾಯಕ' ಎಂಬ ಮುಂತಾದ ಬಿರುದುಗಳನ್ನು ಧರಿಸಿದ್ದ. ಹೆಸರಿಸಿದ ಬಿರುದುಗಳಲ್ಲದೇ ಪ್ರಮುಖವಾಗಿ ಸಗರ ಸಂಕ್ರಮಣ ಧುರೀಣ ಅಥವಾ ಸಗರ ಸಂಕ್ರಮಣರಾಯ ಎಂಬ ಬಿರುದು ಅವನಿಗೆ ಇನ್ನೊಂದು ಬಗೆಯಲ್ಲಿ ಮಹತ್ವ ಮತ್ತು ಹೆಚ್ಚಿನ ಶ್ರೇಯ ಕೀರ್ತಿಗೆ ಇಂಬು ನೀಡಿದಂತಿತ್ತು.

ರಾಮರಾಯನು ಧರಿಸಿದ್ದ ಬಿರುದು ಬಾವಲಿಗಳಲ್ಲಿಯೇ ಇದು ವಿಶೇಷ ಎಂಬಂತೆ ಕಂಡುಬರುವುದು. ಕಾರಣ ಅವನಿಗಿದ್ದ ಹಲವಾರು ಬಿರುದುಗಳು ಸ್ಥಳೀಯವಾಗಿ ದೊರಕುವನ ಶಾಸನ ಹಾಗೂ ದೇಸಿ ಸಾಹಿತ್ಯ ಆಕರಗಳಲ್ಲಿ ಕಂಡುಬಂದಿದ್ದರೆ ಸಗರ ಸಂಕ್ರಮಣ ಧುರೀಣ ಎಂಬ ವಿಶೇಷಣವು ಮುಸ್ಲಿಂ ವಿದೇಶಿ ಬರಹಗಾರನಾದ ಬೀರ ಅಹಮದ್ ರಚಿಸಿದ ತಾರೀಖೆ ದಖನ್ ಎಂಬ ಉದ್ಗ್ರಂಥದಲ್ಲಿ ಮಾತ್ರ ದಾಖಲಾಗಿರುವುದು. ಅಪರೂಪ ಎನ್ನಬಹುದಾದ ಅಂಥ ಬಿರುದು ಬಾವಲಿಯ ಧಾರಣೆಯ ಸಂದರ್ಭ ಹಾಗೂ ಅದರ ವಿವಿಧ ಆಯಾಮಗಳನ್ನು ಕುರಿತು ವಿವೇಚಿಸುವ ಉದ್ದೇಶ ಈ ಟಿಪ್ಪಣಿಯದ್ದಾಗಿದೆ.

ಕುಮ್ಮಟದುರ್ಗದ ಅರಸರಾದ ಕಂಪಿಲ ಹಾಗೂ ಆತನ ಧೀರ ಮಗನಾಗಿದ್ದ ಕುಮಾರ ರಾಮನು ಮೊಟ್ಟಮೊದಲಿಗೆ ಕೃಷ್ಣಾನದಿಯ ಮೇರೆ ದಾಟಿ ಭೀಮಾನದಿ ಪರಿಸರದ ಸಗರನಾಡಿನಲ್ಲಿ ತಮ್ಮ ಪ್ರಾಬಲ್ಯ ಮೆರೆದರು. ದಕ್ಷಿಣ ಭಾರತದಲ್ಲಿ ಸುಮಾರು ನೂರು ವರ್ಷಗಳ ಕಾಲ ತಮ್ಮ ಹಿಡಿತ ಹೊಂದಿದ್ದ ಸೇವುಣ (ದೇವಗಿರಿ ಯಾದವರು) ಹಾಗೂ ಹೊಯ್ಸಳರು ಅರಸರ ಅಧಿಪತ್ಯವನ್ನು ಮೊಟ್ಟಮೊದಲಿಗೆ ದೆಹಲಿಯ ಸುಲ್ತಾನ ಮಹಮದ್ ಬಿನ್ ತುಗಲಕನು ಸಂಪೂರ್ಣವಾಗಿ ಕೊನೆಗಾಣಿಸಿದನು. ಅಲ್ಲದೇ ಸ್ಥಳೀಯ ರಾಜರು ಕಸಿದುಕೊಂಡಿದ್ದ ಅವರ ರಾಜ್ಯದ ಆಡಳಿತ ನಿರ್ವಹಣೆಗೆ ತನ್ನ ನಂಬಿಕಸ್ಥ ಸಂಬಂಧಿಗಳನ್ನೇ ವಾರಸ್ಸುದಾರರಾಗಿ ಸ್ಥಾಪಿಸಿದ್ದ. ಆದರೆ ಅಧಿಕಾರದ ಲಾಲಸೆಗಳು ಅವರ ವಿರುದ್ಧವೇ ದಂಗೆಗೆ ಅಣಿಮಾಡಿದವು. ಮುಖ್ಯವಾಗಿ ಅವನ ಸಂಬಂಧಿ ಗುರುಸ್ವಾಷನು ದೆಹಲಿ ಸುಲ್ತಾನನ ಅಧಿಕಾರವನ್ನು ಧಿಕ್ಕರಿಸಿ ಸ್ವತಂತ್ರಗೊಂಡ. ಇವರಿಂದ ಕ್ರೋಧಿತನಾಗಿ ಸುಲ್ತಾನನು ಭಾರೀ ಸೈನ್ಯದೊಂದಿಗೆ ಅವನ ಪದಚ್ಯುತಿಗೆ ಮುಹೂರ್ತ ಗೊತ್ತುಪಡಿಸಿದ. ಆದರೆ ಅವನಂದುಕೊಂಡಷ್ಟು ವ್ಯವಹಾರವು ಸರಳವಾಗಿರಲಿಲ್ಲ. ಕಂಪಿಲ ಮತ್ತು ಕುಮಾರರಾಮನ (ಕುಮ್ಮಟದ ಅರಸರು) ಸಹಾಯದಿಂದ ಮೊದಮೊದಲು ಗುರುಸ್ವಾಷನು ಸುಲ್ತಾನ ಸೈನ್ಯದ ವಿರುದ್ಧದ ವಿಜಯವನ್ನು ತನ್ನದನ್ನಾಗಿ ಮಾಡಿಕೊಂಡನು. ಈ ಸಂದರ್ಭಗಳು ಕುಮ್ಮಟದ ಅರಸರಿಗೆ ಹೊಸ ಬಗೆಯ ಶಕ್ತಿ ನೀಡಿದಂತಾದವು. ಆದರೆ ಈ ಹಿಡಿತ ತುಂಬಾ ಕಾಲ ಉಳಿಯಲಿಲ್ಲ. ಸುಲ್ತಾನನು ಭಾರೀ ಸೈನ್ಯದೊಂದಿಗೆ ಕುಮ್ಮಟ ಹಾಗೂ ತನ್ನ ಸಂಬಂಧಿಯ ಮೇಲೆ ಎರಗಿದ್ದರಿಂದ ಅವರು ಒಂದೇ ಏಟಿಗೆ ಸಂಪೂರ್ಣ ಸೋಲು ಕಂಡರು. ಪರಿಣಾಮ ಗುರುಸ್ವಾಷನ ಅಧಿಕಾರ ಮತ್ತು ಕಂಪಿಲ ರಾಜ್ಯವನ್ನು ನಿರ್ನಾಮ ಮಾಡಿತು. ಇಂಥ ಪರಿಣಾಮದ ಮೇಲಾಟಗಳು ಏನೇ ಆಗಿರಲಿ ಮೊಟ್ಟ ಮೊದಲಿಗೆ ತುಂಗಭದ್ರಾ ಪರಿಸರದಲ್ಲಿದ್ದ ಒಂದು ರಾಜ್ಯವು ಭೀಮಾನದಿ ಪರಿಸರದ ಸಗರದವರೆಗೂ ತನ್ನ ಪ್ರಾಬಲ್ಯ ಸ್ಥಾಪಿಸಿದ್ದು ತುಂಬಾ ಮಹತ್ವದ ಘಟನೆಯಾಗಿ ತೋರುತ್ತದೆ. ಇಂಥ ವಿಜಯವು 14ನೇ ಶತಮಾನದ ಪೂರ್ವಪಾದದಲ್ಲಿಯೇ ಜರುಗಿರುವಂಥದ್ದು.

ಕುಮ್ಮಟದ ಅರಸರ ಸೀಮೋಲ್ಲಂಘನದ ವಿಜಯಾನಂತರದ ಅವಧಿಯಲ್ಲಿ ಹಲವು ದಶಕಗಳು ಕಳೆದರು ವಿಜಯನಗರದ ಅರಸರು ಕೃಷ್ಣಾನದಿಯನ್ನು ದಾಟಿ ತಮ್ಮ ರಾಜ್ಯ ವಿಸ್ತರಿಸಲಿಕ್ಕೆ ಆಗಲಿಲ್ಲ. ಆದರೆ ಕೃಷ್ಣದೇವರಾಯನ ದಿಗ್ವಿಜಯಗಳು ಮತ್ತೆ ಸಗರ ಪ್ರದೇಶವನ್ನು ಪ್ರವೇಶಿಸುವಲ್ಲಿ ಯಶಸ್ವಿಯಾದವು. ಈ ಪ್ರಯತ್ನಗಳು ವಿಜಯನಗರ ಅರಸರಿಗೆ ಹೆಚ್ಚಿನ ಕೀರ್ತಿ ತಂದುವಾದರೂ ಅವು ತುಂಬಾ ತಾತ್ಕಾಲಿಕವಾಗಿದ್ದವು ಎಂದು ಅಭಿಪ್ರಾಯಿಸಬಹುದು. ಹಾಗಾಗಿ ಒಂದೆರಡು ಶತಮಾನಗಳ ಕಾಲ ಸಗರನಾಡಿನ ನಿಜವಾದ ಸಾರ್ವಭೌಮರು ಶಾಹಿಸುಲ್ತಾನರೇ ಆಗಿದ್ದರು ಎಂದರೆ ತಪ್ಪಾಗಲಾರದು.

ಸುಮಾರು ಎರಡುನೂರು ವರ್ಷಗಳಿಂದ ಎಡಬಿಡದೆ ವಿಜಯನಗರ ಮಹಾನ್ ಸಾಮ್ರಾಜ್ಯಕ್ಕೆ ಮಗ್ಗಲು ಮುಳ್ಳಾಗಿ ಕಾಡಿದ ಬಹಮನಿ ಅರಸರನ್ನು ತನ್ನ ನೀತಿಗಳಿಂದ ರಾಮರಾಯನು ಅವರನ್ನು ಕೈಗೊಂಬೆಗಳಾಗಿ ಕುಣಿಯುವಂತೆ ಮಾಡಿದಾಗ ಶಾಹಿಸುಲ್ತಾನರು ಹೊಂದಿದ್ದ ದೌರ್ಬಲ್ಯ ಹಾಗೂ ಪರಸ್ಪರ ದ್ವೇಷಾಸೂಯೆಗಳೇ ರಾಮರಾಯನಿಗೆ ಅವರು ಅಡಿಯಾಳಾಗಿ ನಿಲ್ಲುವಂತೆ ಮಾಡಿದವು. ಇಂಥ ಘಟನೆಗಳಿಗೆ ಅವನನ್ನು ಭಾಗಶಃ ಹೊಣೆಮಾಡಲಾಗುತ್ತದೆ. ಆದರೆ ಅವನು ಅಂತಹ ಕಲಹಗಳಲ್ಲಿ ಮಧ್ಯಪ್ರವೇಶ ಮಾಡಿದ್ದರೆ ಅದು ವಿಜಯನಗರದ ಹಿತಕ್ಕಾಗಿ ಮಾತ್ರ ಸುಲ್ತಾನ ಪರಸ್ಪರ ವಿಶ್ವಾಸವೇ ಇರುವುದಿಲ್ಲ. ಅವರು ನಾಗಳಂತೆ ಸದಾ ಕಚ್ಚಾಡುತ್ತಿರುತ್ತಾರೆ. ಒಬ್ಬರು ನಾಶವಾಗುವುದನ್ನು ಇನ್ನೊಬ್ಬರು ಬಯಸುತ್ತಾರೆ ಎಂದು ನ್ಯೂನಿಜ್‌ನು ಅವರ ಕುರಿತು ಹೇಳಿಕೆ ನೀಡಿದ್ದಾನೆ. ಇಂಥ ಅಭಿಪ್ರಾಯಗಳಿಂದ ತಿಳಿಯಬಹುದಾದ ಸಂಗತಿ ಏನೆಂದರೆ ಕೆಲವು ಚರಿತ್ರೆಕಾರರು ಗ್ರಹಿಸಿರುವಂತೆ ವಿಜಯನಗರ ವಿಘಟನೆಗೆ ಅಳಿಯರಾಮರಾಯ ಕಾರಣನಲ್ಲ ಎಂಬುದು. ಈ ಹಿನ್ನೆಲೆಯಲ್ಲಿ ಅವನಿಗೆ ಸಂಬಂಧಿಸಿದ ಈ ಬಿರುದು ಹೊಸ ಬಗೆಯ ಅಭಿಪ್ರಾಯ ಸೃಷ್ಟಿಸುತ್ತದೆ. ಆ ಅರ್ಥದಲ್ಲಿ ಈ ಟಿಪ್ಪಣಿ ಮಂಡಿಸಲಾಗಿದೆ.

ಅಳಿಯ ರಾಮರಾಯನು ಕೃಷ್ಣಾ ಮತ್ತು ಭೀಮಾ ನದಿಯ ನಡುವಿನ ದೋಅಬ್ (ಸಗರನಾಡು) ಪ್ರದೇಶವನ್ನು ತನ್ನ ಸಾಮರ್ಥ್ಯದಿಂದ ಗೆದ್ದುಕೊಂಡನು. ಮುಖ್ಯವಾಗಿ ಯಾದಗಿರಿ ಅಥವಾ ಯಾತಗಿರಿ, ಸಗರ, ಅಡಕಿ, ಜಲದುರ್ಗ ಹಾಗೂ ರಾಯನಪಾಳ್ಯ, ದೋರನಹಳ್ಳಿ ಹಾಗೂ ಶಹಾಪುರ ಕೋಟೆಗಳನ್ನು ವಶಪಡಿಸಿಕೊಂಡನು. ಹಾಗಾಗಿ ಅವನಿಗೆ ಸಗರ ಸಂಕ್ರಮಣ ಧುರೀಣ ಅಥವಾ ಸಗರ ಸಂಕ್ರಮಣರಾಯ ಎಂಬ ಬಿರುದು ಬಂದಿರಬಹುದೆಂದು ಮೇಲ್ನೋಟದಲ್ಲಿ ತಿಳಿದು ಬಂದರೂ ಪ್ರಾಯಶಃ ಅದಕ್ಕಿದ್ದ ವಾಸ್ತವಾಂಶ ಬೇರೆ ಬಗೆಯದ್ದು ಎಂದು ಗಮನಿಸಬಹುದು.

ಸಂಕ್ರಮಣ ಎಂಬುದರ ಪದಶಃ ಅರ್ಥ ಕೂಡಿಸುವುದು ಅಥವಾ ಕೂಡಿಕೊಳ್ಳುವುದು ಎಂಬುದಾಗಿದೆ. ಸಗರ ಎನ್ನುವುದು ಪ್ರದೇಶದ ಹೆಸರು. ಧುರೀಣ ಅಥವಾ ರಾಯ ಎಂಬುದು ರಾಜ ಅಥವಾ ನಾಯಕ ಎಂದಾಗುತ್ತದೆ. ಈ ಮೂರು ಪದಗಳ ಪದಶಃ ಅರ್ಥವನ್ನು ತೆಗೆದುಕೊಂಡರೆ ಸಗರ ಪ್ರದೇಶದಲ್ಲಿ ಆಳುತ್ತಿದ್ದ (ಶಾಹಿ ಸುಲ್ತಾನರು) ವ್ಯಕ್ತಿಗಳನ್ನು ತನ್ನ ಮುತ್ಸದ್ದಿತನದಿಂದ ಕೂಡಿಸಿರುವುದು ಅಥವಾ ಒಟ್ಟು ಮಾಡಿರುವುದು ಎಂಬ ಅರ್ಥದಲ್ಲಿ ಪರಿಭಾವಿಸಬೇಕಾಗುತ್ತದೆ. ಹಾಗಾಗಿ ಈ ಬಿರುದಿನಿಂದ ತಿಳಿಯಬಹುದಾದ ಮುಖ್ಯ ಅಂಶವೆಂದರೆ ಕೆಲವು ಚರಿತ್ರೆಕಾರರು ಅಭಿಪ್ರಾಯಪಡುವಂತೆ ಶಾಹಿ ಸುಲ್ತಾನರನ್ನು ಬೇರ್ಪಡಿಸಿದ ವಿಘಟನಕಾರನಲ್ಲ ಹೊರತು ಸಂಘಟನಕಾರನೆಂದು ಪರಿಭಾವಿಸುವುದು ಸೂಕ್ತವೆಂದೆನಿಸುತ್ತದೆ.

ಶಾಹಿ ಸುಲ್ತಾನರಲ್ಲಿ ತಲೆದೋರಿದ್ದ ಮನಸ್ತಾಪವನ್ನು ಶಾಶ್ವತವಾಗಿ ಪರಿಹರಿಸುವ ನಿಟ್ಟಿನಲ್ಲಿ ರಾಮರಾಯನು ನಾಲ್ವರು ಸುಲ್ತಾನರ ಒಂದು ಸಭೆಯನ್ನು ಕರೆದನು. ಅವರು ಒಂದು ಒಪ್ಪಂದ ಮಾಡಿಕೊಳ್ಳಬೇಕು. ಯಾರೇ ಒಬ್ಬನು ಅನ್ಯಾಯವಾಗಿ ಇನ್ನೊಬ್ಬನ ಮೇಲೆ ಯುದ್ಧಕ್ಕೆ ಬಂದ ಪಕ್ಷದಲ್ಲಿ ಇತರರು ಮೂವರೂ ಒಂದುಗೂಡಿ ಆಕ್ರಮಣಕಾರನ ವಿರುದ್ಧ ಹೋರಾಡಬೇಕು ಎಂಬುದೇ ಒಪ್ಪಂದ. ಆ ಸಂದರ್ಭದಲ್ಲಿಯೇ ಬಹುಶಃ ಈ ಬಿರುದು ಕೂಡಾ ಅಳಿಯ ರಾಮರಾಯನಿಗೆ ಪ್ರಾಪ್ತವಾಗಿರಬಹುದು. ಇಂಥ ಘನಕಾರ್ಯ ಮಾಡಿದ್ದರಿಂದಲೇ ಮುಸ್ಲಿಂ ಬರಹಗಾರನೊಬ್ಬ ಅವನನ್ನು ಸಗರ ಸಂಕ್ರಮಣ ಧುರೀಣ ಅಥವಾ ಸಗರ ಸಂಕ್ರಮಣ ರಾಯನೆಂದು ಹೊಗಳಿರುವುದು ಔಚಿತ್ಯಪೂರ್ಣ ಎಂದೆಣಿಸುತ್ತದೆ. ಕುಟಿಲ, ಸಮಯಸಾಧಕ ಕುಬುದ್ಧಿಯ ಹಾಗೂ ಶಾಹಿ ಸುಲ್ತಾನ ರಾಜ್ಯಗಳ ವಿಘಟನಕಾರ ಎಂಬ ನಾನಾ ತೆಗಳಿಕೆಗಳಿಂದ ಸಂಬೋಧಿಸಲ್ಪಡುತ್ತಿರುವ ಅಳಿಯ ರಾಮರಾಯ ನಿಜ ಅರ್ಥದಲ್ಲಿ ಅವರ ನಡುವೆ ಸಂಘಟನೆ ಏರ್ಪಡಿಸುವ ಸಂಘಟನಕಾರ ಅಥವಾ ಸಂಕ್ರಮಣಕಾರನಾಗಿದ್ದ ಎಂಬುದು ಹೆಚ್ಚು ಸೂಕ್ತವಾದುದು ಎಂದೆನಿಸುತ್ತದೆ.

ಗ್ರಂಥಋಣ

1. ಕೃಷ್ಣ ಎ., *ಸಗರನಾಡ ದರ್ಶನ*, ಕವಿಲಕ್ಷ್ಮೀಶ ವಾಚನ ಸಂಘ, ಸುರಪುರ, 1985.
2. ದೇಸಾಯಿ ಪಿ.ಬಿ., *ವಿಜಯನಗರ ಸಾಮ್ರಾಜ್ಯ*, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2008.
3. ಧ್ರುವನಾರಾಯಣ ಎಂ. (ಸಂ), *ಸುರಪುರ ಸಂಸ್ಥಾನದ ಇತಿಹಾಸ*, ಅನಂತ ಪ್ರಕಾಶನ, ಬೆಂಗಳೂರು, 2009.
4. ಶಿವಣ್ಣ ಕೆ.ಎಸ್.(ಸಂ)., *ಕರ್ನಾಟಕ ಚರಿತ್ರೆ ಸಂಪುಟ–3*, ಕವಿವಿ, ಹಂಪಿ, 1997.
5. ಬೆಟಸೂರಮಠ ಸಿ.ಜಿ., ಗೋಪಾಲ ಆರ್ ಮತ್ತು ಗಂಗಾಧರ ಟಿ.ಎಸ್(ಸಂ)., *ವಿಜಯನಗರ ಅಧ್ಯಯನ ಸಂಪುಟ–19*, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು, 2014.
6. ರಮೇಶ ನಾಯಕ, *ಯಾದಗಿರಿ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ* (ಪಿಎಚ್.ಡಿ. ಅಪ್ರಕಟಿತ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, 2015.

34. ಸಂಗಮ ಅರಸರ ಬಿರುದಾವಳಿಗಳು

ಡಾ. ಎಸ್.ವೈ. ಸೋಮಶೇಖರ್

ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿ ಯಶಸ್ವಿಯಾಗಿ ಆಳಿದ ಮನೆತನಗಳಲ್ಲಿ ಸಂಗಮ ಮನೆತನವು ಪ್ರಮುಖವಾಗಿದೆ. ಮಧ್ಯಯುಗೀನ ಚರಿತ್ರೆಯಲ್ಲಿ ಸಂಗಮ ಮನೆತನದ ಪಾತ್ರ ಮಹತ್ವದ್ದು. ಈ ಮನೆತನದ ಸ್ಥಾಪಕ ಹರಿಹರನಿಂದ ಹಿಡಿದು ಬುಕ್ಕರಾಯ, ಇಮ್ಮಡಿ ಹರಿಹರ, ದೇವರಾಯ, ಪ್ರೌಢದೇವರಾಯ ಮೊದಲಾದವರು ವಿಜಯನಗರ ಸಾಮ್ರಾಜ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿ ಸಾಮ್ರಾಜ್ಯವನ್ನು ದಕ್ಷಿಣ ಭಾರತಾದ್ಯಂತ ವಿಸ್ತರಿಸಿದ್ದರು. ಇವರು ತಮ್ಮ ಶೌರ್ಯ ಪರಾಕ್ರಮಗಳಿಂದ ಅನೇಕ ಸಮಕಾಲೀನ ಅರಸರು, ಮಾಂಡಲಿಕರು, ಸಾಮಂತರನ್ನು ಹತ್ತಿಕ್ಕಿ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡುವಲ್ಲಿ ಹಾಗೂ ಸಾಮ್ರಾಜ್ಯ ವಿಸ್ತರಣೆ ಕಾರ್ಯದಲ್ಲಿ ಯಶಸ್ಸು ಸಾಧಿಸಿದ್ದುದೂ ಉಂಟು. ಈ ಬಗೆಯ ಯಶಸ್ಸನ್ನು ವಿವರಿಸುವ, ಯಶ ಪಡೆದ ಪ್ರದೇಶ ಹಾಗೂ ಅಂದಿನ ಘಟನೆಗಳನ್ನು ವಿವರಿಸುವ ಅನೇಕ ಬಿರುದುಗಳನ್ನು ಶಾಸನ ಮತ್ತು ಸಾಹಿತ್ಯಗಳಲ್ಲಿ ಕಾಣಬಹುದು. ಇಂತಹ ಪ್ರತಿಯೊಂದು ಬಿರುದಾವಳಿಯೂ ಒಂದೊಂದು ಮಹತ್ವದ ಘಟನೆ, ಸಾಧನೆ, ಯುದ್ಧ, ದಿಗ್ವಿಜಯ, ಅವರ ವೈಯಕ್ತಿಕ ನಡವಳಿಕೆ, ಪ್ರತಿಭೆ, ಪಾಂಡಿತ್ಯ, ಸಂಸ್ಕೃತಿ ಪ್ರೀತಿ, ಪ್ರದೇಶ, ವಿನಯಸಂಪನ್ನತೆ ಹಾಗೂ ಪ್ರಜಾ ವಾತ್ಸಲ್ಯಗಳಿಂದಲೂ ಬಂದಿವೆ. ಈ ಬಿರುದಾವಳಿಗಳು ಸಂಗಮ ಅರಸರ ಆಡಳಿತದ ಸಂಗತಿಗಳ ಜೊತೆಗೆ ಅಂದಿನ ಸಾಂಸ್ಕೃತಿಕ ಬದುಕನ್ನೂ ಬಿಚ್ಚಿಡುತ್ತವೆ. ಇವು ಆಕರಗಳಾಗಿ ಆಯಾಯ ಅರಸ ಮಾಂಡಲಿಕರ ಚರಿತ್ರೆಯನ್ನು ಕಟ್ಟುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಸಾಮ್ರಾಜ್ಯದ, ರಾಜಕಾರಣದ ಅಥವಾ ವ್ಯಕ್ತಿಗತ ಚರಿತ್ರೆ ಅರಿಯಲು ಮಹತ್ವದ ಕುರುಹುಗಳನ್ನು ಈ ಬಿರುದಾವಳಿಗಳು ನೀಡುತ್ತವೆ. ಸಂಗಮ ಮನೆತನದ ಅರಸರು ಹೊಂದಿದ್ದ ಬಿರುದಾವಳಿಗಳಲ್ಲಿ ಸಾಂಸ್ಕೃತಿಕ ಚಿತ್ರಣವನ್ನು ಕಟ್ಟಿಕೊಡುವ ಹಾಗೂ ಅವುಗಳನ್ನು ಅರಸರಾದಿಯಾಗಿ ಪ್ರಸ್ತುತ ಪ್ರಬಂಧದಲ್ಲಿ ಗಮನಿಸಲಾಗಿದೆ.

ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಮೊದಲ ಅರಸು ಮನೆತನ ಸಂಗಮ. ಇದು ಕ್ರಿ.ಶ. 1336 ರಿಂದ 1485ರ ವರೆಗೆ ಸುಮಾರು 150 ವರ್ಷಗಳ ಕಾಲ ಸುದೀರ್ಘ ಆಳ್ವಿಕೆ ಮಾಡಿದೆ. ವಿಜಯನಗರ ಸಾಮ್ರಾಜ್ಯವನ್ನು ದಕ್ಷಿಣ ಭಾರತದಾದ್ಯಂತ ವಿಸ್ತರಿಸಿದ ಕೀರ್ತಿ ಈ ಮನೆತನಕ್ಕೆ ಸಲ್ಲುತ್ತದೆ. ಈ ಮನೆತನ ಹಾಗೂ ವಿಜಯನಗರ ಸಾಮ್ರಾಜ್ಯದ ಸ್ಥಾಪಕ ಹರಿಹರನಾಗಿದ್ದಾನೆ.

ಸಂಗಮ ಅರಸರ ಬಿರುದಾವಳಿಗಳ ಸಾಂಸ್ಕೃತಿಕ ಚಿತ್ರಣ

ಪ್ರಾಚೀನ ಕಾಲದಿಂದಲೂ ವಿಶಿಷ್ಟ ಸಾಧನೆ ಮತ್ತು ಸಾಹಸ ಕಾರ್ಯಗಳಿಗೆ ಗೌರವ ಕೊಡುವುದು ರೂಢಿ. ಈ ಬಗೆಯ ಗೌರವವನ್ನು ವಿಶಿಷ್ಟವೂ, ಅಲಂಕಾರಿಕವೂ, ಅರ್ಥಪೂರ್ಣವೂ ಆದ ಪದಗಳಲ್ಲಿ ಅಭಿವ್ಯಕ್ತಿಸುವ ಪ್ರಯೋಗವೇ ಬಿರುದು. ಬಿರುದುಗಳನ್ನು ಪ್ರಶಸ್ತಿ, ಪರಾಕುಗಳಾಗಿಯೂ ವರ್ಣಿಸಿರುವುದನ್ನು ಶಾಸನ–ಸಾಹಿತ್ಯಗಳಲ್ಲಿ ಕಾಣುತ್ತೇವೆ.

ಬಿರುದಾವಳಿಗಳು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ರಚನೆಯಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸುತ್ತವೆ. ಚರಿತ್ರೆಗೆ ಇತರೆ ಆಕರಗಳು ಹೇಗೆ ಮುಖ್ಯವೋ ಅಂತೆಯೇ ಆಯಾ ಕಾಲದ ಅರಸು, ಸಾಮಂತ, ಮಾಂಡಲಿಕರಲ್ಲದೆ ಅವರ ಪತ್ನಿಯರು ಮೊದಲಾದವರ ಜೀವನ ಘಟನೆಗಳ ಸ್ಥೂಲ ಪರಿಚಯ ಮಾಡಿಕೊಡುವಲ್ಲಿ ಬಿರುದುಗಳು ಸಹಕಾರಿಯಾಗಿವೆ. ಬಿರುದುಗಳು ಅರಸ, ಮಾಂಡಲಿಕ ಮೊದಲಾದವರ ಸ್ಥಾನಮಾನ, ಗೌರವದ ಸಂಕೇತಗಳಾಗಿವೆ. ಅಂದಿನ ಶೌರ್ಯ, ಪರಾಕ್ರಮಗಳಲ್ಲದೆ ರಾಜಕೀಯ, ಸಾಮಾಜಿಕ, ಧಾರ್ಮಿಕ ಸಂಗತಿಗಳನ್ನು ತಿಳಿದುಕೊಳ್ಳಲು ನೆರವಾಗುತ್ತವೆ. ಅಲ್ಲದೆ ಪ್ರಾಚೀನ ಕಾಲದ ಕಲೆ, ಸಾಹಿತ್ಯ, ಸಂಗೀತ ಮತ್ತು ನೃತ್ಯಗಳಿಗೆ ನೀಡಿದ ಆದ್ಯತೆ, ಪ್ರೋತ್ಸಾಹ ಮೊದಲಾದ ಸಂಗತಿಗಳನ್ನು ಈ ಕೆಳಗೆ ಕಾಣಬಹುದು.

ಅರಸೊತ್ತಿಗೆ

ಬಿರುದಾವಳಿಗಳಲ್ಲಿ ಅನೇಕವು ಆಯಾ ಕಾಲದ ಅರಸ, ಸಾಮಂತ, ಮಾಂಡಲಿಕ ಮೊದಲಾದವರ ಹುದ್ದೆ, ಸ್ಥಾನಮಾನಗಳನ್ನು ಪ್ರತಿನಿಧಿಸುತ್ತವೆ. ಸ್ಥಾನಮಾನಗಳಲ್ಲಿ ಅರಸ ಪದವಿ ಪ್ರಮುಖವಾದುದು. ಈ ಹಿನ್ನೆಲೆಯಲ್ಲಿ ಮಹಾರಾಜಾಧಿರಾಜ, ಮಹಾರಾಯ, ರಾಜಪರಮೇಶ್ವರ, ವೀರಪ್ರತಾಪ ಚಕ್ರವರ್ತಿ, ರಾಜಕುಲತಿಲಕ ಚೂಡಾಮಣಿ ಎಂಬ ಬಿರುದುಗಳನ್ನು ಸಂಗಮ ಮನೆತನದ ಅರಸರು ಹೊಂದಿದ್ದರು. ಇದಲ್ಲದೆ ಮಹಾಮಂಡಲೇಶ್ವರ ಎಂಬುದೂ ಪದವಿಯಾಗಿದ್ದು, ಇದನ್ನು ಅರಸರು ಬಿರುದಾಗಿ ಧರಿಸಿದ್ದರು. ಈ ಬಿರುದನ್ನು ಹರಿಹರನಿಂದ ಹಿಡಿದು ಎಲ್ಲರೂ ಹೊಂದಿದ್ದರು. ಒಟ್ಟಿನಲ್ಲಿ ಆಯಾಯ ಹುದ್ದೆ, ಸ್ಥಾನಮಾನಗಳನ್ನು ಬಿರುದುಗಳಾಗಿ ಬಣ್ಣಿಸುವ ಪರಿಪಾಠವು ಹಿಂದಿನಿಂದಲೂ ನಡೆದಿದ್ದು, ಆ ಮೂಲಕ ಆಯಾಯ ಹುದ್ದೆ, ಸ್ಥಾನಮಾನಗಳಿಗೆ ಗೌರವವನ್ನು ಸೂಚಿಸುವ ಪದ್ಧತಿಯಿದ್ದುದು ಈ ಮೇಲಿನ ಬಿರುದಾವಳಿಗಳಿಂದ ಧೃಡವಾಗುತ್ತದೆ.

ಕುಲ ಮತ್ತು ವಂಶಾವಳಿ

ಅರಸ, ಮಾಂಡಲಿಕ ಮೊದಲಾದವರ ವಂಶ ಅಥವಾ ಮನೆತನವನ್ನು ಬಿರುದುಗಳ ಮೂಲಕವೂ ಗುರುತಿಸಲು ಸಾಧ್ಯವಿದೆ. ಆಯಾ ಮನೆತನಗಳಿಗೆ ಸೇರಿದವರು ತಮ್ಮ ಕುಲ ಮತ್ತು ಮನೆತನಗಳ ಮೂಲವನ್ನು ಹೇಳಿಕೊಳ್ಳುವ ಹಾಗೂ ಅವುಗಳ ಶ್ರೇಷ್ಠತೆಯನ್ನು ಬಿರುದುಗಳ ಮೂಲಕ ಸಾರಿಕೊಳ್ಳುವ ಪ್ರಯತ್ನವನ್ನೂ ಮಾಡಿದ್ದಾರೆ. ಸಂಗಮ ಅರಸರು ತಮ್ಮ ಮೂಲವನ್ನು ಬಿರುದುಗಳ ಮೂಲಕವೂ ಹೇಳಿಕೊಂಡಿದ್ದಾರೆ. ಅವುಗಳಲ್ಲಿ ಯದುಕುಲತಿಲಕ, ಯಾದವವಂಶ ಪ್ರದೀಪ, ಪಡವಾರ ವಂಶೋದ್ಭವ, ಯಾದವಾನ್ವಯ–ಇವು ಯಾದವ ವಂಶದವರು ಎಂಬುದನ್ನು ಸಾರುತ್ತವೆ. ಶ್ರೀವೀರಸಂಗಮೇಶ್ವರರಾಯಬಾಹು ಎಂಬುದರಿಂದ ಸಂಗಮ ಮನೆತನದ ಅರಸನೆಂಬುದು ಗೊತ್ತಾಗುತ್ತದೆ. ಒಟ್ಟಿನಲ್ಲಿ ವಿಜಯನಗರದ ಸಂಗಮ ಮನೆತನದ ಅರಸರು ಯದುವಂಶದವರೆಂಬುದಕ್ಕೆ ಈ ಬಿರುದಾವಳಿಗಳು ಪ್ರಮುಖ ಸಾಕ್ಷ್ಯಗಳಾಗಿವೆ.

ರಾಜಧಾನಿ

ಬಿರುದಾವಳಿಗಳಲ್ಲಿ ಗೋಚರಿಸುವ ಸಾಮಾನ್ಯ ಸಂಗತಿಯೆಂದರೆ ಆಯಾ ಅರಸ, ಮಾಂಡಲಿಕ, ಸಾಮಂತರು ತಮ್ಮ ತಮ್ಮ ಆಳ್ವಿಕೆಯ ಕೇಂದ್ರ ಅಥವಾ ರಾಜಧಾನಿಗಳ ಹೆಸರನ್ನು ವಿಶೇಷಣಗಳಾಗಿ ಕರೆದುಕೊಂಡಿರುವುದು. ವಿಜಯನಗರದ ಪ್ರೌಢದೇವರಾಯನು ವಿಜಯನಗರ ಪುರವರಾಧೀಶ್ವರನೆಂದುಕೊಂಡಿದ್ದಾನೆ (ಕವಿವಿ ಶಾಸಂ., ಸಂ.3, ಪು. 240). ಇದರಿಂದ ಸಂಗಮ ಮನೆತನದವರ ರಾಜಧಾನಿ ಸ್ಪಷ್ಟವಾಗುತ್ತದೆ.

ಶೌರ್ಯ, ಪರಾಕ್ರಮ

ಬಿರುದಾವಳಿಗಳಲ್ಲಿ ಬಹುತೇಕ ಶೌರ್ಯ, ಪರಾಕ್ರಮಗಳನ್ನು ಸಾರುವ ಬಿರುದುಗಳೇ ಹೆಚ್ಚಾಗಿವೆ. ಪ್ರಾಚೀನ ಕರ್ನಾಟಕದಲ್ಲಿ ಶೌರ್ಯ, ಸಾಹಸ ಕಾರ್ಯಗಳಿಗೆ ವಿಶೇಷ ಮೌಲ್ಯವಿತ್ತು. ವೀರ, ವೀರತನವನ್ನು ಗೌರವಿಸುವುದು ಸಮಾಜದ ಗುಣವಾಗಿತ್ತು. ಈ ಹಿನ್ನೆಲೆಯಲ್ಲಿ, ಹೇಳುವ ಮಾತು, "ಸೂರ್ಯಮಂಡಲವನ್ನು ಇಬ್ಬರು ಮಾತ್ರ ಭೇದಿಸಬಲ್ಲರು. ಒಬ್ಬ ಯೋಗ ಸಾಧನೆ ಮಾಡಿದ ಪರಿವ್ರಾಜಕ, ಮತ್ತೊಬ್ಬ ರಣರಂಗದ ಮೂಲಕ ಸಾಧನೆ ಮಾಡಿದ ಯೋಧ". ಅಂದರೆ ಯುದ್ಧದಲ್ಲಿ ಹೋರಾಡಿ ಗೆಲ್ಲುವುದು ಅಥವಾ ಸಾಯುವುದು ಪಾರಮಾರ್ಥ ಸಾಧನೆಗೆ ಸಮಾನವೆಂದು ಸಮಾಜವು ತಿಳಿದಿತ್ತು.

ಬಿರುದುಗಳು ಆಯಾಕಾಲದ ಅರಸು, ಮಾಂಡಲಿಕರು, ವೀರರು ಹಾಗೂ ಇನ್ನಿತರರ ಯುದ್ಧ ಸಾಹಸ, ಶೌರ್ಯ, ಪರಾಕ್ರಮ, ಚಾತುರ್ಯತೆಗಳನ್ನು ಸಾರುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಇವು ರಾಜಕೀಯ ಚರಿತ್ರೆಯ ರಚನೆಗೆ ಮಹತ್ವದ ಆಕರಗಳೂ ಹೌದು. ಸಂಗಮ ಅರಸರು ಮೂರುರಾಯರ ಗಂಡ, ಗಂಡರಗೂಳಿ, ಅರಿರಾಯ ವಿಭಾಡ, ಭಾಷೆಗೆತಪ್ಪುವ ರಾಯರಗಂಡ, ಪರರಾಯಭಯಂಕರ, ಗಜಬೇಂಟೆಕಾರ, ಅರಿರಾಯಮಾನಮರ್ದನ, ಏಕಾಂಗವೀರ, ಕಠಾರಿ ತ್ರಿನೇತ್ರ, ಹಿಂದೂರಾಯ ಸುರತ್ರಾಣರೆಂಬುದಾಗಿ ಹೆಸರಾಗಿದ್ದರು. ಈ ಬಿರುದುಗಳನ್ನು ಆರಂಭಿಕ ಅರಸ ಹರಿಹರರಾಯನಿಂದ ಹಿಡಿದು ನಂತರದ ಎಲ್ಲ ಅರಸರೂ ಸಾಮಾನ್ಯವಾಗಿ ಹೊಂದಿದ್ದರು. ಅದರಲ್ಲೂ ವಿಶೇಷವಾಗಿ

ಪ್ರೌಢದೇವರಾಯನು ಕಂಡನಾಡುಕೊಂಡುಕೊಂಡನಾಡಕೊಡದ ಪೂರ್ವದಕ್ಷಿಣಪಶ್ಚಿಮೋತ್ತರ ಚತುಸ್ಸಮುದ್ರಾಧಿಪತಿ ಎಂಬ ಬಿರುದನ್ನು ಮೊಟ್ಟಮೊದಲು ಹೊಂದಿದ್ದನು. ಇವನು ಎಷ್ಟು ಬಲಿಷ್ಠರೆಂದರೆ ಯಾವುದೇ ರಾಜ್ಯದ ಮೇಲೆ ಕಣ್ಣಿಟ್ಟರೆ ಅದನ್ನು ಜಯಿಸಿಯೇ ತೀರುತ್ತಿದ್ದನೆಂಬಂತಿದೆ ಈ ಬಿರುದಿನ ತಾತ್ಪರ್ಯ. ಹಾಗೆಯೇ ಒಂದನೇ ಬುಕ್ಕರಾಯನು ಹೊಂದಿದ್ದ ಹೊನ್ನಕೊಟ್ಟುಕುದುರೆಯಕೊಂಬಮಾಂಡಲಿಕರಗಂಡ ಎಂಬುದು ಅಂದಿನ ಸೈನ್ಯಕ್ಕೆ ಅಗತ್ಯವಾದ ಕುದುರೆ ಹಾಗೂ ಅದರ ಪಾತ್ರ, ಅಂದಿನ ಚಿನ್ನದ ನಾಣ್ಯ ಮತ್ತು ಕುದುರೆ ವ್ಯಾಪಾರ ಪದ್ಧತಿಯನ್ನು ಸಾರುತ್ತದೆ.

ಶತ್ರು ರಾಜ್ಯಗಳ ನಾಶ ಇಲ್ಲವೇ ವಶ

ಬಿರುದಾವಳಿಗಳಲ್ಲಿ ಹಲವು ವೈವಿಧ್ಯಮಯ ಸಂಗತಿಗಳು ಹೊರಹೊಮ್ಮುತ್ತವೆ. ಸಾಮ್ರಾಜ್ಯವನ್ನು ಆಳುವಾಗ ಅನೇಕ ರಾಜ್ಯಗಳನ್ನು ಗೆಲ್ಲುವುದು ಅನಿವಾರ್ಯ. ಅಂತಹ ಸಂದರ್ಭದಲ್ಲಿ ಹಲವು ರಾಜಮನೆತನಗಳು, ಸಾಮಂತರು, ಮಾಂಡಲಿಕರನ್ನು ಹತ್ತಿಕ್ಕುವ ಪ್ರಸಂಗ ಸಾಮಾನ್ಯ. ಈ ಬಗೆಯ ಘಟನೆಗಳನ್ನು ಬಿರುದಾವಳಿಗಳಲ್ಲಿ ತುರುಷ್ಕರಾಯಶಿರಾಹಕಂಡುಕಕ್ರೀಡಾವಿನೋದ, ತುರುಕಮಹಾಹಯ ಪ್ರಬಲಸೈನ್ಯವಿದಾರಿ, ತುರುಷ್ಕತುರುಗಾರೂಢಾ, ತುಳುವದಳವಿಭಾಡ, ಮಗಧರಾಯಮಾನಮರ್ಧನ ಎಂಬವು ಮುಖ್ಯವಾಗಿವೆ. ಇವುಗಳಿಂದ ನೆರೆಯ ಬಹಮನಿ ಸಾಮ್ರಾಜ್ಯದೊಂದಿಗಿನ ಪ್ರಬಲ ತಿಕ್ಕಾಟಗಳು ವ್ಯಕ್ತವಾಗುತ್ತದೆ.

ಶತ್ರುರಾಜ್ಯ ರಕ್ಷಣೆ ಮತ್ತು ಸ್ಥಾಪನೆ

ಅರಸು, ಮಾಂಡಲಿಕರು ಶತ್ರುಗಳನ್ನು ನಾಶಪಡಿಸುವಂತೆ ರಕ್ಷಿಸುವ ಹಾಗೂ ಪುನಃ ಪ್ರತಿಷ್ಠಾಪಿಸುವ ಕಾರ್ಯಕ್ಕೂ ಕೈಹಾಕುತ್ತಿದ್ದರು. ಸಮಾಜದಲ್ಲಿ ರಕ್ಷಣೆಗೆ ವಿಶೇಷ ಆದ್ಯತೆಯಿತ್ತು. ಈ ಕುರಿತು ಅನೇಕ ಬಿರುದುಗಳು ಮಾಹಿತಿಯನ್ನು ಒದಗಿಸುತ್ತವೆ. ಚೋಳರಾಯ ಸ್ಥಾಪನಾಚಾರ್ಯ, ಚೋಳರಾಯಂಧಕಾರ ಘರ್ಮಕಿರಣ, ಚೋಳರಾಯಹೇಳಾಪಹರಣ ಬಾಳಲೋಚನ ಎಂಬ ಬಿರುದುಗಳು ತಮಿಳುನಾಡಿನ ಪ್ರಾಚೀನ ಅರಸು ಮನೆತನವಾದ ಚೋಳರನ್ನು ಪುನಃ ಅಧಿಕಾರಕ್ಕೆ ತರುವ ಪ್ರಯತ್ನವನ್ನು ಸಮರ್ಥಿಸುತ್ತವೆ. ಹಾಗೆಯೇ ದೇವಗಿರಿಯ ಯಾದವರನ್ನು ಪ್ರೌಢದೇವರಾಯನು ರಕ್ಷಿಸಿದುದಕ್ಕೆ ಅವನು ಹೊಂದಿದ ಯಾದವರಾಯ ಪ್ರತಿಷ್ಠಾಚಾರ್ಯ ಬಿರುದು ಸಾಕ್ಷ್ಯವಾಗಿದೆ.

ಸಾಹಿತ್ಯ ಮತ್ತು ಸಂಗೀತ ಪ್ರೇಮ

ಸಂಗಮ ಮನೆತನದ ಅರಸರು ತಮ್ಮ ಅಧಿಕಾರಾವಧಿಯಲ್ಲಿ ಸಾಮ್ರಾಜ್ಯ ವಿಸ್ತರಣೆ, ಯುದ್ಧ, ಸಂಘರ್ಷಗಳಲ್ಲಿ ಮಾತ್ರ ಕಾಲಕಳೆಯದೆ ಸಾಂಸ್ಕೃತಿಕ ಚಟುವಟಿಕೆಗಳಾದ ಸಂಗೀತ, ಸಾಹಿತ್ಯ, ಶಾಸ್ತ್ರ, ಪುರಾಣ ಮೊದಲಾದವುಗಳಿಗೆ ವಿಶೇಷ ಪ್ರೋತ್ಸಾಹವನ್ನು ನೀಡಿದ್ದರು. ಅಂತೆಯೇ ವೈದಿಕಮಾರ್ಗಪ್ರವರ್ತಕ, ವೇದಮಾರ್ಗ ಪ್ರತಿಷ್ಠಾಪನಾಚಾರ್ಯ, ಸಂಗೀತ ವಿದ್ಯಾಸಾಗರ, ಸಾಹಿತ್ಯವಿದ್ಯಾಕಲಾವಿಶಾಲಾವತಾರ ಎಂಬ ಬಿರುದುಗಳನ್ನು ಹೊಂದಿದ್ದರು. ಸಂಗೀತ ಮತ್ತು ಸಾಹಿತ್ಯಗಳಲ್ಲಿ ಸ್ವತಃ ಪರಿಣತರಾಗಿದ್ದು, ವೇದ, ಶಾಸ್ತ್ರ, ಪುರಾಣಗಳಲ್ಲದೆ ಸಂಗೀತ ಮತ್ತು ಸಾಹಿತ್ಯಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದು, ಅವುಗಳಿಗೆ ಪ್ರೋತ್ಸಾಹವನ್ನು ನೀಡಿದ್ದುದು ಈ ಬಿರುದುಗಳಿಂದ ತಿಳಿಯುತ್ತದೆ.

ಕರ್ನಾಟಕತ್ವ

ಕರ್ನಾಟಕವನ್ನು ಪ್ರತಿನಿಧಿಸುವ ಬಿರುದುಗಳನ್ನೂ ಸಂಗಮ ಅರಸರು ಹೊಂದಿದ್ದರು. ವಿಜಯನಗರ ಅರಸ ಎರಡನೇ ಹರಿಹರನ ಕರ್ನಾಟಕ ರಾಜ್ಯಲಕ್ಷ್ಮೀ ಕರ್ನಾವತಂಶ, ಪ್ರೌಢದೇವರಾಯ ಕರ್ನಾಟಕ ಕ್ಷಿತಿನಾಥ, ಕರ್ನಾಟಕ ಕ್ಷಿತಿಪಾಲ ಎಂಬ ಬಿರುದುಗಳಿಂದ ಮಧ್ಯಯುಗೀನ ಕರ್ನಾಟಕದ ಅರಸರೆಂದೂ ಕರೆಸಿಕೊಂಡಿದ್ದಾರೆ. ಒಟ್ಟಿನಲ್ಲಿ ಕರ್ನಾಟಕದ ಪ್ರಾಚೀನತೆ ಹಾಗೂ ಭೌಗೋಳಿಕ ಪರಿಮಿತಿಗಳನ್ನು ಅರ್ಥಮಾಡಿಕೊಳ್ಳಲು ಈ ಬಿರುದುಗಳಿಂದಲೂ ಸಾಧ್ಯವಾಗುತ್ತದೆ.

ಭೂಮಿ

ಬಿರುದುಗಳಲ್ಲಿ ದೇವತೆ, ಪೌರಾಣಿಕ ವ್ಯಕ್ತಿಗಳಲ್ಲದೆ ಭೂಮಿ, ಪ್ರಾಣಿ–ಪಕ್ಷಿಗಳನ್ನು ಹೆಚ್ಚಾಗಿ ಬಳಸಲಾಗಿದೆ. ಅದರಲ್ಲೂ ಬಿರುದಾವಳಿಗಳಲ್ಲಿ ಭೂಮಿಗೆ ವಿಶೇಷ ಆದ್ಯತೆ ನೀಡಿರುವುದು ಗಮನಾರ್ಹ. ಆಡಳಿತ ಮತ್ತು ಆಳ್ವಿಕೆಗೆ ಮುಖ್ಯವಾಗಿ ಬೇಕಾಗಿರುವುದು ಭೂಮಿ. ಅದರ ವಿಸ್ತಾರ ಎಷ್ಟೇ ಇರಲಿ, ಆದರೆ ಅದು ಆಡಳಿತಕ್ಕೆ ಭದ್ರ ಬುನಾದಿ. ಬಿರುದುಗಳಲ್ಲಿ

ಉಲ್ಲೇಖವಾಗುವ ವಿವರವನ್ನು ಗಮನಿಸಿದರೆ ಅರಸ, ಮಾಂಡಲಿಕರು ವರ್ಣಿಸಿಕೊಳ್ಳುವ ಪರಿ ಅಪರಿಮಿತ. ಅವುಗಳಲ್ಲಿ ಪೂರ್ವಪಶ್ಚಿಮ ಸಮುದ್ರಾಧಿಪತಿ, ಪೂರ್ವಪಶ್ಚಿಮದಕ್ಷಿಣೋತ್ತರಸಮುದ್ರೈಕನಾಯಕ, ದಕ್ಷಿಣಸಮುದ್ರಾಧಿಪತಿ, ಚತುಸಮುದ್ರಾಧಿಪತಿ, ದಕ್ಷಿಣಸಾರ್ವಭೌಮ, ಪೂರ್ವಪಶ್ಚಿಮದಕ್ಷಿಣೋತ್ತರ ಸಮುದ್ರಾಧಿಪತಿ ಮುಖ್ಯವಾಗಿವೆ. ಇವುಗಳಲ್ಲದೆ ಪ್ರೌಢದೇವರಾಯನು ಹೊಂದಿದ್ದ ಕಂಡನಾಡುಕೊಂಡು ಕೊಂಡನಾಡಕೊಡದ ಪೂರ್ವಪಶ್ಚಿಮದಕ್ಷಿಣೋತ್ತರ ಚತುಸಮುದ್ರಾಧಿಪತಿ ಬಿರುದು ಅವನ ಶೌರ್ಯಪರಾಕ್ರಮವಲ್ಲದೆ ಅವನು ದಕ್ಷಿಣ ಭಾರತದ ಬಹುಭಾಗವನ್ನು ತನ್ನ ತೆಕ್ಕೆಗೆ ಪಡೆದಿದ್ದನೆಂಬುದು ಸ್ಪಷ್ಟವಾಗುತ್ತದೆ. ಭೂಮಿಯಲ್ಲದೆ ಭೂವಿ'ಏಯ ಮೇಲಿನ ಸಮುದ್ರಗಳ ಮೇಲೂ ತಮ್ಮ ಹಿಡಿತ ಹಾಗೂ ಸಮುದ್ರಗಳನ್ನು ಗಡಿಯನ್ನಾಗಿ ಮಾಡಿಕೊಂಡ ವಿವರಗಳು ಈ ಬಿರುದುಗಳಲ್ಲಿ ವ್ಯಕ್ತವಾಗುತ್ತವೆ.

ಶಕ್ತಿ-ಸಾಮರ್ಥ್ಯಗಳ ಹೋಲಿಕೆ

ಬಿರುದುಗಳಲ್ಲಿ ಕಾಣಬರುವ ಸಂಗತಿಗಳಲ್ಲಿ ತಮ್ಮ ಬಲಾಢ್ಯತೆಯನ್ನು ಶಕ್ತಿಶಾಲಿಯಾದ ಪ್ರಾಣಿ-ಪಕ್ಷಿಗಳಿಗೆ ಹೋಲಿಸಿಕೊಂಡಿರುವುದು. ಅವುಗಳೆಂದರೆ ಗಂಡಭೇರುಂಡ, ಭೂಪಾಲಭುಜಂಗ, ಅಶ್ವಪತಿ, ಗಜಪತಿ, ಗಜೌಘಗಂಡಬೇರುಂಡ, ಗಜಬೇಟೆಕಾರ, ಗಂಡರಗೂಳಿ, ಧರಣೀವರಹ, ದುಷ್ಟಶಾರ್ದೂಲಮರ್ಧನ ಮುಖ್ಯವಾಗಿವೆ. ಇವುಗಳಿಂದ ತಮ್ಮ ಶಕ್ತಿಸಾಮರ್ಥ್ಯವನ್ನು ಬಲಾಢ್ಯ ಪ್ರಾಣಿ ಪಕ್ಷಿಗಳಿಗೆ ಹೋಲಿಸಿಕೊಳ್ಳುವ ಪ್ರವೃತ್ತಿ ಪರಂಪರಾಗತವಾಗಿ ಬಂದುದು ಇವುಗಳಿಂದ ತಿಳಿದುಬರುತ್ತದೆ.

ಭಾಷೆ

ಬಿರುದಾವಳಿಗಳ ಭಾಷಾ ಬಳಕೆಯನ್ನು ಗಮನಿಸಿದಾಗ ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಪ್ರಾದೇಶಿಕ ಹಿನ್ನೆಲೆಯಲ್ಲಿ ಮಾಡಿರುವುದನ್ನು ಕಾಣಬಹುದು. ಪ್ರೌಢದೇವರಾಯನು ಭಾಷಾ ತಿಲಂಗಿ ಎಂಬ ಬಿರುದನ್ನು ಹೊಂದಿದ್ದನು. ಅಲ್ಲದೆ ಅವನು ತಮಿಳಿನ ಈಳಂ ತಿರೈಕೊಂಡ, ಎಮ್ಮಂಡಲಮುಮ್ ತಿರೈಕೊಂಡ, ಗಜವೆಟ್ಟೈಕಾರನ್, ಗಜವೇಟ್ಟೈಕಣ್ಡ, ಗಜವೇಟ್ಟೈಖಂಡು, ಕೆಸವೆಟ್ಟೈಕಕಂಡುರುಳಿಯ ಎಂಬ ಬಿರುದುಗಳನ್ನು ಹೊಂದಿದ್ದನು. ಇದರಿಂದ ಅಂದಿನ ಅರಸರು ಭಾಷಾಗಡಿ ದಾಟಿದ್ದರೆಂಬುದು ದೃಢವಾಗುತ್ತದೆ.

ದೇವರು ಮತ್ತು ಧರ್ಮ

ಸಂಗಮ ಅರಸರು ತಮ್ಮ ಕಾರ್ಯವೈಖರಿಗಳ ಹಿನ್ನೆಲೆಯಲ್ಲಿ ತಮ್ಮನ್ನು ದೇವರು ಮತ್ತು ಧರ್ಮಗಳಿಗೆ ನೀಡಿದ್ದ ಆದ್ಯತೆಯನ್ನು ಬಿರುದುಗಳಲ್ಲಿ ಕಾಣಬಹುದು. ಅವುಗಳಲ್ಲಿ ರಾಜಪರಮೇಶ್ವರ, ಗಜಮುಖಭೀಮ, ರಣಮುಖರಾಮ, ಉದಯಬಾಲಭಾಸ್ಕರ, ಹಿಂದೂರಾಯಸುರತ್ರಾಣ, ಧರ್ಮರತ್ನಾಕರ, ಧರ್ಮಚಾರಿತ್ರ್ಯ, ಸತ್ಯಹರಿಶ್ಚಂದ್ರ, ಪರಮೇಶ್ವರ, ಶೈವಾಗಮಸಾರಸಂಪನ್ನ, ಸದ್ಧರ್ಮಚಾರಿತ್ರ್ಯ ಮುಖ್ಯವಾಗಿವೆ. ಇವುಗಳಿಂದ ಅರಸರು ತಮ್ಮನ್ನು ದೇವರಿಗೆ, ಪೌರಾಣಿಕ ಪುರುಷರಿಗೆ ಹೋಲಿಸಿಕೊಳ್ಳುವ ಪರಿಪಾಠ ಮುಂದುವರಿಸಿದ್ದುದನ್ನು ಕಾಣಬಹುದು. ಹಾಗೆಯೇ ಅರಸರ ಧರ್ಮಪರಿಪಾಲನೆಯನ್ನು ಈ ಬಿರುದಾವಳಿಗಳಿಂದ ತಿಳಿಯಬಹುದಾಗಿದೆ.

ಸಾಮ್ರಾಜ್ಯ ವಿಸ್ತಾರ

ಸಾಮ್ರಾಜ್ಯ ವಿಸ್ತರಣೆಯು ಅರಸರ ಬಹುಮುಖ್ಯ ಧ್ಯೇಯವಾಗಿತ್ತು. ಆದುದರಿಂದಲೇ ತಮ್ಮ ಗಡಿಗಳನ್ನು ಸಮುದ್ರಗಳ ಅಂಚಿನವರೆಗೂ ವಿಸ್ತರಿಸುವ ಮಹತ್ವಾಕಾಂಕ್ಷೆಯನ್ನು ಎಲ್ಲ ಅರಸರೂ ಹೊಂದಿದ್ದರು. ಈ ಹಿನ್ನೆಲೆಯಲ್ಲಿಯೇ ಚತುಸಮುದ್ರಾಧೀಶ್ವರ, ಪೂರ್ವಪಶ್ಚಿಮದಕ್ಷಿಣೋತ್ತರ ಸಮುದ್ರಾಧೀಶ್ವರ ಎಂಬ ಬಿರುದುಗಳನ್ನು ಇಟ್ಟುಕೊಂಡಿದ್ದರು. ಅಂತೆಯೇ ದಕ್ಷಿಣ ಭಾರತದ ಭೂಭಾಗದ ಸ್ವರೂಪದ ಹಿನ್ನೆಲೆಯಲ್ಲಿ ಅರಬ್ಬೀಸಮುದ್ರ, ಹಿಂದೂಮಹಾಸಾಗರ ಮತ್ತು ಬಂಗಾಳಕೊಲ್ಲಿಗಳ ನಡುವಿನ ಭೂಭಾಗ ಹಾಗೂ ಸಮುದ್ರಗಳ ಅಧಿಪತಿ ಎಂಬುದಾಗಿ ಕರೆದುಕೊಂಡಿದ್ದರು.

ಒಟ್ಟಿನಲ್ಲಿ ಸಂಗಮ ಮನೆತನದ ಅರಸರು ಹೊಂದಿದ್ದ ಬಿರುದಾವಳಿಗಳು ಆಡಳಿತ ಸಂಗತಿಗಳ ಜೊತೆಗೆ ಅಂದಿನ ಸಾಂಸ್ಕೃತಿಕ ಬದುಕನ್ನು ಬಿಚ್ಚಿಡುವ ಶಕ್ತಿಯನ್ನೂ ಹೊಂದಿವೆ. ಇವು ಆಕರಗಳಾಗಿ ಆಯಾಯ ಅರಸರ ಚರಿತ್ರೆಯನ್ನು ಅರಿಯಲು ಮಹತ್ವದ ಕುರುಹುಗಳನ್ನು ಈ ಮೇಲಿನ ಬಿರುದಾವಳಿಗಳು ನೀಡುತ್ತವೆಯೆಂದರೆ ಅತಿಶಯೋಕ್ತಿಯಾಗಲಾರದು.

ಸಂಗಮ ಅರಸರ ಬಿರುದಾವಳಿಗಳನ್ನು ಅರಸರಾದಿಯಾಗಿ ಈ ಕೆಳಗೆ ನೀಡಲಾಗಿದೆ. ಇವು ಅವರ ಬಗ್ಗೆ ಹೆಚ್ಚಿನ ಅಧ್ಯಯನಕ್ಕೆ ಸಹಕಾರಿಯಾಗಿವೆ.

ಹರಿಹರ (ಕ್ರಿ.ಶ. 1336–1356)

ಅರಿರಾಯವಿಭಾಡ: ಅರಿ–ಶತ್ರು, ರಾಯ–ಅರಸ, ವಿಭಾಡ–ನಾಶಪಡಿಸಿದವನು ಎಂಬ ಅರ್ಥಗಳನ್ನು ಹೊಂದಿವೆ. ಅರಿರಾಯ ವಿಭಾಡವೆಂಬುದು ಶಕ್ತಿಶಾಲಿಯೂ, ಬಲಶಾಲಿಯೂ ಆದ ಅರಸರನ್ನು ನಾಶಮಾಡುವವನು (ಕವಿವಿ, ಶಾಸಂ. 9, ಪು. 316).

ಪೂರ್ವಪಶ್ಚಿಮ ಸಮುದ್ರಾಧಿಪತಿ/ಪೂರ್ವಪಶ್ಚಿಮದಕ್ಷಿಣಸಮುದ್ರಾಧಿಪತಿ: ದಕ್ಷಿಣ ಭಾರತದ ಭೌಗೋಳಿಕ ಲಕ್ಷಣಗಳನ್ನು ಗಮನಿಸಿದರೆ ಪೂರ್ವಕ್ಕೆ ಬಂಗಾಳಕೊಲ್ಲಿ, ಪಶ್ಚಿಮಕ್ಕೆ ಅರಬ್ಬೀ ಸಮುದ್ರಗಳಿರುವುದು ತಿಳಿದ ಸಂಗತಿ. ಒಂದನೇ ಹರಿಹರನು ಈ ಎರಡೂ ಸಮುದ್ರಗಳ ನಡುವಿನ ಬಹುಪಾಲು ಭಾಗವನ್ನು ತನ್ನ ಹಿಡಿತಕ್ಕೆ ತಂದುಕೊಂಡ ವಿಚಾರವನ್ನು ಈ ಬಿರುದು ವ್ಯಕ್ತಪಡಿಸುತ್ತದೆ (*ಅದೇ;* ಎಕ–12, ಪು. 416).

ಭಾಷೆಗೆ ತಪ್ಪುವ ರಾಯರ ಗಂಡ: ಆಡಿದ ಮಾತಿಗೆ ತಪ್ಪುವ ಅರಸರ ಅಧಿಪತಿ ಅಥವಾ ಒಡೆಯ ಎಂಬುದೇ ಆಗಿದೆ. ಇಲ್ಲಿ ಭಾಷೆಯು ಆಡುವ ಮಾತಾದರೆ, ಗಂಡ ಎಂಬುದು ಒಡೆಯ, ಅರಸ ಎಂಬ ಅರ್ಥವನ್ನು ನೀಡುತ್ತವೆ. ಮನುಷ್ಯನಾಡುವ ಮಾತು ಅಥವಾ ಭಾಷೆಯು ಅಂದು ಬೀರಿದ್ದ ಪ್ರಭಾವವನ್ನು ಇದರಿಂದ ತಿಳಿಯಬಹುದಾಗಿದೆ. ಒಮ್ಮೆ ಆಡಿದ ಮಾತು ಅಥವಾ ಕೊಟ್ಟ ಮಾತಿಗೆ ನಡೆದುಕೊಂಡು ಹೋಗುವುದು ಸಹಜ ಧರ್ಮವಾಗಿದ್ದಿತು. ಆದರೆ ಆಡಿದ ಮಾತನ್ನು ನಿರಾಕರಿಸುವ, ತಪ್ಪುವ ಅರಸ/ಮಾಂಡಲಿಕರು ಇರುವುದು ಆಡಳಿತದಲ್ಲಿ ಸಾಮಾನ್ಯ. ಅಂತೆಯೇ ಮಾತಿಗೆ ತಪ್ಪುವ ರಾಯರನ್ನು ಮಟ್ಟಹಾಕುವ ಶಕ್ತಿಯುತ ಅರಸ *(ಅದೇ).*

ಮಹಾಮಂಡಲೇಶ್ವರ: ಇದು ಪದವಿಯೂ ಹೌದು, ಬಿರುದೂ ಹೌದು. ಮಹಾಮಂಡಲೇಶ್ವರದ ಅರ್ಥ ವಿಸ್ತಾರವಾದ, ವಿಶಾಲವಾದ ರಾಜ್ಯ (ಪ್ರದೇಶ) ಒಡೆಯನೆಂಬುದಾಗಿದೆ. ಮಂಡಲವೆಂಬುದು ಆಡಳಿತದ ಒಂದು ಘಟಕ. ಅನೇಕ ಆಡಳಿತ ಘಟಕಗಳನ್ನು ಒಳಗೊಂಡ ರಾಜ್ಯ. ಇದನ್ನು ಸಾಮ್ರಾಜ್ಯವೆಂತಲೂ ಕರೆಯಬಹುದು *(ಅದೇ).*

ಮಹಾರಾಜಾಧಿರಾಜ: ಮಹಾರಾಜ, ರಾಜರ ಅಧಿಪತಿ ಎಂಬುದಾಗಿದೆ. (H of K, p. 330).

ಮಹಾರಾಯ: ಮಹಾರಾಯ ಎಂಬುದು ಮಹಾರಾಜಾಧಿರಾಜ ಬಳಕೆಗೊಂಡಂತೆ ರಾಯರ ರಾಯ, ರಾಜರ ಅಧಿಪತಿ ಎಂಬ ಅರ್ಥವನ್ನೇ ಅಭಿವ್ಯಕ್ತಿಸುತ್ತದೆ. ಹರಿಹರನು ಹೊಂದಿದ್ದ ಮಹಾರಾಜಾಧಿರಾಜ, ರಾಜಪರಮೇಶ್ವರ, ವೀರಪ್ರತಾಪ ಮತ್ತು ಮಹಾರಾಯನೆನ್ನುವ ರಾಜತ್ವದ ಬಿರುದುಗಳಿಂದ ಹರಿಹರನ ಸ್ವತಂತ್ರ ಆಳ್ವಿಕೆ, ವಿಶಾಲ ಸಾಮ್ರಾಜ್ಯ ಹಾಗೂ ಶೌರ್ಯ ಪರಾಕ್ರಮಗಳು ವ್ಯಕ್ತಗೊಳ್ಳುತ್ತವೆ *(ಅದೇ).*

ರಾಜಪರಮೇಶ್ವರ: ಇದು ಮಹಾರಾಜಾಧಿರಾಜ ಬಿರುದಿನಂತೆಯೇ ಎಲ್ಲ ಅರಸರ ಶಾಸನಗಳಲ್ಲಿ ವ್ಯಕ್ತವಾಗಿದೆ. ಜಗತ್ತಿಗೆ ಈಶ್ವರ ಎಷ್ಟು ಮುಖ್ಯ ಹೇಗೋ ಅರಸರಿಗೆ ಪರಮೇಶ್ವರನಾಗಿ ಬಳಕೆಯಾಗಿದೆ. ಇದನ್ನು ಹರಿಹರನಿಂದ ಮೊದಲ್ಗೊಂಡು ವಿಜಯನಗರದ ಎಲ್ಲ ಅರಸರೂ ತಮ್ಮ ಶಾಸನಗಳಲ್ಲಿ ಹಾಕಿಕೊಂಡಿದ್ದಾರೆ *(ಅದೇ).*

ವೀರಪ್ರತಾಪ ಚಕ್ರವರ್ತಿ: ಕೀರ್ತಿ ಪ್ರತಿಷ್ಠೆಗಳುಳ್ಳ ಅಪ್ರತಿಮ ಶೂರನಾದ ಅರಸ (ಅಟಲಕಗುಂಡು ಶಾಸನ, ಕರ್ನೂಲ್ ಜಿಲ್ಲೆ; I.V.R., No.2).

1ನೇ ಬುಕ್ಕರಾಯ (ಕ್ರಿ.ಶ.1356–1377)

ಅರಿರಾಯ ವಿಭಾಡ: ಅರಿ–ಶತ್ರು, ರಾಯ–ಅರಸ, ವಿಭಾಡ–ನಾಶಪಡಿಸಿದವನು. ಅರಿರಾಯ ವಿಭಾಡವೆಂಬುದು ಶಕ್ತಿಶಾಲಿಯೂ, ಬಲಶಾಲಿಯೂ ಆದ ಅರಸರನ್ನು ನಾಶ ಮಾಡುವವನು (EC-11, p.2).

ಚತುಸಮುದ್ರಾಧಿಪತಿ (ಪೂರ್ವಪಶ್ಚಿಮ ಉತ್ತರದಕ್ಷಿಣ ಚತುಸಮುದ್ರಾಧಿಪತಿ): ಹರಿಹರನ ಕಾಲದಲ್ಲಿ ಅರಬ್ಬೀಸಮುದ್ರ ಮತ್ತು ಬಂಗಾಳಕೊಲ್ಲಿಗಳು ವಿಜಯನಗರದ ಹಿಡಿತದಲ್ಲಿದ್ದರೆ ಬುಕ್ಕರಾಯನ ಕಾಲದ ಹೊತ್ತಿಗೆ ದಕ್ಷಿಣದ ಹಿಂದೂ ಮಹಾಸಾಗರದಿಂದ ಉತ್ತರದ ಕೃಷ್ಣಾನದಿ ತೀರದವರೆಗೂ ಸಾಮ್ರಾಜ್ಯವನ್ನು ವಿಸ್ತರಿಸಿದ್ದುದನ್ನು ಗಮನಿಸಬಹುದು. ಇಲ್ಲಿ

ಕೃಷ್ಣಾ ನದಿಯನ್ನು ಸಮುದ್ರಕ್ಕೆ ಹೋಲಿಸಿರುವುದನ್ನು ಗಮನಿಸಬೇಕು. ಕೃಷ್ಣಾ ನದಿ ತನ್ನ ಆಳ, ವಿಸ್ತಾರದಲ್ಲಿ ಸಮುದ್ರದಂತೆ ಇತ್ತೆಂಬುದು ಈ ಬಿರುದಿನ ಹಿಂದಿರುವ ತಾತ್ಪರ್ಯ (SII-ix, No.410).

ಪೂರ್ವಪಶ್ಚಿಮ ಸಮುದ್ರಾಧಿಪತಿ: ಪೂರ್ವ, ಪಶ್ಚಿಮದಲ್ಲಿರುವ ಸಮುದ್ರಗಳ ಒಡೆಯ (EC-11, p.2).

ಭಾಷೆಗೆತಪ್ಪುವರಾಯರಗಂಡ: ಆಡಿದ ಮಾತಿಗೆ ತಪ್ಪುವ ಅರಸರ ಅಧಿಪತಿ ಅಥವಾ ಒಡೆಯ (ಎ.ಕ.12, ಪು.457; EC-11, p. 2).

ಮಹಾಮಂಡಲೇಶ್ವರ: ಇದು ಪದವಿಯೂ ಹೌದು, ಬಿರುದೂ ಹೌದು. ಮಹಾಮಂಡಲ ಅಂದರೆ ವಿಸ್ತಾರವಾದ, ವಿಶಾಲವಾದ ರಾಜ್ಯ(ಪ್ರದೇಶ) ಒಡೆಯ. ಮಹಾಮಂಡಲದ ಒಡೆಯ *(ಅದೇ).*

ಯಾದವಾನ್ವಯ: ಯಾದವ ಮನೆತನದವನು (ಕವಿವಿ ಶಾಸಂ., ಸಂ.3, ಪು. 240).

ಶ್ರೀವೀರಸಂಗಮೇಶ್ವರರಾಯಬಾಹು: ಸಂಗಮ ಮನೆತನದ ಅರಸ, ಪರಾಕ್ರಮಿಯಾದವನು (EC-iii, Malavalli-22).

ವೈದಿಕಮಾರ್ಗಪ್ರವರ್ತಕ: ಸಾಯಣ ಮತ್ತು ಮಾಧವರ ನೇತೃತ್ವದಲ್ಲಿ ವೇದಗಳಿಗೆ ಭಾಷ್ಯವನ್ನು ಬರೆಯಿಸಿದ ಕಾರಣ ಒಂದನೇ ಬುಕ್ಕನು ವೇದಮಾರ್ಗ ಪ್ರವರ್ತಕನಾಗಿದ್ದಾನೆ. ಹಾಗೆಯೇ ಒಂದನೇ ದೇವರಾಯನು ವೇದಮಾರ್ಗವನ್ನು ಪ್ರತಿಷ್ಠಾಪಿಸಿ ವೇದಮಾರ್ಗ ಪ್ರತಿಷ್ಠಾಪನಾಚಾರ್ಯನೆಂದೂ ಕರೆದುಕೊಂಡಿದ್ದಾನೆ. ಈ ಹಿನ್ನೆಲೆಯಲ್ಲಿ ವೇದ, ಉಪನಿಷತ್ತು ಮೊದಲಾದ ಸಾಹಿತ್ಯಗಳ ಪೋಷಕರೂ ಆಗಿದ್ದರೆಂಬುದು ಸ್ಪಷ್ಟವಾಗುತ್ತದೆ (H of. K., p. 337),

ಹಿಂದೂರಾಯಸುರತ್ರಾಣ: ಮುಸ್ಲಿಂ ರಾಜವಂಶಗಳಲ್ಲಿ ಅರಸನನ್ನು ಸುಲ್ತಾನ ಎಂದು ಕರೆಯಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಹಿಂದೂ ಅರಸರಲ್ಲಿ ಅಥವಾ ಆಳರಸರಿಗೆ ಸುಲ್ತಾನನಾದವನು (V.I., Vol-2, KN. 502).

ಹೊನ್ನಕೊಟ್ಟುಕುದುರೆಯಕೊಂಬಮಾಂಡಲಿಕರಗಂಡ: ಹೊನ್ನು ಅಂದಿನ ಚಿನ್ನದ ನಾಣ್ಯವಾದರೆ, ಈ ಹೊನ್ನನ್ನು ಅರಬ್ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದ ಕುದುರೆಗಳಿಗೆ ಪ್ರತಿಯಾಗಿ ನೀಡುತ್ತಿದ್ದುದು ವ್ಯಾಪಾರ ವಾಣಿಜ್ಯಗಳನ್ನು ಸ್ಪಷ್ಟಪಡಿಸುತ್ತದೆ. ಕುದುರೆಗಳಿಗೆ ಅಂದು ತುಂಬಾ ಬೇಡಿಕೆಯಿದ್ದು, ಕುದುರೆಗೆ ಪ್ರತಿಯಾಗಿ ಹೊನ್ನು ಎಂಬ ಚಿನ್ನದ ನಾಣ್ಯವನ್ನೇ ನೀಡುತ್ತಿದ್ದರೆಂಬುದು ಈ ಮೇಲಿನ ಬಿರುದಿನಿಂದ ಸ್ಪಷ್ಟ ವಾಗುತ್ತದೆ. (EC-xi, Dg.120).

2ನೇ ಹರಿಹರ (ಕ್ರಿ.ಶ. 1377–1404)

ಅರಿರಾಯವಿಭಾಡ: ಅರಿ–ಶತ್ರು, ರಾಯ–ಅರಸ, ವಿಭಾಡ–ನಾಶಪಡಿಸಿದವನು ಎಂಬ ಅರ್ಥಗಳನ್ನು ಹೊಂದಿವೆ. ಅರಿರಾಯ ವಿಭಾಡವೆಂಬುದು ಶಕ್ತಿಶಾಲಿಯೂ, ಬಲ ಶಾಲಿಯೂ ಆದ ಅರಸರನ್ನು ನಾಶಮಾಡುವವನು. (ಎ.ಕ.12, ಪು. 455).

ಅಶ್ವಪತಿ: ಇಮ್ಮಡಿ ಹರಿಹರ, ಪ್ರೌಢದೇವರಾಯರು ಅಶ್ವಗಳ ಒಡೆಯರಾಗಿದ್ದುದನ್ನು ಅಶ್ವಪತಿ ಬಿರುದು ತಿಳಿಸುತ್ತದೆ (EC-viii, Sb.103).

ಉಭಯರಾಯವಿಗ್ರಹವಿನೋದ: ಉಭಯ ಅರಸರನ್ನು ಕದನದಲ್ಲಿ ಜಯಿಸಿದವನು (EC-vii, Mu.89; iii, Mi20).

ಏಕಾಂಗವೀರ: ಯುದ್ಧಗಳಲ್ಲಿ ತನ್ನ ಪಡೆಯ ಮುಂದಾಳತ್ವ ವಹಿಸಿ ಏಕಾಂಗವೀರನಾಗಿ ಹೆಸರುವಾಸಿಯಾಗಿದ್ದವನು *(ಅದೇ).*

ಕಠಾರಿತ್ರಿನೇತ್ರ : ಕಠಾರಿಯಲ್ಲಿ ವಿಶೇಷವಾಗಿ ಪರಿಣತಿ ಹೊಂದಿ ಕಠಾರಿ ತ್ರಿನೇತ್ರನಾಗಿಯೂ, ತ್ರಿನೇತ್ರನೆಂದರೆ ಮೂರು ಕಣ್ಣುಳ್ಳ ಶಿವ. ಕಠಾರಿಯ ಪರಿಣತಿಯಲ್ಲಿ ಮೈಯೆಲ್ಲಾ ಕಣ್ಣಾಗಿದ್ದುದನ್ನು ನೆನಪಿಸುತ್ತದೆ. ಇದನ್ನು ಪ್ರೌಢದೇವರಾಯನೂ ಹೊಂದಿದ್ದನು (EC,-vii, Mu.89).

ಕರ್ನಾಟಕ ವಿದ್ಯಾವಿಲಾಸ: ಕರ್ನಾಟಕ, ಕನ್ನಡ ಸಾಹಿತ್ಯಕ್ಕೆ ನೀಡಿದ ಆಶ್ರಯ–ಪೋಷಣೆಗಳಿಂದ ಬಂದ ಬಿರುದಿದು. ಅವನ ಜ್ಞಾನ, ತಿಳುವಳಿಕೆಗಳನ್ನು ಇದು ಬಿಂಬಿಸುತ್ತದೆ. (ಕ.ಚ–3, ಪು. 26).

ಗಜಪತಿ: ಆನೆಗಳ ಒಡೆಯ. ವಿಜಯನಗರ ಸೇನೆಯಲ್ಲಿ ಆನೆ ಮತ್ತು ಕುದುರೆಗಳಿಗೆ ವಿಶೇಷ ಆದ್ಯತೆಯಿದ್ದುದೂ ಇದನ್ನು ಧರಿಸಲು ಕಾರಣವಾಗಿದೆ (EC-viii, Sb.103).

ಚತುಸಮುದ್ರಾಧಿಪತಿ: ನಾಲ್ಕು ಸಮುದ್ರಗಳ ಒಡೆಯ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣದ ಸಮುದ್ರಗಳ ಅಧಿಪತಿಯಾದವನು (ಎ.ಕ.12, ಪು. 455).

ಚೋಳರಾಯಅಂಧಕಾರಘರ್ಮಕಿರಣ: ಚೋಳರು ಪ್ರಾಚೀನ ಕಾಲದಿಂದಲೂ ತಮಿಳುನಾಡಿನ ಅಧಿಪತಿಗಳಾಗಿ ಆಳ್ವಿಕೆ ನಡೆಸಿದವರು. ಈ ಮನೆತನವು ವಿಜಯನಗರ ಕಾಲದ ಹೊತ್ತಿಗೆ ಅವನತಿ ಹಾದಿಯನ್ನು ಹಿಡಿದಿದ್ದಿತು. ಇವರನ್ನು ಪುನಃ ಅಧಿಕಾರಕ್ಕೆ ತರುವ ಪ್ರಯತ್ನವನ್ನು ವಿಜಯನಗರದ ಅನೇಕ ಅರಸರು ಪ್ರಯತ್ನಿಸಿರುವುದನ್ನು ಈ ಬಿರುದಿನಲ್ಲಿ ಕಾಣಬಹುದು. ಚೋಳರಾಯನು ಅವನತಿ ಹೊಂದಿ ಅಧಿಕಾರದಿಂದ ಹಿಂದೆ ಸರಿದು ಅಂಧಕಾರ ಅಂದರೆ ಕತ್ತಲೆಯತ್ತ ಸರಿದಿದ್ದರು. ಅಂತಹ ಸಂದರ್ಭದಲ್ಲಿ ಘರ್ಮಕಿರಣವಾಗಿ ಅಂದರೆ ಗ್ರೀಷ್ಮ ಋತುವಿನ ಬೆಳಕಿನ ಕಿರಣವಾಗಿ ಬಂದು ಕಾಪಾಡಿ ಈ ಬಿರುದನ್ನು ಧರಿಸಿದ್ದನು (SII-XX No.231).

ಚೋಳರಾಯಸ್ಥಾಪನಾಚಾರ್ಯ: ದಕ್ಷಿಣದ ಚೋಳರು ತಮ್ಮ ಆಳ್ವಿಕೆಯ ಅಧಿಕಾರದಿಂದ ಹಿಂದೆ ಸರಿದು ಅವಮಾನ ಹಾಗೂ ಅವಸಾನದ ಅಂಚನ್ನು ತಲುಪಿದಾಗ ಎರಡನೇ ಹರಿಹರನು ಅವರಿಗೆ ಬಾಳಲೋಚನವಾಗಿ ಅಂದರೆ ಕಣ್ಣಾಗಿ ನೆರವಿಗೆ ಬಂದಿದ್ದುದನ್ನು ಚೋಳರಾಯ ಹೇಳಾಪಹರಣ ಬಾಳಲೋಚನವು ವ್ಯಕ್ತಪಡಿಸಿದರೆ ಪ್ರೌಢದೇವರಾಯನ ಕಾಲಕ್ಕೆ ಚೋಳರ ಸ್ಥಿತಿ ಮತ್ತಷ್ಟು ಬಿಗಡಾಯಿಸಿದ್ದಿತು. ಇದನ್ನು ಮನಗಂಡ ಪ್ರೌಢ ದೇವರಾಯ ಪುನಃ ಚೋಳರಿಗೆ ಅಧಿಕಾರ ನೀಡಿದ ವಿವರ ಈ ಬಿರುದಿನಿಂದ ಗೊತ್ತಾಗುತ್ತದೆ (V.I.,Vol-2, KN. 695).

ಚೋಳರಾಯಹೇಳಾಪಹರಣ ಬಾಳಲೋಚನ: ದಕ್ಷಿಣದ ಚೋಳರು ತಮ್ಮ ಆಳ್ವಿಕೆಯ ಅಧಿಕಾರದಿಂದ ಹಿಂದೆ ಸರಿದು ಅವಮಾನ ಹಾಗೂ ಅವಸಾನದ ಅಂಚನ್ನು ತಲುಪಿದ್ದರು. ಆಗ 2ನೇ ಹರಿಹರನು ಅವರಿಗೆ ಬಾಳಲೋಚನವಾಗಿ ಅಂದರೆ ಕಣ್ಣಾಗಿ ನೆರವಿಗೆ ಬಂದನು. ಇದರಿಂದ ಪ್ರಾಚೀನ ಅರಸು ಮನೆತನಗಳಿಗೆ ವಿಜಯನಗರದ ಅರಸರು ನೀಡಿದ್ದ ಮಾನ್ಯತೆ ವ್ಯಕ್ತವಾಗುತ್ತದೆ. (ಅದೇ, KN. 920).

ತುರುಷ್ಕರಾಯಶಿರಾಹಕಂಡುಕಕ್ರೀಡಾವಿನೋದ: ಪ್ರಾಚೀನ ಕಾಲದಲ್ಲಿ ಅರಸರಿಗೆ ಶತ್ರುಗಳ ವಿರುದ್ಧ ಹೋರಾಡಿ ಅವರ ಶಿರಗಳನ್ನು ಚೆಂಡಾಡುತ್ತಿದ್ದುದು ಒಂದು ಬಗೆಯ ಕ್ರೀಡೆಯಾಗಿದ್ದಿರಬೇಕು. 'ತುರುಷ್ಕರಾಯ ಶಿರಾಹ ಕಂಡುಕ ಕ್ರೀಡಾ ವಿನೋದ'ವು ಬಹಮನಿಯವರೊಂದಿಗೆ ನಡೆದ ಯುದ್ಧದಲ್ಲಿ ಸೈನಿಕರ ತಲೆಗಳನ್ನು ಚೆಂಡಾಡಿದರೆಂಬುದಾಗಿ ಹೇಳಿದೆ. ಇದು ಅಂದು ಕೈಗೊಂಡ ನರಹತ್ಯೆಯ ಜೊತೆಗೆ ಬಹಮನಿಯವರೊಂದಿಗೆ ನಿರಂತರವಾಗಿ ನಡೆಯುತ್ತಿದ್ದ ಯುದ್ಧಗಳ ಪ್ರತೀಕವೂ ಆಗಿದೆ (SII-xx No. 231).

ದನುರ್ದರಮಧ್ಯಮಪಾಂಡವರಾಯ: ಇಮ್ಮಡಿ ಹರಿಹರನು ಶೌರ್ಯ, ಪರಾಕ್ರಮದಲ್ಲಿ ಅರ್ಜುನನಿಗೆ ಹೋಲಿಸಿಕೊಂಡಿದ್ದಾನೆ (V.I.,Vol-2; KN. 475).

ದುಷ್ಟಶಾರ್ದೂಲಮರ್ಧನ: ದುಷ್ಟ ಹುಲಿಗಳಂತಿರುವ ಶತ್ರುಗಳನ್ನು ಸಂಹರಿಸಿದವನು (ಎ.ಕ. 5, ಪು. 635).

ನರಪತಿ: ನರಪತಿ ಎಂದರೆ ಜನರ ಒಡೆಯ (EC-viii, Sb.103).

ಪಂಚಮುಖವಿಭಾಡ : ಐದು ಮುಖಗಳನ್ನು ನಾಶಮಾಡುವವನು (ಎ.ಕ.7, 305)

ಪಡವಾರವಂಶೋದ್ಭವ: ಪಡವಾರ ವಂಶದಲ್ಲಿ ಜನಿಸಿದವನು; ಪಡ, ಪಡೆ ಎಂದರೆ ಸೇನಾ ವಿಭಾಗಗಳು. ಸೇನೆಯ ಮುಖಂಡ, ಸೇನೆಯಲ್ಲಿ ಹೊಸ ಇಮ್ಮಡಿ ಹರಿಹರನು ಈ ಬಿರುದನ್ನು ಧರಿಸಿದ್ದನು (EC-vii, Mu. 89; iii, Mi-20).

ಪರರಾಯಭಯಂಕರ: ಶತ್ರು ಅರಸರಿಗೆ ಭಯಂಕರನಾಗಿರುವವನು (ಎ.ಕ.5, ಪು. 635).

ಪರರಾಷ್ಟ್ರಪಿತಾಮಹ: ಇತರೆ ರಾಜ್ಯಗಳನ್ನು ಸ್ಥಾಪಿಸಿದ ಕೀರ್ತಿಯ ಪ್ರತೀಕವಿದು. ಬಿರುದುಗಳಲ್ಲಿ ಉಲ್ಲೇಖಗೊಂಡ ಸಂಗತಿಗಳನ್ನು ತೆಗೆದುಕೊಂಡರೆ ಚೋಳ, ಪಾಂಡ್ಯ, ಬಹಮನಿ, ಮಗಧ ಮೊದಲಾದವರನ್ನು ರಕ್ಷಿಸಲಾಗಿದೆ. ಇದರಿಂದ ಈ ಬಿರುದು ಅನ್ವಯವಾಗುತ್ತದೆ (EC-vii, Mu.89; iii, Mi20).

ಪೂರ್ವಪಶ್ಚಿಮದಕ್ಷಿಣೋತ್ತರ ಸಮುದ್ರೈಕನಾಯಕ: ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರದಲ್ಲಿರುವ ನಾಲ್ಕು ಸಮುದ್ರಗಳು ಹಾಗೂ ಅವುಗಳ ನಡುವಿನ ಭೂಭಾಗದ ಒಡೆಯನಾದವನು (ಎ.ಕ.9, ಪು. 99).

ಭಾಷಾತಿಲಂಗಿ: ಭಾಷೆಯಲ್ಲಿ ಪ್ರೌಢಿಮೆಯುಳ್ಳವನು, ಪಾರಂಗತನಾದವನು (ಎ.ಕ.5, ಪು. 635).

ಭೂಪಾಲಭುಜಂಗ: ಭೂಮಿಯನ್ನು ಕಾಪಾಡುವ ಸರ್ಪ; ಭೂಮಿಯನ್ನು ಆಳುವ ಪರಾಕ್ರಮಿ ಅರಸ, ಧರೆಯನ್ನು ರಕ್ಷಿಸುವವನು (ಅದೇ).

ಮಗಧರಾಯಮಾನಮರ್ಧನ ಅಥವಾ ಮಗಧೆಯರಾಯಮಧಮರ್ಧನ: ಮಗಧೆಯ ಅರಸನ ಮದ, ಗರ್ವಗಳನ್ನು ಅಡಗಿಸಿದ ವಿವರ ಹೇಳುವ ಬಿರುದು 'ಮಗಧೆಯರಾಯ ಮಾನ ಮಧಮರ್ಧನ', ಆದರೆ ಇಲ್ಲಿ ಉಲ್ಲೇಖವಾಗುವ ಮಗಧ ಅರಸ ಯಾರೆಂಬುದನ್ನು ಗುರುತಿಸಬೇಕಾಗಿದೆ. (V.I.,Vol-2; KN.920)

ಮೂರುರಾಯರ ಗಂಡ: ಅರಸ, ಮಾಡಲಿಕ ಮತ್ತು ಸಾಮಂತರ ಒಡೆಯ, ಅಧಿಪತಿ (ಎ.ಕ.5, ಪು.635).

ರಾಜಕುಲತಿಲಕ ಚೂಡಾಮಣಿ: ರಾಜ ಕುಲಕ್ಕೆ ತಿಲಕಪ್ರಾಯವಾದ ಚೂಡಾಮಣಿಯಂತಿರುವವನು (ಎ.ಕ.9, ಪು. 99).

ಸತ್ಯಹರಿಶ್ಚಂದ್ರ: ಸತ್ಯ ಹರಿಶ್ಚಂದ್ರನು ಸತ್ಯ, ನ್ಯಾಯ, ನೀತಿಗಳ ಪರಿಪಾಲಕ (V.I.,Vol-2; KN. 475).

ಹಮ್ಮೀರರಾಯಅಂಧಕಾರಗರ್ಮಕಿರಣ: ಅಲ್ಲದೆ ಸಮಕಾಲೀನ ಅರಸರನ್ನು ಮಟ್ಟಹಾಕಿ ಹಮ್ಮೀರಾಯ ಅಂಧಕಾರ ಘರ್ಮಕಿರಣನಾಗಿಯೂ ಪ್ರಸಿದ್ಧಿ ಹೊಂದಿದ್ದನು (V.I.,Vol-2; KN. 920).

ಹಿಂದೂರಾಯಸುರತ್ರಾಣ: ಮುಸ್ಲಿಂರಲ್ಲಿ ಅರಸನನ್ನು ಸುಲ್ತಾನ ಎಂದು ಕರೆಯಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಹಿಂದೂ ಆರಸರಿಗೆ ಸುಲ್ತಾನನಾದವನು (ಎ.ಕ.5, ಪು.635)

1ನೇ ದೇವರಾಯ (ಕ್ರಿ.ಶ. 1406–1422)

ಅರಿರಾಯವಿಭಾಡ: ಶಕ್ತಿಶಾಲಿಯೂ, ಬಲಶಾಲಿಯೂ ಆದ ಶತ್ರು ಅರಸರನ್ನು ನಾಶ ಪಡಿಸಿದವನು. (E.C-11, No.14, Chitradurga).

ಅಷ್ಟದಿಕ್ಕುರಾಯಮನೋಭಯಂಕರ: ಎಂಟು ದಿಕ್ಕುಗಳ ಅರಸರ ಮನಸ್ಸನ್ನು ಘಾಸಿ ಗೊಳಿಸುವವನು *(ಅದೇ).*

ಗಜಮುಖಭೀಮ: ಆನೆಯಂತೆ ಗಾಂಭೀರ್ಯವುಳ್ಳವನು, ಯುದ್ಧನಿಪುಣನೂ ಪರಾಕ್ರಮಿಯೂ ಆಗಿದ್ದುದನ್ನು ರಣಮುಖರಾಮ, ಗಜಮುಖಭೀಮ ಎಂಬವು ಸಮರ್ಥಿಸುತ್ತವೆ (SII-ix, No. 433).

ಪೂರ್ವಪಶ್ಚಿಮಉತ್ತರದಕ್ಷಿಣಚತುಸಮುದ್ರಾಧಿಪತಿ: ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣದ ನಾಲ್ಕು ಸಮುದ್ರಗಳವರೆಗಿನ ಭೂಭಾಗದ ಮೇಲೆ ಹಿಡಿತವನ್ನು ಸಾಧಿಸಿದವನು; ನಾಲ್ಕು ಸಮುದ್ರಗಳ ಅಧಿಪತಿ (E.C-11, No.14).

ಮಗಧೆಯರಾಯಮಧಮರ್ಧನ: ಮಗಧೆಯ ಅರಸನ ಮದ, ಗರ್ವಗಳನ್ನು ಅಡಗಿಸಿದವನು (SII-ix, No.433).

ರಣಮುಖರಾಮ: ಯುದ್ಧದಲ್ಲಿ ರಾಮನಂತಿರುವವನು, ಯುದ್ಧನಿಪುಣನೂ ಪರಾಕ್ರಮಿಯೂ ಆಗಿದ್ದವನು *(ಅದೇ).*

ವೇದಮಾರ್ಗ ಪ್ರತಿಷ್ಠಾಪನಾಚಾರ್ಯ: ವೇದಮಾರ್ಗವನ್ನು ಪ್ರತಿಷ್ಠಾಪಿಸಿದವನು. (V.I.,Vol-2; KN.2237).

ಸಂಗೀತವಿದ್ಯಾಸಾಗರ: ಸಂಗೀತ, ಸಾಹಿತ್ಯಗಳಲ್ಲಿ ಒಂದನೆಯ ದೇವರಾಯ ಸಾಧಿಸಿದ ಜ್ಞಾನವನ್ನು ಪ್ರತಿನಿಧಿಸುತ್ತವೆ. *(ಅದೇ)*

ಸಾಹಿತ್ಯವಿದ್ಯಾಕಲಾವಿಶಾಲಾವತಾರ: ಸಾಹಿತ್ಯ, ಜ್ಞಾನ, ಕಲೆಗಳ ಬಗೆಗೆ ಅಪಾರ ಆಸಕ್ತಿ ಹಾಗೂ ವೈಶಾಲ್ಯತೆಯನ್ನು ರೂಢಿಸಿಕೊಂಡುದನ್ನು ಈ ಬಿರುದು ತೋರ್ಪಡಿಸುತ್ತದೆ. (EC.11, No.14, chitradurga)

ಹಿಂದೂರಾಯಸುರತ್ರಾಣ: ಮುಸ್ಲಿಂ ರಾಜವಂಶಗಳಲ್ಲಿ ಅರಸನನ್ನು ಸುಲ್ತಾನ ಎಂದು ಕರೆಯಲಾಗುತ್ತಿತ್ತು. ಈ

ಹಿನ್ನೆಲೆಯಲ್ಲಿ ಹಿಂದೂ ಅರಸರಲ್ಲಿ ಅಥವಾ ಆಳರಸರಿಗೆ ಸುಲ್ತಾನನಾದವನು (ಎಕ-8, ಪು.).

2ನೇ ದೇವರಾಯ ಅಥವಾ ಪ್ರೌಢದೇವರಾಯ (ಕ್ರಿ.ಶ. 1422–1446)

ಅಪ್ರತಿಮಬಿರುದಂಕ: ಪ್ರತಿಷ್ಠಿತ ಬಿರುದುಗಳನ್ನು ಹೊಂದಿದವನು

ಅಭಿನವ ಭೋಜ: ಮಹಾಅರಸ; ಭೋಜನಂತಿರುವವನು (VI-ii, KN. 513).

ಅಭಿನವವೀರ: ಮಹಾ ಹೋರಾಟಗಾರ, ಶೂರನಾಗಿದ್ದನು. (*ARSIE,* 1931-32, para 13)

ಅರಿರಾಯಮಾನಮರ್ಧನ: ಶತ್ರು ಅರಸರ ಮಾನವನ್ನು ಮರ್ಧಿಸಿದವನು (SII, vol-ix-ii, No.447).

ಅರಿರಾಯವಿಭಾಡ: ಅರಿ–ಶತ್ರು, ರಾಯ–ಅರಸ, ವಿಭಾಡ–ನಾಶಪಡಿಸಿದವನು ಎಂಬ ಅರ್ಥಗಳನ್ನು ಹೊಂದಿವೆ. ಅರಿರಾಯ ವಿಭಾಡವೆಂಬುದು ಶಕ್ತಿಶಾಲಿಯೂ, ಬಲಶಾಲಿಯೂ ಆದ ಅರಸರನ್ನು ನಾಶಮಾಡುವವನು (ಪ್ರೌ.ಶಾ., ಪು. 482, 524).

ಅಷ್ಟದಿಕ್ಕು ಮನೋಭಯಂಕರ: ಎಂಟು ದಿಕ್ಕುಗಳಲ್ಲಿರುವವರ ಮನಸ್ಸನ್ನು ಘಾಸಿ ಗೊಳಿಸುವವನು (ಅದೇ, ಪು. 273).

ಅಶ್ವಪತಿ: ಅಶ್ವದಳದ ಒಡೆಯ (ಅದೇ, ಪು. 108).

ಈಳಂತಿರೈಕೊಂಡ: ಈಳಂ ತಿರೈಕೊಂಡವು ದಕ್ಷಿಣದ ಹಿಂದೂ ಮಹಾಸಾಗರವನ್ನು ದಾಟಿ ಶ್ರೀಲಂಕಾದ ಮೇಲೆ ಸಾಧಿಸಿದ ವಿಜಯದ ಸಂಕೇತವಾಗಿದೆ. ಸಾಗರೋತ್ತರ ಯುದ್ಧಗಳಲ್ಲಿ ಪ್ರಾವಿಣ್ಯತೆಯನ್ನು ವಿಜಯನಗರದ ಅರಸರು ಸಾಧಿಸಿದ ಪ್ರತೀಕವಿದು (ಅದೇ, ಪು.524).

ಉದಯಬಾಲಭಾಸ್ಕರ: ಉದಯಿಸುತ್ತಿರುವ ಬಾಲಸೂರ್ಯನಂತಿರುವವನು (ಅದೇ, ಪು. 440).

ಎಮ್ಮಂಡಲಮುಮ್‌ತಿರೈಕೊಂಡ: ಎಮ್ಮಂಡಲ ಎಂಬುದು ಒಂದು ಪ್ರಾಂತ್ಯ. ಈ ಪ್ರಾಂತ್ಯವನ್ನು ಗೆದ್ದುಕೊಂಡು ಬಿರುದನ್ನು ಹೊಂದಿದ ಕೀರ್ತಿ ಪ್ರೌಢದೇವರಾಯನಿಗೆ ಸಲ್ಲುತ್ತದೆ (ಪ್ರೌ.ಶಾ., ಪು. 524).

ಕಂಡನಾಡುಕೊಂಡುಕೊಂಡನಾಡಕೊಡದಪೂರ್ವದಕ್ಷಿಣ ಪಶ್ಚಿಮೋತ್ತರ ಚತುಸ್ಸಮುದ್ರಾಧಿಪತಿ: ಇವನು ಎಷ್ಟು ಬಲಿಷ್ಠನೆಂದರೆ ಯಾವುದೇ ರಾಜ್ಯದ ಮೇಲೆ ಕಣ್ಣಿಟ್ಟರೆ ಅದನ್ನು ಜಯಿಸಿಯೇ ತೀರುತ್ತಿದ್ದನು. ಇದು ಅವರಲ್ಲಿದ್ದ ಛಲವನ್ನು ವ್ಯಕ್ತಪಡಿಸುವುದರ ಜೊತೆಗೆ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದಾದ್ಯಂತ ವಿಸ್ತರಿಸಿದ್ದುದನ್ನು ಸ್ಪಷ್ಟಪಡಿಸುತ್ತದೆ (ಪ್ರೌ.ಶಾ, ಪು. 490, 511).

ಕರ್ನಾಟಕಕ್ಷಿತಿನಾಥ ಮತ್ತು ಕರ್ನಾಟ ಕ್ಷಿತಿಪಾಲ: ಕರ್ನಾಟಕ ಕ್ಷಿತಿನಾಥ ಅಥವಾ ಕರ್ನಾಟ ಕ್ಷಿತಿಪಾಲದಿಂದ ಮಧ್ಯಯುಗದ ಹೊತ್ತಿಗೆ ಕರ್ನಾಟಕದ ಸ್ಪಷ್ಟ ಕಲ್ಪನೆ ಅಂದು ಇದ್ದುದು ಗೊತ್ತಾಗುತ್ತದೆ. ವಿಜಯನಗರ ಅರಸರು ದಕ್ಷಿಣ ಭಾರತದ ಆಂಧ್ರಪ್ರದೇಶ, ತಮಿಳುನಾಡು, ಒರಿಸ್ಸಾ, ಕೇರಳ ಮೊದಲಾದ ಭಾಗಗಳನ್ನು ವಶಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರೂ ಅದೆಲ್ಲವನ್ನೂ ಕರ್ನಾಟಕದ ಅಡಿಯಲ್ಲಿ ಆಳುತ್ತಿದ್ದರು. ಕರ್ನಾಟಕ ಕ್ಷಿತಿನಾಥ ಹಾಗೂ ಕರ್ನಾಟ ಕ್ಷಿತಿಪಾಲ ಬಿರುದುಗಳ ಅರ್ಥ ಕರ್ನಾಟಕ ಭೂಭಾಗದ ಒಡೆಯ, ಅರಸ ಎಂಬುದೇ ಆಗಿದೆ. ಪ್ರೌಢದೇವರಾಯನನ್ನು ತೆಲುಗು ಕವಿ ಶ್ರೀನಾಥನು 'ಕರ್ನಾಟ ಕ್ಷಿತಿಪಾಲ'ನೆಂದು ಕರೆದಿದ್ದು, ವಿಜಯನಗರವನ್ನು 'ಕನ್ನಡ ರಾಜ್ಯಲಕ್ಷ್ಮಿ'ಯೆಂದಿದ್ದಾನೆ. (H of K., p. 335).

ಕುಡಿಕೂಟಕೆತಪ್ಪುವನಾಯಂಕರಗಂಡ: ಪ್ರೌಢದೇವರಾಯನು ಹೊಂದಿದ ವಿಶಿಷ್ಠ ಬಿರುದುಗಳಲ್ಲಿ ಇದೂ ಒಂದು. ವಿಜಯನಗರ ಕಾಲದಲ್ಲಿ ನಾಯಂಕರ ಪದ್ದತಿಯು ಪ್ರಸಿದ್ಧವಾಗಿದ್ದಿತು. ಇದು ವಿಕೇಂದ್ರೀಕರಣದ ಪ್ರಮುಖ ಘಟಕವೂ ಆಗಿದ್ದಿತು. ಒಂದೇ ಆಡಳಿತದಲ್ಲಿ ಈ ಎಲ್ಲ ನಾಯಂಕರರೂ ಪ್ರಾಂತ್ಯಾಧಿಕಾರಿಗಳಾಗಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇವರು ಆಡಳಿತದಲ್ಲಿ ಸ್ವತಂತ್ರರಾಗಿದ್ದರೂ ವಿಜಯನಗರದ ಅರಸರ ಅಧೀನದಲ್ಲಿದ್ದು ರಾಜನಿಗೆ ನಿಷ್ಠೆ ತೋರುವುದು ನಿಯಮವಾಗಿದ್ದಿತು. ಇಂತಹ ನಾಯಂಕರರ ಸಂಖ್ಯೆ ವಿಜಯನಗರ ಸಾಮ್ರಾಜ್ಯದಲ್ಲಿ ನೂರಾರು ಇತ್ತು. ಇವರು ವರ್ಷದ ದಸರಾ ಅಥವಾ ಯಾವುದೋ ಹಬ್ಬದಲ್ಲಿ ಅರಸನು ಸಭೆ ಕರೆದ ಸಂದರ್ಭದಲ್ಲಿ ಬಂದು ತಮ್ಮ ಆದಾಯದ ಪಾಲನ್ನು

ಒಪ್ಪಿಸಿ ರಾಜನಿಷ್ಠೆ ತೋರುತ್ತಿದ್ದರು. ಆದರೆ ಈ ನಾಯಂಕರರಲ್ಲಿ ಅನೇಕರು ವಿಜಯನಗರ ಅರಸರ ನಿಷ್ಠೆಯನ್ನು ಪ್ರಶ್ನಿಸಿ ದಂಗೆಯೆದ್ದ ಅನೇಕ ಉದಾಹರಣೆಗಳು ಇವೆ. ಅವರಲ್ಲಿ ಉಮ್ಮತ್ತೂರು ಪಾಳೆಯಗಾರರು ಪ್ರಮುಖರು. ಇಂತಹ ದಂಗೆಯೆದ್ದ ಪಾಳೆಯಗಾರರು ಅಥವಾ ನಾಯಂಕರರನ್ನು ಅರಸರು ಹತ್ತಿಕ್ಕಿದ್ದರು. ಈ ಹಿನ್ನೆಲೆಯಲ್ಲಿ ಕುಡಿಕೂಟಕೆ ತಪ್ಪುವ ನಾಯಂಕರ ಗಂಡ ಎಂಬ ಬಿರುದು ಬಂದಿರುವ ಸಾಧ್ಯತೆಯಿದೆ (SII., Vol-xvi, No.4).

ಗಂಡಭೇರುಂಡ: ಗಂಡಭೇರುಂಡ ಎರಡು ತಲೆಯ ಪಕ್ಷಿ. ಇದು ಶಕ್ತಿ, ಬಲಾಢ್ಯತೆಗಳ ಸಂಕೇತ. ಬಲಾಢ್ಯನಾದ ಅರಸ. (ಪ್ರೌ.ಶಾ., ಪು. 134).

ಗಂಡರಗೂಳಿ: ಶತ್ರು ಅರಸು, ಮಾಂಡಲಿಕರಿಗೆ ಗೂಳಿಯಂತಿರುವವನು; ಬಲಾಢ್ಯನಾದ ಅರಸ. (VI-ii, KN. 563).

ಗಜಬೇಟೆಕಾರ: ಪ್ರೌಢದೇವರಾಯನು ಆನೆಯ ಬೇಟೆಯಲ್ಲಿ ನಿಷ್ಣಾತನಾಗಿದ್ದುದನ್ನು 'ಗಜಬೇಟೆಕಾರ'ವು ಹೇಳುತ್ತದೆ. ಬೇಟೆಗಾರಿಕೆ ಅರಸರು ತಮ್ಮೊಂದಿಗೆ ಅನುಸರಿಸಿಕೊಂಡು ಬಂದ ಪ್ರಾಚೀನ ಕಲೆ. ಇದೊಂದು ವಿನೋದವೂ ಆಗಿದ್ದಿತು. ಇದಕ್ಕೆ ಪೂರಕವಾಗಿ ಮೊಳಕಾಲ್ಮೂರಿನ ಕ್ರಿ.ಶ. 1434ರ ತಾಮ್ರ ಶಾಸನವೊಂದರಲ್ಲಿ "ಮಾಚನಹಳಿಯ ಬೇಟೆಗೆ ಬಿಜಯಮಾಡಿ ಚಿತ್ತಯಿಸಿದಲ್ಲಿ ರಾಮಯದೇವರ ದರುಶನಕೆ ಚಿತ್ತಯಿಸಿದಲ್ಲಿ" ಎಂದು ಹೇಳುತ್ತದೆ. ತಮಿಳು ಶಾಸನಗಳಲ್ಲಿ ಗಜವೇಟ್ಟೈಕಾರನ್, ಗಜವೇಟ್ಟೈ ಕಣ್ಡ, ಗಜವೇಟ್ಟೈಖಂಡು ಕೆಸವೆಟ್ಟೈಕಕಂಡುರುಳಿಯ ಎಂದು ಕರೆಯಲಾಗಿದೆ. (ಪ್ರೌ.ಶಾ. ಪು. 3, 108, 289, 515, 524).

ಗಜಪತಿ: ಗಜದಳದ ಒಡೆಯ; ಒರಿಸ್ಸಾದ ಗಜಪತಿಯನ್ನು ಹಿಮ್ಮೆಟ್ಟಿಸಿದವನು (ಅದೇ, ಪು. 108).

ಗಜೌಘಗಂಡಭೇರುಂಡ: ಆನೆ ಹಾಗೂ ಗಂಡಭೇರುಂಢಗಳಷ್ಟು ಬಲಾಢ್ಯನು (ಅದೇ, ಪು. 134).

ಚಂಡಮಂಡನಕೇಸರಿ: ಶಕ್ತಿಶಾಲಿಯಾದ ಸಿಂಹದಂತಿರುವವನು (ಅದೇ).

ಚತುಸಮುದ್ರಾಧಿಪತಿ: ನಾಲ್ಕು ಸಮುದ್ರಗಳ ಒಡೆಯ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣದ ಸಮುದ್ರಗಳ ಅಧಿಪತಿಯಾದವನು (ಅದೇ, ಪು. 30).

ಚೋಳರಾಜ್ಯ ಸ್ಥಾಪನಾಚಾರ್ಯ: ಚೋಳರಾಜ್ಯವನ್ನು ಸ್ಥಾಪಿಸಿದವನು (VI-ii, KN.695).

ಜಪಂ ಪರಮೇಶ್ವರ: ಧ್ಯಾನ, ಜಪಗಳಲ್ಲಿ ಪರಮೇಶ್ವರನಂತಿರುವವನು (ಅದೇ, ಪು. 14).

ತುರುಕಮಹಾಹಯಪ್ರಬಲಸೈನ್ಯವಿದಾರಿ: ಬಹಮನಿ ಸುಲ್ತಾನರು ಈ ಹೊತ್ತಿಗೆ ಅಶ್ವದಳವನ್ನು ಬಲಗೊಳಿಸಿ ಅದರಲ್ಲಿ ಪ್ರಬಲತೆಯನ್ನು ಸಾಧಿಸಿದ್ದರು. ಅವರು ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಲು ಆರಂಭಿಸಿದಂದಿನಿಂದ ಇತರ ಪಡೆಗಳಿಗಿಂತ ಬಹಮನಿಯವರ ಅಶ್ವದಳವು ಸೈನ್ಯದಲ್ಲಿ ಬಹುಮುಖ್ಯ ಪಾತ್ರವಹಿಸಿದ್ದಿತು. ಬಹಮನಿಯವರು ಹೊಂದಿದ್ದ ಅಂತಹ ಪ್ರಬಲ ಅಶ್ವಸೈನ್ಯವನ್ನು ದೇವರಾಯ ಹಿಮ್ಮೆಟ್ಟಿಸಿದನೆಂದು ಸಾರುವುದೇ ಈ ಬಿರುದಿನ ಹಿಂದಿನ ಉದ್ದೇಶ (ಅದೇ, ಪು. 108).

ತುರುಷ್ಕತುರುಗಾರೂಢಾ: ತುರುಷ್ಕರು ಅಥವಾ ಬಹಮನಿ ಸುಲ್ತಾನರ ಕುದುರೆಗಳನ್ನು ಸವಾರಿ ಮಾಡುವವನು (ಅದೇ, ಪು. 134).

ತುಳುವದಳವಿಭಾಡ: ತುಳುವದಳವೆಂಬ ಪ್ರತ್ಯೇಕ ಸೇನಾ ತುಕಡಿಯು ವಿಜಯನಗರ ಸೇನೆಯಲ್ಲಿ ಪ್ರೌಢದೇವರಾಯನ ಕಾಲದ ಹೊತ್ತಿಗೆ ಇದ್ದುದು ಚಿತ್ರದುರ್ಗದ ಶಾಸನವೊಂದರಿಂದ ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ತುಳುವದಳವು ದಂಗೆಯೆದ್ದ ಕಾರಣ ಅದನ್ನು ಪ್ರೌಢದೇವರಾಯನು ಹತ್ತಿಕ್ಕಿರಬೇಕು. ಆದುದರಿಂದ ಈ ಬಿರುದನ್ನು ಪ್ರೌಢದೇವರಾಯನಿಗೆ ಅನ್ವಯಿಸಿರುವ ಸಾಧ್ಯತೆಯಿದೆ (ಅದೇ, ಪು. 273, 283).

ದುಷ್ಟನಿಗ್ರಹಶಿಷ್ಟಪರಿಪಾಲಕ: ದುಷ್ಟರನ್ನು ನಾಶಪಡಿಸಿ ಶಿಷ್ಟರನ್ನು ರಕ್ಷಿಸಿದವನು (ಅದೇ, ಪು. 392).

ಧರಣೀವರಾಹ: ಧರೆಯ ರಕ್ಷಕನು, ಭೂಮಂಡಲಕ್ಕೆ ವರಾಹವಾಗಿರುವವನು (ಅದೇ, ಪು. 452).

ಧರ್ಮರತ್ನಾಕರ: ಧರ್ಮವೆಂಬ ರತ್ನಗಳಿಗೆ ಆಶ್ರಯ ನೀಡಿದವನು.

ಧರ್ಮಚಾರಿತ್ರ: ಧರ್ಮವಂತನು, ಚಾರಿತ್ರ್ಯವುಳ್ಳವನು (ಪ್ರೌ.ಶಾ., ಪು. 440).

ನರಪತಿ: ಕಾಲ್ದಳದ ಒಡೆಯ, ಮನುಷ್ಯ ಕುಲಕ್ಕೆ ಒಡೆಯ (ಅದೇ, ಪು. 108).

ನಿಜಭೂಮಿಕಾರ: ಭೂಮಿಯ ನಿಜವಾದ ಒಡೆಯ ಅಥವಾ ಅರಸ ಎಂಬುದು (ಅದೇ, ಸಂ. 337).

ಪರರಾಯ ಭಯಂಕರ: ಶತ್ರು ಅರಸರಿಗೆ ಭಯವನ್ನು ಉಂಟುಮಾಡುವವನು (ಅದೇ, ಪು. 134).

ಪೂರ್ವದಕ್ಷಿಣಪಶ್ಚಿಮಸಮುದ್ರಾಧಿಪತಿ: ಈ ಬಿರುದನ್ನು ವಿಜಯನಗರದ ಅನೇಕ ಅರಸರು ಧರಿಸಿದ್ದಾರೆ. ದಕ್ಷಿಣ ಭಾರತದ ಭೌಗೋಳಿಕ ಲಕ್ಷಣಗಳನ್ನು ಗಮನಿಸಿದರೆ ಪೂರ್ವಕ್ಕೆ ಬಂಗಾಳಕೊಲ್ಲಿ, ಪಶ್ಚಿಮಕ್ಕೆ ಅರಬ್ಬೀ ಸಮುದ್ರಗಳು ಹೇಗಿವೆಯೋ ದಕ್ಷಿಣಕ್ಕೆ ಹಿಂದೂ ಮಹಾಸಾಗರವು ಇರುವುದು ಗೊತ್ತಿರುವ ಸಂಗತಿ. ಈ ಹಿನ್ನೆಲೆಯಲ್ಲಿ ಪ್ರೌಢದೇವರಾಯನು ಮೇಲಿನ ಮೂರು ಸಮುದ್ರಗಳ ನಡುವಿನ ಭೂಭಾಗದ ಒಡೆಯನಾಗಿದ್ದುದು ಇದರಿಂದ ವ್ಯಕ್ತವಾಗುತ್ತದೆ (ಅದೇ, ಪು. 108, 337).

ಪೂರ್ವಪಶ್ಚಿಮದಕ್ಷಿಣೋತ್ತರಚತುಸಮುದ್ರಾಧಿಪತಿ, ಪೂರ್ವಪಶ್ಚಿಮದಕ್ಷಿಣೋತ್ತರ ಸಮುದ್ರೈಕನಾಯಕ: ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರದಲ್ಲಿರುವ ನಾಲ್ಕು ಸಮುದ್ರಗಳು ಹಾಗೂ ಅವುಗಳ ನಡುವಿನ ಭೂಭಾಗದ ಒಡೆಯನಾದವನು (ಅದೇ, ಪು.14, 440).

ಪೂರ್ವದಕ್ಷಿಣಪಶ್ಚಿಮೋತ್ತರ ಬಲ್ಲಾಳರಾಯ: ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರಗಳನ್ನು ಆಳುತ್ತಿದ್ದ ಅಪ್ರತಿಮ ವೀರ ಬಲ್ಲಾಳರಾಯ. ಹೊಯ್ಸಳ ಬಲ್ಲಾಳನ ಹೆಸರನ್ನು ಬಿರುದಾಗಿ ಇಟ್ಟುಕೊಂಡಿರುವುದನ್ನು ಇಲ್ಲಿ ಕಾಣಬಹುದು. (ಅದೇ, ಪು.284)

ಭಾಷಾತಿಲಂಗ: ಭಾಷೆಯಲ್ಲಿ ಪ್ರೌಢಿಮೆಯುಳ್ಳವನು, ಪಾರಂಗತನಾದವನು (ಅದೇ, ಪು.134).

ಭಾಷೆಗೆತಪ್ಪುವರಾಯರಗಂಡ: ಕೊಟ್ಟ ಅಥವಾ ಆಡಿದ ಮಾತಿಗೆ ತಪ್ಪುವ ಅರಸರ ಅಧಿಪತಿ ಅಥವಾ ಒಡೆಯ (ಅದೇ, ಪು. 524).

ಭೂಪಾಲಭುಜಂಗ: ಭೂಮಿಯನ್ನು ಕಾಪಾಡುವ ಸರ್ಪ; ಭೂಮಿಯನ್ನು ಆಳುವ ಪರಾಕ್ರಮಿ ಅರಸ, ಧರೆಯನ್ನು ರಕ್ಷಿಸುವವನು (ಅದೇ).

ಮಸ್ತಕಾಶೂಲ: ಶಿರಕ್ಕೆ ಶೂಲವಾದವನು, ಅಪ್ರತಿಮ ಚತುರನು (ಅದೇ, 284).

ಮೂವರುರಾಯರ ಗಂಡ, ಮೂರು ರಾಯರ ಗಂಡ: ಅರಸ, ಮಾಡಲಿಕ ಮತ್ತು ಸಾಮಂತರ ಒಡೆಯ, ಅಧಿಪತಿ (ಅದೇ, 108, ಪು. 134).

ಯದುಕುಲತಿಲಕ: ಯದು ಕುಲಕ್ಕೆ ತಿಲಕಪ್ರಾಯವಾದವನು (ಕವಿವಿ ಶಾಸಂ–3, ಪು. 240).

ಯಾದವವಂಶ ಪ್ರದೀಪ: ಯಾದವ ವಂಶಕ್ಕೆ ಪ್ರದೀಪಿಕೆಯಂತಿರುವವನು (ಅದೇ, ಪು. 59).

ಯಾದವರಾಯ ಪ್ರತಿಷ್ಠಾಚಾರ್ಯ: ದೇವಗಿರಿಯ ಯಾದವರು, ಹೊಯ್ಸಳರು ವಿಜಯನಗರ ಕಾಲದ ಹೊತ್ತಿಗೆ ಮೂಲೆಗುಂಪಾಗಿದ್ದುದು ಇತಿಹಾಸ. ಆದಾಗ್ಯೂ ಅವರು ಮಾಂಡಳಿಕರಾಗಿ ಆಳುತ್ತಿದ್ದಿರಬೇಕು. ಇಂತಹ ಸಂದರ್ಭದಲ್ಲಿ ಅವರನ್ನು ಪುನಃ ಅಧಿಕಾರಕ್ಕೆ ಪ್ರೌಢದೇವರಾಯನು ತಂದಕಾರಣ ಈ ಬಿರುದು ಅನ್ವಯವಾಗಿರ ಬೇಕು. (ಅದೇ, ಪು. 273, 284).

ವಿಜಯನಗರ ಪುರವರಾಧೀಶ್ವರ: ವಿಜಯನಗರದ ಅರಸ; ವಿಜಯನಗರ ಸಾಮ್ರಾಜ್ಯವನ್ನು ಕ್ರಿ.ಶ. 1336ರಿಂದ ವಿವಿಧ ಅರಸರು ಕಟ್ಟಿ ಬೆಳೆಸಿದ್ದು ಅಂತಹ ಸಾಮ್ರಾಜ್ಯವನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದ ಹಿನ್ನೆಲೆಯಲ್ಲಿ ಈ ಬಿರುದು ಬಂದಿದೆ (ಅದೇ, ಪು. 72, 200).

ವಿವೇಕಿನಾರಾಯಣ: ವಿವೇಕವುಳ್ಳ ನಾರಾಯಣನಂತಿರುವವನು (ಅದೇ, ಪು. 440).

ವೈರಿಭೂಪತಿವೇತಂಡ: ಶತ್ರು ಅರಸರಿಗೆ ದಂಡದಂತಿರುವವನು (ಅದೇ, ಪು. 134).

ಸತ್ಕಳಾಭೋಜ: ಉತ್ತಮ ಕಲೆಯನ್ನು ಬಲ್ಲ, ಕಲಾಪ್ರೋತ್ಸಾಹ ನೀಡಿದ ಅರಸ (ಅದೇ, ಪು. 440).

ಸತ್ಯಹರಿಶ್ಚಂದ್ರ: ಸತ್ಯ ಹರಿಶ್ಚಂದ್ರನಂತಿರುವವನು, ಸತ್ಯವಂತನು (ಅದೇ).

ಶರಣಾಗತರಾಯ ಸ್ಥಾಪನಾಚಾರ್ಯ: ಶರಣಾಗತರಾದ ಅರಸರನ್ನು ಪುನಃ ಪ್ರತಿಷ್ಠಾಪಿಸಿದವನು; ಶತ್ರುಗಳನ್ನು ಧಮನ ಮಾಡಿದುದು ಮಾತ್ರವಲ್ಲ. ಅವನು ಶರಣಾಗಿ ಬಂದವರನ್ನು ಮನ್ನಿಸುತ್ತಿದ್ದನೆಂದು ರಕ್ಷಿಸುತ್ತಿದ್ದುದು ಇದರಿಂದ ತಿಳಿದುಬರುತ್ತದೆ (SII, Vol-ix-ii, No. 447).

ಶರಣಾಗತವಜ್ರಪಂಜರ: ಶರಣಾದವರಿಗೆ ವಜ್ರಪಂಜರದಂತಿರುವವನು; ಶರಣಾದವರನ್ನು ಮನ್ನಿಸಿ ಅವರನ್ನು ಗೌರವಿಸಿ ಅವರ ಅಧಿಕಾರಗಳನ್ನು ಪುನರ್‌ಸ್ಥಾಪಿಸುವ ಮೂಲಕ 'ಶರಣಾಗತರಾಯ ಸ್ಥಾಪನಾಚಾರ್ಯ' ಬಿರುದನ್ನು ಹೊಂದಿದರೆ, ಅವರಿಗೆ ರಕ್ಷಣೆಯನ್ನು ನೀಡುವ ಮೂಲಕ ಶರಣಾಗತ ವಜ್ರಪಂಜರನಾಗಿ ವಜ್ರಕವಚದಂತೆ ಇದ್ದುದನ್ನು ನೆನಪಿಸುತ್ತದೆ. (ಪ್ರೌ.ಶಾ, ಪು. 14).

ಶ್ರೀ ವೀರಪ್ರತಾಪ ಚಕ್ರವರ್ತಿ: ಕೀರ್ತಿ ಪ್ರತಿಷ್ಠೆಗಳುಳ್ಳ ಅಪ್ರತಿಮ ಶೂರನಾದ ಅರಸ (ಅದೇ, ಪು. 30)

ಶೈವಾಗಮಸಾರಸಂಪನ್ನ: ಶೈವಧರ್ಮದ ಆಗಮಗಳನ್ನು ಬಲ್ಲವನು (ಅದೇ, ಪು. 5).

ಹಿಂದೂರಾಯಸುರತ್ರಾಣ: ಹಿಂದೂ ಅರಸರಲ್ಲಿ ಸುಲ್ತಾನನಾದವನು (ಅದೇ, ಪು. 14),

ಮಲ್ಲಿಕಾರ್ಜುನ (ಕ್ರಿ.ಶ. 1458)

ಅರಿರಾಯವಿಭಾಡ: ಅರಿ–ಶತ್ರು, ರಾಯ–ಅರಸ, ವಿಭಾಡ–ನಾಶಪಡಿಸಿದವನು.

ಚತುಸಮುದ್ರಾಧಿಪತಿ: ನಾಲ್ಕು ಸಮುದ್ರಗಳ ಒಡೆಯ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣದ ಸಮುದ್ರಗಳ ಅಧಿಪತಿಯಾದವನು.

ಪರಮೇಶ್ವರ: ಬಹಳ ಶ್ರೇಷ್ಠನಾದವನು, ಚಕ್ರವರ್ತಿ.

ಭಾಷೆಗೆತಪ್ಪುವರಾಯರಗಂಡ: ಕೊಟ್ಟ ಅಥವಾ ಆಡಿದ ಮಾತಿಗೆ ತಪ್ಪುವ ಅರಸರ ಅಧಿಪತಿ ಅಥವಾ ಒಡೆಯ.

ಮಹಾರಾಜಾಧಿರಾಜ: ಮಹಾರಾಜ, ರಾಜರ ಅಧಿಪತಿ

ಶ್ರೀ ವೀರಪ್ರತಾಪ ಚಕ್ರವರ್ತಿ: ಕೀರ್ತಿ ಪ್ರತಿಷ್ಠೆಗಳುಳ್ಳ ಅಪ್ರತಿಮ ಶೂರನಾದ ಅರಸ (ಎ.ಕ.–6, ಪು. 253).

ವಿರೂಪಾಕ್ಷ(ಕ್ರಿ.ಶ. 1465)

ಅರಿರಾಯವಿಭಾಡ: ಅರಿ–ಶತ್ರು, ರಾಯ–ಅರಸ, ವಿಭಾಡ–ನಾಶಪಡಿಸಿದವನು. ಅರಿರಾಯ ವಿಭಾಡವೆಂಬುದು ಶಕ್ತಿಶಾಲಿಯೂ, ಬಲಶಾಲಿಯೂ ಆದ ಅರಸರನ್ನು ನಾಶಮಾಡುವವನು (ಎಕ.6, ಪು.248)

ಕರುಣೈಕಸಿಂಧು: ವಿರೂಪಾಕ್ಷನು ಯಶಸ್ವಿ ದೊರೆಯಾಗಿರದೆ ಕರುಣೆ, ಸಹನೆಗಳಿಂದ ಕೂಡಿದ ಕರುಣಾಮು ದೊರೆಯಾಗಿದ್ದನೆಂದು ಹೇಳಬಹುದು. (ಕವಿವಿ ಶಾಸಂ–1, ಪು. 88).

ಚತುಸಮುದ್ರಾಧಿಪತಿ: ನಾಲ್ಕು ಸಮುದ್ರಗಳ ಒಡೆಯ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣದ ಸಮುದ್ರಗಳ ಅಧಿಪತಿಯಾದವನು (ಎಕ.6, ಪು. 248).

ಪರರಾಯ ಭಯಂಕರ: ಶತ್ರು ಅರಸರಿಗೆ ಭಯವನ್ನು ಉಂಟುಮಾಡುವವನು (ಕವಿವಿ ಶಾಸಂ–1, ಪು. 88).

ಭಾಷೆಗೆತಪ್ಪುವರಾಯರಗಂಡ: ಕೊಟ್ಟ ಅಥವಾ ಆಡಿದ ಮಾತಿಗೆ ತಪ್ಪುವ ಅರಸರ ಅಧಿಪತಿ ಅಥವಾ ಒಡೆಯ (ಎಕ.6, ಪು. 248).

ಮೂರು ರಾಯರ ಗಂಡ: ಅರಸ, ಮಾಡಲಿಕ ಮತ್ತು ಸಾಮಂತರ ಒಡೆಯ, ಅಧಿಪತಿ (ಕವಿವಿ ಶಾಸಂ–1, ಪು. 88).

ಹಿಂದೂರಾಯಸುರತ್ರಾಣ: ಹಿಂದೂ ಅರಸರಲ್ಲಿ ಸುಲ್ತಾನನಾದವನು (ಅದೇ).

ಸಂಕ್ಷೇಪ ಸೂಚಿ

ಕವಿವಿಶಾಸಂ : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ

ಎಕ : ಎಪಿಗ್ರಾಫಿಯ ಕರ್ನಾಟಿಕ

ಪ್ರೌ.ಶಾ : ಪ್ರೌಢದೇವರಾಯನ ಶಾಸನಗಳು

H of K : History of Karnataka

SII : South Indian Inscriptions

ಗ್ರಂಥಸೂಚಿ

1. *ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು*, 1998–2011, ದೇವರಕೊಂಡಾರೆಡ್ಡಿ ಮತ್ತಿತರರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. *ಕರ್ನಾಟಕ ಪರ್ಶಿಯನ್ ಅರೇಬಿಕ್* ಮತ್ತು *ಉರ್ದು ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ .
4. ಪರಮಶಿವಮೂರ್ತಿ, ಡಿ.ವಿ.(ಸಂ), *ಪ್ರೌಢದೇವರಾಯನ ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.
5. ಸೋಮಶೇಖರ್, ಎಸ್.ವೈ., *ಕರ್ನಾಟಕದ ಬಿರುದಾವಳಿಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014.
6. ಸೋಮಶೇಖರ್, ಎಸ್.ವೈ., *ವಿಜಯನಗರ ಕಾಲದ ಸೈನ್ಯವ್ಯವಸ್ಥೆ* ಮತ್ತು *ಯುದ್ಧನೀತಿ*, ಸಂಚಿಕೆ ಪ್ರಕಾಶನ, ಚಿತ್ರದುರ್ಗ, 2009.
7. *ಕನ್ನಡ ನಿಘಂಟು*, 8 ಸಂಪುಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2010.
8. *ಸಂಕ್ಷಿಪ್ತ ಕನ್ನಡ ನಿಘಂಟು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1975.
9. *ಸಂಸ್ಕೃತ–ಕನ್ನಡ ನಿಘಂಟು*, ಚಕ್ರವರ್ತಿ ಜಿ.ಎನ್., ಗೀತಾ ಬುಕ್ ಹೌಸ್, ಮೈಸೂರು, 2009.
10. Desai, P.B., *A History of Karnataka Research Institute,* Karnataka University, Dharwad, 1970.
11. *Epigraphia Carnatica* Volumes (B.L. Rice Vols.)
12. Gopal B.R. (Ed.) *Vijayanagara Inscriptions,* 4 Volumes, Directorate of Archaeology and Museums, Mysore, 1996.
13. *South Indian Inscriptions* Volumes.

35. ಮಂದಾಲಗಿರಿ ಪರ್ವತ ಮತ್ತು ಮಳಲಕೋಟೆಯ ಶೋಧನೆ
(ಹಂಪಿ ಕುರಿತು ಚಾರಿತ್ರಿಕ ಲಾವಣಿಯೊಂದರ ವಿಶ್ಲೇಷಣೆ)

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಮಂದಾಲಗಿರಿ ಪರ್ವವಣ್ಣ
ಮೊದಲೆಂಗಿದ್ದಲ್ಲೊ ಹಂಪೆ ವಿರೂಪಾಕ್ಷನ
ತೇರು ನೋಡುವರು ಒಳವಿಲ್ಲ
ಉತ್ತರದೇಶ ತೆಂಕಣ ಪಡವಲು
ಹುಟ್ಟಿತಣ್ಣ ವಿರೂಪಾಕ್ಷನ ತೇರು
ಆರುಗಾಲಿನ ಕೀಲು ಮಂಟಪ
ಕೀಲು ನತ್ತಿಲಿ ಬಳೆಗಳ ಪಿಡಿದು
ಟೆಂಗಿನ ಎಣ್ಣೆ ಪುಸಿದ್ದರಣ್ಣ
ಮಂಡೆಗೆಣ್ಣೆ ತಿಡಿದರಣ್ಣ
ಮಂದಾಲಗಿರಿ ಪರ್ವತಣ್ಣ ॥ಪ॥

    ಚಂದರಗುತ್ತಿ ಮುಂದೆ ಮುಂದೆ ಒತ್ತಿ
    ಒತ್ತಿಲಿರುವ ಗಂಗೋತ್ರಿಯ ಹೊಳೆಯು
    ಬಸವನ ಜಾಗ್ಯವು ಬಾಳೆಯ ವನವು
    ಕಾಯಿಕೋಲು ತೆಂಗಿನ ವನವು
    ಸಾಲು ಲೋಲು ಸಂಪಿಗೆ ವನವು ॥ಮಂದಾಲ॥

ಚಂದುರುಸಾಲೆ ಮುಂದೆಲೆ ಸುವ್ವಾಲೆ
ಹತ್ತಿಹೋಗುವುದು ಮಂಟಪ ಶಾಲೆ
ನಾಕುಮೂಲಿಗೆ ಬೇಕಾದ ಉಪ್ಪರಿಗೆ
ಎಡದಲ್ಲಿ ಪಾರ್ವತಿ ಗುಡಿಯು
ಬಲದಲ್ಲಿ ನಂದಿಯ ಬಸವ
ವೀರಭದ್ರ ಬೇರೆ ಬಸವಣ್ಣ
ಸೊಂಡಲ ದೇವರು ಸರ್ಪನ ಗುಡಿಯು
ಉಗ್ರಾಣದಯನೆ ಗುಡಿಕೊಂಡ
ಜ್ಯೋತಿ ಮೇಲೆ ದೀಪದ ಕಂಬ
ದೇಶವುಳ್ಳ ಶಿವನು ಐದನೆಂದು
ದೇಶ ದೇಶ ಬೇರಗಾಗುವದಣ್ಣ
ಪಾರ್ವತಿ ಪರಶಿವ ನೋಡವರೊಳಗಿಲ್ಲ ॥ಮಂದಾಲ॥

    ಮಂಡಲ ತರಮಂಡಲ ಸತ್ಯ
    ಬೋರ ಗಿರುಟಿ ಜಾಗಟಿಯು
    ಕಿಟಕಿಟ ಮ್ಯಾಳ ಇಂಪುಸ್ಥಳ
    ಜಂಪುಳ್ಳ ಮಹಾ ಜಂತರಿಯು
    ನಾಕು ಸರ್ವಿನ ಬಿರ್ದಿನ ಕಾಳೆ
    ತಾಳೆಮದ್ದಲೆ ಟಮಟೆ ಗುಡಿ-ಗುಡಿ

ಬೋರಂಬೊ ವಾರ್ತೆಗಳಣ್ಣ
ಕೋಲಾಟ ಮೆಲ್ಲಟಗಳಣ್ಣ
ಚೆಂಡಿನ ಆಟ ಚೆಂಡು ಬಗರಿನ ಆಟ
ಡೊಂಬರಾಟ ವಿಟಕಾರನ ವಿದ್ಯೇ
ಭಾಗವಂತರ ಸೋಗುಗಳು
ಪಾತುರಾದವು ವಯಬೋಗಗಳು
ದಿನದಿನಸಿನ ಮ್ಯಾಳಗಳಣ್ಣ
ನೋಡವರೊಳವಿಲ್ಲ ॥ಮಂದಾಲ॥

ಅಚ್ಚ ಉಚ್ಚಾಯದ ತೇರು
ಒತ್ತಿರುವುದು ಒಂದು ಹೂವಿನ ತೇರು
ಸುತ್ತಾ–ಮುತ್ತಾ ಮುತ್ತಿನ ಅಂಗಡಿ
ಅಷ್ಟೈಕೆ ಬೇಕಾದ ಅವಳದ ಅಂಗಡಿ
ಬೆಟ್ಟದಂತ ವ್ಯಾಪಾರದ ಅಂಗಡಿ
ಇರ್ದಿನಂಗಡಿ ಇಜಾರದಂಗಡಿ ॥ ಮಂದಾಲ ॥[1]

ಹಂಪಿ–ವಿಜಯನಗರ ಸಾಮ್ರಾಜ್ಯ ಕುರಿತಂತೆ ಸಾಕಷ್ಟು ಲಿಖಿತ ಮತ್ತು ಮೌಖಿಕ ಸಾಹಿತ್ಯ ಲಭ್ಯವಿದೆ. ಸಾಹಿತ್ಯ ಪ್ರಕಾರಗಳಲ್ಲಿ ಈಗಾಗಲೇ ಆಕರ ಸಂಗ್ರಹ, ಅಧ್ಯಯನ ಮತ್ತು ಸಂಶೋಧನೆಗಳಾಗಿವೆ. ಇತ್ತೀಚಿಗೆ ಹಂಪಿ ಕುರಿತ ಲಾವಣಿಯೊಂದನ್ನು ಸಂಗ್ರಹಿಸಿ ಇಲ್ಲಿ ವಿಶ್ಲೇಷಿಸುವ ಪ್ರಯತ್ನವಿದೆ. ಜನಪದ ಸಾಹಿತ್ಯದಲ್ಲಿ ಹಂಪಿಯ ಸ್ಮಾರಕ, ಚಾರಿತ್ರಿಕ ನೆಲೆ, ಅರಸ, ಪ್ರಕೃತಿ, ಆಚರಣೆ, ಸಂಪ್ರದಾಯ ಮತ್ತು ಸಂಸ್ಕೃತಿ ಬಿಂಬಿಸುವ ಲಾವಣಿ ಸಿಕ್ಕಿರುವುದು ಇದೇ ಮೊದಲು. ಇದು ಬಹು ಅಪರೂಪವಾದುದು.

ಪ್ರಸ್ತುತ ಲಾವಣೆ ಜಾನಪದ ಹಾಡಿನ ಸೊಗಡು ಹೊಂದಿದೆ. ಆದರೂ ಚಾರಿತ್ರಿಕ, ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಆಚರಣೆಗಳನ್ನು ಪ್ರಸ್ತುತ ಪಡಿಸುವಲ್ಲಿ ಯಶಸ್ವಿಯಾಗಿದೆ.

ಇದು ಯಾವ ಕಾಲಘಟ್ಟದಲ್ಲಿ ಹುಟ್ಟಿತು, ಮೊದಲು ಯಾರು ಹಾಡಿದವರು! ಎಲ್ಲಿ ಹುಟ್ಟಿತು ಎಂಬ ಅನೇಕ ಪ್ರಶ್ನೆಗಳು ಕಾಡುತ್ತವೆ. ವಕ್ತೃಗಳ ದಾಟಿಯಿಂದ 2–3 ತಲೆಮಾರುಗಳಿಂದ ಲಾವಣೆ ಚಾಲ್ತಿಗೆ ಬಂದಿರಬಹುದೆಂದು ಊಹಿಸಬಹುದಾಗಿದೆ. ಈ ಲಾವಣಿ ಹಂಪಿ–ವಿಜಯನಗರವನ್ನು ಕುರಿತಂತಿದ್ದರೂ, ಹಾಡುವುದು ಮಾತ್ರ 100–150 ಕಿ.ಮೀ. ದೂರದ ಚಿನ್ನಹಗರಿ ನದಿ ಪರಿಸರದ ಹೂಡೇಂ ಗ್ರಾಮದಲ್ಲಿ. ಹಾಗಾಗಿ ಸಾವಿರಾರು ವರ್ಷಗಳ ಇತಿಹಾಸ ಇರುವ ಹಂಪಿಗೆ ಬೇಟೆಗಾರರು ಮತ್ತು ಪಶುಪಾಲಕರು ಇಲ್ಲಿಗೆ ಆಗಾಗ ಬಂದು ಹೋಗಿರಬಹುದು. ಇಲ್ಲ ಈ ಪ್ರದೇಶದಿಂದ ಬೇರೆ ಕಡೆ ಹೋಗಿ ನೆಲಸಿರಬಹುದು. ಇದಕ್ಕೆ ಅವರು ಕಟ್ಟಿಕೊಂಡಿರುವ ಕಥನಗಳೇ ಆಧಾರ.

1. ಜನಪದರು ಕರೆಯುವ ಮಂದಾಲಗಿರಿ ಪರ್ವತ ಯಾವುದು? ಇದು ಹಂಪಿ ವಿರೂಪಾಕ್ಷನ ಎದುರಿಗೆ ಅಥವಾ ಪಕ್ಕದಲ್ಲೇ ಇರಬೇಕೆಂದು ನಂಬಲಾಗಿದೆ.[2] ಇತ್ತೀಚಿನ ಶೋಧನೆಗಳ ಪ್ರಕಾರ ತಳವಾರ ಘಟ್ಟದಿಂದ ಆನೆಗೊಂದಿಯನ್ನು ಪ್ರವೇಶಿಸುವಾಗ ಎಡಭಾಗಕ್ಕಿರುವ ಪರ್ವತವೇ ಮಂದಾಲಗಿರಿ ಎನ್ನುತ್ತಾರೆ. ಈ ಬಗ್ಗೆ ಅಧಿಕೃತ ಆಕರಗಳ ಕೊರತೆಯಿದ್ದು, ಜನಪದರ ವಿವರಗಳು ಬೆಳಕು ಚೆಲ್ಲುತ್ತವೆ. ಸಾಹಿತ್ಯ ಮತ್ತು ಮೌಖಿಕ ದಾಖಲೆಗಳಂತೆ ಈಗಿನ ಹೇಮಕೂಟವೇ ಹಿಂದಿನ ಮಂದಾಲಗಿರಿ ಪರ್ವತವೆಂದು ಪಶುಪಾಲಕರು ಕರದುಕೊಂಡಿದ್ದಾರೆ.[3] ಗೋವು, ಕುರಿಯನ್ನು ಒಂದು ಕಡೆ ಕೂಡಿ ತರುಬುವುದೇ ಮಂದೆ, ಅಂಥ ಮಂದೆಗಳನ್ನು ಈ ಬೆಟ್ಟದಲ್ಲಿ (ಚಿಕ್ಕ ಚಿಕ್ಕ ಬೆಟ್ಟಗಳು ಸುಂದರವಾಗಿದ್ದು), ಮಾಡಿದ ಕಾರಣ ಮಂದಲಗಿರಿ ಹೆಸರು ಬಂದಿರಬೇಕು. ಏಕೆಂದರೆ ಶಾಸನಗಳಾಗಲಿ ಈ ಬಗ್ಗೆ ಬೆಳಕು ಚೆಲ್ಲುವುದಿಲ್ಲ.[4]

2. ಹಂಪಿ ವಿರೂಪಾಕ್ಷನ ಆರು ಗಾಲಿನ ತೇರನ್ನು ಹೊಸದಾಗಿ ಮಾಡಿದಾಗ ಅದನ್ನು ನೋಡುವ ಭಾಗ್ಯ ಒಳಗಿನವರಿಗಿಲ್ಲ ಎಂಬರ್ಥವಿದೆ.[5] ಹಂಪಿ ತೇರು ಸಿದ್ಧಗೊಂಡಾಗ ಅದಕ್ಕೆ ಎಣ್ಣೆಹಾಕಿ, ತೇರಿನ ಮಂಟಪದ ಶೃಂಗಾರ, ಹೂವು,

ತಳಿರು ತೋರಣ ಕಟ್ಟಿದ್ದು ಗಮನಾರ್ಹ. ಜಾತ್ರೆ ಆಗುವಾಗ ತೇರು ಎಳೆಯುವ ಸಂಪ್ರದಾಯ ರೂಢಿಗೆ ಬಂದಿದೆ. ಇದಕ್ಕೆ ಯಾವುದೇ ಕಾಲಮಾನವಿಲ್ಲ. ಜಾತ್ರೆ ಮತ್ತು ರಥ ಎಳೆಯುವ ಕುರಿತು 18ನೇ ಶತಮಾನದಿಂದ ಮಾಹಿತಿ ಸಿಗುತ್ತದೆ.[6]

3. ಕಲಾ ಸೌಂದರ್ಯ ಹಾಗೂ ಪ್ರಕೃತಿ ಸೌಂದರ್ಯ ಕುರಿತು ಹೇಳುವಾಗ ಹಂಪಿ ಹೊಳೆ, ಬಸವನಮೂರ್ತಿ, ಬಾಳೆವನ, ತೆಂಗಿನ ವನ, ಸಾಲು ಸಾಲು ಸಂಪಿಗೆ ವನದ ವರ್ಣನೆಯಿದೆ ಈ ಕೃತಿಯನ್ನು ಇಂದಿಗೂ ನೋಡಬಹುದು.[7]

4. ಸಾಲುಮಂಟಪ, ಮೆಟ್ಟಿಲುಗಳು, ಉಪ್ಪರಿಗೆಗಳಿದ್ದು, ಎಡದಲ್ಲಿ ಪಾರ್ವತಿ ಗುಡಿ, ಬಲದಲ್ಲಿ ನಂದಿವಿಗ್ರಹ, ವೀರಭದ್ರ, ಗಣೇಶನಿಗೆ ಸೊಂಡಲದೇವರು ಎಂದು ಅಡ್ಡ ಹೆಸರಿನಿಂದ ಕರೆಯಲಾಗಿದೆ.[8]

5. ದವಸ ಧಾನ್ಯಗಳ ಸಂಗ್ರಹಿಸುವ ಉಗ್ರಾಣ, ದೀಪಸ್ಥಂಬವಿದ್ದು ವಿರೂಪಾಕ್ಷ, ಪಂಪಾದೇವಿಯರ ಗುಡಿಗಳ ಔಚಿತ್ಯವನ್ನು ಜನಪದರು ಪ್ರಶ್ನಿಸುತ್ತಾರೆ. ಲೋಕ ವಿಖ್ಯಾತಿ ಪಡೆದ ಹಂಪೆಯ ವಿರೂಪಾಕ್ಷನನ್ನು ನೋಡುವ ಭಾಗ್ಯ ಒಳಗಿನವರಿಗಿಲ್ಲ ಎನ್ನುತ್ತಾರೆ. ಹಂಪಿ ಪರಿಸರದ ಜನರಿಗಿಂತ ಹೊರಗಿನವರೇ ನೋಡಿ ಸಂತೋಷ ಪಡುವ ಅನುಭವವಿದೆ.

6. ರಾಶಿ ರಾಶಿ ಬೆಟ್ಟಗಳು, ಧ್ವಜ ನೆಡುವ ಪರ್ವತ, ಯುದ್ಧಭೂಮಿಯಲ್ಲಿ ಭಜನೆ ಮಾಡುವವರು, ಜಾಗಟಿ ಬಾರಿಸುವವರು, ಮ್ಯಾಳ ಊದುವವರು, ಕಹಳೆ ಊದುವವರು, ತಮಟೆ ಬಾರಿಸುವವರು, ಕೋಲಾಟ ಬಡಿಯುವವರು, ಚೆಂಡಿನ ಆಟ, ಬಗರಿನ ಆಟ, ದೊಂಬರಾಟ, ದೇವದಾಸಿಯರ ನರ್ತನೆ, ಬ್ರಾಹ್ಮಣ ಪುರೋಹಿತರ ಶ್ಲೋಕಗಳು, ಸಂಗೀತ ಶಬ್ದದಿಂದ ಕೂಡಿತ್ತು ಮಂದಾಲಗಿರಿ ಪ್ರದೇಶ.[9]

7. ತೇರು ಎಳೆಯುವ ಮುನ್ನ ಹೂವಿನಿಂದ ಅಲಂಕರಿಸಿದ ತೇರನ್ನು 'ಉಚ್ಚಾಯ' ಎಂದು ಎಳೆಯುತ್ತಾರೆ. ತೇರಿನ ಬೀದಿಯ ಸುತ್ತಮುತ್ತ ಮುತ್ತಿನ ಅಂಗಡಿ, ಹವಳದ ಅಂಗಡಿ, ಬೆಟ್ಟದಂತ ವ್ಯಾಪಾರದ ಅಂಗಡಿಗಳಿದ್ದವು.[10]

ಜನಪದರು ಹಂಪಿಯ ವೈಭವ, ಆಚರಣೆ, ಸಂಪ್ರದಾಯಗಳನ್ನು ನಿಸರ್ಗ ಸಂಪತ್ತಿನೊಂದಿಗೆ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಹಂಪಿ, ಆನೆಗೊಂದಿ, ಕಮಲಾಪುರ, ಮಲಪನಗುಡಿ, ನಾಗೇನಹಳ್ಳಿ, ಹುಲಗಿ, ಹೊಸೂರು, ಸಣಾಪುರ ಪರಿಸರದಲ್ಲಿರುವ ಶಾಸನ ಹಾಗೂ ಸ್ಮಾರಕಗಳಲ್ಲಿ ಮಳಲಕೋಟೆ ಇರುವುದು ತಿಳಿಯುತ್ತದೆ.[11]

ಇಲ್ಲಿ ಮಂದಾಲಗಿರಿ ಪರ್ವತ, ಮಾಲ್ಯವಂತ-ಮಾತಂಗ, ಮಳಲ ಕೋಟೆಗೆ ಅವಿನಾಭಾವ ಸಂಬಂಧವಿದ್ದಂತಿದೆ.[12] ಅಂದರೆ 1565ರ ನಂತರ ಇಲ್ಲಿನ ನಿವಾಸಿಗಳು ಬೇರೆಕಡೆ ಹೋಗಿ ನೆಲಸಿರಬಹುದು. ಆಗ ತಮ್ಮ ಪೂರ್ವಜರ ನೆನಪುಗಳನ್ನು ಹಾಡುಗಳಲ್ಲಿ ಜೀವಂತಗೊಳಿಸಿದ್ದಾರೆ. ಮಳಲಿನ ಕೋಟೆ ಚಕ್ರತೀರ್ಥದ ಈಶಾನ್ಯ ದಿಕ್ಕಿಗೆ ಇದೆ ಎನ್ನುತ್ತಾರೆ. ಇನ್ನು ಕೆಲವರು ಹುಲಗಿಯಿಂದ ಶಿವಪುರಕ್ಕೆ ಹೋಗುವ ದಾರಿಯಲ್ಲಿ ಮರಳಿನ ರಾಶಿಗಳ ಗುಂಪಿಗೆ ಆ ರೀತಿ ಕರೆದಿರಬಹುದು.[13] ವಾಸ್ತವವಾಗಿ ಅಚ್ಯುತರಾಯ ದೇವಾಲಯದ ಹಿಂಭಾಗದಲ್ಲಿ 'ಮಳಲುಕೋಟೆ' ಎಂಬ ಬೇಚರಾಕ್ ಗ್ರಾಮ ಇತ್ತೆಂದು ಶಾಸನದಿಂದ ದೃಢಪಡಿಸಬಹುದು.[14]

ಕಮಲಾಪುರದ ಪಟ್ಟಣದ ಬಂಡೆಕೆರೆ ಮ್ಯಾಸನಾಯಕರ ಗುರಿಕಾರ ಕಾಟಯ್ಯನ ಬಳಿ ವಿಜಯನಗರೋತ್ತರ ಕಾಲಕ್ಕೆ ಸೇರಿದ ತಾಮ್ರಪಟ ಶಾಸನವಿದೆ. ಈ ಶಾಸನದಲ್ಲಿ 'ಶ.ಕ. ವರ್ಷ 1614ನೇ ನಳ ಸಂವತ್ಸರದಲ್ಲಿ ಮಂದಯ್ಯ ಚಿತ್ತಯ್ಯಗೆ ಮ್ಯಾಸಬ್ಯಾಡ್ಕಿ ನಾಯಕತನಾ'ವನ್ನು ಆನೆಗೊಂದಿ ಅರಸರು ಕೊಟ್ಟ ಸಂಗತಿ ತಿಳಿದುಬರುವುದು ಗಮನಾರ್ಹವಾದುದು. ಶಾಸನ ಪಾಠ ಹೀಗೆದೆ: ಶ್ರೀರಾಮಾಯಣ ಮಂಡ್ಲದ ಮಂದಯ್ಯ ಚಿತ್ತಯ್ಯಗೆ ಮ್ಯಾಸಬ್ಯಾಡ್ಕಿ ನಾಯಕತನಾ ಕೊಟ್ಟ ಶಾಸನ ಶಕ 1614 ಮಾಘ ಶು1 ನಳ ಸ॥ ಎಂದು ಒಂದೇ ಭಾಗದಲ್ಲಿದೆ. ಹಿಂಭಾಗದಲ್ಲಿ ಅಕ್ಷರಗಳಿಲ್ಲ (ಹೆಚ್ಚಿನ ವಿವರಕ್ಕೆ ನೋಡಿ: ವಿರೂಪಾಕ್ಷಿ ಪೂಜಾರಹಳ್ಳಿ, ಚಿನ್ನಹಗರಿ ಸಿರಿ, 2006, ಪು.79-86). ಪ್ರಸ್ತುತ ಶಾಸನದ ಕಾಲಮಾನ ಕ್ರಿ.ಶ. 1692 ನವೆಂಬರ್ 1 ಎಂದು ಖಚಿತವಾಗುತ್ತದೆ. ಶಾಸನದಲ್ಲಿ ಅರಸನ ಉಲ್ಲೇಖವಿಲ್ಲ. ಆದರೂ ತೌಲನಿಕವಾಗಿ ಗಮನಿಸಿದಾಗ ಅರವೀಡು ವಂಶದ ವೆಂಕಟಪತಿರಾಯ (1586-1614), ಚಿತ್ರದುರ್ಗದ ಬರ್ಮಪ್ಪನಾಯಕ (1689-1721) ಆನೆಗೊಂದಿಯ ವೀರಪ್ರತಾಪ ವೆಂಕಟಪತಿರಾಯರನ್ನು (ಕಂಪಲಿಶಾಸನ 1691) ಸ್ಮರಿಸಬಹುದಾಗಿದೆ. ಆದರ ಈ ಶಾಸನವನ್ನು ವೀರಪ್ರತಾಪ

ವೆಂಕಟಪತಿರಾಯರು ಕೊಟ್ಟಿರಬೇಕು. ಹೀಗಾಗಿ ಬೇಡನಾಯಕರು ತಳವಾರ, ದಂಡನಾಯಕ, ಸೈನಿಕರಾಗಿ ಕಾರ್ಯನಿರ್ವಹಿಸಿದ ಕಾರಣಕ್ಕೆ ಮೇಲಿನ ಶಾಸನ ಕೊಟ್ಟಿರಬಹುದೆಂದು ಹೇಳಬಹುದು. ಮೀಸಲು ಪಡೆ, ಬೇಡರ ಪಡೆಗಳು ಅಂದು ಕಾರ್ಯನಿರ್ವಹಿಸುತ್ತಿದ್ದವು. ಹೀಗಾಗಿ ಮಂದಯ್ಯ-ಚಿತ್ತಯ್ಯಗೆ ಈ ಮ್ಯಾಸ ಬ್ಯಾಡ್ಗಿ ನಾಯಕತನ ಎಂಬ ಗೌರವ ದೊರತಂದಿದೆ. ವೇಲುಗೋಟಿ ಎಚ್ಚಮನಾಯಕ ವಿಜಯನಗರ ಸಾಮ್ರಾಜ್ಯದ ನಿಷ್ಠಾವಂತ ದಂಡನಾಯಕ. ಅದೇ ವಂಶಸ್ಥರನ್ನು ರತ್ನಸಿಂಹಾಸನದಲ್ಲಿ ಕುಳ್ಳಿರಿಸಲು ಕ್ರಿ.ಶ. 1614ರಲ್ಲಿ ಹೋರಾಟ ಮಾಡಿದ ಮಹಾಸಾಧ್ವಿ ಶಿರೋಮಣಿ. ಈತನ ಮೂಲ ಮಂದಲಗೋತ್ರದ ಕಾಮಗೇತಿ ವಂಶ ಎಂದು ತಿಳಿಯುತ್ತದೆ. ಹಂಪಿ ಪರಿಸರದಲ್ಲಿ ಬೇಡರು ಬೇಟೆ ಮತ್ತು ಪಶುಪಾಲನೆ ವೃತ್ತಿಗಳಿಂದ ಆದಿಯಿಂದಲೂ ವಾಸಿಸಿದ್ದಾರೆ. ಹಾಗೆಯೇ ರಾಜ ಪ್ರಭುತ್ವದ ಸಂದರ್ಭದಲ್ಲಿ ಹೆಗಲುಕೊಟ್ಟು ನಿಂತಿದ್ದಾರೆ.[15]

ಮಂದಾಲಗಿರಿ ಹಂಪಿಯ ಹೇಮಕೂಟ, ಮಾತಂಗಪರ್ವತ, ಕಮಲಾಪುರದ ಹಳ್ಳಿಕೆರೆಯ ಉತ್ತರಕ್ಕಿರುವ ಬೆಟ್ಟ ಹಾಗೂ ಕೋಟೆಯನ್ನು ಜನಪದರು ಬೇರೆ ಬೇರೆ ಕಥನಗಳಿಂದ ಕರೆದುಕೊಂಡಿದ್ದಾರೆ.[16] ವಾಸ್ತವವಾಗಿ ಅದು ಮಳಲಕೋಟೆ ಎಂದು ಹೇಳಿದರೂ, ಶಾಸನ ಹಾಗೂ ಸಾಹಿತ್ಯ ಉಲ್ಲೇಖಗಳು ಕಮಲಮಹಲ್ ಹಿಂಭಾಗ ಹಾಗೂ ಅಚ್ಯುತರಾಯ ದೇವಾಲಯದ ದಕ್ಷಿಣ ಭಾಗ ಎಂದು ಖಚಿತಪಡಿಸಬಹುದಾಗಿದೆ. ಸ್ಥಳನಾಮಗಳಲ್ಲಿ 'ಗಿರಿ' ಎಂಬ ಹೆಸರನ್ನು ವೈಷ್ಣವ ಧರ್ಮಕ್ಕಿಂತಲೂ (ವೆಂಕಟಗಿರಿ) ಶೈವಧರ್ಮದ ಸ್ಥಳನಾಮಗಳು ವ್ಯಾಪಕವಾಗಿವೆ. ಅವುಗಳ ಶ್ರೀಗಿರಿ (ಶ್ರೀಶೈಲ), ಶುಕ್ಲಗಿರಿ (ಶಿವ=ನನ್ನಿವಾಳ ಬೆಟ್ಟ), ಚುಂಚನಗಿರಿ (ಭೈರವ), ಹೇಮಗಿರಿ (ಆಂಜನೇಯ), ದೇವಗಿರಿ (ಕಾರ್ತಿಕೇಯ) ಮೊದಲಾದ ಉದಾಹರಣೆಗಳಿವೆ. ಮುಳ್ಳಯ್ಯನಗಿರಿ, ಬಾಬಾಬುಡನ್‌ಗಿರಿಗಳ ಇತಿಹಾಸ ಬೇರೆ. ಇಲ್ಲಿ ಬೇಟೆ ಮತ್ತು ಪಶುಪಾಲನಾ ವ್ಯವಸ್ಥೆಯಲ್ಲಿ ಹುಟ್ಟಿಕೊಂಡ ಹೆಸರುಗಳು ಮಾತ್ರ ಚಾರಿತ್ರಿಕ ಮಹಾತಿರುವೊಂದನ್ನು ಸೃಷ್ಟಿಸಿರುವುದು ನಿಜ ಇದಕ್ಕೆ ಹಂಪಿ ಪರಿಸರ ಉತ್ತಮ ಉದಾಹರಣೆ ಆಗಿದೆ..[18]

ಬೇಟೆ ಮತ್ತು ಪಶುಪಾಲನಾ ಸಮುದಾಯಗಳು ಹಂಪಿ ಪ್ರದೇಶಕ್ಕೆ ಬಂದು ನೆಲಸಿದ ತರುವಾಯ ಹಂಪಿ ವಿರೂಪಾಕ್ಷನನ್ನೇ ಆರಾಧ್ಯ ದೈವವಾಗಿ ಪರಿಗಣಿಸಿದ್ದಾರೆ. ಆತನ ನೆಲೆಗೆ ಮಂದಾಲಗಿರಿ ಎಂದು ಕರೆದುಕೊಂಡಿದ್ದಾರೆ.[19] ವಿರೂಪಾಕ್ಷನನ್ನು ಶಿವನೆಂದು ಮಂದಲಮಹದೇವ, ಮಂದಾಲಗಿರಿ ಒಡೆಯನೆಂದು ಭಾವಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಜನಪದರು ಲಾವಣಿಯನ್ನು ಕಟ್ಟಿ ಹಾಡಿರುವುದರಲ್ಲಿ ಸತ್ಯವಿದೆ. ಆಗಿನ ಕಾಲದ ವೈಭವ, ಸಂಸ್ಕೃತಿ ಇಲ್ಲಿ ಅನಾವರಣಗೊಂಡಿದೆ. ಲಾವಣಿಯ ಮೂಲಕ ಹಂಪಿಗೆ ಮಂದಾಲಗಿರಿ ಎಂದು ಕರೆಯುತ್ತಾರೆಂಬುದು ಹೊಸ ವಿಷಯ. ಈಗಿನ ವಿರೂಪಾಕ್ಷ ದೇವಾಲಯದ ಇಕ್ಕೆಲಗಳ (ದಕ್ಷಿಣ ಭಾಗ)ನ್ನು ಮಂದಾಲಗಿರಿ ಎಂದು ನಂಬಿರುವರು. ಆಂಧ್ರ-ಕರ್ನಾಟಕದಲ್ಲಿ ಈ ಹೆಸರಿನ ಗ್ರಾಮಗಳಿವೆ.

ಮಂದಾಲಗಿರಿಯಂತೆ ಮಳಲಕೋಟೆ ಎಂಬ ಪ್ರದೇಶವು ಇದೆ. ಈಗಿನ ಅಚ್ಯುತರಾಯ ದೇವಾಲಯದ ದಕ್ಷಿಣ ಹಾಗೂ ಕಮಲ ಮಹಲ್‌ನ ಉತ್ತರಕ್ಕೆ ಮಳಲಕೋಟೆ ಇತ್ತು. ಬಹುಶಃ ಇದು ಆ ಕಾಲಕ್ಕೆ ಗ್ರಾಮವಾಗಿದ್ದಿರಬೇಕು. ಹುಲಗಿ, ಹಂಪಿ, ಕಮಲಾಪುರದಂತೆ ಮಳಲಕೋಟೆಯಲ್ಲಿಯ ಜನವಸತಿ ಇತ್ತು. ಮಳೆಲಾರು ಎಂಬ ಬೆಡಗಿನ ಜನ ಇಲ್ಲಿಂದ ಚದುರಿಹೋಗಿ ನೆಲಸಿರುವುದು ತಿಳಿಯುತ್ತದೆ (ಹೆಚ್ಚಿನ ವಿವರಕ್ಕೆ ನೋಡಿ: ಮಳೆಲಾರು ಬೆಡಗಿನ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆ, ಚರಿತ್ರೆ ಅಧ್ಯಯನ, ಸಂ.7 ಸಂ.1, 2011). ಇದು ಒಂದು ಕಾಲಕ್ಕೆ ಐತಿಹಾಸಿಕ ಮಹತ್ವ ಪಡೆದ ಸ್ಥಳ.

ಉಪಸಂಹಾರ

ಉಪಸಂಹಾರ ರೂಪದಲ್ಲಿ ಹೇಳುವುದಾದರೆ, ಪುರಾತನ ಕಾಲದಿಂದಲೂ ಹಂಪಿಗೆ ಮಹತ್ವದ ಸ್ಥಾನವಿದೆ. ವಿವಿಧ ರಾಜವಂಶಗಳ ಆಳ್ವಿಕೆ ಮತ್ತು ವಿಜಯನಗರ ಕಾಲದಲ್ಲಿ ಬೇಟೆಗಾರರು ಮತ್ತು ಪಶುಪಾಲಕರು ಈ ಪ್ರದೇಶದಲ್ಲಿ ನೆಲಸಿರುತ್ತಾರೆ. ಆಗ ಅವರು ಹಂಪಿಯನ್ನು ಮಾಸ್ಲಯ್ಯನಗುಡ್ಡ ಎಂದು, ತಾವು ನೆಲಸಿದ ತಾಣವನ್ನು ಮಂದಾಲಗಿರಿ ಪರ್ವತವೆಂದು, ಒಂದು ಸಮುದಾಯ (ಕುಮ್ಮಟದುರ್ಗ)ದ ಮಳಲುಕೋಟೆ ಯುದ್ಧದ ಬಗ್ಗೆ ತಿಳಿಯುತ್ತದೆ. ವಿಜಯನಗರ ಪೂರ್ವ ಮತ್ತು ಅನಂತರದಲ್ಲಾದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ತಿಳಿಸುವಾಗ ಈ ಭೌಗೋಳಿಕ ಪ್ರದೇಶಗಳ ಚರಿತ್ರೆ ಪುನಾರಚನೆಯಲ್ಲಿ ನೆರವಾಗುತ್ತದೆ.

ಅಡಿಟಿಪ್ಪಣಿಗಳು ಮತ್ತು ಆಧಾರ ಸೂಚಿ

1. ಈ ಮೇಲಿನ ಜನಪದ ಗೀತೆಯನ್ನು ಹಾಡಿದವರು ಕೂಡ್ಲಿಗಿ ತಾಲೂಕು ಹೂಡೇಂ ಗ್ರಾಮದ ಸಣ್ಣಮಲ್ಲಯ್ಯ. ಪ್ರಸ್ತುತ ಗೀತೆಯಲ್ಲಿ ಹಂಪೆಯ ಸ್ಮಾರಕಗಳು, ಜಾತ್ರೆ-ವೈಶಿಷ್ಟ್ಯತೆಗಳನ್ನು ಮೆಲುಕು ಹಾಕಲಾಗಿದೆ. ಗತಕಾಲದಲ್ಲಿ ಸ್ಥಿತಿ-ಗತಿಗೂ ಮತ್ತು ಇಂದಿರುವ ಹಂಪೆಯ ಸ್ಥಿತಿ-ಗತಿಗೂ ವಾಸ್ತವವಾಗಿ ವ್ಯತ್ಯಾಸಗಳಿವೆ. ಇಂಥಾ ಜನಪದ ಗೀತೆಯ ಮೂಲಕ ಮರೆಯಾಗಿದ್ದ ಸಂಸ್ಕೃತಿಯ ಲಕ್ಷಣಗಳನ್ನು ಅವಲೋಕಿಸಬಹುದಾಗಿದೆ.
2. ಮಾಸ್ಲಯ್ಯನ ಗುಡ್ಡ: ಹಂಪಿಗೆ ಇರುವ ಮತ್ತೊಂದು ಹೆಸರು, ಮೊದಲು ಮಾಸ್ಲಯ್ಯ ಎಂಬ ವ್ಯಕ್ತಿ ಒಬ್ಬನೇ ಈ ಗುಡ್ಡದಲ್ಲಿ ಕೆಲವು ಕಾಲ ವಾಸವಾಗಿದ್ದು, ಇಂದಿನ ಹೇಮಕೂಟ ಹಾಗೂ ರತ್ನಕೂಟದ ಗುಡ್ಡದ ಬಳಿಯಲ್ಲಿ ಸುತ್ತಾಡಿಕೊಂಡಿದ್ದನಂತೆ. ಈ ಕಾರಣದಿಂದಾಗಿ ಈ ಗುಡ್ಡಕ್ಕೆ ಮಾಸ್ಲಯ್ಯನ ಗುಡ್ಡ ಎಂಬ ಹೆಸರು ಬಂತೆಂದು ಹೇಳುತ್ತಾರೆ (ಹಂಪಿ ಜಾನಪದ, ಪುರುಷೋತ್ತಮ ಬಿಳಿಮಲೆ, ಚೆಲುವರಾಜು, 1996, ಪು. 76).
3. ಅಂಜನಾದ್ರಿ, ಮಾಲ್ಯವಂತ, ಋಷ್ಯಮೂಕ, ಮಾತಂಗ ಪರ್ವತಗಳಿವೆ. ಇವುಗಳಂತೆ ಮಂದಾಲಗಿರಿಯು ಇತ್ತು.
4. ನೋಡಿ: ತುಂಗಭದ್ರಾ ನಂದಿಯ ತೀರದಲ್ಲಿ ಇಂದಿಗೂ ಮರಳ ಕೋಡಿ ಅಥವಾ ಮರಳ ಸಂಗ್ರಹವಿದೆ. ತಳವಾರಘಟ್ಟದಿಂದ ವೆಂಕಟಾಪುರದವರೆಗೆ ಮರಳನ್ನು ಸಂಗ್ರಹಿಸಲಾಗಿದೆ. 'ಹಂಪಿಯ ಶಾಸನದಲ್ಲಿ ಪರಿಸರ ಪ್ರಜ್ಞೆ' ಎಂಬ ಲೇಖನದಲ್ಲಿ ಸಿ.ಎಸ್. ವಾಸುದೇವನ್ ಅವರು, ವಿಜಯನಗರ ಅಧ್ಯಯನ ಸಂಪುಟ 17ರಲ್ಲಿ ಪು. 227+ರಲ್ಲಿ ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಮರಳಕೋಡಿ ಮುಲಾರ ದೇವರಿಗೆ ನಾಗಬೋವನ ಮಗ ಹೊಂನೆಬೋವನು ಆರುನೂರು ಪ್ರತಾಪ ಗದ್ಯಾಣಗಳನ್ನು ನೀಡುತ್ತಾನೆ.
5. ಕೆಲವರಿಗೆ ಮಾತ್ರ ನೋಡಲು ಅವಕಾಶವಿತ್ತು. ಉಳಿದವರಿಗೆ ಇರಲಿಲ್ಲ. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ 5 ಪರ್ವಗಳ ಪ್ರಸ್ತಾಪವಿದೆ. ಹೇಮಕೂಟ, ಮಾತಂಗ, ಮಾಲ್ಯವಂತ, ಋಷಿಮುಖ, ಕಿಷ್ಕಿಂದ ಮತ್ತು ಮಾತಂಗ ಮಹೀಧರ.
6. ಪಂಪಾ ಮಹಾತ್ಮೆ, ಅಹೋಬಲನ ವಿರೂಪಾಕ್ಷ ವಸಂತೋತ್ಸವ ಚಂಪೂ ಕರಸ್ಥಲ ನಾಗಲಿಂಗನ ಚರಿತ್ರೆಯಲ್ಲಿ ಮಾತಂಗ ಪರ್ವತದ ಉಲ್ಲೇಖವಿದೆ.
7. ವಿಜಯನಗರ ಅಧ್ಯಯನ ಸಂ-13, (2007) ಪು. 65, ಹಂಪಿ ಶಾಸನಗಳಲ್ಲಿ ದೇಶೀ ಪ್ರವಾಸಿಗರು ಎಂಬ ಲೇಖನವನ್ನು ಎನ್.ಎಸ್. ವೀರೇಶ ಉತ್ತಂಗಿ ಅವರು ಪ್ರಕಟಿಸಿದ್ದಾರೆ. ಇದರಲ್ಲಿ ಕ್ರಿ.ಶ. 27-07-1494ರ ತೆಲುಗು ಶಾಸನ 'ಕಾಮುಂಗೋಲನಿ ಸೂರಪರಾಜು ಅನ್ನಯ್ಯಕೊಡಕು ಅಂನಯ್ಯ(ನು) ಶ್ರೀ ತುಂಗಭದ್ರಾ ತೀರಂ ಭಾಷ್ಕರ ಕ್ಷೇತ್ರ ಮಂದಲ ಶ್ರೀ ಪಂಪಾ ವಿರೂಪಾಕ್ಷ ದೇವಂಡು' ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿ (ಕನ್ನಡ ವಿ.ವಿ. ಶಾಸನ ಸಂಪುಟ-3 ಹಂಪಿ ಶಾಸನಗಳು ಸಂ-60, ಪು. 51)... ಆಂಧ್ರದ ಕಾಮುಂಗೋಲ ಪ್ರದೇಶದ ರಾಜನಾದ ಸೂರಪರಾಜನು ಮಗನಾದ ಅನ್ನಯ್ಯ ತನ್ನ ಆಯುಷ್ಯ, ಆರೋಗ್ಯ ವೃದ್ಧಿಯಾಗಲೆಂದು ತುಂಗಭದ್ರಾ ತೀರದ ಭಾಷ್ಕರ ಕ್ಷೇತ್ರದ ಶ್ರೀ ಪಂಪಾ ವಿರೂಪಾಕ್ಷ ದೇವರಲ್ಲಿ ಬೇಡಿಕೊಂಡ ವಿವರವಿದೆ.
8. ಆನೆಗೊಂದಿಗೆ ವಿಜಯನಗರ ಕಾಲದಲ್ಲಿ 'ಹಸ್ತಿನಾವತಿ' ಮತ್ತು ನರಕದಕೋಟೆ ಎಂದು ಕರೆಯುತ್ತಿದ್ದರು. ಹಂಪಿಯಲ್ಲಿರುವ ಸ್ಮಾರಕಗಳಿಗೆ ಬೇರೆ ಬೇರೆ ಹೆಸರುಗಳಿಂದಲೂ ಕರೆಯುತ್ತಾರೆ.
9. ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟು, ಐಬಿಎಚ್ ಬೆಂಗಳೂರು, ಪು-494ರಲ್ಲಿ
   1. ಮಂಡಲಿ= ಗುಂಪು, ಸಮೂಹ ಸಭೆ, ಗೋಷ್ಠಿ ಅಂಗಡಿ, ಮಳಿಗೆ.
   2. ಮಂದ ಮಾರುತ= ಮೆಲ್ಲನೆ ಬೀಸುವ ಗಾಳಿ, ಮೇಲುಗಾಳಿ.
   3. ಮಂದಲಿಗೆ= ಚಾಪೆ.
   4. ಮಂದ= ದಡ್ಡ, ತಿಳಿಗೇಡಿ ಮಂದಲ= ತೆಲುಗು ಪದ, ದನ ಅಥವಾ ಕುರಿಗಳನ್ನು ತರಬುವ ಜಾಗಕ್ಕೆ ಮಂದೆ ಎನ್ನುವರು. ಕೆಲವು ಕಡೆ ತುರುಮಂದೆ ಎನ್ನುತ್ತಾರೆ.
   5. ಮಂದಾಲಗಿರಿಯಲ್ಲಿ ಮಂದಭೂಪಾಲ ರಾಜ್ಯಾಳ್ವಿಕೆ ಮಾಡಿದ ಬಗ್ಗೆ ಜನಪದ ಕಥೆಗಳಿವೆ.
10. ವಾಸುದೇವ ಬಡಿಗೇರ ಅವರು ಋಷ್ಯಶೃಂಗ ಮುನಿ ಶಿಲ್ಪಿ ಎಂಬ ಲೇಖನವನ್ನು ವಿಜಯನಗರ ಅಧ್ಯಯನ ಸಂ.13ರಲ್ಲಿ (2007 ಪು. 180-181) ಪ್ರಕಟಿಸಿದ್ದಾರೆ. ಹಂಪಿಯನ್ನು ಪಂಪಾತೀರ್ಥ, ಹಂಪಾತೀರ್ಥ, ವಿರೂಪಾಕ್ಷತೀರ್ಥ, ಮಾನಸಸರೋವರ, ಭಾಸ್ಕರತೀರ್ಥ, ಪಂಪಾಪುರ ಮತ್ತು ವಿರೂಪಾಕ್ಷ ಪಟ್ಟಣ ಎಂದು ಕರೆಯಲಾಗಿದೆ. ಪಂಪಾ ಮಹಾತ್ಮೆಯಲ್ಲಿ ಮಾಲ್ಯವಂತಗಿರಿ, ಋಷ್ಯಮುಖ ಪರ್ವತ, ಕಿಷ್ಕಿಂಧಾದ್ರಿ, ಹೇಮಕೂಟ, ವಿಪ್ರಕೂಟ, ಗಂಧರ್ವಗಿರಿ, ಜಂಬೂನಾಥಗಿರಿ, ಸೋಮಪರ್ವತ,

ಮಣಿಭದ್ರೇಶ್ವರ ಪರ್ವತಗಳು ರಾಮಾಯಣದಲ್ಲಿ ಬರುವ ಹೆಸರುಗಳಿಗೆ ಹೋಲುತ್ತವೆ ಎಂದು ವಿದ್ವಾಂಸರು ತಿಳಿಸಿದ್ದಾರೆ.

11. ಮಳೆಯಗೋತ್ರ ಜರಿಮಲೆ ಮತ್ತು ಗುಡೆಕೋಟೆ ಪಾಳೆಯಗಾರರು ಸೇರಿದ್ದಾರೆ. ಮಳೆಲಾರು ಎಂಬ ಬೆಡಗಿನ ಬೇಡರು ತುಂಗಭದ್ರಾ ನದಿ ದಕ್ಷಿಣದಿಂದ ವೇದಾವತಿ ನದಿ ಉತ್ತರದವರೆಗೆ ನೆಲಸಿದ್ದಾರೆ.

12. (1) ಇಮ್ಮಡಿ ಹರಿಹರನ ಆಳ್ವಿಕೆ ಸಂದರ್ಭದಲ್ಲಿ (31–5–1379) ಕುಕನೂರಿನ ಸಾವಿರ ಮಹಾಜನರಲ್ಲಿ ಮುಖ್ಯಸ್ಥರಾದ ಶ್ರೀ ಗಂಡಿನ ಭಟ್ಟಪ್ಪಯ್ಯನಿಗೆ ಕೊಟ್ಟ ಕುಕನೂರಿನ ಗ್ರಾಮದ ಪ್ರಭುತ್ವಕ್ಕೆ ಸಲ್ಲುವ ತೇಜ ಸ್ವಾಮ್ಯ ನೀಡುತ್ತಾನೆ. ಕುಕನೂರಿನ ಅಗ್ರಹಾರವು ನಷ್ಟವಾಗಿ ಹೋಗಿರಲು ಜೀರ್ಣೋದ್ಧಾರ ಮಾಡಿ ಕುಕನೂರು ಶ್ರೀ ಮಹಾಮಾಯ ಅಂಗರಂಗ ಭೋಗಕ್ಕೆಂದು.... ಗ್ರಾಮಗಳನ್ನು ದತ್ತಿ ಬಿಟ್ಟ ಸಂಗತಿ ತಿಳಿಯುತ್ತದೆ. ಇದರಲ್ಲಿ 'ಮಂಡಲಗಿರಿ ಕೊಂಡ' (ಪು.220) ಎಂದು ತಿಳಿದುಬರುತ್ತದೆ.

(2) ವಿಠಲ ದೇವಾಲಯದ ರಂಗಮಂಟಪದ ದಕ್ಷಿಣ ಪ್ರವೇಶ ದ್ವಾರದ ಬಲಭಾಗದಲ್ಲಿರುವ ಶಾಸನ ಶಾಲಿವಾರ್ಹಶಕ 1435 ಶ್ರೀಮುಖ ಚಯಿತ್ರ ಶುದ್ಧ ಪಂಚಮಿ ಅಂದರೆ ಕ್ರಿ.ಶ. 11–3–1513ಕ್ಕೆ ಸಮವಾಗುತ್ತದೆ. ಕೃಷ್ಣದೇವರಾಯನು ತನ್ನ ತಂದೆ–ತಾಯಿಯರಿಗೆ ಪುಣ್ಯವಾಗಲೆಂದು ಶ್ರೀ ವಿಠಲ ದೇವರ ಅಮೃತ ಪಡಿ ನೈವೇದ್ಯ, ಅಂಗರಂಗ, ವೈಭೋಗ, ಪಾಲ್ಗುಣಮಾಸ, ವೈಶಾಖ ಮಾಸದ ರಥೋತ್ಸವಗಳಿಗೆ ನಿತ್ಯೋತ್ಸವ, ಪಕ್ಷೋತ್ಸವ ಮಾಸೋತ್ಸವ, ಸಂವತ್ಸರೋತ್ಸವ ನಿತ್ಯ ನೈಮಿತ್ತಿಕ ದೀಪಾರಾಧನೆ ಮಹಾಪೂಜೆಯ ನೈವೇದ್ಯಕ್ಕಾಗಿ ಹುಲಿಗೆಯ ಮಾಗಣೆಯ ಹರಿಹರಪುರ, ಹೊಸವೂರು ಮಾಗಣೆಯ ವಿರುಪಾಪುರ, ಮಳಲ ಕೋಟೆಯ ಗೋರಿಕೆಳಗಿನ ಗದ್ದೆ, ಗೋಪಿಸೆಟಿಹಳ್ಳಿ ಈ ಮೂರು ಗ್ರಾಮಗಳನ್ನು ದಾನವಾಗಿ ನೀಡುತ್ತಾನೆ. ಈ ಗ್ರಾಮಗಳಿಗೆ ಎಲ್ಲಾ ತರಹದ ಸುಂಕದಿಂದ ವಿನಾಯಿತಿ ನೀಡಿರುತ್ತಾನೆ. ಕೃಷ್ಣದೇವರಾಯನ ಪಟ್ಟದ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿ ಅಮ್ಮನವರು ವಿಠಲದೇವರಿಗೆ ಗೋಪುರಗಳನ್ನು ಕಟ್ಟಿಸಿ ದೇವರಿಗೆ ಚಿನ್ನ ಪೂಜಾ ಸಾಮಗ್ರಿಗಳನ್ನು ದಾನವಾಗಿ ನೀಡುತ್ತಾರೆ (ಪು.131). ಸದಾಶಿವರಾಯನು ವಿಠಲದೇವರಿಗೆ ಪೂಜಾಕಾರ್ಯಗಳಿಗಾಗಿ ಭೂದಾನ ನೀಡಿರುತ್ತಾನೆ. ಕೋಟೆ ಪ್ರದೇಶಗಳನ್ನು ನೀಡುವ ಉಲ್ಲೇಖವಿದೆ (ಪು.146–159, 163).

13. ಹೊಸಪೇಟೆ ನಗರದ ಸಣ್ಣಕ್ಕಿ ವೀರಭದ್ರ ದೇವಾಲಯದಲ್ಲಿರುವ ಜೈನಶಾಸನದಲ್ಲಿ ಕುಂತಳ ದೇಶವನ್ನು ಹೆಸರಿಸುವಾಗ ಮಂದರಗಿರಿ ಎಂಬ ಉಲ್ಲೇಖವಿದೆ.

14. ಮಂದರಲಗಿರಿ ಆಂಧ್ರಪ್ರದೇಶ, ಅನಂತಪುರ ಜಿಲ್ಲೆಯ ರಾಯದುರ್ಗ ತಾಲೂಕಿನ ಮುರಡಿ ಆಂಜನೇಯನ ಕ್ಷೇತ್ರ ಹಾಗೂ ಕಸಾಪುರ, ನೇಮಕಲ್ಲು ಆಂಜನೇಯ ಕ್ಷೇತ್ರಗಳಿಗೆ ಹೋಗುವ ದಾರಿಯಲ್ಲಿ ಸಿಗುವ ಬೆಟ್ಟಗಳು.

15. 16–17ನೇ ಶತಮಾನದಿಂದ ಆನೆಗೊಂದಿ ಕೋಟೆಗೆ ನರಕದ ಕೋಟೆ ಎಂದು ಕರೆಯುತ್ತಾರೆ.

16. ಮಂದಲ ಎಂಬುದು ಬೇಡ ಬುಡಕಟ್ಟಿನ ಒಂದು ಬೆಡಗು. ಕಮಲಾಪುರದ ಗುರಿಕಾರ ಕಾಟಯ್ಯನ ಬಳಿಯಿರುವ ಕಂಚಿನಪತ್ರದಲ್ಲಿ ಮಂದಯ್ಯ ಎಂಬ ಹೆಸರು ಉಲ್ಲೇಖವಾಗಿದೆ.

17. ಮಂದಲ ಮಲ್ಲೇಶ್ವರ ಪರ್ವತ ಹುಚ್ಚುಮಲ್ಲಯ್ಯನ ಬೆಟ್ಟ ರಾಯದುರ್ಗ ತಾಲೂಕಿನಲ್ಲಿದೆ. ಇದು ಸಂಚಿಮ್ಯಾಸರಿಗೆ ಇದು ಪವಿತ್ರ ಕ್ಷೇತ್ರ.

18. ಮಂದಲಗಿರಿ ಅಂದರೆ ಶಿವನಗಿರಿ ಎಂದು ಸರಳವಾಗಿ ನಿರೂಪಿಸಬಹುದು. ಶಿವನನ್ನು ಮಂದಲ ಮಹಾದೇವ ಎನ್ನುವರು. ಪಶುಪಾಲಕರು ತನ್ನ ಮಂದೆಯನ್ನು ಕಟ್ಟಿಕೊಂಡು ಅದಕ್ಕೊಬ್ಬ ಒಡೆಯನನ್ನು ಆರಾಧಿಸುತ್ತಾರೆ. ಹಂಪಿ ಪರಿಸರದಲ್ಲಿ ಮಂದಲಗಿರಿ ವಿರೂಪಾಕ್ಷಗಿರಿಗಳು ಆಗಿರಬೇಕು. ಸುವರ್ಣಗಿರಿ, ದೇವಗಿರಿ ಇದ್ದಹಾಗೆ ಮಂದಲಗಿರಿಯು ಇತ್ತು ಎನ್ನಬಹುದು.

19. ಕೋ.ಶ. ವಿಶ್ವನಾಥ ಮತ್ತು ಕೆ.ಎಸ್. ಲಿಂಗಣ್ಣ ಬರೆದಿರುವ ಗೌರಸಮುದ್ರ ಮಾರಮ್ಮ ಎಂಬ ಕೃತಿಯಲ್ಲಿ 'ಮಾರಿಯ ಕತೆ' ಎಂಬ ಅಧ್ಯಾಯದಲ್ಲಿ ಪ್ರಪಂಚದಲ್ಲಿ ಪ್ರಖ್ಯಾತಿಯಾದ ಮಂದರಗಿರಿ ಪರ್ವತದ ಹತ್ತಿರ ಇರುವ ಅರಣ್ಯದಲ್ಲಿ ಸಂಚುಮ್ಯಾಸರು ಇರುತ್ತಿದ್ದರು, ಇವರು ಅರಣ್ಯದಲ್ಲಿ ಗೆಡ್ಡೆ ಗೆಣಸು ಬಿದಿರು ಅಕ್ಕಿ, ತರಗುಎಲೆ ಮತ್ತು ಫಲಹಾರಗಳು ತಿಂದುಕೊಂಡು ಸುಖವಾಗಿ ಜೀವನ ಮಾಡುತ್ತಿದ್ದರು. ಅವರಲ್ಲಿ ಸಂಚು ಶಿಖಿನಾಯಕ ಎಂಬಾತನು ಅವರೆಲ್ಲರಿಗಿಂತಲೂ ಬುದ್ಧಿಶಾಲಿಯಾಗಿದ್ದನು. ಅರಣ್ಯದ ಸಂಚು ಮ್ಯಾಸನಾಯ್ಕರು ಆತನ ಇಚ್ಚೆಯಂತೆ ನಡೆದುಕೊಳ್ಳುತ್ತಿದ್ದರು. ಸಂಚುಮ್ಯಾಸರು ಸಂಚು ಶಿಖಿನಾಯಕನಿಗೆ ಎಲ್ಲಿಯಾದರೂ ಕನ್ಯೆತಂದು ಲಗ್ನ ಮಾಡಬೇಕೆಂದು ಯೋಚಿಸಿ, ಮಂದಗಿರಿ ಪಟ್ಟಣಕ್ಕೆ ಹೋಗಿ ಅಲ್ಲಿ ಮ್ಯಾಸ ನಾಯ್ಕರ ಮನೆಗಳಲ್ಲಿ ರೂಪವತಿಯಾದ ದಾನಸಾಲಮ್ಮ ಎಂಬ ಕನ್ಯಾಮಣಿಯನ್ನು ನಿಶ್ಚಯಿಸಿ ಕೆಲವು ದಿವ್ಸಗಳು ಕಳೆದ ನಂತರ ಲಗ್ನಮಾಡಿದರು... ಸಂಚುಶಿಖಿನಾಯಕ ದಾನಸಾಲಮ್ಮ ಇಬ್ಬರು ಮಂದರಗಿರಿ

ಪಟ್ಟಣದಲ್ಲಿರದೆ ಅರಣ್ಯಕ್ಕೆ ಬಂದು ಗೆಡ್ಡೆ ಗೆಣಸು ಫಲಹಾರಗಳನ್ನು ಸೇವಿಸುತ್ತಾ ಸುಖವಾಗಿ ಕಾಲಕಳೆಯುತ್ತಿದ್ದರು (ಪುಟ–9) ಎಂಬ ವಿಷಯ ತಿಳಿಯುತ್ತದೆ.

ಅನುಬಂಧ–1

ಮಂದರಗಿರಿ ಎಂಬ ಉಲ್ಲೇಖ ಬಳ್ಳಾರಿ ಜಿಲ್ಲೆಯ ಶಾಸನಸಂಪುಟ (ಕನ್ನಡ ವಿಶ್ವವಿದ್ಯಾಲಯ 1998)ದಲ್ಲಿ (139) ಹೊಸಪೇಟೆ ನಗರದ ಸಣ್ಣಕ್ಕಿ ವೀರಭದ್ರ ದೇವಾಲಯದಲ್ಲಿರುವ ಶಾಸನ (ಎರಡನೇ)ದಲ್ಲಿ ಬಿಜ್ಜಳನನ್ನು (12ನೇ ಶತ) ಮತ್ತು ಕುಂತಳ ದೇಶವನ್ನು ಹೆಸರಿಸುವಾಗ ಮಂದರಗಿರಿಯಿಂದ ಎಂದು ಉಲ್ಲೇಖವಾಗಿದೆ. ಇದು ಜೈನ ಶಾಸನ, ತ್ರುಟಿತಗೊಂಡಿದೆ.

1. ಶ್ರೀ ಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛನಂ ಜೀಯಾತ್ರೈಲೋಕ್ಯ ನಾಥಸ್ಯ ಶಾಸನಂ ಜಿನಶಾಸಂ
2. ಧರೆಯೆಂಬಂಬುಜಮಿರ್ಪ್ಪುದು ಸರದಿ ಸರೋವರದ ನಡುವೆ ಕರ್ಣ್ಣಿಕೆವೊಲುಮದಗಮಿರ್ಪ್ಪುದಲ್ಲಿ ಮಂದರಗಿರಿಯಿಂದ....
3. ವ ಭರತಕ್ಷೇತ್ರಂ 11 ಆ ಭರತಕ್ಷೇತ್ರದೊಳು 11 ಅಳಿಕುಳದಿಂದೇಕಾ ವಳಿಗಳಿಂ ಗಿಳಿವಿಂಡುಗಳಿಂ ಮರಾಳಸಂಕುಳದಿಂ ನದಿ...
4. ಯಿಸಿರ್ಪ್ಪ ವನಂಗಳಿಂನೊಪ್ಪಿ ತೋರ್ಪ್ಪಿನಂ ಒಳಹೊರಗಿತ್ವ ಶಾಳಿವನರಾಜಗಳಿಂ...
5. ಕುಂತಳದೇಶಮಾವಗಂ.... ಕಳಚೂರ್ಯ ಚಕ್ರವರ್ತಿ
6. ಬಿಜ್ಜಳ ಕ್ಷಿತಿಪತೆ...
7. ....
8. ....
9. ....
10. ಬಿಜ್ಜಳ ದೇವ
11. ಸಲುತ್ತಮಿರೆ.

ಈ ಶಾಸನದಲ್ಲಿ ಮಂದರಗಿರಿ ಎಂಬುದು ಹಂಪಿಯ ಪ್ರದೇಶಕ್ಕಿದ್ದ ಹೆಸರು ಇರಬೇಕು. ಮರಾಳ ಸಂಕುಳದಿಂ ಎಂಬುದು ತುಂಗಭದ್ರಾ ನದಿ ಪರಿಸರದ ಮರಳ ದಿನ್ನೆ, ಕೋಟೆ, ಜನಸಮೂಹವನ್ನು ಸಾಂಕೇತಿಕವಾಗಿ ತಿಳಿಸುತ್ತದೆ. (ಬಳ್ಳಾರಿ ಜಿಲ್ಲಾ ಶಾಸನ ಸಂಪುಟ 1998 ಕವಿಹಂ ಪು–139) (A.R. No. 679 of 1922 sii (X pt II No 539)

ಅನುಬಂಧ –2

1. ಕ್ರಿ.ಶ. 1513 ಮಾರ್ಚ್ 11 ಶುಕ್ರವಾರ ವಿಠಲದೇವಾಲಯದ ಸಭಾಮಂಟಪದ ದ್ವಾರದ ಬಲಗಡೆಯ ಶಾಸನದಲ್ಲಿ 'ಕೃಷ್ಣದೇವರಾಯ ತಂದೆ ನರಸಂಣನಾಯಕನಿಗೂ ತಾಯಿ ನಾಗಾಜಿದೇವಿ ಅಂಮನವರಿಗೂ ಪುಣ್ಯವಾಗಲೆಂದು ಸೂರ್ಯಗ್ರಹಣದ ದಿವಸ ಈ ವಿಠಲದೇವರಿಗೆ ಅನೇಕ ರೀತಿಯ ಸೇವೆಗಳಿಗೆ ಮತ್ತು ಉತ್ಸವಗಳಿಗಾಗಿ ಹರಿಹರಪುರ, ಹೊಸಊರ ಮಾಗಣಿಯ ವಿರುಪಾಪುರ, ಮಳಲಕೊಡುಗೆ ವೊಳಗಿನ ಗದ್ದೆ, ಪಂಚಕ ಸೀಮೆಯೊಳಗಣ ಗೋಪಿಸೆಟಿಹಳ್ಳಿಗಳ ಸಕಲ ಆದಾಯವನ್ನು ದಾನವನ್ನು ನೀಡಿದ ವಿಷಯವಿದೆ' (ಕೃಷ್ಣದೇವರಾಯನ ಶಾಸನಗಳು ಪು–67) (ಮಳಕೊಡು ವೊಳಗಾದ ಗೋರಿಯ ಕಳಗಣಗದೆ).
2. ವಿಠಲ ದೇವಾಲಯದ ರಂಗಮಂಟಪದ ದಕ್ಷಿಣದ್ವಾರದ ಬಲಗಡೆ ಶಾಸನವು 1513 ಮಾರ್ಚ್ 11 ಶುಕ್ರವಾರ ಮೇಲಿನ ವಿಷಯವನ್ನು ಹೊಂದಿದೆ.
3. ಹುಲಿಗಿಯ ಮಾಗಣಿಯ ವೊಳಗಣ ಹರಿಹರಪುರದ ಗ್ರಾಮ ಹೊಸಊರ ಮಾಗಣಿಯ ವೊಳಗಣ ವಿರುಪಾಪುರ ಗ್ರಾಮ ಮಳಲಕೋಟೆಗೆ ವೊಳಗಾದ ಗೋರಿಯ ಕೆಳಗಣಗದೆಬೀಜವರಿ ಪಂಚಕಸೀಮೆಯ ವೊಳಗಣ ಗೋಪಿಸೆಟೆಯಿಹಳಿಯ ಗ್ರಾಮ...
4. ವಿಠಲ ಸ್ವಾಮಿ ದೇವಾಲಯದ ಮುಂದಿರುವ ಮಂಟಪದ ದಕ್ಷಿಣ ಗೋಡೆಯಲ್ಲಿ ಕ್ರಿ.ಶ. 1573 ಮಾರ್ಚ್ 11 ಶುಕ್ರವಾರ ಮಳಲಕೋಟೆಯ ಗೋರಿಯ ಕೆಳಗಣ ಸಿಂಘಾರಪುರದ ಗ್ರಾಮ ಹುಲಿಗೆಯ ಮಾಗಣಿಯ ವೊಳಗಣಹರಿಯಿರಾಪುರದ ಶ್ರೀ.....

   ಈಗಿನ ಕಮಲಮಹಲ್ ಉತ್ತರಕ್ಕಿರುವ ಬೆಟ್ಟ ಅದರ ಮೇಲಿನ ಕೋಟೆ ಹಾಗೂ ಅದರ ಹಿಂದೆ ತುರ್ತುಕಾಲುವೆ ಪ್ರದೇಶವನ್ನು 'ಮಳಲಕೋಟೆ' ಎಂದು ಕರೆಯಲಾಗಿದೆ. ವಿಜಯನಗರ ಕಾಲದ ಬಹುತೇಕ ಕನ್ನಡ ಮತ್ತು ತೆಲುಗು ಕಾವ್ಯಗಳಲ್ಲಿ ಮಂದರಗಿರಿ/ಮಂದಲಗಿರಿ/ಮಂದಗಿರಿ ಹಾಗೂ ಮಳಲಕೋಟೆಯ ಉಲ್ಲೇಖಗಳಿವೆ. ಇವುಗಳ ಬಗ್ಗೆ ಜನಾಂಗೀಯ, ಭಾಷಿಕ ಹಾಗೂ ಸಮಾಜಶಾಸ್ತ್ರೀಯ ಅಧ್ಯಯನಗಳಾಗಬೇಕಿದೆ.

36. ವಿಜಯನಗರ ರಾಯರೇಖೆಯಲ್ಲಿ ವಜ್ರ ಮತ್ತು ಚಿನ್ನದ ಇತಿಹಾಸ

ಡಾ. ಕೆಳದಿ ಗುಂಡಾಜೋಯಿಸ್ ಮತ್ತು ಡಾ. ಕೆಳದಿ ವೆಂಕಟೇಶ್ ಜೋಯಿಸ್

ವಿಜಯನಗರ ಇತಿಹಾಸ ಅರಿಯಲು ಪ್ರಮುಖ ಆಕರಗಳಲ್ಲೊಂದಾಗಿರುವ ೧೯೦೦ರಲ್ಲಿ ರಾಬರ್ಟ್ ಸೀವೆಲ್‌ರವರು `Never to forgotten empire' ಕೃತಿಯಲ್ಲಿ ಮತ್ತು ಸಮಕಾಲ್ಲೀನ ವಿದೇಶೀ ವರದಿಗಳಲ್ಲಿ ಸಹ ವಿಜಯನಗರ ಚಕ್ರವರ್ತಿಗಳ ಕಾಲದಲ್ಲಿ ಚಿನ್ನ ವಜ್ರಗಳು ಮಾರುಕಟ್ಟೆಯಲ್ಲಿ ಲಭಿಸುತ್ತಿದ್ದುದನ್ನು ಮತ್ತು ಚಿನ್ನದ ಗಣಿ ಕುರಿತು ಪ್ರಸ್ತಾಪಿಸಿದ್ದಾರೆ. ಅಂತೆಯೇ 'ವಿಜಯನಗರ ರಾಯರೇಖೆ' ಹಸ್ತಪ್ರತಿಯಲ್ಲಿಯೂ ಚಿನ್ನ ವಜ್ರ ಗಣಿ, ಅದರ ಪ್ರದೇಶ, ಆಭರಣ ಸಿದ್ಧತೆ, ಇದಕ್ಕೆ ತಗುಲುವ ವೆಚ್ಚದ ವಿವರ ಇತ್ಯಾದಿ ಸಾಕಷ್ಟು ಮಾಹಿತಿ ಇದೆ. ವಿಜಯನಗರ ರಾಯರೇಖೆ ಹಸ್ತಪ್ರತಿ ಮತ್ತು ಸೀವೆಲ್ ಅವರ ಕೃತಿಯನ್ನು ತುಲನಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸಲು ಅವಕಾಶವಿದ್ದು ಈ ನಿಟ್ಟಿನಲ್ಲಿ ಸಣ್ಣ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ರಾಬರ್ಟ್ ಸಿವೆಲ್‌ರವರು ವಿಜಯನಗರ ವಜ್ರದ ಇತಿಹಾಸವನ್ನು ಕುರಿತು

The loot must have been enormons, couto states that amongst other treasurres, was found a diamond as large as a hen's egg, which was kept by the Adil Shah, (Couto states that this diamond was one which the king has affixed to the base of the plume on his horses headsdress (Dec VIII C 15) p. 208.

------ At the end of this street is the Moorish quarter, which is at the very end of the city, and of these Moors there are may who are natives of the country (A muytos naturaes da terra) and who are paid by the king and belong to his guard. In this city you will find men belonging to every nation and people, because of the great terade which it has and the many precious stones there, principally diamonds. (Ip. 256)

------ the king accepted these terms and the Ydallcao departed well pleased with this money; and after all was done the king sent to him a diamond stones weighing 130 mangellinis (A mangellin is roughly equivalent to a carat, but actually the difference is 1/5; 4 mangelins = 5 carats, So that 130 mangelins = 162 carats. The Kohinur when brought to England weighed 186 carats) with fifteen other similar ones worth fully a lakh. This money he soon afterwards recovered and put in his treasury, exacting payments from his captains and people so ruthlessly that they say that in six months he has recovered and put the whole in his treasury. P. 368.

---------- Another captain, called Adapanayque, who is the chief counselor of the king, is lord of the country of Gate (Eithese `The Ghats' or perhaps Gutti (Gooty). The rich Vajra Karur diamond mines are about 20 mails south west of Gooty, where are the remains of a vesry fine hill fortress.) whence come the diamonds, and of many other territories which yield him 3000000 (three hundred thousand gold pardaos excluding the precious stones which form a revenue by themselves. He pays to the king every year forty thousand pardoas, with the condition that all

diamonds which exceed twenty mangelins in weight shall be given to the king for his treasury. He serves with eight thousand foot and eight hundred horse and thirty elephants, and pays the king every year one hundred thousand Ilpardaos. Page; 388-389.

Nicolo conti next describes the finding of diamonds on a mauntain which he called `Albenigaras' and places 15 days journey beyond Vijayangar towards the north. P. 86.

`On the left of the Sultan's porticorises the Devan Khanah which is extremely large and looks like a palace. In front of it is a hall, the height of which is above the stature of a man, its langth thirty ghez and its breadth ten (Roughly, twenty yards by seven. It is difficult to understand the height mentioned) In it is place the Defter - Khaneh (court-houses) and here sit the scribes, --------- p. 91.

ಇಲ್ಲಿ ಉಲ್ಲೇಖನಗೊಂಡ ದಫ್ತರಖಾನೆ ಪ್ರಸ್ತಾಪವು ಗಮನಾರ್ಹವಾದುದು. ವಿಜಯನಗರ ಆಡಳಿತಾತ್ಮಕ ಕಡತಗಳು, ಓಲೆಗರಿ ಇತ್ಯಾದಿ ಹಸ್ತಪ್ರತಿಗಳು ವಿಫುಲವಾಗಿದ್ದುದು ಪುರಾತತ್ವ ಇತಿಹಾಸದಲ್ಲಿ ಉಪಲಬ್ದವಾಗಿದ್ದರೂ ಕಣ್ಮಾರೆಯಾಗಿರುವುದು ದುರ್ದೈವವೇ ಸರಿ. ಇಷ್ಟಾದರೂ ಅಳಿದುಳಿದ ಹಸ್ತಪ್ರತಿಗಳಲ್ಲಿ ವಿಜಯನಗರ ರಾಯರೇಖೆ ಹಸ್ತಪ್ರತಿಯ ಪ್ರತಿಕೃತಿಯೊಂದು ಪುರಾತತ್ವ ಇಲಾಖೆಯಿಂದ ಲಿಪೀಕರಿಸಲ್ಪಟ್ಟಿದೆ. ವಿಜಯನಗರ ಕೃಷ್ಣದೇವರಾಯ ವಿಶ್ವವಿದ್ಯಾನಿಲಯವು ಈ ಕೃತಿಯನ್ನು ಪ್ರಕಟಿಸಿದ್ದು ಇತಿಹಾಸ ರಚನೆಗೆ ಬಹುಪಯೋಗವಾಗಿದೆ. ಈ ಕೃತಿಯಲ್ಲಿ ಕಂಡು ಬರುವಂತ ರಾಬರ್ಟ್ ಸೀವೆಲ್‌ರವರ ಗ್ರಂಥದಲ್ಲಿರುವ ವಜ್ರ ಚಿನ್ನದ ಇತಿಹಾಸವನ್ನು ವಿಜಯನಗರ ರಾಯರೇಖೆಯಲ್ಲಿರುವುದನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ.

ಪುಟ ೨೦-೨೧

-- ಗಂಡ ಕಡುವಿನ ಮಾರ್ಗ । ಸಾತನಕಲ್ಲು ಬಳಿಯ ಇದ್ದ ಗಣಿ ೨ಕ್ಕೆ ವಜ್ರ । ಚಿನ್ನರಜತೊಳುವ ಜಲಗಾರರ ತೊಟ್ಟಿ ೬ಳಕ್ಕು ಗುತ್ತಿಗೆ । ರಘುಪತಿಯ ಪಾದ ಸೋಕಿದ । ಚಿಂಗಣಿಯ । ವಜ್ರದ । ಹರಳುಗುತ್ತಿಗೆ ಕಬ್ಬಿಣದ ಕೊಲಿಮೆ ಗುತ್ತಿಗೆ ಸಹ ಮಣಿಹ ಪೈಕ ೫೦೦೦ ಅಂತು ಗ್ರಾಮದ ರೆಖೆ ಮಣಿಹ ಪೈಕ ಸಹ ೪೫೦೦೦ -----

ಪುಟ ೨೬---------- ಚಿನ್ನದ ಗಣಿ ೨೬೦ ಗ್ರಾಂ ವಜ್ರದ ಹರಳು ೧೪೦ ಗ್ರಾಂ ವುಂಡಿಗೆಂ ॥೧॥ ೦ ಮಣಿಹ ಪೈಕ ಅಂತು ೪೦೦೦ ॥ ೧ ॥ ೦

ಪುಟ ೪೦--------- ಉಭಯ ಗ್ರಾಮ ೪೦ಕ್ಕೆ ಪದಕದ ಕಾಣಿಕೆ ೨೦ ವರಹ

ಪುಟ ೭೦--------- ಕುರುದೆರಿಗೆ ಬೋಕಾರಿಕೆ ೨೧೯ ಗ್ರಾಂ ಟಂಕಸಾಲೆ ೨೦ ವರಹ ಅಂತು ಮಣಿಹ ೧೧೨೯ ಗ್ರಾಂ ವರಹ

ಪುಟ ೧೨೪-------- ಗಲ್ಲಹಳ್ಳಿಯಲ್ಲಿ ವಜ್ರದ ಗಣಿಯಲ್ಲಿ ಹರಳು ತೆಗೆವ ಗುತ್ತಿಗೆ ೧೦೦ ಗ್ರಾಂ ಸೀಮೆಯಲ್ಲಿ ಕಬ್ಬಿಣಕೋವಿ ಮಿ. ಗುತ್ತಿಗೆ ೧೦ ಗ್ರಾಂ ಅಂತು ಮಣಿಹಗಳ ಬಗೆಯಿಂದ ೩೨೬೦ ಉಭಯ ಗ್ರಾಮ ಮಣಿಹ ಸಹ ಗ್ರಾಮದ ರೇಖೆ ೧೮೪೭೩ ಗ್ರಾಂ

ಪುಟ ೧೨೫------- ವಜ್ರದ ಗುತ್ತಿಗೆ ೧೦೦ ಗ್ರಾಂ ಚಿನ್ನದ ಗಣಿ ೨ಕ್ಕೆ ೧೫೦ ಗ್ರಾಂ ಅಂತು ೨೨೬೦ ಗ್ರಾಂ

ಪುಟ ೧೩೦------- ಕಲ್ಲು ಹಳ್ಳಿಯಲ್ಲಿ ಕಘುಪತಿ ಬಿಲ್ಲುನಾರಿಂದ ಬೆಟ್ಟ ಒಡೆದು ವಜ್ರದ ಹರಳು ತೆಗೆದ ಗುತ್ತಗೆ

೧೦೦ ಗ್ರಾಂ ಚಿನ್ನದ ಗಣಿ ರಘುಪತಿಯ ಹುನ್ನು ವಾಚಿಂದತಿ ಬಂದು ನುಬಿಗೇರಿಯ ಹುನ್ನಚಿ ಕೆರೆಯ ನೆಲವ ಹೊಕ್ಕು ಶಾಂತನಕಲ್ಲು ಗಂಡು ಮಡುವಿನ ಕಣಿವೆಯ ಮೊರಡಿಯ ಸುರುವಿನಲ್ಲಿ ಕಾಣಿಸಿಕೊಂಡ ಹೊನ್ನು ಮೃಗಗರ ಗಣಿ ೨ ಕ್ಕೆ ಚಿನ್ನದ ಕೊ (ತೊ)ಳೆವ ಜಾಲಗಾರರ ತೊಟ್ಟಿ ೬ಳಕ್ಕೆ ೧೫೦ ಗ್ರಾಂ ಅಂತು ಮಣಿಹ ೫೨೬೦ ಗ್ರಾಂ-----

ಪುಟ ೧೪೧--------------- (ವಜ್ರಕುಂಟೆ)

ಪುಟ ೧೪೮------------ ಚಿನ್ನದ ಗುತ್ತಿಗೆ ೧೫೦ ಗ್ರಾಂ ಕೆಂಪು ೧೦೦ ಗ್ರಾಂ ಕಬ್ಬಿನ ೧೦ ॥೧॥ ------

ಪುಟ ೧೪------------ ವಜ್ರದ ಹರಳು ತೆಗೆವರ ಗುತ್ತಿಗೆ ೧೦೦; ಚಿನ್ನವ ತೆಗೆವ ಜಲಗಾರನ ತೊಟ್ಟಿ ೬ಳಕ್ಕೆ ೧೫೦, ಸಾತನಕಲ್ಲು ಬಳಿಯೂ ಇದ್ದ ಗಣಿ ೨ಕ್ಕೆ ವಜ್ರ (೩೪) ಕೋವ್ರದಲ್ಲಿ ಕಾಣಿಸಿಕೊಂಡ ಚಿನ್ನದ ಗಣಿ ೨ ವಜ್ರದ ಹರಳು ತೆಗೆದ ಗುತ್ತಿಗೆ ೧೦೦ (೨೫೦), ವಜ್ರ ಕೊಂಟೆ ೧೦ ಗ್ರಾಂ (೩೯೯) ನಿಕ್ಷೇಪದ ನೀಲಾ ಒಂದು ಲಿಂಗಕ್ಕೆ (೩೮೪-೩೮೫), ಚಿನ್ನದ ಗಣಿ ೨೬೦ ಗ್ರಾಂ; ವಜ್ರದ ಹರಳು ೧೪೦ ಗ್ರಾಂ (ಪ ೪೩) ಚೋಳಲಿಂಗದಲ್ಲಿ ಹತ್ತು ಸಾವಿರದ್ರವ್ಯವಿರಲಾಗಿ (೫೮) ಚಿನ್ನ ವಜ್ರದ ಗಣಿಯ ಕೆಲಸಗಾರರ ಲೆಖ್ಖದ ವಿವರಗಳು (೨೩೫) ಚಿನ್ನದ ಗಣಿಗೋಚರ ವಜ್ರದ ಹರಳು ತೆಸ್ಗೆವ ಗುತ್ತಿಗೆ (೨೫೦). (ಇಲ್ಲಿ ಬ್ರಾಕೇಟ್‌ನಲ್ಲಿ ಇರುವುದು ಲಿಪಿ ಮಾಡಿದ ಹಸ್ತಪ್ರತಿಯ ಪುಟ ಸಂಖ್ಯೆಗಳು).

ಉಪಸಂಹಾರ

ಪುಟ ೧೨೪, ೧೨೫, ೧೩೦, ೧೪೮, ೧೪ ರಲ್ಲಿ ವಜ್ರದ ಹರಳು ತೆಗೆವ ಗುತ್ತಿಗೆ ಒಂದೇ ಸಮನಾಗಿದೆ. ೧೦೦ ಗ್ರಾಂ ೧೪ನೇ ಪುಟದಲ್ಲಿ ವಜ್ರದ ಹರಳಿನ ಗುತ್ತಿಗೆ ಮೌಲ್ಯ ೧೪೦ ಗ್ರಾಂ ಇರುತ್ತದೆ. ಪುಟ ೨೬ರಲ್ಲಿ ಚಿನ್ನದ ಗಣಿ ಲೆಖ್ಖದಲ್ಲಿ ೨೬೦ ಗ್ರಾಂ ೧೪ನೇ ಪುಟದಲ್ಲಿ ಚಿನ್ನದ ಗಣಿ ೨೬೦ ಗ್ರಾಂ ಅದೇ ೧೪ನೇ ಪುಟದಲ್ಲಿ ಚಿನ್ನ ಮತ್ತು ವಜ್ರ ಎರಡೂ ಗುತ್ತಿಗೆ ೨೫೦ ಗ್ರಾಂ ಉಲ್ಲೇಖ ತೊಟ್ಟಿ ೬ಳಕ್ಕೆ ೧೫೦ ಗ್ರಾಂ ಮೌಲ್ಯ ಒಂದೇ ಸಮನಾಗಿದೆ. ವಜ್ರ ಮತ್ತು ಚಿನ್ನದ ನಿಕ್ಷೇಪಗಳು ಕೆಲಸಗಾರರ ಲೆಖ್ಖದ ವಿವರಗಳು ವಿಜಯನಗರ ಇತಿಹಾಸದಲ್ಲಿ ಟಂಕಸಾಲೆಯೂ ಸೇರಿ ಚಿನ್ನ ವಜ್ರ ಹಾಗೂ ಕಲ್ಲಿದ್ದಲು ಕುರಿತ ಮಾಹಿತಿಗಳು ಸಂಶೋಧನೆಗೆ ಅಧ್ಯಯನ ಯೋಗ್ಯವಾಗಿವೆ. ಈವರೆಗೂ ಯಾರ ಗಮನಕ್ಕೂ ಬಾರದಿರುವ ಇದು ವಿಜಯನಗರ ಆಕರ ಗ್ರಂಥಗಳ ಸಾಲಿಗೆ ಸೇರುವ ರೆವಿನ್ಯೂ ಹಾಗೂ ಖನಿಜ ಸಂಪತ್ತಿನ ಇತಿಹಾಸದ ಹಸ್ತಪ್ರತಿಯನ್ನು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯ ಬೆಳಕಿಗೆ ತಂದಿರುವುದು ಸ್ತುತ್ಯಾರ್ಹವಾಗಿದೆ. ಆ ಮೂಲಕ ಆ ಕಾಲದ ರೆವಿನ್ಯೂ ಇತಿಹಾಸ ಅಧ್ಯಯನಕ್ಕೆ ಈ ಕೃತಿ ದಾರಿದೀಪವಾಗಿದೆ.

37. ಜಕ್ಕಣಾರ್ಯ (ಸು. 1430) ಸಂಕಲಿತ ಏಕೋತ್ತರ ಶತಸ್ಥಲೀ

ಡಾ. ಬಿ. ನಂಜುಂಡಸ್ವಾಮಿ

ಪ್ರಪಂಚದ ಇತಿಹಾಸದಲ್ಲಿ ಭಾರತ ದೇಶಕ್ಕೆ ವಿಶೇಷವಾದ ಸ್ಥಾನ. ಈ ಮಣ್ಣಿನಲ್ಲಿ ಹುಟ್ಟಿದ ಸಹಸ್ರಾರು ಗ್ರಂಥಗಳು ಇನ್ನೂ ಮುದ್ರಣ ಮುಖ ಕಾಣದೆ ಹಸ್ತಪ್ರತಿ ಭಂಡಾರದಲ್ಲೆ ಉಳಿದಿವೆ. ಸಂಸ್ಕೃತ ಭಾಷೆಯಲ್ಲಿ ರಚನೆಯಾದ ಸಾವಿರಾರು ಗ್ರಂಥಗಳು ವಿದ್ವಾಂಸರ ಸೂಕ್ಷ್ಮವಾದ ಅಧ್ಯಯನಕ್ಕೆ ಒಳಪಟ್ಟು ಪ್ರಪಂಚದ ಜನಕ್ಕೆ ಅದರ ವಿಶೇಷತೆಯನ್ನು ತಿಳಿಸುವ ಸಮಯ ಇದಾಗಿದೆ. ಸದಾ ಕಂಪ್ಯೂಟರ್‌ನಲ್ಲಿ ಅಧ್ಯಯನ ಮಾಡುವ ಇಂದಿನ ಯುವಕರ ಅಧ್ಯಯನ ಆಮೆ ವೇಗದ್ದು. ಮುದ್ರಿತ ಪುಸ್ತಕಗಳ ವಿವರವಾದ ಪರಿಚಯ ಲೇಖನವನ್ನು ಆಂಗ್ಲ ಭಾಷೆಯಲ್ಲಿ ನಮ್ಮ ಯುವ ವಿದ್ವಾಂಸರು ಬರೆದು ವಿದ್ವತ್ ಲೋಕಕ್ಕೆ ನಮ್ಮ ಇತಿಹಾಸ, ಸಾಹಿತ್ಯದ ಮಹತ್ತ್ವವನ್ನು ತಿಳಿಸಬೇಕು.

ಜಕ್ಕಣಾರ್ಯರ ಬಗ್ಗ ಲಿಂ॥ ಎಸ್.ಶಿವಣ್ಣನವರು ಈ ಮಾಹಿತಿ ನೀಡಿದ್ದಾರೆ.

ಜಕ್ಕಣಾರ್ಯ (ಸು. 1430)

ಮಹಾಲಿಂಗದೇವನ ಶಿಷ್ಯ ಕುಂಮಾರ ಬಂಕನಾಥನ ಕರಜಾತ. ವಿಜಯನಗರದ ಪ್ರೌಢದೇವರಾಯನಲ್ಲಿ (1419–1447) ದಂಡನಾಯಕನಾಗಿದ್ದನು. ಭಕ್ತಿಭಂಡಾರಿ ಎಂದು ಖ್ಯಾತನಾಗಿದ್ದಾನೆ. ನೂರೊಂದು ವಿರಕ್ತರ ಸಮಕಾಲೀನ. ಗುಬ್ಬಿಯ ಮಲ್ಲಣಾರ್ಯ (1530) ವೀರಶೈವಾಮೃತ ಮಹಾಪುರಾಣದಲ್ಲಿ ಈತ ವೀರಶೈವ ವಾಙ್ಮಯದ ಅಭಿವೃದ್ಧಿಗಾಗಿ ಅಪರಿಮಿತ ದ್ರವ್ಯವನ್ನು ವೆಚ್ಚಿಸಿದ ಸಂಗತಿಯನ್ನು ತಿಳಿಸಿದ್ದಾನೆ.

ಕೃತಿಗಳು

1. **ಏಕೋತ್ತರ ಶತಸ್ಥಲ :** ಮಹಾಲಿಂಗದೇವನ ಏಕೋತ್ತರ ಶತಸ್ಥಲದಲ್ಲಿನ ವಚನಗಳನ್ನು ಬಿಟ್ಟು ಉಳಿದ ಸೂತ್ರ–ಸ್ವರವಚನಗಳನ್ನು ಸಂಗ್ರಹಿಸಿದ್ದಾನೆ. ಒಟ್ಟು 550 ಪದಗಳಿವೆ. ಈ ಕೃತಿಗೆ ಹಲವಾರು ಟೀಕೆಗಳು ರಚಿತವಾಗಿವೆ.
2. **ಏಕೋತ್ತರ ಶತಸ್ಥಲೀ :** ಸಂಸ್ಕೃತ ಕೃತಿ, ಶ್ರೀಗಿರೀಂದ್ರ ಕನ್ನಡ ಟೀಕೆ ಬರೆದಿದ್ದಾನೆ.
3. ಮಹಾಲಿಂಗದೇವನ ಏಕೋತ್ತರ ಶತಸ್ಥಲದ 550 ವಚನಗಳಿಗೆ ಜಕ್ಕಣ ಟೀಕೆ ಬರೆದಿರುವ ಸಂಗತಿಯನ್ನು ಪ್ರೊ. ಸಿ. ಮಹಾದೇವಪ್ಪನವರು ಬೆಳಕಿಗೆ ತಂದಿದ್ದಾರೆ.[1]

ಕವಿಚರಿತೆಗಾರರಾದ ರಾವ್‌ಬಹದ್ದೂರ್ ಆರ್.ನರಸಿಂಹಾಚಾರ್ಯರು ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಪುರಾಣವನ್ನು ಪರಿಚಯ ಮಾಡಿಕೊಡುವಾಗ .... ಪೂರ್ವದಲ್ಲಿ ಲಕ್ಕಣ್ಣ ದಣ್ಣಾಯಕರು, ಭಂಡಾರಿಜಕ್ಕಪ್ಪ, ಕಲೆಹದ ಕೇತಿಸೆಟ್ಟಿ ಇವರುಗಳು ಲಕ್ಷ ಸಂಖ್ಯೆಯ ವಿತ್ತಮಂ ವೆಚ್ಚಿಸುತ್ತ ಮಾಡಿದರೆಂಬುದು ಹೆಚ್ಚಲ್ಲ.[2]

ಗರಣಿ ಬಸವಲಿಂಗ ಈತನ ಕಾಲ ಸು. 1600 ಈತ ರಚಿಸಿದ ಬಸವೇಶ್ವರ ಕಾವ್ಯದಲ್ಲಿ,

ಗುರುಮೂರ್ತಿ ಪ್ರಭುದೇವರ ಸದ್ವಚನಗೀತ ।
ಕಿರದೆ ವ್ಯಾಖ್ಯಾನವ ಬರೆದು ।
ಪಿರಿದಾದವಕುತ್ತರವ ಬರೆದ ಶುಭ ।
ಕರ ಜಕ್ಕಣಾರ್ಯರ್ಗೆ ಶರಣು (1–23)

ಗರಣಿ ಬಸವಲಿಂಗನ ಕಾಲದಲ್ಲಿ ಪ್ರಭುದೇವರ ವಚನಗಳಿಗೆ ವ್ಯಾಖ್ಯಾನವನ್ನು ಜಕ್ಕಣಾರ್ಯ ಬರೆದ ವಿಷಯವನ್ನು ದಾಖಲಿಸಿದ್ದಾನೆ. ಈಗ ನಮಗೆ ಇದುವರೆಗೂ ಹಸಪ್ರತಿ ಲಭ್ಯವಾಗಿಲ್ಲ.[3]

ವಿರಕ್ತ ತೋಂಟದಾರ್ಯ (ಸು 1616) ವಿರಚಿತ 'ನೂತನ ಪುರಾತನ ರಗಳೆ'ಯಲ್ಲಿ

ಉರುತರದ ಷಟುಸ್ಥಲದಜ್ಞಾನಿಯೆಂದೆನಿಸುತಿಹ
ವರವೀರಶೈವ ಜಕ್ಕಣ್ಣರಾಳಾನಯ್ಯ ॥11॥[4]

ವಿರಕ್ತ ತೋಂಟದಾರ್ಯನಿಗೆ ಜಕ್ಕಣ್ಣಾರ್ಯನ ಷಟುಸ್ಥಲದ ಜ್ಞಾನದ ಬಗ್ಗೆ ಅತ್ಯಂತ ಗೌರವ.

ಜಕ್ಕಣ್ಣಾರ್ಯ ಸಂಕಲಿತ "ಸ್ವರ ಏಕೋತ್ತರಶತಸ್ಥಲ" ಗ್ರಂಥಕ್ಕೆ ಟೀಕೆ. ಈ ಟೀಕಾ ಗ್ರಂಥವನ್ನು ಸಂಪಾದಿಸಿದ ಡಾ. ಬಿ.ಬಿ.ಶಿರೂರ ಅವರು ಮುನ್ನುಡಿಯಲ್ಲಿ, 'ಜಕ್ಕಣ್ಣಾರ್ಯನಿಗೆ, ಜಕ್ಕಣ್ಣ, ಜಕ್ಕಪ್ಪ' ಎಂಬ ಹೆಸರುಗಳೂ ಉಂಟು. 'ಭಕ್ತಿಭಂಡಾರಿ' ಎಂಬ ಬಿರಿದಿದ್ದಂತೆ ತಿಳಿಯುತ್ತದೆ. ಇವನು ವಿಜಯನಗರದ ಪ್ರೌಢರಾಯನ (1419–1446) ದಂಡನಾಯಕನಾಗಿದ್ದನು. ಇವನ ಕಾಲ ಸು. 1430 ಆಗಬಹುದು. ಮಹಾಲಿಂಗದೇವನು ಈತನ ಉಪದೇಶಾರ್ಥವಾಗಿ ಎರಡು ಗ್ರಂಥಗಳನ್ನು ಬರೆದ. ಚಾಮರಸ, ಕರಸ್ಥಲದ ನಾಗಿದೇವ, ವೀರಣ್ಣೊಡೆಯ ಮುಂತಾದ ವಿರಕ್ತರು ಈತನ ಸಮಕಾಲೀನರಾಗಿದ್ದಂತೆ ತೋರುತ್ತದೆ. ಇವನು ವೀರಶೈವ ಗ್ರಂಥಗಳ ರಚನೆಗಾಗಿ ಅಪರಿಮಿತವಾಗಿ ದ್ರವ್ಯವನ್ನು ವೆಚ್ಚ ಮಾಡಿದಂತೆ ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಪುರಾಣದಲ್ಲಿ (1530) ಹೇಳಿದೆ. (ಕ.ಕ.ಚ. ಸಂಪುಟ ಎರಡು ಪು. 52) ಎಂದಿದ್ದಾರೆ. ಆದ್ರೀಶಕವಿಯ ಪ್ರೌಢದೇವರಾಯನ ಕಾವ್ಯದ ಪ್ರಕಾರ ಇವನು ತಾನು ದೊರೆಯಿಂದ ಪಡೆದ ಸನ್ಮಾನವನ್ನು ಚಾಮರಸನಿಗೆ ಕೊಡಿಸಿದನು. ತನಗೆ ದೊರೆತಿದ್ದ ಮಂತ್ರಿಪದವಿ, ಇನ್ನು ತನಗುಚಿತವಲ್ಲವೆಂದು ಆ ಪದವಿಯನ್ನು ಲಕ್ಕಣಾರ್ಯನಿಗೆ ಕೊಡಿಸಿದನು. (ಪ್ರೌಢದೇವರಾಯನ ಕಾವ್ಯ 21–34) ಅಲ್ಲದೆ ಪ್ರಭುವಿನ ವೈರಾಗ್ಯವನ್ನು ಅವನ ವಚನದ ಮೂಲಕ ಮುಕುಂದಪೆದ್ದಿ ಅಣಕಿಸಲು, ಜಕ್ಕಣಾರ್ಯ ಆ ವಚನದ ಸರಿಯಾದ ಅರ್ಥವನ್ನು ಹೇಳಿ ಪ್ರೌಢರಾಯನ ಸನ್ಮಾನಕ್ಕೆ ಪಾತ್ರನಾದನು. (ಪ್ರೌಢರಾಯನ ಕಾವ್ಯ 1–48, 49) ಹೀಗೆ ಜಕ್ಕಣಾರ್ಯ ಕವಿ ಕಾವ್ಯಗಳ ಪೋಷಕನಾಗಿದ್ದಂತೆ ರಾಜನಿಗೆ ಒಳ್ಳೆಯ ಪ್ರಭಾವ ಹೊಂದಿದವನಾಗಿದ್ದನು, ಪರರಿಗೆ ಉಪಕಾರ ಮಾಡುವ ಗುಣವುಳ್ಳವನಾಗಿದ್ದನು. ಒಟ್ಟಾರೆ ಜಕ್ಕಣಾರ್ಯ ತನ್ನ ಕಾಲದ ವೀರಶೈವ ಸಂಘಟನೆಗೆ ತನು, ಧನ. ಮನಂಗಳನ್ನು ಸಲ್ಲಿಸಿದ ಧೀರ ಭಕ್ತಭಂಡಾರಿ...[5]

ಪ್ರೊ. ಸಿ. ಮಹಾದೇವಪ್ಪನವರು ಮಹಾಲಿಂಗದೇವ ಮತ್ತು ಅವನ ಶಿಷ್ಯ ಪರಂಪರೆಯವರು ಇದ್ದ ಪುಲಿಗೆರೆ ಉತ್ತರದಲ್ಲಿ ಅಲ್ಲ ಅದು ಇದ್ದದ್ದು ದಕ್ಷಿಣದಲ್ಲಿ ಎಂದು ಸ್ಪಷ್ಟಪಡಿಸಿದ್ದಾರೆ. ಮಹಾಲಿಂಗದೇವರ ಕೃತಿಗಳು ಆರಂಭದ ಗದ್ಯದಲ್ಲಿ..... "ಅಪೂರ್ವ ಸ್ವಯಂಭು ಪ್ರಸನ್ನ ಚೆನ್ನದಕ್ಷಿಣ ಶ್ರೀಸೋಮನಾಥ ದೇವರ ದಿವ್ಯಶ್ರೀಪಾದ ಪದ್ಮಾರಾಧಕರು....."

ಈ ಗದ್ಯದ ಅಧ್ಯಯನದಿಂದ "ಚೆನ್ನದಕ್ಷಿಣ" ಅಂದರೆ ದಕ್ಷಿಣಭಾಗದ ಪುಲಿಗೆರೆ ಅರ್ಥಾತ್ ಹುಲಿಕೆರೆ ಇದ್ದು ಅಲ್ಲಿ ಶ್ರೀ ಸೋಮನಾಥ ಸನ್ನಿಧಾನ ಇರುವುದು ತಿಳಿದುಬರುತ್ತದೆ. ಲಕ್ಕಣ್ಣದಂಡೇಶ ಶಿವತತ್ತ್ವಚಿಂತಾಮಣಿಯಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾನೆ. ಉತ್ತರದ ಪುಲಿಗೆರೆ ಉಲ್ಲೇಖ 37ನೇ ಸಂಧಿ 206ನೇ ಪದ್ಯ, ಇದರಲ್ಲಿ 'ಆದಯ್ಯಗಳ ಹುಲಿಗೆರೆಯ ಸೋಮೇಶ್ವರರ ಚರಣಾಂಬುಜಕ್ಕೆ ಶರಣು' 38ನೇ ಸಂಧಿ 197ನೇ ಪದ್ಯದಲ್ಲಿ 'ಹುಲಿಗೆರೆಯ ಪುರದ ವೀರಮಾಹೇಶ್ವರ ಚರಣಾಂಬುಜಕ್ಕೆ ಶರಣು' ಎಂದಿದೆ. ಮಹಾಲಿಂಗದೇವರ ಆರಾಧ್ಯದೈವ ಸೋಮನಾಥದೇವರ ವ್ಯಾಪ್ತತಟಾಕವೇ ಇಂದಿನ ವಾಗಟ್ಟ ಇಲ್ಲವೆ ವಾಗಟ. ಮಹಾಲಿಂಗದೇವರ ಮಠಪುರವಾಗಿದ್ದ ಈ ವಾರಣಾಸಿ ಹಾಗೂ ವಾಗಟಗಳೆರಡೂ ಬೆಂಗಳೂರು ಜಿಲ್ಲೆ ಹೊಸಪೇಟೆ ತಾಲ್ಲೂಕಿಗೆ ಸೇರಿದ ಊರುಗಳು.[6]

ವಿಜಯನಗರದ ಸಂಗಮ ವಂಶದ ದೊರೆಗಳ ಕಾಲ ವೀರಶೈವ ಧರ್ಮದ ಸುವರ್ಣಯುಗ. ಈ ಕಾಲದಲ್ಲಿ ರಚನೆಯಾದ ಸಾಹಿತ್ಯವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ನಮಗೆ ಇನ್ನಷ್ಟು ಹೊಸ ವಿಷಯಗಳು ತಿಳಿಯುತ್ತವೆ.

DEVELOPMENT OF SANSKRIT LITERATURE UNDER VIJAYANAGARA BY MR. S. SRIKANTHA SASTRI, M.A., LECTURETR, MAHARAJA'S COLLEGE, MYSORE. ಇವರ ಲೇಖನದಲ್ಲಿ DEVA RAYA II IS SPOKEN OF AS VIRA-SAIVAGAMA SAMPANNA. IN A RECORD OF S 1340 VILAMBI. VIRASAIVISM WAS RE-PROMULGATED BY MINISTER OF DEVA RAYA LIKE LAKANNA, JAKANNA, CHAMARASA ETC., MOSTLY THIS LITERATURE WAS IN THE VERNACULARS. BUT SANSKRIT SCHOLORS WERE NO LESS PROMINENT.[7]

ಜಕ್ಕಣಾರ್ಯ ವಿರಚಿತ ಏಕೋತ್ತರ ಶತಸ್ಥಲೀ ಗ್ರಂಥಕ್ಕೆ ಶ್ರೀಗಿರೀಂದ್ರನ ಟೀಕೆ ಇದೆ. ಈಗ ಅದೇ ಗ್ರಂಥ ಅಚ್ಚಾಗಿರುವಂತಹದು ನಮಗೆ ಇಲ್ಲಿಯವರೆಗೂ ಟೀಕಾರಹಿತವಾದ ಜಕ್ಕಣಾರ್ಯ ಮೂಲ ಏಕೋತ್ತರ ಶತಸ್ಥಲೀ ಗ್ರಂಥದ ಬಗ್ಗೆ ಮಾಹಿತಿ ಇರಲಿಲ್ಲ. ಸುದೈವ ಹೈದರಾಬಾದ್‌ನ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಮೂಲ ಗ್ರಂಥದ ಹಸ್ತಪ್ರತಿ ಇದೆ. ಹಸ್ತಪ್ರತಿ ಸಂಖ್ಯೆ MS. No. 1053 (B) ಈ ಹಸ್ತಪ್ರತಿಯನ್ನು ಪರಿಶೀಲಿಸಿದರೆ ಇನ್ನಷ್ಟು ಗಟ್ಟಿಯಾದ ಮಾಹಿತಿ ನಮಗೆ ದೊರಕುತ್ತದೆ. ಉಲ್ಲೇಖವಾಗಿರುವ ಮೊದಲ ಶ್ಲೋಕ ಪೀಠಿಕಾಪ್ರಕರಣದ 13ನೇ ಶ್ಲೋಕ. ಅಂತ್ಯದಲ್ಲಿ ಉಲ್ಲೇಖವಾಗಿರುವುದು ಜ್ಞಾನಶೂನ್ಯಸ್ಥಲದ 6ನೇ ಶ್ಲೋಕ ಮತ್ತು 12ನೇ ಶ್ಲೋಕ.[8]

ಜಕ್ಕಣಾರ್ಯ ತನ್ನ ಗ್ರಂಥಕ್ಕೆ ತಾನೆ ಸಂಸ್ಕೃತ ಭಾಷೆಯಲ್ಲಿ ಟೀಕೆ ಬರೆದಿರುವುದು ಪ್ರಕಟಿತ ಗ್ರಂಥದ ಅಧ್ಯಯನದಿಂದ ತಿಳಿದುಬರುತ್ತದೆ. ಜೊತೆಗೆ ಈ ವಿಷಯವನ್ನು ವಿದ್ವಾನ್ ಡಾ. ಎಂ.ಎಸ್.ಬಸವರಾಜಯ್ಯನವರು ಸಂಪಾದಿಸಿದ 'ಏಕೋತ್ತರ ಶರಸ್ಥಲಸಾರ ಚಿಂತಾಮಣಿಃ' ಗ್ರಂಥದ ಪ್ರಸ್ತಾವನೆ ಪುಟ ಹನ್ನೊಂದರಲ್ಲಿ ತಿಳಿಸಿದ್ದಾರೆ.[9]

ಮಹಾಲಿಂಗದೇವನ ಗುರುಕುಲ ಬಹಳ ಮಹತ್ತ್ವವಾದದ್ದು. ಅಲ್ಲಿ ಸದಾ ಅಧ್ಯಯನ ಅಧ್ಯಾಪನ ನಡೆಯುತ್ತಾ ಇತ್ತು. ಮಹಾಲಿಂಗದೇವನ ದೀರ್ಘಾಯು ಕೂಡ ಕವಿಚರಿತೆಗಾರರು ಹೇಳಿದಂತೆ ಆತನಿಗೆ ವಾರಣಾಸೀಂದ್ರನೆಂಬ ಇನ್ನೊಂದು ಹೆಸರು ಇತ್ತು. ಈ ವಿಷಯವನ್ನು ಸ್ಪಷ್ಟ ಮಾಡುವಂತಹ ಶ್ಲೋಕಗಳನ್ನು ಜಕ್ಕಣಾರ್ಯ ವಿರಚಿತ ಏಕೋತ್ತರ ಶತಸ್ಥಲೀ ಗ್ರಂಥವನ್ನು ನೋಡಬಹುದು. ಏಕೋತ್ತರ ಶತಸ್ಥಲೀ ಗ್ರಂಥದ ಪೀಠಿಕಾಪ್ರಕರಣದ ಶ್ಲೋಕಗಳನ್ನು ಶ್ರೀಗಿರೀಂದ್ರನೆ ರಚಿಸಿ ಆ ಶ್ಲೋಕಗಳಿಗೆ ಕನ್ನಡ ವ್ಯಾಖ್ಯಾನ ಬರೆದಿದ್ದಾನೆ. ಪೀಠಿಕಾಪ್ರಕರಣದಲ್ಲಿ ಶ್ರೀಗಿರೀಂದ್ರನು ಕನ್ನಡ ಟೀಕೆ ರಚನೆಗೆ ಕಾರಣವನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ.

ವೀರಶೈವಾಚಾರನಿಯಮಗಳು ಪಾಲಿಸುವಂತಹ ವಾರಣಾಸೀಶ ಒಡೆಯನೆಂಬ ಗುರುವು, ಶಿವಸ್ವರೂಪಿಯಾದ ಈ ಗುರುವು ಜ್ಞಾನಾನುಭವಮಂಟಪದಲ್ಲಿ ಮಂಡಿಸಿರುವಾಗ ಭಕ್ತನಾದ 'ಪರ್ವತನು' ಬಂದು ದೀರ್ಘದಂಡ ಪ್ರಣಾಮ ಮಾಡಿದನು. ಪರ್ವತನು ಸಿರಿಯಾಳ ತ್ರಿಪುರಾರಿಯ ಸುಪುತ್ರ. ಆತನಿಗೆ ಏಕೋತ್ತರಶತಸ್ಥಲದ ಬಗ್ಗೆ ತಿಳಿದುಕೊಳ್ಳುವ ಆಸೆಯನ್ನು ವ್ಯಕ್ತಪಡಿಸಿದನು. ಪರ್ವತನ ಬಿನ್ನಹವನ್ನು ಕೇಳಿ ವಾರಣಾಸೀಶ್ವರನು ತನ್ನ ಪ್ರಿಯ ಶಿಷ್ಯನಾದ ಶ್ರೀಗಿರೀಂದ್ರನನ್ನು ಕರುಣಾಕಟಾಕ್ಷದಿಂದ ನೋಡಿದನು. ಗುರುವಿನ ಕಟಾಕ್ಷದ ಅಭಿಪ್ರಾಯವನ್ನು ಗ್ರಹಿಸಿದ ಶ್ರೀಗಿರಿನಾಥನು ಜಕ್ಕಣಾರ್ಯನಿಂದ 'ಏಕೋತ್ತರಶತಸ್ಥಲೀ' ಗ್ರಂಥಕ್ಕೆ ವ್ಯಾಖ್ಯಾನವನ್ನು ಮಾಡುತ್ತೇನೆ ಎಂದು ಬಿನ್ನೈಸಿಕೊಂಡನು. ಆಗ ಆ ಜ್ಞಾನಾನುಭವಮಂಟಪದಲ್ಲಿದ್ದ ಪರ್ವತ ಮತ್ತು ಇತರ ಭಕ್ತರುಗಳು ಸಂತೋಷಗೊಂಡು ವ್ಯಾಖ್ಯಾನವನ್ನು ಕೇಳಲು ಸಿದ್ಧರಾದರು. ಶ್ರೀಗಿರೀಂದ್ರನು ಭಕ್ತಿಯಿಂದ ವಾರಣಾಸಿ ಒಡೆಯನನ್ನು ದಂಡಪ್ರಣಾಮವನ್ನು ಮಾಡಿ ಮನಸ್ಸಿನಲ್ಲಿ ಗುರುವನ್ನು ನೆನೆಯುತ್ತಾ 'ಏಕೋತ್ತರಶತಸ್ಥಲೀ' ಗ್ರಂಥಕ್ಕೆ ವ್ಯಾಖ್ಯಾನ ಮಾಡಲು ಪ್ರಾರಂಭಿಸಿದನು.[10]

ಏಕೋತ್ತರಶತಸ್ಥಲೀ ಗ್ರಂಥವನ್ನು ಟೀಕಾ ಸಹಿತ ಪ್ರತಿ ಮಾಡಿಕೊಂಡು ಅಧ್ಯಯನ ಮಾಡಿದವರು ಪ್ರೊ. ಸಿ.ಮಹಾದೇವಪ್ಪನವರು. ತಮ್ಮ ಅಧ್ಯಯನ ಫಲದಿಂದ 'ಜ್ಞಾನಾನುಭವ ಮಂಟಪ ಮತ್ತು ವಾಗಟ' ಎಂಬ ಸಂಶೋಧನಾ ಲೇಖನ ಬರೆದಿದ್ದಾರೆ. ಈ ಲೇಖನ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ 'ವೀರಶೈವ ಸಾಹಿತ್ಯ ಮತ್ತು ಇತರ ಲೇಖನಗಳು' (2000) ಪುಸ್ತಕದಲ್ಲಿ ಪ್ರಕಟಿತವಾಗಿದೆ.[11]

ದಕ್ಷಿಣ ಕರ್ನಾಟಕದ ಹುಲಿಕೆರೆ ಅಥವಾ ವ್ಯಾಘ್ರತಟಾಕ ಅಥವಾ ವಾಕಟದ ಸುತ್ತಮುತ್ತ ಜಕ್ಕಣಾರ್ಯ ಬಹಳ ವರ್ಷ ವಾಸವಾಗಿರಬೇಕು. ಪ್ರಕಟಿತ ಶಾಸನಗಳಲ್ಲಿ ಜಕ್ಕಣಾರ್ಯನ ವಿವರ ಸಂಗ್ರಹಿಸಬೇಕು. ನಮಗೆಲ್ಲಾ ತಿಳಿದಂತೆ ಲಕ್ಕಣ್ಣದಂಡೇಶ ಹುಟ್ಟಿ ಬೆಳೆದದ್ದು ಕೋಲಾರ ಜಿಲ್ಲೆ ಮುಳುಬಾಗಿಲು ಹತ್ತಿರದ ವಿರೂಪಾಕ್ಷಪುರ ಅಥವಾ ವಿರೂಪಾಕ್ಷಿಪುರ, ಹೀಗೆ ಯಾವುದೋ ಒಂದು ಸುಸಮಯದಲ್ಲಿ ಜಕ್ಕಣಾರ್ಯ ಮತ್ತು ಲಕ್ಕಣ್ಣದಂಡೇಶನ ಭೇಟಿಯಾಗಿರಬೇಕು. ಜಕ್ಕಣಾರ್ಯ ದಂಡನಾಯಕ ಪದವಿಯಲ್ಲಿ ಇದ್ದುದರಿಂದ ಸಾಹಿತ್ಯ ಸಂಸ್ಕೃತಿಯ ಹೆಚ್ಚಿನ ಸೇವೆಯನ್ನು ಸಲ್ಲಿಸಲು ಅವಕಾಶವಾಯಿತು. ಈ ಎಲ್ಲಾ ಮಾಹಿತಿಯಿಂದ ಹುಲಿಗೆರೆ ಉತ್ತರದಲ್ಲಿ ಇರದೆ ದಕ್ಷಿಣದಲ್ಲಿ ಇತ್ತು ಅನ್ನುವ ಸುಳಿವನ್ನು ನೀಡುತ್ತದೆ. ಈ ವಾಕಟದ ಪಕ್ಕ ವಾರಣಾಸಿ ಇತ್ತು. ಜನ ಅದನ್ನು ವಾವನರಾಶೀ ಎಂದು ಕರೆಯುತ್ತಾರೆ ಎಂದು ಪ್ರೊ. ಸಿ.ಮಹಾದೇವಪ್ಪನವರು ತಿಳಿಸಿದರು.

ಶಂಭೋಃ ಕರ್ಣಾದಭೋದ್ವೀರಶೈವಂ ನಂದೀ ತದಗೃಹೀತ್ ।
ದಂಡೇಶಪ್ರಭುರೂಪೇಣ ವ್ಯಾಖ್ಯಾತುಂ ತಚ್ಛಿವೋಽಭವತ್ ॥ (ಪೀಠಿಕಾ ಪ್ರಕರಣ 22)

ವೀರಶೈವ ಶಾಸ್ತ್ರವು ಪರಮೇಶ್ವರರ ಕರ್ಣದ ದೆಸೆಯಿಂದ ಹುಟ್ಟಿತು. ಆ ವೀರಶೈವವನ್ನು ನಂದೀಶ್ವರನು ಪರಿಗ್ರಹಿಸಿದನು. ಆ ನಂದೀಶ್ವರನು ಗ್ರಹಿಸಿದ ಶಾಸ್ತ್ರವನ್ನು ವ್ಯಾಖ್ಯಾನ ಮಾಡಲೋಸುಗ ಬಸವದಂಡನಾಯಕ ಪ್ರಭುರೂಪದಿಂದ ಉದುಸಿದನು.

ಶಿವಧರ್ಮೋತ್ತರದಲ್ಲಿ

ತಥಾ ಶರೀರಂ ನಿಸ್ಸಾರಂ ಯೋನಿಯಂತ್ರಪ್ರಪೀಡಿತಮ್ ।
ಸಂವರ್ತಿ ಸಾಂಗಪ್ರತ್ಯಂಗಂ ಜರಾಯುಪರಿವೇಷ್ಟಿತಮ್ ॥ (ಸಂಸಾರ ಹೇಯ ಸ್ಥಲಮ್ 4)

ಲಿಂಗಪ್ರತ್ಯಂಗಂಗಳೊಡನೆ ಕೂಡಿದುದಾಗಿ ಜಠಾಯುವಿನಿಂದ ಅರ್ಥಾತ್ ಮಾತಿನಿಂದ ಸುತ್ತಲ್ಪಟ್ಟದಾಗಿ ಜನಕ್ಕೆ ಸಂಮುಖವಾಗಿ ವರ್ತಿಸುತ್ತಿದ್ದಾಗಿ ಯೋನಿಯೆಂಬ ಗಾಣದಿಂದ ಪೀಡಿಸಲ್ಪಟ್ಟದ್ದಾದ ಆ ಪರಿಯಾದ ದೇಹವು ಸಾರವಿಲ್ಲದುದು.

ಸೋಮಶಂಭುವಿರಚಿತ ಗ್ರಂಥದಲ್ಲಿಯ ವಚನವು

ಉತ್ತಮಾಂಗೇ ಜಟಾಜೂಟೇ ನಿಟಿಲೇ ಚ ಗಲೇ ತಥಾ ।
ವಕ್ಷಸ್ಥಲೇ ಕರೇ ನಾಭೌ ಕಕ್ಷೇಸಿ ಚ ವಿಧಾನತಃ ॥ (ಲಿಂಗಧಾರಣಸ್ಥಲಮ್ 8)

ಉತ್ತಮಾಂಗದಲ್ಲೂ ಅರ್ಥಾತ್ ತಲೆಯ ಜಟಾಮುಕುಟದಲ್ಲಿಯೂ, ಹಣೆಯಲ್ಲಿಯೂ, ಗಳದಲ್ಲಿಯೂ, ವಕ್ಷಸ್ಥಲಿಯೂ, ಹಸ್ತದಲ್ಲಿಯೂ, ಹೊಕ್ಕಳು ಮೇಲೆಯೂ, ಕಂಕುಳಲ್ಲಿಯೂ, ವಿಧಾನದಿಂದ ಲಿಂಗವ ಧರಿಸುವಾತನು,

ಭಗವದ್ಗೀತೆಯಲ್ಲಿಯೂ

ಪ್ರಸಾದೆ ಸರ್ವದುಕಿಖಾನಾಂ ಹಾನಿರಸ್ಯೋಪಜಾಯತೇ ।
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ ॥ (ಪ್ರಸಾದಮಹಾತ್ಮ್ಯಸ್ಥಲಮ್ 4)

ಶಿವಪ್ರಸನ್ನತೆ ಉಂಟಾಗುತ್ತಿರಲು ಈ ಪ್ರಾಣೀಗೆ ಆಧ್ಯಾತ್ಮಿಕವು ಮೊದಲಾದ ಸರ್ವದುಃಖಗಳ ನಾಶವು ಉತ್ಪನ್ನವಾಗುತ್ತಿಹುದು. ಯಾವುದಾವೊಂದು ಕಾರಣವಾಗಿ ನಿರ್ಮಲವಾದ ಚಿತ್ರವನುಳ್ಳ ಪುರುಷನ ಬುದ್ಧಿಯು ಬೇಗನೆ ಎಲ್ಲಾ ಕಡೆಯಲ್ಲಿಯೂ ಸ್ಥಿರವಾಗಿ ವರ್ತಿಸುತ್ತಿಹುದು.[12]

ಹೀಗೆ ವೀರಶೈವ ಧರ್ಮವನ್ನು ಈ ಹಿಂದೆ ಲಭ್ಯವಿದ್ದ ಪ್ರಮಾಣ ಗ್ರಂಥಗಳ ಶ್ಲೋಕಗಳ ಸಂಕಲನದಿಂದ ಸಂಕಲಿತವಾದ ಗ್ರಂಥ 'ಏಕೋತ್ತರ ಶತಸ್ಥಲೀ'. ಇಂತಹ ಮಹತ್ತ್ವವಾದ ಗ್ರಂಥ ಕನ್ನಡ ಟೀಕೆಯೊಡನೆ ಕರ್ನಾಟಕದಲ್ಲಿ ಮಾತ್ರ ಪ್ರಚಾರವಾದರೆ ಸಾಲದು. ದೇವನಾಗರಿ ಲಿಪಿಯಲ್ಲಿ ಮತ್ತು ಇಂಗ್ಲೀಷ್ ಭಾಷೆಯ ಟೀಕೆಯೊಡನೆ ಮುದ್ರಣವಾದರೆ ಕನ್ನಡ ಭಾಷೆ ಬರದವರಿಗೂ ಈ ಗ್ರಂಥದ ಪರಿಚಯ ಉಂಟಾಗುತ್ತದೆ. ವಿಜಯನಗರ ಸಂಗಮ ವಂಶದವರ ಕಾಲದಲ್ಲಿ ರಚಿಸಿದ ಸಂಕಲಿತವಾದ ಈ ಗ್ರಂಥವನ್ನು ಸುಮಾರು 1910ರಲ್ಲಿ ಆಸ್ಥಾನ ವಿದ್ವಾನ್ ಶ್ರೀ ಎನ್.ಆರ್. ಕರಿಬಸವಶಾಸ್ತ್ರಿಗಳು ಪ್ರಕಟಿಸಿದ್ದಾರೆ. ಮುದ್ರಿತ ಪುಸ್ತಕ ಲಭ್ಯವಾಗಿಲ್ಲ. ಮೈಸೂರು ನಗರದ ಲಿಂ॥ ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತಶಾಸ್ತ್ರಿಗಳು ಸಂಪಾದಿಸಿ ಪ್ರಕಟಿಸುವಲ್ಲಿ ಆಸಕ್ತಿ ವಹಿಸಿದ್ದರು. ಆದರೆ ಗ್ರಂಥ ಮುದ್ರಣವಾಗಲಿಲ್ಲ. ಹಿರಿಯ ಸಂಸ್ಕೃತ ವಿದ್ವಾಂಸರಾದ ಶ್ರೀಮನ್ ನಿರಂಜನ ಪ್ರಣವ ಸ್ವರೂಪಿ ಡಾ. ಶ್ರೀ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಹಲವು ವರ್ಷ ತಮ್ಮ ಅನಾರೋಗ್ಯದ ನಡುವೆಯೂ 'ಜಕ್ಕಣಾರ್ಯ ವಿರಚಿತ ಏಕೋತ್ತರ ಶತಸ್ಥಲೀ ಗ್ರಂಥವನ್ನು ಸಂಪಾದನೆ ಮಾಡಿದರು. 2007ರಲ್ಲಿ ಕರ್ನಾಟಕ ಸರ್ಕಾರದ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರಿನಿಂದ ಪ್ರಕಟವಾಗಿದೆ.

ಏಕೋತ್ತರ ಶತಸ್ಥಲೀ ಗ್ರಂಥವನ್ನು ಪ್ರಮುಖವಾಗಿ ಎರಡು ಭಾಗ ಮಾಡಿದ್ದಾನೆ. 'ಅಂಗಸ್ಥಲ', 'ಲಿಂಗಸ್ಥಲ' ಎಂದು. ಅಂಗಸ್ಥಲದಲ್ಲಿ ಮೊದಲ ಪ್ರಕರಣವನ್ನು ಪೀಠಿಕಾಪ್ರಕರಣಮ್ ಎಂದು ಸಂಪಾದಕರು ಕರೆದಿದ್ದಾರೆ. ನನ್ನ ಅಧ್ಯಯನದಿಂದ ತಿಳಿದುಬರುವುದು ಏನೆಂದರೆ ಪೀಠಿಕಾಪ್ರಕರಣವನ್ನು ಶ್ರೀಗಿರೀಂದ್ರನು ಬರೆದಿರಬೇಕು. 'ವೀರಶೈವಶಾಸ್ತ್ರಮ್' ಎಂದು ಪ್ರಾರಂಭವಾಗುವ ಪ್ರಕರಣದಿಂದ ಮೂಲಕೃತಿ ಜಕ್ಕಣ್ಣಾರ್ಯನದು ಇರಬೇಕು. ಈ ಎಲ್ಲಾ ಗೊಂದಲ ನಿವಾರಣೆಯಾಗಬೇಕು

ಅಂದರೆ ಹೈದರಾಬಾದ್ ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಾಗಿರುವ ಟೀಕಾರಹಿತ 'ಏಕೋತ್ತರ ಶತಸ್ಥಲೀ' ಗ್ರಂಥ ಪರಿಶೀಲನೆಗೆ ಅವಕಾಶವಾಗಬೇಕು.

ಅಂಗಸ್ಥಲದಲ್ಲಿ

1) **ಭಕ್ತಸ್ಥಲ :** ಇದರಲ್ಲಿ ಹದಿನೈದು ಸ್ಥಲದ ವಿವರಣೆ ಇದೆ. ಪಿಂಡಸ್ಥಲದಿಂದ – ಸಹಜದಾನಸ್ಥಲಮ್‌ವರೆಗೆ
2) **ಮಹೇಶ್ವರಸ್ಥಲಮ್ :** ಇದರಲ್ಲಿ ಎಂಟು ಸ್ಥಲದ ವಿವರಣೆ ಇದೆ. ಮಹೇಶ್ವರಸ್ಥಲಮ್ – ಶಿವಜಗನ್ಮಯಸ್ಥಲಮ್
3) **ಪ್ರಸಾದಿಸ್ಥಲಮ್ :** ಇದರಲ್ಲಿ ಏಳು ಸ್ಥಲದ ವಿವರಣೆ ಇದೆ. ಪ್ರಸಾದಿಸ್ಥಲಮ್ – ಪ್ರಸಾದಮಹಾತ್ಮ್ಯಸ್ಥಲಮ್‌ವರೆಗೆ
4) **ಪ್ರಾಣಲಿಂಗಿಸ್ಥಲಮ್ :** ಇದರಲ್ಲಿ ಆರು ಸ್ಥಲದ ವಿವರಣೆ ಇದೆ. ಪ್ರಾಣಲಿಂಗಿಸ್ಥಲಮ್ – ಅಂಗಲಿಂಗಿಸ್ಥಲಮ್
5) **ಶರಣಸ್ಥಲಮ್ :** ಇದರಲ್ಲಿ ನಾಲ್ಕು ಸ್ಥಲದ ವಿವರಣೆ ಇದೆ. ಶರಣಸ್ಥಲಮ್ – ಶೀಲಸಂಪಾದನಸ್ಥಲಮ್
6) **ಐಕ್ಯಸ್ಥಲಮ್ :** ಇದರಲ್ಲಿ ನಾಲ್ಕು ಸ್ಥಲದ ವಿವರಣೆ ಇದೆ.

ಲಿಂಗಸ್ಥಲದಲ್ಲಿ

1) **ಆಚಾರಲಿಂಗ :** ಇದರಲ್ಲಿ ದೀಕ್ಷಾಗುರುಸ್ಥಲಮ್‌ನಿಂದ ಪರಸ್ಥಲದವರೆಗೆ ಒಂಭತ್ತು ಸ್ಥಲದ ವಿವರಣೆ ಬಂದಿದೆ.
2) **ಗುರುಲಿಂಗ :** ಇದರಲ್ಲಿ ಕ್ರಿಯಾಗಮಸ್ಥಲಮ್‌ನಿಂದ ಜ್ಞಾನಾಚಾರಸ್ಥಲಮ್‌ವರೆಗೆ ಒಂಭತ್ತು ಸ್ಥಲದ ವಿವರಣೆ ಬಂದಿದೆ.
3) **ಶಿವಲಿಂಗ :** ಇದರಲ್ಲಿ ಕಾಯಾನುಗ್ರಹಸ್ಥಲಮ್‌ನಿಂದ ಸೇವ್ಯಸ್ಥಲಮ್‌ವರೆಗೆ ಒಂಭತ್ತು ಸ್ಥಲದ ವಿವರಣೆ ಬಂದಿದೆ.
4) **ಜಂಗಮಲಿಂಗ :** ಇದರಲ್ಲಿ ಜೀವಾತ್ಮಸ್ಥಲಮ್‌ನಿಂದ ಶಿಕ್ಷಾಪಾದೋದಕಸ್ಥಲಮ್‌ವರೆಗೆ ಹನ್ನೊಂದು ಸ್ಥಲದ ವಿವರಣೆ ಬಂದಿದೆ.
5) **ಪ್ರಸಾದಲಿಂಗ :** ಇದರಲ್ಲಿ ಜ್ಞಾನಪಾದೋದಕಸ್ಥಲಮ್‌ನಿಂದ ಜ್ಞಾನಪ್ರಕಾಶಸ್ಥಲಮ್‌ವರೆಗೆ ಹತ್ತು ಸ್ಥಲದ ವಿವರಣೆ ಬಂದಿದೆ.
6) **ಮಹಾಲಿಂಗ :** ಇದರಲ್ಲಿ ಸ್ವೀಕೃತಪ್ರಸಾದಸ್ಥಲಮ್‌ನಿಂದ ಜ್ಞಾನಶೂನ್ಯಸ್ಥಲಮ್‌ವರೆಗೆ ಒಂಭತ್ತು ಸ್ಥಲದ ವಿವರಣೆ ಬಂದಿದೆ.

ಅಂಗಸ್ಥಲದಲ್ಲಿ 44 ಸ್ಥಲಗಳು ಲಿಂಗಸ್ಥಲದಲ್ಲಿ 57 ಸ್ಥಲಗಳು ಒಟ್ಟು ನೂರೊಂದು ಸ್ಥಲಗಳ ವಿವರಣೆ ಬಂದಿದೆ.

ಏಕೋತ್ತರ ಶತಸ್ಥಲೀ ಸಂಕಲನ ಗ್ರಂಥವನ್ನು ಅಂದಿನ ದಿನಮಾನಕ್ಕೆ ಅಧ್ಯಯನಕ್ಕೆ ಲಭ್ಯವಿದ್ದ ಕೆಳಕಂಡ ಗ್ರಂಥಗಳಿಂದ ಸಂಗ್ರಹಿಸಿದ್ದು.

1) ಅಂಬಾಸ್ರವಃ 2) ಅಂಚಿಂತ್ಯವಿಶ್ವಸಾದಾಖ್ಯಃ 3) ಆದಿತ್ಯಪ್ರರಾಣಮ್
4) ಈಶ್ವರಗೀತಾ 5) ಕಾರಣಃ 6) ಕಾರಣಾಗಮಃ
7) ಕಾಮಿಕಾಗಮಃ 8) ಕ್ರಿಯಾಕಾಂಡಶೇಖರಃ 9) ಕಿರಣಾಗಮಃ
10) ಕೂರ್ಮಪುರಾಣಮ್ 11) ಗರುಡಪುರಾಣಮ್ 12) ಚಂದ್ರಜ್ಞಾನಮ್
13) ಚಂದ್ರಜ್ಞಾನಾಗಮಃ 14) ಚಂದ್ರಾವಲೋಕನಮ್ 15) ಜಾಬಾಲಮಯನಿಸ್ಮೃತಿಃ
16) ಜ್ಞಾನೋತ್ತರಾಗಮಃ 17) ತಂತ್ರಸಾರಮ್ 18) ತತ್ತ್ವಪ್ರದೀಪಿಕಾ
19) ತತ್ತ್ವೋದ್ಭೋಧಃ 20) ತ್ರಿಕಾಂಡಸಾರಃ 21) ದಕ್ಷಿಣಾಮೂರ್ತಿಸ್ತವಃ
22) ದ್ವಾದಶಸಾಹಸ್ರೀ 23) ದೇವೀವಾಕ್ಯಮ್ 24) ನೇತ್ರೋದ್ಯೋತಃ
25) ಪದ್ಮನಾಭಃ 26) ಪರಮಾರ್ಥಸಾರಃ 27) ಪುರಾತನಾವಾಕ್ಯಃ
28) ಬ್ರಹ್ಮಗೀತಾ 29) ಬ್ರಹ್ಮಪ್ರೋಕ್ತೇ 30) ಬ್ರಹ್ಮಾಂಡಪುರಾಣಮ್

31) ಬೃಹತ್ಯಾಮೊತ್ತರಮ್
32) ಭಗವದ್ಗೀತಾ
33) ಭರ್ಗಶಿಖಾ
34) ಭಾಗವತಮ್
35) ಮಂತ್ರಾರ್ಣವಮ್
36) ಮಹಾಭಾರತಮ್
37) ಮಹಾಲಿಂಗಪುರಾಣಮ್
38) ಮಹಿಮ್ನಸ್ತೋತ್ರ
39) ಮಾನನಗ್ರಂಥಃ
40) ಮೂಲತಂತ್ರಮ್
41) ಯಾಜ್ಞವಲ್ಕ್ಯಸ್ಮೃತಿಃ
42) ಯೋಗಜಾಗಮಃ
43) ಯೋಗದೀಪಿಕಾ
44) ಯೋಗಮಂಜರೀ
45) ಯೋಗವಾಸಿಷ್ಠಃ
46) ಯೋಗಶತಕಮ್
47) ಯೋಗಶಾಸ್ತ್ರಮ್
48) ಯೋಗಷಟ್ಸಹಸ್ರಿಕಾ
49) ಯೋಗಸಂಗ್ರಹಃ
50) ಯೋಗಸಾಗರಃ
51) ಯೋಗಸಾರಸಂಗ್ರಹಃ
52) ಯೋಗಸಾರಸಮುಚ್ಚಯಃ
53) ಯೋಗಾರ್ಣವಮ್
54) ರಾಮಯಣಮ್
55) ರುದ್ರಯಾಮಳಮ್
56) ಲಿಂಗಪುರಾಣಮ್
57) ಲೈಂಗ್ಯಮ್
58) ವಾಕ್ಯವೃತ್ತಿಃ
59) ವಾತುಲತಂತ್ರಮ್
60) ವಾತುಲತಂತ್ರ
61) ವಾಸಿಷ್ಠಃ
62) ವಾಸಿಷ್ಠಾಗಮಃ
63) ವಿಜ್ಞಾನಭೈರವಃ
64) ವಿಷ್ಣುಧರ್ಮೋತ್ತರಃ
65) ವಿಷ್ಣುಪುರಾಣಮ್
66) ವೇದಾಂತಶಾಸ್ತ್ರಮ್
67) ಶಂಭುಪ್ರಭಾ
68) ಶಿವಗೀತಾ
69) ಶಿವಜ್ಞಾನದೀಪಿಕಾ
70) ಶಿವಧರ್ಮ
71) ಶಿವಧರ್ಮೋತ್ತರಮ್
72) ಶಿವನಿರ್ಣಯಃ
73) ಶಿವಪುರಾಣಮ್
74) ಶಿವದೀಪಿಕಾ
75) ಶಿವಯೋಗದೀಪಿಕಾ
76) ಶಿವರಹಸ್ಯಮ್
77) ಶಿವಸೂತ್ರಮ್
78) ಶಿವಾದ್ವೈತಃ
79) ಶಿವರತ್ನಾಕರಃ
80) ಶೈವಾಗಮಃ
81) ಷಟ್ಸಹಸ್ರಿಕಾ
82) ಸರ್ವಜ್ಞಾನೋತ್ತರಮ್
83) ಸ್ಪಂದಶಾಸ್ತ್ರಮ್
84) ಸ್ವಚ್ಛಂದಲಲಿತಭೈರವೀ
85) ಸ್ಕಾಂದಪುರಾಣಮ್
86) ಸ್ವಾತ್ಮಯೋಗಪ್ರದೀಪಿಕಾ
87) ಸ್ವಾವಬೋಧಃ
88) ಸಿದ್ಧಾಂತರಹಸ್ಯಮ್
89) ಸಿದ್ಧಾಂತಶೇಖರಃ
90) ಸೂಕ್ತಾವಳೀ
91) ಸೂತಸಂಹಿತಾ
92) ಸೋಮಶಂಭುವಿರಚಿತಗ್ರಂಥಃ
93) ಸ್ತೋತ್ರಾರ್ಣವಃ
94) ಸೌರಪುರಾಣಮ್

ಅಡಿಟಿಪ್ಪಣಿ

1) 'ವಚನ ಸಂಕಲನಗಳು', ಎಸ್.ಶಿವಣ್ಣ, ವಚನ ಸಾಹಿತ್ಯ, ದ್ವಿತೀಯ ಘಟ್ಟ 1999, ಸಂಪಾದಕರು ಡಾ. ಎಸ್.ವಿದ್ಯಾಶಂಕರ, ಪ್ರಕಾಶಕರು ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠ, ಕೆಂಪೇಗೌಡ ವೃತ್ತ, ಬೆಂಗಳೂರು – 560009.

2) *ಕರ್ನಾಟಕ ಕವಿಚರಿತೆ*, ದ್ವಿತೀಯ ಸಂಪುಟ ಆರ್.ನರಸಿಂಹಾಚಾರ್ಯ, 1973 ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – 560008.

3) ಗರಣಿ ಬಸವಲಿಂಗ ವಿರಚಿತ 'ಬಸವೇಶ್ವರ ಕಾವ್ಯ', ಸಂಪಾದಕರು ಹ.ಕ.ರಾಜೇಗೌಡ; 1982, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

4) ವಿರಕ್ತ ತೋಟದಾರ್ಯರ 'ನೂತನ ಪುರಾತನ ರಗಳೆ' ಸಂಪಾದಕ ಎಸ್.ಶಿವಣ್ಣ ಬಸವಪಥ ಸಂಪುಟ 15 ಸಂಚಿಕೆ 9, ಡಿಸೆಂಬರ್ 1993.

5) ಸ್ವರ ಏಕೋತ್ತರ ಶತಸ್ಥಲ ಟೀಕೆ, ಸಂಪಾದಕರು ಡಾ. ಬಿ.ವಿ.ಶಿರೂರ, 2007, ಪ್ರಕಾಶಕರು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

6) ಬೆಂಗಳೂರು ನಗರ ಪ್ರಥಮ ಶರಣ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾದ ಪ್ರೊ. ಸಿ.ಮಹಾದೇವಪ್ಪನವರು ಮಾಡಿದ ಆಶಯ ಭಾಷಣ, 'ಕಲ್ಯಾಣ ಸಿರಿ', ಸಂಪಾದಕರು ಎಚ್.ಎನ್.ಸಿದ್ಧಗಂಗಪ್ಪ, ಎನ್.ಸಿದ್ಧಲಿಂಗಯ್ಯ, 1999, ಪ್ರಕಾಶಕರು ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು.

7) DEVELOPMENT OF SANSKRIT LITERATURE UNDER VIJAYANAGARA BY MR. S. SRIKANTHA SASTRI, M.A., LECTURER, MAHARAJA'S COLLEGE, MYSORE. MYSORE VIJAYANAGARA SEXCENTENARY COMMEMORATION VOLOME 1936, DHARWAR.

8) A DESCRIPTIVE CATALOGUE OF THE KANNADA MANUSCRIPTS IN THE OSMANIA UNIVERSITY LIBRARY EDITORS B. RAMACHANDRA RAO, DR. T.V. VENKATACHALA SASTRY, OSMANIA UNIVERSITY, HYDERABAD 1966.

9) ಪರ್ವತಶಿವಯೋಗಿ ಸಂಗೃಹೀತಃ 'ಏಕೋತ್ತರ ಶತಸ್ಥಲಸಾರ ಚಿಂತಾಮಣಿ' (ಜಕ್ಕಣಾರ್ಯ ಕೃತ ಏಕೋತ್ತರ ಶತಸ್ಥಲೀ ಸಂಗ್ರಹಃ ಗಿರಿನಾಥ ರಚಿತ ಕನ್ನಡ ವ್ಯಾಖ್ಯಾನ ಸಹಿತಃ) ಸಂಪಾದಕ ವಿದ್ವಾನ್ ಕಾ.ಎಂ.ಎಸ್. ಬಸವರಾಜಯ್ಯ, ಮೈಸೂರು, ಪ್ರಕಾಶಕರು ಗುರುಕುಲ ಪ್ರಕಾಶನ, ತಿಪಟೂರು 2005.

10) ಜಕ್ಕಣಾರ್ಯ ವಿರಚಿತ 'ಏಕೋತ್ತರ ಶತಸ್ಥಲೀ' ಕೃತಿಯ ಬಗ್ಗೆ ಕೆಲವು ಸ್ಪಷ್ಟನೆಗಳು – ಡಾ. ಬಿ.ನಂಜುಂಡಸ್ವಾಮಿ, ದೇಗುಲಪ್ರಭೆ, ಸಂಪುಟ 1, ಸಂಚಿಕೆ 10, 11, ಸಂಪುಟ 2, ಸಂಚಿಕೆ 12, 1 2010, ಸಂಪಾದಕರು ಡಾ. ಸಿ.ಶಿವಕುಮಾರಸ್ವಾಮಿ, ಶ್ರೀ ದೇಗುಲಮಠ, ಕನಕಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

11) ವೀರಶೈವ ಸಾಹಿತ್ಯ ಮತ್ತು ಇತರ ಲೇಖನಗಳು, ಪ್ರೊ. ಸಿ.ಮಹಾದೇವಪ್ಪ 2000, ಪ್ರಕಾಶಕರು ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – 560018.

12) ಜಕ್ಕಣಾರ್ಯ ವಿರಚಿತ ಏಕೋತ್ತರ ಶತಸ್ಥಲೀ ಸಂಪಾದಕರು ಡಾ. ಇಮ್ಮಡಿ ಶಿವಬಸವಸ್ವಾಮಿಗಳು 2007, ಪ್ರಕಾಶಕರು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

38. ವಿಜಯನಗರದ ಆರುನೂರು ವರ್ಷಗಳ ಸ್ಮಾರಕೋತ್ಸವದ ನೆನಪುಗಳು (ಕ್ರಿ.ಶ. 1336)

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ

ಕ್ರಿ.ಶ. 1936 ಅಕ್ಟೋಬರ್ 25ನೇ ದಿನಾಂಕದಂದು ಆರುನೂರು ವರ್ಷದ ಸ್ಮಾರಕೋತ್ಸವ ಆಚರಣೆಯನ್ನು ಧಾರವಾಡದ ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವವೇ ಈ ಉತ್ಸವವನ್ನು ನೆರವೇರಿಸಿತು. ಈ ಉತ್ಸವವನ್ನು ಆಚರಿಸಿ ಇಂದಿಗೆ 79 ವರ್ಷಗಳು ಕಳೆದವು. ಈ ಉತ್ಸವವನ್ನು ಪ್ರತ್ಯಕ್ಷವಾಗಿ ನೋಡಿದವರು, ಕೇಳಿದವರು, ಭಾಗವಹಿಸಿದ ಮಹನೀಯರು ಕೆಲವರು ಮಾತ್ರ ನಮ್ಮೊಂದಿರಬೇಕು. ಸಾಮ್ರಾಜ್ಯದ ಸ್ಮಾರಕೋತ್ಸವವನ್ನು ಅಕ್ಟೋಬರ್ ತಿಂಗಳು 25 1936ರಂದು ಹಂಪಿಯಲ್ಲಿ ಆಚರಿಸಲಾಯಿತು. ವಿಜಯನಗರ ಸಾಮ್ರಾಜ್ಯದ ಸ್ಮಾರಕೋತ್ಸವ ಮಂಡಲದ ಕಾರ್ಯನಿರ್ವಾಹಕ ಅಧ್ಯಕ್ಷರು ವೀರಭದ್ರಪ್ಪ ಹಾಲಭಾವಿ ಬಿ.ಎ., ಎಲ್.ಎಲ್.ಬಿ. ನಿವೃತ್ತ ಪ್ರಥಮ ದರ್ಜೆ ನ್ಯಾಯಾಧೀಶರವರು ಉತ್ಸವದ ಕರ್ಣಧಾರತ್ವ ವಹಿಸಿದ್ದರು.

ಭಾರತದಲ್ಲಿ ಭಾರತೀಯ ಧರ್ಮ ಮತ್ತು ಸಂಸ್ಕೃತಿಗಳು ಅವ್ಯಾಹತವಾಗಿ ನಡೆದುಬಂದವು. ಮುಂದೆ ಹಿಂದೂ ಸಂಸ್ಕೃತಿಗೆ ಧಕ್ಕೆ ತರುವ ಕಾಲವೊಂದು ಒದಗಿತ್ತು. ಭಾರತದ ಮಧ್ಯಕಾಲೀನ ಇತಿಹಾಸದಲ್ಲಿ ಹಿಂದೂ ಸಂಸ್ಕೃತಿಗೆ ಚ್ಯುತಿಯುಂಟು ಮಾಡಿತು. ಉತ್ತರದಿಂದ ಎರಗಿ ಬಂದ ಪರಕೀಯರ ದಾಳಿಯಿಂದ ದಕ್ಷಿಣಭಾರತದಲ್ಲಿ ಹಿಂದೂ ಧರ್ಮ ಸಂಸ್ಕೃತಿಯನ್ನು ರಕ್ಷಿಸಲು ಪ್ರಬಲವಾದ ಒಂದು ಹಿಂದು ಸಾಮ್ರಾಜ್ಯ ಉದಯವಾಯಿತು. 1336ರಲ್ಲಿ ಹಂಪಿಯಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯ ಮೂರು ಶತಮಾನ ಕಾಲ ಹಿಂದೂ ಸಾಮ್ರಾಜ್ಯವಾಗಿ ಹಿಂದುಗಳ ಹಿತರಕ್ಷಿಸಿದ ಏಕೈಕ್ಯ ಸಾಮ್ರಾಜ್ಯ ಎಂದೆನಿಸಿಕೊಂಡಿತು. ಅದ್ಭುತವಾದ ಸ್ವಾಭಿಮಾನದ ತತ್ವವನ್ನು ಅಪೂರ್ವವಾದ ಧಾರ್ಮಿಕ ಪ್ರಭಾವವನ್ನು ಅಸಾಮಾನ್ಯವಾದ ಸಾಂಸ್ಕೃತಿಕ ವೈಭವವನ್ನು ಮಾನವಲೋಕಕ್ಕೆ ಬೆಳಗಿದ ಕನ್ನಡನಾಡಿನ ಈ ಸಾಮ್ರಾಜ್ಯದ ಉಜ್ವಲ ಇತಿಹಾಸದಲ್ಲಿ ಸ್ಮರಣೆ ಇಂದಿನ ಪೀಳಿಗೆಗೆ ಅವಶ್ಯ. ಅಂತಲೆ ವಿಜಯದಶಮಿಯ ದಿನದಿಂದ ಗತಿಸಿಹೋದ ವಿಜಯನಗರ ಸಾಮ್ರಾಜ್ಯದ ಗತ ನೆನಪುಗಳನ್ನು ತರುವುದು ಮುಖ್ಯ ಉದ್ದೇಶವಾಗಿತ್ತು.

ಸಾಮ್ರಾಜ್ಯದ ಸ್ಮಾರಕ ಸಮಾರಂಭ ಆಚರಣೆಯ ಜೊತೆಗೆ ನೆಪಿಗಾಗಿ ಸ್ಮರಣ ಪುಸ್ತಕವನ್ನು ಪ್ರಕಟಿಸುವ ಮಂಡಲದ ನಿರ್ಧಾರದ ಫಲಶ್ರುತಿ 'ವಿಜಯನಗರ ಸಾಮ್ರಾಜ್ಯ' ಪುಸ್ತಕ ರಚನೆಯಾಯಿತು. ಸ್ಮಾರಕೋತ್ಸವ ಸಮಾರಂಭದಲ್ಲಿ ಪುಸ್ತಕ ಲೋಕಾರ್ಪಣೆಗೊಂಡಿತು.

'ವಿಜಯನಗರ ಸಮ್ರಾಜ್ಯ' ಶೀರ್ಷಿಕೆಯಡಿ ಪ್ರಸಿದ್ಧ ಇತಿಹಾಸ ತಜ್ಞರೂ ಧಾರವಾಡದ ಕರ್ನಾಟಕ ಸಂಶೋಧನಾ ಸಂಸ್ಥೆ (ಕೆ.ಆರ್.ಎಸ್.) ಯ ನಿರ್ದೇಶಕರೂ ಶ್ರೇಷ್ಠ ಬರಹಗಾರರೂ ಆಗಿದ್ದ ಡಾ. ಪಾಂಡುರಂಗರಾವ ಭೀಮಸೇನರಾವ ದೇಸಾಯಿ ಇವರು ಗ್ರಂಥ ಕರ್ತೃರು. ತಮಗೆ ಅಂದು ಉಪಲಬ್ಧವಾದ ಇಂಗ್ಲೀಷ್, ಸಂಸ್ಕೃತ, ಕನ್ನಡ, ಮರಾಠಿ ಮತ್ತು ಉರ್ದು ಭಾಷೆಗಳ 39 ಆಧಾರ ಗ್ರಂಥಗಳ ಸಹಾಯದಿಂದ ವಿಜಯನಗರದ ಇತಿಹಾಸವನ್ನು ಕಟ್ಟಿಕೊಟ್ಟಿದ್ದಾರೆ. ಆಧಾರ ಗ್ರಂಥಗಳ ಬಾಹುಳ್ಯ ಗಮನಿಸಿದರೆ ಡಾ. ಪಿ.ಪಿ. ದೇಸಾಯಿ ಅವರು ರಚಿಸಿದ ಈ ಪುಸ್ತಕ ವಿಜಯನಗರ ಸಾಮ್ರಾಜ್ಯದ ಅಧ್ಯಾಯನಕ್ಕೆ ಮೌಲಿಕ ಹಾಗೂ ಆಕಾರಗ್ರಂಥವಾಗಿದೆ. ಇದುವರೆಗೂ ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನು ಇಡಿಯಾಗಿ ಒಂದು ಕೃತಿಯಲ್ಲಿ ರಚಿಸಿಕೊಡುವ ಗ್ರಂಥಗಳು ಇರಲಿಲ್ಲ. ಡಾ. ಪಿ.ಬಿ. ದೇಸಾಯಿ ಅವರ ಈ ಗ್ರಂಥ ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನು ಒಂದೆಡೆ ತಂದುಕೊಡುವ ಪ್ರಥಮ ಗ್ರಂಥವೆಂಬ ಹೆಗ್ಗಳಿಕೆಗೆ ಭಾಜನವಾಗುತ್ತದೆ.

'ವಿಜಯನಗರ ಸಾಮ್ರಾಜ್ಯ' ಹೆಸರಿನ ಈ ಪುಸ್ತಕ ಕ್ರೌನ್ (ಕಿರೀಟ) 1/4 ಆಕಾರದಲ್ಲಿದೆ. ಒಟ್ಟು ಪುಟಗಳು 306. ಅಭ್ಯಾಸಕ್ಕೆ ಅನುಕೂಲ ಮಾಡಲು ಲೇಖಕರು ವಿಷಯವನ್ನು 36 ಅಧ್ಯಾಯಗಳಲ್ಲಿ ವಿವರಿಸಿ ಅವುಗಳನ್ನು 'ವಿಲಾಸ' ಎಂದು ಹೆಸರಿಸಿದ್ದಾರೆ. ಸಾಮ್ರಾಜ್ಯದ ವಿಹಂಗಮ ನಿರೀಕ್ಷಣೆ 1ನೆಯ ವಿಲಾಸವಾದರೆ, ವಿಜಯನಗರದ ನಾಗರಿಕತೆ 26ನೆಯ

ವಿಲಾಸದಲ್ಲಿದೆ. ಈ ಪುಸ್ತಕವನ್ನು ಧಾರವಾಡದ ವಿಜಯನಗರ ಸ್ಮಾರಕೋತ್ಸವ ಮಂಡಲ 1936ನೆಯ ಅಕ್ಟೋಬರ್ ತಿಂಗಳ 25ನೆಯ ದಿನಾಂಕ (ವಿಜಯದಶಮಿ)ಯಂದು ಪ್ರಕಟಿಸಿತು. ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಪಟ್ಟ 14 ಛಾಯಾಚಿತ್ರಗಳಿವೆ. ಇವುಗಳನ್ನು ಕರ್ನಾಟಕ ಸಂಶೋಧನ ವಿಭಾಗದ ಸಹಾಯದಿಂದ ಪಡೆಯಲಾಗಿದೆ. ಇಲ್ಲಿಯ ಚಿತ್ರಗಳು ಈಗಾಗಲೇ ಪ್ರಕಟಗೊಂಡ ಹಂಪಿಯ ಸುತ್ತಮುತ್ತಣದ ಜನಪರಿಚಯ ಚಿತ್ರಗಳು. ಈ ಗ್ರಂಥವು ಧಾರವಾಡದ ವೆಂಕಟೇಶ ಮಾಧವ ಜೋಶಿಯವರ ಒಡೆತನದ ಮೋಹನ ಮುದ್ರಣಾಲಯದಲ್ಲಿ ಮುದ್ರಣಗೊಂಡಿದೆ. ಸಾಮ್ರಾಜ್ಯದ ಭೂಪಟವನ್ನು ಇಲ್ಲಿ ಅಳವಡಿಸಿರುವುದು ಒಂದು ವಿಶೇಷ. ವಿಜಯನಗರದ ನಾಣ್ಯಗಳು, ವಿಜಯನಗರದ ಧ್ವಜ, ಕೆಲವು ಅರಸರ ಮೂರ್ತಿಗಳ ಛಾಯಾಚಿತ್ರಗಳನ್ನು ಸಂಗ್ರಹಿಸಿ ಪರಿಶಿಷ್ಟದಲ್ಲಿ ಪ್ರಕಟಿಸಿರುವುದು ಸಾಮ್ರಾಜ್ಯದ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತದೆ. ಎಂಭತ್ತುವರ್ಷಗಳ ಹಿಂದೆ ವಿಜ್ಞಾನ ಇಷ್ಟೊಂದು ಬೆಳೆಯದಿದ್ದ ಮಾಧ್ಯಮ ಸೌಲಭ್ಯಗಳು ದೊರೆಯದಿದ್ದ ಕಠಿಣ ಪರಿಸ್ಥಿತಿಯಲ್ಲಿಯೂ ವಿಜಯನಗರವನ್ನು ಪರಿಚಯಿಸುವ ದಾಖಲೆಗಳನ್ನು ಸಂಗ್ರಹಿಸಿ ಪುಸ್ತಕದಲ್ಲಿ ಪ್ರಕಟಿಸಿರುವ ಲೇಖಕರ ಹಿಂದಿರುವ ಶ್ರಮ ಬೆರಗುಗೊಳಿಸುತ್ತದೆ. ಒಂದು ಇತಿಹಾಸ ಪುಸ್ತಕ ಯಾವ ಯಾವ ಮಹತ್ವದ ಮಾಹಿತಿಗಳನ್ನು ಒದಗಿಸಬೇಕು ಅವೆಲ್ಲವೂ ಈ ಪುಸ್ತಕದಲ್ಲಿ ದೊರೆಯುತ್ತವೆ.

ಇತಿಹಾಸ ರಚನೆಗೆ ಶಾಸನಗಳು, ಬೇರೆ ಬೇರೆ ಭಾಷೆಗಳ ಗ್ರಂಥಗಳು, ವಾರ್ಷಿಕ ವರದಿಗಳು, ನಾಣ್ಯಗಳು, ವಿದೇಶ ಪ್ರವಾಸಿಗಳ ಟಿಪ್ಪಣಿಗಳು, ಕಟ್ಟಡಗಳು, ಕೋಟೆಕೊತ್ತಲುಗಳು, ಕೈಫಿಯತ್ತುಗಳು. ಜನಪದ ಹಾಡುಗಳು ಮೂಲ ದಾಖಲೆಗಳಾಗಿವೆ. ಲೇಖಕ ಡಾ. ಪಿ.ಬಿ. ದೇಸಾಯಿಗಳು 'ವಿಜಯನಗರ ಸಾಮ್ರಾಜ್ಯ' ಪುಸ್ತಕ ರಚನೆಗೆ 39 ದಾಖಲೆಗಳನ್ನು ಆಧಾರವಾಗಿ ಬಳಸಿಕೊಂಡಿದ್ದಾರೆ. ಸುಮಾರು 27 ಇಂಗ್ಲೀಷ್ ಭಾಷೆಯ ಗ್ರಂಥಗಳಿಂದ ಮಾಹಿತಿ ಪಡೆಯಲಾಗಿದೆ. ಬ್ರೋನ್, ಫೆರಿಸ್ತಾ, ಹೆರಾಸ್, ಲಾಂಗುರಿಸ್ತಾ, ಸಿವೆಲ್, ಸತ್ಯನಾಥನ್ ಅಯ್ಯರ್, ಕೃಷ್ಣಸ್ವಾಮಿ ಐಯ್ಯರ್, ಸಾಲೆತೊರೆ ಮುಂತಾದ ಪಾಶ್ಚಾತ್ಯ ಇತಿಹಾಸ ತಜ್ಞರು ಹಾಗೂ ಭಾರತೀಯ ಇತಿಹಾಸಕಾರರು ಮೂಲಾಧಾರರು. ಸಂಸ್ಕೃತ, ಮರಾಠಿ, ಕನ್ನಡ ಮತ್ತು ಉರ್ದು ಭಾಷೆಯಲ್ಲಿ ರಚಿಸಿದ ಗ್ರಂಥಗಳು ವಿಜಯನಗರ ಸಾಮ್ರಾಜ್ಯವನ್ನು ಕುರಿತು ನೇರವಾಗಿ ವಿಷಯ ಪ್ರಸ್ತಾಪಿಸದಿದ್ದರೂ ಸಮಕಾಲೀನ ಭಾರತದ ಇತಿಹಾಸವನ್ನು ಉಲ್ಲೇಖಿಸುತ್ತವೆ. ಮೈಸೂರು ಗೆಝೆಟಿಯರ್, ವಾರ್ಷಿಕ ವರದಿಗಳು, ದಕ್ಷಿಣ ಭಾರತದ ಶಿಲಾಲೇಖನದ ವರದಿಗಳು ಈ ಪುಸ್ತಕದಲ್ಲಿ ಉಪಯೋಗಿಸಲಾಗಿದೆ. ಆದರೆ ಲೇಖಕರು ಇಂಗ್ಲೀಷ್ ಆಧಾರ ಗ್ರಂಥದಲ್ಲಿ ಹೆರಾಸ್ ಅವರನ್ನು ಮಾತ್ರ ಸಂಪನ್ಮೂಲ ಆಧಾರವಾಗಿ ಹೆಚ್ಚು ಬಳಸಿಕೊಂಡಿರುವುದು ಕಂಡುಬರುತ್ತದೆ. ಇನ್ನೂ ಸಿವೆಲ್ ಅವರ ಮರೆತುಹೋದ ಸಾಮ್ರಾಜ್ಯ ಪುಸ್ತಕ ವಿಜಯನಗರ ಸಾಮ್ರಾಜ್ಯ ಇತಿಹಾಸವನ್ನು ವಿಸ್ತಾರವಾಗಿ ಇಂಗ್ಲೀಷ್ ಭಾಷೆಯಲ್ಲಿ ರಚಿಸಿದ ಮೊದಲ ಗ್ರಂಥವೆಂಬ ಹೆಗ್ಗಳಿಕೆಗೆ ಗುರಿಯಾಗಿದೆ. ಡಾ. ಪಿ.ಬಿ. ದೇಸಾಯಿ ಅವರು ಸಿವೆಲ್‌ರ ಮರೆತುಹೋದ ಸಮ್ರಾಜ್ಯ ಗ್ರಂಥವನ್ನು ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ ಆಗ ಧಾರವಾಡದಿಂದ ಪ್ರಕಟವಾಗುತ್ತಿದ್ದ 'ವಾಗ್ಭೂಷಣ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದ್ದರು. ಡಾ. ದೇಸಾಯಿ ಅವರು ರಚಿಸಿದ 'ವಿಜಯನಗರ ಸಾಮ್ರಾಜ್ಯ' ಪುಸ್ತಕದ ಮೇಲೆ ಸಿವೆಲ್‌ರ ಈ ಪುಸ್ತಕ ಗಾಢವಾದ ಪ್ರಭಾವ ಬೀರಿದಂತಿದೆ. ಆದರೆ ಲೇಖಕರು ಸಿವೆಲ್ ಅವರನ್ನು ಆಧಾರಗ್ರಂಥದಲ್ಲಿ ಎಲ್ಲಿಯೂ ಉಲ್ಲೇಖಿಸದೆ ಇರುವುದು ಸೋಜಿಗವೆನಿಸುತ್ತದೆ. ಒಂದು ಮಾತಿನಲ್ಲಿ ಹೇಳುವುದಾದರೆ 'ವಿಜಯನಗರ ಸಾಮ್ರಾಜ್ಯ' ಪುಸ್ತಕ ಸಿವೆಲ್‌ರ 'ಮರೆತುಹೋದ ಸಾಮ್ರಾಜ್ಯ' ಪುಸ್ತಕದ ಭಾವಾನುವಾದವೆನಿಸುತ್ತದೆ. ಆದರೆ ಇದೊಂದು ಸ್ವತಂತ್ರ ಗ್ರಂಥದಂತೆ ಹೊರಬಂದಿರುವುದಕ್ಕೆ ಮಹತ್ವ ಬಂದಿದೆ.

ಡಾ. ಪಿ.ಬಿ. ದೇಸಾಯಿ ಅವರು ವಿಜಯನಗರದ ಸಮಗ್ರ ಇತಿಹಾಸವನ್ನು 26 ವಿಲಾಸ (ಅಧ್ಯಾಯ)ಗಳ ಹರವಿನಲ್ಲಿ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ವಿಜಯನಗರ ಸ್ಥಾಪನೆಯ ಪೂರ್ವ ಹಾಗೂ ಉತ್ತರ ಭಾಗವನ್ನು ವಿಹಂಗಮದಲ್ಲಿ ಮತ್ತು ಅರವೀಡು ಮನೆತನಗಳ ಅರಸರ ರಾಜ್ಯಭಾರವನ್ನು ವರ್ಣಿಸಿದೆ. ಅರಸರ ರಾಜ್ಯ ವಿಸ್ತಾರ, ಹಿಂದೂ ಧರ್ಮರಕ್ಷಣೆ, ಯುದ್ಧಗಳು, ಪ್ರಜಾರಂಜನೆಯ ಕಾರ್ಯಗಳು, ಗೆಲುವು-ಸೋಲುಗಳ ವಿವರಗಳು ಸಾಂಗವಾಗಿ ವ್ಯಕ್ತವಾಗಿವೆ. ಹಕ್ಕನು ವಿಜಯನಗರಸಾಮ್ರಜ್ಯ ಸ್ಥಾಪಿಸಿ (1336) ಯುದ್ಧಗಳನ್ನು ನಡೆಸಿ ಸಾಮ್ರಾಜ್ಯವನ್ನು ವಿಸ್ತರಿಸಿ, ಹರಿಹರ ಹೊಸ ಹೆಸರಿನಿಂದ ಸಾಮ್ರಾಜ್ಯದ ಪಟ್ಟಾಧಿಕಾರವನ್ನು ವಹಿಸಿದನು (1346) ಹರಿಹರನ ಸಹೋದರ ಬುಕ್ಕ ರಾಜನು ರಾಜ್ಯದ ಹೊರಗಿನ ಮತ್ತು ಒಳಗಿನ ಶತ್ರುಗಳನ್ನು ಜಯಿಸಿ ಸಾಮ್ರಾಜ್ಯವನ್ನು ದಕ್ಷಿಣದ ಲಂಕೆಯವರೆಗೆ ಉತ್ತರದಲ್ಲಿ ತುಂಗಭದ್ರಾ ನದಿಯವರೆಗೆ ವಿಸ್ತರಿಸಿ, ಹಿಂದೂರಾಯ ಸುರತ್ರಾಣ ಬಿರುದು ಪಡೆದು ಸಾಮ್ರಾಜ್ಯಕ್ಕೆ ಭದ್ರ ಬುನಾದಿ ಹಾಕಿದನು. ಹರಿಹರನ ಮತ್ತೊಬ್ಬ

ಸಹೋದರ ಕಂಪಣನು ಮಧುರೆಯ ನವಾಬ್‌ನೊಂದಿಗೆ ಸಮರ ಸಾಧಿಸಿ, ಮಧುರೆಯನ್ನು ನವಾಬ್‌ನಿಂದ ಕಸಿದು, ವಿಜಯನಗರಕ್ಕೆ ಸೇರಿಸಿದನು. ಕಂಪಣನಾಯಕನು ನವಾಬ್‌ನೊಂದಿಗೆ ಯುದ್ಧ ಮಾಡಿ ಮಧುರೆಯನ್ನು ಜಯಿಸಿದ್ದನ್ನು ಕಣ್ಣಾರೆ ಕಂಡ ಕಂಪಣನ ಪತ್ನಿ ಗಂಗಾದೇವಿ ಸಂಸ್ಕೃತದಲ್ಲಿ ರಚಿಸಿದ 'ಮಧುರಾವಿಜಯ' ಕಾವ್ಯವು ಕಂಪಣನ ಪರಾಕ್ರಮವನ್ನು ವರ್ಣಿಸುತ್ತದೆ. ಪ್ರೌಢದೇವರಾಯನ ಕಾಲದಲ್ಲಿ ರಾಜ್ಯದಲ್ಲಿ ಶಾಂತಿ ನೆಲೆಸಿದ ವಿಷಯ ವಿವರಿಸಿದೆ.

ಸಾಳುವ ಮನೆತನದ ನರಸನಾಯಕ, ವೀರನರಸಿಂಹ, ಸಾಳುವ ತಿಮ್ಮಣ್ಣ ಇವರು ಸಾಮ್ರಾಜ್ಯಕ್ಕೆ ಬಂದೊದಗಿದ ಆಪತ್ತನ್ನು ನಿವಾರಿಸಿ, ಸಾಮ್ರಾಜ್ಯವನ್ನು ನಿರಾತಂಕಗೊಳಿಸಿದ ವಿಚಾರ ಬಂದಿದೆ. ಗುಳುಮನೆತನದಲ್ಲಿ ಕೃಷ್ಣದೇವರಾಯನ ಸಮರ್ಥ ಆಡಳಿತದ ವಿವರಣೆ ಸ್ವಾರಸ್ಯವಾಗಿ ಬಣ್ಣಿಸಿದೆ. ಕೃಷ್ಣಾನದಿ ಮತ್ತು ತುಂಗಭದ್ರಾ ನದಿಗಳ ನಡುವಣ ದೋ–ಆಬ್ ಪ್ರದೇಶದ ರಾಯಚೂರು ಕೋಟೆ ವಶಪಡಿಸಲು ಬಹುಮನಿ ಮತ್ತು ವಿಜಯನಗರದ ಅರಸರ ನಡುವೆ ನಡೆದ ಯುದ್ಧಗಳು, ಕೃಷ್ಣದೇವರಾಯ ರಾಯಚೂರನ್ನು ಜಯಿಸಿದ ವಿಚಾರ ಸ್ವಾರಸ್ಯಕರವಾಗಿ ಬಂದಿದೆ.

ಅರನೀಡು ಮನೆತನದ ಅಳಿಯ ರಾಮರಾಯ ತುಳು ಸದಾಶಿವ ರಾಯನ ಹೆಸರಿನಲ್ಲಿ ರಾಜ್ಯದ ಆಡಳಿತ ನಡೆಸಿ, ಅತಿಶಯವಾದ ಆತ್ಮವಿಶ್ವಾಸ, ಹುಂಬುತನ ವರ್ತನೆಗಳಿಂದ ಬಹುಮನಿಯ ಐದು ರಾಜಮನೆತನಗಳು ಒಟ್ಟಾಗಿ ರಾಮರಾಯನನ್ನು ಇದಿರಿಸಿದವು. ರಕ್ಕಸತಂಗಡಿಯಲ್ಲಿ ನಡೆದ ನಿರ್ಣಾಯಕ ಯುದ್ಧದಲ್ಲಿ ರಾಮರಾಯ ಸೋತು ಮರಣ ಹೊಂದಿದ (1565) ವಿಜಯನಗರ ಸಾಮ್ರಾಜ್ಯವು ಬಹುಮನಿ ಐದು ಜನ ಸುಲ್ತಾನರ ಪದಾಕ್ರಾಂತದ ಹೊಡೆತದಿಂದ ನುಚ್ಚುನೂರಾಯಿತು. ರಾಮರಾಯನ ತಮ್ಮಂದಿರಾದ ತಿರುಮಲರಾಯ ಮತ್ತು ರಂಗರಾಯರು ಅಳಿದುಳಿದ ವಿಜಯನಗರ ಸಾಮ್ರಾಜ್ಯವನ್ನು ಪೆನಗೊಂಡಕ್ಕೆ ವರ್ಗಾಯಿಸಿದರು. ಒಂದು ಶತಮಾನ (1681) ವೈಭವದಿಂದ ಮೆರೆದ ವಿಜಯನಗರ ಸಾಮ್ರಾಜ್ಯ ಅಸ್ತಂಗತವಾಯಿತು. ಹಿಂದೂ ಸಾಮ್ರಾಜ್ಯ ಮುಳುಗಿತು.

79 ವರ್ಷಗಳ ಹಿಂದೆ ರಚನೆಯಾದ ಈ ಪುಸ್ತಕದಲ್ಲಿಯ ವಿಜಯನಗರದ ಇತಿಹಾಸದ ವಿಚಾರಗಳು ಸೀಮಿತವಾಗಿವೆ. ಇಂದಿನ ಅಧ್ಯಯನ ಯುಗದಲ್ಲಿ ವಿಜಯನಗರ ಕುರಿತು ಹೊಸವಿಚಾರ ಹೊಸ ಸಂಶೋಧನೆ ಅಧ್ಯಯನಗಳು ಬೃಹದಾಕಾರವಾಗಿ ಬೆಳೆದಿವೆ. ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ನೂರಾರು ಸಂಶೋಧನಾತ್ಮಕ ಕೃತಿಗಳು ರಚನೆಯಾಗಿವೆ. ಸಾಮ್ರಾಜ್ಯದ ಬಗ್ಗೆ ಉದಯಿಸಿದ ಸಮಸ್ಯೆ, ಸಂದೇಹಗಳಿಗೆ ಪ್ರಸ್ತುತ ಪುಸ್ತಕದಲ್ಲಿ ವ್ಯಕ್ತವಾದ ಸಮಸ್ಯೆಗಳು ಹಾಗೂ ಪರಿಹಾರಗಳು ಆಧುನಿಕ ಇತಿಹಾಸ ಅಧ್ಯಯನ ಕಂಡುಕೊಂಡ ವಿಚಾರಗಳಿಗೆ ಬಿನ್ನವಾಗಿಲ್ಲವೆಂಬುದು ಈ ಗ್ರಂಥದ ಮಹತ್ವವಾಗಿದೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನಾ ದಿನ, ಹರಿಹರನ ಪಟ್ಟಾಭಿಷೇಕವಾದ ದಿನ, ವಿಜಯನಗರದ ಅರಸು ಮನೆತನದ ಗುರುಗಳಾದ ವಿದ್ಯಾರಣ್ಯರು ಮತ್ತು ಕಾಶಿವಿಲಾಸ ಕ್ರಿಯಾಶಕ್ತಿ, ಹಕ್ಕಬುಕ್ಕರಮೂಲ. ಆಂಧ್ರಮೂಲ, ಕರ್ನಾಟಕ ಮೂಲ, ರಾಯಚೂರು ವಿಜಯದ ಕಾಲ, ವಿಜಯನಗರದ ನಿರ್ಣಾಯಕ ಯುದ್ಧ ನಡೆದದ್ದು ರಕ್ಕಸತಂಗಡಿಗೆ ಮತ್ತು ತಾಳಿಕೋಟೆ ಇತ್ಯಾದಿ ಸಮಸ್ಯೆಗಳಿಗೆ ಸಮಂಜಸ ಪರಿಹಾರೋತ್ತರಗಳು ದೊರೆಯುತ್ತವೆ. ಇವುಗಳಲ್ಲಿ ಬಹುಮುಖ್ಯವಾಗಿ ಹಕ್ಕಬುಕ್ಕರು ದೋರಸಮುದ್ರ ಅರಸರ ಸಾಮಂತರಾಗಿದ್ದು ಕನ್ನಡ ಮೂಲದೇವರೆಂದು ನಿರ್ಧರಿಸಿದೆ. ಅದರಂತೆ ವಿಜಯನಗರ ಸಾಮ್ರಾಜ್ಯ 1336ರಲ್ಲಿ ಸ್ಥಾಪನೆಯಾದರೂ ಹರಿಹರನ ಪಟ್ಟಾಭಿಷೇಕ 1346ರಲ್ಲಿ ಹತ್ತು ವರ್ಷಗಳ ನಂತರ ನಡೆಯಿತು. ಅಂತೆಯೇ 1346 ವಿಜಯನಗರ ಸಾಮ್ರಾಜ್ಯದ ಸ್ಥಾಪನಾ ದಿನವೆಂಬುದು ನಿರ್ಣಯಿಸಲಾಗಿದೆ. ರಾಯಚೂರು ವಿಜಯ 1521ರಲ್ಲಿ ಮತ್ತು ವಿಜಯನಗರದ ಅಂತಿಮ ಯುದ್ಧ ನಡೆದದ್ದು ರಕ್ಕಸತಂಗಡಿ ಸ್ಥಳದಲ್ಲಿ, ಎಂದು ಲೇಖಕರು ತೆಗೆದುಕೊಂಡ ಖಚಿತ ನಿರ್ಣಯಗಳು ಎಲ್ಲ ವಿವಾದಗಳಿಗೆ ತೆರೆ ಎಳೆದಿದೆ.

ಡಾ॥ ಪಿ.ಬಿ. ದೇಸಾಯಿ ಅವರ 'ವಿಜಯನಗರ ಸಾಮ್ರಾಜ್ಯ' ಕನ್ನಡ ಭಾಷೆ ಪ್ರಥಮ ಗ್ರಂಥ. 79 ವರ್ಷಗಳ ಹಿಂದೆ ಲಭ್ಯವಾದ ಸೀಮಿತ ಆಧಾರಗಳ ಮೇಲೆ ರಚನೆಯಾದ ಈ ಪುಸ್ತಕ ಆಧುನಿಕ ಕಾಲದಲ್ಲಿಯೂ ಅಮೂಲ್ಯವಾಗಿದೆ.

39. ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ ಮತ್ತು ಮಹಿಳೆ

ಡಾ. ಟಿ.ವಿ. ನಾಗರಾಜ

ಮಧ್ಯಕಾಲೀನ ಹಾಗು ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ ಕುರಿತಂತೆ ಈಗಾಗಲೆ ಹಲವು ದೇಶಿಯ ಮತ್ತು ವಿದೇಶಿ ವಿದ್ವಾಂಸರುಗಳು ಅಧ್ಯಯನ ನಡೆಸಿದ್ದಾರೆ. ಈ ನಿಟ್ಟಿನಲ್ಲಿ ಡಾ. ಡಾಮಿನಿಕ್, ಡಾ. ಜೆಂತಿನ್, ಡಾ. ಡ್ಯಾನಿಸನ್[1] ಡಾ. ಸಿ.ಟಿ.ಎಂ. ಕೊಟ್ರಯ್ಯ,[2] ಡಾ. ವಿಜಯಲಕ್ಷ್ಮಿ[3] ಮತ್ತು ಇತರರ ಪ್ರಯತ್ನಗಳು ಗಮನ ಸೆಳೆಯುತ್ತಿವೆ. ಒಟ್ಟಾರೆ ವಿಜಯನಗರ ಕಾಲದ ನೀರಾವರಿ ಚೌಕಟ್ಟಿನಲ್ಲಿ ಮಹಿಳೆಯನ್ನು ಕೇಂದ್ರವಾಗಿರಿಸಿಕೊಂಡು, ನೀರಾವರಿ ನೆಲೆಯಲ್ಲಿ ಅವಲೋಕನ ನಡೆಸುವ ಪ್ರಯತ್ನ ಮಾಡಲಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಮಹಿಳೆಯ ಸ್ಥಾನಮಾನ ಕುರಿತಂತೆ ಅಧ್ಯಯನವೊಂದರಲ್ಲಿ ಮಹಿಳೆ ಮತ್ತು ನೀರಾವರಿ ಕುರಿತಂತೆ ಹಲವು ನಿದರ್ಶನಗಳು ಪ್ರಾಸಂಗಿಕವಾಗಷ್ಟೇ ಉಲ್ಲೇಖಿತಗೊಂಡಿದೆ.[4] ವಿಜಯನಗರ ಸಾಮ್ರಾಜ್ಯದ ನೀರಾವರಿ ಚೌಕಟ್ಟಿನ ಅಧ್ಯಯನಕ್ಕೆ ಪ್ರಮುಖ ಆಧಾರಗಳೆಂದರೆ ಶಾಸನಗಳು. ಲಭ್ಯವಿರುವ ಶಾಸನಗಳಲ್ಲಿ ಮಹಿಳೆ ಬಿಂಬಿತವಾಗಿರುವುದು ಧಾರ್ಮಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ. ಇಲ್ಲಿಯೂ ಕೂಡ ದಾನ–ದತ್ತಿಗಳನ್ನು ನೀಡಿದ ರಾಜರ, ಮಂತ್ರಿಗಳ, ಅಧಿಕಾರಿಗಳ ಪ್ರತಿಬಿಂಬಗಳಾಗಿ. ಹೀಗಾಗಿ ಹಲವು ಮಿತಿಗಳ ನಡುವೆ ಲಭ್ಯವಿರುವ ಉಲ್ಲೇಖಿತ ಕೆಲವು ಶಾಸನಗಳು ಮತ್ತು ಉಲ್ಲೇಖಿತ ಬಲಿ ಸಂಪ್ರದಾಯಗಳು, ಐತಿಹ್ಯಗಳೂ, ಜನಪದೀಯ ಕಥನಗಳಲ್ಲಿ ವ್ಯಕ್ತವಾಗಿರುವ ಮಹಿಳೆ ಮತ್ತು ಆಕೆಯ ಪಾತ್ರವನ್ನು 'ನೀರಾವರಿ ಚೌಕಟ್ಟಿಗೆ' ಪೂರಕವಾಗಿ ಅರ್ಥೈಸುವ ಪ್ರಯತ್ನಿಸಲಾಗಿದೆ.

ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದು ಪುಣ್ಯದ ಕೆಲಸ. ಇಂತಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು "ಧಾರ್ಮಿಕ ಉತ್ಕೃಷ್ಟತೆ" ಅಥವಾ "ಸಪ್ತ ಸಾಮಂತನ" ಎಂದೆಲ್ಲಾ ಪರಿಭಾವಿಸಲಾಗುತ್ತಿತ್ತು. ಈ ಧಾರ್ಮಿಕ ಮಹೋನ್ನತಿಯ ಉದ್ದೇಶಗಳ ಪ್ರತೀಕವಾಗಿ ನೀರಾವರಿ ಚೌಕಟ್ಟು ಪ್ರೋತ್ಸಾಹ ಪಡೆಯಿತು. ನೀರಾವರಿ ಕಾಮಗಾರಿಗಳ ನಿರ್ಮಾಣ, ದುರಸ್ತಿ ಹಾಗು ನಿರ್ವಹಣೆಯ ಪ್ರಕ್ರಿಯೆಗಳು ಬಹುತೇಕ ಸ್ಥಳೀಯರಿಂದಲೇ ನಡೆಯುತ್ತಿದ್ದು, ಇಂತಹ ಚಟುವಟಿಕೆಗಳಲ್ಲಿ ಪ್ರೋತ್ಸಾಹದಾಯಕ ಕ್ರಮಗಳನ್ನು ನೀಡುತ್ತಿದ್ದುದು ಒಂದು ಪರಂಪರೆಯಾಗಿ ಬೆಳೆದುಬಂದಿದೆ.

ವಿಜಯನಗರ ಕಾಲಘಟ್ಟದಲ್ಲಿ ನೀರಾವರಿ ಕಾಮಗಾರಿಗಳ ನಿರ್ಮಾಣ, ದುರಸ್ತಿ ಮತ್ತು ಚಟುವಟಿಕೆಯಲ್ಲಿ ಮಹಿಳೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣಕರ್ತಳಾಗಿರುವುದು ಕಂಡುಬಂದಿದೆ. ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದು "ಪುಣ್ಯದ ಕಾರ್ಯ" ಎಂಬ ಗಾಢ ನಂಬಿಕೆಯ ಹಿನ್ನೆಲೆಯಲ್ಲಿ ಮಹಿಳೆಯರ ಹೆಸರಿನಲ್ಲಿ, ಅಂದರೆ ತಾಯಿ, ಅಕ್ಕ–ತಂಗಿ, ಮಡದಿ – ಹೀಗೆ ಅವರಿಗೆ ಪುಣ್ಯವಾಗಲೆಂದು ಅವರ ಹೆಸರಿನಲ್ಲಿ ಕೆರೆ–ಕಾಲುವೆಗಳ ನಿರ್ಮಾಣ, ದುರಸ್ತಿ ಕೈಗೊಂಡಿರುವುದು ಪ್ರಧಾನವಾಗಿ ಕಂಡುಬರುತ್ತಿದೆ. ಕ್ರಿ.ಶ. 1343ರ ಅರಸೀಕೆರೆಯ ಶಾಸನದಲ್ಲಿ ಒಯ್ಯಣ್ಣ ಎಂಬುವನು 'ಮಂಗಸಮುದ್ರ' ಎಂಬ ಕೆರೆಯನ್ನು ತನ್ನ ತಾಯಿ ಹೆಸರಿನಲ್ಲಿ ಪುಣ್ಯವಾಗಲೆಂದು ನಿರ್ಮಿಸಿದ್ದನ್ನು ಉಲ್ಲೇಖಿಸಿದೆ.[5] ಕ್ರಿ.ಶ. 1374ರ ಚಿಕ್ಕಬಳ್ಳಾಪುರ ತಾಲ್ಲೂಕಿನ ಶಾಸನದಲ್ಲಿ ನಾಗಣ್ಣ ಒಡೆಯನ ಸಾದಲ್ಲಿ ರಾಜ್ಯದಲ್ಲಿ ಅಲ್ಲಿಯ ಸ್ಥಳೀಯ ನಾಯಕಿ ಪೂಬಿನಾಯಕನ ಮಕ್ಕಳಾದ ಪೆದ್ದ ಓಬಿಲಿನಾಯಕ ಮತ್ತು ಚಿನ್ನ ಓಬಿಲಿನಾಯಕರು ತಮ್ಮ ತಾಯಿ ಪುರಿಯ ನಾಯಕಿತಿ ಹೆಸರಿನಲ್ಲಿ 'ಪೆರಿಯಸಮುದ್ರ' ಎಂಬ ಕೆರೆಯನ್ನು ನಿರ್ಮಾಣಮಾಡಿದ್ದು ದಾಖಲಾಗಿದೆ.[6] ಸ್ಥಳೀಯ ನಾಯಕರಿಗೆ, ತಮ್ಮಲ್ಲಿನ ಸಂಪನ್ಮೂಲಗಳನ್ನು ಬಳಸಿಕೊಂಡು ನೀರಾವರಿ ಕಾಮಗಾರಿಗಳನ್ನು ನಿರ್ಮಿಸಲು ಮಾತೃ–ಪುಣ್ಯಗಳೆ ಪ್ರದಾನ ಪ್ರೇರಕಶಕ್ತಿಗಳಾಗಿ ಅನುಷ್ಠಾನಕ್ಕೆ ನೆರವಾಗಿರುವುದು ಕಂಡುಬರುತ್ತಿದೆ.

ಕ್ರಿ.ಶ. 1382ರ ಮಳವಳ್ಳಿ ಶಾಸನದಲ್ಲಿ ಕೀರ್ತಿಸೇನನ ಮಗ ಭಟ್ಟಒಬ್ಬಿಯಪ್ಪ ತನ್ನ ಮಾತಾ–ಪಿತೃಗಳ ಹೆಸರಿನಲ್ಲಿ 'ಕೀರ್ತಿಸಮುದ್ರ', ಮಾಳಪ್ಪ ಕೆರೆ, ನಾಗವ್ವ ಕೆರೆ ಹಾಗು ಚೌಡಪ್ಪ ನಾಲೆಗಳನ್ನು ನಿರ್ಮಿಸಿದನೆಂದು ಉಲ್ಲೇಖಿಸಿದೆ.[7] ಇಲ್ಲಿ ಹಲವು ಕಾಮಗಾರಿಗಳು ಅನುಷ್ಠಾನಗೊಂಡಿದ್ದು, ಸ್ಥಳೀಯ ಮತ್ತು ಅಗ್ರಹಾರದ ಸಂಪನ್ಮೂಲಗಳು ಬಳಕೆಯಾಗಿರುವುದು ಕಂಡುಬಂದಿದೆ. ಕ್ರಿ.ಶ. 1428ರ ಹಿರಿಯೂರು ಶಾಸನದಲ್ಲಿ ಕಾರೆಯಪಟ್ಟಣದ ಚಿಕ್ಕದೇವ, ಮುದ್ದೆರಿಹಳ್ಳಕ್ಕೆ ಕೆರೆಯನ್ನು ತನ್ನ ತಾಯಿ ಕಮಾಯಿಗೆ ಪುಣ್ಯವಾಗಲೆಂದು ನಿರ್ಮಿಸಿದನೆಂದು ದಾಖಲಿಸಿದೆ.[8] ಕ್ರಿ.ಶ. 1467ರ ತಿರುಮಲ ಶಾಸನದಲ್ಲಿ ಆ

ಮೂಲಕ ನೀರಾವರಿ ಸೌಲಭ್ಯ ಪಡೆದ ಭೂಮಿಯಿಂದ ಬಂದಂತಹ ಉತ್ಪನ್ನವನ್ನು ದೇವಾಲಯಕ್ಕೆ ತನ್ನ ರಾಣಿ ಹೆಸರಿನಲ್ಲಿ ಸಲ್ಲಿಕೆಯಾಗಿರುವುದು ದಾಖಲಾಗಿದೆ.[9] ಪ್ರಭುತಿಗಣದ ನರಸಿಂಹ, ತನ್ನ ಪತ್ನಿಗೆ ಪುಣ್ಯವಾಗಿಲೆಂದು ಧಾರ್ಮಿಕ ಕಾರ್ಯಕ್ಕೆ ಪೂರಕವಾಗಿ ನೀರಾವರಿ ಕಾಮಗಾರಿ ಕೈಗೊಂಡಿರುವುದು ವ್ಯಕ್ತವಾಗುತ್ತದೆ. ಕ್ರಿ.ಶ. 1494ರ ಕಡಪಾದ ಶಾಸನದಲ್ಲಿ ನರಸನಾಯಕ ಎಂಬ ಸ್ಥಳೀಯ ಆಡಳತಗಾರ ತನ್ನ ತಾಯಿ ಕಾವೇರಮ್ಮನ ಹೆಸರಿನಲ್ಲಿ ಕೆರೆಯನ್ನು ಕಟ್ಟಿದನೆಂದು ಉಲ್ಲೇಖಿತಗೊಂಡಿದೆ.[10] ಇದೇ ನರಸನಾಯಕ ತಾಯಿ ಹೆಸರಿನಲ್ಲಿ 'ಕಟ್ಟುಕಾಲುವೆ' (Feeder Channel) ನಿರ್ಮಿಸಿದ್ದನ್ನು ದಾಖಲಿಸಿದೆ. ಪುರೋಹಿತ ರಂಗನಾಥ ದೀಕ್ಷಿತರು ನಾಗಲಾಪುರದಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಲ್ಲದೆ ತನ್ನ ರಾಜನ ತಾಯಿ ನಾಗಲಾಂಬಿಕೆ ಹೆಸರಿನಲ್ಲಿ 'ನಾಗಲಾಸಮುದ್ರ' ಎಂಬ ಕೆರೆ ಕಟ್ಟಿಸಿದನೆಂದು ಉಲ್ಲೇಖಿತಗೊಂಡಿದೆ.[11] ಚರವುಸೀಮೆ ಪ್ರಾಂತ್ಯದಲ್ಲಿ ಆಡಳಿತ ನಡೆಸುತ್ತಿದ್ದ ಪಾಪನಾಯಕಗಾರು, ಗ್ರಾಮಸ್ಥಾಪನೆ, ದೇವಾಲಯ ಹಾಗು ಬಾವಿ ನಿರ್ಮಿಸಿದುದನ್ನು, ಮಡದಿ ಹೆಸರಿನಲ್ಲಿ ಅವುಗಳ ನಿರ್ವಹಣೆಗೆ ದಾನಗಳನ್ನು ನೀಡಿದ್ದನ್ನು ದಾಖಲಿಸಿದೆ.[12] ಬಯಕಾರ ರಾಮಪ್ಪ ತನ್ನ ಪುತ್ರಿ ಕಾಮಮ್ಮನ ಹೆಸರಿನಲ್ಲಿ 'ಕಾಮಸಮುದ್ರ' ಎಂಬ ಕೆರೆ ನಿರ್ಮಿಸಿದ್ದನ್ನು ಕೊಂಡಮಾಡು ಶಾಸನದಲ್ಲಿ ದಾಖಲಾಗಿದೆ.[13] ಕೊಂಡವೀಡು ಪ್ರಾಂತ್ಯದ ರಾಯಮಾತ್ಯ ಎಂಬುವನು ತನ್ನ ಪುತ್ರಿ ಹೆಸರಿನಲ್ಲಿ 'ಅಚ್ಯುತಮ್ಮಪುರ' ಎಂಬ ಅಗ್ರಹಾರ ನಿರ್ಮಿಸಿದ್ದಲ್ಲದೆ 'ಅಚ್ಯುತ ಸಮುದ್ರ' ಎಂಬ ಅಗ್ರಹಾರ ನಿರ್ಮಿಸಿದನು.[14] ಇದೇ ರಾಯಮಾರ್ಯ ಹದಿನೆಂಟು ಕೆರೆಗಳನ್ನು ನಿರ್ಮಿಸಿದ್ದನ್ನು ದಾಖಲಿಸಿದೆ. ಪ್ರಾಯಶಃ ಪ್ರಾದೇಶಿಕ ಆಡಳಿತಗಾರನಾಗಿ, ತನ್ನ ವ್ಯಾಪ್ತಿಯಲ್ಲಿ ಸಂಪನ್ಮೂಲಗಳನ್ನು ಕ್ರೋಢಿಕರಿಸಿ, ಬಹು ಸಂಖ್ಯೆಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದು ಕಂಡುಬಂದಿದೆ. ವೆಂಕಟಪತಿ ಎಂಬ ರಾಜನ ಮಡದಿ ಹತ್ತು ವರಾಹಗಳನ್ನು ಇಬ್ಬರು ಖಾಸಗಿ ವ್ಯಕ್ತಿಗಳಲ್ಲಿ ಠೇವಣಿ ಇರಿಸಿ, ಬಂದ ಆದಾಯದಲ್ಲಿ ಕೆರೆ-ದುರಸ್ತಿ ನಿರ್ವಹಣೆಗಾಗಿ ದತ್ತಿ ಬಿಟ್ಟಿರುವುದು ದಾಖಲಾಗಿದೆ.[15] ಕೃಷ್ಣದೇವರಾಯನ ಆಳ್ವಿಕೆಯಲ್ಲಿ ರಾಜನ ಕಾರ್ಯಕರ್ತ ಕೊಂಡರಸಯ್ಯ, ತಾಯಿ ಸಾಣಿಕ್ಯಮ್ಮನಿಗೆ ಪುಣ್ಯವಾಗಲೆಂದು ಕೆರೆ ನಿರ್ಮಿಸಿದ್ದನ್ನು ದಾಖಲಿಸಿದೆ.[16]

ಮಹಿಳೆ ವಿಜಯನಗರ ಕಾಲದಲ್ಲಿ ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ಪ್ರತ್ಯಕ್ಷವಾಗಿ ತೊಡಗಿಸಿಕೊಂಡಿರುವುದರ ಕುರಿತಂತೆ ಹಲವು ಶಾಸನಗಳು ಬೆಳಕು ಚೆಲ್ಲುತ್ತವೆ. ಕ್ರಿ.ಶ. 1397ರಲ್ಲಿ ಬುಕ್ಕರಾಯನ ಮಗಳು ಬೊಮ್ಮಾದೇವಿ, ಪೆನುಗೊಂಡೆರಾಜ್ಯದಲ್ಲಿರುವಾಗ ತಿರುಮಾಣೀಯಾರ್ ಗ್ರಾಮದ ಮುಂದೆ ಕಾಲುವೆಯೊಂದನ್ನು ತೋಡಿಸಲು ಪ್ರಯತ್ನಗೊಂಡು, ತನ್ನ ಮಂತ್ರಿಗಳಾದ ನಾಗರಾಜ ಮತ್ತು ಮಾಯನಯಾನಿಯವರಿಗೆ ಕಾಲುವೆ ತೋಡಿಸಿ, ಕೆರೆ ನಿರ್ಮಿಸಲು ಆದೇಶಿಸಿದಳು. ಕಾಮಗಾರಿಯ ಕುಶಲಕರ್ಮಿಗಳಾದ ಪೆದ್ದಬೋವಿವೋಜ ಮತ್ತು ಚಿನ್ನಾಬೋವಿವೋಜರಿಗೆ ವಹಿಸಿದ್ದಿತು. ಕರಾರಿನಂತೆ, ಕಾಮಗಾರಿ ಅನುಷ್ಠಾನಗೊಂಡು, ಯಶಸ್ವಿಯಾಗಿ ನೀರು ಹರಿದಾಗ, ಅವರಿಗೆ ನೂರುಮುವತ್ತು ಸಿಂಗೇಯ ಗದ್ಯಾಣ, ತೂಬಿನ ಹತ್ತಿರದ ಭೂಮಿ, ಮನೆ, ಮತ್ತು ಕೈಗೆ ಕಡಗ ನೀಡುವಂತೆ, ನೀಡಲಾಗಿತ್ತು.[17] ಪ್ರಭುವರ್ಗದ ಚೆನ್ನಮಾಂಬೆ, ವೆಂಕಟಪಾಡು ಬಳಿ ಕೆರೆಯೊಂದನ್ನು ನಿರ್ಮಿಸಿ, 'ಗೋಪಿನಾಥಸಮುದ್ರ' ಎಂದು ಹೆಸರಿಸಿದ್ದಾಳೆ.[18] ಕೆಲವೊಮ್ಮೆ ನೀರಾವರಿ ಕಾಮಗಾರಿಗಳು ಧಾರ್ಮಿಕ ನಿರ್ಮಿತಿಗಳ ನಡುವೆ ತಳಕುಹಾಕಿಕೊಂಡಿದೆ. ಅಂಗಳಮ್ಮ ಕೆರೆ ನಿರ್ಮಿಸಿ, ಮಂಟಪ ಕಟ್ಟಿಸಿದ್ದಲ್ಲದೆ ವಿನಾಯಕನ ವಿಗ್ರಹ ಪ್ರತಿಷ್ಠಾಪಿಸಿ, ಭೂದಾನ ನೀಡಿದ್ದನ್ನು ದಾಖಲಿಸಿದೆ.[19] ಇಲ್ಲಿ ಮಹಿಳೆಯ ಸ್ಥಾನಮಾನ ಅಥವಾ ಪ್ರಭುವರ್ಗದೊಂದಿಗಿನ ಸಂಬಂಧಗಳಾಗಲಿ, ಪ್ರಸ್ತಾಪವಾಗಿಲ್ಲ. ಶ್ರೀರುಗಂಬದ ದೇವಿಯಮ್ಮ ದೇವಾಲಯ ಗ್ರಾಮವೊಂದರಲ್ಲಿ ನೀರಾವರಿ ಕಾಲುವೆ ತೋಡಿಸಿದ್ದನ್ನು ಕ್ರಿ.ಶ. 1467ರ ಶಾಸನ ದಾಖಲಿಸಿದೆ.[20] ಧಾರ್ಮಿಕ ಮಹೋನ್ನತಿಯು ಉದ್ದೇಶ, ಧಾರ್ಮಿಕ ಕೇಂದ್ರದ ಪರಿಸರದಲ್ಲಿ ಕಾಮಗಾರಿ ಅನುಷ್ಠಾನ ಆದ್ಯತೆ ಪಡೆದಿದೆ. ಕ್ರಿ.ಶ. 1428ರ ಶಾಸನದಲ್ಲಿ ದೇವರಾಯನ ಮಂತ್ರಿ ಲಕ್ಕಣ್ಣ ಒಡೆಯ ಭೂದಾನ ಒಂದರಲ್ಲಿ ದಾನಿಯ ಮಡದಿ "ದನಕಿನಿದೇವಿ ಕೆರೆ"ಯನ್ನು ನಿರ್ಮಿಸಿದಳೆಂದು ಪ್ರಸ್ತಾಪಿಸಿದೆ.[21] ಕ್ರಿ.ಶ. 1416ರ ಶಾಸನದಲ್ಲಿ ಮುದ್ದಯ್ಯನ ಮಗಳು ಕೆರೆ ನಿರ್ಮಿಸಿದ್ದಕ್ಕಾಗಿ 'ಕಟ್ಟುಕೊಡುಗೈ' ರೂಪದಲ್ಲಿ ಭೂದಾನವೊಂದನ್ನು ಕೇತೇಗೌಡ ನೀಡಿದ್ದನ್ನು ದಾಖಲಿಸಿದೆ.[22] ಶ್ರೀಶೈಲಂನ ಕ್ರಿ.ಶ. 1508ರ ತೆಲುಗು ಶಾಸನದಲ್ಲಿ ಪತಿ ಮತ್ತು ಪತ್ನಿ ಜಂಟಿಯಾಗಿ ಕೆರೆ ನಿರ್ಮಿಸಿರುವುದನ್ನು ದಾಖಲಿಸಿದೆ.[23] ರಾಯದುರ್ಗ ತಾಲ್ಲೂಕಿನ ರಂಗಸಮುದ್ರದಲ್ಲಿ ದಳವಾಯಿ ವೆಂಕಟಪ್ಪನಾಯಕನ ಮಡದಿ ಲಾಚರಮ್ಮ ಅಮ್ಮವಾರು ಕೆರೆ ನಿರ್ಮಿಸಿದ್ದನ್ನು ದಾಖಲಿಸಿದೆ.[24] ಕಾಲ ನಮೂದಾಗದ ತೆಲುಗು ಶಾಸನವೊಂದರಲ್ಲಿ ನಿರ್ಮಿತಗೊಂಡಿರುವ ಕೆರೆಯುದ್ದಕ್ಕೆ ಪತ್ನಿ ಶಾಂತಲಸಾನಿ ತೂಬನ್ನು ಇರಿಸಿದಳೆಂದು ಉಲ್ಲೇಖಿಸಿದೆ.[25] ಹೀಗಾಗಿ ಕಾಲುಗಾರಿಗಳ ಅನುಷ್ಠಾನ ಪ್ರಕ್ರಿಯೆಯಲ್ಲಿ ಮಹಿಳೆ, ತನ್ನನ್ನು ತೊಡಗಿಸಿಕೊಂಡಿರುವುದು ಸ್ತುತ್ಯಾರ್ಹ.

ಜನಪದರ ನುಡಿ ವಿಜಯನಗರ ಕಾಲದ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನೇಕ ಐತಿಹ್ಯಗಳು ಕಥನಗಳು ಮಹಿಳೆ ಮತ್ತು ಆಕೆಯ ಪುತ್ರಿ ಕುರಿತಂತೆ ಒಟ್ಟಿಕೊಳ್ಳುತ್ತವೆ. ಜನಪದರ ನುಡಿಯಲ್ಲಿ ಪುಂಗಮ್ಮ ಎಂಬ ಮಹಿಳೆ ತನ್ನ ಸಹೋದರಿ ತಕ್ಕಮ್ಮನ ಸಹಾಯದಿಂದ ಪುಂಗನೂರು ಕೆರೆಯನ್ನು ಕಟ್ಟಿಸಿದಳೆಂದು ನಿರ್ಮಾಣಪೂರ್ಣಗೊಂಡ ನಂತರ, ಕಟ್ಟೆ ಒಡೆದುಹೋಯಿತೆಂದು, ದುರಸ್ತಿ ಪ್ರಯತ್ನಗಳು ವಿಫಲಗೊಂಡ ಹಿನ್ನೆಲೆಯಲ್ಲಿ ಸ್ವಂತ ಬಲಿಯಾಗಿ ಪುಂಗಮ್ಮ ಅಮರಳಾದಳೆಂದು, ಆಕೆಯ ಹೆಸರಿನ 'ಗುಡಿ' ಅಸ್ತಿತ್ವದಲ್ಲಿದೆ.[26] ಬುಕ್ಕರಾಯನ ಮಂತ್ರಿ ಚಿಕ್ಕ ಒಡೆಯ ಕ್ರಿ.ಶ. 1364ರಲ್ಲಿ ಕೆರೆ ನಿರ್ಮಿಸಿದನೆಂದು ಪರಂಪರೆಯಂತೆ ಕೆರೆಗೆ ಬಾಲಕಿಯನ್ನು ಬಲಿಕೊಡಲಾಯಿತೆಂದು ಆರ್. ಸೆವೆಲ್ ವರದಿ ಮಾಡುತ್ತಾರೆ.[27] ಕಡಪ ಜಿಲ್ಲೆಯ ಗೆಜೆಟಿಯರ್ ದಾಖಲಿಸುವಂತೆ ಪೆನೆಂಗನಲೂರು ಕೆರೆಗೆ ಬಲಿ ನೀಡಿದ್ದನ್ನು ಆ ಕೆರೆ ನಿರ್ಮಾಣದ ಒಂದು ವರ್ಷದ ನಂತರವೂ ಒಡೆದು ಹೋಗುತ್ತಿತ್ತೆಂದು ಕೆರೆಯ ಶಿಲ್ಪಿಯ ಏಳು ಜನ ಪುತ್ರಿಯರನ್ನು ಬಲಿ ನೀಡಿದ್ದನ್ನು ದಾಖಲಿಸಿದೆ.[28]

ವ್ಯಾಸರಾಯರಿಂದ ಕೆರೆ ನಿರ್ಮಿಸಲ್ಪಟ್ಟಿದ್ದು, ವ್ಯಾಸಸಮುದ್ರ ಕುರಿತಂತೆ ಒಂದು ಐತಿಹ್ಯ ಪ್ರಚಲಿತದಲ್ಲಿದೆ. ಅದರಂತೆ ವ್ಯಾಸರಾಯರು ಕೆರೆ ನಿರ್ಮಿಸುತ್ತಿರುವಾಗ ನಿತ್ಯ ಕಾಮಗಾರಿ ಕೈಗೊಂಡ ಕೂಲಿ ಆಳುಗಳಿಗೆ ಹಣ ಪಾವತಿ ಮಾಡಲು ಕಷ್ಟವಾಯಿತು. ಅನ್ಯಮಾರ್ಗವಿಲ್ಲದೆ ತಮ್ಮ ಅಧ್ಯಾತ್ಮಿಕ ಶಕ್ತಿ ಚೇತನದ ಮೊರೆ ಹೋಗಿ, ಆ ದಿನದ ಕೂಲಿ ಪಾವತಿಸಲು ಕಾರ್ಮಿಕರಿಗೆ ಮರಳಿನಲ್ಲಿ ತಮ್ಮ ಮುಂದೆ 'ಗುಡ್ಡೆ'ಗಳನ್ನು ಮಾಡಲು ಸೂಚಿಸಿದರೆಂದೂ, ಆ ಮರಳು ಗುಡ್ಡೆಗಳಲ್ಲಿ ಅವರುಗಳಿಗೆ ಸಲ್ಲಬೇಕಾದ ಕೂಲಿಯ ಮೌಲ್ಯದ ನಾಣ್ಯಗಳು ಪ್ರಾಪ್ತವಾದವೆಂದೂ ಹೇಳಲಾಗಿದೆ. ಒಬ್ಬ ಮಹಿಳೆ ಮಾತ್ರ ತನಗೆ ಪ್ರಾಪ್ತವಾದ ಒಂದೂವರೆಯಷ್ಟು ಹೆಚ್ಚಿನ ನಾಣ್ಯಗಳ ಬಗ್ಗೆ ಪ್ರಸ್ತಾಪಿಸಿದಾಗ, ವ್ಯಾಸರಾಯರು ಆ ಮಹಿಳೆಯನ್ನು ಕುರಿತು, "ನೀನು ಗರ್ಭಿಣಿಯಾಗಿದ್ದು, ನಿನ್ನ ಹೊಟ್ಟೆಯಲ್ಲಿ ಮಗು ಸಹ ದೈಹಿಕ ಶ್ರಮದಲ್ಲಿ ಪಾಲ್ಗೊಂಡಿದೆ. ಹೀಗಾಗಿ ಆ ಹೆಚ್ಚುವರಿ ನಾಣ್ಯಗಳು ಲಭ್ಯವಾಗಿದೆ" ಎಂದು ತಿಳಿಸಿದರೆಂದು ಹೇಳಲಾಗಿದೆ.[29] ಈ ಐತಿಹ್ಯದ ಮಹತ್ವ ಪೂರ್ಣ ಅಂಶವೆಂದರೆ, ಮಹಿಳೆ ಶ್ರಮಜೀವಿಗಳಾಗಿ ಪಾಲ್ಗೊಂಡಿರುವುದು ಬಹುತೇಕ ಕಾಮಗಾರಿಗಳಲ್ಲಿ ಪುರುಷರಷ್ಟೇ ಸಮ-ಸಮನಾಗಿ ತನ್ನ ಶ್ರಮ ಧಾರೆಯೆರೆದಿರುವುದನ್ನು ಕಡೆಗಾಣಿಸಬೇಕಾಗಿಲ್ಲ. ಇಂತಹ ಅನೇಕ ಐತಿಹ್ಯಗಳಲ್ಲಿ ಮಹಿಳೆ ಬಲಿಪಶುವಾಗಿ ಬಂದಿರುವುದು ಒಂದು ಪರಂಪರೆಯಾಗಿ ಬೆಳೆದುಬಂದಿರುವುದು. ಬಲಿ ನೀಡಿ ಕಾಮಗಾರಿಗಳನ್ನು ರಕ್ಷಿಸಿಕೊಂಡು ಬಂದಿರುವ 'ಮೌಢ್ಯ'ವೂ ಪರಂಪರೆಯಾಗಿ ಬಂದಿರುವುದು ಹೌದು!

ಪಾಂಡಿಚರಿ ಮುತ್ತತ್ತಿರಾಯನಪಾಳ್ಯಂ "ಆಯಕುಲಂ ಕೆರೆ"ಯನ್ನು ಒಬ್ಬ ಆಸ್ಥಾನ ನೃತ್ಯಗಾರ್ತಿ ನಿರ್ಮಿಸಿದಳೆಂದೂ ಹೇಳಲಾಗಿದೆ. ಒಮ್ಮೆ ಕೃಷ್ಣದೇವರಾಯ ಮತ್ತು ಮಂತ್ರಿ ಅಪ್ಪಾಜಿ ಎಲ್ಲೆಯನೂರಿನಲ್ಲಿ ಬಿಡಾರ ಹೂಡಿದ್ದಾಗ ದೂರದಲ್ಲಿ ಪ್ರಜ್ವಲರಾದ ಬೆಳಕೊಂದನ್ನು ಕಂಡರೆಂದು, ದೇವಾಲಯವಿರಬೇಕೆಂದು ಭಾವಿಸಿದ ರಾಜ ಭಕ್ತಿಭಾವಗಳಿಂದ ನಮಿಸಿದರೆಂದು, ಆದರೆ ಆ ನಂತರ ಅದೊಂದು ನರ್ತಕಿಯ ಮನೆ ಎಂದು ತಿಳಿದು, ಸಿಟ್ಟಿಗೆದ್ದು, ಆ ಮನೆಯನ್ನು ನಾಶಪಡಿಸಿ, ಅಲ್ಲಿ ಒಂದು ಕೆರೆ ನಿರ್ಮಿಸಬೇಕೆಂದು ಆದೇಶಿಸಿದನು. ಆ ಮಹಿಳೆ ಕ್ಷಮೆಯಾಚಿಸಿ, ತಾನೇ ಆ ಕೆರೆಯನ್ನು ನಿರ್ಮಿಸಲು ಅನುಮತಿ ಪಡೆದು, ಕೆರೆ ನಿರ್ಮಿಸಿದಳೆಂದೂ ಹೇಳಲಾಗಿದೆ.[30] ಈ ಪ್ರಾಂತ್ಯವು ಮುಂದೆ ಪ್ರೆಂಚರ ವಸಾಹತು ನೆಲೆಯಾಗಿ, ಅಲ್ಲಿ ಪ್ರೆಂಚರಿಂದ ಆಕೆಗೆ ಸ್ಮಾರಕ ನಿರ್ಮಾಣವಾಗಿರುವುದು ಸ್ತುತ್ಯಾರ್ಹವಾಗಿದೆ.

ಕಡಪಾ ಜಿಲ್ಲೆಯ ನಂದಲೂರು ಗ್ರಾಮದ ಕೆರೆಗೆ ಸಂಬಂಧಿಸಿದಂತೆ ಐತಿಹ್ಯದ ಪ್ರವರ ಕೆರೆ ನಿರ್ಮಿಸಿದೆ. ನಂತರ, ನಿಲ್ಲದೆ ಒಡೆದುಹೋಗುತ್ತಿತ್ತೆಂದು ಇಲ್ಲಿ ಏಳು ಜನ ಕನ್ಯೆಯರನ್ನು ಬಲಿ ನೀಡಲಾಯಿತೆಂದು, ಜನರ ಸ್ಮೃತಿಯನ್ನು ಬಿಂಬಿತವಾಗಿದೆ.[31]

ಪ್ರಾಚೀನ ಮತ್ತು ಮಧ್ಯಕಾಲೀನ ಚೌಕಟ್ಟಿನಲ್ಲಿ ಮಹಿಳೆ ಭೂಒಡೆತನ ಹೊಂದಿದ್ದಳೆ? ಅದರ ಸ್ವರೂಪ ಏನು? ಈ ಕುರಿತಂತೆ ವಿಜಯನಗರ ಕಾಲದ ಹಲವು ಶಾಸನಗಳು ಕೇವಲ ಪ್ರಾತಿನಿಧಿಕವೆಂಬಂತೆ ಬೆಳಕು ಚೆಲ್ಲುತ್ತವೆಯಾದರೂ ಸೃಷ್ಟಿ ಚಿತ್ರಣಹೊಂದಲು ಕಷ್ಟಸಾಧ್ಯವಾಗಿದೆ. ಬಸರೂರು ಮತ್ತು ಭಟ್ಕಳ ಶಾಸನಗಳಲ್ಲಿ ಮಹಿಳೆ ಭೂ ಒಡೆತನ ಹೊಂದಿರುವ ಬಗ್ಗೆ ಉಲ್ಲೇಖಿಸಿದೆ. ಮಹಿಳೆಗೆ ಆಗಿನ ಕಾಲದಲ್ಲಿ ದೊರೆಯುತ್ತಿದ್ದ ಸಾಬತ್ತು 'ಸ್ತ್ರೀಧನ' ಈ ಕುರಿತಂತೆ ಸೃಷ್ಟಿಚಿತ್ರಣ ದೊರೆಯುತ್ತಿದ್ದಲ್ಲಿ, ಉತ್ತರಾಧಿಕಾರತ್ವದ ಸಂದರ್ಭಗಳಲ್ಲಿ ಗಂಡ ಮತ್ತು ಇತರ ಪುರುಷ ವಾರಸುದಾರರು ತೀರಿಕೊಂಡಾಗ ಗಂಡು ಮಕ್ಕಳಿಲ್ಲದ ಸಂದರ್ಭಗಳಲ್ಲಿ ಮಹಿಳೆ ಸ್ವಾಭಾವಿಕವಾಗಿ ಭೂ ಒಡೆತನ ಹೊಂದುತ್ತಿದ್ದುದು ಸಾಮಾನ್ಯವಾಗಿದ್ದಿತು. ಮಹಿಳೆ ಭೂಮಿಯನ್ನು ಮಾರಾಟಮಾಡಿದ್ದು, ಕೊಳ್ಳುತ್ತಿದ್ದುದು ಹಲವು ಶಾಸನಗಳಲ್ಲಿ ದಾಖಲಾಗಿದೆ. ಹೀಗಾಗಿ ಸಾಮಾನ್ಯವರ್ಗದ ಮಹಿಳೆಯರು ಪ್ರತ್ಯಕ್ಷವಾಗಿ ನೀರಾವರಿ ಕಾಮಗಾರಿಗಳನ್ನು ಕೈಗೊಂಡಂತಹ ಸಂದರ್ಭಗಳಲ್ಲಿ ಲಭ್ಯ ಆಕರಗಳಲ್ಲಿ ದಾಖಲಾಗಿಲ್ಲ. ಆದರೆ ಈ

ನಿಟ್ಟಿನಲ್ಲಿ ಪ್ರಭುವರ್ಗದ ಮಹಿಳೆಯರು ಮಾತ್ರ ಸ್ವಲ್ಪ ಮಟ್ಟಿನ ಪ್ರಮಾಣದಲ್ಲಿ ತಮ್ಮನ್ನು ನೀರಾವರಿ ಕಾಮಗಾರಿ ಅನುಷ್ಠಾನದಲ್ಲಿ ತೊಡಗಿಸಿಕೊಂಡಿರುವುದು ವ್ಯಕ್ತವಾಗಿದೆ. ರಾಣಿಯರಾಗಿ, ಮಂತ್ರಿ–ಸಾಮಂತರ ಮಡದಿಯರಾಗಿ ಅಥವಾ ಸಹೋದರಿ–ಪುತ್ರಿಯರಾಗಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳುತ್ತಾರೆ. ತಮ್ಮ ಸ್ವಂತ ಸಂಪನ್ಮೂಲಗಳಿಂದ ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದರೆ ಅಥವಾ ರಾಜಸ್ವ ಮೂಲಗಳಿಂದ ಅನುಷ್ಠಾನಗೊಳಿಸಿದರೆ ಎಂಬ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟಸಾಧ್ಯವಾಗಿದೆ. ಆದರೆ ಎರಡೂ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ದಾನ, ನಿರ್ಮಾಣ, ದುರಸ್ತಿಯಂತಹ ಕಾಮಗಾರಿಗಳಲ್ಲಿ ತೊಡಗಿಸಿಕೊಂಡವರು ನಾಳ್ಗಾವುಂಡ, ಗಾವುಂಡರಂತಹ ಹಲವು ಬಗೆಯ ಆರ್ಥಿಕ ಭದ್ರತೆ ಇರುವ ಮನೆತನದ ಮಹಿಳೆಯರಾಗಿದ್ದರು. ಜನಹಿತ ಕಾರ್ಯಗಳಲ್ಲಿ ತಮ್ಮ ಸೀಮಿತ ಆರ್ಥಿಕ ಚೈತನ್ಯದ ಮಿತಿಗಳ ನಡುವೆಯೂ ಮಹಿಳೆ ಪಾಲ್ಗೊಂಡಿರುವುದು ವಿರಳವಾದರೂ ಸೃಷ್ಟಿ ನಿದರ್ಶನಗಳಿವೆ.

ಲೋಕೋಪಯೋಗಿ ಕಾಮಗಾರಿಗಳು ಸ್ಥಳೀಯ ಹಂತದಲ್ಲಿ ಅನುಷ್ಠಾನಗೊಳ್ಳುವ ಪ್ರಕ್ರಿಯೆಯಲ್ಲಿ ಶ್ರಮಿಕ ವರ್ಗ, ಸ್ತ್ರೀ–ಪುರುಷರಾದಿಯಾಗಿ ತೊಡಗಿಸಿಕೊಂಡಿದ್ದುದು ಸಾಮಾನ್ಯವಾಗಿದ್ದಿತು. ಇಂತಹ ಶ್ರಮಜೀವಿ ವರ್ಗಗಳ ಪಾಲ್ಗೊಳ್ಳುವಿಕೆ ಕುರಿತಂತೆ ಸಾಂಪ್ರದಾಯಕ ಚರಿತ್ರೆಯ ಆಕರಗಳು ದಿವ್ಯ ಮೌನ ವಹಿಸಿವೆ! ಹಾಗಾಗಿ ಅಸಂಪ್ರದಾಯಕ ಆಧಾರಗಳೆನಿಸಿದ ಜನಪದೀಯ ಐತಿಹ್ಯ, ಕಥನಗಳೇ ಇಂತಹ ಅಧ್ಯಯನಗಳಿಗೆ ವಾಸ್ತವ ಚಾರಿತ್ರ್ಯದ ನೆಲೆಗಳು ಪರಿಗಣಿಸಬೇಕಾದುದು ಅನಿವಾರ್ಯವಷ್ಟೆ. ಅಲ್ಲಿ ಅಗತ್ಯವೂ ಹೌದು!

ಸಾಮ್ರಾಜ್ಯದ ಕೇಂದ್ರ ಪ್ರದೇಶ (core region)ದಲ್ಲಿ ಹಲವಾರು ನೀರಾವರಿ ಕಾಮಗಾರಿಗಳು ಮಹಿಳೆಯರ ಹೆಸರಿನಲ್ಲಿ ನಿರ್ಮಿತಗೊಂಡಿವೆ. ಆದರೆ ಅಧೀನ ಪ್ರದೇಶದಲ್ಲಿ (pheriperal region) ಸ್ವಲ್ಪ ಮಟ್ಟಿಗೆ ಸ್ಥಳೀಯ ಆಡಳಿತದ ಚೌಕಟ್ಟಿನಲ್ಲಿ ಪ್ರತ್ಯಕ್ಷ ಪಾಲ್ಗೊಳ್ಳುವಿಕೆ ಪ್ರಮಾಣ ಸ್ಪಷ್ಟವಾಗಿ ಗೋಚರಿಸುತ್ತಿದೆ. ಇದಕ್ಕೆ ಪ್ರಭುವರ್ಗದ ಬೆಂಬಲ ಅಥವಾ ಹಣ ಹೂಡಿಕೆ ಹಾಗು ಸಂಪನ್ಮೂಲ ಲಭ್ಯತೆ ಇರುವ ಬಹುತೇಕ ಸಂದರ್ಭಗಳಲ್ಲಿ ಮಹಿಳೆ ಹೆಸರಿನಲ್ಲಿ. ಅವರಿಗೆ ಪುಣ್ಯವಾಗಲೆಂದು ಪ್ರಾಯೋಜಿಸಿದ ಕಾಮಗಾರಿಗಳಿವೆ. ಕೆಲವೆಡೆ ತಮ್ಮ ನೇರ ಹೂಡಿಕೆ, ಪ್ರಾಯೋಜಿಕತ್ವದ ಕಾಮಗಾರಿಗಳು ಬಹುಮಟ್ಟಿಗೆ ಪ್ರಾದೇಶಿಕ ಆಡಳಿತ ಘಟಕಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಂಡಿರುವುದು ಕಂಡುಬರುತ್ತದೆ. ಆದರೆ ಜನಪದೀಯ ನೆಲೆಯಲ್ಲಿ ಪ್ರತಿ ಕಾಮಗಾರಿಯಲ್ಲೂ ಶ್ರಮಿಕವರ್ಗದ ಮಹಿಳೆ ಬಹುಮಟ್ಟಿಗೆ ಕಾರಣವಾಗಿದ್ದರೂ, ಚರಿತ್ರೆಯ ಪುಟಗಳಲ್ಲಿ ದಾಖಲಾಗದೇ ಉಳಿದಿದ್ದು ಹೆಚ್ಚು. ಹೀಗಾಗಿ ಕಳೆದೊಂದು ದಶಕಗಳಿಂದ ಚರಿತ್ರೆ ಸಂರಚನೆಯಲ್ಲಿ ಪ್ರತಿಪಾದಿತವಾದ 'ಕೆಳಸ್ತರದ' ನೆಲೆಯ ಚರಿತ್ರೆ ಕಟ್ಟುವ ಪ್ರಕ್ರಿಯೆಗೆ ಇಂತಹ ಪ್ರಯತ್ನಗಳು ಸಹಾಯವಾಗಲಿದೆ.

ಅಡಿಟಿಪ್ಪಣಿಗಳು

1. Dominic J., Davison, Jenkins, *The Irrigation and Water Supply Systems of Vijayanagar,* 1997.
2. Kotraiah C.T.M., *Irrigation System under Vijayanagara Empire,* 1995.
3. Vijayalakshmi, *Irrigation in Vijayanagar Empire* (unpublished thesis, submitted to University of Mysore).
4. Saraswathi M, The Position of Women under Vijayanagar.
5. *Epigraphic Carnatica (EC),* Vol. V, Arasikere, 159.
6. *E.C.* X, Chikkaballapura, 63.
7. *E.C.* IV, Malavalli, 21.
8. *E.C.* XI, Hiriyur, 52
9. *Thirumala TTDI,* Vol. II, No. 341, p. 41.
10. *Inscriptions of Andhra Pradesh,* No. 54, pp. 63-64.
11. *ARSIE-1922,* App-B, No. 686, p.48.

12. *ARSIE-1938,* B.No. 334, p. 44
13. *ARSIE-Bellary-1915,* Part. 15, p. 111-517 of 1914.
14. *ARSIE-1015,* p-111, Part-55.
15. *ARSIE-Chingelpet-1922,* App.C.No. 195, p. 71.
16. *Nellure District Inscriptions,* Vol. I, pp. 203-206
17. *EI,* Vol-X, Bagepalli-10.
18. *ARSIE-Kondaveedu-1916,* App.-B, 1915, No. 422, p. 40.
19. Rangacharya V, *Madras Inscriptions,* Vol. III, No. 13, p. 21.
20. *TTDI,* No. 25
21. *E.C.* Vol. X, Kolar-104
22. *EC,* XI, Channapatna, 169.
23. *Topo List-448,* p. 957
24. *ARSIE,* Ep-1923-24, No. 448, p. 37.
25. ....
26. *North Arcot District Gazetteer,* p. 140
27. Sewell R. *Antiquities Remains of Madras Presidency,* Vol. I, Madras, 1892, p. 117.
28. *North Arcot Districts Gazetteer,* p. 410.
29. Gibble, *Manuel of Cudapa District,* Madras, 1875, pp. 289-290.
30. *A.R.I.Ep.* 1936-37, pp. 27, 93-94.
31. *Cudapa District Gazetteer,* p. 195.

40. ರಾಮರಾಜಭೂಷಣ ವಿರಚಿತ 'ವಸುಚರಿತ್ರಮು' ಕಾವ್ಯದಲ್ಲಿ ನಿರೂಪಿತ ವಿಜಯನಗರ ಅರಸರು

ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ

ರಾಮರಾಜಭೂಷಣರಿಗೆ ಭಟ್ಟುಮೂರ್ತಿ ಎಂಬ ನಾಮಾಂತರವಿದೆ. ಇವನು ತೆಲುಗು ಸಾಹಿತ್ಯದಲ್ಲಿ ಶ್ರೇಷ್ಠ ಕವಿಯೆಂದು ಪರಿಗಣಿಸಲ್ಪಟ್ಟಿದೆ. ಈ ಕವಿಯು 'ವಸುಚರಿತ್ರಮು' ಎಂಬ ಪ್ರಬಂಧ ಮಹಾಕಾವ್ಯವನ್ನೂ ಹಾಗೂ 'ಹರಿಶ್ಚಂದ್ರ ನಳೋಪಾಖ್ಯಾನಮು' ಎಂಬ ಉಭಯಾರ್ಥಕ ಕಾವ್ಯವನ್ನೂ ರಚಿಸಿ ಕವಿವರ್ಯರಿಂದ ಮನ್ನಣೆಯನ್ನು ಪಡೆದಿದ್ದಾನೆ.

'ವಸುಚರಿತ್ರಮು' ಉಪರಿಚರ ವಸು ಎಂಬ ರಾಜನ ಚರಿತ್ರೆಯನ್ನು ಕುರಿತು ವರ್ಣಿಸುವ ಕೃತಿಯಾಗಿದೆ. ಮಹಾಭಾರತದ ಆದಿಪರ್ವದಲ್ಲಿ ಪ್ರಸ್ತಾಪಿಸಲಾದ ಶ್ರೀ ಶೇಷಾಚಲವಾಸನಾದ ವೆಂಕಟೇಶನ ಭಕ್ತನೂ ದೇವೇಂದ್ರನ ಮಿತ್ರನೂ ದೇವೇಂದ್ರನಿಂದ ಪುರಸ್ಕಾರರೂಪದಲ್ಲಿ ದೇವವಿಮಾನವನ್ನು ಪಡೆದು ಆ ವಿಮಾನದಲ್ಲಿ ಮೇಲೆ ಗಗನದಲ್ಲಿ ಸಂಚಾರ ಮಾಡುತ್ತಿದ್ದುದರಿಂದ 'ಉಪರಿಚರ' ಎಂಬ ಬಿರುದನ್ನು ಪಡೆದ ವಸುರಾಜನ ಚರಿತ್ರೆಯನ್ನು ಕವಿ ರಾಮರಾಜಭೂಷಣನು ಪೆನುಗೊಂಡೆಯಲ್ಲಾಳುತ್ತಿದ್ದ ವಿಜಯನಗರದ ಅರಸ ಅರವೀಡು ಮನೆತನದ ಶ್ರೀ ತಿರುಮಲರಾಯನಿಂದ ಆಸ್ಥಾನಕ್ಕೆ ಆಹ್ವಾನಿಸಲ್ಪಟ್ಟು ಕಾವ್ಯ ರಚನೆ ಮಾಡುವಂತೆ ರಾಜನಿಂದ ಆಜ್ಞಾಪಿಸಲ್ಪಟ್ಟ ಮೇರೆಗೆ ರಚಿಸಿದನೆಂದು ತಿಳಿದುಬರುತ್ತದೆ. ಈ ಕೃತಿಯು ರಸಗಳ ಅಂಬುಧಿ, ಕಲ್ಪನೆಗಳಗೆ ಕಲ್ಪವಲ್ಲಿ, ಅಲಂಕಾರಗಳಿಗೆ ಉದ್ಯಾನ, ಶಬ್ದವೈಚಿತ್ರ್ಯಕ್ಕೆ ನಾಡಪಟ್ಟು, ಶ್ಲೇಷಕ್ಕೆ ನಿಧಿ, ಧ್ವನಿಗೆ ಜಯಘಂಟೆ ಮುಂತಾಗಿ ವಿಶೇಷಣಗಳಿಂದ ಗುರುತಿಸಲ್ಪಟ್ಟು ಮಹೋನ್ನತ ಕಾವ್ಯರಚನೆಯದೆಂದು ಮಾನ್ಯತೆ ಪಡೆದಿದೆ. ಕೃತಿಯು ಆರು ಆಶ್ವಾಸಗಳಲ್ಲಿ ರಚಿಸಲ್ಪಟ್ಟಿದೆ.

ಶ್ರೀರಾಮಚಂದ್ರನ ಕೃಪಾಕಟಾಕ್ಷವು ವಿಜಯನಗರದ ಅರಸ ತಿರುಮಲರಾಯನಿಗೆ ಲಭಿಸಲಿ ಎಂಬ ಆಶೀರ್ವಚನ ರೂಪ ಮಂಗಳಾಚರಣೆಯಿಂದ ಕವಿಯು ತನ್ನ ಕೃತಿರಚನೆಯನ್ನು ಪ್ರಾರಂಭಿಸುತ್ತಾನೆ. ಲಕ್ಷ್ಮಿಯ ಅವತಾರವಾದ ಸೀತಾದೇವಿಯು ತಿರುಮಲರಾಯನಿಗೆ ಸಮಸ್ತ ರಾಜ್ಯಗಳನ್ನು ನೀಡಲಿ ಎಂದು ರಾಜನನ್ನು ಆಶೀರ್ವದಿಸುತ್ತಾನೆ. ಈ ಮೂಲಕವಾಗಿ ವಿಜಯನಗರದ ಅರವೀಡು ವಂಶದ ರಾಜರು ಶ್ರೀ ವೆಂಕಟೇಶನ ಭಕ್ತರೂ ಶ್ರೀರಾಮಚಂದ್ರನ ಆರಾಧಕರೂ ಆಗಿದ್ದರೆಂದು ಕವಿ ತಿಳಿಸಿದ್ದಾನೆ.

ಆನಂತರದಲ್ಲಿ ಸಂಗೀತ ಸಾಹಿತ್ಯ ವಿದ್ಯೆಗಳ ಅಧಿದೇವತೆ ಸರಸ್ವತಿಯು ತಿರುಮಲರಾಯನ ವಾಕ್ಕಿನಲಿ ನೆಲೆಸಲೆಂದೂ ಸರ್ವಕಲಾಕಾಂತನಾದ ಬ್ರಹ್ಮನು ಆಶೀರ್ವದಿಸಲೆಂದೂ, ಚಂದ್ರಶೇಖರ ಗಂಗಾಧರ ಅರ್ಧನಾರೀಶ್ವರ ಶಿವನು ಭೋಗ, ಸಮ್ಯಕ್ ಕ್ರಿಯಾ ಸಾಮರ್ಥ್ಯ ಹಾಗೂ ಯುದ್ಧಗಳಲ್ಲಿ ಜಯ ನೀಡಲೆಂದೂ, ಕುಮಾರಸ್ವಾಮಿ ವಿಘ್ನೇಶ್ವರ ಹಾಗೂ ಹನುಮಂತನನ್ನೂ ಸ್ತುತಿಸಿ ತಿರುಮಲರಾಯನಿಗೆ ಅವರ ಕೃಪೆಯನ್ನೂ ನೀಡಲೆಂದು ಆಶೀರ್ವದಿಸಿದ್ದಾನೆ.

ವಾಲ್ಮೀಕಿ, ವ್ಯಾಸ, ಕಾಳಿದಾಸ, ದಂಡಿ, ಭವಭೂತಿ, ಮಾಘ, ಮಯೂರ, ಭಾರವಿ ಮೊದಲಾದ ಸಂಸ್ಕೃತ ಕವಿ ದಿಗ್ಗಜರನ್ನೂ ವಾಗನುಶಾಸನ=ಶಬ್ದಾನುಶಾಸನ ಕರ್ತೃ ನನ್ನಯಭಟ್ಟ, ಕುಂಡಲಿ ಇಷ್ಟಿಯನ್ನಾಚರಿಸಿ ಕುಂಡಲ ಧರಿಸಿದ ಕುಂಡಲೀಂದ್ರ ತಿಕ್ಕನ ಸೋಮಯಾಜಿ, ಶ್ರೀನಾಥ, ನಾಚನ ಸೋಮ, ಭಾಸ್ಕರಾದಿ ತೆಲುಗು ಕವಿಪ್ರೌಢರನ್ನೂ ಗೌರವದಿಂದ ಸ್ಮರಿಸಿ ಸ್ತುತಿಸಿದ್ದಾನೆ.

ಶ್ರೀರಂಗರಾಜನ ಮಗ (ಅಳಿಯ) ರಾಮರಾಯನು ಸೂರ್ಯವಂಶದ ಶ್ರೀರಾಮನಂತೆ ಇದ್ದು ತನ್ನ ಬುಜಬಲಪ್ರತಾಪಾತಿಶಯದಿಂದ ವಂಶದ ಸತ್ಕೀರ್ತಿಯನ್ನು ಬೆಳಗಿದನು. ತನ್ನ ಪಟ್ಟಾಭಿಷೇಕಕ್ಕೆ ವಿದ್ರೋಹಿರಾಜರಿಂದ ವಿಘ್ನವೊದಗಿದಾಗ ತನ್ನ ತಮ್ಮಂದಿರಾದ ತಿರುಮಲ ಮತ್ತು ವೆಂಕಟಪತಿಗಳೊಡಗೂಡಿ ಬೃಹತ್ ಸೇನೆಯೊಂದಿಗೆ ದೊರೆಯ

ಆನೆ ಸಿಂಹಗಳಿಂದ ಕೂಡಿದ್ದ ಮಹಾರಣ್ಯವನ್ನು ಪ್ರವೇಶಿಸಿ ಘನಗಿರಿ ಅಥವಾ ಪೆನುಗೊಂಡ ಹಾಗೂ ಆದವಾನಿಯನ್ನು ವಶಪಡಿಸಿಕೊಂಡನು. ವಿದ್ರೋಹಿ ಸಲಕರಾಜನನ್ನು ರಾಮನ ಖರನನ್ನು ವಧಿಸಿದಂತೆ ವಧಿಸಿದನು. ರಾಜ್ಯಲಕ್ಷ್ಮಿಯನ್ನು ವರಿಸಿ ಕರ್ಣಾಟರಾಜ್ಯವೈಭವವನ್ನು ಸ್ಥಾಪಿಸಿದನು. ತನ್ನ ಸೇನಾಶೌರ್ಯಾಟೋಪದಿಂದ ನಿಜಾಮ ವಜೀರರನ್ನು ಶರವೇಗದಿಂದ ಜೀರ್ಣವಾದ ವೃಕ್ಷವನ್ನು ಕಡಿದು ಉರುಳಿಸುವಂತೆ ಸೋಲಿಸಿ ಹೊಡೆದೋಡಿಸಿದನು. ಕುತುಬ್‌ಷಹನ ಸೇನೆಯನ್ನೂ ಧೂಳೀಪಟಮಾಡಿ ಪಲಾಯನಗೈಯುವಂತೆ ಮಾಡಿದನು. ಮುಂಬರಿದು (ಬೀದರ್ ಜಿಲ್ಲೆಯ) ಕಲ್ಯಾಣ ಮಹಾಪಟ್ಟಣವನ್ನು ವಶಪಡಿಸಿಕೊಂಡನು. ಇದರಿಂದ ತನ್ನ ಕೀರ್ತಿಯನ್ನು ಆಸೇತು ಕಾಶೀವರೆಗೆ ಹಬ್ಬಿಸಿದನು.

ಇಂತಹ ಅರಿಂಜಯಸಾಂದ್ರನೆನಿಸಿದ ರಾಜರಾಯನ ತಮ್ಮ ತಿರುಮಲರಾಯನ ಶೌರ್ಯವೂ ವರ್ಣಿಸಲಸದಳವಾಗಿದ್ದಿತು. ತಿರುಮಲರಾಯನ ಶಾಂಕರಿ ಎಂಬ ಖಡ್ಗವು ವೈರಿಗಳ ರಕ್ತದಿಂದ ಸಿಕ್ತವಾಗಿ ಅದರ ಅರುಣಪ್ರಭೆಯಿಂದ ಕಂಗೊಳಿಸಿದನು. ವೈರಿಗಳನ್ನು ಸ್ವರ್ಗದ ಅಪ್ಸರೆಯರ ಸಂಗದಲ್ಲಿರಿಸಿದನು.

ವೆಂಕಟಪತಿಯೂ ದುರ್ಮಾರ್ಗರಾಗಿದ್ದ ತುರುಷ್ಕರನ್ನೂ ಮಹಾಕಾಮಾಂಧನಾಗಿದ್ದ ಪಾರಸೀಕರನ್ನೂ ಅತ್ಯಂತ ನಿರ್ಧಯಾಂತಃಕರಣರಾದ ಯಾವನರನ್ನು ಅಂತ್ಯಗೊಳಿಸಿದ ವೆಂಕಟಪತಿ ಅಸಾಮಾನ್ಯನೆನಿಸಿದನು. ಕರ್ಣಭೀಷ್ಮರನ್ನೂ ಧೂರ್ಜಟಿಯನ್ನು ಸೋಲಿಸಿದ ಅರ್ಜುನನಂತೆ ಸಾಮರ್ಥ್ಯವುಳ್ಳವನಾಗಿ ವೈರಿಗಳಿಂದ ಸಪಾದಲಕ್ಷ ಹೊನ್ನಮ್ಮ (ಕಪ್ಪವಾಗಿ) ಪಡೆದನು. ಗೌತಮಿ ಅಥವಾ ಗೋದಾವರಿ ನದಿಯ ಪವಿತ್ರ ನೀರಲ್ಲಿ ತಮ್ಮ ರಕ್ತಸಿಕ್ತ ಖಡ್ಗಗಳನ್ನು ತೊಳೆದು ಶುದ್ಧೀಕರಿಸಿದನು.

ಇಂತಹ ಶೂರ ತಮ್ಮಂದಿರ ಶೌರ್ಯಪ್ರತಾಪಗಳಿಂದ ಪಡೆದ ಭುವನಲಕ್ಷ್ಮಿಯಿಂದೊಡಗೂಡಿ ಕಂಗೊಳಿಸಿದ ರಾಜರಾಯನು ಭೂಮಿಯನ್ನು ಘನತೆಯಿಂದ ಪರಿಪಾಲಿಸಿದನು.

ರಾಮರಾಯನ ನಂತರ ತಿರುಮಲರಾಯನು ಸಿಂಹಾಸನವನ್ನೇರಿ ರಾಜ್ಯಭಾರವನ್ನು ವಹಿಸಿಕೊಂಡನು. ನಿಜಾಮಷರ ಕುತುಬ್‌ಷಹರ ಸೇನೆಯನ್ನು ಸಂಹರಿಸಿ ರಾಶಿ ಹಾಕಿದುದು ಬೃಹತ್ ಬೆಟ್ಟದಂತಾಗಿ ರಾಜಧಾನಿ ಪೆನುಗೊಂಡೆಯ ಹೆಸರನ್ನು ಸಾರ್ಥಕಪಡಿಸಿತು. ತಿರುಮಲರಾಯನ ಪ್ರತಾಪಾತಿಶಯದ ಧವಳ ಕೀರ್ತಿಯು ಮೇಘಮಂಡಲವನ್ನಾವರಿಸಿ ಚಂದ್ರಮಂಡಲವನ್ನು ಅತಿಕ್ರಮಿಸಿತು. ತಿರುಮಲರಾಯನನ್ನು ಪ್ರಶಂಶಿಸುವ ಉತ್ತಮ ಜನರಿಂದ ಮಾಡಲ್ಪಡುತ್ತಿದ್ದ ಜಯಘೋಷದ ಧ್ವನಿಯು ಸಮುದ್ರವನ್ನು ಭೇದಿಸಿ ಚಿರಕಾಲ ನಿರುಪದ್ರವವಾಗಿ ಪ್ರತಿಧ್ವನಿಸಿತು. ತಿರುಮಲರಾಯನ ಪಟ್ಟಾಭಿಷೇಕ ಜಲದಿಂದ ಪ್ಲಾವಿತಳಾದ ಭೂದೇವಿಯು ಈವರೆಗೆ ಹೊಂದಿದ್ದ ದಿಗ್ಗಜಗಳ, ಕುಲಪರ್ವತಗಳ, ಆದಿಶೇಷನ ಹಾಗೂ ಯಜ್ಞವರಾಹದ ಸಂಗವನ್ನು ಬಿಟ್ಟು ತಿರುಮಲರಾಯನ ಸಂಗವನ್ನು ಆನಂದದಿಂದ ಹೊಂದಿದಳು.

ತಿರುಮಲರಾಯನ ರಾಣಿ ವೆಂಗಳಾಂಬಾ ಹುಟ್ಟಿದ ಮನೆಗೆ ಅಮೃತಮಥನದಂತಿದ್ದ ಮೆಚ್ಚಿನ ಮನೆಗೆ ಸಮೃದ್ಧಿರೂಪವಾದ ಕಮಲದಂತಿದ್ದಳು. ಉನ್ನತವಿದ್ಯೆಗಳಲ್ಲಿ ವೇದಶಾಸ್ತ್ರಾದಿಗಳಲ್ಲಿ ಪಾರಂಗತರಾದ ವಿಪ್ರರನ್ನು ಕರೆಸಿ ಅಗ್ರಹಾರಗಳನ್ನು ನಿರ್ಮಿಸಿ ದಾನ ನೀಡಿದಳು, ವನಗಳನ್ನೂ ತಟಾಕಗಳನ್ನೂ ನಿರ್ಮಿಸಿದಳು. ಅನ್ನಾಹಾರಗಳನ್ನು ನೀಡುವ ಅನ್ನಪೂರ್ಣೆಯಾಗಿ ಧನಸಂಪತ್ತನ್ನು ನೀಡುವ ಲಕ್ಷ್ಮಿಯಾಗಿ ಸುವರ್ಣವನ್ನು ನೀಡುವ ಭೋಜರಾಜನ ಪುತ್ರಿ ಸುವರ್ಣೆ ರುಕ್ಮಿಣಿಯಾಗಿ ಪೂಜ್ಯಪತಿವ್ರತೆಯಾಗಿ ತಿರುಮಲರಾಯನಿಗೆ ಭೋಗಭಾಗ್ಯೆಯಾಗಿ ರಂಜಿಸುತ್ತಿದ್ದಳೆಂದು ಜನರಿಂದ ಸ್ತುತಿಸಲ್ಪಟ್ಟಿದ್ದಳು.

ತಿರುಮಲರಾಯನಿಗೆ ವೆಂಗಳಾಂಬೆಯಲ್ಲಿ ರಘುನಾಥರಾಜ, ಶ್ರೀರಂಗರಾಜ, ಶ್ರೀರಾಮರಾಜ ಮತ್ತು ವೆಂಕಟಪತಿರಾಜ ಎಂಬ ನಾಲ್ವರು ಪುತ್ರರು ಜನಿಸಿದರು. ತಿರುಮಲರಾಯನ ಹಿರಿಯ ಪುತ್ರನಾದ ರಘುನಾಥರಾಯನು ಬುದ್ಧಿ, ಕಾಂತಿಗಳಲ್ಲಿ ಬ್ರಹ್ಮನನ್ನು ಚಂದ್ರನನ್ನೂ ಹೋಲುತ್ತಿದ್ದನೆಂದು ಭೂಮಿಯಲ್ಲಿ ಖ್ಯಾತಿ ಪಡೆದಿದ್ದನು. ಅಸಹಾಯಶೂರನಾದ ಈ ರಘುನಾಥರಾಯನು ಮಲ್ಲಿಕ್ ನಿಜಾಮ (ಅಹಮದ್ ನಗರದ ನಿಜಾಮಷಹ)ನ ಮೇಲೆ ಯುದ್ಧವನ್ನು ಮಾಡಿ ಶತ್ರುಸೈನ್ಯವನ್ನು ಸಂಹರಿಸಿದನು. ಯುದ್ಧದಲ್ಲಿ ಸತ್ತ ಯೋಧರ ಪತಿಯರು ಹರಿಸಿದ ಕಾಡಿಗೆ ಯುಕ್ತವಾದ ಕಣ್ಣೀರು ಕೃಷ್ಣಾನದಿಗೆ ಸೇರಿ ನದಿಯ ನೀರು ಕಪ್ಪಾಗಿ ಕೃಷ್ಣಾ ಎಂಬ ಹೆಸರು ನದಿಗೆ ಅನ್ವರ್ಥನಾಮವಾಯಿತು.

ರಘುಪತಿರಾಯನು ಯುದ್ಧದಲ್ಲಿ ಘನಖಡ್ಗಾಘಾತದಿಂದ ಕತ್ತರಿಸಲ್ಪಟ್ಟ ಕುದುರೆಗಳ ಶಿರಗಳ ಮೇಲೆ ರಾಹುತರ ತುಂಡಾದ ಶರೀರವು ಬಿದ್ದು ಗಂಧರ್ವರಂತೆ ತೋರಿದರು. ಅಂತೆಯೇ ರಾಹುತರ ಶಿರಗಳಿಗೆ ಕುದುರೆಗಳ ಶರೀರಗಳು ಸೇರಿ ಕಿನ್ನರರಂತೆ ತೋರಿದರು. ಇದನ್ನು ಕಂಡ ದೇವತೆಗಳು ಸ್ವರ್ಗದಿಂದ ಭೂಮಿಯ ಮೇಲೆ ಆನಂದದಿಂದ ಮಂದಾರ (ಪಾರಿಜಾತ) ಪುಷ್ಪದ ವೃಷ್ಟಿಯನ್ನು ಗೈದರು.

ರಘುನಾಥರಾಯನ ತಮ್ಮನಾದ ಶ್ರೀರಂಗರಾಯನಿಗೆ ಅವನಲ್ಲಿದ್ದ ಸದ್ಗುಣಗಳಿಂದ ಪ್ರೀತನಾಗಿ ತಿರುಮಲರಾಯನು ಯುವರಾಜ ಪಟ್ಟಾಭಿಷೇಕವನ್ನು ಮಾಡಿದನು. ಶ್ರೀರಂಗರಾಯನು ಸಮಸ್ತಭೂಭಾರವನ್ನು ತನ್ನ ಶಕ್ತಿ ಸಾಮರ್ಥ್ಯಗಳಿಂದ ಯಶಸ್ವಿಯಾಗಿ ನಿರ್ವಹಿಸಿದನು. ಭೂ ಅಂಗನೆಯು ತಾನು ಇದುವರೆಗೆ ಆಶ್ರಯಿಸಿದ್ದ ಆದಿಶೇಷ, ದಿಗ್ಗಜಗಳು, ಕುಲಪರ್ವತಗಳನ್ನು ಬಾಲರೆಂದು ಪರಿತ್ಯಜಿಸಿ ನವಮನ್ಮಥನಂತಿದ್ದ ಶ್ರೀರಂಗರಾಯನನ್ನು ಆಶ್ರಯಿಸಿದಳು. ಶ್ರೀರಂಗರಾಜನು ತನ್ನ ಬಾಹುಬಲದಿಂದ ಕುಂತಲ, ಲಾಟ, ಕಾಶ್ಮೀರ, ವತ್ಸ, ಕಾಂಚೀ ಹಾಗೂ ಅಂಗದೇಶಗಳನ್ನು ವಶಪಡಿಸಿಕೊಂಡ. ರಾಜಮಾತ್ರನೆನಿಸಿದನು (ಅದಿರಾಜ). ಇವನ ಸೇನೆ ಯುದ್ಧಭೂಮಿಯತ್ತ ಯಾನ ಗೈದಾಗ ಅಶ್ವಗಳ ಖುರಪುಟಾಘಾತ ಮತ್ತು ಸೈನಿಕರ ಪದಾಘಾತದಿಂದ ಮೇಲೆದ್ದ ಧೂಳಿನ ಪರಾಗದಿಂದ ಗಿರಿಗಳು ಆವರಿಸಲ್ಪಟ್ಟವು. ಸೂರ್ಯನು ಮುಸುಕಲ್ಪಟ್ಟನು ಹಾಗೂ ಸಮುದ್ರವು ಹೂತುಹೋಯಿತು. ಶ್ರೀರಂಗರಾಯನು ಕೊಟ್ಟ ದಾನೋದಕದಿಂದ ಸಮುದ್ರಕ್ಕೂ, ಧವಳಕೀರ್ತಿಯಿಂದ ಚಂದ್ರನಿಗೂ ಯಜ್ಞಾಗ್ನಿಧೂಮದಿಂದ ಮೇಘಕ್ಕೂ, ಧವಳಕೀರ್ತಿಯಿಂದ ಚಂದ್ರನಿಗೂ, ಯಜ್ಞಾಗ್ನಿಧೂಮದಿಂದ ಮೇಘಕ್ಕೂ ದಾತನೆನಿಸಿದನು. ಲೋಕದಲ್ಲಿ ದಾತರೆನಿಸಿದ್ದ ಸಮುದ್ರ ಚಂದ್ರ ಮೇಘಗಳಿಗೂ ಮಿಗಿಲಾಗಿ ದಾತರದಾತನೆಂದು ಖ್ಯಾತಿ ಪಡೆದನು.

ಶ್ರೀರಂಗರಾಯನ ಸೋದರನಾದ ರಾಮರಾಜನು ಏಕಾಂಗವೀರನಾಗಿ ಸಹ್ಯಜೆ ಕಾವೇರಿಯಿಂದಾವೃತವಾದ ಶ್ರೀರಂಗಪಟ್ಟಣದ್ವೀಪವನ್ನು ಪಡೆದುಕೊಂಡು ಅಲ್ಲಿನ ಸಜ್ಜನರಿಗಾಗುತ್ತಿದ್ದ ಪೀಡೆಯನ್ನು ಪರಿಹರಿಸಿದನು.

ರಾಮರಾಜನ ತಮ್ಮ ವೆಂಕಟಪತಿಯು ಶತ್ರುಘ್ನನಂತಿದ್ದು ಅವನು ಪಡೆದ ಕೀರ್ತಿಯು ಧವಳತೆಯಲ್ಲಿ ಪರಿಪೂರ್ಣವಾಗಿದ್ದಿತು. ಐರಾವತವು ತನ್ನ ಗಂಡಸ್ಥಲದ ಮದೋದಕ ಮಾಲಿನ್ಯದಿಂದ, ಚಂದ್ರನು ತನ್ನ ಮಧ್ಯದಲ್ಲಿದ್ದ ಕಲೆಯಿಂದ, ಶಿವನು ತನ್ನ ಕಂಠದಲ್ಲಿದ್ದ ಹಾಲಾಹಲದ ಕಪ್ಪಿನಿಂದ, ಶೇಷನು ತನ್ನ ಕಣ್ಣಿನ ನೀಲಿಯಿಂದ, ಬಲರಾಮನುಯ ತನ್ನ ತೊಡೆಗಳಲ್ಲಿ ಧರಿಸಿದ್ದ ನೀಲಾಂಬರದಿಂದ, ಆದಿವೃಷಭವು ತನ್ನ ಮೂಗಿನ ಮೇಲಿದ್ದ ಕಪ್ಪು ಚುಕ್ಕೆಯಿಂದ, ಕ್ಷೀರಸಮುದ್ರವು ತನ್ನ ತಳದಲ್ಲಿರುವ ಕೆಸರಿನಿಂದ ಹಾಗೂ ಕಲ್ಪವೃಕ್ಷವು ತನ್ನ ಕಪ್ಪು ನೆರಳಿನಿಂದ ಧವಳತೆಯಲ್ಲಿ ನ್ಯೂನತೆಯಿಂದ ಕೂಡಿದ್ದವು. ಹೀಗಾಗಿ ಇವೆಲ್ಲವುಗಳಿಗಿಂತ ವೆಂಕಟಪತಿರಾಯನ ಕೀರ್ತಿಯ ಧವಳತೆಯು ಸಂಪೂರ್ಣವಾಗಿದ್ದಿತು ಮಿಗಿಲಾಗಿದ್ದಿತು.

ಶಿವನು ರಜತಗಿರಿ (ಕೈಲಾಸ)ದಲ್ಲಿ ನೆಲೆಸಿದಂತೆ ವೆಂಕಟಪತಿರಾಯನು ಚಂದ್ರಗಿರಿಯಲ್ಲಿ ನೆಲೆಸಿ ಅನೇಕ ಶ್ರೇಷ್ಠರಾಜರಿಂದ ಸೇವಿಸಲ್ಪಡುತ್ತಿದ್ದನು. ಅತಿ ಧೀರನೂ, ಅತಿ ದಾನಶೂರನೂ, ಅತಿ ರಮ್ಯಾಕಾರ ರೂಪವಂತನೂ, ಅತ್ಯಂತ ಸುವ್ರತನೂ ಕವಿಜನಸ್ತುತ್ಯನೂ ಆದ ವೆಂಕಟಪತಿರಾಯನು ಕವಿಗಳಿಗೆ ಉದಾರವಾಗಿ ದಾನವಿತ್ತು ಅವರನ್ನು ಸಮೃದ್ಧರನ್ನಾಗಿಸಿ ಐಹಿಕಧರ್ಮವನ್ನು ನಡೆಸಿದನು.

ಹೀಗೆ ತನ್ನ ನಾಲ್ವರು ಮಕ್ಕಳಿಂದ ಸೇವಿತನಾದ ತಿರುಮಲರಾಯನು ಶಾಶ್ವತ ಐಶ್ವರ್ಯ ಉನ್ನತ ವೈಭವಗಳಿಂದ ಉರ್ವೀತಲ ಅಧಿರಾಜನಾಗಿ ಪ್ರಕಾಶಿಸಿದನು. ಇಂತಹ ಧೀರನಾದ ನಾನಾವಿಧ ಶತ್ರುಗಳಿಗೆ ವಜ್ರಾಯುಧಧರನಾದ ಇಂದ್ರನಂತೆ ಇದ್ದ ಕರ್ಣಾಟಾಂಧ್ರ ಧರಣಿಯನ್ನು ಉದ್ಧಾರಮಾಡಿದ ತನ್ನ ಧಾತೃತ್ವಗುಣದಿಂದ ಚಿಂತಾಮಣಿಯೆನಿಸಿದ್ದ ತಿರುಮಲರಾಯನ ಕೋರಿಕಾಜ್ಞೆಯನ್ನು ಈಡೇರಿಸುವುದಕ್ಕಾಗಿ ಶ್ರೀರಾಮಪಾದಾರವಿಂದ ಭಜನಾನಂದ ಭರಿತನಾದ ಜಗತ್ಪ್ರಾಣನಂದನ (ವಾಯುಪುತ್ರ ಹನುಮಂತ) ಕಾರುಣ್ಯಕಟಾಕ್ಷಲಬ್ಧನಾದ ರಾಮರಾಜಭೂಷಣಕವಿ ಭಟ್ಟುಮೂರ್ತಿ ಕವಿತಾಸಾಗರದ ಧಾರೆಯಂತೆ ದಿನಕ್ಕೊಂದೊಂದು ಗ್ರಂಥರಚಿಸಿದ ಶತಗ್ರಂಥಕಲ್ಪನೂ ಸಂಗೀತಕಳಾರಹಸ್ಯನಿಧಿ ವಸುಚರಿತ್ರಮು ಎಂಬ ತೆಲುಗು ಪ್ರಬಂಧ ಮಹಾಕಾವ್ಯವನ್ನು ರಚಿಸಿ ತಿರುಮಲರಾಯ ಮಹಾರಾಜನಿಗೆ ಸಮರ್ಪಿಸಿದನು.

ಅರವೀಡು ಮನೆತನದ ವಂಶಾವಳಿ ವಿವರಗಳು

ಚಂದ್ರವಂಶೀಯರು


ಚಂದ್ರ
|
ಬುಧ
|
ಆಯು
|
ನಹುಷ
|
ಯಯಾತಿ
|
ಭರತ
|
ಯುಧಿಷ್ಠಿರ

ಅರವೀಡು ವಂಶ –

ವಿಜಯಿವಾಸವ (ಇಂದ್ರ)	1.	ತಾತಪಿನ್ನ	ವಸುಧಾಧಿಪ
ಪ್ರಶಮಿತ ದೋಷ ಚಕ್ರಪಾಲ	2.	ಸೋಮಶೇಖರ	
ಬಾಣಲಾಘವುಂಡು ರಾಘವುಂಡು ಅರ್ಜುನಂಡು	3.	ಪಿನ್ನಶೌರಿ	
ಲಕ್ಷ್ಮೀವಲ್ಲಭ, ಭೂಸಾಖ್ಯಘಟನ ಭುಜಬಲವಿಹಾರಿ	4.	ಬುಕ್ಕಶೌರಿ	
ಮಂದಾಂಧಶತ್ರುರಮಾವೇಣಿಬಂಧವಿಲಸತ್, ಅಸಿಧಾರಾಬಂಧುರ, ಅರಿಕೃತಾಂತ, ಆಶ್ರಿತ ಜನವಸಂತ	5.	ರಾಮರಾಜ	

ರಾಮರಾಜ →

ಧರ್ಮೋದ್ಭವ ತಿಮ್ಮರಾಜು	ಭೀಮಬಲಿ ಕೊಡಲರಾಯ (ಕೊಂಡಶೌರಿ)	ವಿಜಯಪ್ರಖ್ಯಾತ ಚಾರಿತ್ರ ಶ್ರೀರಂಗರಾಜ



ಈ 'ವಸುಚರಿತ್ರಮು' ಕೃತಿಯು ವಿಜಯನಗರದ ಪುನರುತ್ಥಾನ ಕಾಲಾವಧಿಯಲ್ಲಿ ರಚಿಸಲ್ಪಟ್ಟಿರುವ ತೆಲುಗು ಕಾವ್ಯಗ್ರಂಥವಾಗಿದೆ. ಕ್ರಿ.ಶ. 1565ರ ರಕ್ಕಸತಂಗಡಗಿ ತಾಳೀಕೋಟೆಯ ಯುದ್ಧದಲ್ಲಿ ವಿಜಯನಗರದರಸರು ಸೋತು ವಿಜಯನಗರ ವೈರಿಗಳಿಂದ ವಿನಾಶಕ್ಕೆ ತುತ್ತಾದ ನಂತರ ಅರವೀಡು ಮನೆತನದ ರಾಜರು ಕ್ರಿ.ಶ. 1570–1614ರ ನಡುವೆ ಅಹಮದ್ ನಗರದ ನಿಜಾಮಷಹ, ಗೋಲ್ಕೊಂಡದ ಕುತುಬ್‌ಷಹ ಕಲ್ಯಾಣದ ಬರೀದ್‌ಷಹ ಮುಂತಾದ ತುರುಷ್ಕ, ಪಾರಸಿಕ ಶತ್ರುರಾಜರನ್ನೂ ಸಲಕ ಮುಂತಾದ ರಾಜ್ಯವಿದ್ರೋಹಿಗಳನ್ನೂ ಸದೆಬಡೆದು ಸೋಲಿಸಿ ಸೇನೆಯನ್ನು ಹೊಡೆದೋಡಿಸಿ ಪೆನುಗೊಂಡೆ, ಚಂದ್ರಗಿರಿ (ಆಂಧ್ರಪ್ರದೇಶ), ಶ್ರೀರಂಗಪಟ್ಟಣಗಳಲ್ಲಿ (ಕರ್ನಾಟಕ) ರಾಜ್ಯವನ್ನು ನೆಲೆಗೊಳಿಸಿ ಕರ್ಣಾಟಾಂಧ್ರರಾಜ್ಯದ ಅಧಿರಾಜರಾಗಿ ವಿಜಯನಗರದ ಪರಂಪರೆಯನ್ನು ಧರ್ಮ, ವಿದ್ಯೆ, ಕಲೆ, ಸಾಹಿತ್ಯಗಳಿಗೆ, ಆಶ್ರಯ ಮತ್ತು ಪ್ರೋತ್ಸಾಹ ನೀಡಿ ಕೀರ್ತಿಶಾಲಿಗಳಾಗಿ 'ಚಾಳುಕ್ಯ ನಾರಾಯಣ' 'ಕರ್ನಾಟರಾಜ್ಯಲಕ್ಷ್ಮೀ ಸಂಸ್ಥಾಪಕ'ರೆಂಬ ಬಿರುದಾಂಕಿತರಾದರೆಂಬ ಐತಿಹಾಸಿಕ ವಿವರಗಳನ್ನು ಸಾದ್ಯಂತವಾಗಿ ನಿರೂಪಿಸುವುದರಿಂದ ಈ ಕೃತಿಯು ವಿಜಯನಗರದ ಇತಿಹಾಸ ರಚನೆಗೆ ಒಂದು ಪ್ರಮುಖ ಆಕರವೆನಿಸುತ್ತದೆ.

ಆಕರ ಗ್ರಂಥ

1. ಭಟ್ಟುಮೂರ್ತಿ ಯನುನಾಮಾನ್ತರಮು ಗಲ ರಾಮರಾಜಭೂಷಣ ಪ್ರಣೀತ 'ವಸುಚರಿತ್ರಮು'

2. ಬ್ರಹ್ಮಶ್ರೀ ಶೊಂಠಿ, ಭದ್ರಾದ್ರಿರಾಮಶಾಸ್ತ್ರುಲವಾರಿಚೆ ಸವರಿಂಪಂಬಡಿ

3. ಬ್ರಹ್ಮಶ್ರೀ ಶತಾವಧಾನಿ ಪುರಾಣಂ, ಸೂರ್ಯನಾರಾಯಣ ತೀರ್ಥುಲವಾರಿಚೆ ಪರಿಶೋಧಿತಮ್ಮೈ

4. ವಾವಿಳ್ಲ, ರಾಮಸ್ವಾಮಿಶಾಸ್ತ್ರುಲು ಅಂಡ್ ಸನ್ಸ್ ವಾರಿಚೆಂ ಪ್ರಕಟಿಂಪಂಬಡಿನದಿ ತಂಡಿಯಾರ್ಪೇಟ, ಚನ್ನಪುರಿ (ಮದ್ರಾಸ್–ಚನ್ನೈ), 1910.

41. ವಿಜಯನಗರ ಕಾಲದ ಅಗ್ರಹಾರ: ನೆಳಲಹುಣಸೆ

ಶಶಿಕಲಾ ರಾ. ಇಂಜನಿ

ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯವು ಪ್ರಸಿದ್ಧ ಹಿಂದು ಸಾಮ್ರಜ್ಯವಾಗಿತ್ತು. ಇದು 13ನೇ ಶತಮಾನದ ಮಧ್ಯಭಾಗದಿಂದ 17ನೇ ಧಾರ್ಮಿಕ ಸಾಂಸ್ಕೃತಿಕ ಮತ್ತು ಆರ್ಥಿಕವಾಗಿ ಬೆಳವಣಿಗೆಯನ್ನು ಹೊಂದಿತ್ತು.[1] ವಿಜಯನಗರ ಕಾಲದಲ್ಲಿ ಅದರಲ್ಲಿಯೂ ವಿಶೇಷವಾಗಿ ಹಂಪಿ ಪರಿಸರದ ನಗರಗಳಾದ ಕಮಲಾಪುರ, ಕೃಷ್ಣಾಪುರ, ಅಚ್ಯುತಾಪುರ, ವಿಠಲಾಪುರ, ಮಲಪನಗುಡಿ, ಅನಂತಶಯನಗುಡಿ, ತಿರುಮಲಾದೇವಿಪಟ್ಟಣ, ವರದರಾಜಮ್ಮನಪಟ್ಟಣ, ವೆಂಕಟಾಪುರ, ಆನೆಗೊಂದಿ, ನಿಂಬಾಪುರ, ನಾಗಲಾಪುರ,[2] ಇನ್ನೂ ಮುಂತಾದ ಉಪ ನಗರಗಳಿವೆ. ಈ ಪುರಗಳಲ್ಲಿ ಅಗ್ರಹಾರಗಳಿರುತ್ತಿದ್ದವು.

ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಊರು ಅಥವಾ ಸ್ಥಳ ಎಂದು ಹೇಳಲಾಗಿದೆ. ಇದು ಬ್ರಾಹ್ಮಣರ ಪೋಷಣೆಗಾಗಿ ದಾನ ಕೊಟ್ಟ ಪ್ರದೇಶ. ಬ್ರಾಹ್ಮಣರು ವಾಸವಾಗಿರುವ ಕೇರಿ, ಬೀದಿ, ಎಂದು ಹೇಳಲಾಗಿದೆ.[3] ಈ ಅಗ್ರಹಾರಗಳಲ್ಲಿ ಶಾಸ್ತ್ರಾದಿಗಳನ್ನು ಅಧ್ಯಯನ ಮಾಡುತ್ತಿದ್ದರು.[4] ಅಲ್ಲದೇ ಅಗ್ರಹಾರಗಳಲ್ಲಿ ವಾಸವಾಗಿರುವವರನ್ನು 'ಮಹಾಜನರು' ಎಂದು ಕರೆಯಲಾಗುತ್ತಿತ್ತು. ಇವು ಸಣ್ಣ ವಿಶ್ವವಿದ್ಯಾಲಯ ಕೇಂದ್ರಗಳಾಗಿದ್ದವು.[5]

ಹಂಪಿ ಪರಿಸರದಲ್ಲಿ ನಮಗೆ ಕಂಡುಬರುವಂತೆ ಶಾಸನಗಳ ಉಲ್ಲೇಖದ ಪ್ರಕಾರ ಒಟ್ಟು ಎಂಟು ಅಗ್ರಹಾರಗಳ ಮಾಹಿತಿ ದೊರೆಯುತ್ತದೆ. ಅವುಗಳೆಂದರೆ ಸದಾಶಿವರಾಯನ ಕಾಲದ, ಹರಿಹರಪುರ, ವಿಜಯ ಸಮುದ್ರ, ಮುಕ್ಕಂದಿಪುರ, ಕೃಷ್ಣದೇವರಾಯ ಕಾಲದ ನೆಳಲಹುಣಸೆ, ಎರೆಊರು, ಪೋರುವಾಯು, ಪ್ರೌಢದೇವರಾಯ ಕಾಲದ ಕುಮಾರಿಗಿರಿ, ಇವೆಲ್ಲವು ಅಗ್ರಹಾರಗಳಾಗಿದ್ದವು.[6] ಈ ಎಲ್ಲ ಅಗ್ರಹಾರಗಳ ಮಾಹಿತಿ ನಮಗೆ ಶಾಸನದ ಮೂಲಕ ತಿಳಿದುಬರುತ್ತದೆ. ಶಿರೂರು ಬಿ.ವ್ಹಿ. ಅವರು ಎಂಟು ಅಗ್ರಹಾರಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿರುತ್ತಾರೆ. ಅವುಗಳ ಬಗ್ಗೆ ಕೇವಲ ಶಾಸನದ ಉಲ್ಲೇಖವನ್ನು ಮಾತ್ರ ನೀಡಿರುತ್ತಾರೆ. ಅದರಲ್ಲಿ ನೆಳಲಹುಣಸೆಯ ಅಗ್ರಹಾರದ ಬಗ್ಗೆ 2 ಶಾಸನಗಳನ್ನು ಮಾತ್ರ ಹೇಳಿದ್ದಾರೆ. ಪ್ರಸ್ತುತ ಲೇಖನದಲ್ಲಿ ನೆಳಲಹುಣಸೆ ಎಂಬ ನೆಲೆಯ ಅಗ್ರಹಾರದ ಉಲ್ಲೇಖ ಐದು ಶಾಸನದಲ್ಲಿ ಸಿಗುತ್ತದೆ. ಅವುಗಳು ಈ ಕೆಳಗಿನಂತಿವೆ.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3 : ಹಂಪಿ ಶಾಸನ ಸಂ–232, ತುರ್ತಾಕಾಲುವೆಯ ದಕ್ಷಿಣಕ್ಕಿರುವ ರಘುನಾಥ ದೇವಾಲಯ ಪಶ್ಚಿಮಕ್ಕೆ ಬೆಟ್ಟ ಮೇಲಿನ ಗುಹೆಯ ಬಂಡೆಯ ಮೇಲೆ ಇದೇ. ಸು (ಭಾನು) ಸಂವತ್ಸರದ ಮಾಘ ಶು. 2ರಲ್ಲಿ ನೆಳಲಹುಣಸೆಯ ಗಿರಿಯ ಗವಿಯಲ್ಲಿ ಕಲ್ಲಿನಲ್ಲಿ ಚೆಂಚರ ಮಲ್ಲಿಕಾರ್ಜುನನು ಉದ್ಭವಮೂರ್ತಿಯಾಗಿ ಕಾಣಿಸಿಕೊಂಡನು. ಪಾತಳಗಂಗೆ ಮತ್ತು ಗೌರಿಯ ಗಂಡನಾದ (ಶ್ರೀಶೈಲ) ಮಲ್ಲಿಕಾರ್ಜುನನು ಅದೇ ಗುಹೆಯಲ್ಲಿನ ಕಲ್ಲಿನಲ್ಲಿ ಪ್ರತ್ಯಕ್ಷನಾದ (ಹೀಗೆ ಉದ್ಭವವಾಗಿ) ಭೈರವಮೂರ್ತಿ ಅಯ್ಯನ ಕನಸಿನಲ್ಲಿ ಬಂದ ಘಟನೆಯನ್ನು ವಿವರಿಸಿದ (ಇದನ್ನು ಕೇಳಿ) ಹೂವಿಗನು ಆ ಸ್ಥಳವನ್ನು (ಪುಣ್ಯ) ಕ್ಷೇತ್ರವಾಗಿ ಮಾಡಿದ.[7] ಈ ಶಾಸನದ ಕಾಲಮಾನ ನಮಗೆ ತಿಳಿದುಬರುವುದಿಲ್ಲ. ಆದರೆ ಇದರ ಲಿಪಿಯಿಂದ ಶಾಸನವು ಕೃಷ್ಣದೇವರಾಯ ಕಾಲಕ್ಕೆ ಸೇರುತ್ತದೆ. ಇದರಲ್ಲಿ ನೆಳಲಹುಣಸೆ ಎಂಬ ಸ್ಥಳದ ಮಾಹಿತಿಯನ್ನು ಮಾತ್ರ ಕೊಟ್ಟಿದ್ದಾರೆ. ಶಾಸನ ಸಂ–74, ಕೃಷ್ಣಸ್ವಾಮಿ ದೇವಾಲಯದ ಮುಂದಿನ ಸಣ್ಣ ಮಂಟಪದ ಗೋಡೆಯಲ್ಲಿರುವ ಶಾಸನ ಕನ್ನಡ ಲಿಪಿಯಲ್ಲಿದ್ದು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದೆ. ಇದರ ಕಾಲವು ಶಾಲಿವಾಹನ ಶಕವರ್ಷ 1435 ಭಾವ, ಫಾಲ್ಗುಣ, ಶು. 2 ಶುಕ್ರವಾರದಂದು ಎಂದಿದ್ದು ಇದು ಕ್ರಿ.ಶ. 16–2–1515ರ ಶುಕ್ರವಾರ (ಶಕ 1436)ಕ್ಕೆ ಸರಿ ಹೊಂದುತ್ತದೆ.[8] ಇದು ಕೃಷ್ಣದೇವಮಹಾರಾಯನ ಉದಯಗಿರಿಯಿಂದ ತಂದ ಬಾಲಕೃಷ್ಣದೇವರನ್ನು ಪ್ರತಿಷ್ಠೆ ಮಾಡಿ ದೇವರ ನಿತ್ಯಪೂಜೆ ಅಂಗರಂಗಭೋಗ, ಪಂಚಪರ್ವಗಳಿಗಾಗಿ ಅನೇಕ ದಾನಗಳನ್ನು ನೀಡುತ್ತಾನೆ. ದೇವರಿಗೆ ನವರತ್ನ ಖಚಿತವಾದ ಆಭರಣಗಳನ್ನು ಚಿನ್ನ ಬೆಳ್ಳಿಯ ಪರಿಕರಗಳನ್ನು ನೀಡುತ್ತಾನೆ. ದೇವರ ಪೂಜೆಗಾಗಿ ಹುಲಿಗೆ ಮಾಗಣೆಗೆ ಸೇರಿದ ಅತ್ತಿವಟಿ ಗ್ರಾಮವನ್ನು ಮತ್ತು ಅದಕ್ಕೆ ಸಲ್ಲುವ ಅನೇಕ ಕುರ್ವಗಳು ಕಂಪಿಲೆ ಮಾಗಣಿಗೆ ಸೇರಿದ ದೇವಲಾಪುರ, ಹೊಸವೂರ, ಮಾಗಣಿಗೆ ಸೇರಿದ ಮುದ್ದಲಾಪುರ, ಬಾದನಹಟ್ಟಿ, ತೊಗಲುಗಲ್ಲು ಗ್ರಾಮಗಳ.

ಕಳಸಾಪುರ ಮಾಗಣಿಗೆ ಸೇರಿದ ಹಿರಿಯ ಸಮುದ್ರ, ತೆಕ್ಕಲಕೋಟೆ ಸೀಮೆಗೆ ಸೇರಿದ ರುದ್ರಪಾದ ಗ್ರಾಮಗಳನ್ನೂ ರಾಯದುರ್ಗಸೀಮೆಗೆ ಸಲ್ಲುವ ಬ್ರಹ್ಮಸಮುದ್ರ ಮತ್ತು ಅದಕ್ಕೆ ಸಲ್ಲುತ್ತಿದ್ದ ಕೆಲವು ತೆರಿಗೆಗಳು, ತಿರುಮಲದೇವಿಯರ ಪಟ್ಟಣಕ್ಕೆ ಸೇರಿದ ರಾಮಪುರದ ಗ್ರಾಮದ ಕೆಲಚು ಗದ್ದೆಗಳು, ಯೆಂಮೆ ಸುಂಕ, ಹಸಿರುವಾಣಿ ಸುಂಕವನ್ನು ಬಿಡುತ್ತಾನೆ. ಪಾರ್ಥಿವ ಸಂವತ್ಸರದ ಕಾರ್ತೀಕ ಶು. 1ರಲ್ಲಿ ಇದಲ್ಲದೆ ಬಾಲಕೃಷ್ಣದೇವರ ತಿರುವೀದಿ ವಿನಿಯೋಗದ ಬ್ರಾಹ್ಮಣರ ನಿವೇಶನಗಳಿಗೆ ಹಾಗೂ ಪೇಟೆಯ ಮನೆಗಳಿಗಾಗಿ ನೆಳಲಹುಣಿಸೆಯ ಬ್ರಾಹ್ಮಣರಿಗೆ ಅಲ್ಲಿನ ಗದ್ದೆಗಳನ್ನು ಬಿಡಿಸಿಕೊಂಡು ದಾನ ನೀಡುತ್ತಾನೆ. ಯಾರು ಯಾರಿಗೆ ಎಷ್ಟೆಷ್ಟು ಭೂದಾನ ನೀಡಿದನೆಂಬ ವಿವರಗಳಿವೆ. ಈ ಶಾಸನದ ಮುಂದಿನ ಭಾಗವು ಹಿಂದಿನ ಅಂದರೆ 253ನೇ ಶಾಸನದಲ್ಲಿನ ವಿವರಗಳನ್ನು ಒಳಗೊಂಡಿದ್ದು ದೇವಾಲಯಕ್ಕೆ ಸಂಬಂಧಿಸಿದ ಹಲವಾರು ಬ್ರಾಹ್ಮಣರಿಗೆ ದಾನ ನೀಡಿದ ವಿವರಗಳಿವೆ. ಈ ಶಾಸನವು ಕೃಷ್ಣದೇವ ಮಹಾರಾಯನ ಕಾಲಕ್ಕೆ ಸೇರಿದೆ ಇದರಲ್ಲಿ ಉದಯಗಿರಿಯಿಂದ ತಂದ ಬಾಲಕೃಷ್ಣನನ್ನು ದಾನ ಮಾಡಿದನು. ತಿರುಮಲಾದೇವಿಯ ಪಟ್ಟಣಕ್ಕೆ ಸೇರಿದ ಗ್ರಾಮಗಳ ಸುಂಕವನ್ನು ತೆಗೆದನು ಮತ್ತು ನೆಳಲಹುಣಿಸಿಯ ಬ್ರಾಹ್ಮಣರಿಗೆ ಭೂಮಿಯನ್ನು ದಾನ ಮಾಡಿದನು. ಇದರಿಂದ ಈ ನೆಳಲಹುಣಿಸಿಯ ನೆಲೆಯನ್ನು ಅಗ್ರಹಾರವನ್ನಾಗಿ ಮಾಡಿದನು ಎಂದು ತಿಳಿಯುತ್ತದೆ. ಶಾಸನ ಸಂ–229, ಕಡರಾಂಪುರ–ಹಂಪಿ ರಸ್ತೆಯ ಪೂರ್ವಕ್ಕೆ ತುರ್ತಾಕಾಲುವೆಯ ಉತ್ತರಕ್ಕಿರುವ ವೈಷ್ಣವ ದೇವಾಲಯದ ಎದುರಿನ ಕಲ್ಲಿನಲ್ಲಿರುವ ತುಟ್ರಿತ ಶಾಲಿವಾಹನ ಶಕವರುಷ 1445, ತಾರಣ ಸಂವತ್ಸರದ ಉಲ್ಲೇಖವಿದ್ದು ಇದು ಕ್ರಿ.ಶ. 1524ಕ್ಕೆ (ತಾಕಣವು ಶಕವರ್ಷ 1446)ಕ್ಕೆ ಸಮನಾಗುತ್ತದೆ.[9] ಈ ಶಾಸನದಲ್ಲಿ ತೆರಕಣಾಂಬಿಯ ವಿರೂಪಾಕ್ಷಭಟ್ಟನ ಮಗ ಗೋಪಿನಾಥದೀಕ್ಷಿತನು ಹಿರಿಯ ಕಾಲುವೆಯಲ್ಲಿ ತಾನು ಪ್ರತಿಷ್ಠಾಪಿಸಿದ ರಘುನಾಥದೇವರಿಗೆ ಪಂಪಾ ವಿರೂಪಾಕ್ಷ ದೇವರ ದೇವಾಲಯದಿಂದ ದಿನವೊಂದಕ್ಕೆ ಐದು ಪಡಿ ಅಕ್ಕಿ, ಕಾಲುಪಡಿ ಎಣ್ಣೆಯನ್ನು ಕೊಡುವ ಕಟ್ಟಳೆಯನ್ನು ಮಾಡಿದನು. ಅರಸನಾದ ಕೃಷ್ಣದೇವರಾಯನು ಈ ದೇವಾಲಯದ ಅಮೃತಪಡಿಗಾಗಿ ದಿನ ಒಂದಕ್ಕೆ ಇಪ್ಪತ್ತು ಪಡಿ ಅಕ್ಕಿ, ಒಂದು ಪಡಿ ತುಪ್ಪ, ಒಂದು ಪಡಿ ಎಣ್ಣೆಯನ್ನು ತಿಂಗಳಿಗೆ ಒಂದು ಗದ್ಯಾಣ ಹೊನ್ನನ್ನು ನೀಡುವ ಕಟ್ಟಳೆ ಮಾಡುತ್ತಾನೆ. ಗೋಪಿನಾಥದೀಕ್ಷಿತನು ದೇವರ ಅಮೃತಪಡಿಗಾಗಿ ನೆಳಲಹುಣಿಸೆ ಅಗ್ರಹಾರದಲ್ಲಿ ಐಗುಳಗದ್ದೆ ಬೇರೆ ಕಡೆ ಮೂಗರ ಗದ್ದೆಯನ್ನು ನೀಡುತ್ತಾನೆ. ಹಸ್ತಿನಾವತಿ ವಳಿತದ ಅರಕೆರೆ ವೇಂಟದ ಪ್ರತಾಪದೇವರಾಯಪುರವೆಂದು ನಾಮಕರಣಗೊಂಡು ಯರಗುಡಿ ಎಂಬ ಸರ್ವ್ವಮಾನ್ಯ ಅಗ್ರಹಾರದಲ್ಲಿ ಹತ್ತು ವ್ರತ್ತೆಯನ್ನು ದೇವರ ಅಮೃತಪಡಿಗಾಗಿ ನೀಡುತ್ತಾನೆ. ಈ ಶಾಸನದಲ್ಲಿ ಕೃಷ್ಣದೇವರಾಯನು ರಘುನಾಥದೇವರಿಗೆ ವಿರೂಪಾಕ್ಷ ದೇವಾಲಯದಿಂದ ದಿನಾಲು ದವಸ ದಾನ್ಯಗಳನ್ನು ಕೊಡುವ ಕಟ್ಟಳೆಗಳನ್ನು ಹಾಕಿದನು. ನೆಳಲಹುಣಿಸೆ ಅಗ್ರಹಾರಕ್ಕೆ ಅನೇಕ ಗದ್ದೆಯನ್ನು ದಾನ ಮಾಡಿದನು.

ಶಾಸನ ಸಂ–230, ಅದೇ ತ್ರುಟಿತ ಶಾಸನದಲ್ಲಿ ಶಾಲಿವಾಹನ ಶಕವರುಷ 1447 ಪಾರ್ಥಿವ ಸಂವತ್ಸರ, ಕಾರ್ತಿಕ ಮಾಸ ಶ. 1 ಎಂದಿದ್ದು ಇದು ಕ್ರಿ.ಶ. 17–1525ಕ್ಕೆ ಸಮವಾಗುತ್ತದೆ. ಶಾಸನದಲ್ಲಿ ಉಳಿದ ವಿವರಗಳು ನಷ್ಟವಾಗಿದ್ದು ಸರ್ವಮಾನ್ಯ ಅಗ್ರಹಾರ ನೆಳಲಹುಣಸೆಯ ಉಲ್ಲೇಖ ಬಂದಿದೆ.[10]

ಶಾಸನ ಸಂ–326, ಚಿಕ್ಕಹುಡೆ ದೇವಾಲಯದ ದಕ್ಷಿಣಕ್ಕಿರುವ ಕಲ್ಲಿನ ಮೇಲೆ ಅಚ್ಯುತರಾಯನ ಅವಧಿಯ ಈ ಶಾಸನದಲ್ಲಿ ಕಾಲವು ಶಾಲಿವಾಹನ ಶಕವರ್ಷ 1462, ಶಾರ್ವರಿ, ಕಾರ್ತಿಕ, ಶು. 5, ಗುರುವಾರದಲ್ಲು ಎಂದಿದ್ದು ಎಂದು ಕ್ರಿ.ಶ. 4–11–1540 ಗುರುವಾರಕ್ಕೆ ಸರಿಹೊಂದುತ್ತದೆ.[11] ಹರಗಿಯ ಹಿರಿಯ ಅಬ್ಬರಾಜನ ಮಗ ತಿಮ್ಮರಾಜನು ವರದರಾಜ ಅಮ್ಮನ ಪಟ್ಟಣಕ್ಕೆ ಪೂರ್ವದಿಕ್ಕಿನ ಪೆನಗೊಂಡೆ ಬಾಗಿಲ ಬಳಿ ರಘುನಾಥದೇವರನ್ನು ಪ್ರತಿಷ್ಠೆ ಮಾಡಿಸಿ ದೇವರ ಅಮೃತಪಡಿಗಾಗಿ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಮುನ್ನುಡಿ ದೀಕ್ಷಿತರಿಗೆ ಕ್ರಯವಾಗಿ ಬಂದ ನೆಳಲಹುಣಿಸೆಯೆಂಬ ಸರ್ವಮಾನ್ಯ ಅಗ್ರಹಾರದ ಎರಡು ವೃತ್ತಿಗಳನ್ನು ತಿಮ್ಮರಾಜನು ಮುಮ್ಮಡಿ ದೀಕ್ಷಿತನಿಂದ ಕ್ರಯವಾಗಿ ಪಡೆದ ರಘುನಾಥದೇವರಿಗೆ ಒಂದು ಖಂಡುಗ ಗದ್ದೆಯನ್ನು ದಾನ ನೀಡಿದ್ದಾನೆ. ಅಲ್ಲದೆ ಕಳಸಾಪುರ ಮಾಗಣೆಯ ರೇವತಾಪುರದಲ್ಲಿ ಹಾಳುಕಾಲುವೆಯ ಕೆಳಗೆ ಸೇನಬೋವ ವಿರುಪರಸನು ಮಾಡುವ ಜವುಗಿನ ಗದ್ದೆ, ಧರ್ಮಸಾಗರದಲ್ಲಿ ಕೆರೆಯ ಬಳಿ ಸಂಗಣಗೌಡನ ಗದ್ದೆ, ಯೆಲ್ಲಗೌಡನ ಗದ್ದೆ, ಕೃಷ್ಣಾಪುರದ ಲಕುಮರಸನಾಯ್ಕನ ಮಳಿಗೆಗೆ ಸಲ್ಲುವ ಗದ್ದೆ, ಕಮಲಾಪುರ ಕೆರೆಯ ಕೆಳಗಿನ ಹೂವಿನ ಸಿದ್ಧಯ್ಯನ ಗದ್ದೆ, ಮಾದಲಾಪುರ ಗ್ರಾಮದ ಕೆರೆ ಬಳಿಯ ಊಟ ಕಾಲುವೆ ಸ್ಥಳದಲ್ಲಿನ ಲಕುಮಯ್ಯ, ಹೊನ್ನಯ್ಯ, ಮಲ್ಲಯ್ಯಗಲ ಗದ್ದೆ, ಅನಂತಪುರದಲ್ಲಿ ಕೆರೆ ಬಳಿಯ ಗೌಡರ ಮಲ್ಲಯ್ಯನ ಗದ್ದೆ ಕಾಯಿಮಲ್ಲಯ್ಯ ಮಾಡುವ ಜವುಗಿನ ಗದ್ದೆಗಳ ಉತ್ಪತ್ತಿಯ ಭಾಗಗಳನ್ನು ಮತ್ತು ಕೆಲವು ತೆಂಗಿನ ಮರಗಳನ್ನು ದಾನವಾಗಿ ನೀಡಿದ ವಿವರವಿದೆ. ಕೊನೆಯಲ್ಲಿ

ರಘುನಾಥದೇವರ ಸ್ಥಾನಿಕರು ಮುಳುವಾಗಿಲ ಕೇಶವದೇವರ ಸ್ತಾನಿಕ ರಂದಣಾಚಾರ್ಯ್ಯರ ಮಗ ಚಿಂಗಪ್ಪಯ್ಯನ ಸ್ಥಳದ ಸೇನಬೋವ ವಿಜಯನಗರಲಾದ ಲಿಂಗರಸರ ಮಗ ವಿರುಪಯನ ಉಲ್ಲೇಖವಿದೆ.

ಈ ಒಂದು ಶಾಸನವು ಮಾತ್ರ ಅಚ್ಯುತರಾಯನ ಕಾಲಕ್ಕೆ ಸೇರುತ್ತದೆ. ಇದರಲ್ಲಿ ರಘುನಾಥದೇವರಿಗೆ ನಿತ್ಯ ಪೂಜೆಗಾಗಿ ನೆಳಲಹುಣಿಸೆ ಅಗ್ರಹಾರದಿಂದ ಕೆಲವು ಗದ್ದೆಗಳನ್ನು ಮತ್ತು ಕೆಲವು ಗ್ರಾಮಗಳನ್ನು ಹಾಗೂ ಕೆರೆ, ಕೆಲವರ ಗದ್ದೆಗಳನ್ನು ದಾನವಾಗಿ ಕೊಡುತ್ತಾರೆ.

ಶಾಸನಗಳ ಅಧ್ಯಯನದ ಪ್ರಕಾರ ನೆಳಲಹುಣಸೆ ಗ್ರಾಮವು ಒಂದು ವಸತಿ ನೆಲೆಯಾಗಿತ್ತು. ಅದು ಒಂದು ಗ್ರಾಮವಾಗಿ ಇದ್ದದು ಶಾಸನದಿಂದ ತಿಳಿಯಬಹುದು. ನಂತರ ಕೃಷ್ಣದೇವರಾಯನ ಕಾಲದಲ್ಲಿ ಆ ಗ್ರಾಮವನ್ನು ಅಗ್ರಹಾರವಾಗಿ ಉನ್ನತೀಕರಿಸಿರುವುದು ನಂತರದ 4 ಶಾಸನಗಳಿಂದ ತಿಳಿಯುತ್ತದೆ. ಹಾಗೇ ಅದು ಮುಂದುವರೆದು ಬಂದಿರುವುದನ್ನು ಶಾಸನದಿಂದ ತಿಳಿಯಬಹುದಾಗಿದೆ.

ಈ ನೆಳಲಹುಣಿಸಿ ಎಂಬ ಅಗ್ರಹಾರವು ನಿಂಬಾಪುರದ ಗ್ರಾಮದ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ ಎಂಬುದು ಈ ಅಗ್ರಹಾರ ಅಥವಾ ನೆಲೆಯು ಹಂಪಿಯ ಈಶಾನ್ಯ ದಿಕ್ಕಿಗೆ ಇದ್ದದು ಶಾಸನಗಳ ಮೂಲಕ ಗುರುತಿಸಬಹುದು. ಈ ನೆಲೆಯ ಯಾವ ಅವಶೇಷಗಳು ದೊರಕಿಲ್ಲ. ಈ ನೆಲೆಯು ವ್ಯವಸಾಯದ ಭೂಮಿಯಾಗಿ ಪರಿವರ್ತನೆಯಾಗಿರುವುದು ನಮಗೆ ಕ್ಷೇತ್ರಕಾರ್ಯದ ಮೂಲಕ ತಿಳಿಯುತ್ತದೆ.

ಟಿಪ್ಪಣಿಗಳು

1. ರಾಜಶೇಖರ ಎಸ್., *ವಿಜಯನಗರ ಕಾಲದ ಕೆಲವು ಮಹತ್ವ ಶಾಸನಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, (ಸಂ) ಭಟ್‌ಸೂರಿ, ಕರ್ನಾಟಕ ಶಾಸನ ಸಂಶೋಧನೆ, 2009, ಪು. 114.
2. ವಾಸುದೇವನ್ ಸಿ.ಎಸ್., ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳು, ವಿಜಯನಗರ ಅಧ್ಯಯನ *ಸಂ–2*, 1997, ಪು. 101; ವಿಜಯನಗರಪಟ್ಟಣ ಮತ್ತು ಅದರ ಉಪನಗರಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, (ಸಂ.) ದೇವರಕೊಂಡಾರೆಡ್ಡಿ, ಹಂಪಿ ಸಂಪುಟ, ಕಲೆ, ಕ್ರೀಡೆ, ಮತ್ತು ಕೌಶಲ, 2006, ಪು. 303.
3. ಶಿರೂರ ಬಿ.ವ್ಹಿ., ಹಂಪಿಯ ಶಾಸನೋಕ್ತ ಅಗ್ರಹಾರಗಳು, ವಿಜಯನಗರ ಅಧ್ಯಯನ ಸಂ. 11, 2005, ಪು. 107.
4. ಕೆಳದಿ ವೆಂಕಟೇಶ ಜೋಯಿಸ್., ಶ್ರೀ ರಾಮಚಂದ್ರಾಪುರ ಅಗ್ರಹಾರ, ವಿಜಯನಗರ ಮತ್ತು ಕೆಳದಿ ಅರಸರ ಕುರಿತಂತೆ ಚಾರಿತ್ರಿಕ ದಾಖಲೆ, ವಿಜಯನಗರ ಅಧ್ಯಯನ *ಸಂ. 9*, 2003, ಪು. 58.
5. Venkata Ratnam A.V., Local Self Government In *The Vijayanagara Empire,* Prasaranga University of Mysore, 1972, p. 45.
6. ಶಿರೂರ ಬಿ.ವ್ಹಿ., ಹಂಪಿಯ ಶಾಸನೋಕ್ತ ಅಗ್ರಹಾರಗಳು, ವಿಜಯನಗರ ಅಧ್ಯಯನ, *ಸಂ. 11*, 2005, ಪು. 107.
7. *ಹಂಪಿ ಶಾಸನಗಳು*, ಕನ್ನಡ ವಿಶ್ವವಿದ್ಯಾಲಯ ಶಾಸನ, ಸಂಪುಟ 3, ಶಾಸನ ಸಂ. 232.
8. ಅದೇ, ಶಾಸನ ಸಂ. 74.
9. ಅದೇ, ಶಾಸನ ಸಂ. 229.
10. ಅದೇ, ಶಾಸನ ಸಂ. 230.
11. ಅದೇ, ಶಾಸನ ಸಂ. 326.

42. ರಾಯಚೂರು ಕೋಟೆಯ ನವರಂಗ ದರ್ವಾಜ : ರಚನೆ ಮತ್ತು ಕಲೆ

ಡಾ. ಹೆಚ್. ಚಂದ್ರಶೇಖರ

ರಾಯಚೂರಿನ ಕೋಟೆಯು ಒಂದು ಶಿಲಾದುರ್ಗ. ಇದನ್ನು ಕೋಟೆಗಳ ವರ್ಗೀಕರಣ ವ್ಯವಸ್ಥೆಯಲ್ಲಿ ಪಾಷಾಣದುರ್ಗವೆಂದು ಕರೆಯಲಾಗುತ್ತದೆ.[1] ಈ ಕೋಟೆಯ ಒಳಸುತ್ತಿನ ಕೋಟೆಯನ್ನು ರಾಣಿ ರುದ್ರಾಂಬೆಯ ಅಪ್ಪಣೆಯ ಮೇರೆಗೆ ಆಕೆಯ ಮಂತ್ರಿಯಾಗಿದ್ದ ಗೋನಗನ್ನಯ್ಯನ ಅಧಿಕಾರಿಯಾಗಿದ್ದ ವಿಠ್ಠಲನಾಥನು ಕ್ರಿ.ಶ. 1294ರಲ್ಲಿ ಕಟ್ಟಿಸಿದನೆಂದು ಇಲ್ಲಿರುವ ಶಿಲಾಶಾಸನ ತಿಳಿಸುತ್ತದೆ.[2] ಈ ಒಳಸುತ್ತಿನಲ್ಲಿ ಉಪಯೋಗಿಸಲಾಗಿರುವ ಕಣಶಿಲೆಯ ಸೈಜುಕಲ್ಲುಗಳು (Granite size stones) ಬಹಳ ದೊಡ್ಡ ಗಾತ್ರದವುಗಳು. ಈ ಒಳಕೋಟೆಯಲ್ಲಿ (ಈಗಿನ ಬಸ್‌ಸ್ಟ್ಯಾಂಡ್ ಬಳಿ) ಅತ್ಯಂತ ದೊಡ್ಡ ಅಳತೆಯ ಸೈಜುಕಲ್ಲು, 40 ಅಡಿ ಉದ್ದ x 2 ಅಡಿ ದಪ್ಪ x 3 ಅಡಿ ಅಗಲವಾಗಿದೆ. ಈ ಅಳತೆಗಳನ್ನು ಮತ್ತು ಕಣಶಿಲೆಯ ಸಾಪೇಕ್ಷ ಸಾಂದ್ರತೆಯನ್ನು (specific gravity) ಗಮನದಲ್ಲಿರಿಸಿಕೊಂಡು ಲೆಕ್ಕ ಮಾಡಿದ್ದಾರೆ. ಈ ಸೈಜುಕಲ್ಲಿನ ತೂಕ ಸುಮಾರು 20–25 ಟನ್‌ಗಳಾಗಿರುತ್ತದೆ. ಇಷ್ಟು ಭಾರವಾದ ಸೈಜುಕಲ್ಲುಗಳನ್ನು ಸಾಗಿಸುವ ರೇಖಾಚಿತ್ರವನ್ನು ಇನ್ನೊಂದು ಕಲ್ಲಿನ ಮೇಲೆ ಕೆತ್ತಲಾಗಿದೆ. ಅದರ ಪಕ್ಕದಲ್ಲಿ ಇರುವ ಸೈಜುಕಲ್ಲಿನ ಮೇಲೆ ರಾಣಿ ರುದ್ರಾಂಬೆಯ ರಥದಲ್ಲಿ ಮೆರವಣಿಗೆಯಲ್ಲಿ ಹೊರಟಿರುವ ರೇಖಾಚಿತ್ರವನ್ನು ಕೆತ್ತಲಾಗಿದೆ.

ಈ ಕೋಟೆಯ ಹೊರಸುತ್ತಿನ ಕೋಟೆಯನ್ನು ಬಹಮನಿ ಸುಲ್ತಾನರು ಕಟ್ಟಿಸಿದ್ದಲ್ಲದೆ, ಒಂದು ಕೆರೆಯನ್ನು ಕಟ್ಟಿಸಿದರು. ಈ ಹೊರಕೋಟೆಯ ಸುತ್ತಲೂ ಆಳವಾದ ಕಂದಕವನ್ನು ತೋಡಿಸಿ ಕರೆಯಿಂದ ನೀರನ್ನು ಬಿಡುವ ವ್ಯವಸ್ಥೆ ಮಾಡಲಾಯಿತು. ಆದ್ದರಿಂದ ಈ ಕೋಟೆಯನ್ನು ವಿಜಯನಗರದ ಅರಸರಿಗೆ ಸುಲಭವಾಗಿ ಗೆಲ್ಲಲು ಸಾಧ್ಯವಾಗಲಿಲ್ಲ. ಈ ಕೋಟೆಯನ್ನು ವಶಪಡಿಸಿಕೊಳ್ಳಲು ವಿಜಯನಗರದ ಅರಸರಿಗೂ ಬಹಮನಿ ಸುಲ್ತಾನರಿಗೂ (ಬಿಜಾಪುರದ ಆದಿಲ್ ಶಾಹಿಗಳ) ಹಲವಾರು ಸಲ ಕಾಳಗಗಳಾಗಿವೆ. ಈ ಕೋಟೆಯ ಸ್ಥಾಪನೆಯಿಂದ ಮೊದಲ್ಗೊಂಡು ಕ್ರಿ.ಶ. 1750–51ರ ವರೆಗೆ ನಡೆದ ಕಾಳಗಗಳ ಸಾರಾಂಶವನ್ನು ಸಿ.ಎಸ್. ಪಾಟೀಲರು ಕೊಟ್ಟಿದ್ದಾರೆ. ಆ ವಿವರಗಳನ್ನು ಅನುಬಂಧದನ್ನು ಕೊಟ್ಟಿದ್ದೇನೆ.

ಈ ಕೋಟೆಯ ಒಳಸುತ್ತಿನ ಒಳಗೆ ಜಲಪೂರೈಕೆಗಾಗಿ ಹಲವು ದೊಡ್ಡ ಅಳತೆಯ ಭಾವಿಗಳಿವೆ. ಈ ಬಾವಿಗಳು ಸಾರ್ವಜನಿಕರ ಉಪಯೋಗಕ್ಕಾಗಿ ಅಧಿಕಾರಿಗಳು ನಿರ್ಮಿಸಿದ್ದಾರೆ. ಇದರಿಂದಾಗಿಯೂ ದೀರ್ಘಕಾಲದ ಮುತ್ತಿಗೆಯ ಅವಧಿಯಲ್ಲಿ ಕುಡಿಯುವ ನೀರಿನ ಅನುಕೂಲತೆ ಒಳಗಿನ ಜನರಿಗೆ ಇತ್ತಯ (ನೋ.ಚಂ.10).

ಕೃಷ್ಣದೇವರಾಯನ ರಾಯಚೂರು ವಿಜಯ

ಆಗಲೇ ಹೇಳಲಾದಂತೆ ಮುದ್ಗಲ್ ಕೋಟೆ ಮತ್ತು ರಾಯಚೂರು ಕೋಟೆಗಳ ಅಧಿಪತ್ಯಕ್ಕಾಗಿ ವಿಜಯನಗರದ ಅರಸರಿಗೂ/ಸುಲ್ತಾನರಿಗೂ ಹಲವಾರು ಸಲ ಕಾಳಗಗಳಾಗಿವೆ. ಪ್ರತಿ ಸಲವೂ ವಿಜಯನಗರದ ಅರಸರು ಸೋಲನ್ನು ಅನುಭವಿಸಿದ್ದಾರೆ. ಅದಕ್ಕೆ ಈ ಕೋಟೆಗಳ ರಚನೆ ಅಷ್ಟೆ ಅಲ್ಲದೆ, ತುಂಗಭದ್ರಾ ನದಿಯೂ ಕಾರಣ. ವಿಜಯನಗರದ ಅರಸರ ಸೈನ್ಯಕ್ಕೆ ಬೇಕಾಗುವ ಸಕಲ ಶಸ್ತ್ರಾಸ್ತ್ರಗಳನ್ನು ಆಹಾರ ಸಾಮಗ್ರಿಗಳುಳ್ಳ ತುಂಗಭದ್ರಾ ನದಿಯ ದಕ್ಷಿಣ ದಿಕ್ಕಿನಿಂದ ತೆಪ್ಪಗಳಲ್ಲಿ ಅಥವಾ ಹರಿಗೋಲುಗಳಲ್ಲಿ ಸಾಗಿಸಬೇಕಾಗಿತ್ತು. ಸುಲ್ತಾನರಿಗೆ ಇದೊಂದು ನೈಸರ್ಗಿಕ ಅನುಕೂಲತೆಯಾಗಿತ್ತು.

ಈ ಐತಿಹಾಸಿಕ ಕಾರಣಗಳಿಗಾಗಿ ರಾಯನಿಗೆ ರಾಯಚೂರು ಕೋಟೆಯನ್ನು ಗೆಲ್ಲಲೇಬೇಕೆಂಬ ಛಲ ಹುಟ್ಟಿರಬೇಕು.

ರಾಯಚೂರು ದೋಆಬ್‌ನ್ನು (ಎರಡು ನದಿಗಳ ಮಧ್ಯದ ಪ್ರದೇಶ) ಬಿಜಾಪುರದ ಸುಲ್ತಾನರು ಕ್ರಿ.ಶ. 1525ರಲ್ಲಿ ಬಹಮನಿ ಸುಲ್ತಾನರಿಂದ ಗೆದ್ದು ವಶಪಡಿಸಿಕೊಂಡರು.[3] ಈ ಕೋಟೆ ಮತ್ತು ಈ ಪ್ರದೇಶ ಕ್ರಿ.ಶ. 1520ರವರೆಗೆ ಬಿಜಾಪುರದ ಆದಿಲ್ ಶಾಹಿಗಳ ವಶದಲ್ಲಿತ್ತು.

ಗೊಬ್ಬೂರಿನ ಕಾಳಗ

ರಾಯಚೂರು ಕೋಟೆಯನ್ನು ಗೆಲ್ಲುವ ಉದ್ದೇಶದಿಂದ ಹೊರಟ ರಾಯನು ಮೊದಲು ಇಸ್ಮಾಯಿಲ್ ಆದಿಲ್ ಶಾಹಿಗಳ ಗೊಬ್ಬೂರಿನಲ್ಲಿ (ದೇವದುರ್ಗ) ನಡೆದ ಭೀಕರ ಯುದ್ಧದಲ್ಲಿ ಸೋಲಿಸಿ ಸುಲ್ತಾನನನ್ನು ಕ್ರಿ.ಶ. 1520 ಮೇ ತಿಂಗಳ 19ರಂದು, ಕೃಷ್ಣಾ ನದಿಯ ಉತ್ತರಕ್ಕೆ ಓಡಿ ಹೋಗಿ ಬಿಜಾಪುರವನ್ನು ಸೇರಿಕೊಳ್ಳುವಂತೆ ಮಾಡಿದನು. ಈ ಯುದ್ಧದಲ್ಲಿ ಅಪಾರ ಸಂಖ್ಯೆಯಲ್ಲಿ ಎರಡೂಕಡೆಯ ಸೈನಿಕರು ಹತರಾದರು. ಆದಿಲ್‌ಶಾಹ ತುಂಬಾ ಎದೆಗುಂದಿ ಹೋದನೆಂದು ಕಾಣುತ್ತದೆ. ನಂತರ ರಾಯನು ಮಲ್ಲಾಪುರದಲ್ಲಿದ್ದ (ಈಗಿನ ಮರಿಯಾಬಾದ, ರಾಯಚೂರಿಗೆ ಕೇವಲ 8.10 ಕಿ.ಮೀ. ಅಂತರದಲ್ಲಿದೆ) ತನ್ನ ಸೈನ್ಯವನ್ನು ಸೇರಿಕೊಂಡು ರಾಯಚೂರು ಕೋಟೆಯನ್ನು ಗೆಲ್ಲಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡನು.

ಆಗ್ನೇಯ ದಿಕ್ಕಿನಿಂದ ದಾಳಿ

ಯುದ್ಧ ಚಾಣಾಕ್ಷನಾಗಿದ್ದ ರಾಯನು ರಾಯಚೂರು ಕೋಟೆಗೆ ಆಗ್ನೇಯ ದಿಕ್ಕಿನಿಂದ (S-E) ಲಗ್ಗೆ ಇಡಲು ನಿರ್ಧರಿಸಿರಬೇಕೆಂದು ನನ್ನ ಊಹೆ. ಯಾಕೆಂದರೆ ಈ ದಿಕ್ಕಿನಲ್ಲಿ ಕೋಟೆ ಇರಲಿಲ್ಲ. ಕೆರೆ ಇತ್ತು. ಬಹುಶಃ ಮೇ ತಿಂಗಳಿನಲ್ಲಿ ಕೆರೆ ಬತ್ತಿರಬಹುದು ಅಥವಾ ಕಡಿಮೆ ಆಳ ಮತ್ತು ವಿಸ್ತಾರವನ್ನು ಹೊಂದಿರಬಹುದು. ಅದೇನಿದ್ದರೂ ಮಲ್ಲಾಪುರದಲ್ಲಿ ಬೀಡುಬಿಟ್ಟಿದ್ದ ಅಪಾರ ಸೈನಿಕರನ್ನು ಈ ದಿಕ್ಕಿನಿಂದಲೇ ದಾಳಿ ಮಾಡಲು ಆಜ್ಞಾಪಿಸಿರಬೇಕು. ಅದೂ ಅಲ್ಲದೆ ಕೆರೆಯ ಒಡ್ಡನ್ನು ಒಡೆದಿರಬಹುದು. ಇದರಿಂದಾಗಿ ಕಂದಕಗಳು ಬರಿದಾಗಿ ಸೈನಿಕರು ಸುಲಭವಾಗಿ ದಾಟಲು ಸಾಧ್ಯವಾಯಿತು. ಉಳಿದ ದಿಕ್ಕುಗಳಿಂದಲೂ ದಾಳಿ ನಡೆಸಿ ತೋಪುಗಳ ಸಹಾಯದಿಂದ ಕೋಟೆಯ ಗೋಡೆಗಳನ್ನು ಒಡೆದು, ಕಲ್ಲುಗಳನ್ನು ಕೀಳಿಸಿ ರಾಯನು ಒಳನುಗ್ಗಿದನು. ಈ ಯುದ್ಧದಲ್ಲಿ ಪೋರ್ಚುಗೀಸರು ಒದಗಿಸಿದ ಫಿರಂಗಿ ಬಲವೂ ವಿಜಯನಗರದ ಸೈನ್ಯಕ್ಕೆ ದೊಡ್ಡ ಪ್ರಮಾಣದಲ್ಲಿ ಸಹಾಯಮಾಡಿತು. ಕ್ರಿ.ಶ. 1520 ಮೇ 19ರಿಂದ ಆರಂಭವಾದ ಈ ಮುತ್ತಿಗೆಯು ಜೂನ್ 8ರ ವರೆಗೆ ನಡೆದು ರಾಯಚೂರು ಕೋಟೆ ರಾಯನ ವಶವಾಯಿತು. ಹೀಗೆ ರಾಯನು ತನ್ನ ಪೂರ್ವಿಕರು ಅನುಭವಿಸಿದ್ದ ವಿಫಲಗೊಂಡಿದ್ದ ಯತ್ನಗಳನ್ನು ಸಫಲ ಗೊಳಿಸಿಕೊಂಡನು. ಆದರೆ ಹಲವಾರು ಕಾರಣಗಳಿಂದಾಗಿ ಕ್ರಿ.ಶ. 1520ರ ಜೂನ್ ತಿಂಗಳ ಕೊನೆಯ ವಾರದಲ್ಲಿ ತನ್ನ ರಾಜಧಾನಿ ಹಂಪಿಗೆ ಹಿಂತಿರುಗಲೇ ಬೇಕಾಯಿತು.[3] ಅಂದರೆ ರಾಯನು ರಾಯಚೂರಿನಲ್ಲಿ ತಂಗಿದ್ದು ಕೇವಲ ಕೆಲವಾರಗಳ ಕಾಲ ಮಾತ್ರ ಎಂದಂತಾಯಿತು. ಈ ಮಾತು ನನ್ನ ಈ ಸಂಪ್ರಬಂಧದ ವಿಷಯಕ್ಕೆ ಪ್ರಬಲವಾದ ಮತ್ತು ತರ್ಕಬದ್ಧ ಆಧಾರವಾಗುತ್ತದೆ.

ನವರಂಗದರ್ವಾಜದ ನಿರ್ಮಾಪಕರು?

ನವರಂಗ ದರ್ವಾಜದ ನಿರ್ಮಾಪಕರು ಯಾರೆಂಬುದು ಚರ್ಚೆಯ ವಿಷಯ. ಎಲ್ಲಾ ನವರಂಗ ದರ್ವಾಜದ ಅಡ್ಡ ಪಟ್ಟಿಕೆಗಳಲ್ಲಿ (Horizontal slabs) ಮತ್ತು ಗೋಡೆಗಳ ಮೇಲೆ ಕೆತ್ತಲಾಗಿರುವ ಉಬ್ಬು ಶಿಲ್ಪಗಳನ್ನು ಗಮನಿಸಿ ಕೃಷ್ಣದೇವರಾಯನೇ ಈ ನವರಂಗ ದರ್ವಾಜವನ್ನು ತನ್ನ ವಿಜಯನಗರದ ಸಂಕೇತವಾಗಿ ಹೊಸದಾಗಿ ನಿರ್ಮಿಸಿದನೆಂದು ಬಹುಪಾಲು ಇತಿಹಾಸಕಾರರು ನಂಬುತ್ತಾರೆ. ಈ ನಂಬಿಕೆಯು ನಿರಾಧಾರವೆಂಬುದಕ್ಕೆ ರಾಯಚೂರು ಕೋಟೆಯ ರಚನಾ ವಿನ್ಯಾಸ ಮತ್ತು ನವರಂಗ ದರ್ವಾಜದ ಉದ್ದಗಲಗಳನ್ನು ಗಮನಿಸಿದರೆ ಗೊತ್ತಾಗುತ್ತದೆ (ಚಿತ್ರ 1).

ರಾಯಚೂರು ಕೋಟೆಯ ತಳ ವಿನ್ಯಾಸದ ರೇಖಾಚಿತ್ರಗಳು ಹಾಗೂ ಗೂಗಲ್ ಉಪಗ್ರಹದಿಂದ ತೆಗೆಯಲಾದ ಚಿತ್ರವನ್ನು (imagery) ಚಿತ್ರ 1ರಲ್ಲಿ ಕೊಡಲಾಗಿದೆ. ನವರಂಗ ದರ್ವಾಜ ಉತ್ತರದಲ್ಲಿದೆ. ಹೊರಗೋಡೆಯ ರಚನೆಯನ್ನು ಸೂಕ್ಷ್ಮವಾಗಿ ಗಮನಿಸಿದ್ದೇನೆ. ರಚನೆಯಲ್ಲಿ ಯಾವ ವ್ಯತ್ಯಾಸವನ್ನು ಕಂಡಿಲ್ಲ (There is no break in the plan). ಮೆಕ್ಕಾ ದರ್ವಾಜ (ಪಶ್ಚಿಮ) ಮತ್ತು ಕಾಟಿ ದರ್ವಾಜ (ಪೂರ್ವ) ಮತ್ತು ಖಿಡಕ್ ದರ್ವಾಜ (ದಕ್ಷಿಣ) ಇವುಗಳು ಇದ್ದಂತೆಯೆ ಈ ನವರಂಗ ದರ್ವಾಜ ಇದೆ. ಅಂದರೆ ವಿನ್ಯಾಸದಲ್ಲಿ ವ್ಯತ್ಯಾಸವಿಲ್ಲ ಎಂಬುದು ನಿರ್ವಿವಾದ. ಅದೂ ಅಲ್ಲದೆ, ಈ ಕೋಟೆಯ ವಿಜಯನಗರ ಅರಸರ ಪ್ರತಿನಿಧಿಯ ಅಧೀನದಲ್ಲಿ ಕೇವಲ ಒಂದೆರಡು ವರ್ಷಗಳ ಕಾಲ ಇತ್ತು. ಅಷ್ಟು ಸ್ವಲ್ಪ ಅವಧಿಯಲ್ಲಿ ಸುಮಾರು 30 ಅಡಿಗಳ ಎತ್ತರದ ಗೋಡೆ, ಒಳಾಂಗಣದಲ್ಲಿ 17 ಮುಸ್ಲಿಂ ಶೈಲಿಯ ಕಮಾನುಗಳನ್ನೂ ದೊಡ್ಡ ಹೆಬ್ಬಾಗಿಲನ್ನು (ಮುಸ್ಲಿಂ ಶೈಲಿಯಲ್ಲಿ) ಕಟ್ಟಲು ಸಾಧ್ಯವಿಲ್ಲ.

ಈ ನವರಂಗ ದರ್ವಾಜದ ಹೆಬ್ಬಾಗಿಲನ್ನೂ ಮತ್ತು ಒಳ ಆವರಣವನ್ನೂ ಪುನರುತ್ಥಾನಗೊಳಿಸುವ ಪೂರ್ವದಲ್ಲಿ (1980–90) ಕೆಲವು ಸಲ ನೋಡಿ ಚಿತ್ರಗಳನ್ನು ತೆಗೆದಿದ್ದೇನೆ. ಆಗ ಅದೊಂದು ಬಯಲು ಶೌಚಾಲಯವಾಗಿತ್ತು. ಎಲ್ಲಾ

ಕೋಮಿನ ಜನರು ಈ ಪ್ರದೇಶವನ್ನು ಮಲಿನಗೊಳಿಸುತ್ತಿದ್ದರು. 1998ರ ಸುಮಾರಿನಲ್ಲಿ ಸ್ಥಳೀಯ ಮುನಿಸಿಪಾಲಿಟಿಯು ಒಳಕೋಟೆಯ ಹಲವು ಭಾಗಗಳನ್ನು ಕೆಡವಲು ಆರಂಭಿಸಿತು. ಆದರೆ ದಿ॥ ಶಾಂತರಸರ ನೇತೃತ್ವದಲ್ಲಿ ನಡೆದ ಪ್ರಜ್ಞಾವಂತರ ಪ್ರತಿಭಟನೆಯಿಂದಾಗಿ ಕೆಡುವ ಕಾರ್ಯಕ್ಕೆ ತಡೆಯಾಯಿತು.

1998–99ರ ಅವಧಿಯಲ್ಲಿ ಅಶೋಕ ದಳವಾಯಿಯವರು ರಾಯಚೂರಿನ ಜಿಲ್ಲಾಧಿಕಾರಿಯಾಗಿ (Deputy Commissioner) ನೇಮಕಗೊಂಡ ನಂತರ, ಈ ಕೋಟೆಯ ಜೀರ್ಣೋದ್ಧಾರಕ್ಕೆ ಚಾಲನೆ ನೀಡಿದರು. ರಾಜ್ಯ ಪುರಾತತ್ತ್ವ ಇಲಾಖೆಯು ತಾಂತ್ರಿಕ ಸಿಬ್ಬಂದಿಯನ್ನು ಒದಗಿಸಿತು. ಈ ಕೆಲಸಕ್ಕೆ ಬೇಕಾದ ಹಣವನ್ನು ತಮ್ಮ ವಿವೇಚನಾ ಅಧಿಕಾರವನ್ನು (Deseretionary Powers) ಉಪಯೋಗಿಸಿ ಬಿಡುಗಡೆ ಮಾಡಿದ್ದಲ್ಲದೆ, ಹಣ ಪೋಲಾಗದಂತೆ ನೋಡಿಕೊಂಡರು.

ನವರಂಗ ದರ್ವಾಜವನ್ನು ಸ್ವಚ್ಛಗೊಳಿಸಿ ಮುರಿದು ಬಿದ್ದ ಕಲ್ಲಿನ ತೊಲೆಗಳ ಬದಲಾಗಿ ಅದೇ ತೆರನ ಕಲ್ಲನ್ನು ತರಿಸಿ ಪುನರುತ್ಥಾನದ ಕಾರ್ಯವನ್ನು ಪೂರ್ಣಗೊಳಿಸಿದರು. ಕೊನೆಯ ಬಹುಶಃ 5% ಭಾಗದ ಕೆಲಸ ಹೆಬ್ಬಾಗಿಲಿನ ಮೇಲೆ ಇರುವ ತೊಲೆ ಇಡುವ ಕಾರ್ಯ ಉಳಿದಿತ್ತು. ಆಗ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು. ಅದಕ್ಕೆ ಸಮನಾಂತರವಾಗಿ ಮಕ್ಕಾ ದರ್ವಾಜವನ್ನು ಪುನರುತ್ಥಾನಗೊಳಿಸಿ, ಅದರ ಬಾಗಿಲನ್ನು ತೆರೆಸಿ ಒಳ ಅಂಗಳದಲ್ಲಿ ಚಿಕ್ಕ ಬಯಲು ರಂಗಮಂದಿರವನ್ನು ನಿರ್ಮಿಸಲಾಗಿದೆ.

ನವರಂಗ ದರ್ವಾಜದ ಕಲೆ

ನವರಂಗ ದರ್ವಾಜವನ್ನು ಹಮದರ್ದ ಹೈಸ್ಕೂಲ್ ಪಕ್ಕದಲ್ಲಿರುವ ಹೆಬ್ಬಾಗಿಲಿನ ಮೂಲಕ ಪ್ರವೇಶಿಸಬೇಕು. ಒಳ ಹೊಕ್ಕರೆ 100 ಅಡಿ x 60 ಅಡಿ ಅಳತೆಯ ಅಂಗಳವಿದೆ. ಮೇಲೆ ಛಾವಣಿ ಇಲ್ಲ. ಇದೊಂದು ಬಯಲು ಮ್ಯೂಜಿಯಂ ಇದ್ದ ಹಾಗೆ ಇದೆ. "L" ಆಕಾರದಲ್ಲಿ ಕಟ್ಟೆಯನ್ನು ಕಟ್ಟಿ, ಆ ಕಟ್ಟೆಯ ಮೇಲೆ ಬೇರೆ ಕಡೆಯಿಂದ ತಂದ ಸುಂದರ ಕಲಾವಸ್ತುಗನ್ನು (ಬಾಗಿಲುವಾಡ, ಷಣ್ಮುಖ, ಶಿಲ್ಪ, ಕನಕಗಿರಿಯ ವೀರಗಲ್ಲು ಇತ್ಯಾದಿ) ಸುಂದರವಾಗಿ ಕೂಡಿಸಲಾಗಿದೆ. ನೋಡಿದರೆ ಆನಂದವಾಗುತ್ತದೆ. ಈ ಅಂಗಳದಿಂದ ಬಲಕ್ಕೆ ಇರುವ ಬಾಗಿಲನ್ನು ಪ್ರವೇಶಿಸಿದರೆ ಒಟ್ಟು 17 ಕಮಾನುಗಳುಳ್ಳ ಅಂಗಳ ಸಿಗುತ್ತದೆ (ಚಿತ್ರ 2). ಕಮಾನುಗಳ ಮೇಲೆ ಕಲ್ಲಿನ ಚಪ್ಪಡಿಗಳನ್ನು ಜೋಡಿಸಲಾಗಿದೆ. ಒಳಾಂಗಣದ ಅಳತೆ 60' x 60', ಸುತ್ತಲೂ 17 ಕಮಾನುಗಳು. ಒಂದೊಂದು ಕಮಾನಿನಲ್ಲಿ ಬೇರೆ ಬೇರೆ ಕಾಲದ ಬೇರೆ ಬೇರೆ ಶಿಲೆಗಳಿಂದ ನಿರ್ಮಿತವಾದ ಬೇರೆ ಸ್ಥಳಗಳಿಂದ ತಂದು ಶಿಲ್ಪಗಳನ್ನು ಕಟ್ಟೆ ಕಟ್ಟಿ ನಿಲ್ಲಿಸಲಾಗಿದೆ. ಅವುಗಳನ್ನು ಸರಿಯಾಗಿ ಗುರ್ತಿಸಿ ಶಿಲ್ಪದ ಹೆಸರು, ಕಾಲ, ಸಿಕ್ಕ ಸ್ಥಳಗಳನ್ನು 2003ರವರೆಗೂ ಬರೆದಿರಲಿಲ್ಲ. ಈಗ ಬರೆದಿದ್ದರೆ ಸಂತೋಷ. ಬರೆಸಲಾಗದಿದ್ದರೆ ತಜ್ಞರ ನೆರವಿನಿಂದ ಅವುಗಳನ್ನು ಗುರ್ತಿಸಿ ಶಿಲ್ಪದ ಕೆಳಗೆ ಹೆಸರನ್ನು ಸುಂದರ ಅಕ್ಷರಗಳಲ್ಲಿ ಬರೆಸಬೇಕು. ನಾನು ಗುರ್ತಿಸಲು ಸಾಧ್ಯವಾದ ಕೆಲವು ಶಿಲ್ಪಗಳನ್ನು ಅವುಗಳ ಶೈಲಿಯ ಆಧಾರದ ಮೇಲೆ ಕಾಲವನ್ನು ಗುರ್ತಿಸಿದ್ದೇನೆ. ಉದಾ: (1) ಪಾರ್ಶ್ವನಾಥ ಶಿಲ್ಪ, ಗಣೇಶ ಶಿಲ್ಪ, ಕಲ್ಯಾಣ ಚಾಳುಕ್ಯರ ಕಾಲ. ಶಿವ–ಪಾರ್ವತಿ ಶಿಲ್ಪ ಕಲ್ಯಾಣ ಚಾಳುಕ್ಯರ ಕಾಲ, ಷಣ್ಮುಖ ಕಾಲ ತಿಳಿಯದು. ಒಂದೊಂದು ಶಿಲ್ಪವನ್ನು ವಿವರಿಸುವುದು ಈ ಲೇಖನದ ವ್ಯಾಪ್ತಿಗೆ ಸೇರುವುದಿಲ್ಲ. ಇನ್ನೊಂದು ಸಂಪ್ರಬಂಧದ ವಿಷಯವಾದೀತು.

ಈ ಒಳಾಂಗಣದ ಅಡ್ಡಲಾಗಿ ಇಡಲಾಗಿರುವ ಶಿಲಾಪಟ್ಟಗಳ (linteal) ಉದ್ದ ಸುಮಾರು 5'ಯಿಂದ 10'ಗಳವರೆಗೆ ಇದೆ. ಈ ಪಟ್ಟಗಳಲ್ಲಿ ರಾಮಾಯಣ, ಮಹಾಭಾರತದ ಪ್ರಸಂಗಗಳ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಕಣತದ ಹಾವಾಡಿಗರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಒಂದು ಶಿಲಾಪಟ್ಟಿಕೆಯಲ್ಲಿ ರಾಜನೊಬ್ಬನು ಆಸನದ ಮೇಲೆ ಗಂಭೀರವಾಗಿ ಕುಳಿತಿದ್ದಾನೆ. ಕಿರೀಟಧಾರಿ ಉಬ್ಬು ಶಿಲ್ಪ. ಅವನ ಹಿಂಬದಿಯಲ್ಲಿ ಇಬ್ಬರು ದಾಸಿಯರು ಚಾಮರ ಬೀಸುತ್ತಿದ್ದಾರೆ. ರಾಜನ ಮುಂದೆ ಒಬ್ಬ ಚಲುವೆ ಗಿಣಿಯನ್ನು ಬಲಗೈ ಮೇಲೆ ಕೂಡಿಸಿಕೊಂಡು ಅದರೊಡನೆ ಸಂಭಾಷಣೆ ಮಾತನಾಡುವಂತೆ ಕಾಣುತ್ತದೆ. ನಂಣರ ಏಳುನರ್ತಕಿಯರು ವಿವಿಧ ಭಂಗಿಯಲ್ಲಿ ನಿಂತಿದ್ದಾರೆ. ಈ ಉಬ್ಬುಶಿಲ್ಪದ ಕೆಳಗೆ ಯಾರ ಹೆಸರನ್ನೂ ಕೆತ್ತಿಸಿಲ್ಲ (ಚಿತ್ರ 2). ಇದೇ ಬಗೆಯ ಒಂದು ಉಬ್ಬುಶಿಲ್ಪ ಹಂಪೆಯ ಮಹಾನವಮಿ ದಿಬ್ಬದಲ್ಲಿ ನೋಡಲು ಸಿಗುತ್ತದೆ. ಇತರ ಪಟ್ಟಿಕೆಗಳಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಉಬ್ಬುಶಿಲ್ಪಗಳಿರುವುದರಿಂದ ಇದು ಕೃಷ್ಣದೇವರಾಯನ ಶಿಲ್ಪ ಇರಬಹುದೆಂದು ಊಹೆ ಮಾಡಬಹುದು. ಅವನದಲ್ಲದೆ ಬೇರೆ ಯಾರಾದರೂ ಪಾಳೆಗಾರರ ಅಥವಾ ಅರಸರ ಶಿಲ್ಪವೂ ಆಗಿರಬಹುದು. ಈ ಪಟ್ಟಿಕೆಗಳಲ್ಲಿ ಕೆತ್ತಲಾಗಿರುವ


ಉಬ್ಬು ಶಿಲ್ಪಗಳನ್ನು ಸಾಕಷ್ಟು ಸಮಯ ಹಿಡಿದಿರಬಹುದು. ಆದ್ದರಿಂದ, ಇಡೀ ನವರಂಗ ದರ್ವಾಜವನ್ನು ಕೃಷ್ಣದೇವರಾಯನು ನಿರ್ಮಿಸಿದನೆಂದು ಹೇಳದೆ, ಕೇವಲ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಉಬ್ಬುಶಿಲ್ಪಗಳನ್ನು ಮೊದಲೇ ಜೋಡಿಸಲ್ಪಟ್ಟ ಪಟ್ಟಿಕೆಗಳ ಮೇಲೆ ಶಿಲ್ಪಗಳು ಕೆತ್ತಿರಬಹುದೆಂದು ಹೇಳಿದರೆ ವಾಸ್ತವಕ್ಕೆ ಹತ್ತಿರವಾಗುತ್ತದೆ. ಎಲ್ಲಿಯೂ ಶಿಲ್ಪಿಗಳ ಹೆಸರುಗಳನ್ನು ಕೆತ್ತಲಾಗಿಲ್ಲ. ಬಹುತೇಕ ಎಲ್ಲಾ ಕಡೆ ಇರುವಂತೆ ಇಲ್ಲಿಯೂ ಶ್ರಮಜೀವಿ ಕಲಾವಿದ ಅನಾಮಧೇಯನಾಗಿದ್ದ. ಇಂಥ ಕೃತಿಗಳ ಶಿಲ್ಪಗಳ ಮೇಲೆ ರಾಜಮಹಾರಾಜರು ಈ ತೆರನ ನಿರ್ಬಂಧ ಹೇರಿರಬಹುದು. ಇತಿಹಾಸದುದ್ದಕ್ಕೂ ಶ್ರಮಜೀವಿಗಳ ಶೋಷಣೆ ನಡೆದಿದೆ.

ಸಾರಾಂಶ ಮತ್ತು ತೀರ್ಮಾನಗಳು


ಬಹಮನಿ ಸುಲ್ತಾನರು ಮತ್ತು ಬಿಜಾಪುರ ಸುಲ್ತಾನರು ನಿರ್ಮಿಸಿದ ಕೋಟೆಯು ಬಲಾಢ್ಯ ಕೋಟೆಯಾಗಿತ್ತು. ಕಾಕತಿಯ ರಾಣಿ ರುದ್ರಮ್ಮನಿಂದ ಆರಂಭಗೊಂಡ ಈ ಕೋಟೆ ಬಹಮನಿ ಸುಲ್ತಾನರ ಕಾಲದಲ್ಲಿ ಪೂರ್ಣಗೊಂಡಿತ್ತು. ಕೋಟೆಯೊಳಗೆ ವಿಜಯನಗರ ಶೈಲಿಯ ಒಂದೂ ರಚನೆ ಇಲ್ಲ. ಯಾಕೆಂದರೆ ವಿಜಯನಗರ ಅರಸರ ಅಧೀನದಲ್ಲಿ ಈ ಕೋಟೆ ಒಂದೆರಡು ವರ್ಷಗಳ ಕಾಲ ಇತ್ತು. ಈ ಕೊಂಚ ಅವಧಿಯಲ್ಲಿ ನವರಂಗ ದರ್ವಾಜದ ಶಿಲಾಪಟ್ಟಿಕೆಗಳಲ್ಲಿ ಕೆಲವು ವೈಷ್ಣವಧರ್ಮದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಅಂಥ ಉಬ್ಬುಶಿಲ್ಪಗಳಲ್ಲಿ ಒಂದನ್ನು ಕೃಷ್ಣದೇವರಾಯನ ಶಿಲ್ಪವೆಂದು ಇತಿಹಾಸಕಾರರು ಯಾವುದೇ ಖಚಿತ ಆಧಾರಗಳಿಲ್ಲದೆ ನಂಬುತ್ತಾರೆ. 1990ರಿಂದ ಈಚೆಗೆ ಶ್ರೀ ಅಶೋಕ ದಳವಾಯವರ ಆಸಕ್ತಿಯಿಂದಾಗಿ ನವರಂಗದರ್ವಾಜ ಪುನರುತ್ಥಾನಗೊಂಡಿದೆ. ಸಧ್ಯ ರಾಜ್ಯಸರ್ಕಾರ ಇತಿಹಾಸ ಮತ್ತು ಪುರಾತತ್ತ್ವ ಇಲಾಖೆಯು ಒಂದು ಒಳ್ಳೆಯ ಮ್ಯೂಜಿಯಂನ್ನು ಸ್ಥಾಪಿಸಿದೆ. ಅವರಿಬ್ಬರನ್ನೂ ಅಭಿನಂದಿಸಿ ಲೇಖನ ಮುಗಿಸುತ್ತೇನೆ.

ಅಡಿ ಟಿಪ್ಪಣಿಗಳು

1. ಡಾ. ಎಚ್. ಚಂದ್ರಶೇಖರ, 2000, ಕರ್ನಾಟಕದ ಕೋಟೆಗಳ ಅಂತರಂಗದಲ್ಲಿ... *"ಪ್ರಜಾವಾಣಿ"*, ದೀಪಾವಳಿ ಸಂಚಿಕೆ, ಪು. 164–175.
2. ಡಾ. ಚನ್ನಬಸಪ್ಪ ಎಸ್.ಪಾಟೀಲ, 1999, *ಕರ್ನಾಟಕದ ಕೋಟೆಗಳು*, ಸಂಪುಟ 1, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 54–61.
3. ಜಿ.ಎಸ್. ದೀಕ್ಷಿತ ಮತ್ತಿತರರು, 1997, *ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆಗಳು*, ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ, ಪು. 56–65.



1. ರಾಯಚೂರು ಕೋಟೆಯ ರೇಖಾಚಿತ್ರದ ವಿನ್ಯಾಸದ (ಕೃಪೆ: ಸಿ.ಎಸ್. ಪಾಟೀಲ) ಹಾಗೂ ಬಲಗಡೆ ಗೂಗಲ್ ಉಪಗ್ರಹದಿಂದ ತೆಗೆಯಲಾದ ಚಿತ್ರ (imagery)



ಚಿತ್ರ 2. ರಾಜನೊಬ್ಬನು ಸಿಂಹಾಸನದ ಮೇಲೆ ಕುಳಿತು ನೃತ್ಯವನ್ನು ನೋಡುತ್ತಿರುವ ಉಬ್ಬುಶಿಲ್ಪ. ಇದನ್ನು ಕೃಷ್ಣದೇವರಾಯನ ಶಿಲ್ಪವೆಂದು ಎಲ್ಲಾ ಇತಿಹಾಸಕಾರರು ನಂಬುತ್ತಾರೆ. ಆಧಾರಗಳಿಲ್ಲ. ಶಿಲ್ಪದ ಕೆಳಗೆ ಹೆಸರನ್ನು ಕೆತ್ತಿಲ್ಲ.



ಚಿತ್ರ 3. ಪಾರ್ಶ್ವನಾಥ ಶಿಲ್ಪ – ಕಲ್ಯಾಣ ಚಾಲುಕ್ಯ ಶೈಲಿ



ಚಿತ್ರ 4. ಷಣ್ಮುಖ ಶಿಲ್ಪ

ಅನುಬಂಧ

ರಾಯಚೂರು ಕೋಟೆಗೆ ಸಂಬಂಧಿಸಿದ ಘಟನೆಗಳು

(ವಿ. = ವಿಜಯನಗರ; ಬ. = ಬಹಮನಿ; ಆ. = ಆದಿಲ್ ಶಾಹಿ)

ಕ್ರಿ.ಶ. 1188–1152	ಕೋಟೆ ಹೊಯ್ಸಳ ವಿಷ್ಣುವರ್ಧನನ ವಶ
ಕ್ರಿ.ಶ. 1294	ಕಾಕತೀಯ ರಾಣಿ ರುದ್ರಾಂಬೆಯ ಕಾಲದಲ್ಲಿ ವಿಠಲನಾಥನಿಂದ ಒಳಕೋಟೆಯ ನಿರ್ಮಾಣ
ಕ್ರಿ.ಶ. 1366–67	ವಿ. ಬುಕ್ಕ I ಮತ್ತು ಬ. ಮಹಮ್ಮದ್ ಶಾಹ I ನಡುವೆ ಯುದ್ಧ
ಕ್ರಿ.ಶ. 1375–76	ವಿ. ಬುಕ್ಕ I ಬ. ಮುಜಾಹಿದ್ ಶಾಹ ನಡುವೆ ಯುದ್ಧ
ಕ್ರಿ.ಶ. 1398–99	ವಿ. ಹರಿಹರ II ಮತ್ತು ಬ. ಫಿರೋಜ್ ಶಾಹ ನಡುವೆ ಯುದ್ಧ
ಕ್ರಿ.ಶ. 1406	ವಿ. ದೇವರಾಯ I ಮತ್ತು ಬ. ಫಿರೋಜ್ ಶಾಹ ನಡುವೆ ಯುದ್ಧ
ಕ್ರಿ.ಶ. 1422–23	ವಿ. ದೇವರಾಯ II ಮತ್ತು ಬ. ಫಿರೋಜ್ ಶಾಹ I ನಡುವೆ ಯುದ್ಧ
ಕ್ರಿ.ಶ. 1435–36	ವಿ. ದೇವರಾಯ II ಮತ್ತು ಬ. ಅಲಾವುದ್ದೀನ್ ನಡುವೆ ಯುದ್ಧ
ಕ್ರಿ.ಶ. 1443–44	ವಿ. ದೇವರಾಯ II ಮತ್ತು ಬ. ಅಲಾವುದ್ದೀನ್ ನಡುವೆ ಯುದ್ಧ
ಕ್ರಿ.ಶ. 1468–69	ಬ. ಮಹ್ಮದ್ ಶಾಹ IIIನ ಕಾಲದಲ್ಲಿ ಕೋಟೆಯ ಕಾಟಿದರ್ವಾಜ ನಿರ್ಮಾಣ
ಕ್ರಿ.ಶ. 1469–70	ಬ. ಮಹ್ಮದ್ ಶಾಹ IIIನ ಕಾಲದಲ್ಲಿ ಒಂದು ಮಸೀದಿಯ ನಿರ್ಮಾಣ
ಕ್ರಿ.ಶ. 1477–78	ಆ. ಅಲಿ ಆದಿಲ್ ಶಾಹ Iನ ಕಾಲದಲ್ಲಿ ಒಂದು ಮಸೀದಿಯ ನಿರ್ಮಾಣ
ಕ್ರಿ.ಶ. 1480–81	ಬ. ಮಹ್ಮದ್‌ಶಾಹನ ಕಾಲದಲ್ಲಿ ಒಂದು ಕಟ್ಟಡದ ನಿರ್ಮಾಣ
ಕ್ರಿ.ಶ. 1491–1503	ವಿ. ನರಸನಾಯಕ ಮತ್ತು ಆ. ಯೂಸುಫ್ ಆದಿಲ್‌ಖಾನ್ ನಡುವೆ ಯುದ್ಧ, ಕೋಟೆ ನರಸನಾಯಕನ ವಶ
ಕ್ರಿ.ಶ. 1506	ಆ. ಯೂಸುಫ್ ಆದಿಲ್ ಶಾಹನ ಕಾಲದಲ್ಲಿ ಅಂಗಡಿಗಳ ದತ್ತಿ
ಕ್ರಿ.ಶ. 1508	ಆ. ಯೂಸುಫ್ ಆದಿಲ್ ಶಾಹನ ಕಾಲದಲ್ಲಿ ಬಾವಿ (ಶಕರ್ ಬೌಡಿಯ) ನಿರ್ಮಾಣ

ಕ್ರಿ.ಶ. 1505–09	ವಿ. ನರಸಿಂಹ ಮತ್ತು ಆ. ಯೂಸುಫ್ ಆದಿಲ್ ಶಾಹನ ನಡುವೆ ಯುದ್ಧ
ಕ್ರಿ.ಶ. 1510	ಬ. ಮಹ್ಮದ್ ಶಾಹನ ಕಾಲದಲ್ಲಿ ಕೋಟೆಯ ಬುರ್ಜ್ ಅಲ್‌ಫತ್‌ನ ನಿರ್ಮಾಣ
ಕ್ರಿ.ಶ. 1513–14	ಬ. ಮಹ್ಮದ್ ಶಾಹನ ಕಾಲದಲ್ಲಿ ಏಕ್ ಮಿನಾರ್ ಮಸೀದಿಯ ನಿರ್ಮಾಣ
ಕ್ರಿ.ಶ. 1515	ಆ. ಇಸ್ಮಾಯಿಲ್ ಆದಿಲ್ ಶಾಹನ ಕಾಲದಲ್ಲಿ ಒಂದು ಮಸೀದಿಯ ನಿರ್ಮಾಣ
ಕ್ರಿ.ಶ. 1520	ವಿ. ಕೃಷ್ಣದೇವರಾಯ ಮತ್ತು ಆ. ಇಸ್ಮಾಯಿಲ್ ಆದಿಲ್ ಶಾಹನ ನಡುವೆ ಯುದ್ಧ. ಕೋಟೆ ಕೃಷ್ಣದೇವರಾಯನ ವಶ
ಕ್ರಿ.ಶ. 1530–31	ವಿ. ಅಚ್ಯುತರಾಯ ಮತ್ತು ಆ. ಇಸ್ಮಾಉಇಲ್ ಆದಿಲ್ ಶಾಹನ ನಡುವೆ ಯುದ್ಧ. ಕೋಟೆ ಇಸ್ಮಾಯಿಲ್ ಆದಿಲ್ ಶಾಹನ ವಶ.
ಕ್ರಿ.ಶ. 1546–47	ಆ. ಇಬ್ರಾಹಿಮ್ ಆದಿಲ್ ಶಾಹನಿಂದ ಅಂಧೇರಿ ಬೌಡಿಯ ಹತ್ತಿರವಿರುವ ಕೊತ್ತಳದ ನಿರ್ಮಾಣ
ಕ್ರಿ.ಶ. 1548–49	ಆ ಇಬ್ರಾಹಿಮ್ ಆದಿಲ್ ಶಾಹನಿಂದ ಖುಶ್ರೌ ಬುರ್ಜ್‌ನ ಹತ್ತಿರದ ಕೊತ್ತಳದ ನಿರ್ಮಾಣ
ಕ್ರಿ.ಶ. 1550	ಆ. ಇಬ್ರಾಹಿಮ್ ಆದಿಲ್ ಶಾಹನಿಂದ ಕೋಟೆಯ ಕಾಟಿದರ್ವಾಜ ನಿರ್ಮಾಣ
ಕ್ರಿ.ಶ. 1551	ಆ. ಇಬ್ರಾಹಿಮ್ ಆದಿಲ್ ಶಾಹನಿಂದ ಅಂಧೇರಿ ಬೌಡಿಯ ಹತ್ತಿರದ ಕಟ್ಟಡದ ನಿರ್ಮಾಣ
ಕ್ರಿ.ಶ. 1551	ವಿ. ರಾಮರಾಯ ಮತ್ತು ಆ. ಇಬ್ರಾಹಿಮ್ ಆದಿಲ್ ಶಾಹನ ನಡುವೆ ಯುದ್ಧ. ಕೋಟೆ ರಾಮರಾಯನ ವಶ.
ಕ್ರಿ.ಶ. 1553	ವಿ. ಸದಾಶಿವರಾಯನಿಂದ ನಾವಿದರಿಗೆ ಭೂಮಿ ದಾನ
ಕ್ರಿ.ಶ. 1558	ವಿ. ಸದಾಶಿವರಾಯನಿಂದ ಒಂದು ದೇವರಿಗೆ ಹಣದ ದಾನ
ಕ್ರಿ.ಶ. 1560	ವಿ. ರಾಮರಾಯನಿಂದ ರಾಯಚೂರಿನ ಬೋವಿಗಳಿಗೆ ಕೆಲವು ಹಕ್ಕುಗಳ ದಾನ
ಕ್ರಿ.ಶ. 1565	ವಿ. ರಾಮರಾಯ ಮತ್ತು ಮುಸ್ಲಿಮ್ ಕೂಟದ ನಡುವೆ ಯುದ್ಧ. ಕೋಟೆ ಮುಸ್ಲಿಮರ ವಶ.
ಕ್ರಿ.ಶ. 1565	ಆ. ಅಲಿ ಆದಿಲ್ ಶಾಹನಿಂದ ಕೋಟೆಯ ಶಾಹ ಬುರ್ಜ್‌ನ ನಿರ್ಮಾಣ
ಕ್ರಿ.ಶ. 1570	ಆ. ಅಲಿ ಆದಿಲ್ ಶಾಹನಿಂದ ಕೋಟೆಯ ತಾಹಿರ್ ಬುರ್ಜ್‌ನ ನಿರ್ಮಾಣ
ಕ್ರಿ.ಶ. 1582	ಆ. ಇಬ್ರಾಹಿಮ್ ಆದಿಲ್ ಶಾಹ IIನಿಂದ ಕೋಟೆಯ ದಿಡ್ಡಿ ಬಾಗಿಲು ಮತ್ತು ಬಾವಿ (ಬಂದ ಬೌಡಿ)ಗಳ ನಿರ್ಮಾಣ
ಕ್ರಿ.ಶ. 1582–83	ಆ. ಇಬ್ರಾಹಿಮ್ ಆದಿಲ್ ಶಾಹ IIನಿಂದ ಕೋಟೆಯ ಕಂದಕದ ನಿರ್ಮಾಣ
ಕ್ರಿ.ಶ. 1583–84	ಆ. ಇಬ್ರಾಹಿಮ್ ಆದಿಲ್ ಶಾಹ IIನಿಂದ ಕೋಟೆಯ ತವಕ್ಕಲ್ ದಿಡ್ಡಿಯ ನಿರ್ಮಾಣ
ಕ್ರಿ.ಶ. 1592	ಆ. ಇಬ್ರಾಹಿಮ್ ಆದಿಲ್ ಶಾಹನಿಂದ ಕೋಟೆಯ ಅಲಿಬುರ್ಜ್‌ನ ನಿರ್ಮಾಣ
ಕ್ರಿ.ಶ. 1609	ಆ. ಇಬ್ರಾಹಿಮ್ ಆದಿಲ್ ಶಾಹನಿಂದ ಕೋಟೆಯ ಒಂದು ಬುರ್ಜ್‌ನ ನಿರ್ಮಾಣ
ಕ್ರಿ.ಶ. 1617–18	ಆ. ಇಬ್ರಾಹಿಮ್ ಆದಿಲ್ ಶಾಹನಿಂದ ಗೋಪುರ ಮತ್ತು ಬುರ್ಜ್‌ನ ನಿರ್ಮಾಣ
ಕ್ರಿ.ಶ. 1619	ಆ ಇಬ್ರಾಹಿಮ್ ಆದಿಲ್ ಶಾಹನಿಂದ ಕೋಟೆಯ ಒಂದು ಬುರ್ಜ್‌ನ ನಿರ್ಮಾಣ
ಕ್ರಿ.ಶ. 1622–23	ಆ ಇಬ್ರಾಹಿಮ್ ಆದಿಲ್ ಶಾಹನ ಕಾಲದಲ್ಲಿ ಕೋಟೆಯ ಕಾಟಿ ದರ್ವಾಜದಲ್ಲಿ ಒಂಬತ್ತು ಕಮಾನು ಮತ್ತು ಕೊಠಡಿ, ಜಾಮಿ ಮಸೀದಿ, ಕಣಜ ಮತ್ತು ಲೋಕರ್‌ವಾಡದಲ್ಲಿಯ ಮಸೀದಿಗಳ ನಿರ್ಮಾಣ
ಕ್ರಿ.ಶ. 1628–29	ಆ. ಮಹ್ಮದ್ ಶಾಹನ ಕಾಲದಲ್ಲಿ ಸರಾಫ ಜಾರ್‌ನಲ್ಲಿರುವ ಮಸೀದಿಯ ನಿರ್ಮಾಣ
ಕ್ರಿ.ಶ. 1629–30	ಆ. ಮಹ್ಮದ್ ಶಾಹನ ಕಾಲದಲ್ಲಿ ಕೋಟೆಯ ಖಾದಿರೀಯ್ಯ ಬುರ್ಜ್‌ನ ನಿರ್ಮಾಣ
ಕ್ರಿ.ಶ. 1670–71	ಖುಶ್ರೌಬುರ್ಜನ ನಿರ್ಮಾಣ
ಕ್ರಿ.ಶ. 1673–74	ಆ. ಸಿಕಂದರ್ ಶಾಹನ ಕಾಲದಲ್ಲಿ ಕೋಟೆಯ ಸಿಕಂದರಿ ದರ್ವಾಜ ನಿರ್ಮಾಣ
ಕ್ರಿ.ಶ. 1749	ಯತೀಮ್ ಶಾಹನ ಮಸೀದಿಯ ನಿರ್ಮಾಣ
ಕ್ರಿ.ಶ. 1750–51	ಕೋಟೆಯ ಫತೇ ಬುರ್ಜ್‌ನ ಪುನರ್ನಿರ್ಮಾಣ

(ಆಕರ: ಕರ್ನಾಟಕದ ಕೋಟೆಗಳು: ಸಂಪುಟ 1, ಡಾ. ಚನ್ನಬಸಪ್ಪ ಎಸ್. ಪಾಟೀಲ, 1999, ಕನ್ನಡ ವಿಶ್ವವಿದ್ಯಾಲಯ, ಹಂಪಿ)

43. ಹಂಪೆಯ ಹೊಸಪಟ್ಟಣ – ಒಂದು ಟಿಪ್ಪಣಿ

ಡಾ. ಜಗದೀಶ

ಕರ್ನಾಟಕ ಸಿಂಹಾಸನಾಧೀಶ್ವರರಾದ ವಿಜಯನಗರ ಅರಸರು ತಾವು ಆಳುತ್ತಿದ್ದ ರಾಜಧಾನಿಯ ಹೆಸರಿನೊಂದಿಗೆ ಗುರ್ತಿಸಿಕೊಂಡಿದ್ದಾರೆ. ಕೆಲವು ಶಾಸನಗಳು ವಿಜಯನಗರವನ್ನು ಕರ್ನಾಟಕ ದೇಶದ ಮಹಾರಾಜಧಾನಿ, ಕರ್ನಾಟಕ ದೇಶ ಅದರೊಳು ವಿದ್ಯಾನಗರಿ, ಕರ್ನಾಟಕದ ಮಹಾರಾಜಧಾನಿ ವಿಜಯನಗರ ಎಂದು ಉಲ್ಲೇಖಿಸುತ್ತವೆ. ಸಿಂಘಾರದ ಹೆಬ್ಬಾಗಿಲ ಬಳಿಯಿರುವ ಶಾಸನವು ವೀರ ಬುಕ್ಕರಾಯನ ವಿಜಯನಗರದ ಪಟ್ಟಣ ಎಂದು ಉಲ್ಲೇಖಿಸುತ್ತದೆ. ಕೆಲವು ಆರಂಭಿಕ ಶಾಸನಗಳು ಹಂಪೆಯನ್ನು ಹೊಸಪಟ್ಟಣ ಎಂದು ಉಲ್ಲೇಖಿಸುತ್ತವೆ. ಹಂಪೆಯು ವಿಜಯನಗರ ಎಂದು ಗುರ್ತಿಸಲ್ಪಟ್ಟಿದೆ. ಇನ್ನು ಕೆಲವರು ಹಂಪಿಯ ತಾಲೂಕು ಕೇಂದ್ರವಾದ ಹೊಸಪೇಟೆಯನ್ನು ಹಂಪೆಯ ಹೊಸಪಟ್ಟಣ ಎಂದು ಹೇಳುತ್ತಾರೆ. ಶಾಸನಗಳಲ್ಲಿ ಕೇವಲ ಹೊಸಪಟ್ಟಣ ಎಂದು ನಮೂದು ಆಗಿಲ್ಲ. ಹೊಸಪಟ್ಟಣ ಎಂಬ ಹೆಸರಿನೊಂದಿಗೆ ಗುಣವಾಚಕ ಪೂರ್ವಪದ ಇದೆ. ಹೊಸಪಟ್ಟಣದ ಪೂರ್ವ ಗುಣವಾಚಕ ಪದ ಹಂಪೆ. ಹಂಪೆಯ ಪರಿಸರವನ್ನು ಗಮನಿಸೋಣ.

ಹಂಪಿ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ಜನವಸತಿಯಿಂದ ಕೂಡಿತ್ತು. ವಿರೂಪಾಕ್ಷ ದೇವಾಲಯದ ಹಿಂಬದಿಯಲ್ಲಿ ಹಾಗೂ ಹೇಮಕೂಟದ ಪಕ್ಕದಲ್ಲಿ, ವಿಠಲ ದೇವಾಲಯದ ಬಳಿಯ ಮೊಸಳಯ್ಯನ ಗುಡ್ಡದಲ್ಲಿ, ಸನಿಹದ ವೆಂಕಟಾಪುರದಲ್ಲಿ ವರ್ಣಚಿತ್ರಗಳು ಕಂಡುಬಂದಿವೆ. ಹಂಪಿಯ ಪ್ರದೇಶ ಪುರಾಣ ಮತ್ತು ಇತಿಹಾಸ ಪ್ರಸಿದ್ಧ ಕ್ಷೇತ್ರಗಳಿಂದ ಸುತ್ತುವರಿದಿವೆ. ಹಂಪಿಯು ಭಾಸ್ಕರ ಕ್ಷೇತ್ರವೆಂದೂ ಪ್ರಸಿದ್ಧಿ ಹೊಂದಿದೆ. ಹಂಪಿಯು ಪಂಪಾಕ್ಷೇತ್ರ, ಪಂಪಾತೀರ್ಥ, ಪಂಪಾಪುರ ಮತ್ತು ಪಂಪಾಪಟ್ಟಣ ಎಂದು ಕರೆಯಲ್ಪಟ್ಟಿದೆ.

ವಿರೂಪಾಕ್ಷ ದೇವಾಲಯವು ವಾಸ್ತು ರಚನೆಯ ಆಧಾರದ ಅನುಸಾರ ಕ್ರಿ.ಶ. 1000ರಲ್ಲಿ ರಚಿತವಾಗಿರಬಹುದೆಂದು ಡಾ.ದೇವರಕೊಂಡಾರೆಡ್ಡಿ ಹಂಪಿ ಶಾಸನಗಳು ಸಂಪುಟದ ಪ್ರಸ್ತಾವನೆಯಲ್ಲಿ ಚರ್ಚಿಸುತ್ತಾರೆ. ಕಲ್ಯಾಣ ಚಾಲುಕ್ಯ ದೊರೆ ಅಹವಮಲ್ಲನು ತುಂಗಭದ್ರೆಯ ತೆಂಕಣತಡಿಯ ಬೀಡಿನಲ್ಲಿದ್ದುದನ್ನು ಶಾಸನವೊಂದು ಉಲ್ಲೇಖಿಸುತ್ತದೆ. ಕುರುಗೋಡು ಸಿಂಧರು ಈ ಪ್ರದೇಶವನ್ನು ವಿರೂಪಾಕ್ಷ ಸೀಮೆ ಎಂದು ಕರೆದಿದ್ದು ಅವರ ಕಾಲದ ಕೆಲವು ದೇವಾಲಯಗಳ ಹೇಮಕೂಟ ಬೆಟ್ಟದ ಮೇಲಿವೆ. ಪಂಪಾಂಬಿಕೆ ಮತ್ತು ಭುವನೇಶ್ವರಿ ದೇವಾಲಯಗಳು ಹೊಯ್ಸಳ ಅರಸ ಶೈಲಿಯಲ್ಲಿವೆ.

ಈಗ ಹಂಪೆಯನ್ನು ಸುತ್ತುವರಿದಿರುವ ಪ್ರದೇಶ ಅಥವಾ ಅಂದಿನ ಗ್ರಾಮ/ಪುರಗಳನ್ನು ಗಮನಿಸೋಣ. ಕೃಷ್ಣದೇವರಾಯನು ಪ್ರಾರಂಭಿಸಿದ ಬಾಲಕೃಷ್ಣ ದೇವಾಲಯದ (ಕ್ರಿ.ಶ 1513) ಬಳಿಯ ಕೃಷ್ಣಾಪುರ, ವಿಠಲ ದೇವಾಲಯದ ಬಳಿಯಿರುವ ವಿಠಲಾಪುರ, ಅಚ್ಯುತ (ತಿರುವೆಂಗಳನಾಥ) ದೇವಾಲಯದ (ಕ್ರಿ.ಶ 1543) ಬಳಿಯಿರುವ ಅಚುತಾಪುರ, ಸೌಮ್ಯ ಸೋಮೇಶ್ವರ ದೇವಾಲಯದ ಬಳಿಯಿರುವ ಸೋಮಲಾಪುರ (ಇಂದಿನ ನಿಂಬಾಪುರ) ಈ ಪುರಗಳು ವಿಜಯನಗರ ಅರಸರು ದೇವಾಲಯಗಳ ಹತ್ತಿರದಲ್ಲಿ ಸ್ಥಾಪಿಸಿದ ಪ್ರದೇಶಗಳಾಗಿವೆ. ಕೃಷ್ಣದೇವರಾಯನು ತನ್ನ ತಾಯಿಯ ಹೆಸರಿನಲ್ಲಿ ನಾಗಲಾಪುರ, ರಾಣಿಯ ತಿರುಮಲದೇವಿಯ ಹೆಸರಿನಲ್ಲಿ ತಿರುಮಲದೇವಿ ಪಟ್ಟಣ ಮತ್ತು ಮಗ ತಿರುಮಲರಾಯನ ಹೆಸರಿನಲ್ಲಿ ಸಾಲೆತಿರುಮಲಎರೆಯಪಟ್ಟಣ, ಮತ್ತು ಅಚ್ಯುತರಾಯನು ತನ್ನ ರಾಣಿ ವರದರಾಜಮ್ಮನ ಹೆಸರಿನಲ್ಲಿ ವರದರಾಜಮ್ಮನ ಹೊಸಪಟ್ಟಣ ಪ್ರಾರಂಭಿಸುತ್ತಾರೆ.

ಹಂಪಿಯ ಪ್ರದೇಶದಲ್ಲಿ ಎರಡು ಪ್ರಸನ್ನ ವಿರೂಪಾಕ್ಷ ದೇವಾಲಯಗಳಿವೆ. ಒಂದು ಹೇಮಕೂಟದ ಮೇಲೆ ಇರುವ ಪ್ರಸನ್ನ ವಿರೂಪಾಕ್ಷ ದೇವಾಲಯ ಮತ್ತೊಂದು ಅಕ್ಕತಂಗಿಯರ ಗುಂಡಿನ ಬಳಿ ನೆಲಮಟ್ಟಕ್ಕೆ ಇರುವ ಪ್ರಸನ್ನ ವಿರೂಪಾಕ್ಷ ದೇವಾಲಯ. ಈ ದೇವಾಲಯಕ್ಕೆ ಕ್ರಿ.ಶ 1366ರ ಶಾಸನವೊಂದರಲ್ಲಿ ವೀರ ಬುಕ್ಕಣ ಒಡೆಯರು ವಿರೂಪಾಕ್ಷ ದೇವರಿಗೆ ಕೋಟೆಯ ಪಶ್ಚಿಮಕ್ಕೆ ಇರುವ ರಾಮಾಪುರದ ಕರೆಯ ಕೆಳಗಣ ಭೂಮಿಯನ್ನು ದಾನ ನೀಡಿದ ಉಲ್ಲೇಖ ಮತ್ತು ಕ್ರಿ.ಶ. 1513ರಲ್ಲಿ ಕೃಷ್ಣದೇವರಾಯನು ಪ್ರಸನ್ನ ವಿರೂಪಾಕ್ಷ ದೇವರ ಅನೇಕ ಸೇವೆಗಳಿಗೆ ಭೂಮಿ ದಾನ ನೀಡಿದ ವಿವರಗಳಿವೆ.

ವೀರ ಬುಕ್ಕಣ ಒಡೆಯರ ಶಾಸನವೊಂದು ಕೋಟೆಯನ್ನು ಉಲ್ಲೇಖಿಸುತ್ತದೆ. ವಿಜಯನಗರ ಅರಸರ ಕೆಲವು ಲಘು ಶಾಸನಗಳು ಕೋಟೆ ಮತ್ತು ಕೊತ್ತಳ, ಬಾಗಿಲು ಹೆಬ್ಬಾಗಿಲು ಮತ್ತು ದಿಡ್ಡಿ ಬಾಗಿಲುಗಳನ್ನು ಉಲ್ಲೇಖಿಸುತ್ತದೆ. ಹಂಪೆಯ ಕೊತ್ತಳ, ಸ್ವಾಮಿದ್ರೋಹರ ಗಂಡನ ಕೊತ್ತಳ, ಮತಂಗ ದೇವರ ಕೊತ್ತಳ, ಜನಸೇನದೇವರ ಕೊತ್ತಳ, ಮಳಲ ವಿನಾಯಕ ಕೊತ್ತಳ, ಹನುಮನ ಕೊತ್ತಳ, ಶಂಕರ ದೇವರ ಕೊತ್ತಳ, ಮದನ ಕೊತ್ತಳ, ಮೀರಸ ಗಂಡನ ಕೊತ್ತಳ, ಅನೆಗೊಂದಿಯ ಕೊತ್ತಳ, ಸೋಮೆದೇವರ ಕೊತ್ತಳ ಇವು ಕೋಟೆಯ ಭಾಗದದಲ್ಲಿ ಇರುವ ಸ್ಥಳಗಳು. ಸೋಮವಾರದ ಬಾಗಿಲು, ಹೊದೆಯ ಬಾಗಿಲು, ಹೂವಿನ ಬಾಗಿಲು, ಪೆನುಗೊಂಡೆ ಬಾಗಿಲು, ಉದಯಗಿರಿ ಬಾಗಿಲು, ಅರೆಶಂಕರ ಬಾಗಿಲು, ಭೀಮನ ಬಾಗಿಲು, ಸಿಂಘಾರದ ಹೆಬ್ಬಾಗಿಲು, ಬೇಟೆಕಾರರ ಹೆಬ್ಬಾಗಿಲು, ಹಂಪಾದೇವಿಯ ದಿಡ್ಡಿ ಮತ್ತು ಮತಂಗೇಶ್ವರ ದೇವರ ದಿಡ್ಡಿ ಇವು ಕೋಟೆಯಲ್ಲಿರು ಪ್ರವೇಶ ದ್ವಾರಗಳು. ಈ ಪ್ರದೇಶವನ್ನು ಸುತ್ತುವರಿದಿರುವ ಕೋಟೆಯು ವಿಜಯನಗರ ಅರಸರ ಕಾಲದ ನಿರ್ಮಿತಿ ಆಗಿದೆ. ಈ ಪ್ರದೇಶದಲ್ಲಿ ವೀರ ಹರಿಹರರಾಯನ ಅರಮನೆ ಇತ್ತೆಂದು ಹಜಾರ ರಾಮಚಂದ್ರ ದೇವಾಲಯದ ಹಿಂದೆ ದೊರೆತ ಶಾಸನವೊಂದು ಉಲ್ಲೇಖಿಸುತ್ತದೆ. ಇದೇ ಪ್ರದೇಶದಲ್ಲಿ ರಾಜಮಾನ್ಯರ ವಸತಿ ಗೃಹಗಳಿವೆ. ಹಜಾರ ರಾಮಚಂದ್ರ ದೇವಾಲಯ ಅಥವಾ ರಾಮಚಂದ್ರ ದೇವಾಲಯ ಸುಮಾರು ಕ್ರಿ.ಶ. 1416ರಲ್ಲಿ ರಚನೆಯಾಗಿರಬೇಕು ಎಂದು ಅಭಿಪ್ರಾಯ ಪಡಲಾಗಿದೆ.

ವಿದ್ವಾಂಸರು ಹಂಪಿಯ ಅಧ್ಯಯನವನ್ನು ಮೂರು ಪ್ರದೇಶಗಳಾಗಿ ವಿಂಗಡಿಸಿಕೊಂಡು ಮಾಡಿದ್ದಾರೆ. ದೇವಾಲಯ ಪ್ರದೇಶ, ಅರಮನೆ ಪ್ರದೇಶ ಮತ್ತು ವ್ಯವಸಾಯ ಪ್ರದೇಶ ಇವು ಮೂರು ಪ್ರದೇಶಗಳು. ತುಂಗಭದ್ರಾ ನದಿಯ ದಡದಲ್ಲಿರುವ ವಿರೂಪಾಕ್ಷ ದೇವಾಲಯವು ದೇವಾಲಯ ಪ್ರದೇಶ ಆಗಿದೆ, ಹಜಾರ ರಾಮಚಂದ್ರ ದೇವಾಲಯ ಸುತ್ತಮುತ್ತಲಿನ ಪ್ರದೇಶವು ಅರಮನೆ ಪ್ರದೇಶ ಆಗಿದೆ. ಉಳಿದಂತೆ ವ್ಯವಸಾಯ ಭೂಮಿಯು ವ್ಯವಸಾಯ ಪ್ರದೇಶ ಆಗಿದೆ.

ವಸುಂಧರ ಫಿಲಿಯೋಜ್ಹಾ ಅವರು ವಿಜಯನಗರದ ನಗರ ಯೋಜನೆ ಎಂಬ ಲೇಖನದಲ್ಲಿ ಹಂಪಿಯ ಬೆಳವಣಿಗೆಯನ್ನು ಹೀಗೆ ಗುರ್ತಿಸುತ್ತಾರೆ. ಮೊದಲು ತುಂಗಭದ್ರಾನದಿ ತೀರದಲ್ಲಿನ ವಿರೂಪಾಕ್ಷ ದೇವಾಲಯ ಮತ್ತು ಹೇಮಕೂಟ ಪ್ರದೇಶದಲ್ಲಿ ಜನವಸತಿ ಇತ್ತು. ಕ್ರಿ.ಶ. 1199ರಲ್ಲಿ ಮತಂಗ ಪರ್ವತದ ತಪ್ಪಲು ವಿರೂಪಾಕ್ಷ ತೀರ್ಥದ ರಾಜಪಾಲಕನ ವಸತಿ ಪ್ರದೇಶವಾಗಿತ್ತು. ಹೊಯ್ಸಳ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಮತಂಗ ಪರ್ವತದ ದಕ್ಷಿಣ ಪ್ರದೇಶದಿಂದ ಇಂದು ಅರಮನೆ ಆವರಣ ಎಂದು ಕರೆಯಲಾಗುತ್ತಿರುವ ಹೊಸಪಟ್ಟಣ ಪ್ರದೇಶವು ವಿರೂಪಾಕ್ಷ ಪಟ್ಟಣಕ್ಕೆ ಸೇರಿಸಲ್ಪಟ್ಟಿತು (ಎಎಆರ್‌ಪಿ, ಲಂಡನ್, 1979).

ಒರಿಸ್ಸಾದ ಉದಯಗಿರಿಯ ಯುದ್ಧದ ವಿಜಯದ ನಂತರ ಕೃಷ್ಣದೇವರಾಯನು ಬಾಲಕೃಷ್ಣ ದೇವಾಲಯವನ್ನು ಕ್ರಿ.ಶ 1513ರಲ್ಲಿ ನಿರ್ಮಿಸಿದನು. ಯುದ್ಧವೊಂದರಲ್ಲಿ ವಿಜಯ ಅಥವಾ ಪುತ್ರೋತ್ಸವ ಅದಾಗ ದೇವಾಲಯಗಳ ನಿರ್ಮಾಣವನ್ನು ರಾಜರು ಕೈಗೊಳ್ಳುವುದನ್ನು ಇತಿಹಾಸದಲ್ಲಿ ಕಾಣಬಹುದು. ಹೊಯ್ಸಳ ವಿಷ್ಣುವರ್ಧನನು ಕ್ರಿ.ಶ. 1117ರಲ್ಲಿ ಚೋಳರನ್ನು ತಲಕಾಡಿನಿಂದ ಹೊಡೆದೋಡಿಸಿ ತಲಕಾಡುಗೊಂಡ ಎಂಬ ಬಿರುದು ಧರಿಸಿ, ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯ, ಬೇಲೂರಿನಲ್ಲಿ ವಿಜಯನಾರಾಯಣ (ಚನ್ನಕೇಶವ) ದೇವಾಲಯ ನಿರ್ಮಿಸಿದನು. ಕ್ರಿ.ಶ. 1133ರಲ್ಲಿ ಹಳೇಬೀಡಿನಲ್ಲಿ ವಿಷ್ಣುವರ್ಧನನ ದಂಡನಾಯಕನ ಗಂಗರಾಜನ ಮಗ ಬೊಪ್ಪನು ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದನು. ಆಗ ಬಂಕಾಪುರದಲ್ಲಿದ್ದ ವಿಷ್ಣುವರ್ಧನನಿಗೆ ನರಸಿಂಹನೆಂಬ ಮಗ ಹುಟ್ಟಿದ ಸುದ್ದಿ ತಲುಪುತ್ತದೆ. ಆಗ ವಿಷ್ಣುವರ್ಧನನು ಹಳೇಬೀಡಿನ ಪಾರ್ಶ್ವನಾಥ ದೇವಾಲಯವನ್ನು ವಿಜಯ ಪಾರ್ಶ್ವನಾಥ ಎಂದು ಹೆಸರಿಸುತ್ತಾನೆ. ಹೊಸಗುಂದ ಅರಸರ ಕುರಿತು ಹೊಸಗುಂದದಲ್ಲಿ ದೊರೆತ ಅಪ್ರಕಟಿತ ಶಾಸನವೊಂದು ಕ್ರಿ.ಶ. 1242ರಲ್ಲಿ ಬಲದೇವ ಎಂಬ ಅಧಿಕಾರಿಯು ಬೆಳಗುತ್ತಿ ಸಿಂಧರನ್ನು ಸೋಲಿಸಿದ ನಂತರ ಹೊಸಗುಂದದಲ್ಲಿ ಪ್ರಸನ್ನ ನಾರಾಯಣ ದೇವಾಲಯ ನಿರ್ಮಾಣ ಮಾಡಿರುವುದನ್ನು ಉಲ್ಲೇಖಿಸುತ್ತದೆ.

ಮೇಲೆ ಉಲ್ಲೇಖಿಸಲಾಗಿರುವ ದೇವಾಲಯಗಳ ಹೆಸರಿನ ಹಿಂದಿರುವ ಪೂರ್ವ ಗುಣವಾಚಕ ಪದಗಳನ್ನು ಗಮನಿಸಬೇಕು. ಇವು ಕೀರ್ತಿ, ವಿಜಯ, ಪ್ರಸನ್ನ ಮುಂತಾದವು ಆಗಿವೆ. ತಾವು ನಂಬಿದ ಮತ್ತು ಆರಾಧಿಸುವ ದೇವನು ತಮ್ಮ ಕಾರ್ಯಗಳಿಗೆ ಅಭಯ ನೀಡಿದ್ದಾನೆ ಎಂದು ಸ್ಮರಿಸುವ ಭಾವನೆಯನ್ನು ಕಾಣುತ್ತೇವೆ. ಇದೇ ತರ್ಕವನ್ನು


ವಿಜಯನಗರ ಅರಸರ ದೇವಾಲಯಗಳ ನಿರ್ಮಾಣಕ್ಕೂ ಅನುಸರಿಸಿದರೆ, ಪ್ರಸನ್ನ ವಿರೂಪಾಕ್ಷ ದೇವಾಲಯ ಹೆಸರಿನ ಅರ್ಥ ವಿಶದವಾಗುತ್ತದೆ. ಹಂಪೆಯ ವಿರುಪಾಕ್ಷನು ತಮ್ಮ ಕಾರ್ಯದಿಂದ ಪ್ರಸನ್ನನಾಗಿದ್ದಾನೆ ಎಂಬುದರ ದ್ಯೋತಕವಾಗಿ ಪ್ರಸನ್ನ ವಿರೂಪಾಕ್ಷ ದೇವಾಲಯ ನಿರ್ಮಾಣವಾಗುತ್ತದೆ. ಪ್ರಾಯಶಃ ಈ ಕಾರ್ಯ ಯುದ್ಧವೊಂದರ ವಿಜಯ ಆಗಿರಬೇಕು ಅಥವಾ ಹೊಸಪಟ್ಟಣದ ನಿರ್ಮಾಣ ಕಾರ್ಯ ಆಗಿರಬೇಕು.

ಹೊಸಪಟ್ಟಣ ಪ್ರದೇಶದಲ್ಲಿ ಪ್ರಸನ್ನ ವಿರೂಪಾಕ್ಷ ದೇವಾಲಯ, ಪಟ್ಟಣದ ಯಲ್ಲಮ್ಮ ದೇವಾಲಯ, ರಂಗ ದೇವಾಲಯ ಇವುಗಳ ನೆಲ ಮಟ್ಟವನ್ನು ಗಮನಿಸಬೇಕು. ಇಂದಿನ ನೆಲಮಟ್ಟಕ್ಕಿಂತ ಇವುಗಳ ನೆಲಮಟ್ಟವು ಕೆಳಗೆ ಇದೆ. ಈಗ ಇರುವ ನೆಲಮಟ್ಟವು ಕೃತಕವಾಗಿ ಮಾಡಿಕೊಂಡಿರುವುದು. ಪ್ರಾಯಶಃ ಹೊಸಪಟ್ಟಣ ನಿರ್ಮಿಸುವವರು ಸಣ್ಣ ಪುಟ್ಟ ಕಂದಕಗಳನ್ನು ಮಣ್ಣಿನಿಂದ ಮುಚ್ಚಿ ಉತ್ತರಕ್ಕೆ ಇಳಿಜಾರು ಮಾಡಿಕೊಂಡಿರಬೇಕು. ಮಹಾನವಮಿ ದಿಬ್ಬದ ಹತ್ತಿರ ಇರುವ ಆವರಣ ಗೋಡೆಯಲ್ಲಿರುವ ದ್ವಾರದ ಕೆಳಗಡೆ ಇರುವ ನೀರಿನ ಚರಂಡಿಯು ಈಗಿನ ನೆಲಮಟ್ಟದಿಂದ ಸುಮಾರು 5.00–6.00 ಮೀ ಕೆಳಗಡೆ ಇದೆ. ಇದಕ್ಕೆ ಎಲ್ಲಿಂದಾದರೂ ನೀರು ಬರಬೇಕಲ್ಲವೆ ಮತ್ತು ಅದು ಮುಂದೆ ಎಲ್ಲಿಯಾದರೂ ಹೊರ ಹರಿಯಬೇಕಲ್ಲವೆ.

ಅರಮನೆ ಪ್ರದೇಶವು ತುರ್ತಾ ಕಾಲುವೆಯ ಪೂರ್ವಕ್ಕೆ ಇದೆ. ಅಂದರೆ ತುರ್ತಾ ಕಾಲುವೆಯಿಂದ ಈ ಪ್ರದೇಶಕ್ಕೆ ನೀರು ಸರಭರಾಜು ಆಗುತ್ತಿರಲಿಲ್ಲ. ಈ ಪ್ರದೇಶದಲ್ಲಿ ಅನೇಕ ನೀರು ಕಾಲುವೆಗಳನ್ನು ಕಾಣಬಹುದು. ಹೀಗೆ ಮಾಡಿಕೊಂಡಿರುವುದರಿಂದ ಕಮಲಾಪುರದ ಕೆರೆಯಿಂದ ತಂದ ನೀರು ಕಾಲುವೆಗಳ ಮುಖಾಂತರ ಹಜಾರ ರಾಮಚಂದ್ರ ದೇವಾಲಯ ಸುತ್ತಮುತ್ತಲ ಪ್ರದೇಶಕ್ಕೆ, ರಾಣಿಯರ ಪ್ರದೇಶಕ್ಕೆ, ರಾಜಮಾನ್ಯರ ವಸತಿ ಪ್ರದೇಶಕ್ಕೆ ಸರಾಗವಾಗಿ ಹರಿದು ಹೋಗುತ್ತದೆ.

ಮೆಟ್ಟಿಲು ಪುಷ್ಕರಣಿಯ ತಳದಲ್ಲಿ ನೀರು ಹೊರಹಾಕುವ ವ್ಯವಸ್ಥೆ ಇದೆ. ಪ್ರಾಯಶಃ ಮಹಾನವಮಿ ದಿಬ್ಬದ ಹತ್ತಿರ ಇರುವ ಚರಂಡಿಗೆ ಇದು ಸಂಪರ್ಕ ಹೊಂದಿರಬಹುದು. ಇದೇ ರೀತಿ ಮೆಟ್ಟಿಲು ಪುಷ್ಕರಣಿಯ ಹಿಂದೆ ಇರುವ ಸಾರ್ವಜನಿಕ ನೀರಿನ ಕೊಳದ ನೀರನ್ನು ಖಾಲಿ ಮಾಡಲು ತಳದಲ್ಲಿ ತೂಬು ಇದೆ. ಈ ಪ್ರದೇಶದಲ್ಲಿ ಹೊಸ ನೀರಿನ ಕಾಲುವೆಗಳ ಜಾಲ ಮತ್ತು ಹೊಲಸು ನೀರನ್ನು ಹೊರಹಾಕುವ ವ್ಯವಸ್ಥೆ ಇರುವುದು ಸಾಬೀತಾಗುತ್ತದೆ.

ಮೇಲಿನ ಅಂಶಗಳನ್ನು ಗಮನಿಸಿದರೆ ಹೊಸ ರಾಜಧಾನಿಯಾದ ಹಂಪೆಯ ಹೊಸಪಟ್ಟಣವು ಹಂಪಿಯ ಹತ್ತಿರ ಇತ್ತು. ಹಂಪಿ ಪ್ರದೇಶವೇ ಕಣಶಿಲೆಯ ಬೆಟ್ಟ ಮತ್ತು ಕಣಿವೆಗಳಿಂದ ಕೂಡಿದೆ. ಇಂದು ಅರಮನೆ ಪ್ರದೇಶ ಎಂದು ಗುರ್ತಿಸುವ ಸ್ಥಳ ಅಥವಾ ಹಜಾರ ರಾಮಚಂದ್ರ ದೇವಾಲಯದ ಸುತ್ತಮತ್ತಲ ಪ್ರದೇಶವನ್ನು ಸಮತಟ್ಟು ಮಾಡಿಕೊಂಡು ಸುತ್ತಲೂ ಕೋಟೆಯನ್ನು ಕಟ್ಟಿಕೊಂಡು ರಾಜಧಾನಿ ಮಾಡಿಕೊಂಡರು. ಇದೇ ಹಂಪೆಯ ಹೊಸಪಟ್ಟಣ ಆಗಿತ್ತೆಂದು ತೋರುತ್ತದೆ.



ವಿಜಯನಗರ ಸಾಮ್ರಾಜ್ಯದ ಬಗೆಗಿನ ಶಾಸ್ತ್ರೀಯ ಅಧ್ಯಯನ ಪ್ರಾರಂಭವಾಗಿ ಒಂದು ಶತಮಾನ ಕಳೆದರೂ ಈ ಸಾಮ್ರಾಜ್ಯ ಕುರಿತಾದ ಅಧ್ಯಯನ, ಸಂಶೋಧನೆ, ಪ್ರಕಟಣೆ ಇಂದಿಗೂ ಮುಂದುವರಿಯುತ್ತಿವೆ. ಇಂತಹ ಮಹಾನ್ ಸಾಮ್ರಾಜ್ಯದ ಸ್ಮಾರಕಗಳ ಪುನರುತ್ಥಾನ ಯೋಜನೆಯನ್ನು ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆಯು 1979ರಲ್ಲಿ ಪ್ರಾರಂಭಿಸಿತು. ಈ ಯೋಜನೆಯ ಕಾರ್ಯಗಳು ಮತ್ತು ಸ್ಮಾರಕಗಳ ಸಂರಕ್ಷಣಾ ಕಾರ್ಯಗಳು ಹಾಗೂ ಇಲ್ಲಿ ನಡೆದ ಸಂಶೋಧನೆಗಳ ಫಲವಾಗಿ 1986ರಲ್ಲಿ ವಿಜಯನಗರ ಅಂದರೆ ಇಂದಿನ ಹಂಪೆಯ ಸ್ಮಾರಕಗಳು ವಿಶ್ವ ಪರಂಪರೆಯ ಸ್ಮಾರಕಗಳ ಗುಂಪಿಗೆ ಸೇರ್ಪಡೆಯಾದವು. ಇದರಿಂದಾಗಿ ಹಂಪಿ ವಿಶ್ವದ ಪ್ರಮುಖ ಸಂದರ್ಶಕ ಸ್ಥಳವಾಗಿ ಮಾರ್ಪಟ್ಟಿದೆ.

ಈ ಹಿನ್ನೆಲೆಯಲ್ಲಿ ವಿಜಯನಗರ ಅಧ್ಯಯನ ಮಾಲಿಕೆಯ ವಿಚಾರ ಸಂಕಿರಣಗಳನ್ನು 1994-95ನೇ ಸಾಲಿನಲ್ಲಿ ಪ್ರಾರಂಭವಾಗಿ ಪ್ರತೀ ವರ್ಷವೂ ಸಹ ಮಾಲಿಕೆಯ ಸಂಪುಟಗಳನ್ನು ಹೊರತರಲಾಗುತ್ತಿದೆ. ಪ್ರಸ್ತುತ ಮಾಲಿಕೆಯಲ್ಲಿ ಅಡಕವಾಗಿರುವ ಲೇಖನಗಳು ಹೊಸ ಶಾಸನಗಳು, ದೇವಾಲಯಗಳು, ಶಿಲ್ಪಗಳು, ಸಾಹಿತ್ಯ, ಇತರೇ ವಿಜಯನಗರಕ್ಕೆ ಸಂಬಂಧಿಸಿದ ವಿಷಯಗಳನ್ನು ಆಧರಿಸಿ ಅತ್ಯುತ್ತಮ ಸಂಪುಟವಾಗಿ ರೂಪುಗೊಂಡಿದೆ.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು